ಕರ್ಮವೀರ

ೀಪಾವಳಿ ಸಂಚಿಕೆ

೧೯೬೧

ಲೆ: ೧-೫೦




Always On Top...
For
• Design..
• Fashion..
• Colour..
• Style..
Sri Venkateswara Silks
— A Great Name in Silk Sarees
Kamala Laxman, the famous danseuse, wearing a "Sri Venkateswara" Saree —her favourite choice
Sri Venkateswara Silk Palace
"Glamour House for Ladies' Elegant Wear"
284/1, CHICKPET, BANGALORE-2
Phone: 6440
Grams: "ROOPMANDIR"
Air-Conditioned Rooms
For Your Comfort

ತಂತಿ : SAMRAT

ಫೋನ 350

ಹುಬ್ಬಳ್ಳಿಯಲ್ಲಿ

ದೀಪಾವಳಿಯು
ನಮ್ಮ
ಗ್ರಾಹಕವೃಂದಕ್ಕೆಲ್ಲ ಸುಖ ಶಾಂತಿ
ಅಭಿವೃದ್ಧಿದಾಯಕವಾಗಲಿ !


★

ಮಧ್ಯಸ್ಥಳದಲ್ಲಿದೆ
ಆಧುನಿಕ ವ್ಯವಸ್ಥೆ
ಸೌಕರ್ಯಗಳ ವಿಷಯದಲ್ಲಿ
ಆದರ್ಶ
ಶುಚಿ-ರುಚಿ,
ಊಟ-ಉಪಹಾರ
ಬಾತ ರೂಮ್
ಸಹಿತ ಕೋಣೆಗಳು

ಕಾರುಗಳಿಗೆ ಪಾರ್ಕಿಂಗ ವ್ಯವಸ್ಥೆ

ಅಶೋಕ ಹೋಟೆಲ್

ಇಲ್ಲೇ ಇಳಿದುಕೊಳ್ಳಿ



When You Are At . . .

HUBLI

IDEAL CHOICE OF COMFORT

ASHOK HOTEL

Centrally Situated - Modern Accommodation. Excellent Dinner And Refreshments.

We Wish Happy Deepavali to all our Esteemed Patrons


— Facility For Car Parking —



Chitra Publicity

V

ಪರಿವಿಡಿ



INDEX TO ADVERTISERS

ಕೀರ್ತಿವಂತ ಕನ್ನಡಿಗ – ಛಾಯಾಚಿತ್ರ ಕಲಾವಿದ

ವಿಜಾಪೂರ ಜಿಲ್ಲೆಯ ಜಮುಖಂಡಿ ತಾಲೂಕಿನ ಹುನ್ನೂರ ಗ್ರಾಮದ ಶ್ರೀ. ಸಂಗಪ್ಪ ಕಡಪಟ್ಟಿಯುವರು (೪೬) ಅಂತಾರಾಷ್ಟ್ರೀಯ ಖ್ಯಾತಿಯ ಛಾಯಾಚಿತ್ರ ಕಲಾವಿದರು. ಇತ್ತೀಚೆಗೆ ಪ್ಯಾರಿಸದ ಇಂಟರ-ನ್ಯಾಶನಲ್ ಡಿ. ಲಾ. ಆರ್ಟ ಫೋಟೋಗ್ರಾಫಿಕ್ ಫೆಡರೇಶನ್ನದವರು ಅವರಿಗೆ ಸದಸ್ಯತ್ವವನ್ನೂ ಡಿಪ್ಲೊಮಾವನ್ನೂ ದಯಪಾಲಿಸಿರುವರು. ಇದು ಕನ್ನಡಿಗರಿಗೆ ಅತ್ಯಂತ ಹೆಮ್ಮೆಯ ಸಂಗತಿಯೇ ಸರಿ.

ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಅವರಿಗೆ ಅಭಿರುಚಿ. ಆದರೆ ಜೀವನದಲ್ಲಿಯ ಅನೇಕ ತೊಂದರೆಗಳಿಂದಾಗಿ ಅವರು ಸೈನ್ಯವನ್ನು ಸೇರಿ ಎರಡನೇ ಮಹಾಯುದ್ಧದ ಕಾಲಕ್ಕೆ ಇಟಲಿ, ಇರಾಕ, ಜರ್ಮನಿಗಳಿಗೆ ಹೋಗಿಬಂದರು. ಆದರೆ ಈ ಎಲ್ಲ ತೊಂದರೆಗಳ ಮಧ್ಯದಲ್ಲಿಯೂ ಅವರು ಚಿತ್ರಕಲೆಯ ನಿಜವಾದ ಉಪಾಸಕರಾಗಿ ಉಳಿದರು. ೧೯೫೮–೫೯ರಲ್ಲಿ ಭಾರತ ಫೋಟೋಗ್ರಾಫಿ ಅಕೆಡೆಮಿಯ ಆಶ್ರಯದಲ್ಲಿ ಜರುಗಿದ ಪ್ರದರ್ಶನದಲ್ಲಿ ಅವರ ಕಲಾಕೌಶಲ್ಯವು ಸಂಪೂರ್ಣವಾಗಿ ವ್ಯಕ್ತವಾಯಿತು. ಅಹಮ್ಮದಾಬಾದ, ಮುಂಬಯಿ, ದಿಲ್ಲಿ, ರಾಜ-ಮಹೇಂದ್ರಿ ಮೊದಲಾದ ಸ್ಥಳಗಳಲ್ಲಿ ನಡೆದ ಪ್ರದರ್ಶನಗಳಲ್ಲಿಯೂ ಅವರ ಚಿತ್ರಗಳು ಪ್ರದರ್ಶಿತವಾಗಿ ಅವರಿಗೆ ಕೀರ್ತಿ-ಗೌರವಗಳನ್ನು ತಂದುಕೊಟ್ಟವು. ಲಂಡನ್‌ದ ರಾಯಲ್ ಫೋಟೋಗ್ರಾಫ್ ಸಂಸ್ಥೆಯೂ ಅವರಿಗೆ ಪ್ರಶಸ್ತಿಯನ್ನು ಕೊಟ್ಟಿರುವುದು.

ಕಳೆದ ತಿಂಗಳ ೮ ರಂದು ಪ್ಯಾರೀಸದಲ್ಲಿ ಜರುಗಿದ ಅಂತಾರಾಷ್ಟ್ರೀಯ ಛಾಯಾಚಿತ್ರ ಪ್ರದರ್ಶನದಲ್ಲಿ ಅವರ **ಪಡಛಾಯಾ** (ಅದೇ ಚಿತ್ರವನ್ನು ಹಿಂಬದಿ ಪ್ರಕಟಿಸಿದೆ) ಮೊದಲಾದ ಹನ್ನೆರಡು ಚಿತ್ರಗಳು ಅವರಿಗೆ ಪ್ರಥಮ ಬಹುಮಾನವನ್ನು ಗಳಿಸಿಕೊಟ್ಟವಲ್ಲದೆ ಡಿಪ್ಲೊಮಾವನ್ನೂ ತಂದುಕೊಟ್ಟವು. ಈ ವರ್ಷ ಅವರ ಸುಮಾರು ೫೦ ಛಾಯಾಚಿತ್ರಗಳು ಪ್ರಪಂಚದ ನಾನಾಮೂಲೆಗಳಲ್ಲಿ ಪ್ರಕಟವಾಗಿ ಅವರಿಗೆ ಗೌರವವನ್ನು ಗಳಿಸಿಕೊಟ್ಟಿರುವವು.

ಜಮುಖಂಡಿಯ ಸಂಸ್ಥಾನಿಕರ ಭಗಿನಿಯುವರಾದ ಡಾ. (ಕುಮಾರಿ) ಇಂದೂ ಪಟವರ್ಧನ ಅವರು ಕೊಟ್ಟ ಪ್ರೋತ್ಸಾಹದಿಂದ ಹತ್ತು ವರ್ಷಗಳ ಮೊದಲು ಇವರು ಛಾಯಾಚಿತ್ರಗ್ರಹಣದ ವಿಶೇಷ ಅಭ್ಯಾಸ ನಡೆಸಿದರು. ೧೯೫೪ರ ವೇಳೆಗೆ ಅವರು ಅದರಲ್ಲಿ ವಿಶೇಷ ಪ್ರಗತಿ ಸಾಧಿಸಿದರು. ರವಿವಾರ ಸಕಾಳದ ಒಂದು ಫೋಟೊ ಸ್ಪರ್ಧೆಯಲ್ಲಿ ಅವರಿಗೆ ಪ್ರಥಮ ಬಹುಮಾನವು ದೊರೆಯಿತು.

ಮುಂಬಯಿ ಆರ್ಟ ಸೊಸಾಯಿಟಿ, ಮೈಸೂರು ಫೋಟೋಗ್ರಾಫಿಕ ಸೊಸಾಯಿಟಿ, ಆಗ್ರಾ ಆಲ್ ಇಂಡಿಯಾ-ಸಲೋನ ಮೊದಲಾದವುಗಳ ಪ್ರಶಸ್ತಿಪತ್ರಗಳೂ ರೌಪ್ಯಪದಕಗಳೂ ಅವರಿಗೆ ದೊರೆತಿವೆ. ಶ್ರೀ ಕಡಪಟ್ಟಿಯುವರೀಗ ಜಮುಖಂಡಿಯಲ್ಲಿ ಸಣ್ಣದಾದ ಸ್ಟುಡಿಯೋವೊಂದನ್ನು ನಡೆಸುತ್ತಿರುವರು.



' ಪಡಛಾಯಾ '— ಅಂತಾರಾಷ್ಟ್ರೀಯ ಪ್ರದರ್ಶನದಲ್ಲಿ ಬಹುಮಾನ ಪಡೆದ ಚಿತ್ರ

ಫೋಟೋ: ಶ್ರೀ ಸಂಗಪ್ಪ ಕಡಪಟ್ಟಿ, ಜಮಖಂಡಿ (ಪರಿಚಯ ಹಿಂಬದಿಯಲ್ಲಿ)

ದೀಪಾವಳಿ ಸಂಚಿಕೆ
೧೯೬೧

ಕರ್ಮವೀರ

ಸಂಪಾದಕರು:-
ಶ್ರೀ ಹ.ರಾ. ಪುರೋಹಿತ

ನಮ್ಮ ನುಡಿ

'ತಮಸೋ ಮಾ ಜ್ಯೋತಿರ್ಗಮಯ' ಎಂಬ ವೈದಿಕ ಪ್ರಾರ್ಥನೆಯನ್ನು ಪ್ರತಿಯೊಬ್ಬ ಭಾರತೀಯನು ನಿತ್ಯವೂ ಪರಮಾತ್ಮನನ್ನುದ್ದೇಶಿಸಿ ಮಾಡುವುದುಂಟು. ಅಜ್ಞಾನಾಂಧಕಾರವನ್ನು ಹೋಗಲಾಡಿಸಿ ನಿನ್ನ ಬಗ್ಗೆ ನಿಜವಾದ ಜ್ಞಾನವನ್ನು ಕೊಟ್ಟು ಆತ್ಮೋದ್ಧಾರ ಮಾಡಿಕೊಳ್ಳುವಂತೆ ಅನುಗ್ರಹಿಸು ; ಎಂಬುದೇ ಈ ಪ್ರಾರ್ಥನೆಯ ಮುಖ್ಯಾರ್ಥವೆಂದು ಹೇಳಬಹುದು. ಕತ್ತಲೆಯನ್ನು ಹೋಗಲಾಡಿಸಲು ದೀಪಾ-ರಾಧನೆಯನ್ನು ಮಾಡುವ ದೀಪಾವಳಿಯ ಈ ಹಬ್ಬದಲ್ಲಿ ಈ ಬಗೆಯ ಪ್ರಾರ್ಥನೆಯನ್ನು ಹೆಚ್ಚಾಗಿ ಮಾಡುವದು ಕರ್ತವ್ಯವಾಗಿದೆ.


ಈ ದೀಪಾವಳಿಯ ಹಬ್ಬದಂದು ನಾವು ನಮ್ಮ ವಾಚಕರಿಗೆ ರಸದೂಟವನ್ನು ನೀಡಿ ಅವರ ಜ್ಞಾನದೀಪವನ್ನು ಹೆಚ್ಚಿಗೆ ಬೆಳಗಿಸಲು ಈ ವಿಶೇಷ ಸಂಚಿಕೆಯನ್ನು ಹೊರಡಿಸಿದ್ದೇವೆ. ಇದರಲ್ಲಿ ಕರ್ನಾಟಕದ ಖ್ಯಾತಿವೆತ್ತ ವಿದ್ವಾಂಸರಿಂದ ಲೇಖ, ಕತೆ, ಕವನ, ಹರಟೆ, ನಾಟಕಗಳನ್ನು ವಾರ್ಷಿಕಭವಿಷ್ಯ ಮೊದಲಾದ ನ್ನು ಕೊಟ್ಟು ನಾಲ್ಕು ಬಣ್ಣಗಳ ಸುಂದರ ಮೇಲ್ಹೊದಿಕೆ, ಹಲವಾರು ಚಿತ್ರ, ವ್ಯಂಗ್ಯಚಿತ್ರಗಳಿಂದ ಸರ್ವಾಂಗಸುಂದರವನ್ನಾಗಿ ಮಾಡಲು ಪ್ರಯತ್ನಿಸಿದ್ದೇವೆ.

ಸರ್ವ ಸಮೃದ್ಧಿಯನ್ನು ಸಾಧಿಸಲು ರಾಷ್ಟ್ರವು ಇಟ್ಟುಕೊಂಡ ಪಂಚವಾರ್ಷಿಕ ಯೋಜನೆಗಳಲ್ಲಿ ಎರಡು ಯೋಜನೆಗಳು ಮುಗಿದಿದ್ದು ತೃತೀಯ ಯೋಜನೆಯ ಕಾರ್ಯ ಪ್ರಾರಂಭವಾಗಲಿದೆ. ಪಂಚಯೋಜನೆಗಳು ಮುಗಿದಾಗಲೆ ರಾಷ್ಟ್ರವು ಸರ್ವಾಂಗೀಣ ಪ್ರಗತಿಯನ್ನು ಸಾಧಿಸುವುದು. ಇದುವೇ ರಾಷ್ಟ್ರವಿಟ್ಟುಕೊಂಡ ಹೆಗ್ಗುರಿಯಾಗಿದೆ. ಈ ಗುರಿಯನ್ನು ಸಾಧಿಸುವಲ್ಲಿ ಭಾರತೀಯರು ಎಲ್ಲ ರೀತಿಯಿಂದ ಸಹಾಯ ಸಲ್ಲಿಸುವದು ಅತ್ಯಗತ್ಯವಾಗಿದೆ.

ಅಂತಾರಾಷ್ಟ್ರೀಯ ರಂಗದಲ್ಲಿ ಭಾರತವು ಹಿಂದಿನ ಧ್ಯೇಯವನ್ನು ಮುಂದುವರಿಸಿಕೊಂಡು ಹೋಗಿದೆ. ಯಾವ ಗುಂಪಿಗೂ ಸೇರದೆ ಮಧ್ಯಸ್ಥವಾಗಿದ್ದುಕೊಂಡು ಜಾಗತಿಕ ಶಾಂತಿಸಮೃದ್ಧಿಗಾಗಿ ಪ್ರಯತ್ನಿಸುತಿರುವದು. ಅಣುಬಾಂಬು ಮೊದಲಾದವುಗಳ ಸ್ಫೋಟಗಳನ್ನು ಕಟುವಾಗಿ ಟೀಕಿಸಿ, ಈ ಮಹತ್ವದ ವೈಜ್ಞಾನಿಕ ಪ್ರಗತಿಯ ಉಪಯೋಗವು ವಿಧಾಯಕ ರೀತಿಯಲ್ಲಾಗಲೆಂದು ಪ್ರತಿಪಾದಿಸುತ್ತದೆ. ಆ ರೀತಿ ಪ್ರಯತ್ನಿಸುತ್ತದೆ. ರಾಷ್ಟ್ರದ ಈ ನಿರ್ಧಾರವು ಅಚಲವಾಗಿದೆ.

ಈ ಸಂಚಿಕೆಯನ್ನು ಸರ್ವಾಂಗ ಸುಂದರ ಮಾಡಲು ಸಹಾಯಕರಾದವರೆಲ್ಲರ ಉಪಕಾರವನ್ನು ಈ ಸಂದರ್ಭದಲ್ಲಿ ಸ್ಮರಿಸಬಯಸುತ್ತೇವೆ. ಲೇಖ, ಕತೆ, ಕವನ, ನಾಟಕ, ಭವಿಷ್ಯ ಮತ್ತು ಹರಟೆಗಳನ್ನು ಬರೆದ ಮಾನ್ಯ ವಿದ್ವಾಂಸರಿಗೆ, ಮುಖಪತ್ರದ ಚಿತ್ರ ಇತರ ಚಿತ್ರ ವ್ಯಂಗ್ಯಚಿತ್ರ, ಮತ್ತು ಛಾಯಾಚಿತ್ರಗಳನ್ನು ಒದಗಿಸಿದವರಿಗೆ, ಪಡಿಯಚ್ಚು ಮಾಡಿಕೊಟ್ಟವರಿಗೆ ನಮ್ಮ ಧನ್ಯವಾದಗಳು. ಜಾಹೀರಾತುಗಳನ್ನು ಕೊಟ್ಟು ಸಹಕರಿಸಿದವರಿಗೆ ಕೃತಜ್ಞರಾಗಿದ್ದೇವೆ. ನಮ್ಮ ಸಹಕಾರಿಗಳಿಗೆ ಮುದ್ರಣ, ಜಾಹೀರಾತು, ಪ್ರಸಾರ, ಪಾರ್ಸಲ್ ವಿಭಾಗದವರಿಗೆ ನಮ್ಮ ಅಭಿವಂದನೆಗಳು. ನಮ್ಮ ವಾಚಕವೃಂದಕ್ಕೆಲ್ಲ ಈ ಸಂದರ್ಭದಲ್ಲಿ ಶುಭಾಶಯವನ್ನು ಕೋರುತ್ತೇವೆ.

॥ ಸರ್ವೇ ಜನಾಃ ಸುಖಿನೋ ಭವಂತು ॥



ಸರ್ವಪ್ರಥಮ ಸತ್ಯಾಗ್ರಹಿ

(ಇತಿಹಾಸ ಕಾಲದಲ್ಲಿ)

ಸತ್ಯಾಗ್ರಹವಿಂದು ವಿಶ್ವವ್ಯಾಪಿಯಾಗತೊಡಗಿದೆ. ಅಣುಸ್ಫೋಟ ನಿರೋಧಕ್ಕಾಗಿ ಮಹಾದಾರ್ಶನಿಕರಾದ ಬರ್ಟ್ರಾಂಡ ರಸೆಲ್ಲರು ಸತ್ಯಾಗ್ರಹಮಾಡಿ ಸೆರೆಮನೆ ಸೇರಿದರು. ಇದನ್ನು ಮೊದಲು ರೂಪಿಸಿ ಅದನ್ನು ಬಳಕೆಗೆ ತಂದವರು ಮಹಾತ್ಮಾ ಗಾಂಧೀಜಿಯವರಾದರೂ ನಮ್ಮ ಪುರಾಣಗಳಲ್ಲೂ ಚರಿತ್ರೆಗಳಲ್ಲೂ ಕೆಲವೊಂದು ನಿದರ್ಶನಗಳಿರುವವು. ತಕ್ಷಶಿಲೆಯ ಕ್ಯಾಲಾಮಸ್: ಇತಿಹಾಸಕಾಲದ ಪ್ರಥಮ ಸತ್ಯಾಗ್ರಹಿ ಎಂದು ಕಂಡುಬಂದಿದೆ. ಅವನ ಚರಿತ್ರೆಯನ್ನು ಇಂದಿನ ಸತ್ಯಾಗ್ರಹದ ಹಿನ್ನೆಲೆಯಲ್ಲಿ ಇಲ್ಲಿ ನಿರೂಪಿಸಲಾಗಿದೆ.

ಲೇಖಕರು :

ಶ್ರೀ ರಂಗನಾಥ ದಿವಾಕರ

ಬುದ್ಧನ ಈಚೆಗಿನ ಕಾಲವು ಮಾತ್ರ (ಕ್ರಿ. ಪೂ. ಆರನೆ ಶತಮಾನ) ಇತಿಹಾಸಕಾಲ ಎಂದು ವಿದ್ವಾಂಸರು ಹೇಳುವರು. ಅಲೆಕ್ಸಾಂಡರನು ಭಾರತದ ಮೇಲೆ ದಾಳಿಯಿಟ್ಟಾಗ ಅವನಿಗೆ ಭಾರತೀಯ ಸಂಸ್ಕೃತಿಯ ನಿಜವಾದ ಪರಿಚಯವಾಯಿತು. ಆಗಿನ ಒಂದು ಸಂದರ್ಭದಲ್ಲಿ ಆದ ಮಾತನ್ನು ಇತಿಹಾಸಜ್ಞರು ಹೀಗೆ ಬರೆದುದುಂಟು.

ಪಂಜಾಬದ ತಕ್ಷಶಿಲೆ ಎಂಬ ಪ್ರಸಿದ್ಧ ಪಟ್ಟಣದಲ್ಲಿ ಕ್ಯಾಲಾಮಸ್ (ಗ್ರೀಕರು ಉಚ್ಚರಿಸುವ ರೀತಿ) ಎಂಬ ಭಾರತೀಯ ತತ್ತ್ವಜ್ಞಾನಿ ಇರುತಿದ್ದನು. ಅವನೇ ಜಗತ್ತಿನಲ್ಲಿಯ ಇತಿಹಾಸಕಾಲದ ಪ್ರಥಮ 'ಸತ್ಯಾಗ್ರಹಿ', ಎಂದು ಹಾಯಲಂಡ ಎಂಬ ಲೇಖಕನು 'ದಿ ಕ್ರಾಸ್ ಮೂವ್ಜ್ ಈಸ್ಟ್', ಎಂಬ ತನ್ನ ಪುಸ್ತಕದಲ್ಲಿ ಉಲ್ಲೇಖಿಸಿದ್ದಾನೆ. ಕ್ಯಾಲಾಮಸ್ಸನು ಅಲೆಕ್ಸಾಂಡರನಿಗೆ ಬರೆದ ಪತ್ರವು ಗ್ರೀಕಭಾಷೆಯಲ್ಲಿ (ಪ್ರಾಯ್‌ವ್ಹೆಟ್ ಲೆಟರ್ಸ್, ಪೇಗನ್ ಆ್ಯಂಡ್ ಕ್ರಿಶ್ಚಿಯನ್) ಉಪಲಬ್ಧವಿರುವದು. ಅದರ ಪೂರ್ತಿಪಾಠವನ್ನು ಹಾಗೂ ಕ್ಯಾಲಾಮಸ್ಸನ ಕಥೆಯನ್ನು ಕೊನೆಗೆ ಕೊಡುವೆನು. ಅದಕ್ಕೂ ಮೊದಲು ಕೆಲ ಮಾತುಗಳನ್ನು ಹೇಳುವದು ಅವಶ್ಯ.

ಐತಿಹಾಸಿಕ ದೃಷ್ಟಿಯಿಂದ ಈ ಸತ್ಯಾಗ್ರಹವು ಪ್ರಥಮ ಹಾಗೂ ಮಹತ್ತ್ವದ್ದು ಇದ್ದರೂ ಅದಕ್ಕೂ ಮೊದಲು ಸತ್ಯಾಗ್ರಹ ಎಂಬುದೇ ಇರಲಿಲ್ಲ ಎಂದು ಯಾರೂ ಹೇಳಲಾರರು. 'ಸತ್ಯಾಗ್ರಹ' ಎಂಬ ಶಬ್ದವು ಪ್ರಚಲಿತವಿರಲಿಲ್ಲ ಎಂಬುದು ನಿಜ. ಆಗ ಆ ಶಬ್ದ ಗೊತ್ತಿರಲಿಲ್ಲ. ಇಷ್ಟೇ ಅಲ್ಲ. ಮುಂದೆ ಸುಮಾರು ೨೨೦೦ ವರುಷಗಳ ವರೆಗೂ ಆ ಶಬ್ದವು ಜನ್ಮತಾಳಲಿಲ್ಲ. ಅದಕ್ಕೂ ಪೂರ್ವದಲ್ಲಿ ಕೂಡ ಅಂದರೆ ವೇದೋಪನಿಷತ್ತುಗಳ ಕಾಲದಲ್ಲಿಯೂ ಈ ಶಬ್ದದ ಸುಳುವು ಕಂಡುಬರುವದಿಲ್ಲ. ಆ ಶಬ್ದವಿರದಿದ್ದರೂ ಆ 'ವಸ್ತು' ಇರಲಿಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. 'ವಸ್ತು' ಶಬ್ದಕ್ಕಿಂತ ಮೊದಲು ಇರಬಲ್ಲದು, ಇರುವದು ಖಂಡಿತ. ವಸ್ತು ಮೊದಲು, ಅದರ ಜ್ಞಾನ ಆ ಮೇಲೆ. ವಸ್ತುವಿನ ಸಂಕೇತಕ್ಕಾಗಿ ಸ್ಮರಣೆಗಾಗಿ, ನಿರ್ದೇಶಕ್ಕಾಗಿ, ಬೋಧನೆಗಾಗಿ ಶಬ್ದವು ಹುಟ್ಟುವದು. ಶಬ್ದವು ಮೂಡಿಬರದಿದ್ದರೂ ವಸ್ತು ಇದ್ದೇ ತೀರುವದು, ವಸ್ತು ಸ್ವಯಂಭು, ಸ್ವಾಯತ್ತ ಹಾಗೂ ಸತ್ಯರೂಪ.

ಹಾಗೆ ನೋಡಿದರೆ ಇತಿಹಾಸಕಾಲದ ಆಚೆಗಿನ ಪುರಾಣಕಾಲದಲ್ಲಿಯೂ 'ಸತ್ಯಾಗ್ರಹ' ಶಬ್ದ ಇರಲಿಲ್ಲವೆಂದಾಕ್ಷಣಕ್ಕೆ ಸತ್ಯಾಗ್ರಹವೇ ಇರಲಿಲ್ಲ ಎಂದು ಹೇಳುವದು ಸತ್ಯಾಪಲಾಪವಾಗುವದು. ಯಾಕಂದರೆ ಧ್ರುವ, ಪ್ರಹ್ಲಾದ, ಹರಿಶ್ಚಂದ್ರ ಇವರಿಗಿಂತ ಶ್ರೇಷ್ಠ ಸತ್ಯಾಗ್ರಹಿಗಳು ಇನ್ನಾರು? ಹರಿಶ್ಚಂದ್ರನ ಚರಿತ್ರೆಯಂತೂ ಅತ್ಯಂತ ಶ್ರೇಷ್ಠ, ಆದರ್ಶ ಸತ್ಯಾಗ್ರಹಿಯ ಚರಿತ್ರೆ. ಗಾಂಧಿಯವರು ಆ ಚರಿತ್ರೆಯಿಂದ ಬಹಳ ಪ್ರಭಾವಿತರಾದರು.

ಉಪನಿಷತ್ಕಾಲದಲ್ಲಿಯೂ ಸತ್ಯಾಗ್ರಹಿಗಳಿಲ್ಲದಿರಲಿಲ್ಲ. ಬಾಲ ನಚಿಕೇತನ ಕಥೆಯನ್ನು ನೋಡಬಹುದು. ಅವನು ಮಹಾಸತ್ಯಾನ್ವೇಷಿ. ಸತ್ಯಕ್ಕಾಗಿ ತಂದೆಯೊಡನೆ ಹಟ ಮಾಡಿದನು. ತಂದೆ ಕೋಪಗೊಂಡರೂ ತಾನು ಶಾಂತನಿದ್ದು ಎಲ್ಲವನ್ನು ಸಹಿಸಿದನು. ಕೋಪಾವಿಷ್ಟನಾದ ತಂದೆ ಅವನನ್ನು ಯಮರಾಜನಿಗೆ ಅರ್ಪಿಸಿಬಿಟ್ಟನು. ಅದಕ್ಕೂ ಹೆದರದೆ ಅವನು ಯಮರಾಜನ ಬಾಗಿಲಲ್ಲಿ ತಪಸ್ಸನ್ನು ಗೆಯ್ದನು. ಯಮಧರ್ಮನು ಸಂತುಷ್ಟನಾಗಿ ಅವನಿಗೆ ಬೇಕಾದುದನ್ನುಕೊಡಮಾಡಿ, 'ಆದರೆ ಮೃತ್ಯುವಿನಾಚೆ ಏನಿದೆ ಎಂಬ ಪ್ರಶ್ನೆಯನ್ನು ಕೇಳಬೇಡ' ಎಂದು ಹೇಳಿಕೊಂಡನು. ಆದರೆ ಸಾತ್ವಿಕ ಶಿರೋಮಣಿಯೂ ಸತ್ಯಶೋಧಕನೂ ಆದ ನಚಿಕೇತನು ತನಗೆ ಇನ್ನೇನೂ ಬೇಡ, ಕೇವಲ ಸತ್ಯದ ಭಿಕ್ಷೆ ಬೇಕು ಎಂದು ಹಟ ಹಿಡಿದನು. ಆ ಹಟದಲ್ಲಿ- ಆಗ್ರಹದಲ್ಲಿ ಯಶಸ್ವಿಯಾದನು. ಸತ್ಯಾಗ್ರಹಿಯ ಎಲ್ಲ ಮುಖ್ಯ ಸದ್ಗುಣಗಳೂ ನಚಿಕೇತನಲ್ಲಿ ಒಡಮೂಡಿದುದನ್ನು ನಾವು ಕಾಣಬಹುದು. ಸತ್ಯ ಶೋಧನೆಯ ಹವ್ಯಾಸ, ಸತ್ಯದ ಬಗ್ಗೆ ಆಗ್ರಹ, ಅಕ್ರೋಧ, ನಿರ್ಭಯತೆ, ತಪಸ್ಸು, ಅತ್ಯಂತ ತ್ಯಾಗ, ಕ್ಷಮೆ ಇವೆಲ್ಲವು ನಚಿಕೇತನಲ್ಲಿ ಮೂರ್ತಿಮತ್ತಾಗಿ ನಿಂತಿರುವವು.

ವೇದಕಾಲದಲ್ಲಿಯೂ ಸತ್ಯಕ್ಕೆ, ಸತ್ಯಶೋಧನೆಗೆ ಅತೀವ ಮಹತ್ತ್ವವಿತ್ತು. ಗಾಂಧೀಜಿಯವರು ಹಲವಾರು ಸಾರೆ, ಸತ್ಯವೇ ದೇವರು, ಎಂದು ಸಾರಿದ್ದುಂಟು. ಇದೇ ವಾಕ್ಯಕ್ಕೆ ಸರಿನಿಗಿಲಾದ ವಾಕ್ಯವು— 'ಸತ್ಯ ಇತ ಇಂದ್ರಃ' (ಸತ್ಯವೇ ಎಲ್ಲಕ್ಕೂ ಶ್ರೇಷ್ಠವಾದ ಇಂದ್ರದೇವತೆ) ಎಂಬುದು ಋಗ್ವೇದದಲ್ಲಿ ಪ್ರಸಿದ್ಧವಿರುವದು. ಎಲ್ಲಕ್ಕೂ ಮೊದಲು 'ಸತ್' ಎಂಬುದೇ ಇರಬಲ್ಲದು, 'ಅಸತ್'ದಿಂದ ಸತ್ ಎಂಬುದು ಹುಟ್ಟಲಾರದು, ಈ ಮುಂತಾದ ಪ್ರಮೇಯಗಳೆಲ್ಲ 'ಸತ್' 'ಸತ್ಯ', 'ಸತ್ಯ ಜ್ಞಾನದ ಇಚ್ಛೆ' ಇವನ್ನೆ ಪ್ರಕಟಿಸುವವು. ಓಂ ತತ್ ಸತ್, ಎಂಬ ಮಂತ್ರದಲ್ಲಿಯ 'ಸತ್' ಎಂಬುದು, ಸತ್-ಚಿತ್-ಆನಂದ ಎಂಬ ನಿರ್ದೇಶದಲ್ಲಿಯ 'ಸತ್' ಎಂಬುದು. ಇವೆಲ್ಲ 'ಸತ್' ವಸ್ತುವನ್ನೆ ಮೂಲಭೂತ ತತ್ತ್ವ ಎಂಬುದನ್ನು ಸಾರುತ್ತವೆ.

ಈ ರೀತಿ, ಸತ್, ಸತ್ಯ, ಸತ್ಯಶೋಧನೆ ಇವುಗಳಿಗೆ ನಮ್ಮ ಸಂಸ್ಕೃತಿ ಹಾಗೂ ಪರಂಪರೆಗಳಲ್ಲಿ ಬಹಳ ಪ್ರಮುಖ ಸ್ಥಾನವಿರುವುದಲ್ಲದೆ, 'ಸತ್ಯಾನ್ನಾಸ್ತಿ ಪರೋಧರ್ಮಃ (ಸತ್ಯಕ್ಕಿಂತ ಹೆಚ್ಚಿನ ಧರ್ಮವಿಲ್ಲ), 'ಸತ್ಯಮೇವ ಜಯತೇ ನಾನೃತಮ್' (ಸತ್ಯಕ್ಕೆಯೇ ಜಯವು ಕಟ್ಟಿಟ್ಟಂತೆ, ಅಸತ್ಯಕ್ಕೆ ಜಯವು ಬಾರದು) ಈ ಮುಂತಾದ ವಾಕ್ಯಗಳು ಸತ್ಯದ ಭಕ್ತನಿಗೆ ಜಯದ ಸಂಪೂರ್ಣ ಭರವಸೆಯನ್ನು ಕೊಡುತಿವೆ. ಸಂಶಯವುಂಟಾದಾಗ ಇಲ್ಲವೆ ಸತ್ಯಕ್ಕೆ ಅಪಜಯವಾಗಬಹುದು ಎಂಬ ಭಯವು ಉಂಟಾದಾಗ ಈ ಬಗೆಯ ಭರವಸೆ ಬಹಳ ಮಹತ್ತ್ವದ್ದು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇನ್ನೂ ಈ ಬಗ್ಗೆ ಹೇಳುವುದಾದರೆ, 'ಸತ್ಯ' ಎಂಬ ಶಬ್ದದೊಡನೆ ಹಲವಾರು ಶಬ್ದಗಳನ್ನು ಜೋಡಿಸಲಾಗಿ ಸಿದ್ಧವಾಗುವ ಮಹತ್ತ್ವದ ಪದಗಳು ಹಾಗೂ ಅವುಗಳಿಂದ ಬೋಧವಾಗುವ ಗುಣಾದಿಗಳು ನಮ್ಮ ಭಾರತದಲ್ಲಿ ಬೇಕಾದಷ್ಟಿವೆ. 'ಸತ್ಯಕಾಮ', 'ಸತ್ಯಸಂಧ', 'ಸತ್ಯಧೃತಿ', 'ಸತ್ಯನಿಷ್ಠ' 'ಸತ್ಯವಂತ' 'ಸತ್ಯದೇವ' ಇತ್ಯಾದಿ ಶಬ್ದಗಳು ಈ ಬಗೆಯವಿರುವವು.

ಹೀಗಿದ್ದರೂ 'ಸತ್ಯಾಗ್ರಹ' ಈ ಶಬ್ದ ಮಾತ್ರ ಗಾಂಧೀಜಿಯವರೇ ಶೋಧಿಸಬೇಕು ಎಂದು ಸಾವಿರಾರು ವರುಷ ಹಾದೀ ಕಾಯುತ್ತಿತ್ತೋ ಏನೋ! ಅವರು ಅದಕ್ಕೆ ಕೊಟ್ಟ ಅರ್ಥವು ಕೂಡ ಅನ್ಯಾದೃಶವೆಂದೇ ಹೇಳಬೇಕಾಗುವದು. ಅವರ 'ಸತ್ಯವು' ನಿತ್ಯ ವ್ಯವಹಾರದ ಆಚರಣೆಯಲ್ಲಿ ರೂಪುಗೊಳ್ಳುವ, ಪ್ರತ್ಯಕ್ಷ ಅನುಭವಕ್ಕೆ ಬರುವ, ಎಲ್ಲರಿಗೂ ದೃಗ್ಗೋಚರವಾಗುವ, ಪರಾತ್ಪರ ಸತ್ಯದ ಪ್ರತಿಬಿಂಬವು. ಬಿಂಬವು ಎಲ್ಲರಿಗೂ ಕಾಣುವದು ದುಸ್ತರ, ಪ್ರತಿಬಿಂಬವು ಎಲ್ಲರಿಗೂ ಗೋಚರವಾಗುವದು. 'ಆಗ್ರಹ' ಎಂಬ ಶಬ್ದಕ್ಕೆ ಕೂಡ ಅವರು ಕಲ್ಪಿಸಿದ ಅರ್ಥವು ಅದ್ವಿತೀಯವು. ಅವರ ದೃಷ್ಟಿಯಿಂದ ಸತ್ಯದ ಆಗ್ರಹವು ಅಹಿಂಸಾತ್ಮಕವೇ ಇರಲಿಕ್ಕೆ ಬೇಕು; ಪ್ರೇಮಪೂರ್ಣವಾದುದೇ ಇರಬೇಕು; ಭಯರಹಿತವೇ ಇರಬೇಕು; ಆತ್ಮಶಕ್ತಿಯನ್ನೆ ಅವಲಂಬಿಸಿರಬೇಕು.

ಅವರು ತಮ್ಮ ಜೀವಮಾನದಲ್ಲಿ ಈ ಸತ್ಯಾಗ್ರಹವನ್ನು ಅನೇಕಾನೇಕ ಸಂದರ್ಭಗಳಲ್ಲಿ ಆಚರಿಸಿದರು. ಸತ್ಯಾಗ್ರಹಶಾಸ್ತ್ರದ ಸಂಹಿತೆ, ಅದರ ವ್ಯಾಖ್ಯಾನ, ಅದರ ಪ್ರಕ್ರಿಯೆ ಇವೆಲ್ಲವುಗಳನ್ನು ವಿಧಿಪೂರ್ವಕವಾಗಿ ಪ್ರಯೋಗಿಸಿ ಗಾಂಧೀಜಿಯವರು ಜಗತ್ತಿಗಾಗಿ ಒಂದು ಹೊಸ ಮಾರ್ಗವನ್ನು ಹಾಕಿಕೊಟ್ಟರು. ಆ ಮಾರ್ಗದ ಆಗುಹೋಗುಗಳು ಇನ್ನೂ ಮಾನವಕುಲದ ಭವಿಷ್ಯದೊಡನೆ ನಿಗಡಿತವೂ ನಿಬದ್ಧವೂ ಆಗಿರುವವು.

ಇನ್ನು ಇತಿಹಾಸಕಾಲದಲ್ಲಿಯ ಪ್ರಥಮ ಸತ್ಯಾಗ್ರಹಿಯ ವಿಷಯ. ಭಾರತೀಯ ತತ್ತ್ವಜ್ಞಾನಿಗಳನ್ನು, ಸಾಧು-ಸಂತರನ್ನು ಪರೀಕ್ಷಿಸುವ ಭಾವನೆಯಿಂದಲೋ ಏನೋ, ಅಲೆಕ್ಸಾಂಡರನು ಅವರ ಮನಸಿನ ವಿರುದ್ಧವಾಗಿ ಅಪೇಯಪಾನಾದಿಗಳನ್ನು ಮಾಡಿಸಿ ಅವರನ್ನು ತನ್ನ ದೇಶಕ್ಕೆ ಹೊತ್ತೊಯ್ಯಬೇಕೆಂದು ಅಪೇಕ್ಷಿಸಿದನೆಂದು ಐತಿಹ್ಯವಿದೆ. ಅದನ್ನು ಕ್ಯಾಲಾಮಸ್ಸನು ತಡೆಯಲು ಮುಂದೆ ಬಂದನು. ಆ ಸಂದರ್ಭದಲ್ಲಿ ಅವನು ಅಲೆಕ್ಸಾಂಡರನಿಗೆ ಈ ಕೆಳಗಿನ ಪತ್ರವನ್ನು ಬರೆದನು :—

'ನಾವು, ನಮ್ಮ ಕಾರ್ಯ ಇವುಗಳ ಕಲ್ಪನೆ ಕೂಡ ಕನಸುಮನಸಿನಲ್ಲಿಲ್ಲದ ನಿನ್ನ ಮಿತ್ರರು ನಿನ್ನನ್ನು ತಪ್ಪುದಾರಿಗೆ ಎಳೆದೊಯ್ಯುತ್ತಿದ್ದಾರೆ. ಭಾರತೀಯ ತತ್ತ್ವಜ್ಞಾನಿಗಳನ್ನು ಪೀಡಿಸುವ, ಹಿಂಸಿಸುವ ಸಲಹೆಯನ್ನು ನಿನಗೆ ಅವರು ಕೊಡುತಿದ್ದಾರೆ. ನೀನು ನಮ್ಮ ದೇಹಗಳನ್ನು ಬೇಕುಬೇಕಾದಲ್ಲಿ ಈಡಾಡಬಹುದು. ಆದರೆ ನಮ್ಮ ಆತ್ಮನಿಗೆ ಬೇಡಾದುದನ್ನು ನೀನು ನಮ್ಮಿಂದ ಎಂದೂ ಮಾಡಿಸಲಾರಿ. ನೀನು ಕಲ್ಲುಕಟ್ಟಿಗೆಗಳನ್ನು ಮಾತಾಡಿಸಬಲ್ಲೆಯಾದರೆ ಮಾತ್ರ ನಮಗೆ ಸಲ್ಲದುದನ್ನು ಸಹ ನಮ್ಮಿಂದ ನೀನು ಮಾಡಿಸಬಲ್ಲೆ! ಬೆಂಕಿಯು ಅತ್ಯಂತ ವೇದನೆ ಕೊಟ್ಟು ದೇಹಗಳನ್ನು ಸುಟ್ಟುಬಿಡಬಲ್ಲದು; ನಾವು ನಿನ್ನ ರಾಜ್ಯದಲ್ಲಿರುವಾಗ ಹಾಗೂ ಇರುವವರೆಗೆ ಅಂಥ ಬೆಂಕಿಯಲ್ಲಿಯೆ ನಿಂತಿದ್ದೇವೆ ಎಂದು ಹೇಳಬಹುದು. ಆದರೆ ನಮ್ಮ ಮನಸ್ಸಿಗೆ ಬಾರದುದನ್ನು ನಮ್ಮಿಂದ ಮಾಡಿಸಬಲ್ಲ ಅರಸನಾಗಲಿ, ಚಕ್ರವರ್ತಿಯಾಗಲಿ ಇನ್ನೂ ಹುಟ್ಟಿಬಂದಿಲ್ಲ. ನಾವು ಗ್ರೀಕ ತತ್ತ್ವಜ್ಞಾನಿಗಳಂತೆ ಶಬ್ದಾಡಂಬರವನ್ನು ರಚಿಸಿ ಪ್ರಸಿದ್ಧಿಪಡೆಯಲು ಇಚ್ಛಿಸುವವರಲ್ಲ. ನಮ್ಮ ನುಡಿಗೂ ನಡೆಗೂ ಅಭೇದ್ಯವಾದ ಸಂಬಂಧವುಂಟು. ನಾವು ಆಡುವ ಮಾತು ಹಲವೇ ಇರುವವು, ಆದರೆ ಅವು ಪೂರ್ಣ ಪ್ರಯೋಜನವುಳ್ಳವುಗಳು. ಅವು ನಮಗೆ ಸುಖವನ್ನು, ಮುಕ್ತಿಯನ್ನು ದಯಪಾಲಿಸುವವು.'

ಈ ಪತ್ರವು ಸತ್ಯಾಗ್ರಹದ ಮೂಲ ತತ್ತ್ವವನ್ನು ಹಾಗೂ ಆತ್ಮಶಕ್ತಿಯಲ್ಲಿಯ ಅಚಲ ವಿಶ್ವಾಸವನ್ನು ಪ್ರತಿಬಿಂಬಿಸುತಿದೆ. ಗಾಂಧೀಜಿಯವರು ಈ ತತ್ತ್ವಗಳನ್ನೇ ತಳಹದಿಯನ್ನಾಗಿಟ್ಟುಕೊಂಡು ತಮ್ಮ ಸತ್ಯಾಗ್ರಹದ ಜೀವನವ್ಯಾಪಿಯಾದ ಅಗಾಧ ವ್ಯೂಹವನ್ನು ರಚಿಸಿದರು.

ಮೃಗನಯನೆಗೆ

ಲಜ್ಜೆಯ ರಾಗದ ರಸಋಷಿವನದಲಿ
ಆಶ್ರಮ ಮೃಗದೊಲು ನಲಿದುಲಿದಾಡಿರೆ
ನಿನ್ನಯ ಆ ಕುಡಿ-ಮಿಂಚಿನ ಸೆಳಕಿನ
ಮೃಗನಯನ !
ಬೆದರಿದ ಕಂಗಳ ನೋಟದ ಕಂಪಿತ
ಛವಿವೆರಲು,
ಮೀಂಟಿರೆ, ಈ ದುಷ್ಯಂತನ ಬಿಲ್ಲಿನ
ಎದೆ-ಹೆದೆಯ !
ಮಕರ ಪತಾಕೆಯನೆತ್ತುತೆ ನಾನು
ರಥವನು ನೂಕಿದೆ ನಿನ್ನೆಡೆಗೆ,
ಗಾಳಿಯನೇರುತ ಓಡಿದೆ ನೀನು
ಕಿರುನಗೆಯುರಳನು ಉದ್ದಕು ತೂರುತ
ನಾಲ್ದೆಸೆಗೆ.

೨

ಬಿಲ್ಲು-ಬಾಣಗಳ ಕಂಡಿಂತು ಬೆದರಿದೆಯೊ
ಇದು ಕಬ್ಬಿನ ಬಿಲ್ಲು !
ಬಿಸಿಥಮನಿ ಸಿಂಜಿನಿಗೆ ಮ್ಯನವಿರ ಶರಸಂಚು ;
ಓ, ನಲ್ಲೆ ನಿಲ್ಲು !
ನಿನ್ನೆರಳೆ ಎದೆಯನ್ನು ತಾಗಲಿಕೆ ಜಗದೆಲ್ಲ
ಬ್ರಹ್ಮಾಸ್ತ್ರ ದಿವ್ಯಾಸ್ತ್ರವಾವುದುಕು ಬಲವಿಲ್ಲ !
ಅದಕೆಂದೆ ತಂದಿರುವೆ,
ಕೆಂದಳಿರು ಕೈಚಾಚಿ ನೀಡಿರ್ದ ಸಂಪಗೆಯ,
ಮಲ್ಲಿಗೆಯ, ಆ ಜಾಜಿ, ಬಕುಲಗಳ ಕುಸುಮ-ಸರ-
-ಈ ಎದೆಯ ರೂಪ-ರಸ-ಗಂಧಗಳ ಶಬ್ದಗಳ
ಮಧುಲೇಪವದಕಿಟ್ಟು,
ಮನಸಿಜನು ಮಂತ್ರಿಸಿಹ ಸಂಮೋಹನಾಸ್ತ್ರ !
ಹುಸಿಹೋಗದೀ ಅಸ್ತ್ರ !!
ಎಸೆಯಗೊಡು
ಎಸೆಯಕೊಡು,
ಆಶ್ರಮದ ಮೃಗವೆಂದು ತಾಪಸರು ಕೂಗುತ್ತ
ಕೈ ತಡೆವ ಮುನ್ನವೆ,
ಎದೆಯ ಕೊಡು !
ಹೂಗಣೆಯ ಹೂ-ಸ್ಪರ್ಶ ಬತ್ತಿರುವ ಎದೆತೊರೆಯ
ದಡಕೊಚ್ಚಿ ತಂದಪುದು,
ಆ ತೊರೆಯ ಮಡಿಲಲ್ಲಿ ಉಂಗುರಕೆ ಕಾಯ್ದಿರುವ
ಮೀನುಗಳ ಮಿಡುಕಿಲ್ಲ! ಅಗಲಿಕೆಯ ಅಳವಿಲ್ಲ!

೩

ಬಾ ರಥವನೇರು ಬಾ,
ಹೆದರದಿರು,
ಗಾಂಧರ್ವ-ಗಿಂಧರ್ವ ಎಂದೆಂಬ ಉಸಿರಿಲ್ಲ
ಉಂಗುರದ ಬದಲಾಗಿ ಪ್ರಾಣವನೆ ಕೈಗಿಡಲು
ಸಮಾಜ-ದೂರ್ವಾಸ ಶಾಪಕ್ಕೆ ಅಳುಕುವುದೆ ?
" ಸರ್ವಂ ಚಿಂತಾಃ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ "
ತಪ್ಪದೆನ್ನಯಭಾಷೆ !
ಆ ಕಾಳಿದಾಸನೇ ಮಗುದೊಮ್ಮೆ ಬಂದರೂ
ಕಣ್ ಕಣ್ ಬಿಟ್ಟಾನು !
ಈಯೊಲವಿನೀತೆರನ ಅಮರಪ್ರಣಯದ ಕಥೆಯ
ಮತ್ತೊಂದು ಬರೆದಾನು !!

—ಪಶುಪತಿ ರೆಡ್ಡಿ

ರಾವಣ ನೆತ್ತಿಮೇಲೆ ಕುಂಭಕರ್ಣ ಎದ್ದ

ಯಕ್ಷಗಾನದಲ್ಲಿ ನಾನು ಮುಂದು ತಾನು ಮುಂದು ಎಂದು ಮಲ್ಲಿಗೆಹಳ್ಳಿಯವರಿಗೂ ಹೊಸಹಳ್ಳಿಯವರಿಗೂ ಏರಾಟ ಇದ್ದೇ ಇತ್ತು. ಮಲ್ಲಿಗೆಹಳ್ಳಿ ಎದುರುಪಕ್ಷಕ್ಕಿಂತ ಮುನ್ನಡೆದಾಗ ತಾವು ಹಿಂದುಳಿಯುವುದೇ ಎಂದು ಹೊಸಹಳ್ಳಿಯವರು ಕುಂಭಕರ್ಣನ ವಧೆ ಎಂಬ ಪ್ರಸಂಗವನ್ನು ಅಭಿನಯಿಸಲು ಬಲವಾದ ಸಿದ್ಧತೆ ನಡೆಸಿದರು. ಅವರನ್ನು ಮೀರಿಸುವದರೊಂದಿಗೆ ತಮ್ಮ ವೈಯಕ್ತಿಕ ಹಿರಿಮೆಯನ್ನು ತೋರಿಸಬೇಕೆಂದು ಈ ಆಟಗಾರರು ಬಯಸಿದರು. ಆ ಮೇರೆಗೆ ಅವರ ಸಕಲ ಸಿದ್ಧತೆಯಿಂದ ಕೂಡಿದ ಪ್ರಯೋಗ ಪ್ರಾರಂಭವಾಯಿತು. ನಿಜ, ಆದರೆ ಆದುದೇನು? ಅದೊಂದು ಕುತೂಹಲಕಾರಿ ಪ್ರಸಂಗ, ಓದಿಯೇ ತಿಳಿಯಬೇಕು.

ಲೇಖಕರು :
ಶ್ರೀ ಗೊರೂರು
ರಾಮಸ್ವಾಮಯ್ಯಂಗಾರ

ಮಲ್ಲಿಗೆಹಳ್ಳಿಯವರಿಗೂ ಹೊಸ ಹಳ್ಳಿಯವರಿಗೂ ಬಯಲಾಟದಲ್ಲಿ ನಾನು ಮುಂದು ತಾನು ಮುಂದು ಎಂಬ ಸ್ಪರ್ಧೆ ಎಂದಿನಿಂದಲ್ಲೂ ಇದ್ದೇ ಇದ್ದಿತು. ಆದರೆ ಕಳೆದ ತಿಂಗಳ ವರೆಗೆ, ಮಲ್ಲಿಗೆಹಳ್ಳಿಯವರು ಸ್ಥಾಪಿಸಿದ ಜಯಧ್ವಜಪತಾಕೆಯನ್ನು ಕದಲಿಸಲು ಹೊಸಹಳ್ಳಿಯವರಿಗೆ ಸಾಧ್ಯವಾಗಿರಲಿಲ್ಲ. ಆದರೆ ಸುಮಾರು ಆರು ತಿಂಗಳಿನಿಂದಲೇ ಮಲ್ಲಿಗೆಹಳ್ಳಿಯವರಿಗೆ ಸ್ವಲ್ಪ ಕಾತರ ಆರಂಭವಾಗಿತ್ತು. ಹೊಸಹಳ್ಳಿಯವರು ಕುಂಭಕರ್ಣನ ಕಾಳಗ ಬಯಲಾಟಕ್ಕೆ ಬಹಳ ಆಟಾಟೋಪದಿಂದ ಸಿದ್ಧತೆಯನ್ನು ನಡೆಸಿದ್ದರು. ಹೊಸ ರಂಗಮಂಟಪಸಜ್ಜಿಕೆ, ಹಾರ್ಮೋನಿಯಂ ತಬಲವಾದ್ಯಗಾರರಿಗೆ ಹೊಸ ನಿಪುಣರ ಸಹಾಯ, ಪಾತ್ರಗಳಿಗೆಲ್ಲ ಕಣ್ಣು ಕೋರೈಸುವ ನೂತನ ದಮಾಸ್‌ಬಟ್ಟೆಯ ಉಡುಪುಗಳು, ಕಿರೀಟ ಭುಜ ಕೀರ್ತಿ ಛತ್ರಚಾಮರಗಳಿಗೆಲ್ಲ ಹೊಸ ಡೌಲು, ಹಳೆಯ ಭಾಗವತರ ಸಹಾಯಕ್ಕೆ ಮತ್ತೊಬ್ಬ ಯುವಕ ಹೊಸ ಭಾಗವತರು, ರಾವಣ ಕುಂಭಕರ್ಣರ ದರ್ಬಾರಿಗೆ ಹೊಸ ಕಳಾರಟ್ (ಕಾರಿಯೋನೆಟ್) ವಾದ್ಯಗಾರರು ಇವರೆಲ್ಲರ ಅಟ್ಟಹಾಸದೊಂದಿಗೆ ಸಿದ್ಧಗೊಳಿಸಿದ ಕುಂಭಕರ್ಣ ಕಾಳಗ ಬಯಲಾಟವನ್ನು ಈಗ ಒಂದು ತಿಂಗಳ ಕೆಳಗೆ ಹೊಸಹಳ್ಳಿಯವರು ಆಡಿ ತೋರಿಸಿದರು. ಆ ಆಟ ಮಲ್ಲಿಗೆಹಳ್ಳಿಯವರ ಮೂಗಿಗೆ ಸುಣ್ಣ ಬಳಿದು, ಯಕ್ಷಗಾನದಲ್ಲಿ ಅವರು ಸ್ಥಾಪಿಸಿದ್ದ ವಿಕ್ರಮವನ್ನು ಮುರಿದು, ಅವರ ಜಯಪತಾಕೆಯನ್ನು ಧೂಳಿನಲ್ಲಿ ಹೊರಳಿಸುವುದೆಂದು ಹೊಸಹಳ್ಳಿಯವರು ಸುತ್ತಲ ನೂರಾರು ಹಳ್ಳಿಗಳಲ್ಲಿ ಪ್ರಕಟಿಸಿದ್ದರು. ಆಟವನ್ನು ನೋಡಲು ಸುಮಾರು ಹನ್ನೆರಡು ಸಾವಿರ ಜನ ಸೇರಿದ್ದರು. ಕುಂಭಕರ್ಣನ ಕಾಳಗ, ಆಟಗಾರರ ಮತ್ತು ಪ್ರೇಕ್ಷಕರ ನಿರೀಕ್ಷೆಯನ್ನು ಮೀರಿ ಅತ್ಯಂತ ಯಶಸ್ವಿಯಾಯಿತು. ಯಕ್ಷಗಾನ, ಸರ್ವ ಸಲಕರಣೆಗಳೊಂದಿಗೆ ಅಷ್ಟು ತೃಪ್ತಿಕರವಾಗಿ ನಡೆದುದನ್ನು ನಮ್ಮ ಪ್ರಾಂತದ ಜನ ನೋಡಿಯೇ ಇರಲಿಲ್ಲ. ಆಟ, ಹೂವಿನ ಸರ ಎತ್ತಿದಂತೆ, ಸುಲಭವಾಗಿ ಸರಾಗವಾಗಿ ಗೆಲುವಾಗಿ ನಡೆದು ಜನತೆಯ ಆನಂದದ ಕರಘೋಷದಲ್ಲಿ ಕೊನೆಗೊಂಡಿತು. "ಪಾಪ, ಪಾಪ ಮಲ್ಲಿಗೆಹಳ್ಳಿಯವರು ಇವರ ಮುಂದೆ ಇನ್ನು ಹಾಯಲಾರರು. ರಂಗನ ಮುಂದೆ ಸಿಂಗನೇ" ಎಂದುಕೊಂಡು ಪ್ರೇಕ್ಷಕರು ತಮ್ಮ ತಮ್ಮ ಹಳ್ಳಿಗಳಿಗೆ ಹೊರಟುಹೋದರು. ಹೊಸಹಳ್ಳಿಯ ಆಟಗಾರರು "ಈ ಪ್ರಾಂತಕ್ಕೆ ನಾವೇ ಯಕ್ಷಗಾನ ಸಾರ್ವಭೌಮರು. ಮಲ್ಲಿಗೆಹಳ್ಳಿಯವರಿಗೆ ಇನ್ನು ರಂಗಸ್ಥಳದ ಮೇಲೆ ಒಂದು ಶಿಂಗಳಿಕವನ್ನು ತಂದು ನಿಲ್ಲಿಸುವ ಧೈರ್ಯವುಂಟಾಗಬೇಕಾದರೆ ಹತ್ತು ವರುಷ ಬೇಕು" ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಹೊರಟುಹೋದರು.

ಹೊಸಹಳ್ಳಿಯವರಿತ್ತ ಸವಾಲನ್ನು ಮಲ್ಲಿಗೆಹಳ್ಳಿಯವರು. ಎತ್ತಿಕೊಂಡರು. ಹೊಸಹಳ್ಳಿಯವರು ೬ ತಿಂಗಳು ತೆಗೆದುಕೊಂಡಿದ್ದಾರೆ, ನಾವು ಒಂದೇ ತಿಂಗಳ ಸಿದ್ಧತೆಯಿಂದ "ನಭೂತೋ ನಭವಿಷ್ಯತಿ" ಎಂಬಂತೆ ಕುಂಭಕರ್ಣ ವಧೆ ಎಂಬ ಯಕ್ಷಗಾನವನ್ನು ಪ್ರದರ್ಶಿಸಬೇಕೆಂದು ನಿಶ್ಚಯಿಸಿಕೊಂಡರು. ಸಿದ್ಧತೆಗಳು ಹೊಸಹಳ್ಳಿಯವರು ಮಾಡಿದುದರ ನಾಲ್ಕು ಪಟ್ಟು ಭರದಿಂದ ಸಾಗಿದುವು. ಪದ್ಧತಿಯಂತೆ ಕುಂಭಕರ್ಣನ ಪಾತ್ರಕ್ಕೆ ಕರಡಿಭದ್ರನನ್ನು ನಿಯೋಜಿಸಿದರು. ಕರಡಿಭದ್ರನ ಕುಂಭಕರ್ಣನ ಪಾತ್ರದ ಅಭಿನಯ, ನಮ್ಮ ಸುತ್ತಲ ನೂರಾರು ಹಳ್ಳಿಗಳಿಗೆ ಪ್ರಸಿದ್ಧವಾದುದು. ಅವನಿಗೆ ಸಮನಾಗಿ ಕುಂಭಕರ್ಣನ ಪಾತ್ರವನ್ನು ಅಭಿನಯಿಸುತ್ತಿದ್ದವರು ಹೊಸಹಳ್ಳಿ ಯಕ್ಷಗಾನ ಮಂಡಲಿಯಲ್ಲಿ ಯಾರೂ ಇರಲೇ ಇಲ್ಲ. ಆದರೆ ಕಳೆದ ಸಲ ಹೊಸಹಳ್ಳಿ ಮಂಡಳಿಯ ಕುಂಭಕರ್ಣನ ಪಾತ್ರಧಾರಿ ಗುಡಗಿನ ಕೆಂಪಯ್ಯ, ತನ್ನ ಸ್ವಶಕ್ತಿಗಿಂತ ಹೆಚ್ಚಾಗಿ ಉಡುಪು ಕಿರೀಟ ವಾದ್ಯ ಠಾಳು ದರ್ಬಾರು ಇವುಗಳ ಸಹಾಯದಿಂದ ಜನರನ್ನು ರಂಜಿಸಿದ್ದನು. ಆದರೆ ಯಾವ ಬಾಹ್ಯ ಉಪಕರಣಗಳ ಸಹಾಯವೂ ಇಲ್ಲದೆ, ಏಕಪಾತ್ರಧಾರಿಯಂತೆ ಏಕಮಾತ್ರನಾಗಿ ಕುಂಭಕರ್ಣನ ಪಾತ್ರವನ್ನು ಕರಡಿಭದ್ರನಂತೆ ಅಭಿನಯಿಸಲು ಗುಡುಗಿನ ಕೆಂಪಣ್ಣನಿಗೆ ಎಂದಿಗೂ ಸಾಧ್ಯವಿಲ್ಲವೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಕರಡಿಭದ್ರ, ನಿಜವಾದ ಕಲೆಗಾರ. ಅವನು ನೂರಾರು ಬಾರಿ ಕುಂಭಕರ್ಣನ ಪಾತ್ರವನ್ನು ಅಭಿನಯಿಸಿದ್ದರೂ, ಪ್ರತಿಸಲವೂ ತನ್ನ ತಲೆಯಲ್ಲಿ ಒಂದೊಂದು ನಾವೀನ್ಯವನ್ನು ತಂದಿದ್ದ ಅವನ ಪಾತ್ರವನ್ನು ಇನ್ನೂ ಪದೆ ಪದೆ ನೋಡಬೇಕು ಎನ್ನಿಸುವಂತಿತ್ತು ಅವನ ಅಭಿನಯ. ಆದರೆ ಈಗ "ಬರಿಯ ಸ್ವಶಕ್ತಿಯೇ ಸಾಲದು ಉಪಕರಣಗಳ ಆಡಂಬರವೂ ಬೇಕು. ಆದರಲ್ಲಿಯೂ ರಂಗದ ವ್ಯವಸ್ಥೆಯಲ್ಲಿಯೂ ನಾವು ಹೊಸಹಳ್ಳಿ ಮಂಡಲಿಗೆ ಕಡಿಮೆಯಾಗಬಾರದು" ಎಂದು ಮಲ್ಲಿಗೆಹಳ್ಳಿ ಮಂಡಲಿಯವರೂ ರಂಗಮಂಟಪದ ವ್ಯವಸ್ಥೆ, ಉಡುಪು, ಪಾತ್ರಗಳ ಆಯುಧಗಳು ದರ್ಬಾರುವಾದ್ಯಗಳು ಪಟಾಸು ಕೋವಿಗಳ ಸದ್ದು ಎಲ್ಲವನ್ನೂ ಅತ್ಯುತ್ತಮವಾಗಿ ವ್ಯವಸ್ಥೆ ಮಾಡಿಕೊಂಡರು. ಅಲ್ಲದೆ ಡೇರ್‍ಸ (ಡೇರೆ) "ಡೈನಾಮೊ" ಇವುಗಳಿಂದ ಸಜ್ಜಿತವಾದ ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಸಹ ಏರ್ಪಡಿಸಿಕೊಂಡರು. ಜತೆಗೆ ಮಲ್ಲಿಗೆಹಳ್ಳಿಮಂಡಲಿಯ ರಾವಣನ ಪಾತ್ರಧಾರಿ ಗೂಳಿ ಬಸವ, ಆ ಮಂಡಲಿಯ ಸರ್ವ ವ್ಯವಸ್ಥೆಯನ್ನೂ ವಹಿಸಿಕೊಂಡಿದ್ದುದರಿಂದಲೂ ಇತರ ಎಲ್ಲ ವಿಧದಲ್ಲಿಯೂ ಅವನು ಊರಿಗೆ ಮುಖಂಡನಾಗಿದ್ದುದರಿಂದಲೂ ಊರಿನವರೆಲ್ಲರೂ ಕುಂಭಕರ್ಣವಧೆಯನ್ನು ಯಶಸ್ವಿಯಾಗಿ ಮಾಡಲು ತಮ್ಮ ಸರ್ವಸ್ವವನ್ನೂ ಅರ್ಪಿಸಲು ಸಿದ್ಧರಾಗಿದ್ದರು. ಅವರೆಲ್ಲ ಧಾರ್ಮಿಕ ಉತ್ಸಾಹದಿಂದ ತುಂಬಿದ್ದರು. ಆದುದರಿಂದ ಮಲ್ಲಿಗೆಹಳ್ಳಿಯ ಮಂಡಲಿ, ಹೊಸಹಳ್ಳಿಮಂಡಲಿ ತಾತ್ಕಾಲಿಕವಾಗಿ ಗಳಿಸಿದ್ದ ಜಯವನ್ನು ಅಳಿಸಿ, ತನ್ನ ವಿಕ್ರಮವನ್ನು ಸ್ಥಾಪಿಸುವ ದಿನವನ್ನು ಎಲ್ಲರೂ ಆತುರದಿಂದ ನಿರೀಕ್ಷಿಸುತ್ತಿದ್ದರು.

ಮಲ್ಲಿಗೆಹಳ್ಳಿಮಂಡಲಿ, ರಾವಣ ಗೂಳಿ ಬಸವಯ್ಯನ ನೇತೃತ್ವದಲ್ಲಿ, ಯಕ್ಷಗಾನ ಪ್ರದ

ರ್ಶನಕ್ಕೆ ಆರಿಸಿಕೊಂಡ ಕುಂಭಕರ್ಣ ವಧೆಯಲ್ಲಿ ಮೂರು . ˜ಗಳಿದ್ದುವು. ಮೊದಲನೆಯ ಭಾಗ ಅಂಗದ : ‹ಧಾನ; ಎರಡನೆಯ ಭಾಗ ಕುಂಭಕರ್ಣ ನಿದ್ರಾಭಂಗ ಮತ್ತು ರಾವಣ ಕುಂಭಕರ್ಣರ ಸಂವಾದ, ಮೂರನೆಯ ಭಾಗ ಕುಂಭಕರ್ಣ ವಧೆ. ಒಟ್ಟು ಪ್ರದರ್ಶನಕ್ಕೆ ಬೇಕಾದ ಎಲ್ಲ ವ್ಯವಸ್ಥೆಯನ್ನೂ ಮಂಡಲಿ ಸಾಮಾನ್ಯವಾಗಿ ಮಾಡಿದ್ದರೂ ಆಯಾ ಪಾತ್ರಧಾರ, ತನ್ನ ಪಾತ್ರಾಭಿನಯ ಕಾಲದಲ್ಲಿ ತನತನಗೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳಲು ಅವಕಾಶವುಳ್ಳವನಾಗಿದ್ದನು. ಈ ವ್ಯವಸ್ಥೆಗಳು ಮುಖ್ಯವಾಗಿ ಪಾತ್ರಧಾರನು ಧರಿಸುವ ಉಡುಪು, ಅವನ ದರ್ಬಾರು ನಡೆಯುವಾಗ ಏರ್ಪಡಿಸಿ ಊಳ್ಳುತ್ತಿದ್ದ ಕಳಾರಟ್ ವಾದ್ಯ, ದರ್ಬಾರ್ ಕಾಲದಲ್ಲಿ ಅಂತರಿಕ್ಷಕ್ಕೆ ಹಾರಿಸುವ ಪಟಾಸ್, ಹುಸಿಮದ್ದು ಇವುಗಳಿಗೆ ಸಂಬಂಧಿಸಿದುವಾಗಿರುತ್ತಿದ್ದವು. ಮಂಡಳಿಯ ಒಟ್ಟು ಅಭಿನಯದ ಪರಿಣಾಮ ಇತರ ಮಂಡಳಿಗಳ ಕಾರ್ಯಕ್ಕಿಂತ ಹೆಚ್ಚು ಉತ್ತಮವಾಗಿರುವುದು ಗುರಿಯಾದರೂ ಮಂಡಲಿಯಲ್ಲಿಯೇ ಪಾತ್ರದಾರರು ಒಬ್ಬರನ್ನೊಬ್ಬರು ಮೀರಿಸಲು ಪ್ರಯತ್ನಿಸಿ, ಒಂದೊಂದು ವೇಳೆ ಪರಸ್ಪರ ಅಸಮಾಧಾನಗಳುಕೂಡ ಉಂಟಾಗುತ್ತಿದ್ದವು. ಕುಂಭಕರ್ಣ ವಧೆ, ಪ್ರದರ್ಶನದಲ್ಲಿ "ಕಂಪನಿಯ" ನೇತಾರ ರಾವಣ ಗೂಳಿಬಸವಯ್ಯ, ಕುಂಭಕರ್ಣ ಪಾತ್ರಧಾರ ಕರಡಿಭದ್ರ ಇಬ್ಬರೂ ಒಟ್ಟಾಗಿ ಮಂಡಲಿಯ ಸಾರ್ವಭೌಮತ್ವವನ್ನು ಸ್ಥಾಪಿಸುವುದರ ಜತೆಗೆ ಇನ್ನು ಮುಂದೆ ಯಾರೂ ವ್ಯಕ್ತಿಗತವಾಗಿ ಸಹ ತಮ್ಮ ಮೇಲೆ ವಿಕ್ರಮವನ್ನು ಸ್ಥಾಪಿಸಬಾರದು ಎಂಬ ರೀತಿಯಲ್ಲಿ ತಮ್ಮ ತಮ್ಮ ಪಾತ್ರಕ್ಕೆ ವಿಶೇಷ ಕಳೆಕಟ್ಟುವ ಸಿದ್ಧತೆಗಳನ್ನೂ ಏರ್ಪಡಿಸಿಕೊಂಡಿದ್ದರು. ರಾವಣ ಗೂಳಿಬಸವಯ್ಯನಿಗೆ, ಮಲ್ಲಿಗೆಹಳ್ಳಿಯ "ಕಂಪನಿ" ಹೊಸಹಳ್ಳಿಯ ಕಂಪನಿಯನ್ನು ಸೋಲಿಸಬೇಕು, ವೈಯಕ್ತಿಕವಾಗಿ ತಾನು ತನ್ನ ಕಂಪನಿಯ ಕುಂಭಕರ್ಣ ಕರಡಿಭದ್ರನನ್ನು ಸೋಲಿಸಬೇಕು ಎಂಬುದು ಗುರಿಯಾಗಿತ್ತು. ಕರಡಿಭದ್ರನಿಗು ಸಹ ಹೊಸಹಳ್ಳಿಯ ಕಂಪನಿ ಸೋಲಬೇಕು. ಆದರೆ ವೈಯಕ್ತಿಕವಾಗಿ ತಾನು ರಾವಣ ಗೂಳಿ ಬಸವಯ್ಯನನ್ನು ಸೋಲಿಸಬೇಕು ಎಂಬುದು ಆಸೆಯಾಗಿದ್ದಿತು. ಹೀಗಾಗಿ ಕೆಲವು ರಾಜಕೀಯ ಪಕ್ಷಗಳಂತೆ ಅವರು ಸಹ "ಪಕ್ಷ ಗೆಲ್ಲಬೇಕು, ಪಕ್ಷದಲ್ಲಿಯೂ ಸಮಾನರನ್ನು ಸೋಲಿಸಿ ತಾವು ಉತ್ತಮರಾಗಬೇಕು" ಎಂದು ಹವಣಿಸುತ್ತಿದ್ದರು.

ಮಲ್ಲಿಗೆಹಳ್ಳಿ ಕಂಪನಿಯವರಲ್ಲಿಯ ಮುಖ್ಯಪಾತ್ರಧಾರರೇ ರಾವಣ ಗೂಳಿಬಸವ ಮತ್ತು ಕರಡಿಭದ್ರ ಕುಂಭಕರ್ಣ. ಅಂಗದನ ಪಾತ್ರವನ್ನು ವಹಿಸಿಕೊಂಡಿದ್ದ ಗುಂಡಾಚಾರಿಯ ಪಾತ್ರ ಅಷ್ಟು ಪ್ರಾಮುಖ್ಯವಾಗಿರಲಿಲ್ಲ. ಭಾಗವತ ರಂಗಯ್ಯ ತನ್ನ ಪಾತ್ರವನ್ನು ಚೆನ್ನಾಗಿ ತಯಾರುಮಾಡಿಕೊಂಡಿದ್ದನು. ರಾವಣನ ಪಾತ್ರಧಾರ ತನ್ನ ಸ್ವಂತ ವೆಚ್ಚದಲ್ಲಿ ದೂರದಿಂದ ಉಡುಪು ಕಿರೀಟ ಭುಜಕೀರ್ತಿಗಳನ್ನು ತರಿಸಿದ್ದನು. ಅವನ ದರ್ಬಾರ್ ಪ್ರಾರಂಭವಾದ ಕೂಡಲೇ ಬ್ಯಾಂಡ್ ಬಾರಿಸಲು ಜಿಲ್ಲಾ ಮುಖ್ಯಪಟ್ಟಣದಿಂದ ಕಳಾರಟ್ ವಾದ್ಯಗಾರರನ್ನು ಕರೆಸಿದ್ದನು. ಕುಂಭಕರ್ಣನಿಗೆ ತಿಳಿಯದಂತೆಯೇ, ತನಗೆ ಪರಾಕ್ ಹೇಳಲು ಸಮವಸ್ತ್ರಗಳನ್ನು ಧರಿಸಿದ್ದ ೨೦ ಮಿತ್ರರನ್ನು ಗೊತ್ತುಮಾಡಿಕೊಂಡಿದ್ದನು. ಪಂಜು ಅದರ ಮೇಲೆ ಬಣ್ಣಬಣ್ಣದ ರಾಳು ಇವುಗಳಿಗೆಲ್ಲ ಏರ್ಪಾಡುಮಾಡಿದ್ದನು. ಅವನು ಮಾಡಿಕೊಂಡಿದ್ದ ಏರ್ಪಾಡು ಅವನ ಆಪ್ತಮಿತ್ರರಿಗೆ ಗೊತ್ತಿದ್ದಿತೇ ಹೊರತು ಕುಂಭಕರ್ಣನಿಗೆ ಗೊತ್ತಿರಲಿಲ್ಲ. ಆದರೆ ರಾವಣ ಏರ್ಪಾಡುಗಳನ್ನು ಅತ್ಯಂತ ಶ್ರದ್ಧೆಯಿಂದ ಮಾಡಿರುವನೆಂಬುದರಲ್ಲಿ ಕುಂಭಕರ್ಣನಿಗೆ ಸ್ವಲ್ಪವೂ ಸಂಶಯವಿರಲಿಲ್ಲ.

ಆದರೆ ನಿಜವಾದ ಸಿದ್ಧತೆ ಕುಂಭಕರ್ಣ, ನಡೆಸಿದ್ದ. ಯಕ್ಷಗಾನದ ಹೆಸರು ಕುಂಭಕರ್ಣ ವಧೆಯೆಂದಿದ್ದರೂ ಕುಂಭಕರ್ಣನ ಪಾತ್ರವನ್ನು ಎಂದೆಂದಿಗೂ ಮರೆಯದಂತೆ ಅಮರವಾಗಿ ಆಚರಿಸಬೇಕೆಂಬುದೇ ಕುಂಭಕರ್ಣನ ಇಷ್ಟವಾಗಿತ್ತು. "ಭಾರತದಲ್ಲಿ ಕರ್ಣನ ಪಾತ್ರ ಅತ್ಯಂತ ಪ್ರಾಮುಖ್ಯ. ಭಾರತದಲ್ಲಿ ಯಾರನ್ನಾದರೂ ನೆನೆಯುವುದಾದರೆ ಕರ್ಣನನ್ನು ನೆನೆ ಎಂದಿದೆ. ಅದರಂತೆ ರಾಮಾಯಣದಲ್ಲಿ ಯಾರನ್ನಾದರೂ ನೆನೆಯುವದಿದ್ದರೆ ರಾಮಾಯಣದ ಕರ್ಣನನ್ನು ನೆನೆ" ಎನ್ನುವಂತೆ ಅಭಿನಯಿಸಬೇಕೆಂಬುದು ಕುಂಭಕರ್ಣ ಕರಡಿಭದ್ರನ ಇಷ್ಟವಾಗಿತ್ತು. ಕರಡಿಭದ್ರ ಆಳು ಅಜಾನು-ಬಾಹುವಾಗಿದ್ದನು. ಭರ್ಜರಿ ಮೀಸೆ, ಹೆದರಿಕೆಯುಂಟುಮಾಡುವ ದಪ್ಪವಾದ ತಲೆ, ಸ್ವಲ್ಪ ಮುಂದಕ್ಕೆ ಬಂದಿದ್ದರೂ ಜೋತು ಬೀಳದೆ ಬಿಗಿಯಾಗಿದ್ದ ಹೊಟ್ಟೆ. ತೇಗದ ತುಂಡು



ಗಳಂತಿದ್ದ ಕೈಕಾಲುಗಳು ; ಕೆಂಡವನ್ನು ಕಾರುತ್ತಿದ್ದ ಕಣ್ಣುಗಳು, ಸಿಂಹದಂತಹ ಗರ್ಜನೆ, ಆನೆ ಪಟಾಸಿನಂತಹ ಧ್ವನಿ, ಈ ಎಲ್ಲ ಸ್ವಭಾವ ಲಕ್ಷಣಗಳಿಂದ ಕರಡಿಭದ್ರ ಭೀಮಸೇನನಂತೆ ಕಾಣುತ್ತಿದ್ದನು. ಅಂದಿನ ಆಟಕ್ಕೆ ಅವನು ಮಾಡಿಕೊಂಡಿದ್ದ ಸಿದ್ಧತೆ, ರಾವಣನ ಸಿದ್ಧತೆಗಿಂತ ಅಧಿಕವಾಗಿತ್ತು.

ಕರಡಿಭದ್ರ ತನ್ನ ಪಾತ್ರವನ್ನು ಮೂರು ಭಾಗವಾಗಿ ವಿಭಾಗಿಸಿಕೊಂಡಿದ್ದನು. ಮೊದಲನೆಯದು ನಿದ್ರಿಸುತ್ತಿರುವ ಕುಂಭಕರ್ಣನನ್ನು ರಾಕ್ಷಸರು ಬಂದು ಎಬ್ಬಿಸುವುದು. ಕರಡಿಭದ್ರ ಆ ಭಾಗಕ್ಕೆ ಬಹಳ ಆಟಾಟೋಪವನ್ನು ಅಳವಡಿಸಿದ್ದನು. ಕುಂಭಕರ್ಣನನ್ನು ನಿದ್ರೆಯಿಂದ ಏಳಿಸುವುದು ರಂಗದ ಮೇಲೆಯೇ ನಡೆಯಬೇಕಾಗಿದ್ದಿತು. ರಾಮಾಯಣದಲ್ಲಿ ಹೇಳಿರುವಂತೆ ರಾಕ್ಷಸರು ಅವನ ಹೊಟ್ಟೆಯ ಮೇಲೆ ಏರಿಕೊಂಡು ಕತ್ತಿ, ಈಟಿ, ಭರ್ಚಿ ಗದೆಗಳಿಂದ ಅವನನ್ನು ಪ್ರಹರಿಸಬೇಕಾಗಿದ್ದಿತು. ತನ್ನ ಎದೆಯನ್ನು ಕತ್ತಿಯಿಂದ ಹೊಡೆದರೂ ತನಗೆ ಏನೂ ತೊಂದರೆಯಾಗದಂತೆ ಕರಡಿಭದ್ರ ಎದೆಗೆ ವಿಶಾಲವಾದ ಕಬ್ಬಿಣದ ಹಲಿಗೆಯನ್ನು ಬಿಗಿದುಕೊಂಡಿದ್ದನು. ಹತ್ತಾರು ನೀರು ಆಹಾರ ಇವುಗಳನ್ನೆಲ್ಲ ತನ್ನ ಬಾಯಿಗೆ ಸುರಿದರೂ ಅವು ಕೆಳಕ್ಕೆ ಬೀಳದಂತೆ, ತನ್ನ ಹೊಟ್ಟೆಗೂ ಹೋಗದಂತೆ, ಟಾಕನ್ ಒಂದು "ಡ್ರಮ್"ನ್ನು ದೋಣಿಯಂತೆ ಕ್ಯುಯಿಸಿ ಅದನ್ನು ತನ್ನ ಹೊಟ್ಟೆಯ ಕೆಳಕ್ಕೆ ಕಟ್ಟಿಸಿದ್ದನು. ಅವನ ಉಡುಪು ಆಭರಣಗಳು ಗದೆ ಎಲ್ಲವೂ ಹಿಂದೆ ಆತ ಅಭಿನಯಿಸುವಾಗ ಇದ್ದುದಕ್ಕಿಂತ ಹೆಚ್ಚು ಪ್ರಖರವಾಗಿದ್ದವು. ಕುಂಭಕರ್ಣ, ಥಳಥಳಿಸಿ ಹೊಳೆಯುವ ಒಂದು ಹಾರವನ್ನು ಕತ್ತಿಗೆ ಹಾಕಿಕೊಂಡಿದ್ದನು.

ಯಕ್ಷಗಾನ ನಡೆಯುವುದಕ್ಕೆ ಮೊದಲ ದಿನವೇ ಸುತ್ತಲ ಹಳ್ಳಿಯ ಜನರೆಲ್ಲ ಮಲ್ಲಿಗೆ-ಹಳ್ಳಿಯಲ್ಲಿ ಸೇರಿದರು. ಅವರಲ್ಲಿ ಕೆಲವರು ಕಲಾವಿದರು ಇದ್ದರೂ ಅವರು ಪಾತ್ರಗಳಿಗೆ ವೇಷವನ್ನೂ ಬಣ್ಣವನ್ನೂ ಬಳಿಯುವುದರಲ್ಲಿ ಸಹಾಯಕರಾಗುವವರಿದ್ದರು. ಕುಂಭ-ಕರ್ಣನ ಪಾತ್ರದ ಅಭಿನಯದ ಎರಡನೆಯ ಭಾಗ ಆತನಿಗೂ ರಾವಣನಿಗೂ ನಡೆಯುವ ಸಂವಾದ, ಮೂರನೆಯದು ಕುಂಭಕರ್ಣನ ವಧೆ. ತನ್ನ ಪಾತ್ರದ ಮೂರು ಅಂಶಗಳನ್ನೂ ಕುಂಭಕರ್ಣ ಚೆನ್ನಾಗಿ ಸಿದ್ಧಮಾಡಿಕೊಂಡಿದ್ದನು.

ಆಟದ ದಿನ, ರಾತ್ರಿ ಹತ್ತು ಗಂಟೆಗೆ ಆಟ ಪ್ರಾರಂಭವಾಯಿತು. ರಾವಣನ ದರ್ಬಾರು ಮೊದಲ ದೃಶ್ಯ. ರಾವಣನು ನಿಜವಾದ ರಾವಣನಂತೆಯೇ ವೇಷ ಹಾಕಿದ್ದನು. ಅವನು ದರ್ಬಾರಿಗೆ ಬಂದಕೂಡಲೇ ಅಸ್ಫೋಟಿಸಿದ ಪಟಾಸುಶಬ್ದವನ್ನು ಕೇಳಿ ಕೊಟ್ಟಿಗೆಯಲ್ಲಿ ಗೂಟಗಳಿಗೆ ಕಟ್ಟಹಾಕಿದ್ದ ದನಗಳು ಕಿತ್ತುಕೊಂಡವು. ಕಳಾರಟ್ ವಾದ್ಯ ಸೈನ್ಯದ ಕಹಳೆಯಂತೆ ಶಬ್ದಮಾಡಿತು. ಪರಾಕ್ ಹೇಳಿದ ಮಂದಿಮಾಗಧರ ಧ್ವನಿ ಎರಡು ಮೈಲಿ ಕೇಳಿಸುತ್ತಿತ್ತು. ರಾವಣ ಒಂದು ತಲೆಗೆ ಎರಡು ಪಂಜಿನ ಲೆಕ್ಕದಲ್ಲಿ ಇಪ್ಪತ್ತು ಪಂಜುಗಳನ್ನು ಹಿಡಿಸಿಕೊಂಡು, ಪಂಜಿಗೆ ಬಣ್ಣ ಬಣ್ಣದ ರಾಳನ್ನು ಎರಚಿಸಿಕೊಳ್ಳುತ್ತಾ, ಪ್ರೇಕ್ಷಕರ ನಡುವಣ ಒಂದು ಫರ್ಲಾಂಗ್ ದೂರವನ್ನೂ ನಡೆದು ಬಂದೇ ರಂಗಸ್ಥಳವನ್ನು ಏರಿ, ತನಗಾ-ಗಿಯೇ ರಂಭಾಪುರಿಯಿಂದ ತರಿಸಿಕೊಂಡಿದ್ದ ಕೆಂಕಾಪಿನ ಆಸನದಲ್ಲಿ ಪವಡಿಸಿದನು. ಈ ಸಲ ರಾವಣ ತನ್ನ ಹತ್ತು ತಲೆಗಳ ವ್ಯವಸ್ಥೆಯನ್ನು ಒಂದು ಹೊಸ ರೀತಿಯಲ್ಲಿ ಮಾಡಿಕೊಂಡಿದ್ದನು. ಪ್ರತಿಯೊಂದು ತಲೆಯೂ ಬೇರೆ ಬೇರೆಯಾಗಿದ್ದಿತು. ಅವನ ಸ್ವಾಭಾವಿಕ ತಲೆ ಮಧ್ಯದಲ್ಲಿದ್ದು ಒಂದು ಪಕ್ಕಕ್ಕೆ ನಾಲ್ಕು ಕೃತಕ ತಲೆ, ಮತ್ತೊಂದು ಪಕ್ಕಕ್ಕೆ ಐದು ಕೃತಕ ತಲೆ ಬಂದಿದ್ದರೂ ಎರಡೂ ಕಡೆಯ ತಲೆಗಳೂ ಸ್ವಾಭಾವಿಕ ತಲೆಯಿಂದ ಒಂದೇ ಸಮನಾದ ದೂರದಲ್ಲಿದ್ದವು. ಅಂಗದ ರಾವಣನ ಆಸ್ಥಾನಕ್ಕೆ ಬಂದನು. ನೀನು ಯಾವ ರಾವಣ ? ಹಿಂದೆ ಕಾರ್ತ್ಯವೀರ್ಯನೊಂದಿಗೆ ಕಾದಾಡಿದ ಧೀರ ರಾವಣನೋ ? ವಾಲಿಯೊಂದಿಗೆ ಹೋರಾಡಿದ ಪರಾಕ್ರಮಿ ರಾವಣನೋ ? ಕಳ್ಳನಂತೆ ಕಾಡಿನಲ್ಲಿದ್ದ ಅಬಲೆಯನ್ನು ಕದ್ದ ರಾವಣಹೇಡಿಯೊ ? ಎಂದು ಕೇಳಿದನು. ರಾವಣ ಕಟಕಟನೆ ಹಲ್ಲುಕಡಿದನು. ಅಂಗದ ರೋಷದಿಂದ ಒಂದು ಸಲ ನೆಲದ ಮೇಲೆ ಮುಷ್ಟಿಯಿಂದ ಗುದ್ದಿದನು. ಕೂಡಲೆ ರಾವಣನ ತಲೆಗಳೆಲ್ಲ ಕೆಳಕ್ಕೆ ಬಿದ್ದವು. ಅಂಗದ ಆ ತಲೆಗಳನ್ನು ಆರಿಸಿಕೊಳ್ಳತೊಡಗಿದನು, ರಾವಣನೂ ಆರಿಸಿಕೊಳ್ಳತೊಡಗಿದನು. ಈ ಅವಾಂತರದಲ್ಲಿ ನಾಲ್ಕು ತಲೆ ಅಂಗದನ ಕೈಗೆ ಸಿಕ್ಕಿತು, ಇನ್ನು ಐದು ರಾವಣನ ಕೈಗೆ ಸಿಕ್ಕಿತು.

ಅಲ್ಲಿಗೆ ರಾವಣನ ಮತ್ತು ಅಂಗದನ ಸಂಬಂಧ ಮುಕ್ತಾಯವಾಗಿ ಕುಂಭಕರ್ಣನನ್ನು ಎಬ್ಬಿಸಲು ರಾಕ್ಷಸರು ಬರಬೇಕಾಗಿದ್ದಿತು. ಆದರೆ ಅಂಗದ ಹೋದ ಮೇಲೆ ರಾವಣ ಕುಂಭಕರ್ಣನಿಗಾಗಿ ರಾಕ್ಷಸರನ್ನು ಕಳುಸಲೇ ಇಲ್ಲ. ಇನ್ನೂ ಬಹಳ ಹೊತ್ತು ತನ್ನ ದರ್ಬಾರನ್ನು ನಡೆಸಿದನು. ಆ ದರ್ಬಾರಿನಲ್ಲಿ ತನ್ನ ಅಲ್ಲಿಯ ವರೆಗಿನ ಇತಿಹಾಸ ಸೀತಾಮಾತೆಯನ್ನು ತಂದ ಪರಿ, ಜಟಾಯುವಿನೊಂದಿಗೆ ಕಾಳಗ ಇವುಗಳೆಲ್ಲದರ ವರ್ಣನೆಯನ್ನೂ ಮಾಡುತ್ತಾ ಕುಳಿತನು. ಅವೆಲ್ಲ ಮಾಮೂಲಿಗೆ ವಿರೋಧವೆಂಬುದು ಪ್ರೇಕ್ಷಕರಿಗೆಲ್ಲ ಗೊತ್ತಿದ್ದಿತು. ಆದರೆ ಅವರು ಏನೂ ಮಾಡಲಾರದವರಾಗಿದ್ದರು.

ಅರ್ಧರಾತ್ರಿ ಮೀರಿಹೋಗಿ, ಒಂದು ಗಂಟೆಯಾದರೂ ರಾವಣನ ದರಬಾರು ಮುಗಿಯಲೆ ಇಲ್ಲ, ಪರದೆಯ ಹಿಂದೆ ತನ್ನ ಸರದಿಗಾಗಿ ಕಾಯುತ್ತಿದ್ದ ಕುಂಭಕರ್ಣನಿಗೆ ತೂಗಡಿಕೆ ಬರಹತ್ತಿತು. ವಸ್ತ್ರಗಳ ಭಾರ, ಕಿರೀಟ ಭುಜಕೀರ್ತಿಗಳ ಬಿಗಿತ, ಬಣ್ಣ ಗಟ್ಟಿಯಾದುದರಿಂದ ಮುಖದಲ್ಲಿ ಉಂಟಾದ ತಿಮಿರವಿಕಾರ, ಎದೆಗೆ ಕಟ್ಟಿಕೊಂಡಿದ್ದ ಕಬ್ಬಿಣದ ಹಲಗೆಯ ಹೊರೆ ಇವೆಲ್ಲವುಗಳಿಂದ ಅವನು ಬಳಲಿದ್ದನು. ರಾವಣ ತನ್ನ ನಿಯಮಿತ ಕಾಲಕ್ಕಿಂತಲೂ ಹೆಚ್ಚು ಕಾಲವನ್ನು ತೆಗೆದುಕೊಂಡು-ದರಿಂದ ಕುಂಭಕರ್ಣನಿಗೆ ತುಂಬ ರೇಗಿತ್ತು. ಅವನ ಉತ್ಸಾಹ ಸಹ ತಗ್ಗಿತ್ತು. ರಾವಣ, ಇನ್ನೂ ತನ್ನ ದರ್ಬಾರನ್ನು ಮುಗಿಸಿ ಕುಂಭಕರ್ಣನಿಗೆ ಹೇಳಿಕಳುಹಿಸುವ ಸೂಚನೆ ತೋರಲೇ ಇಲ್ಲ. ತನ್ನ ಗದೆಯ ಮೇಲೆಯೇ ತಲೆ ಒರಗಿಸಿಕೊಂಡಿದ್ದ ಕುಂಭಕರ್ಣನಿಗೆ ನಿದ್ರೆ ಬರುವಂತೆಯೇ ಆಯಿತು. ವೇಷಹಾಕಿದ ಮೇಲೆ, ವೇಷ ಮುಗಿಯುವ ವರೆಗೆ ಆಟದ ಮಧ್ಯೆ, ಆಟಗಾರರು ಯಾರೂ ಮಲಗಬಾರದೆಂಬುದು ಯಕ್ಷಗಾನ ಆಟದ ನಿಯಮ. ಈ ನಿಯಮವನ್ನು ಮೀರಿದವನಿಗೆ ಆಟಗಾರರ ಗುಂಪಿನಲ್ಲಿ ಅವಮಾನ ಅಧಿಕ. ತನಗೆ ನಿದ್ರೆ ಬರುವಂತಾದುದರಿಂದ ಕುಂಭಕರ್ಣ, ಕುಳಿತ ಸ್ಥಳವನ್ನು ಬಿಟ್ಟು ತಂಗಾಳಿಗೆ ಮೈಯೊ-ಡ್ಡೋಣ ಎಂದು ರಂಗಸ್ಥಳದ ಹಿಂದಲ ಬಯಲಿಗೆ ಹೋದನು. ಆಟವನ್ನು ನೋಡಲು ಬಂದಿದ್ದ ಪ್ರೇಕ್ಷಕರ ಎತ್ತಿನ ಬಂಡಿಗಳು ಕೆಲವು ಅಲ್ಲಿ ನಿಂತಿದ್ದುವು. ಕುಂಭಕರ್ಣ, ರಾವಣನ ದರ್ಬಾರು ಮುಗಿದ ಮೇಲೆ ಒಳಕ್ಕೆ ಹೋಗೋಣ ಎಂದುಕೊಂಡು, ಗದೆಯನ್ನೂ ಕೈಯಲ್ಲಿ ಹಿಡಿದುಕೊಂಡೇ ಗಾಡಿಯೊಳಗೆ ಹೋಗಿ ಕುಳಿತುಕೊಂಡನು.

* * * *

ತನಗೆ ಎಷ್ಟುಕಾಲ ನಿದ್ರೆಬಂದಿತೆಂಬುದು ಕುಂಭಕರ್ಣನಿಗೆ ಅರಿವಾಗಲಿಲ್ಲ. ಅವನಿಗೆ ಅರ್ಧನಿದ್ರೆ ಅರ್ಧ ಎಚ್ಚರವಿರುವಂತೆ ತಾನಾವುದೋ ವಾಹನದಲ್ಲಿ ಎಲ್ಲಿಗೋ ಹೋಗುತ್ತಿರುವೆನೆಂದು ಅವನಿಗೆ ಭಾಸವಾಯಿತು. ಅವನು ತಾನು ಮಲಗಿದ್ದಂತೆಯೇ ನಿಧಾನವಾಗಿ ಕಣ್ಣು ಬಿಟ್ಟು ನೋಡಿದನು. ಆಗಲೇ ಬೆಳಗಿನಜಾವವಾಗಿತ್ತು. ಗಾಡಿಯವನು ಮೂಕಿಯ ಮೇಲೆ ಬೆನ್ನನ್ನು ಹಿಂದಲ ತಡಿಕೆಗೆ ಒರಗಿಸಿ ನಿದ್ರೆ ಹೊಡೆಯುತ್ತಿದ್ದನು. ಇದ್ದಕಿದ್ದಂತೆ ಕುಂಭಕರ್ಣನಿಗೆ, "ರಾವಣನ ದರಬಾರು ಮುಗಿಯಿತು. ತನ್ನನ್ನು ಎಬ್ಬಿಸಲು ರಕ್ಕಸರು ಬಂದಿದ್ದಾರೆ" ಎಂದು ಭಾಸವಾಯಿತು. ಅವನು, ನಿದ್ರೆಯಲ್ಲಿ ತಾನು ಅಭಿನಯಿಸಬೇಕಾಗಿದ್ದ ಪಾತ್ರವನ್ನು ಜ್ಞಾಪಿಸಿಕೊಂಡು ಒಂದು ಸಲ ಘರ್ಜಿಸಿದನು.

ಗಾಡಿಹೊಡೆಯುವವನು, ಸುಖವಾಗಿ ಬೆಳಗಿನ ಜಾವದ ತಂಗಳುನಿದ್ರೆಯನ್ನು ಅನುಭವಿಸುತ್ತಿದ್ದನು. ಅವನು ಮಲ್ಲಿಗೆಹಳ್ಳಿಯಿಂದ ಐದು ಮೈಲು ದೂರದ ಒಂದು ಗ್ರಾಮದಿಂದ

ಹಾಸನಕ್ಕೆ ಅಂಗಡಿಯವರ ಸಾಮಾನು ತರಲು ಬಾಡಿಗೆ ಗಾಡಿ ಹೊಡೆದುಕೊಂಡು ಹೊರಟಿದ್ದನು. ಮಲ್ಲಿಗೆಹಳ್ಳಿಗೆ ಬಂದು ಗಾಡಿಯನ್ನು ಯಕ್ಷಗಾನದ ಬಯಲಿನಲ್ಲಿ ಬಿಟ್ಟು ಕೆಲವು ಹೊತ್ತು ಆಟವನ್ನು ನೋಡುತ್ತಾ ನಿಂತಿದ್ದನು. ರಾವಣನ ದರ್ಬಾರು ಎಷ್ಟು ಹೊತ್ತಾದರೂ ಮುಗಿಯದುದರಿಂದ ಅವನು ತನ್ನ ಗಾಡಿಯ ಬಳಿಬಂದು ಗಾಡಿ ಹೂಡಿ ತಾನು ಮೂಕಿಯ ಮೇಲೆ ಕುಳಿತನು. ಅದು ಅಮಾವಾಸ್ಯೆಯಾದ ಮರುದಿನವಾಗಿದ್ದುದರಿಂದ ಜಗತ್ತು "ಭರಣಿಯನ್ನು ಮುಚ್ಚಿದಂತೆ" ಪೂರ್ಣ ಅಂಧಕಾರದಲ್ಲಿ ಅದ್ದಿದ್ದಿತು. ಗಾಡಿಯವನು ನಿದ್ದೆಗಣ್ಣಿನಲ್ಲಿ ಗಾಡಿ ಹೂಡಿದನು. ಗಾಡಿಯೊಳಗೆ ಕುಂಭಕರ್ಣ ಮಲಗಿದ್ದುದೂ ಅವನಿಗೆ ಕಾಣಲಿಲ್ಲ. ಗೊರಕೆ ಹೊಡೆಯುತ್ತಿದ್ದ ಕುಂಭಕರ್ಣನಿಗೂ ಗಾಡಿ ಹೂಡಿದುದು ಗೊತ್ತಾಗಲಿಲ್ಲ. ಸ್ವಭಾವದಿಂದ ಕಷ್ಟಜೀವಿಯಾದ ಗಾಡಿಹೊಡೆಯುವವನಿಗೆ, ಆ ವೇಳೆಗಾಗಲೇ ಅರ್ಧ ನಿದೆ ಕೆಟ್ಟದ್ದುದರಿಂದ ಗಾಡಿಯ ಮೇಲೆ ಕುಳಿತ ಕೂಡಲೇ, ಕಣ್ಣು ಮುಚ್ಚಿತು. ತನ್ನ ಕಣ್ಣು ಯಾವಾಗ ಮುಚ್ಚಿತು ಎಂಬುದರ ಅರಿವೇ ಅವನಿಗೆ ಉಂಟಾಗಲಿಲ್ಲ. ಚಿರಪರಿಚಿತವಾಗಿದ್ದ ರಸ್ತೆಯಲ್ಲಿ ಎತ್ತುಗಳು ನಿಧಾನವಾಗಿ ತಮ್ಮ ಪಾಡಿಗೆ ತಾವು ಹಾಸನದ ದಾರಿ ಹಿಡಿದಿದ್ದವು.

ಯಾವಾಗ ಕುಂಭಕರ್ಣ, ತಾನು ನಿಜವಾಗಿ ತನ್ನ ಪಾತ್ರಾಭಿನಯದ ನಡುವೆ ಇದ್ದೇನೆ ಎಂದು ಭಾವಿಸಿ ಗರ್ಜಿಸಿದನೋ, ಆಗ ಗಾಡಿಯವನು ಬೆಚ್ಚಿಬಿದ್ದು ಕಣ್ಣುಬಿಟ್ಟು ತನ್ನ ಗಾಡಿಯೊಳಗೆ ನೋಡಿದನು. ಅವನ ಎದೆ ಝುಗ್ಗೆಂದಿತು. ಮಸಕು ಬೆಳಕಿನಲ್ಲಿ ಕುಂಭಕರ್ಣನ ಆಕಾರ, ಮುಖದ ಬಣ್ಣ ರಂಜಕದ ಕಾಂತಿಯ ಕಿರೀಟ, ಭುಜಕೀರ್ತಿ, ಕೈಯಲ್ಲಿ ಗದೆ ಇವನ್ನೆಲ್ಲ ನೋಡಿ ಅವನು ಒಂದೇ ಏಟಿಗೆ ಗಾಡಿಯಿಂದ ನೆಲಕ್ಕೆ ಹಾರಿ "ದೆಯ್ಯ ಕಣ್ಣಪ್ಪ ದೆಯ್ಯ, ದಮ್ಮಯ್ಯ ಬಿಡಪ್ಪ" ಎಂದು ಹೇಳಿಕೊಂಡು ಅಂತರಿಕ್ಷವನ್ನು ಭೇದಿಸುವ ಧ್ವನಿಯಿಂದ 'ಹೋ' ಎಂದು ಕಿರಚುತ್ತಾ ಹಾಸನದ ಕಡೆಗೆ ರಸ್ತೆಯಲ್ಲಿ ಓಡತೊಡಗಿದನು. ಕುಂಭಕರ್ಣನಿಗೆ ಆಗ ಪೂರ್ಣವಾಗಿ ಎಚ್ಚರವಾಗಿ ತಾನು ಎಲ್ಲಿದ್ದೇನೆಂಬುದರ ಅರಿವಾಯಿತು. ಅವನು ತಾನೂ ಗಾಡಿಯಿಂದ ಕೈಯಲ್ಲಿದ್ದ ಗದೆ ಸಹಿತ ಕೆಳಕ್ಕೆ ಹಾರಿ "ನಿನ್ನಮನೆ ಕಾಯ್ತಾಗ ನಾನು ದೆಯ್ಯ ಅಲ್ಲ ನಿಂತುಕೊಳ್ಳೊ" ಎಂದು ಗಾಡಿಯವನನ್ನು ಹಿಂಬಾಲಿಸಿದನು. ಗಾಡಿಯವನು ಒಂದೇ ಸಲ ಹಿಂದಕ್ಕೆ ನೋಡಿದನು. ಮಬ್ಬುಬೆಳಕಿನಲ್ಲಿ ಗದೆ ಸಹಿತವಾಗಿ ತನ್ನನ್ನು ಅಟ್ಟಿಸಿಕೊಂಡು ಬರುತ್ತಿದ್ದ ಆ ಆಕೃತಿಯನ್ನು ನೋಡಿ ಇವನೇ ಯಮ ಎಂದುಕೊಂಡು ಅವನು "ನಾಗಾಲೋಟ"ದಲ್ಲಿ ಓಡಿದನು. ಕುಂಭಕರ್ಣನ ರಂಜಕದ ಕಾಂತಿಯ ಉಡುಪನ್ನೂ ಕಿಂಕಾಪಿನ ಬಟ್ಟೆಗಳನ್ನೂ ಕೈಯಲ್ಲಿದ್ದ ಗದೆಯನ್ನೂ ನೋಡಿ, ಸಾಧುಗಳಾಗಿದ್ದ ಆ ಮುದಿ ಎತ್ತುಗಳು ಸಹ ಗಾಡಿಯನ್ನು ಅಡ್ಡ ದಾರಿಗೆ ತಿರುಗಿಸಿ ಎಳೆದುಕೊಂಡು ಒಂದು ಫರ್ಲಾಂಗು ಹೋಗಿ ಸೋತು ನಿಂತವು.

ಇನ್ನೂ ಚೆನ್ನಾಗಿ ಬೆಳಗಾಗಿರಲಿಲ್ಲ. ಗಾಡಿಯವನು "ಹೋ ದೆಯ್ಯ ದೆಯ್ಯ ಯಮ" ಎಂದು ಕಿರಚುತ್ತಾ ಹಾಸನ ಊರುಬಾಗಿಲಿಗೆ ಬರುವ ವೇಳೆಗೆ ಊರುಬಾಗಿಲಿನ ಜೈಲು ಕಾವಲುಗಾರರು "ಇದೇನು ಸದ್ದು" ಎಂದು ನೋಡಲು ಹೊರಗೆ ಬಂದರು. ಜೈಲು ಕಾವಲುಗಾರರೇ ಆದರೂ ಅವರಿಗೂ ಸಹ ಆ ಮಬ್ಬುಗತ್ತಲೆಯಲ್ಲಿ ಕುಂಭಕರ್ಣನನ್ನು ನೋಡಿ ಭಯವಾಯಿತು. ಕುಂಭಕರ್ಣ ಬರುತ್ತಿರುವುದನ್ನು ನೋಡಿ ನಾಯಿಗಳೆಲ್ಲ ಒಂದೇ ಉಸುರಿಗೆ ಗಟ್ಟಿಯಾಗಿ ಬಗುಳತೊಡಗಿದವು. ಜೈಲಿನ ಕಾವಲುಗಾರರಿಗೆ ಬರುತ್ತಿರುವವನು ಒಬ್ಬ ಮನುಷ್ಯನೇ ಎಂದು ಧೈರ್ಯವುಂಟಾದುದರಿಂದ ಅವರೆಲ್ಲ ಲಾಠಿಸಮೇತರಾಗಿ ಕುಂಭಕರ್ಣನನ್ನು ಎದುರಿಸಲು ರಸ್ತೆಯಲ್ಲಿ ನಿಂತರು. ಗಾಡಿಯವನೂ ಅವರ ಹಿಂದೆ ಸೇರಿಕೊಂಡನು.

ಆ ವೇಳೆಗೆ ಚೆನ್ನಾಗಿ ಬೆಳಕಾಯಿತು. ವಿದ್ಯುತ್‌ದೀಪ ಅಥವಾ "ಗ್ಯಾಸ್‌ಲೈಟ" ಬೆಳಕಿನಲ್ಲಿ ಆಕರ್ಷಣೀಯವಾಗಿ ಕಾಣುತ್ತಿದ್ದ ಕುಂಭಕರ್ಣನ ಬಣ್ಣ, ಉಡುಪು ಬೆಳಕಿನಲ್ಲಿ ವಿಕಾರವಾಗಿ ಕಂಡಿತು. ಆದರೆ ನಾಯಿಗಳು ಮಾತ್ರ ಅವನನ್ನು ಕಂಡು ಬಗುಳುವುದನ್ನು ಬಿಡಲೇಇಲ್ಲ. ಪಾಪ ಕುಂಭಕರ್ಣನಿಗೆ ಬಣ್ಣದಿಂದ ಮುಖವೆಲ್ಲ ಬಿಗಿಬಂದುಹೋಗಿತ್ತು. ಅವನು ಹೋದಕಡೆಯಲ್ಲೆಲ್ಲ ನಾಯಿಗಳು ಬಗಳುತ್ತಿದ್ದುದರಿಂದ ಜೈಲಿನಕಾವಲುಗಾರರು ಅವನನ್ನು ನೆಟ್ಟಗೆ ಮಲ್ಲಿಗೆಹಳ್ಳಿಗೆ ಹಿಂದಿರುಗುವಂತೆ ಹೇಳಿದರು. ಕುಂಭಕರ್ಣ ಮತ್ತೇನೂ ಮಾಡಲು ತೋರದೆ ಹೆಗಲಿನ ಮೇಲೆ ಗದೆಯನ್ನು ಇಟ್ಟುಕೊಂಡು ಊರ ಕಡೆಗೆ ನಡೆದುಕೊಂಡು ಹೊರಟನು.

ಅಭಿನಯಕ್ಕಾಗಿ ಧರಿಸಿಕೊಂಡಿದ್ದ ಉಡುಪಿನೊಂದಿಗೆ ನಡೆಯುವುದು ಅವನಿಗೆ ಕಷ್ಟವಾಗಿತ್ತು. ಗದೆ ಕಿರೀಟ ಭುಜಕೀರ್ತಿ ಇವುಗಳ ಭಾರದಿಂದ ಮೈ ಕೈಯೆಲ್ಲಾ ಬಾತುಕೊಂಡು ಬೆನ್ನು ನೋಯಲು ಪ್ರಾರಂಭಿಸಿತು. ಉಡುಪನ್ನು ತೆಗೆದು ದೂರಕ್ಕೆ ಎಸೆದುಬಿಡಬೇಕೆಂದು ಅವನಿಗೆ ಅನಿಸಿತ್ತು. ಆದರೆ ಆ ಉಡುಪನ್ನು ಎಸೆದರೆ ಅವನಿಗೆ ಊರು ಸೇರಲು ಬೇರೆ ಉಡುಪು ಇರಲಿಲ್ಲ. ಜತೆಗೆ ಅದು ಬಾಡಿಗೆಯ ಉಡುಪು. ಅದನ್ನು ಎಸೆದಿದ್ದರೆ ಅವನು ಅದರ ಪೂರ್ತಿ ಹಣವನ್ನೂ ಕೊಡಬೇಕಾಗುತ್ತಿತ್ತು. ಹಣದ ವಿಷಯ ಜ್ಞಾಪಕಬಂದಕೂಡಲೇ ತಾನು ಏರ್ಪಡಿಸಿಕೊಂಡಿದ್ದ ದರ್ಬಾರು ವಾದ್ಯ ರಾಕ್ಷಸರ ಸಮವಸ್ತ್ರಗಳು ಇವುಗಳಿಗೆಲ್ಲ ಕೊಡಬೇಕಾದ ದುಡ್ಡು ಜ್ಞಾಪಕಕ್ಕೆ ಬಂದು ಕುಂಭಕರ್ಣನಿಗೆ ತುಂಬ ಬೇಸರವಾಯಿತು.

ದಾರಿಯಲ್ಲಿ ನಡೆದುಬರುತ್ತಿರುವಾಗ ಪ್ರತಿಯೊಂದು ಹಳ್ಳಿಯ ಬಾಗಿಲಿನಲ್ಲಿಯೂ ಕುಂಭಕರ್ಣನನ್ನು ನೋಡಿ ನಾಯಿಗಳು ಬಗಳುತ್ತಿದ್ದವು. ಮಲ್ಲಿಗೆಹಳ್ಳಿಯ ಹತ್ತಿರಕ್ಕೆ ಬಂದಾಗ ಕುಂಭಕರ್ಣನ ಪರಿಚಿತನಾದ ಒಬ್ಬನನ್ನು "ರಾತ್ರಿ ಆಟ ಹೇಗೆ ಮುಕ್ತಾಯವಾಯಿತು?" ಎಂದು ಕೇಳಿದನು. ಆತ, "ರಾವಣನ ವಧೆಯಾಯಿತು" ಎಂದನು. ಇನ್ನು ನಾಲ್ಕು ಹೆಜ್ಜೆ ಹೋಗುವುದರೊಳಗೆ ಭಾಗವತ ಸಿಕ್ಕಿದ. ಆತ "ರಾವಣನ ದರ್ಬಾರು ಮುಗಿದ ಕೂಡಲೇ ಜನರಲ್ಲಿ ಗುಜುಗುಜು ಪ್ರಾರಂಭವಾಯಿತು. ಯಕ್ಷಗಾನದ ಆಟವನ್ನು ಅಷ್ಟು ಬೇಗ ಮುಗಿಸಿದರೆ ಜನ ಸುಮ್ಮನಿರುತ್ತಾರೆಯೆ ಆದುದರಿಂದ ಆಟವನ್ನು ಮುಂದುವರಿಸಿ ರಾವಣವಧೆಯಲ್ಲಿ ಮುಗಿಸಿದೆವು" ಎಂದನು. ಕುಂಭಕರ್ಣ ತನ್ನ ಮನೆಬಾಗಿಲಿಗೆ ಬಂದನು. ಶಿಂಗಳೀಕನ ಪಾತ್ರಧಾರಿ ಕರಿಯ ಅವನ ಮನೆಯ ಬಾಗಿಲಿನಲ್ಲಿ ನಿಂತಿದ್ದನು. ಕುಂಭಕರ್ಣ ಬಂದುದನ್ನು ನೋಡಿ ಕರಿಯನು "ರಾವಣ ಸತ್ತಮೇಲೆ ಕುಂಭಕರ್ಣ ಎದ್ದ" ಎಂದು ಕೂಗಿದನು. ಕರಡಿಭದ್ರ ನಗುತ್ತಾ ತನ್ನ ಮನೆಯನ್ನು ಪ್ರವೇಶಿಸಿದನು.

ಕನ್ನಡ ನಾಡಿನ ಜನರು ಅಭಿಮಾನ ಧನರಾಗಬೇಕು ಕರ್ನಾಟಕದ ಇತಿಹಾಸ ಬರೆಯಬೇಕು

ಕನ್ನಡ ನಾಡಿನ ಇತಿಹಾಸ ಅಂಶಗಳ ಬಗ್ಗೆ ವಿದೇಶಿಯರು, ಭಾರತದ ಕೆಲ ವಿದ್ವಾಂಸರು ಕೂಡ ತಪ್ಪು ಅಭಿಪ್ರಾಯವುಂಟಾಗುವಂತೆ ಬರೆದಿರುವದನ್ನು ಕಂಡೂ ಕನ್ನಡಿಗರು ಅದಕ್ಕೆ ತಕ್ಕ ರೀತಿಯಿಂದ ಉತ್ತರಿಸಿಲ್ಲ; ಕರ್ನಾಟಕದ ಇತಿಹಾಸದ ಬಗ್ಗೆ ಇದರಿಂದ ಅಪಾರ್ಥವುಂಟಾಗುತ್ತದೆ. ಅದು ಸರಿಯಲ್ಲ. ಹಾಗಾಗಬಾರದು. ಹಾಗಾಗದಂತೆ ನೋಡಿಕೊಳ್ಳಬೇಕೆಂದು ಲೇಖಕರು ಇಲ್ಲಿ ಪ್ರತಿಪಾದಿಸಿರುವರು.

ಲೇಖಕರು :

ತಿರುಮಲೆ ತಾತಾಚಾರ್ಯ ಶರ್ಮ

ಬೆಂಗಳೂರು

"ಭಾರತೀಯರ ಇತಿಹಾಸವನ್ನು ಹೀಗೆ ಸಂಗ್ರಹವಾಗಿ ಹೇಳಿಬಿಡಬಹುದು. ರಾಜಪುತ್ರರು ಆದಿನಿವಾಸಿಗಳನ್ನು ಗೆದ್ದರು; ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿದರು. ಬ್ರಾಹ್ಮಣರು ಅವರನ್ನೆಲ್ಲ ಜಾತಿಗಳನ್ನಾಗಿ ವಿಭಾಗಮಾಡಿದರು. ದೇವರುಗಳ ಪೂಜೆ, ಮತಾಚಾರ, ಇತ್ಯಾದಿಗಳಿಗೆಲ್ಲ ಅವರನ್ನು ಗಂಟುಹಾಕಿದರು; ಅವರ ಕೈಗಳಿಗೆ ವರ್ಣವ್ಯವಸ್ಥೆಯ ಬೇಡಿಗಳನ್ನು ಬಿಗಿದರು. ಭಾರತದಲ್ಲಿ ಬೌದ್ಧ ಧರ್ಮ ಪ್ರಾಬಲ್ಯಕ್ಕೆ ಬಂತು. ಆದರೆ ಅದು ವರ್ಣವ್ಯವಸ್ಥೆಯನ್ನು ಧ್ವಂಸಮಾಡಲಾರದೆ ಹೋಯಿತು. ಮಹಮದೀಯರು ಬಂದರು; ತಮ್ಮ ಸಾಮ್ರಾಜ್ಯ ಸ್ಥಾಪಿಸಿದರು. ಅನಂತರ ಹಿಂದುಗಳಿಗೆಲ್ಲ "ಬ್ರಾಹ್ಮಣರನ್ನು ಬಿಟ್ಟುಬಿಡಿ; ವಿಗ್ರಹಪೂಜೆಗಳನ್ನು ಬಿಟ್ಟುಬಿಡಿ; ಕುರಾನಿನ ಸತ್ಯಧರ್ಮವನ್ನಂಗೀಕರಿಸಿ"ರೆಂದು ಬೋಧಿಸಿ, ಬಲವಂತಮಾಡಲು ಉಪಕ್ರಮಿಸಿದರು. ಔರಂಗಜೇಬನ ಅತ್ಯಾಚಾರವು ಹಿಂದುಗಳ ದಂಗೆಯಲ್ಲಿ ಕೊನೆಗಂಡಿತು, ಮರಾಠರ ದಂಡಯಾತ್ರೆಗಳಲ್ಲಿ ಮುಕ್ತಾಯವಾಯಿತು. ಕಡೆಗೆ ಮೊಘಲ ಸಾಮ್ರಾಜ್ಯದ ಪತನ ಮತ್ತು ಸರ್ವನಾಶವಾಯಿತು. ಕಟ್ಟಕಡೆಗೆ ಆಂಗ್ಲರು ಈ ಕ್ಷೇತ್ರ ಪ್ರವೇಶಮಾಡಿದರು. ಭಾರತೀಯರನ್ನು ಅರಾಜಕತೆಯಿಂದ, ದೌರ್ಜನ್ಯದಿಂದ, ಕಾಪಾಡಿದರು; ಶಾಂತಿ, ಸಮಾಧಾನಗಳನ್ನು ನೆಲೆಗೊಳಿಸಿದರು; ಸಾಮ್ರಾಜ್ಯವನ್ನು ಸ್ಥಾಪಿಸಿದರು."[1]

"ಭಾರತೀಯ ಇತಿಹಾಸದ ಶುದ್ಧ ಸತ್ಯದ, ಸಾರಸರ್ವಸ್ವವಿದು! ಮೂರ್ಖರೊಂದಿಗೂ, ಟಾಲ್ ಟಾಯ್ಸ್ ವೀಲರರಂತಹ 'ಸತ್ಯವಾದಿ' ಗಳೊಂದಿಗೂ ನಾವು ಕಲಹ ಮಾಡಬೇಕಾಗಿಲ್ಲ. ನಮ್ಮ ದೇಶದ ಇತಿಹಾಸವನ್ನು ನಾನು ಬರೆಯಬೇಕು; ಅಭಿಮಾನದಿಂದ ಬರೆಯಬೇಕು; ಆದರೆ ಪ್ರಾಮಾಣಿಕತೆಯಿಂದ ಬರೆಯಬೇಕು.

ಸಾವಿರಾರು ವರ್ಷಗಳ ಹಿಂದೆ ನಡೆದುಹೋದ ವಿದ್ಯಮಾನಗಳನ್ನು ಕುರಿತು, ನಾನಾಕ್ಷೇತ್ರಗಳಲ್ಲಿ, ನಾನಾಅಂಶಗಳನ್ನು ಹುಡುಕಿ, ಅವುಗಳ ಸತ್ಯಾಸತ್ಯತೆಯ ಪರೀಕ್ಷೆ ನಡೆಸಿ, ಅನಂತರ ಅವುಗಳನ್ನು ಶಾಸ್ತ್ರೀಯವಾದೊಂದು ಕ್ರಮದಲ್ಲಿ ಜೋಡಿಸಿ, ಅರ್ಥಮಾಡಿಕೊಂಡು ಅನಂತರ ವಿವರಿಸಲು ಮೊದಲುಮಾಡುತ್ತಾನೆ. ಹಾಗೆ ಬರೆಯಲು ಮೊದಲು ಮಾಡುವಾಗ, ಆ ವಿದ್ಯಮಾನ, ಘಟನೆ, ನಡೆದ ಕಾಲದ ವಾತಾವರಣವನ್ನು ಕಲ್ಪಿಸುತ್ತಾನೆ; ವಾಚಕನನ್ನು ಆ ಕಾಲದ, ಆ ಸ್ಥಳಕ್ಕೆ ಕೈ ಹಿಡಿದುಕೊಂಡೊಯ್ದು, ಅವನನ್ನು 'ಸ್ವಯಂಪ್ರೇಕ್ಷಕ'ನನ್ನಾಗಿ, 'ಪ್ರತ್ಯಕ್ಷ ಶ್ರೋತೃ' ವನ್ನಾಗಿ, ಮಾಡುತ್ತಾನೆ. ಶುಷ್ಕಅಂಶಗಳ ಪಟ್ಟಿ, ನಿರ್ಜೀವ ಅಂಶಗಳ ಕಟ್ಟು ಇತಿಹಾಸವಲ್ಲ. ಅಂಶ ಅಂಶಗಳ ಮಧ್ಯೆ, ಘಟನೆ ಘಟನೆಗಳ ಮಧ್ಯೆ, ಜೀವತಂತುಗಳನ್ನು ನಿರ್ಮಿಸಬೇಕು; ತನ್ನ ಸೃಷ್ಟಿಗೊಂದು 'ಚೈತನ್ಯ' ಕೊಡಬೇಕು; ಅಂತಹವ ಇತಿಹಾಸಕಾರ! ಅಂತಹುದು ಇತಿಹಾಸ!

ಭೂಗರ್ಭದಿಂದ ಹೊರತೆಗೆದ ಪ್ರಾಚೀನ ಅವಶೇಷಗಳಿವೆ; ವಾಸ್ತುಶಿಲ್ಪ, ಗುಹೆ, ಗುಡಿಗಳಿವೆ; ಶಿಲಾಶಾಸನಗಳಿವೆ, ತಾಮ್ರಶಾಸನಗಳಿವೆ, ನಾಣ್ಯಗಳಿವೆ, ಭೂರ್ಜಪತ್ರಗಳಿವೆ, ತಾಡವಾಲೆಗಳಿವೆ, ಎಕ್ಕೆ ಎಲೆಗಳಿವೆ, ಕಡತಗಳಿವೆ, ಕಾವ್ಯ, ನಾಟಕ, ಶಾಸ್ತ್ರಗ್ರಂಥಗಳಿವೆ; ದೇಶ-ವಿದೇಶೀಯರು ನಾನಾ ಸಂದರ್ಭಗಳಲ್ಲಿ, ನಾನಾ ಉದ್ದೇಶಗಳಿಂದ ಬರೆದ ಗ್ರಂಥಗಳಿವೆ, ದಿನಚರಿಗಳಿವೆ, ಪತ್ರಗಳಿವೆ; ನಾನಾ ಗುರುಪೀಠಗಳ ಪಟ್ಟಾವಳಿಗಳಿವೆ; ರಾಜಾಸ್ಥಾನಗಳ ವಂಶಾವಳಿಗಳಿವೆ. ಇತಿಹಾಸಕಾರ ಇವುಗಳನ್ನೆಲ್ಲ ಸಂಗ್ರಹಮಾಡಿಕೊಂಡು ಅವುಗಳೊಂದೊಂದಂಶವನ್ನೂ ವಿಧ್ಯುಕ್ತವಾದ 'ಅಗ್ನಿಪರೀಕ್ಷೆ' ಗೆ ಗುರಿಪಡಿಸಿ, ಅನಂತರ "ಯಾವುದನ್ನು ಅಂಗೀಕರಿಸಲಿ: ಯಾವುದನ್ನು ನಿರಾಕರಿಸಲಿ; ಯಾವುದನ್ನು ಸಂಶಯಗ್ರಸ್ತ ಗೋತ್ರಕ್ಕೆ ಸೇರಿಸಲಿ "[2] ಎಂಬ ನಿಶ್ಚಯಕ್ಕೆ ಬರುತ್ತಾನೆ. ಈ ಕೆಲಸ ಅಷ್ಟು ಸುಲಭವಲ್ಲ. ಕಣ್ಣಾರೆ ಕಂಡದ್ದನ್ನೇ ಇಬ್ಬರು ವರ್ಣಿಸಿದ್ದು, ಎಲ್ಲ ಅಂಶಗಳಲ್ಲೂ ಎರಡೂ ಒಂದಾಗಿರುವುದಿಲ್ಲ; ಕೊಂಚ ವ್ಯತ್ಯಾಸವಿದ್ದೇ ಇರುತ್ತದೆ. ಒಬ್ಬನ ಕಣ್ಣಿಗೆ ಬಿದ್ದದ್ದು ಇನ್ನೊಬ್ಬನ ಕಣ್ಣಿಗೆ ಬೀಳದೆ ಇರಬಹುದು. ಪ್ರತ್ಯಕ್ಷ ಪ್ರಮಾಣದಿಂದ ಮಾಡಿದ ಸಿದ್ಧಾಂತಗಳೇ ಎಷ್ಟೋ ತಲೆಕೆಳಗಾಗಿವೆ; ಇನ್ನು ಅನುಮಾನದಿಂದ, ಶಾಬ್ದಿಕದಿಂದ, ಮಾಡಿದವುಗಳ ಮಾತೇನು?

"ಅಲೆಗ್ಸಾಂಡರ್ ಭರತಖಂಡದಲ್ಲಿ ಕಾಲಿಟ್ಟ ದಿನದಿಂದ ಭರತಖಂಡದ ಇತಿಹಾಸ ಆರಂಭವಾಯಿತು. ಅದಕ್ಕೆ ಹಿಂದೆ ಈ ದೇಶಕ್ಕೆ ಇತಿಹಾಸವೇ ಇಲ್ಲ. ಐರೋಪ್ಯ ಜನಾಂಗಗಳವರಲ್ಲಿ ಇರುವಂತೆ ಈ ದೇಶದಲ್ಲಿ ಚರಿತ್ರೆಯೇ ಇಲ್ಲ."

* * *

"ಬ್ರಿಟಿಶರು ದೇವರ ಅನುಗ್ರಹದಿಂದ ಭಾರತಕ್ಕೆ ಬಂದರು; ಸಾಮ್ರಾಜ್ಯ ಸ್ಥಾಪಿಸಿದರು. ಶಾಸನಮರ್ಯಾದೆ, ಶಾಂತಿಸಮಾಧಾನ ಸ್ಥಾಪನೆ, ಮೊದಲಾಯಿತು. ಸತಿ ಪದ್ಧತಿ, ಠಕ್ಕರ ಕಾಟ, ಬಾಲ್ಯ ವಿವಾಹ, ಮೊದಲಾದ ಅನಾಗರಿಕ, ಸಾಮಾಜಿಕ ಪದ್ಧತಿಗಳೆಲ್ಲ ಕೊನೆಗೊಂಡುವು. ಇಂಗ್ಲೀಷ್ ಶಿಕ್ಷಣ ಆರಂಭವಾಯಿತು; ಘನ—ಗಂಭೀರ—ನಾಗರಿಕ—ಸಾಹಿತ್ಯ—ವಿಜ್ಞಾನ, ಭಾರತೀಯರಿಗೆ ಲಭ್ಯವಾಗಲು ಆರಂಭವಾಯಿತು. ಜನರಿಗೆ ರಾಜಕೀಯ ಜ್ಞಾನೋದಯವುಂಟಾಗಿ, "ನಾವೂ ಒಂದಲ್ಲ ಒಂದು ದಿನ, ಸಾಮ್ರಾಜ್ಯದ ಮರ್ಯಾದಿತ ಪ್ರಜೆ" ಅನ್ನಿಸಿಕೊಳ್ಳಬಹುದೆಂಬ ಆಸೆ ತಲೆಹಾಕಿತು. ಭಾರತವು ಮೊಟಮೊದಲನೇಯ ಸಾರೆ ಶಾಂತಿಯೆಂದರೇನು, ಸಮಾಧಾನವಂದರೇನು, ಎಂಬುದರ ಅನುಭವವನ್ನು ಪಡೆಯಿತು."

* * *

"ಭಾರತದಲ್ಲಿ ಸ್ವಾತಂತ್ರ್ಯದ ಸಂಗ್ರಾಮ ಮೊದಲಾದದ್ದು ೮—೮—೧೯೪೨ ರಲ್ಲಿ ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು "ಕ್ವಿಟ್ ಇಂಡಿಯ'—" ಭಾರತ ಬಿಟ್ಟು ಹೊರಡಿ " ಎಂಬ ನಿರ್ಣಯಮಾಡಿದ ಕ್ಷಣದಿಂದ ಸ್ವಾತಂತ್ರ್ಯಸಂಗ್ರಾಮ ಆರಂಭವಾಯಿತು.

---

1. Tales from Indian History p. 267.
—J. Taltoys' Wheeler

2. "'Historical evidence, in other words, is not an ultimate datum to which we can refer to test the truth of historical judgements. But this, as will be obvious, reopens the whole question of Fact and truth in history'.
—An Introduction to Philosophy of History by W. H. Walsh P. 19

ಇಂತಹ 'ವಾದ' ಗಳಲ್ಲಿ 'ಸಿದ್ಧಾಂತ' ಗಳು ಇಂದೂ ನಮ್ಮ ದೇಶದಲ್ಲಿ ನಯಿಪೈಸೆಗಳಂತೆ ಚಲಾವಣೆಯಲ್ಲಿವೆ. ಕಾರಣವಿಷ್ಟೆ—ನಮ್ಮಲ್ಲಿ ಇನ್ನೂ "ದಾಸ್ಯಚಿತ್ತವೃತ್ತಿ" ನಿರ್ಮೂಲವಾಗಿಲ್ಲ. "ಶುದ್ಧ ಭಾರತೀಯ ಮನೋಧರ್ಮ" ಬೇರೂರಿಲ್ಲ. ಹದಿನಾಲ್ಕು ವರ್ಷಗಳ ಹಿಂದೆ ಭಾರತವನ್ನಾಳುತ್ತಿದ್ದವರು ಬಿಳಿಯರು; ಇಂದು ಆಳುತ್ತಿರುವವರು ಬಿಳಿ ಟೋಪಿಯವರು. ಇಷ್ಟು ಬಿಟ್ಟರೆ ಇನ್ನೂ ಯಾವ ಬದಲಾವಣೆಯೂ ಆಗಿಲ್ಲ. ಭಾರತೀಯ ಪ್ರತಿಭೆ, ಭಾರತೀಯ ವ್ಯಕ್ತಿತ್ವ—ಎಂಬುದರ ಸುಳಿವು ಎಲ್ಲೂ (ಹೆಸರೊಂದನ್ನುಳಿದು) ಇಲ್ಲ.

ನಮ್ಮ ದೇಶದ ಮಹಾ ಮಹಾ ಮೇಧಾವಿಗಳೆಲ್ಲ ಕೂತರು; "ನಮ್ಮ ಸಂವಿಧಾನವನ್ನು ನಾವೇ ಸೃಷ್ಟಿಸಬೇಕು" ಎಂದು ಸಂಕಲ್ಪ ಹೇಳಿ ಆರಂಭಿಸಿದರು ಈ ಬೃಹಸ್ಪತಿಗಳು. ಇವರು ಮಾಡಿದ್ದೇನು? ರಾಷ್ಟ್ರ ಕೂಟದಲ್ಲಿ ಕೂತು (ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿ) ಜಗತ್ತಿನ ಎಲ್ಲ ನಾಗರಿಕ ಜನಾಂಗಗಳ ಸಂವಿಧಾನಗಳನ್ನೆಲ್ಲ ಪರಿಶೀಲಿಸಿದರು. ಭಾರತ ಬ್ರಿಟಿಷ್ ಸರಕಾರದವರು ರಚಿಸಿದ್ದ ೧೯೩೫ ನೆಯ ಇಂಡಿಯ ಸರಕಾರ ಶಾಸನವನು ಆಧಾರವಾಗಿಟ್ಟು ಕೊಂಡರು. ಅದರ ಅನುಭವವನ್ನೂ ಗಣನೆಗೆ ತೆಗೆದು ಕೊಂಡರು. ನಮ್ಮ ಸಂವಿಧಾನವು (೧೯೪೯) ೧೯೩೫ ನೆಯ ಇಂಡಿಯಾ ಸರಕಾರ ಶಾಸನದ "ನೂಣ ಪ್ರತಿ" ಯಲ್ಲ, ನಿಜ. ಆದರೆ ನೂರಕ್ಕೆ ೭೫ ರಷ್ಟು ಅದಕ್ಕೆ ಎರವಲಾಗಿದೆ. ಮೂಲಭೂತ ಹಕ್ಕುಗಳಿಗೆಲ್ಲ ಮೂಲ ಅಮೇರಿಕದ ಸಂಯುಕ್ತಸಂಸ್ಥಾನಗಳ ಸಂವಿಧಾನ; ಇದರಲ್ಲಿ ಕೊಂಚ ಐರ್ಲೆಂಡ್ ಸಂವಿಧಾನದ ಬಣ್ಣವೂ ಬೆರೆತಿದೆ. ನಮ್ಮ ಸಂವಿಧಾನದ ನಾಲ್ಕನೆಯ ಭಾಗವಾದ "ರಾಜ್ಯ ನೀತಿ ನಿರ್ದೇಶಕತತ್ವ"ಗಳನ್ನೆಲ್ಲ ಐರ್ಲೆಂಡಿನ ಸಂವಿಧಾನದಿಂದ ಎತ್ತಿಕೊಂಡವು. ಕೆನಡಾ ದೇಶದ ಸಂವಿಧಾನದಿಂದ ಸಂಯುಕ್ತ ವ್ಯವಸ್ಥಾ (ಫೆಡರಲ್ ಫಾರಂ) ರೂಪವನ್ನೂ ಬ್ರಿಟಿಷ್ ಪದ್ಧತಿಯಿಂದ ಜವಾಬ್ದಾರಿ ಸರಕಾರ ಸ್ವರೂಪವನ್ನೂ ಎರವಲಾಗಿ ಪಡೆದಿರುತ್ತೇವೆ. ದಿನ ದಿನದ ಆಡಳಿತ ತಂತ್ರ ಕಡತಗಳ ಓಡಾಟ, ಎಲ್ಲ ಕುಂಪಣಿ ಸರಕಾರದ (ಈಸ್ಟ್ ಇಂಡಿಯ ಕಂಪೆನಿ) ಕಂದಾಚಾರವೆ. ನ್ಯಾಯಾಸ್ಥಾನಗಳೆಲ್ಲ ಬ್ರಿಟಿಷ್ ಮಠ ಮುದ್ರೆಯವೆ. ವಿಶ್ವವಿದ್ಯಾನಿಲಯಗಳೂ ಅವರ ಕಾಲದ ಆಸ್ತಿಯೆ. ಆಡಳಿತ, ನ್ಯಾಯಸ್ಥಾನ, ಶಾಲಾ ಕಾಲೇಜು—ಎಲ್ಲ ಕ್ಷೇತ್ರಗಳ ಭಾಷೆಯೂ ಇಂಗಿಷೇ! "ಇದೋ! ಇದು ಭಾರತೀಯ" ಎಂದು ಹೆಮ್ಮೆಯಿಂದ ಅಭಿಮಾನದಿಂದ ಹೇಳಿಕೊಳ್ಳಲು ಏನಿದೆ? ಇನ್ನು ಮುಂದೆ ಯಾವುದೇ ಸ್ವತಂತ್ರ ದೇಶದವರಾದರೂ ತಮ್ಮ ಸಂವಿಧಾನ ಬರೆಯಲಿಕ್ಕೆ ಕೂತಾಗ "ಇದು ಭಾರತ ಸಂವಿಧಾನದಿಂದ ಅನುಸರಿಸಿದ್ದು" ಎಂದು ಅವರು ಕೃತಜ್ಞತೆಯಿಂದ ಅಂಗೀಕರಿಸತಕ್ಕದ್ದೇನಿದೆ? ನಮ್ಮ ಬುದ್ಧಿ, ನಮ್ಮ ಭಾವ, ನಮ್ಮ ಭಾಷೆ—ಸರ್ವಸ್ವವೂ 'ವಿದೇಶಿ' ಅಂದಮೇಲೆ, 'ಸ್ವದೇಶಿ' ಅನ್ನಲಿಕ್ಕೆ ಏನಿದೆ? ನಮಗೊಂದು "ಭವ್ಯ ಭವಿಷ್ಯ" ವಿದೆಯೆಂದು ಹೇಳಿಕೊಳ್ಳಲು, ಧೈರ್ಯದ ಮಾತು ಹಾಗಿರಲಿ, ಬಾಯಲ್ಲಿದೆ?

ವಿಜಯನಗರ ಸಾಮ್ರಾಜ್ಯವೆಂದರೆ ಕರ್ನಾಟಕ ಸಾಮ್ರಾಜ್ಯ. ಆ ಸಾಮ್ರಾಜ್ಯದ ಇತಿಹಾಸ ಕುರಿತು ಅನೇಕರು ಗ್ರಂಥಗಳನ್ನು ಬರೆದಿದ್ದಾರೆ. ಅವರಲ್ಲಿ ಮುಂಬಯಿಯ ಸೆಯಿಂಟ್ ಝೆವಿಯರ್ ಕಾಲೇಜಿನ ರಿವರೆಂಡ್ ಎಚ್. ಹೆ. ರಾಸ್‌ರವರು ಮೂವತ್ತು ಮೂರು ವರ್ಷಗಳ ಹಿಂದೆ (೧೯೨೮) ನವರಾತ್ರಿ ಉತ್ಸವ ಕಾಲದಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಂದ ಆಹ್ವಾನಿತರಾಗಿ, ಎರಡು ಉಪನ್ಯಾಸಗಳನ್ನು ಮಾಡಿದರು. "ವಿಜಯನಗರ ಸ್ಥಾಪನೆ", "ಸಂಗಮ ರಾಜವಂಶದ ಮೂಲ" ಇವೇ ಆ ಎರಡು ಉಪನ್ಯಾಸಗಳು. ಇವೆರಡನ್ನೂ ಸೇರಿಸಿ ಒಂದು ಗ್ರಂಥವನ್ನು ೧೯೨೯ ರಲ್ಲಿ ಪ್ರಕಟಿಸಿದರು.

"ಹದಿನಾರನೆಯ ಶತಮಾನದಲ್ಲಿ, ವಿದ್ಯಾರಣ್ಯರು ವಿದ್ಯಾನಗರವನ್ನೂ ವಿಜಯನಗರ ಸಾಮ್ರಾಜ್ಯವನ್ನೂ ಸ್ಥಾಪಿಸಿದರೆಂಬ ಕಥೆಯನ್ನು ಶೃಂಗೇರಿ ಮಠದ ಸಂನ್ಯಾಸಿಗಳು ಕಟ್ಟಿದರು. ೧೫೦೮–೧೫೬೦ರ ವರೆಗೂ ರಾಮಚಂದ್ರ ಭಾರತಿ ಸ್ವಾಮಿಗಳು ಶೃಂಗೇರಿ ಪೀಠಾಧಿಕಾರಿಗಳಾಗಿದ್ದರು. ಬಹುಶಃ ಅವರ ಕಾಲದಲ್ಲಿ ಈ ಕಟ್ಟುಕಥೆಯನ್ನೂ ಹೆಣೆಯಲಾಯಿತು. ಮತ್ತು ಮೇಲೆ ಸೂಚಿಸಿದ ಅನೇಕ ದಾನಶಾಸನಗಳಲ್ಲಿ ಎಲ್ಲವನ್ನೂ ಅಲ್ಲವಾದರೂ ಹಲವನ್ನಾದರೂ ಸೃಷ್ಟಿ ಮಾಡಲಾಯಿತು."

ಎಂಬುದಾಗಿ ಪಾದ್ರಿ ಸಾಹೇಬರು ಹೇಳಿದರು. ಇಷ್ಟು ಮಾತ್ರವಲ್ಲ ಚಿಕ್ಕಮಗಳೂರು ತಾಲೂಕಿನ ಶಾಸನವೊಂದನ್ನು ಸೂಚಿಸಿ ವಿದ್ಯಾರಣ್ಯರಿಗೆ ಹಿಂದೆ ಪೀಠಾಧಿಕಾರಿಗಳಾಗಿದ್ದವರಲ್ಲಿ ವಿದ್ಯಾತೀರ್ಥರೆಂದು ಪ್ರಖ್ಯಾತರಾಗಿದ್ದ ವಿದ್ಯಾಶಂಕರ ಸ್ವಾಮಿಗಳೊಬ್ಬರು. ಈ ಶಾಸನದಿಂದ ಶೃಂಗೇರಿ ಮಠಕ್ಕೂ ವಿಜಯನಗರ ಸಾಮ್ರಾಜ್ಯಕ್ಕೂ ಬಹಳ ಹಿಂದಿನ ಕಾಲದಿಂದ ಸಂಬಂಧವಿತ್ತೆಂಬುದನ್ನು ಸ್ಥಾಪಿಸಬೇಕೆಂಬ ಆಶೆಯನ್ನು ಜಗದ್ಗುರುಗಳು ತೋರಿಸಿದರೆಂಬುದು ಗೊತ್ತಾಗುತ್ತದೆ. ಖೋಟಾದಾನ ಶಾಸನಗಳ ಸೃಷ್ಟಿಗೆ ಇದೇ ಮೊದಲನೆಯ ಹೆಜ್ಜೆಯೆನ್ನಬಹುದು. ವಿದ್ಯಾರಣ್ಯರೇ ವಿಜಯನಗರ ಸಾಮ್ರಾಜ್ಯದ ರಾಜಧಾನಿಯ ಸ್ಥಾಪಕರೆಂದು ಹೇಳುವ ಕಥೆ ಎರಡನೆಯದು—ಮೊದಲಾಗಿ ಹೇಳಿದ್ದಾರೆ. ಇಷ್ಟು ಮಾತ್ರದಿಂದಲೇ ಅವರು ತೃಪ್ತರಾಗಲಿಲ್ಲ. ಭಾರತೀಯ ಸಾಧು-ಸಂನ್ಯಾಸಿಗಳೆಲ್ಲ "ಸುಳ್ಳುಸೃಷ್ಟಿ" ಮಾಡುವದರಲ್ಲಿ ನಿಸ್ಸೀಮರೆಂದು ಹೇಳುವದನು ಮೀರಿಸಿ ಹೇಳಿದ್ದಾರೆ.

"ಕಡೆಯದಾಗಿ; ಇಂತಹ ಸಾಧು ಸಂನ್ಯಾಸಿಗಳ ಚಿತ್ತವೃತ್ತಿಯೇ ಹಾಗೆ; ಸುಳ್ಳು ಕಂತೆಗಳನ್ನು ಸೃಷ್ಟಿ ಮಾಡುವುದರ ಕಡೆಗೇ ಅವರ ಮನಸ್ಸು ಹೊರಳುತ್ತದೆ. ತಮ್ಮ ತಪಸ್ಸಿನಿಂದ ಅವರು ಶುದ್ಧ ಬ್ರಹ್ಮವೆಂದು ಕರೆಯುವ ಜ್ಞಾನವನ್ನು ಸಂಪಾದಿಸುತ್ತಾರೆ. ಆ ಮಾರ್ಗವನ್ನೆ ಹಿಡಿದು, ಅವರು ಎಲ್ಲವನ್ನೂ—ಅವಿರಲಿ, ಇಲ್ಲದಿರಲಿ; ಸತ್ಯವಾಗಿರಲಿ, ಅಸತ್ಯವಾಗಿರಲಿ—ಎಲ್ಲವನ್ನೂ ಸಾಪೇಕ್ಷಿತ ಸತ್ಯದ ಗುಂಪಿಗೇ ಸೇರಿಸುತ್ತಾರೆ. ಆದಕಾರಣ ಸುಳ್ಳು ಕಥೆಯೊಂದರ ಮೂಲವಾಗಿ ಲಾಭವುಂಟಾಗಬಹುದು— ಇದರಿಂದ ಮೂರನೆಯವರಿಗೇನೂ ಕೆಡುಕುಂಟಾಗದೆ ಇದ್ದರಾಯಿತು. ಈ ಬಗೆಯ ವ್ಯಾಪಾರವು ಇಂತಹ ಸಾಧು ಸಂನ್ಯಾಸಿಗಳಿಗೆ ಸದಾ ಆಕರ್ಷಕವಾಗಿರುತ್ತದೆ."

ಸಾಕು, ಸದ್ಯಕ್ಕೀ ಪಾದ್ರಿಗಳ ಪುರಾಣ. ಇತಿಹಾಸಕ್ಕಾಧಾರವೆನಿಸುವ ಸಾಧನಸಾಮಗ್ರಿಗಳು ವಿರಳವಾಗಿರಬಹುದು; ಅಪೂರ್ಣವಾಗಿರಬಹುದು; ಅರೆಬರೆ ಸತ್ಯದಿಂದ ಕೂಡಿರುವಂತೆ ಕಾಣಬರಬಹುದು. ಅಸತ್ಯವಾಗಿಯೇ ಇರಬಹುದು. ಇತಿಹಾಸಕಾರ ಅವುಗಳನ್ನು ಅಂಗೀಕರಿಸಬಹುದು, ನಿರಾಕರಿಸಬಹುದು. ಅವುಗಳನ್ನು ತೂಗಿನೋಡಿ 'ಇವುಗಳ ಬೆಲೆ ಇಷ್ಟೆ' ಎಂದು ಹೇಳಬಹುದು. ಇತಿಹಾಸಸಂಶೋಧಕನ ಅಧಿಕಾರವದು. ಆದರೆ ಇತಿಹಾಸ "ಸಂಶೋಧಕ ವೇಷದ" ಈಸಾಯಿ ಪಾದ್ರಿ ಭಾರತ ಸಾಧುಸಂನ್ಯಾಸಿಗಳನ್ನೆಲ್ಲ ಕುರಿತು "ಸುಳ್ಳು ಹೇಳುವುದೂ ಖೋಟಾ ದಾನಪತ್ರಗಳನ್ನು ಸೃಷ್ಟಿ ಮಾಡುವುದೂ ಅವರ ತಪೋಬಲದಿಂದಲೆ" ಎಂಬುದಾಗಿ ಹೇಳುತ್ತಾನೆ! ಇದರಲ್ಲೇನೂ ಆಶ್ಚರ್ಯವಿಲ್ಲ! ಹೀಗೆ ಆ ಮಹಾನುಭಾವ ಹೇಳಿ ಮೂವತ್ತುಮೂರು ವರ್ಷಗಳಾದರೂ ಭಾರತೀಯ ಸಂನ್ಯಾಸಿಗಳೇ ಆಗಲಿ, ಭಾರತೀಯ ಇತಿಹಾಸಸಂಶೋಧಕರೇ ಆಗಲಿ, ಪಾದ್ರಿಗಳ ಈ "ಸುಳ್ಳನ್ನು" ಈ "ಅಸಹ್ಯ ಆಪಾದನೆ" ಯನ್ನು ಶಿಲುಬೆಗೇರಿಸಲಿಲ್ಲವಲ್ಲಾ—ಎಂಬುದೇ ಮಹದಾಶ್ಚರ್ಯ !!

ಇದಿಷ್ಟು ವಿದೇಶೀ ಪಾದ್ರಿಗಳ ಮಾತಾಯಿತು. ಇನ್ನು ಸ್ವದೇಶೀ 'ಶಾಸ್ತ್ರಿ' ಗಳೊಬ್ಬರೇನು ಹೇಳಿರುವರೋ ಕೊಂಚ ಕೇಳಿ.

'ಪಾದ್ರಿ' ಮಹಾಶಯರು ವಿದ್ಯಾರಣ್ಯರು ವಿದ್ಯಾನಗರ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೂ ಯಾವ ಸಂಬಂಧವೂ ಇಲ್ಲವೆಂದರೆ 'ಶಾಸ್ತ್ರಿ' ಮಹಾ

ತಯರು ತುರುಕರಾಗಿದ್ದ ಹರಿಹರ ಬುಕ್ಕರನ್ನು ವಿದ್ಯಾರಣ್ಯರು ಹಿಂದೂ ಜಾತಿಗೆ ಸೇರಿಸಿದರೆಂದು ಹೇಳುತ್ತಾರೆ!

"ಹರಿಹರ- ಬುಕ್ಕ ಇಬ್ಬರೂ ಸಂಗಮನ ಮಕ್ಕಳು; ಇವರು ಐವರು ಅಣ್ಣತಮ್ಮಂದಿರು. ಮೊದಲಿವರು ಕಾಕತೀಯ ಇಮ್ಮಡಿ ಪ್ರತಾಪ ರುದ್ರನ ಸೇವೆಯಲ್ಲಿದ್ದರು. ೧೩೨೩ ರಲ್ಲಿ ಮುಸಲ್ಮಾನರು ಕಾಕತೀಯ ರಾಜ್ಯವನ್ನು ಗೆದ್ದಮೇಲೆ ಹರಿಹರ ಬುಕ್ಕರು ಕಂಪಿಲಿ ರಾಜ್ಯಕ್ಕೆ ಹೋದರು. ೧೩೨೭ರಲ್ಲಿ ಕಂಪಿಲಿ ರಾಜ್ಯವೂ ಮುಸಲ್ಮಾನರ ವಶವಾಯಿತು. ಸೋದರರಿಬ್ಬರೂ ಬಂದಿಗಳಾದರು; ಅವರನ್ನು ದೆಹಲಿಗೊಯ್ದರು. ಅಲ್ಲಿ ಅವರು ಇಸ್ಲಾಂಮತವನ್ನು ಸ್ವೀಕರಿಸಿದರು. ಕಂಪಿಲಿ ರಾಜ್ಯದಲ್ಲಿ ಮಲ್ಲಿಕ್ ಮೊಹಮ್ಮದ ಆಡಳಿತ ಅಧಿಕಾರಿಯಾಗಿದ್ದ. ಹಿಂದೂಗಳೆಲ್ಲ ದಂಗೆಯೆದ್ದರು. ಆಗ ಹುಕ್ಕ-ಬುಕ್ಕರಿಬ್ಬರನ್ನು ಕಂಪಿಲಿ ರಾಜ್ಯದ ಆಡಳಿತ ಸೂತ್ರವಹಿಸಿ, ಹಿಂದೂದಂಗೆಯನ್ನಡಗಿಸಲು ಕಳುಹಿಸಿದರು. ಇವರಿಬ್ಬರೂ ದೇಹಲಿ ಬಿಟ್ಟು, "ದಕ್ಷಿಣ ದೇಶಕ್ಕೆ ಬಂದಾಗ ಏನಾಯಿತೆಂಬ ವಿಚಾರ ಕುರಿತು ತಿಳಿದು ಬಂದಿರುವುದೆಲ್ಲ ಗಜಬಿಜ. ಮುಸಿಂ ಇತಿಹಾಸಕಾರರು ಒಂದು ಹೇಳಿದರೆ, ಹಿಂದು ಇತಿಹಾಸಕಾರರು ಇನ್ನೊಂದು ಹೇಳುತ್ತಾರೆ, ಆದರೆ ಎರಡೂ ಗುಂಪಿನವರೂ ಇಷ್ಟನ್ನೊಪ್ಪುತ್ತಾರೆ, ಸುಲ್ತಾನನ ಅನುಗ್ರಹ - ಅಂತರಂಗಕ್ಕೆ ಸೇರಿದ ಇಬ್ಬರು ಅಧಿಕಾರಿಗಳೂ ಬೇಗ ಇಸ್ಲಾಂ ಮತವನ್ನು ಬಿಟ್ಟರು. ದೆಹಲಿಗೂ ತಮಗೂ ಇದ್ದ ರಾಜಭಕ್ತಿಯನ್ನು ಕೊನೆಗಾಣಿಸಿದರು. ಸ್ವತಂತ್ರವಾಗಿ ಹಿಂದೂ ರಾಜ್ಯ ಸ್ಥಾಪನೆಗಾರಂಭಿಸಿದರು."

* * *

"ಅನಂತರ ಹಿಂದುಗಳ ಮೂಲವಾಗಿ ತಿಳಿದು ಬಂದಿರುವಂತೆ ಸೋದರರು ವಿದ್ಯಾರಣ್ಯ ಸ್ವಾಮಿಗಳನ್ನು ಕಂಡರು. ಆತನ ಬೋಧೆಯಿಂದ ಸ್ಫೂರ್ತಿಗೊಂಡರು. ಮತ್ತೆ ಹಿಂದೂ ಧರ್ಮವನ್ನು ಸ್ವೀಕರಿಸಿ ಇಸ್ಲಾಂ ಧರ್ಮ ವಿರುದ್ಧವಾಗಿ ನಿಂತು, ಹಿಂದೂ ಧರ್ಮೋದ್ಧಾರಕ್ಕಾಗಿ ಕಂಕಣ ಕಟ್ಟಿದರು."

ಶ್ರೀ ಕೆ. ಎ. ನೀಲಕಂಠ ಶಾಸ್ತ್ರಿಗಳು ಮದರಾಸು ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಇತಿಹಾಸ ವ್ಯಾಖ್ಯಾನ ಪೀಠಾಧಿಕಾರಿಗಳಾಗಿದ್ದರು. ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ 'ಇಂಡಾಲಜಿ' ವ್ಯಾಖ್ಯಾನ ಪೀಠಾಧಿಪತಿಗಳಾಗಿದ್ದರು. ಅವರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ; ಅವುಗಳಲ್ಲಿ "ದಕ್ಷಿಣ ಭಾರತದ ಇತಿಹಾಸ" ಎಂಬುದೊಂದು. ಆ ಮಹಾಗ್ರಂಥವನ್ನು ಮೈಸೂರು ರಾಜ್ಯದ "ರಾಜ್ಯಪಾಲ"ರಿಗೆ ಅರ್ಪಿಸಿದ್ದಾರೆ! ಈ ಗ್ರಂಥರತ್ನದಿಂದ ಮೇಲಿನ "ಹುಕ್ಕ-ಬುಕ್ಕ ಪುರಾಣ" ಭಾಗವನ್ನೆತ್ತಿ ಕೊಡಲಾಗಿದೆ.

ಕನ್ನಡ ನಾಡು, ಅದರ ಚರಿತ್ರೆ, ಸಾಹಿತ್ಯ ಕಲೆ, ಜನಜೀವನ ಕುರಿತು ಅನೇಕ "ದೇಶ - ವಿದೇಶ ವಿದ್ವಾಂಸರು" ಅಸಾಧ್ಯವಾಗಿ ಬರೆದಿದ್ದಾರೆ. ಮಾದರಿಗಾಗಿ ಒಬ್ಬ ಪಾದ್ರಿಗಳು, ಒಬ್ಬ ಶಾಸ್ತ್ರಿಗಳು ಬರೆದಿರುವ ಗ್ರಂಥಗಳಿಂದ ಒಂದೊಂದು ಉದಾಹರಣೆಯನ್ನೂ ಕೊಟ್ಟದ್ದಾಯಿತು. ಇಂತಹ ಉದಾಹರಣೆಗಳನ್ನು ಒಂದೊಂದು ಕ್ಷೇತ್ರದಲ್ಲೂ ಹತ್ತಾರನ್ನೆತ್ತಿ ಕೊಡಬಹುದು. ಈ 'ಅಪಪ್ರಚಾರ' ಪ್ರಚಾರ ಈ ಲೇಖನದ ಉದ್ದೇಶವಲ್ಲ. ಕನ್ನಡ ನಾಡಿನ ಪ್ರಭುತ್ವದವರು, ಪ್ರಜೆಗಳು, ಸತ್ಯಪಕ್ಷಪಾತಿಗಳು, ಈ ಬಗೆಯ ಕೆಲಸದಿಂದಾಗುತ್ತಿರುವ "ಕನ್ನಡ ಜನಪದದ್ರೋಹ" ಕರ್ಮವನ್ನು ಕೊನೆಗಾಣಿಸುವ ವಾತಾವರಣವನ್ನುಂಟುಮಾಡುವುದು ಮಾತ್ರ ಉದ್ದೇಶ. ಈ ಬಗೆಯ ವಾತಾವರಣಕ್ಕೆ ಮೊದಲು ಬೇಕಾದುದು ಜನರಲ್ಲಿ "ಅಭಿಮಾನ." ನಮ್ಮ ನಾಡಿನಲ್ಲಿ ಇಂದು ಆ ಅಭಿಮಾನವನ್ನು ಹುಟ್ಟಿಸಬೇಕಾಗಿದೆ.

ಕವಿ ಕಂಡ ಗಾಂಧಿ

ಲೇಖಕರು :
ಪ್ರಿ. ರಾ. ಯ. ಧಾರವಾಡಕರ
ಪ್ರಧಾನ ಸಂಪಾದಕ
ಗಾಂಧಿ ಸ್ಮಾರಕ ನಿಧಿ, ಕನ್ನಡ ಗ್ರಂಥಮಾಲೆ, ಧಾರವಾಡ

ಗಾಂಧೀಜಿ ತಮ್ಮ ಮಾನವೀಯ ಗುಣಗಳಿಂದ ಪ್ರೀತಿ ಅಂತಃಕರಣಗಳ ಬೆಳಕನ್ನುಪ್ರಪಂಚದತುಂಬೆಲ್ಲ ಸಾರಿದರು. ಬಾಳನುದ್ದಕ್ಕೂ ಪ್ರೀತಿ ಅಹಿಂಸೆಗಳನ್ನು ಬೋಧಿಸಿ ಅದರಂತೆನಡೆದು ಮಾನವ್ಯವನ್ನೇಕೆಸರಿನಿಂದ ಮೇಲಕ್ಕೆತ್ತಿದರು. ಆದರೆ ದೈವದುರ್ವಿಲಾಸದಿಂದ ಒಬ್ಬಹಿಂಸಕನ ಕೈಯಿಂದ ಅವರ ಅಂತ್ಯವಾಯಿತು. ಇತರರಂತೆ ಕವಿಗಳಿಗೂ ಅವರು ಸ್ಫೂರ್ತಿಪ್ರದರಾಗಿರುವರು. ಆ ಕವಿಗಳು ಗಾಂಧೀಜಿಯನ್ನು ಕಂಡ ಬಗೆಯನ್ನು ಲೇಖಕರಿಲ್ಲಿ ನಿರೂಪಿಸಿದ್ದಾರೆ.

ಕವಿ ಹೃದಯ ಜಾತಪ್ರೇರಣಾ
ಪ್ರೇಮ ಕಾರಣಾ
ಇಗೋ ಕವನಾ—
ಕರ್ನಾಟ ದೇಶದ ಜನಾ
ಕನ್ನಡಿಸಿತು ಮನಾ
ಹಾಡಿತು ಕವಿಗಣಾ—

—ಅಂಬಿಕಾತನಯದತ್ತ

"ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು; ನಡೆದಲ್ಲಿ ಪವಿತ್ರ ಭೂಮಿಯಾಯಿತು"—ಎಂದರು ಪಂಡಿತ ನೆಹರೂ ಅವರು. ಗಾಂಧೀಜಿಯವರು ಜೀವಿಸಿದ ಕಾಲದಲ್ಲಿ ಅವರ ಪ್ರತ್ಯಕ್ಷ ಮಾರ್ಗದರ್ಶನವನ್ನು ಪಡೆಯುವ ಸೌಭಾಗ್ಯವು ಅನೇಕರಿಗೆ ಲಭಿಸಿತು. ರಾಷ್ಟ್ರಪಿತರಾದ ಗಾಂಧೀಜಿಯವರು ಬರಿಯ ರಾಜಕೀಯ ವಿಮೋಚನೆಯ ಮೂರ್ಧನ್ಯರಾಗಿರದೆ, ಇಡೀ ಪ್ರಪಂಚದ ಮಾನವ್ಯದ ಬೆಲೆಗಳನ್ನೇ ಎತ್ತರಿಸಲು ಬಯಸಿದರು.

ಕ್ರಾಂತಿದರ್ಶಿಗಳಾದ ಕನ್ನಡ ಕವಿಗಳೂ ಸ್ವಾಭಾವಿಕವಾಗಿ ಈ ಪ್ರಭಾವಕ್ಕೆ ಒಳಗಾಗದೆ ಇರಲಿಲ್ಲ—ತಮ್ಮ ತಮ್ಮ ಊಹೆಯ ಎತ್ತರಕ್ಕೆ ಗಾಂಧೀಜಿಯವರ ಬಾಳನ್ನು ಕಂಡುಕೊಂಡು ಕ್ರಾಂತಿಯ ಕಹಳೆಯನ್ನು ಮೂಲೆ-ಮೂಲೆಯಲ್ಲಿ ಮೊಳಗಿದರು. ಅಂಬಿಕಾತನಯದತ್ತರಂಥ ಹಲವಾರು ಕವಿಗಳು ಪ್ರತ್ಯಕ್ಷವಾಗಿ ಈ ಕ್ರಾಂತಿಯಲ್ಲಿ, ಭಾಗವನ್ನು ವಹಿಸಿದರು. ವಿಮೋಚಿತ ಭಾರತ, ಮತ್ತು ಏಕತಂತ್ರ ಕರ್ನಾಟಕಗಳು ಕನ್ನಡ ಕವಿಗಳ ಜೀವನದುಸಿರಾದವು. ಅಂತಲೇ, ಗಾಂಧೀಜಿಯವರ ಉನ್ನತ ವ್ಯಕ್ತಿತ್ವಕ್ಕೆ ನೂರಾರು ಕನ್ನಡ ಕವಿಗಳು ತಮ್ಮ ಭಾವ ಕುಸುಮಾಂಜಲಿಯನ್ನು ವಿನಮ್ರರಾಗಿ ಅರ್ಪಿಸಿದರು.

ವ್ಯಕ್ತಿಚಿತ್ರ

ಗಾಂಧೀಜಿ ಎಂದಾಕ್ಷಣಕ್ಕೆ ನಮ್ಮ ಕಣ್ಣೆದುರು ನಿಲ್ಲುವುದು ದಷ್ಟಪುಷ್ಟವಲ್ಲದ ಅವರ ಆ ಕೃಶವಾದ ದೇಹ; ಶಿಶುಸಹಜ ಬೋಡುನಗೆ! ಸ್ವಲ್ಪ ದೊಡ್ಡವೇ ಆದ ಕಿವಿಗಳು!! ಎಂಥ ಖಲರನ್ನೂ ತನ್ನವರನ್ನಾಗಿ ಮಾಡಬಯಸಿದ ಆ ಮುಗಿವ ಕೈ!! — ಇದೆಲ್ಲಕ್ಕೂ ಹಿಂದೆ ಅವಿತುನಿಂತ ಮಾನಸಸರೋವರಸದೃಶವಾದ ತಿಳಿಮನಸ್ಸು!.. ಇಂಥ ಆಕೃತಿಯನ್ನು ನಮ್ಮ Laboratory (ಪ್ರಯೋಗಶಾಲೆ)ಗಳಲ್ಲಿ ಸಿದ್ಧಪಡಿಸಬಹುದೇ? ದಿವಂಗತ ಕೈಲಾಸಮ್ ಅವರು ತಮ್ಮದೇ ಆದ ಮಾರ್ಮಿಕ ಶೈಲಿಯಲ್ಲಿ ಗಾಂಧೀಜಿಯವರ ದೇಹಯಷ್ಟಿಯನ್ನು ವರ್ಣಿಸಿದ್ದಾರೆ—

ಒಂದು ಹಿಡಿ ಮೂಳೆ ಚಕ್ಕಳ ಅಷ್ಟೆ! (ಸ್ವಲ್ಪ ಎಲುವು) ಅದಕೆ ಸುರಿ ಮೂರು ನಾಲ್ಕೋ ಚಮಚ ರಕ್ತ, ಮಾಂಸ; ಹಚ್ಚು ಮೊರ ಕಿವಿಯೆರಡ—ಎರಡು ಪಿಳಿಪಿಳಿ ಕಣ್ಣ:— ಇಷ್ಟು Laboratory ಯಲ್ಲಿ ಸಿದ್ಧಮಾಡಿ, ಮಾವಿನ ಕಾಯಿಯನ್ನು ಅಡಿ ಹಾಕಿದ ಹಾಗೆ,

ಮೇಲಿನಂಚಿನ ವರೆಗು ದುಃಖಿಗಳ ಕಣ್ಣೀರು ತುಂಬಿ ಪಕ್ವಮಾಡು: ಇದನು ಸೆರೆಮನೆ-ಯೊಳೊಂದಿನಿತು ವರುಷ—

ಇಂಥ ಗೊಂಬೆಗೆ ಒಂದು ಚಿಂದಿಯನ್ನು ಸುತ್ತಿ ಕೈಯಲ್ಲಿ ಕೋಲನ್ನು ಕೊಟ್ಟರೆ, "ಅವನೆ 'ಕ್ರಾಣ್ ಲೋಕತಾರಕ ನಮ್ಮ ಬಾಪೂ—" ಇದು ಅವರ ಬಾಹ್ಯ ಆಕೃತಿ— ಆದರೆ ಅದಕ್ಕೆ ಅವರ ಹಾಲು ಹಸುಳೆಯ ಮಂದಹಾಸ ಮತ್ತು ಶುದ್ಧಾಂತಃಕರಣಗಳನ್ನು ಸೇರಿಸುವ ಬಗೆ ಹೇಗೆ? ಅದಕ್ಕೆ ಇನ್ನೊಮ್ಮೆ ಮಹಾತ್ಮನೇ ಹುಟ್ಟಿಬರಬೇಕು.

ಗಾಂಧೀ ನಗೆ :

ಗಾಂಧೀಜಿಯೆಂದಾಕ್ಷಣಕ್ಕೆ ಕಣ್ಣೆದುರಿಗೆ ಕಟ್ಟುವುದು ಅವರ ಶಿಶುಸದೃಶ ಹಿಮ-ನಗೆ! ಹಾಲು ಹಸುಳೆಯ ಮಂದಹಾಸ. ಆ ನಗೆ ಮಲ್ಲಿಗೆ ಅರಳಿದ ಹಾಗೆ— ಶುಭ್ರನಿರ್ಮಲ. ಮಲ್ಲಿಗೆಯ ಮಾದಕ ವಿಭ್ರಮೆಯೂ ಇಲ್ಲ. ಹಿಮಾಲಯಕ್ಕೆ ಹಾಗೆ ಹಿಂದಿಲ್ಲ ಮುಂದಿಲ್ಲ, ತೆರೆಮೂಡಿ ಮುಳುಗುವ ಹಾಗೆ ತರಂಗತರಂಗವಾಗಿ, ರಂಗರಂಗವಾಗಿ ಬರುವುದು.

ನೆನಸೇವು ನಿಮ್ಮ ಆ ನಗಿ
ಒಳಗ ಇಲ್ಲ ಧಗೀ
ಬರೇ ಬೆಳಕು—
ಬರೀ ಬೆಳಕು—

"ಬರೇ ಬೆಳಕು: ಬರೀ ಬೆಳಕು." ಕಾಮನ ಬಿಲ್ಲಿನ ಹಲ ಬಣ್ಣವಲ್ಲ.

ಗಾಂಧೀ ಕಣ್ಣು !

ಬೆಳ್ಳಿಯ ಕನ್ನಡಕದ ಹಿಂದಿನ ಆ ನಿರ್ಮಲ ಕಣ್ಣುಗಳು ಎಷ್ಟು ಜನ ಪತಿತರನ್ನು ಉದ್ಧಾರ ಮಾಡಿದುವು! ಎಷ್ಟು ಜನರಿಗೆ ಅಭಯಭಿಕ್ಷೆ ನೀಡಿದವು!! ಅದರ ಆಳವನ್ನು ಕಂಡವರಿಗೇ ಆ ಕಣ್ಣಿನ ಅರ್ಥವಾಗುವುದು. ಹಾದಿಹೋಕ ಹುಂಬರು ಅದರರ್ಥವನ್ನು ಅರಿಯರು.

" ಏನೆಂಥ ಕಣ್ಣು !
ಬರಿಗಣ್ಣ ಬಂಟರಿಗಲ್ಲ—
ಬರುಗಣ್ಣ ತುಂಟರಿಗಲ್ಲ ! "
ಕಂಡವರಿಗಲ್ಲ
ಕಂಡವರಿಗಷ್ಟೆ— ಈ ಕಣ್ಣು-
ತಿಳಿಗಣ್ಣು : ಒಳಗಣ್ಣ! ಏನೆಂಥ ಕಣ್ಣು !!

ಈ ಕಣ್ಣು ಬರಿಯ ಭಾರತವನ್ನು ಮಾತ್ರ ಕಾಣಲಿಲ್ಲ. ಭೂ-ವ್ಯೋಮಗಳನ್ನೇ ತನ್ನ ದರ್ಶನದಲ್ಲಿ ಸಿಲುಕಿಕೊಂಡಿತು.

'ನೆಲ-ಮುಗಿಲು ಎವೆಯಾಗಿ ತೆರೆದ
ಅದ್ಭುತ ಕಣ್ಣು -ಈ ಯುಗದ, ಈ ಜನದ
ಅದ್ಭುತ ಕಣ್ಣು
ಮೂರನೆಯ ಕಣ್ಣು—ಶಿವಗಣ್ಣು ! "*

ಗಾಂಧೀ ಸಂದೇಶ

ಹಾಗಿದ್ದಲ್ಲಿ, ಗಾಂಧೀಜಿಯವರ ಮಹತಿ ಯಾವುದರ ಮೇಲೆ ನಿಂತಿದೆ? ಅವರ ಸಂದೇಶವೇನು? ಅವರ ಬಾಳಿನ ಸಾರ್ಥಕತೆ ಯಾವುದು ?

ಗಾಂಧಿ ಬೋಧಿಸಿದ್ದು ಬರಿಯ ರಾಜಕೀಯ ವಿಮೋಚನೆಯನ್ನಲ್ಲ. ಅದು ಆನುಷಂಗಿಕ. ಅವರು ಹೇಳಿದ್ದು, ಮಹಾತ್ಮರಾಗದಿದ್ದರೂ ಮನುಷ್ಯರಾಗಿ ಬಾಳಿರೆಂದು. ಮನುಷ್ಯ ಮನುಷ್ಯನಾಗಿ ಬಾಳಿದರೆ ಜಗತ್ತು ಬದುಕುತ್ತದೆ. ಮಾನವತ್ವ ನಶಿಸಿ, ಪಶುತ್ವ ಪಟ್ಟಕ್ಕೇರುವ ಇಂದಿನ ಯುಗದಲ್ಲಿ ನಿಜವಾದ ಶರಣತ್ವ ಬೇಕು. "ಅರಿದರೆ ಶರಣಃ ಮರೆದರೆ ಮಾನವ" ಪ್ರೀತಿಯೇ ಜಗತ್ತಿನ ಆಧಾರ. ಜೀವನದ ಎಲ್ಲ ವಿಭಾಗಗಳಲ್ಲಿಯೂ ಅದರ ಅನಂತಮುಖಗಳ ಅದ್ಭುತ ದರ್ಶನವನ್ನು ಪಡೆಯುತ್ತೇವೆ. ಸ್ನೇಹ

---

* "ಏನೆಂಥ ಕಣ್ಣು !" —ಎಂ ಅಕಬರಅಲಿ

ಜಗತ್ತಿನ ಸ್ನೇಹದಾಧಾರ 'ಗಾಂಧೀ ಕಿರಣದಲ್ಲಿ' ಪ್ರೊ. ಮುಗಳಿಯವರು ಹೇಳಿದ ಹಾಗೆ—

ಜೀವಜಾತವೆಲ್ಲವಿದಕೆ
ಪ್ರೀತಿಯಿಂದ ಜನನವು
ಬೆರೆತು ನಲಿದು ಬಾಳುವುದಕೆ
ಪ್ರೀತಿಯಿಂದ ಜತನವು

ನಿಜವಾದ ಪ್ರೀತಿ ಭೋಗದಕ್ಕಿಂತ ತ್ಯಾಗದಲ್ಲಿದೆ. ಒಂದು ರೀತಿ. ಇಡೀ ಮಾನವ್ಯದ ಇತಿಹಾಸವು ನಿಧಾನವಾದ ಸ್ವಾರ್ಥತ್ಯಾಗದ ಇತಿಹಾಸವೇಆಗಿದೆ. ತನ್ನ ದೇಹದ ಆಶೆಗಾಗಿ ಮನುಷ್ಯ ಮನುಷ್ಯನನ್ನು ಕೊಂದುತಿನ್ನುವ ಕಾಲವೊಂದಿತ್ತು.

ಒಡಲ ಪ್ರೀತಿಯಿಂದ ಮೊದಲು
ನರನು ನರನ ಕಾಡಿದ
ಅರಸು ಮೆರೆದು, ಆಳ ತುಳಿದು,
ಇಳೆಯ ನರಕ ಮಾಡಿದ.

ಈಗ, ಆ ಅಧಿಕಾರ ಸಾಮಾನ್ಯ ಪ್ರಜೆಗೆ ಬಂದಿದೆ ಈ ಹೃದಯದ ಅಂತಃಕರಣವನ್ನೇ ಸಾಧಿಸಬೇಕೆಂದು ಗಾಂಧೀಜಿಯವರು ಬೋಧಿಸಿದರು.

ಈ ಪ್ರೀತಿಯೇ ನಿಜವಾದ ಧರ್ಮ. ಇಂಥ ಧರ್ಮ ಗಾಂಧೀ ಬೋಧನೆ—

"ಧರ್ಮದಿಂದ ಅರ್ಥಃ ಕಾಮಃ ಶರಣಾಗಿರಿ
ಧರ್ಮಕ್ಕೆ
ಬದುಕಿಸುವದು ಕಲಿತು ಬದುಕಿ
ಎದೆಎದೆಯೊಳು ನಿಲವ ಬೆದಕಿ"

ಆದರೆ, ಇಂದು ನಾವು ಮಾಡಿದ್ದೇನು? ಮನೆ-ಮನೆಯ ನಡುವೆ ಮನಮನದ ನಡುವೆ ಗಟ್ಟಿಮುಟ್ಟಾದ ಗೋಡೆಗಳನ್ನು ಕಟ್ಟಿಕೊಂಡಿದ್ದೇವೆ. ನಾವಿಂದು ಈ ಅಪೂರ್ವವಾದ ಸಂದೇಶಗಳಿಂದ ಎಷ್ಟು ದೂರದ ಕಂದರಕ್ಕೆ ಬಂದಿದ್ದೇವೆ? ಪತನ ಮುಂದಾದರೂ ನಿಶ್ಚಿತವೇ ಸರಿ. ಚಿಕ್ಕ ಮಕ್ಕಳನ್ನು ಹೆದರಿಸುವ ಹುಚ್ಚರಂತೆ, ಮುಖಕ್ಕೆ ವಿಕೃತವಾದ ಗಡ್ಡ-ಮೀಸೆಗಳನ್ನು ಕಟ್ಟಿಕೊಂಡು ನಖಗಳನ್ನು ಬೆಳೆಸಿದ್ದೇವೆ. ಇದುವೆ ಮಾನವ ನಡೆಯಬೇಕಾದ ದಾರಿ? ಕವಿ ಗೋಪಾಲಕೃಷ್ಣ ಅಡಿಗರು ಗಾಂಧಿ ಸಂದೇಶದ ಬಗ್ಗೆ ಹೇಳಿದಂತೆ—

"ಕಟ್ಟಿಕೊಳ್ಳಬೇಡಿ ನಿಮ್ಮನಡುವೆ ಸಣ್ಣ ಸಣ್ಣ
ಗೋಡೆಯ.
ಕಿತ್ತೊಗೆಯಿರಿ ಮನುಪುತ್ರರೆ, ನಿಮ್ಮ ನಖವ,
ದಾಡೆಯ;
ಹಿಡಿದು ನಡೆಯಿರಣ್ಣ ಸೋದರತೆಯ ಹಾದಿಯ"

ಗಾಂಧೀ ಸಾರಿದ ಸಂದೇಶವಿದು. ನಾವೇನು ಮಾಡಿದೆವು? ನಮ್ಮ ಮನಸ್ಸಿಗೆ ಈ ಆಚರಣೆಯ ತೊಂದರೆಯಾಗಬಾರದೆಂದು ಗಾಂಧೀಜಿಯನ್ನು ದೇವರನ್ನಾಗಿ ಪರಿವರ್ತನಮಾಡಿಬಿಟ್ಟೆವು. ಯಾವನೆ ಒಳ್ಳೆಯವನನ್ನು ದೇವನನ್ನಾಗಿ ಮಾಡಿಬಿಟ್ಟರೆ ಅವನಂತೆ ನಡೆಯುವ ಜವಾಬುದಾರಿ ನಮಗಿಲ್ಲ. ಅವನ ಕೆಲಸ ಅವನಿಗೆ; ನಮ್ಮ ರೀತಿ ನಮಗೆ. ಗಾಂಧೀ ಸಂದೇಶ ಕೇಳಿದ ನಾವೇನು ಮಾಡಿದೆವು?

ನಿನ್ನ ಕಂಡು ಬೆರಗಾದರು, ನಿನಗೆ
ನಮೋನಮ ಎಂದರು

(ನಮೋನಮ ಎಂದರೆ ಕೆಲಸ ಮುಗಿದು ಹೋಯಿತು)

ನಿನ್ನ ಹೊಗಳಿ ಹಾಡಿದರು ಹಣ್ಣು ಕಾಯಿ
ತಂದರು
ನಿನ್ನ ಪಥವ ಮರೆತು ನಿನ್ನ ಪದಕೆ ಬಿದ್ದ
ಅಂಧರು
ನಿನಗೆ ಗುಡಿಯ ಕಟ್ಟ ತಾವು ಬಚ್ಚಲಲ್ಲೆ
ನಿಂದರು
ಅಮೃತ ಬಂದು ಮನೆಯ ಮುಂದೆ
ಹರಿಯುತಿದ್ದರೂ
ವಿಷವನರಸಿ ಹೊರಟರಯ್ಯೋ ಈ
ಮತಾಂಧರು—

ಗಾಂಧಿ ತತ್ವಕ್ಕೆ-ಅನುಯಾಯಿತ್ವಕ್ಕೆ ಒದಗಿದ ಅವಸ್ಥೆ ಇದು. ಬುದ್ಧ ಗತಿಸಿ ಬೌದ್ಧ ಮತ ಚೀನ್-ಜಪಾನವನ್ನು ಸೇರಿತು. ಶಾಲ್ಮಲಿ ಸೋಮೇಶ್ವರದಲ್ಲಿ ಹುಟ್ಟಿ ನೂರಾರು ಮೈಲು ಮುಖ ಮರೆಸಿಕೊಂಡಿತು. ಗಾಂಧೀಜಿ ತೀರಿಕೊಂಡು ಪ್ರವಾದಿ ಬರ್ಟ್ರಾಂಡ್ ರಸೆಲ್ ಇಂಗ್ಲಂಡಿನಲ್ಲಿ ಸತ್ಯಾಗ್ರಹ ಪ್ರಾರಂಭಿಸಿದರು. ಸಾಗರಗಳಾಚೆ ಶಾಂತಿದೂತರ ಸಂಘಗಳು ಪ್ರಾರಂಭವಾದವು.

ಅಗಾಧವಾದ- ಅನಂತವಾದ- ಬಹುಮುಖವಾದ ಅಂತಃಕರಣವೇ ಗಾಂಧೀಜಿಯವರ ಹೃದಯದ ಸೆಲೆ ಇದೇ ಆಫ್ರಿಕದ ಕತ್ತಲೆಯನ್ನು ಹರಿಸಿತು. ಭಾರತಕ್ಕೆ ಸ್ವಾತಂತ್ರ್ಯವನ್ನು ತಂದಿತು. ದೀನದಲಿತರಿಗೆ ಜೀವನದಲ್ಲಿ ಸ್ಥಾನವನ್ನು ತಂದುಕೊಟ್ಟಿತು. ಚೌರಿ ಚೌರಾ-ನೌಖಾಲಿಯಲ್ಲಿ ಜೀವನವನ್ನು ಉಳಿಸಿತು.

ನೊಂದವರ ತಾಯಾಗಿ ಸೇವೆಯನು ಸಲ್ಲಿಸಿದೆ
ದೀನರಿಗೆ ನೆರಳಾದೆ-ತಂದೆಯಾದೆ
ಕೊಲ್ಲಬಂದವನೆದೆಗೆ ಕ್ರಿಸ್ತನೊಲು
ಕೈಮುಗಿದೆ;
—ಸಾಕ್ರೆಟಿಸ್ ಮತ್ತೊಮ್ಮೆ ವಿಷವಕುಡಿದೆ*

ಗಾಂಧೀ ಆಕರ್ಷಣೆ

ಈ ಸಂದೇಶವನ್ನು ವಿಹ್ವಲ ಜನತೆಗೆ ಬೋಧಿಸಿ, ಕಲಿಯುಗಕ್ಕೆ ಮರ್ಯಾದೆ ತಂದರು ಗಾಂಧೀಜಿ. ಅವರು ಹೋದಲ್ಲೆಲ್ಲ ಮಳೆಬಿಸಿಲೆನ್ನದೆ ಜನತೆ ಹಿಂಡಾಗಿ ಧಾವಿಸಿದರು. ಯಾಕೆ ಜನ ಹೀಗೆ ಧಾವಿಸಿದರು? ಗಾಂಧೀ ಏನು ಅವತಾರ ಪುರುಷರೆ? ಛೆ! ಅಲ್ಲ! ಪವಾಡ ಪುರುಷರೇ? ಜಾದು ಮಾಡಿದರೇ? ಯಾವ ಇಂದ್ರಜಾಲ ಜನತೆಯನ್ನು ಗಾಂಧೀಜಿಯವರೆಡೆಗೆ ಸೆಳೆದೊಯ್ಯಿತು. ಹಿರಿಯ ಕವಿಗಳಾದ ಕು. ವೆಂ. ಪು.† ಅವರು ಸುಂದರವಾಗಿ ಹೇಳುವಂತೆ—

ಇವನು ಕಲ್ಲನು ರೊಟ್ಟಿ ಮಾಡಿಲ್ಲ:
ಹುಲ್ಲಿನಲಿ ನಿಶಿತಾಸ್ತ್ರವನು ಮಂತ್ರದಿಂದ
ರಚಿಸಿ
ದಾನವನಕೊಂದಿಲ್ಲ: ಅರ್ಧನರ
ಅರ್ಧಮೃಗರೂಪದಲಿ
ಕಂಭವನ್ನೊಡೆದು ಗುಡಿಗುಡಿಸಿ
ಮೂಡಿದನಿಲ್ಲ.
ದಶಶಿರನ ಕೊಂದಿಲ್ಲ; ಚಕ್ರಧರನೂ ಅಲ್ಲ,
—ಹಾಗಿದ್ದರೆ ಜನ ಇವರನ್ನು ನೋಡಲು
ಯಾಕೆ ತವಕಿಸಿತು?

---

* ಗಾಂಧೀಜಿಯ ಹಾದಕ್ಕೆ: ಕೆ. ಎಸ್. ನರಸಿಂಹಸ್ವಾಮಿ
† ಸಭ್ಯತಾ ದೇವತೆ ಕು.ವೆಂ.ಪು.

ಇವನಿಗೇನು ರಾಜವೈಭವವಿದೆಯೋ ?
ಜಂಬೂ ಸವಾರಿ ಇದೆಯೋ ?
ಆನೆಯಂಬಾರಿಗಳ ರಾಜಶ್ರೈಸಿರಿಯಿಲ್ಲ.
ಇವನು ಸುಂದರನಲ್ಲ; ಯುವಕನಂತೂ
ಅಲ್ಲ :
ಚೆಂದುಟಿಯ ಚೆಲುವಿಲ್ಲ; ಕಮಲಾಕ್ಷ-
ನಿವನಲ್ಲ.

ಇವನೇನು ಪ್ರಗಲ್ಭ ವಾಗ್ಮಿಯೆ ? ಜೋಗದ ಜಲ ಪಾತ ಸುರಿದ ಹಾಗೆ—ರಾಜದ ಗಾಂಭೀರ್ಯದಲ್ಲಿ ಅಬ್ಬರದ ಆರ್ಭಟೆಯಲ್ಲಿ ಬಾಣದ ಬಣ್ಣದ ತುಷಾರ ದಲ್ಲಿ, ಗೌರವನಿತೆಯ ಬಳಕುವ ಮೋಡಿಯಲ್ಲಿ ಮಾತು ಉರುಳಿ ಉರುಳಿ ಬರುತ್ತಿವೆಯೋ ? ಮುಗಿಲ ಎತ್ತರಕ್ಕೆ ಮಾತಿನಲ್ಲಿ ಮಳೆಬಿಲ್ಲ ಏಣಿಯನ್ನು ಹಚ್ಚು ತ್ತಿದ್ದಾರೆಯೋ ?

'ಅದೂ ಸುಳ್ಳು : ಇವನ್ನದನಿ ದೂರಕ್ಕೆಕೇಳಿಸದು. ಮಾತಿನಲಿ ರಸಿಕತೆಯ ಬೆಡಗು ಬಿಂಕಗಳಿಲ್ಲ.

ವಿಷಯವೋ ಬೀದಿಗುಡಿಸುವ ಜಾಡಮಾಲಿಗಳ ಕುರಿತದ್ದು."

ಆದರೂ ಜೇನುಹುಟ್ಟಿಗೆ ಜೇನು ತುಂಬಿ ಮುಕುರುವ ಹಾಗೆ ಜನ ಏಕೆ ನುಗ್ಗುತ್ತಿದ್ದಾರೆ ಇವರ ದರ್ಶನಕ್ಕೆ ? ಯಾಕೆ ?

ವೈಚಿತ್ರ್ಯವನೆ ದೇವರೆಂದೆಂಬುವಾ
ಕಾಲವೊಂದಿತ್ತು.
ಮತ್ಸ್ಯ ಕೂರ್ಮಾದಿನರಸಿಂಹರನು ಭಯ-
ಭಕ್ತಿ
ಪೂಜಿಸುವ ಕಾಲವೊಂದಿತ್ತು. ರಾಜದರ್ಪ
ದಲಿ,
ಅಧಿಕಾರದಲಿ, ಕ್ರೌರ್ಯದಲಿ, ಶಕ್ತಿ ಬಲ
ಯುಕ್ತಿ
ಸಿರಿ ಮೋಹ್ ಅಹಂಕಾರದಲಿ ದೇವತ್ವವನು
ಕಾಣುವಾ ಕಾಲವೊಂದಿತ್ತು.

ಆ ಅನಾಗರಿಕ ಮಾನವದೇವ ಭಾವಗಳ್ ಇಂದು ದೂರಾಗುತಿವೆ. ಆ ದೇವರೆಲ್ಲ ಉರುಳಿ ಇಂದು ಹೊಸ ದೇವರು ನಿರ್ಮಾಣವಾಗಿದ್ದಾರೆ. ಅದ್ಭುತ ವೈಚಿತ್ರ್ಯಪ್ರಿಯ ಮಾನವನ ಮೆದುಳಿಗೆ ಕವಿದ ಮಂಕು ಹರಿದುಹೋಗಿ ಸರಳದೃಷ್ಟಿ ಬಂದಿದೆ. ವಿಚಿತ್ರಾಕಾರಗಳಲ್ಲಿ ಈ ವರೆಗೆ ದೇವರನ್ನು ಗುರುತಿಸಿದ ಮಾನವ ವಿಶಾಲಾಂತಃಕರಣಿಗಳಾದ ಸೋದ-ರರಲ್ಲಿ ದೇವತ್ವವನ್ನು ಕಾಣುತ್ತಿದ್ದಾನೆ. ಮನುಜರಾಗಿ ಹುಟ್ಟಿ, ಮನುಜರಾಗಿ ಬಾಳಿ, ಮಾನವಲೋಪ ದೋಷಗಳನ್ನೊಳಗೊಂಡು ಅವನ್ನು ದಾಟಿ, ನೊಂದ-ವರ ಕಣ್ಣಿನ ಹನಿಯನ್ನು ಒರೆಸಬಯಸುವ ಸಾಮಾನ್ಯ ಜೀವಿಯ ವಿಶಾಲಾಂತಃಕರಣದಲ್ಲಿ ಇಂದಿನ ಮಾನವ ದೇವತ್ವವನ್ನು ಕಾಣುತ್ತಿದ್ದಾನೆ. ವಿಚಿತ್ರ ವೇಷಧಾರಿ ಪರಮಾತ್ಮ ತ್ರೇತ ದ್ವಾಪರಗಳಲ್ಲಿ ಜನರನ್ನು ರಂಜಿಸಿದ. ಹೊಸಯುಗದ ಪರಮಾತ್ಮ ಸಾಮಾನ್ಯ ಮಾನವ ಸ್ವರೂಪದಲ್ಲಿಯೇ ಪ್ರತ್ಯಕ್ಷನಾಗುತ್ತಿದ್ದಾನೆ. ಇಂಥ ಸರಳತೆಯಲ್ಲಿ ದೇವತ್ವವನ್ನು ಕಾಣಬೇಕಾದರೆ, ಮಾನವನಿಗೆ ಮೂರು ಯುಗಗಳು ಹಿಡಿದವು. ಅಲ್ಲಿಯ ವರೆಗೆ ಅಹಲ್ಯಾಧ್ಯಾನದಲ್ಲಿದ್ದ ಮಾನವತೆ ಮಾನವ ರಾಮಚಂದ್ರನ ಪಾದ ಸ್ಪರ್ಶದಿಂದ ಋಜುದೃಷ್ಟಿ ಪಡೆದಿದೆ. ಕು. ವೆಂ. ಪು. ಹೇಳಿದ ಹಾಗೆ—

ಆ ಅನಾಗರಿಕ ಮಾನವ ದೇವ ಭಾವಗಳ್
ಇಂದು ದೂರಾಗುತಿವೆ.
ಮಾನವನ ಅಭ್ಯುದಯ ಶ್ರೇಯಸ್ಸು-
ಗಳಿಗಾಗಿ
ನೊಂದವರ್, ಬೆಂದವರ್, ಮನುಜ-
ರಂತೆಯೆ ಬಾಳಿ
ಹೋರಾಡಿ ಸಂದವರ್,
ರಾಜ್ಯಭೋಗ ತ್ಯಾಗದಮಲ ವೈರಾಗಿಗಳ್
ಮನುಜತನುಜರ್ ಇಂದು, ಕ್ರಿಸ್ತ ಬುದ್ಧಾ-
-ದಿಗಳೆ,
ಮಾನವರ ಪೂಜೆ ಗೌರವಗಳನು ಕೈಕೊಳ್ಳ
ದೇವತೆಗಳಾಗುತಾ ಕಾಲವೈ ಶಂದಿಹುದು.
ಋಜು ದೃಷ್ಟಿ ದೊರೆ ಕೊಳಲ್ ಮೂರು
ಯುಗಗಳ್
ಕಳೆದು, ಕಲಿ ಕಾಲ ಬೇಕಾಯ್ತು ! ಧನ್ಯ !
ಕಲಿಯುಗ ಧನ್ಯ ! !

ಅಂತಲೇ, ಕವಿವೃಂದ ನಿರಾಯಾಸವಾಗಿ ಶಿಶುಸಹಜ ಮುಗ್ಧತೆಯಿಂದ ಗಾಂಧೀಜಿಯವರ ನಾಯಕತ್ವವನ್ನು ಒಪ್ಪಿಗೊಂಡಿತು. ಅವರು ಕರೆದೊಯ್ದಲ್ಲಿ ಕಾಲಿಟ್ಟರು. ಅವರು ಕಟ್ಟಿದ ತೇರಿನ ರಥೋತ್ಸವಕ್ಕೆ ತಮ್ಮ ಕೈಯನ್ನು ಕೂಡಿಸಿದರು. ಅಲ್ಪಕ್ಕೆ ಇಳಿಯದ ಹಾಗೆ ತಮ್ಮನ್ನು ಮುನ್ನಡೆಸಬೇಕೆಂದು ಪ್ರಾರ್ಥಿಸಿದರು.

—ನಮಗೆ ಗೊತ್ತಿಲ್ಲ ಇಂಥ ದಾರಿ ನಡೆದು
ಮೊನ್ನೆ ಮೊನೆ ತುಂಬ್ಯಾವ ಹನ್ನೆರಡು.
ತೇರಾದೀತು ಒಗ್ಗಾಲಿ
ಹೋದೀತು ಹಿಡಿ ಜೋಲಿ!
ನೀ ತಂದಿಯಂತ ಬಂದೇವು ಇಲ್ಲಿತನಕ

(ನೀ ನಮ್ಮನ್ನು ಕರೆದು 'ತಂದಿ' ಯೆಂದು ಇಲ್ಲಿಯ ವರೆಗೆ ಬಂದೆವು— ನೀ ನಮ್ಮ 'ತಂದೆ' ಎಂದು ನಂಬಿ ನಾವು ಈ ವರೆಗೆ ಬಂದೆವು)

ನೀ ತಂದೆಯಂತ ಬಂದೇವು ಇಲ್ಲಿ ತನಕ
ನೀ, ತಂದಿ, ಕೈಹಿಡಿ ದಾರಿ ಬರುವನಕ
ಅಂದಾರು ಮಂದಿ ಇವು ಪರದೇಶಿ ಇದ್ದು-
ಯಾಕಂದರೆ,

ನಮಗೆ ಬ್ಯಾರೆ ನಾದ ಬಾಳ
ಮರಿತೇವು ಸಂಬಂಧ ಅಣ್ಣ-ತಮ್ಮಗೋಳ-

ಅದಕ್ಕಾಗಿ, ಈ ತೇರನ್ನು ಮುಂದೆ ಸಾಗಿಸುವ ಯೋಗ್ಯತೆ ನಮಗೆ ಕೊಡು ಎಂದು ಕೇಳುತ್ತಾರೆ ಕವಿಗಳು. ಭಾರತದ ತೇರೂ ಬಹಳ ಭಾರವಾದುದು. ಹಳೆಯದು. ಜಡವಾದದ್ದು. ಅದೂ ಅಲ್ಲದೆ ಸುಮಾರು ೨೦೦ ವರುಷ ಗುಲಾಮಗಿರಿಯಿಂದ ಹುದಲಲ್ಲಿ ಸಿಕ್ಕಂತಹುದು. ಇದು ಹೊಸ ಬಗೆಯ ತೇರು ಇದರ ಮುಂದೆ ರಕ್ತತರ್ಪಣವಿಲ್ಲ.

ಗಾಂಧಿ ಮಹಾಬೆಳಗು

ಹೀಗೆ, ಪ್ರೀತಿ-ಅಂತಃಕರಣಗಳ ಬೆಳಕನ್ನು ಪ್ರಪಂಚದ ತುಂಬೆಲ್ಲ ಸುರಿದ ಬಾಳಿನುದ್ದಕ್ಕೂ ಪ್ರೀತಿ ಅಹಿಂಸೆಗಳನ್ನು ಬೋಧಿಸಿ, ಅದರಂತೆ ನಡೆದು ಮಾನವವನ್ನೇ ಕೆಸರಿನಿಂದ ಮೇಲಕ್ಕೆತ್ತಿದ್ದ ಮಹಾತ್ಮನ ಅಂತ್ಯ ಕೊನೆಗೆ ಒಬ್ಬ ಹಿಂಸಕನ ಕೈಯಿಂದಾಯಿತು.

ಗಾಂಧೀಜಿಯವರೂ ಈ ಮರಣದ ದರ್ಶನವನ್ನೇ ಕಂಡಿದರೂ ಏನೋ! ಯಾಕಂದರೆ ೨೦ ವರುಷಗಳ ಮೊದಲು ಹುತಾತ್ಮರಾದ ಗಣೇಶ ಶಂಕರ ವಿದ್ಯಾರ್ಥಿಯವರ ಬಗೆಗೆ ಸ್ಮಾರಕಸಂದೇಶವನ್ನು ಗಾಂಧೀಜಿಯವರು ಕಳಿಸುವಾಗ ಇದೇ ಮಾತನ್ನೇ ಹೇಳಿದ್ದರು

"ನನಗೂ ಇಂಥ ಬಲಿದಾನ ಮರಣವೇ ಬರಲಿ! ಎಡದಿಂದ ಒಬ್ಬನು ಕೊಡಲಿಯಿಂದ ಹೊಡೆಯುತ್ತಿರುವಾಗ, ತಲೆಯಮೇಲೆ ಲಾಠಿಗಳ ಹೊಡೆತ ಬೀಳುತ್ತಿರುವಾಗ, ಹಿಂದಿನಿಂದ ಜನ ನನ್ನನ್ನು ಹೀಯಾಳಿಸಿ ಒದೆಯುತ್ತಿದ್ದಾಗ, ಇವರಾರಬಗ್ಗೆಯೂ ಮನಸ್ಸಿನಲ್ಲಿ ದ್ವೇಷವನ್ನು ತಾಳದೆ, ನಗುನಗುತ್ತ ಮರಣವನ್ನು ಅಪ್ಪುವ ಸೌಭಾಗ್ಯವು ನನ್ನದಾಗಿರಲಿ", ಶರಣನ ಹಿರಿಮೆಯನು ಮರಣದಲ್ಲಿ ಕಾಣಬೇಕೆಂದು, ವೀರಶೈವೋಕ್ತಿ. ಮರಣವೇ ಮಹಾನವಮಿಯೆಂದು ಬಸವಣ್ಣನವರು ಸಾರಿದರು. ಅದೇ ಮಹಾ ಬೆಳಗು ಮಹಾತ್ಮರು ಕಂಡ ಮಹಾಬೆಳಗೂ ಅಂಥದೇ ಆಯಿತು. ಹಿಂಸಕನ ಬಗ್ಗೆ ಗಾಂಧೀಜಿ ಕನಲಿದರೇ? ರೋಷ ತಾಳಿದರೇ? ಶಪಿಸಿದರೇ? ಹಾಗಾಗಿದ್ದಲ್ಲಿ ಅದು ಅವರ ಬಾಳಿನ ಹಾನಿ. ಕೊಲೆಗಡುಕನಿಗೆ ಕೈಮುಗಿದರು ಗಾಂಧಿ.

ಗುಂಡಿಟ್ಟು ಗೋಡ್ಸೆ ಸುಡುತಿರಲು ಅವಗೆ,
ಕೈಮುಗಿದಿರೋ, ಗಾಂಧಿ!
..ಇಳೆಯು ಹೊರಗು ಇಳಿದು ಋಣ
ಮುಗಿದು ಬಾಳು ಹಗುರಾಯ್ತು
ಘಾತಕನ ಕೊಲೆಕೋವಿ ಗೋಲಿ
ಕಾರುತಿರಲು
ಒಂದಾದಮೇಲೊಂದು, ಒಂದ್‌ದೆರಡು
ಮೂರು
ಕೋಪವೇ ನಿಮಗೆ? ಅದುರಿತೇ
ತುಟಿಯು?
ಹಗೆ ತಣಿಯಲೆಂಬಂತೆ ಮನಸು ಸುಮನಸ
ವಾಯ್ತು ಪರಿಶಾಂತವಾಯ್ತು
ಸಂದಿ ಕಾಳಕೂಟವ ಶಿವನು ಕುಡಿದು
ಜೀರ್ಣಿಸಿದಂತೆ
ನಾಡವಿಷವನು ಉಂಡು ಕೇಡು ಹೀರಿದಿರಿ
ಎಂದಿಗೂ ಇದುವೆ ಕರೆ ಈ ನಾಡಿನಲ್ಲಿ
ಎಂದಿಗೂ ಇದೆ ಇದುವೆ ಎತ್ತಿದಾದರ್ಶ
'ನಾನ್ಯಃ ಪಂಥಾ ವಿದ್ಯತೇಽಯನಾಯ
ಮಾ ವಿದ್ವಿಷಾವಹೈ"

ಇಂಥ ಮಹಾತ್ಮರು ತಿರುಗಿ ಬಂದಾರೆಯೇ—


ನೂರಾರು ವರುಷಕ್ಕೆ ಸಾವಿರಕೆ ಎರಡಕ್ಕೆ
ಅಲ್ಲಿ ಏಸೂಕ್ರಿಸ್ತ, ಇಲ್ಲೆಮ್ಮ ಸಿದ್ಧಾರ್ಥ
ಸಂರಾಜಪುತ್ರ ಸುಭ್ರಾತೃ ಬಾಹು
ಬಲಿಯಂತೆ—

ಭೂಮಿಗತಿಶಯದಂತೆ, ಸಗ್ಗದಿಂದಿಳಿದರೆಂಬಂತೆ ಬರುತ್ತಾರೆ. ಪ್ರತಿಸಲ ಚಕ್ರ ತಿರುಗುವ ಋತುಗಳಲ್ಲ ಈ ಮಹಾತ್ಮರು. ನಾಡಿನ ಪುಣ್ಯಫಲದಿಂದ ಬರತಕ್ಕವರು.

..ಈ ಅರ್ಥದಲ್ಲಿ ಗಾಂಧಿ ಮರಣ ಮರಣವೇ? ನಿಮಿತ್ತಮಾತ್ರಂ ಭವಸವ್ಯಸಾಚಿನ್— ಬೇಂದ್ರೆ ಅವರು ಹೇಳಿದ ಹಾಗೆ— "ಮಣಿಹ ಸಂದಿತು; ದೇಹ ಕೆಳಗೆ ಇಟ್ಟ." "ಕಡ್ಡಿಯಲುಗದು ಅಕಸ್ಮಾತ್ತಿನಿಂದ: ಗುಡ್ಡ ಉರುಳೀತೇನು ಗುಂಡಿನಿಂದ?" ಅಂತಲೇ, ಕನ್ನಡ ಕವಿ ಹೃದಯದ ಪ್ರತಿನಿಧಿಯಾಗಿ ಹಿರಿಯ ಕವಿಗಳಾದ ಶ್ರೀ ಬೇಂದ್ರೆ ಅವರು ಗಾಂಧೀಜಿಯವರ ದಿವ್ಯ ನೆನಪಿಗೆ ಪುಷ್ಪರಾಶಿಯನ್ನರ್ಪಿಸುತ್ತಿದ್ದಾರೆ—


ಅಸರಂತ ನಿಮ್ಮ ಜೀವನಾ
ಒಂದೆ ಸಮ ರಣಾ
ಸೀಳಿದಿರಿ ಸಾವಿನಾಷ್ಟಿತಲೀ
ಕೊಟ್ಟರಿ ಬಲೀ
ಕೀರ್ತಿ ಶನಿಗೂ—
ನೆನಸೇವು ನಿಮ್ಮ ಆ ನಗಿ
ಒಳಗ ಇಲ್ಲ, ಧಗೀ.
ಬರೇ ಬೆಳಕು—ಬರೀ ಬೆಳಕು.
ನಿಮ್ಮ ಕಾರ್ಯ—ಕಿರಿ ಬೆಳ್ಳಿನಾ ಸೆಲಿ
ಹಿಗ್ಗಿಧಾಂಗ ಹೊಳಿ
ಮುಂದ ಹರವು—ಮುಂದ ಹರವು.
ನಿಂ ಚಥಾಯಿಮಾಡುವ ನೀತಿ
ಅಸಲ್ ನಿರ್ಭೀತಿ
ಹೇಳಿ ಕೇಳಿ—ಹೇಳಿ ಕೇಳಿ.
ಅಂಬಿಕಾತನಯನ ಬಂಧ
ಸಮುದ್ರದ ಅಂದ
ಭಾವ ಭವನಾ—ಭಾವ ಭವನಾ

—ಗಾಂಧೀಜಿ ತೀರಿಕೊಂಡರು: ಅವರ ತತ್ತ್ವ ಉಳಿಯಬೇಕು: ಉಳಿದಿದೆ. ಅವರ ಭೌತಿಕಾವಶೇಷದಿಂದಲೂ ನಾವು ದಿನನಿತ್ಯದ ರಸವನ್ನು ಪಡೆಯುತ್ತಿದ್ದೇವೆಂದು ಲಕ್ಷದಲ್ಲಿಡಬೇಕು. ಅವರ ಚಿತಾಭಸ್ಮಸತ್ಯಾಂತ—ನದಿಯಲ್ಲಿ, ಕೂಡಲಲಿ, ಕೊಳದಲ್ಲಿ, ಸರದಲ್ಲಿ, ಕಡಲಲ್ಲಿ, ತೀರ್ಥದಲಿ, ನಾಡು ಹೊರನಾಡಿನಲ್ಲೆಲ್ಲ ಕೂಡಿ, ಗಾಳಿ ಸುಳಿವಲ್ಲೆಲ್ಲ ಸುಳಿದು, ಹಸುರು, ಚಿಗುರು, ಹೂ, ಕಾಯಿ, ಹಣ್ಣು, ತೆನೆ, ಕವಿತೆಯ ಕೆಚ್ಚಲ ಹಾಲಾಗಿ—ಜನ್ಮಜನ್ಮಾಂತರ ಪ್ರವಹಿಸುತ್ತದೆ—ಅವರ ಹಸ್ತಸ್ಪರ್ಶದಿಂದ ನಿಜವಾದ ಮಾನವದೇಹ ಪುನಃ ಕೇವಲ ಮಣ್ಣಿನ ದೇಹವಾಗದಂತೆ ಪ್ರಯತ್ನಿಸೋಣ— ಅಂದು ಮಾರ್ಗದರ್ಶಕರಾದ ಕನ್ನಡ ಕವಿಗಳು—ಇಂದೂ ದಾರಿ ತೋರಲಿ



ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ

ಭರದಿಂದ ಸಾಗುತ್ತಿರುವ ರಾಷ್ಟ್ರದ ಆರ್ಥಿಕ
ಅಭಿವೃದ್ಧಿಯಲ್ಲಿ ರಸ್ತೆಸಾರಿಗೆಯು ಅತ್ಯಂತ
ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ.



ರಾಷ್ಟ್ರದ ಒಂದು ಮೂಲೆಯಿಂದ ಇನ್ನೊಂದು
ಮೂಲೆಗೆ ಸರಕುಗಳನ್ನು ಮಿತವ್ಯಯವಾಗಿಯೂ ತೀವ್ರವಾಗಿಯೂ
ಹಾಗೂ ಸುರಕ್ಷಿತವಾಗಿಯೂ ಸಾಗಿಸಲು ಈಗ್ಗೆ ಶಕ್ಯವಾಗಿದೆ.

ಕಾಳೇಜ ಟ್ರಾನ್ಸಪೋರ್ಟ ಸರ್ವೀಸವು

ಸಾಬೂನುಗಳು, ಡಾಲ್ಡಾ, ಟಾಯಿಲೆಟರೀಜ ಹಾಗೂ
ಪೆಟ್ರೋಲಿಯಂ ಪದಾರ್ಥಗಳ ಬಹುಭಾರವಾದ ಸರಕುಗಳನ್ನು
ಮುಂಬಯಿ ಯಿಂದ ದಕ್ಷಿಣದ ಪ್ರಮುಖ ನಗರಗಳಿಗೆ
ಹಾಗೂ ಮಹಾರಾಷ್ಟ್ರದಲ್ಲಿಯ ಚಿಕ್ಕ ಹಾಗೂ ದೊಡ್ಡ ನಗರಗಳಿಗೆ
ಪ್ರತಿದಿನವೂ ಸಾಗಿಸುತ್ತ ತನ್ನ ಪಾಲಿನ ಕರ್ತವ್ಯವನ್ನು
ನಿರ್ವಹಿಸುತ್ತದೆ.

ಈ ಕೆಳಗಿನವುಗಳಿಗೆ ಟ್ರಾನ್ಸಪೋರ್ಟ ಕಂಟ್ರಾಕ್ಟರರು :

ಮೆ. ಹಿಂದುಸ್ಥಾನ ಲೀವರ ಲಿ.,
ಮೆ. ಬರ್ಮಾ ಶೆಲ್ ಕಂ. ಲಿ.,

ಕಾಳೇಜ ಟ್ರಾನ್ಸಪೋರ್ಟ ಸರ್ವೀಸ್

೬೩-೬೫ ಡಾ. ಮಹೇಶ್ವರೀ ರೋಡ, ಮುಂಬಯಿ-೯

ಒಡೆಯರು: ರಘುನಾಥ ಜಿ. ಕಾಳೆ,
ಬಿ.ಕಾಂ.

ಫೋನ ನಂ. c/o 71485

ವ್ಯಕ್ತಿ ಬೆಳೆದರೆ ಮಾತ್ರ

ಇನ್ನೊಬ್ಬರಂತೆ ತಾನಾಗಬೇಕು ಎಂಬ ಮನೋಭಾವನೆಯೊಂದಿಗೆ ಅವರ ನಡೆ-ನುಡಿಗಳೇ ತಮ್ಮವು ಎಂದು ಬೆಳಸಿಕೊಳ್ಳುವ ವೃತ್ತಿ ಈಗೀಗ ಬೆಳೆಯತೊಡಗಿರುವುದು. ನಮ್ಮ ಧುರೀಣರಾದರೂ ಅದಕ್ಕೆ ಪ್ರಚೋದನೆ ಕೊಡುವವರೇ. ಆದರೆ ಇದರಿಂದ ಅನುಕರಣೆ-ಮನೋರಾಜ್ಯಗಳು ಬೆಳೆಯುವವೇ ಹೊರತು ವ್ಯಕ್ತಿಯೂ ಬೆಳೆಯುವದಿಲ್ಲ, ದೇಶವೂ ಬೆಳೆಯುವದಿಲ್ಲ. ಅನೇಕ ಅಪಚಾರಗಳಿಗೆ ಎಡೆಮಾತ್ರದೊರೆಯುತ್ತಿದೆ. ರಾಜಕಾರಣದಲ್ಲಿಯೂ ಇದೇ ಅಂಶವು ಕಾಣಬರುತ್ತದೆ. ಇದೆಲ್ಲ ನಿವಾರಣೆಯಾಗಬೇಕಾದರೆ ಉಪಾಯವೇನೆಂಬುದನ್ನು ಲೇಖಕರು ಇಲ್ಲಿ ಚರ್ಚಿಸಿರುವರು.

ಶ್ರೀ ಶಿವರಾಮ ಕಾರಂತ
ಪುತ್ತೂರು

ಜೀವನದ ವಿವಿಧ ಮುಖಗಳಲ್ಲಿ ನಾವು ಪ್ರಗತಿಯನ್ನು ಕಾಣಬಹುದಾದ ಸಂದರ್ಭಗಳು ನಿತ್ಯ ವಿದ್ಯಮಾನಗಳಲ್ಲ. ಜೀವನದ ಯಾವುದೇ ಮುಖವಾಗಲಿ— ಅದು ಸಾಂಸ್ಕೃತಿಕ, ಆಧ್ಯಾತ್ಮಿಕ ಇಲ್ಲವೆ ಸಾಂಪತ್ತಿಕ ಅಥವಾ ಆರ್ಥಿಕವಾದ ವಿಚಾರಗಳಿಗೆ ಸಂಬಂಧ ಪಟ್ಟುದಿದ್ದರೂ ಅದನ್ನು ಒಂದು ನಾಗರಿಕತೆಯಲ್ಲಿ, ಜನವರ್ಗದಲ್ಲಿ ಕೆಲವೊಮ್ಮೆ ಕಾಣುತ್ತೇವೆ; ಕೆಲವೊಮ್ಮೆ ಕಾಣುವುದಿಲ್ಲ. ಕೆಲವು ಬಾರಿ ಒಂದೊಂದು ಕ್ಷೇತ್ರದಲ್ಲಿ ವಿಶೇಷವಾದ ಪ್ರಗತಿಯನ್ನು ಕಾಣುತ್ತೇವೆ; ಇನ್ನು ಕೆಲವು ಕಾಲ ಅವೇ ಜನಗಳ ಜೀವನ, ಮುಂದುವರಿಯದೆ ಇದ್ದಕ್ಕಿದ್ದಂತೆ ಕಾಲಹರಣ ಮಾಡುವ ಸ್ಥಿತಿಯನ್ನು ಕಾಣುತ್ತೇವೆ. ಕೆಲವೊಮ್ಮೆ ಈ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಬಹುದಾದಷ್ಟು ಅವನತಿಯನ್ನು ಕಾಣುತ್ತೇವೆ. ಇಂಥ ವಿಷಯಗಳಲ್ಲಿ ಹಿಂದಣ ಇತಿಹಾಸ ನಮಗೆ ಸ್ಥೂಲವಾಗಿ, ಒಂದು ಜನವರ್ಗದ ಇಲ್ಲವೆ ರಾಷ್ಟ್ರದ ಪ್ರಗತಿ ಎಂಥದಿತ್ತು-ಎಂದು ಸೂಚಿಸಬಲ್ಲುದು. ಆ ಪ್ರಗತಿಯೆಂಬುದು- ಆ ಜನವರ್ಗದ ಯಾವತ್ತು ವ್ಯಕ್ತಿಗಳು ಕೂಡಿ ಸಾಧಿಸಿದ ಯಶಸ್ಸಾಗಿರಲಾರದು. ಅದು ಆ ಕಾಲದ ವಿಹಂಗಮನೋಟ. ಚಾರಿತ್ರಿಕ ದಾಖಲೆಗಳು ವಿಶೇಷವಾಗಿ ದೊರೆಯುವಲ್ಲಿ ಒಂದೊಂದು ಕಾಲದಲ್ಲಿ ಅಂಥ ಪರಿಸ್ಥಿತಿಗೆ ಮಾರ್ಗದರ್ಶನ ಮಾಡಿದವರಾರೆಂದು ತಿಳಿಸುವುದೂ ಉಂಟು. ಅಂಥವರಲ್ಲಿ ಪ್ರಸಿದ್ಧ ತತ್ತ್ವಜ್ಞಾನಿಗಳು, ವೈಜ್ಞಾನಿಕರು ಕಲಾವಿದರು, ಉದ್ಯಮ, ವ್ಯಾಪಾರ ಮೊದಲಾದ ಕ್ಷೇತ್ರಗಳ ತಜ್ಞರೂ ಸೇರುತ್ತಾರೆ. ಇಂಥವರ ಮಾರ್ಗದರ್ಶನದಿಂದ, ಒಂದು ಜನವರ್ಗಕ್ಕೆ ಸೇರಿದ ಪ್ರಜೆಗಳು ಪ್ರಯೋಜನ ಪಡೆಯುವಷ್ಟು ಉತ್ಸುಕರಾಗಿ, ಕಾರ್ಯಪ್ರವರ್ತರಾಗಿದ್ದಷ್ಟು ಕಾಲ ಆಯಾ ಕ್ಷೇತ್ರದಲ್ಲಿ ತುಂಬ ಪ್ರಗತಿಯನ್ನು ಕಾಣುತ್ತೇವೆ. ಧಾರ್ಮಿಕ ಕ್ಷೇತ್ರದಲ್ಲಿ ದಾರ್ಶನಿಕರೋ, ಪ್ರವಾದಿಗಳೋ, ತಮ್ಮ ವ್ಯಕ್ತಿ ವಿಚಾರಸರಣಿಯಿಂದ ಸುತ್ತಣ ಜನಗಳ ಮನಸ್ಸನ್ನು ಪ್ರಚೋದಿಸಿ, ಮಾರ್ಗದರ್ಶನ ಮಾಡಬಹುದು. ಉಪನಿಷತ್ತು-ಯುಗದ ಋಷಿಗಳು, ಗ್ರೀಕ್ ದಾರ್ಶನಿಕರು ಬುದ್ಧ, ಯೇಸುಕ್ರಿಸ್ತರಂಥ ಪ್ರವಾದಿಗಳು ಶಂಕರಾಚಾರ್ಯರಂಥ ವಿಚಾರವೇತ್ತರು— ತಂತಮ್ಮ ಕಾಲದಲ್ಲಿ ಹಬ್ಬಿದ ಅಜ್ಞಾನದ ಕತ್ತಲನ್ನು ಕತ್ತರಿಸಬಲ್ಲ ನವೀನ ವಿಚಾರಸರಣಿಗಳಿಂದ, ತಮ್ಮ ಸುತ್ತಣ ಜನಗಳ ಮನಸ್ಸನ್ನು ಕೆರಳಿಸಿದರು, ಬುದ್ಧಿಗಳನ್ನು ಪ್ರಚೋದಿಸಿದರು. ಜನರು ಧಾರ್ಮಿಕ ಕ್ಷೇತ್ರಗಳಲ್ಲಿ ಕಾರ್ಯ-ಪ್ರವೃತ್ತರಾಗುವಂತೆಯೂ ಮಾಡಿದರು. ಅಂಥವರನ್ನು, ನಾಡಿನ ಸಾಕಷ್ಟು ಜನ ಹಿಂಬಾಲಿಸಿದರು. ತಿಳಿದು ಹಿಂಬಾಲಿಸಿದವರು ನಾಲ್ಕು ಮಂದಿಯಾದರೆ, ತಿಳಿಯದೆ ತಲೆದೂಗಿದವರ ಸಂಖ್ಯೆ, ಅನುಸರಿಸಿದವರ ಸಂಖ್ಯೆ, ನಾಲ್ಕು ಸಾವಿರವಾಗಿರಲೂಬಹುದು; ನಾಲ್ಕು ಲಕ್ಷವೂ ಆಗಿರಬಹುದು. ಹೇಳಿದ ಪ್ರವಾದಿಗಳೂ ಮಾರ್ಗದರ್ಶನ ಮಾಡಿದ ದಾರ್ಶನಿಕರೂ ಅಥವಾ ಅವರನ್ನರಿತು ಅಂಥ ವಿಚಾರ ಸರಣಿಗಳಿಗೆ ಪ್ರಚಾರಕರಾದ ವ್ಯಕ್ತಿಗಳೂ ಬದುಕಿದ್ದಷ್ಟು ಕಾಲ ಜನಗಳಲ್ಲಿ, ಸಾಕಷ್ಟು ಧರ್ಮ ಜಾಗೃತಿಯುಂಟಾದುದುದನ್ನು ಅಂಥಕಾಲಗಳಲ್ಲಿ ಕಾಣುತ್ತೇವೆ. ಅನಂತರ ಅದೇ ಜನವರ್ಗದಲ್ಲಿ, ಅದೇ ದೇಶದಲ್ಲಿ ಆರಂಭದ ಚುರುಕು, ಕಾರ್ಯಪ್ರವೃತ್ತಿ ಮಾಯವಾಗುತ್ತದೆ. ಆದರೆ ಅಂತಹ ಮತಗಳ ಅನುಯಾಯಿಗಳ ಸಂಖ್ಯೆ ಬೆಳೆಯಲೂಬಹುದು; ಆಚಾರ್ಯಪುರುಷರ ಪೂಜೆ ಹೆಚ್ಚಬಹುದು; ಅವರೆಂದ ವಚನ ಗ್ರಂಥಗಳ ಪ್ರವಚನ, ಮೆರವಣಿಗೆಗಳೂ ನಡೆಯಬಹುದು. ಆದರೆ ಜನಜಾಗೃತಿ ಉಳಿಯುವುದಿಲ್ಲ; ಹಿರಿಯರ ಉಪದೇಶಕ್ಕೂ ಆಚಾರಕ್ಕೂ ಇರುವ ನಡುವಣ ಅಂತರ ಬೆಳೆಯುತ್ತ ಹೋಗುತ್ತದೆ. ವಾಗಾಡಂಬರದಲ್ಲೇ ಕಾಲಯಾಪನೆಯಾಗುತ್ತದೆ.

ಕಲಾಕ್ಷೇತ್ರಗಳಲ್ಲಿ

ಕಲಾಕ್ಷೇತ್ರಗಳಲ್ಲೂ ಇದೇ ವಿದ್ಯಮಾನ ಕಾಣಿಸಬಹುದು. ಈಜಿಪ್ತಿನ ಚಿತ್ರಕಲಾ ವೈಭವ ಕೆಲವೇ ಶತಮಾನಗಳಿಗೆ ಸೀಮಿಸಲಾದದ್ದು. ಗ್ರೀಕ್‌ಶಿಲ್ಪ ಚೇತನಕಾರಿಯಾಗಿ, ತಮ್ಮ ಜನಗಳ ಅಲೌಕಿಕ ಭಾವನೆಗಳಿಗೆ, ಸುಂದರ ರೂಪು ಕೊಟ್ಟು, ಗಂಡು ಹೆಣ್ಣುಗಳ ವಿವಿಧ ರೀತಿಯ ಪ್ರತಿಮೆಗಳನ್ನು ಸೃಷ್ಟಿಸಿದ್ದು ಒಂದೆರಡು ಶತಮಾನಗಳಲ್ಲಿ ಮಾತ್ರವೇ. ಯುರೋಪಿನಲ್ಲಿ ಮಧ್ಯಯುಗ ಸರಿಯುವ ತನಕವೂ ಪ್ರಚಲಿತವಾಗಿದ್ದ ಸಾಮಾನ್ಯ ಜಾನಪದ ಸಂಗೀತದ ಮಂದಗತಿಯನ್ನು ಭೇದಿಸಿ, ಉಜ್ವಲ ನವಸೃಷ್ಟಿಗಳಾಗತೊಡಗಿದ್ದು ಕೆಲವೇ ಪ್ರಭಾವಶಾಲಿ ವ್ಯಕ್ತಿಗಳ ಪ್ರೇರಣೆಯಿಂದ. ಕ್ರಾಸ್, ಬಿಥೋವನ್, ಮೊಸಾರ್ಟ್ಂ, ವೇಗ್ನರ್ ಮೊದಲಾದವರ ಅಪ್ರತಿಮ ಸಷ್ಟಿಗಳಿಂದ ಆದೊಂದು ಬಿರುಗಾಳಿಯಂತೆ ಬೀಸಿದ ಅದ್ಭುತ ಪ್ರಗತಿ.

ಪುರಾತನ ಗ್ರೀಸಿನ ವೈಜ್ಞಾನಿಕ ಕುತೂಹಲ ಎರಿಸ್ಟಾಟಲ್‌ನಂಥ ಪ್ರಭಾವಶಾಲಿ ವ್ಯಕ್ತಿಗಳಿಂದ ತೊಡಗಿ, ಎರಡನೆಯ ತೊಲೆಮಿಯ ತನಕ ಸ್ಫುರಿಸಿ, ಬೆಳೆದು ವಿಸ್ತರಿಸಿದುದನ್ನು ಕಾಣುತ್ತೇವೆ. ಆ ಅವಧಿಯೊಳಗಾಗಿ ಗಣಿತದಲ್ಲಿ, ಖಗೋಲದಲ್ಲಿ, ದೃಕ್‌ಶಾಸ್ತ್ರದಲ್ಲಿ ಸಂಶೋಧನೆ ನಡೆಯಿಸಿದವರ ಸಂಖ್ಯೆ ಹಲವಾರು. ಮುಂದೆ ಗಣಿತಶಾಸ್ತ್ರ ಚೇತನ ತಾಳುವುದಕ್ಕೆ ಹೊಸ ಕ್ಷೇತ್ರಕ್ಕೆ ಧುಮುಕುವುದಕ್ಕೆ ಐನ್‌ಸ್ಟೀನ್‌ನಂಥ ಮೇಧಾವಿ ಹುಟ್ಟಬೇಕಾಯಿತು. ಪ್ಯಾಥೋಗೋರಸ್, ಯುಕ್ಲಿಡರ್ ಕಾಲದಿಂದ ಐನ್‌ಸ್ಟೀನನ ಕಾಲದ ತನಕ ಸಾಧಿಸಿದ ಪ್ರಗತಿ ಅಷ್ಟೊಂದು ಶೂನ್ಯವಲ್ಲವಾದರೂ ಗಣನೀಯವೂ ಅಲ್ಲ.

ವಿಜ್ಞಾನವು ಇದನ್ನೇ ಹೇಳುತ್ತದೆ. ಗ್ರೀಕ್ ಮತ್ತು ಈಜಿಪ್ತಿನ ಮೇಧಾವಿಗಳ ಮಾರ್ಗದರ್ಶನ ಮರವೆಯಾಯಿತು— ಮುಂದಿನ ಜನಕ್ಕೆ ಜಗತ್ತಿನ ಶಕ್ತಿ ಮತ್ತು, ವಸ್ತುಗಳು ಎಂಥವು ಎಂದು ತಿಳಿಯಬಲ್ಲ ಕುತೂಹಲ ತಿರುಗಿ ತೊಡಗಬೇಕಾದರೆ ಹದಿನೈದು ಶತಮಾನಗಳು ಸರಿದುವು. ರೋಗರ್ ಬೇಕನ್, ಗೆಲಿಲಿಯೋ, ಡವಿನ್ಸಿ, ನೂಟನ್, ಕ[illegible] ಲಿನೆ, ಡಾರ್ವಿನ್ ಮೊದಲಾದವರು ಹುಟ್ಟಿ, ಹಳೆಯ ನಂಬಿಕೆಗಳಿಗೆ ಇದಿರಾಗಿ, ಸಂಶೋ

ಧನೆಗಳಿಂದ ಪ್ರಯೋಗಗಳಿಂದ ಹೊಸ ಸಿದ್ಧಾಂತಗಳನ್ನು ಕಟ್ಟಬೇಕಾಯಿತು.

ಯಂತ್ರವಿಜ್ಞಾನದ ಪ್ರಗತಿಯಾದರೂ ಯುರೋಪಿನಲ್ಲಿ ಸ್ಫುರಿಸುವುದಕ್ಕೆ— ಈಚಿನ ಒಂದೆರಡು ಶತಮಾನಗಳು ಕಾರಣವಾದುವು. ವೈಜ್ಞಾನಿಕಸಾಧನೆಗಳಿಗೂ ಸಂಪತ್ತಿನ ಉತ್ಪಾದನೆಗಳಿಗೂ ಪರಸ್ಪರ ಸಂಬಂಧವನ್ನು ಕಂಡುಕೊಂಡು, ಅಲ್ಲಿನ ಪ್ರಾಜ್ಞರು ವಿವಿಧ ಕ್ಷೇತ್ರಗಳಲ್ಲಿ ದುಡಿದರು. ಈ ಕ್ಷೇತ್ರಗಳಲ್ಲಿ ಯುರೋಪು, ಅಮೇರಿಕ ದೇಶಗಳು ಅತಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದುದು ಕೇವಲ ಈಚಿನ ಒಂದೂವರೆ ಶತಮಾನಗಳಲ್ಲಿ.

ಇಲ್ಲಿ ನಾವು ಎರಡು ಸ್ಪಷ್ಟವಾದ— ಚಿತ್ರಗಳನ್ನು ಕಾಣಬಹುದು. ಒಂದು ನಾಡು ಇಲ್ಲವೆ ರಾಷ್ಟ್ರ ಇಲ್ಲವೆ ಜನವರ್ಗ ಇದ್ದ ಸ್ಥಿತಿಯಿಂದ ಮುಂದಣಸ್ಥಿತಿಗೆ ಹೋದಂಥ ನಿದರ್ಶನಗಳನ್ನು ಎಣಿಸಿದರೆ, ಅದಕ್ಕೆ ಕಾರಣರಾದವರು ಕೆಲವೇ ಪ್ರಭಾವಶಾಲಿಗಳೆಂಬುದನ್ನು. ಅವರ ಅಪ್ರತಿಮ ಬುದ್ಧಿಶಕ್ತಿ, ಸುತ್ತಣ ಆವರಣದ ನಂಬಿಕೆ, ಕಟ್ಟಳೆ ಮೊದಲಾದುವುಗಳೊಂದೊಂದನ್ನು ಪರಿಗಣಿಸದೆ ಪ್ರಕಟವಾಯಿತು. ಅದು ಕೆಲವೇ ವ್ಯಕ್ತಿಗಳ ಕಾಣಿಕೆ- ಎಂಬುದು ಸ್ಪಷ್ಟ. ಅಂಥ ಪ್ರತಿಭಾಶಾಲಿ ವ್ಯಕ್ತಿಗಳು ಹುಟ್ಟದುದರಿಂದಲೇ, ಆ ವ್ಯಕ್ತಿಗಳ ವಿಚಾರಸರಣಿಯ ಪ್ರಭಾವ ಜನಸಾಮಾನ್ಯದ ಮೇಲೆಯೂ ಬಿತ್ತು. ಜನರೂ ಕಣ್ತೆರೆದರು, ನೋಡಿದರು; ನಂಬಿದರು. ತಾವೂ ವಿಚಾರ ಮಾಡಿ ಮಾನಸಿಕವಾಗಿ ಒಪ್ಪಿಕೊಂಡು, ತಮ್ಮ ಹಿರಿಯರ ಹಾದಿಯನ್ನು ತುಳಿದವರೂ ಉಂಟು. ಹಾಗೆ ತುಳಿದವರ ಸಂಖ್ಯೆ ವಿಶೇಷವಾಗಿದ್ದ ಕಾಲದಲ್ಲೇ — ಖಗೋಲ, ಗಣಿತ ಮೊದಲಾದ ವಿಜ್ಞಾನಗಳು, ಗ್ರೀಸಿನಿಂದ ಈಜಿಪ್ತಿಗೆ ಹೋದುವು; ಅಲ್ಲಿ ಒಂದೆರಡು ಶತಮಾನಗಳ ಕಾಲ ಮೆರೆದುದನ್ನೂ ಕಾಣುತ್ತೇವೆ; ಮುಂದುವರಿದುದನ್ನೂ ಕಾಣುತ್ತೇವೆ. ಮೇಧಾವಿಗಳನ್ನು ತಿಳಿದು, ಅದೇ ದಾರಿಯಲ್ಲಿ ನಡೆಯುವವರ ಸಂಖ್ಯೆ ಹೆಚ್ಚಾದಾಗ ಮಾತ್ರವೇ ಪ್ರಗತಿ ಕಾಣಿಸುವುದು. ನಾಡಿನ ಜನರಿಗೆ ಹೊಸ ಚೈತನ್ಯವನ್ನೂ ಪ್ರೇರಣೆಯನ್ನೂ- ಕೊಟ್ಟವರು ಎಷ್ಟೇ ದೊಡ್ಡವರಿರಲಿ, ಅವರ ವಿಚಾರಸರಣಿಯನ್ನು, ಅರಗಿಸಿಕೊಳ್ಳದೆ, ಬರಿದೆ ಮೆಚ್ಚಿ ತಲೆದೂಗಿದ್ದ ಕಾಲದಲ್ಲಿ, ಜನರಾಗಲೀ ದೇಶವಾಗಲೀ ದೊಡ್ಡದಾಗಲಿಲ್ಲ; ಆಗಲಾರದು.

ಪಾಶ್ಚಾತ್ಯ ದೇಶಗಳಲ್ಲಿ

ಇಂದು ಪಾಶ್ಚಾತ್ಯ ದೇಶಗಳಲ್ಲಿ- ವಿಜ್ಞಾನದ ಓಟ ಎಂಥದೆಂಬುದನ್ನು ಪರಿಶೀಲಿಸಿದ್ದಾದರೆ, ನಮಗೆ ಅತ್ಯಂತ ಹೆಚ್ಚಿನ ಬೆರಗು ಕಾಣಿಸುತ್ತದೆ. ಭೌತಶಾಸ್ತ್ರ, ತಂತ್ರಶಾಸ್ತ್ರ, ಜೀವಾಜೀವರಸಾಯನಶಾಸ್ತ್ರ, ಜೀವಶಾಸ್ತ್ರ, ವೈದ್ಯಶಾಸ್ತ್ರ- ಇಂಥ ವಿವಿಧ ಕ್ಷೇತ್ರಗಳಲ್ಲಿ ಈಚಿನ ಐವತ್ತು ವರ್ಷಗಳಲ್ಲಿ ಸಾಧಿಸಿದ ಪ್ರಗತಿ ಎಂಬುದು ಅದಕ್ಕಿಂತ ಪೂರ್ವದ, ಯಾವತ್ತೂ ಮಾನವಇತಿಹಾಸದ ಪ್ರಗತಿಯನ್ನು ಹತ್ತು, ನೂರುಪಾಲು ಮಿಗಿಸುವಂಥದು. ಇದು ಹೇಗೆ ಸಾಧ್ಯ- ಎಂಬ ಪ್ರಶ್ನೆ ಬಂದೇ ಬರುತ್ತದೆ. ಇಂತಹ ಆವೇಗ ಯಾವುದೇ ಕ್ಷೇತ್ರಗಳಲ್ಲಿ ಕಾಣಿಸಬೇಕಾದರೂ ಕೇವಲ ನಾಲ್ಕಾರು ಜನರ ಮಾರ್ಗದರ್ಶನದಿಂದ ಅದು ಸಾಧಿಸಲಾರದು. ಬುದ್ಧಿಕ್ಷೇತ್ರಕ್ಕೆ ಸಂಬಂಧಿಸಿದ ಈ ಪಥದಲ್ಲಿ, ದುಡಿಯುವವರ ಸಂಖ್ಯೆ, ಅಷ್ಟೇ ಅಧಿಕ ಪ್ರಮಾಣದಿಂದ ಬೆಳೆಯಬೇಕಾಗುತ್ತದೆ. ಮೇಲೆ ಹೇಳಿದ ವಿವಿಧ ಕ್ಷೇತ್ರಗಳಲ್ಲಿ, ಯುರೋಪು, ಅಮೇರಿಕ ದೇಶಗಳಲ್ಲಿ ಇತ್ತೀಚೆಗೆ ದುಡಿಯುತ್ತಿರುವವರ ಸಂಖ್ಯೆ ಅದ್ಭುತವಾಗಿ ಬೆಳೆದುದರಿಂದಲೇ ಇದು ಸಾಧ್ಯವಾಗಿದೆ. "ಗುರುದೇವರು ಹೀಗೆ ಹೇಳಿದರು" ಎಂದು ತಲೆದೂಗುವ ಶಿಷ್ಯವೃಂದಕ್ಕೂ — ಇದಕ್ಕೂ ವಿಶೇಷ ಅಂತರವಿದೆ. ಇಲ್ಲಿ ಶಿಷ್ಯರು ಗುರುವಿನಂತೆ ತೀಕ್ಷ್ಣ ಬುದ್ಧಿಯವರಾಗಿದ್ದು ತಂತಮ್ಮ ಪಾಲಿನ- ಹೊಸ ಸಂಶಯಗಳಿಗೆ, ಹೊಸ ಪ್ರಶ್ನೆಗಳಿಗೆ, ಹೊಸ ಸಮಸ್ಯೆಗಳಿಗೆ ತಾವು ತಾವೇ ಪ್ರತ್ಯುತ್ತರವನ್ನು ಕಂಡುಹಿಡಿಯಬೇಕಾಗಿದೆ. ವಿಜ್ಞಾನಕ್ಷೇತ್ರ 'ಹೌದಪ್ಪ'ಗಳ ಕ್ಷೇತ್ರವಲ್ಲ. ಅದು 'ಯಾಕೆ?' ಎಂದು ಹೆಜ್ಜೆ ಹೆಜ್ಜೆಗೂ ಕೇಳುವವರ ಕ್ಷೇತ್ರ. ಪ್ರಯೋಗಕ್ಕೆ ಗುರಿಯಾಗದ ಪ್ರಮಾಣವಚನಗಳೆಲ್ಲ ವಿಚಾರಸರಣಿ ತರ್ಕಗಳು- ಪ್ರಯೋಗಶಾಲೆಗಳಲ್ಲೇ ಪ್ರತ್ಯಕ್ಷ ಪ್ರಮಾಣಕ್ಕೆ ಅವಕಾಶವನ್ನು ಕೊಡಬೇಕಾಗುತ್ತದೆ. ಅಲ್ಲಿ ಅಂಧಶ್ರದ್ಧೆಯ ಪ್ರಶ್ನೆಯೇ ಇಲ್ಲ.

ಯುರೋಪು ಇಲ್ಲವೆ ಅಮೇರಿಕ ರಾಷ್ಟ್ರಗಳು ಮುಂದುವರಿದರೆ, ಅದರಿಂದ ನಮ್ಮ ದೇಶದಲ್ಲಿ ತನ್ನಂತೆಯೇ ಪ್ರಗತಿಸಾಧನೆಯಾಗುವುದಿಲ್ಲ. ಪ್ರಗತಿ ಅಂಧಶ್ರದ್ಧೆಯಲ್ಲ; ಆಚರಣಶೂನ್ಯ ಜೀವನವಲ್ಲ. ಅದು ಪ್ರತಿಯೊಬ್ಬನೂ ನಡೆದೇ ಹೋಗಬೇಕಾದ ದಾರಿ. ಅದರಲ್ಲಿಯೂ ಸ್ಪರ್ಧೆ ಬಲವಾಗಿರುವಾಗ- ಇವತ್ತಿನ ಸಂಶೋಧನೆ, ನಾಳೆ ಹಳತೆನಿಸಬಹುದು. ಅನ್ಯ ದೇಶದ ವಸ್ತು ಒಡವೆಗಳನ್ನು ತಂದು, ಅದರಿಂದ ನಮ್ಮ ನಾಡಿನ ಪ್ರಗತಿ ಸಾಧಿಸಬಹುದೆಂಬ- ಭ್ರಮೆಯನ್ನು ನಾವು ಎಷ್ಟು ಬೇಗ ಬಿಡುತ್ತೇವೆಯೋ ಅಷ್ಟು ಕ್ಷೇಮವಿದೆ. ಅಲ್ಲಿಂದ ಇಂದು ಸಾಲವಾಗಿ ತಂದು ಹೂಡಿದ ಯಂತ್ರ ಸ್ಥಾವರಗಳು, ಉತ್ಪಾದನೆ ತೊಡಗುವಾಗ, ಅಲ್ಲಿ ಮತ್ತೊಂದೇ ಮನ್ವಂತರ ತೊಡಗಿರುತ್ತದೆ. ನಾವು ಯಂತ್ರ ನಿರ್ಮಾಪಕರೂ ಸಂಶೋಧಕರೂ ಆದರೇನೇ ಈ ವೈಜ್ಞಾನಿಕಯುಗದಲ್ಲಿ ಬದುಕಬಲ್ಲೆವು. ಅಂಥ ನಿರ್ಮಾಣ, ಸಂಶೋಧನ ಚಟುವಟಿಕೆಗಳು ನಮ್ಮ ದೇಶದಲ್ಲಿ ಯಾವ ಪ್ರಮಾಣದಲ್ಲಿ ಸಾಗುತ್ತಿವೆ?

ಭಾರತ- ಈತನಕ ಆರಾಧಕರ ದೇಶವಾಗಿತ್ತು, ವ್ಯಕ್ತಿ ಪೂಜೆಯಲ್ಲಿ ನಾವು ಪಾರಂಗತರು, ಅಂಥ ದೇಶದಲ್ಲಿ, ಹತ್ತೆಂಟು ಮಂದಿ, ಆರು ಅಡಿ ಗಾತ್ರದ ವ್ಯಕ್ತಿಗಳಿದ್ದರೆ, ಅವರನ್ನು ಕಂಡೇ, 'ನಾವು ಆರಡಿ ಗಾತ್ರದವರಾಗುತ್ತೇವೆ' ಎಂದು ತಿಳಿಯುವ ಜನ ಇಲ್ಲಿ ತುಂಬಿಕೊಂಡಿದ್ದಾರೆ. ನಮ್ಮ ಆರಡಿ ಗಾತ್ರದ ಮುಂದಾಳುಗಳು ಮತಾಚಾರ್ಯರಾಗಿರಲಿ, ರಾಜಕೀಯ ಪುಢಾರಿಗಳಾಗಿರಲಿ, ಇತರ ಕ್ಷೇತ್ರಗಳ ಮುಂದಾಳುಗಳಾಗಿರಲಿ, 'ತಮ್ಮ ಹಿಂಬಾಲಕರ ಸಂಖ್ಯೆ ಕೋಟಿಗಟ್ಟಲೆ ಇದೆ' ಎಂಬ ಕಾರಣದಿಂದ, ನಾಡನ್ನು ಮುನ್ನಡೆಯಿಸುವುದು ಕನಸಿನ ಮಾತು.

ಪ್ರಗತಿ ಸಾಧಿಸಬೇಕಾದರೆ . . .

ನಾವು ಪ್ರಗತಿಯನ್ನು ಯಾವುದೇ ಕ್ಷೇತ್ರದಲ್ಲಿ ಸಾಧಿಸಬೇಕೆಂದು ಬಯಸುವುದಾದರೆ- ಜನತೆಯ ಅಂಧಶ್ರದ್ಧೆಯ ಮೇಲೆ, ವಿವೇಚನಾರಹಿತ ವಿಧೇಯತೆಯ ಮೇಲೆ, ಅದನ್ನು ಸಾಧಿಸಲಾರೆವು. ಎಲ್ಲ ದೇಶಗಳಲ್ಲೂ ಎಲ್ಲ ಕಾಲದಲ್ಲೂ- ಇಂಥ ಜನ ಇದ್ದೇ ಇರುತ್ತಾರೆ. ಇವರಲ್ಲಿ ಅಕ್ಷೇಪವೆಂಬಂತೆ ಮೇಧಾವಿಗಳೂ ಮಾರ್ಗದರ್ಶಕರೂ ಹುಟ್ಟುವುದು. ಈ ಮಾರ್ಗದರ್ಶಕರ ವ್ಯಕ್ತಿತ್ವ ವಿಸ್ತೃತವಾಗಿ, ಪರಿಪುಷ್ಟವಾಗಿ ಬೆಳೆದುದಕ್ಕೆ ಸಮನಾಗಿ, ಜನತೆಯ ವ್ಯಕ್ತಿತ್ವವೂ ಬೆಳೆಯದೆಹೋದರೆ ಪ್ರಗತಿ ಸಾಧಿಸಲಾರದು. ವ್ಯಕ್ತಿತ್ವ ಬೆಳೆಯುವುದೆಂದರೆ ತಾನು ಯೋಚಿಸಬಲ್ಲ ಶಕ್ತಿ, ತಾನಾಗಿ ತನ್ನ ಸುತ್ತಲಿನ ಪರಿಸ್ಥಿತಿಗಳನ್ನು ಪರಿಶೀಲಿಸುವ ಶಕ್ತಿ ತನ್ನ ಸಮಸ್ಯೆಗಳಿಗೆ ತಕ್ಕ ನಿವಾರೋಣೋಪಾಯವನ್ನು ತಾನು ಕಂಡುಹಿಡಿಯುವ ಶಕ್ತಿ- ಇಂಥವನ್ನು ಹೆಚ್ಚಿಸಿಕೊಳ್ಳುವುದು. ಇಂಥ ವ್ಯಕ್ತಿತ್ವದ ಬೆಳವಣಿಗೆಗೆ ಇತಿಮಿತಿ ಇಲ್ಲ. ಅಂಥ ಜನಗಳ ಸಂಖ್ಯೆ ನಾಡಿನಲ್ಲಿ ಎಷ್ಟೆಷ್ಟು ಹೆಚ್ಚುತ್ತದೋ ಅಷ್ಟೊಂದು ಹೆಚ್ಚಿನ ಭರದಿಂದ ಕಾರ್ಯಗಳು ಸಾಧ್ಯವಾಗುತ್ತವೆ. ನಾಲ್ಕೆಂಟು ಮಂದಿ ಬೆಳೆದುದರಿಂದ, ಯಾವುದೇ ದೇಶ ದೊಡ್ಡದಾಗಲಾರದು. ಆ ದೇಶದ ಜನಗಳ ಜೀವನಕ್ಕೆ ಸಂಬಂಧಿಸಿದ, ಮನೋವ್ಯಾಪಾರಗಳಿಗೆ ನಿತ್ಯವ್ಯವಹಾರ ಮೊದಲಾದ ಒಂದೊಂದು ಕ್ಷೇತ್ರಗಳಲ್ಲೂ ಅಂಥವರ ಸಂಖ್ಯೆ ಹೆಚ್ಚಾಗಿ ಕಾಣಿಸಬೇಕು. ಇದು ಕಾಣಿಸದೆ ಹೋದರೆ- ಕಲೆ ದೊಡ್ಡದಾಗದು; ಧರ್ಮ ದೊಡ್ಡದಾಗದು, ರಾಜಕೀಯ, ವ್ಯವಹಾರ, ಸಂಪತ್ತು- ಇವಾವೂ ಬೆಳೆಯಲಾರವು.

ಇಂದು ನಮ್ಮ ನಾಡಿನಲ್ಲಿ ಯಾವ ಚಿತ್ರವನ್ನು ಕಾಣುತ್ತಿದ್ದೇವೆ?

ಮತ, ಧರ್ಮ ಮೊದಲಾದ ತಾತ್ವಿಕ ವಿಷಯಗಳಲ್ಲಿ "ನನ್ನ ವಿಚಾರಸರಣಿ ಇಂಥದು; ಅದಕ್ಕೆ ಇಂಥದು ಕಾರಣ" ಎನ್ನುವವರ ಸಂಖ್ಯೆಯಾದರೂ ಎಷ್ಟಿದೆ? ಅದರ ಬದಲು ಯಾವುದೋ ಒಂದು ಪ್ರಸಂಗದಲ್ಲಿ, ಯಾರೋ ಕೆಲವು ಮಹಾನುಭಾವರು, ಹೇಳಿದ

ಯಾವುದೋ ಮಾತುಗಳನ್ನು — ಎಲ್ಲೆಲ್ಲೂ ಉದಾಹರಿಸುವವರೇ ಬಹಳ. ಯಾವ ವಿಷಯದ ಚರ್ಚೆಗೆ ಹೋದರೂ 'ಅವರು ಹಾಗೆ ಹೇಳಿದ್ದಾರೆ' 'ಇವರು ಹೀಗೆ ಹೇಳಿದ್ದಾರೆ,- ಎಂಬ ಶ್ಲೋಕಗಳ ಸುರಿಮಳೆಯನ್ನು ಕಾಣುತ್ತೇವೆ. ಉದಾಹೃತರಾದ ವ್ಯಕ್ತಿಗಳೂ ಘನವೆತ್ತವರಿರಬಹುದು. ಉಕ್ತಿಗಳೂ ಚೆನ್ನಾಗಿರಬಹುದು. ಅವರ ವೇಷಭೂಷಣಗಳನ್ನು ನಾವು ತೊಟ್ಟು, ಅವರ ಮಾತುಗಳನ್ನು ನಾವು ಕಂಠಪಾಠ ಮಾಡಿ, ನಾವೇ ಅವರಾಗಲಾರೆವು. ಆ ನಾಟಕ ಬಹಳ ಸುಲಭ. ಆತ್ಮವಂಚನೆಯಿಂದ ತೊಡಗುವ ಅದು, ಜನವಂಚನೆಯಲ್ಲಿ ಕೊನೆಗೊಳ್ಳುತ್ತದೆ. ತನ್ನಲ್ಲಿ 'ನಾನು' ಎಂಬ ಪದಾರ್ಥವನ್ನು ಗುರುತಿಸಿ, ಅದರ ತೂಕ ತಿಳಿದು, ಶಕ್ತಿಗಳನ್ನು ಬೆಳೆಯಿಸಿ ಪ್ರಕಟಿಸುವದಕ್ಕೆ ಯಾರೂ ನಾಚಿಕೆಪಡಬೇಕಾಗಿಲ್ಲ. ನಮ್ಮ ಗಾತ್ರಕ್ಕೆ ಸಮನಾದ ಮನ್ನಣೆ ನಮಗೆ ದೊರೆತರೆ ಸಾಲದೇ? ಮಹಾಗ್ರಂಥಗಳೂ ಮಹಾಪ್ರವಾದಿಗಳೂ ಲೋಕದ ಸ್ವತ್ತು. ಅವರಿಂದ, ಅವುಗಳಿಂದ, ನಾವು ಬೇಕಷ್ಟು ಲಾಭ ಪಡೆಯಬಹುದು. ಹಾಗೆ ಪಡೆಯಬಲ್ಲ ವ್ಯಕ್ತಿ, 'ತಾನಾ'ಗಿ ಉಳಿಯಲಾರನಾದರೆ, ಆತ ಹೊತ್ತುಕೊಂಡ ಗ್ರಂಥಗಳ ಹೊರೆ, ಅವನ ಜೀವನಕ್ಕೂ ನೆರವಾಗಲಾರದು.

ಸಾಹಿತ್ಯಕಲಾಕೃತಿಗಳ ವಿಚಾರವಾದರೂ ಹೀಗೆಯೇ. ಈ ಕ್ಷೇತ್ರಗಳಿಗೆ ಸಂಬಂಧಿಸಿದ ಪೂರ್ವಕೃತಿಗಳಿವೆ, ಸಂಪ್ರದಾಯಗಳಿವೆ, ಶೈಲಿಗಳಿವೆ, ಶಾಸ್ತ್ರಗಳೂ ಇವೆ. ಕಲಾವಿದರ ಮತ್ತು ಸಾಹಿತಿಗಳ ಸ್ವಂತ ಶಕ್ತಿ, ಪ್ರತಿಭೆ, ಕಲಾಸೃಷ್ಟಿಗಳಿಗೆ ಒದಗಬೇಕಾದ ಸ್ಫೂರ್ತಿ, ಅವರವರ ಪರಿಶೀಲನೆ ಮತ್ತು ಅನುಭವಗಳಿಂದ ಬರಬೇಕು. ಅವುಗಳ ಪ್ರಾಮಾಣಿಕತೆ, ಒತ್ತಡ- ಅಂಥ ಸೃಷ್ಟಿಗಳಿಗೆ ಕಾರಣವಾಗಬೇಕು. ದೀರ್ಘಕಾಲ ಕೀರ್ತಿಯನ್ನು ಪಡೆದ ಕೃತಿಗಳೆಂಬವು ಇಂಥವು. ಸ್ವಂತ ವ್ಯಕ್ತಿತ್ವವಿಲ್ಲದ ಅನುಕರಣಶೀಲರಿಂದ, ಉಜ್ವಲ ಕಲಾಸೃಷ್ಟಿ ಎಂದೂ ಉಂಟಾಗಿಲ್ಲ. ನಮ್ಮ ಪ್ರಚಲಿತ ಸಾಹಿತ್ಯವನ್ನು ನೋಡೋಣ. ಬರೆಯಲೇಬೇಕೆಂಬ ಆತ್ಮಪ್ರೇರಣೆ,ಒತ್ತಡ, ಅದಕ್ಕೆ ಬೇಕಾದ ಅನುಭವ, ಸಾಹಸ—ಯಾವ ಪ್ರಮಾಣದಲ್ಲಿ ಕಾಣಿಸುತ್ತಿದೆ? ಅನುಕರಣೆಯ ಪ್ರಮಾಣವೇನು? ಮೂಲ ಬರಹಗಾರರ ಲೇಖನಗಳು ಹೆಸರನ್ನಡಗಿಸಿ "ಆಧಾರದಿಂದ" ಎಂದು ತಲೆಮರೆಸಿಕೊಂಡು ಬರೆಯುವವರ ಸಂಖ್ಯೆ ಎಷ್ಟಿದೆ? ಹೆರರ ಮನೆಯ ಎಂಜಲು ನಾವು ಅಟ್ಟ ಮೃಷ್ಟಾನ್ನವಾಗಲಾರದು. ಅದು ನಾವೇ ಬೇಯಿಸಿದ ಗಂಜಿನೀರಿನಂತಾದರೂ ಇರಬೇಡವೇ! ನಾವು ಅನ್ಯರಿಂದ ಪಡೆದ ಋಣವನ್ನು ಬಹಿರಂಗವಾಗಿ ಹೇಳಲು ನಾಚುವವರು ಎಂದಾದರೂ ಪ್ರಾಮಾಣಿಕ ಸೃಷ್ಟಿ ಮಾಡಬಲ್ಲರೇ?

ರಾಜಕೀಯದ ಸ್ಥಿತಿ

ರಾಜಕೀಯದ ಸ್ಥಿತಿ ಹೇಗಿದೆ? ಪ್ರಜಾಪ್ರಭುತ್ವದಲ್ಲಿ ಪ್ರಜೆ ಎಂಬ ವ್ಯಕ್ತಿ, ಮತದಾನದೊಡನೆ ತನ್ನ ಬುದ್ಧಿದಾನವನ್ನೂ ಮಾಡಿದಂತಿದೆ. ಅಂತಹ ಪ್ರಜಾಪ್ರಭುತ್ವ - ಎಷ್ಟು ಉಜ್ವಲವಾದೀತು? ಇಂದಿನ ರಾಜಕೀಯ ಮಾರ್ಗದರ್ಶನ, ಇಂದಿನ ಮತಸಂಪ್ರದಾಯಿಗಳ ಪ್ರವೃತ್ತಿಯನ್ನೇ ಅನುಸರಿಸಿದಂತಿದೆ. ಆಚಾರ್ಯರ ಸ್ಥಾನದಲ್ಲಿ ಪುಢಾರಿಗಳು ನಿಂತು, 'ನಾವು ಹೇಳಿದ್ದೇ ಸತ್ಯ. ನಂಬದಿದ್ದರೆ ನರಕಕ್ಕೆ ಹೋಗುತ್ತೀರಿ' ಎನ್ನುತ್ತಿದ್ದಾರೆ. ದೇಶದ ಆರ್ಥಿಕ, ಸಾಂಪತ್ತಿಕ, ವ್ಯಾವಹಾರಿಕ, ಸಾಮಾಜಿಕ ಸಮಸ್ಯೆಗಳು — ಎಲ್ಲರನ್ನೂ ಬಾಧಿಸತಕ್ಕವು. ಆ ಎಲ್ಲರ ಸ್ಥಿತಿ, ಶಕ್ತಿ, ಆಶೆ, ಅಭಿರುಚಿ, ಜೀವಂತಜನಗಳಲ್ಲಿ ಒಂದೇ ತೆರನಾಗಿರುವುದು ಅಶಕ್ಯ. ಭಾರತದ ಎಲ್ಲ ಜನಗಳ ಸಮಸ್ಯೆಗಳನ್ನು, ನಾಲ್ಕೆಂಟು ಮಂದಿ ಊಹಿಸಿ, ತಿಳಿದು ಪರಿಹರಿಸುವುದಾಗಲಿ, ಅಥವಾ ಪರಿಹಾರದ ದಾರಿ ಸೂಚಿಸುವುದಾಗಲಿ, ಅಸಾಧ್ಯದ ಮಾತು. ವಿವಿಧ ತೆರನ ಜನಗಳು ಇನ್ನಷ್ಟೇ ವಿವಿಧ ರೀತಿಯ ಜೀವನದ ದಾರಿಗಳೂ ಅವುಗಳ ಇತಿಮಿತಿಗಳೂ ಇರುವಲ್ಲಿ—ಇದೊಂದೇ ದಾರಿ ಸರಿ; ಇದೊಂದೇ ಪಕ್ಷ ಸರಿ—ಎನ್ನುವುದು ಮತೀಯ ಅಂಧಶ್ರದ್ಧೆಗಿಂತ ಅಪಾಯಕಾರಿಯಾದ ಚಿತ್ತವೃತ್ತಿ. ಮತಧರ್ಮಗಳಲ್ಲಾದರೆ 'ನಾನೂ ಇದನ್ನು ನಂಬಿದೆ' ಎಂದರಾಯಿತು. ನಂಬದ ಪಾಪವೂ ನಂಬಿದ ಪುಣ್ಯವೂ ಕಾಣಿಸುವುದು ಸತ್ತಮೇಲೆ. ಆ ಮೇಲೆ, ತಿಳಿಯುವುದೆಷ್ಟೋ ತಿಳಿಯದ್ದೆಷ್ಟೋ. ರಾಜಕೀಯದ ವ್ಯಾಪ್ತಿ ಬದುಕಿಗೇ ಸಂಬಂಧಿಸಿದುದು. ಅದು ಕೆಲಸಗಳಲ್ಲಿ ಕೊನೆಗಾಣತಕ್ಕದ್ದು. ಆ ಕರ್ಮಗಳ ಫಲ, ಅದರ ಸ್ವರ್ಗ, ನರಕ-ಬದುಕಿದ್ದಾಗಲೇ ಅನುಭವಿಸತಕ್ಕದ್ದು. ಇಂಥಲ್ಲಿಯೂ ವ್ಯಕ್ತಿಯ ಸ್ವಬುದ್ಧಿಯು ಕೆಲಸ ಮಾಡದೆಹೋದರೆ ಹೇಗೆ? ಕೆಲವೇ ಮುಖಂಡರು ಹೇಳಿದ್ದಕ್ಕೆ ತಲೆದೂಗುವುದೇ—ದೇಶಭಕ್ತಿ, ಎಂದು ತಿಳಿದರೆ ಹೇಗೆ? ಸ್ವತಃ ತಮ್ಮ ವಿಚಾರಗಳನ್ನು ವಾದ್ಯ ಘೋಷಣೆಯೊಂದಿಗೆ ನಾಡಿನ ಮೇಲೆ ಹೊರಿಸುವ ಈ ಜನರು, ಅವರ ಅಭಿಪ್ರಾಯಗಳಿಗೆ ವಿರೋಧವಾದ ಯಾವ ವಿಚಾರಸರಣಿ ಬಂದರೂ ಮೂದಲಿಸುವುದಾಗಲಿ ಕೆಂಡ ಕಾರುವುದಾಗಲಿ ಯಾವ ಲಕ್ಷಣ? ಇದು ವಿಚಾರ ಸ್ವಾತಂತ್ರ್ಯವನ್ನು ಮನ್ನಿಸುವ ದೇಶದ ಲಕ್ಷಣವೇ? ವ್ಯಕ್ತಿಯ ವಿಕಾಸವನ್ನು, ಮಾರ್ಗದರ್ಶನವನ್ನು ಹಾರೈಸುವ ದೇಶದ ಲಕ್ಷಣವೇ? ಇಂಥ ಅಸಹಿಷ್ಣುಪ್ರವೃತ್ತಿ ಬೆಳೆಯುತ್ತಾ ಹೋದುದಾದರೆ-ಜನ ಬೆಳೆದಾರೆಯೇ? ಎಲ್ಲ ಕ್ಷೇತ್ರಗಳಲ್ಲೂ ಅನುಕರಣೆ, ಮನೋದಾಸ್ಯಗಳಷ್ಟೇ ಬೆಳೆದಾವು. ದೇಶ ಬೆಳೆಯಲಾರದು. ನಾಡಿನ ವಿವಿಧಕ್ಷೇತ್ರಗಳೂ ಬೆಳೆಯಲಾರವು. ಜನಜೀವನ ಬೆಳೆಯಲಾರದು. ಪರೋಕ್ಷವಾಗಿ ವ್ಯಕ್ತಿಯಬೆಳವಣಿಗೆಗೆ ಆತಂಕಪ್ರಾಯವಾದ, ಅನೇಕ ಹೆಜ್ಜೆಗಳನ್ನು ಈಗಾಗಲೇ ಇಡುತ್ತ ಬಂದಿದಾರೆ, ನಮ್ಮ ಮುಖಂಡರು. ಅವರಿಗೆ ತಾವು ಬೆಳೆದದ್ದೆಂಬುದು, ಲೋಕಕ್ಕೆ ಸಾಕೆಂದು ಕಾಣಿಸುತ್ತಿರಬೇಕು. ತಮ್ಮಂತಿರುವ ಅನ್ಯಪ್ರಜೆಗಳ ಬೆಳವಣಿಗೆ, ತಮ್ಮ ಅಧಿಕಾರದ ಸ್ಥಾನಮಾನಗಳಿಗೆ ಕುಂದನ್ನು ತರಬಹುದೆಂಬ ಭಯವೂ ಬರುತ್ತಿರಬೇಕು. ಅಂಥವರು ನಿರಂಕುಶ ದೊರೆಗಳಾದಾರೇ ಹೊರತು, ಪ್ರಜೆಗಳ ಸತ್ವ, ಶಕ್ತಿ, ಮನಸ್ಸು ಸಾಮರ್ಥ್ಯಗಳನ್ನು ಬೆಳೆಯಿಸಲಾರರು. ಅಂಥ ವ್ಯಕ್ತಿಗಳ ಮೂಕ ಉಪಾಸನೆ ನಾಡಿನ ಜನಗಳ ಮನೋದಾಸ್ಯದ ಚಿನ್ಹೆಯೇ ಹೊರತು, ಪ್ರಗತಿಯ ದಾರಿ ಎಂದೆಂದೂ ಅಲ್ಲ.

ಸಣ್ಣ ಕತೆ

ಅನುರಾಧೆ ದಾಸರನ್ನು ನೆಟ್ಟದೃಷ್ಟಿಯಿಂದ ನೋಡುತ್ತಿದ್ದಳು. ಇದಾವುದರ ಪರಿವೆ ಇಲ್ಲದೇ ಅವರು ಭಕ್ತಿಭಾವದಲ್ಲಿ ತಲೀನರಾಗಿ ಹಾಡುತ್ತಿದ್ದರು. ಅವಳು ತನ್ನ ತಾಯಿಯೊಂದಿಗೆ ಈ ದಾಸರ ಮಾತನ್ನು ಪ್ರಸ್ತಾಪಿಸಿದಾಗ ಅವಳಿಗೆ ದಾಸರ ಮೇಲೆ ಎಲ್ಲಿಲ್ಲದ ಕೋಪಬಂದಿತು. ಆ ತರುಣ ದಾಸರು ಅನುರಾಧೆಯನ್ನು ಕಾಣಬಂದಾಗಲಂತೂ ಅದು ವಿಕೋಪಕ್ಕೆ ಹೋಯಿತು. ಆದರೆ ಆ ತಾಯಿ ಮುಗ್ಧಪ್ರೇಮಿಗಳ ಆಳವನ್ನು ಅರಿಯಲಿಲ್ಲ. ಅಂತೇ ದಾಸರನ್ನು ಉಳಿಸಲು ಆ ಪ್ರೇಯಿಸಿ ಸಾವನ್ನಪ್ಪಿದಳು. ಇದೊಂದು ಕರುಣಾಜನಕವಾದ ಐತಿಹಾಸಿಕ ಕಥೆ.

ಚಾಮರಧಾರಿಣಿ

ಲೇಖಕರು:
'ಆನಂದಕಂದ'
ಧಾರವಾಡ

ಶ್ರೀಕೃಷ್ಣದೇವರಾಜರು, ವಿಜಯವಿಟ್ಠಲನ ದೇವಸ್ಥಾನದಲ್ಲಿ ನಿತ್ಯೋತ್ಸವ-ಪರ್ವೋತ್ಸವಗಳು ಸಾಮ್ರಾಜ್ಯ ವೈಭವಕ್ಕೆ ತಕ್ಕಂತೆ ನಡೆಯಬೇಕೆಂದು ಎಲ್ಲ ಬಗೆಯ ಏರ್ಪಾಡನ್ನೂ ಮಾಡಿಸಿದ್ದರು. ತಮ್ಮ ದಿಗ್ವಿಜಯದ ಗುರುತಾಗಿ, ವಿಜಯವಿಟ್ಠಲನ ಮಂದಿರವು ಕಲೆಯ ನಿಲಯವಾಗಿ ನಿಲ್ಲುವಂತೆ ನಿರ್ಮಿಸಬೇಕೆಂದು, ನಿಪುಣರಾದ ಓಜರನ್ನು ನಿಯಮಿಸಿ, ತಮ್ಮ ಬಯಕೆಯನ್ನು ಪೂರೈಸಿಕೊಂಡಂತೆಯೆ, ತಮಗೆ ವಿಶೇಷ ಅಭಿಮಾನದ್ದೆನಿಸಿದ ಆ ದೇವಮಂದಿರದಲ್ಲಿ, ಸೇವೆ-ಸಮಾರಂಭಗಳೂ ಉತ್ತಮ ರೀತಿಯಿಂದ ನಡೆದು, ಜನಗಳೆಲ್ಲರ ಲಕ್ಷ್ಯವನ್ನದು ಆಕರ್ಷಿಸಲು ತಕ್ಕುದಾಗಬೇಕೆಂಬ ಅಪೇಕ್ಷೆಯನ್ನೂ ಪೂರೈಸಿಕೊಳ್ಳುವ ಪ್ರಯತ್ನವನ್ನವರು ಮನಃಪೂರ್ವಕವಾಗಿ ಮಾಡಿದ್ದರು. ಎಂತಲೇ ವಿಜಯವಿಟ್ಠಲನ ನಿತ್ಯೋತ್ಸವಕಾಲದ ಸಂಗೀತಸೇವೆಗೆ, ರಾಜಧಾನಿಯ ಸುಪ್ರಸಿದ್ಧ ವಾಗ್ಗೇಯಕಾರರಾದ ವೈದ್ಯನಾಥ ವೀಣಾಪಾಣಿಯವರು ಬರುವರು. ಅವರೊಂದಿಗೆ ಪಕ್ಕವಾದ್ಯದವರಾಗಿ ಬರುವ ಕಲಾವಿದರೂ ವಿಜಯನಗರದಲ್ಲಿ ಹೆಸರನ್ನು ಹೊಂದಿದವರು. ವಿಜಯನಗರದ ವಾರವಾಟಿಕೆಯಲ್ಲಿ— ಬಹುಜನ ರಸಿಕರ ಆಕರ್ಷಕ ರಮಣಿಯರೆನಿಸಿದ—ಲತಾಂಗಿ— ಚಿತ್ರಾಂಗದೆಯರು, ನರ್ತನಸೇವೆಗಾಗಿ ಬರುವರು. ವಿಜಯವಿಟ್ಠಲನ ಉತ್ಸವಪುಷ್ಪಕದ ಮುಂಗಡೆಯಲ್ಲಿ ಚಾಮರಸೇವೆಗಾಗಿ ನಿಯಾಮಕಳಾದ ಮುಖ್ಯ ಚಾಮರಧಾರಿಣಿ ಸುಲೋಚನೆಯೆಂದರೆ, ಚೆಲುವಿನಲ್ಲಿ ರತಿದೇವಿಯೊಂದಿಗೆ ಪಂಥ ಕಟ್ಟುವವಳು. ನಲವತ್ತು ವರ್ಷದ ನಡು ಹರೆಯದವಳಾದರೂ ಸುಲೋಚನೆಯ ಚೆಲುವಿಕೆ ಈಗಲೂ ರಸಿಕರ ನೋಟಗಳಿಗೆ ಹಸಿವನ್ನು ಹೆಚ್ಚಿಸುವಂತಹದು. ದೇವಸೇವೆಗೆ ಬರುವವರಿಗೆಲ್ಲ ಇನ್ನೂ ಹೆಚ್ಚಿನ ನಯನಾಕರ್ಷಣೆಯೆಂದರೆ, ಸುಲೋಚನೆಯ ಮಗಳು ಅನುರಾಧಾ.

ತಾಯಿ ಪುಷ್ಪಕದ ಬಲಗಡೆಯ ಚಾಮರಸೇವಿಕೆಯಾಗಿದ್ದರೆ, ಅನುರಾಧಾ ಎಡಗಡೆಯ ಚಾಮರಸೇವೆಗೆ ನಿಂತಿರುವಳು. ಚೆಲುವಿಕೆಯಲ್ಲಿ ತಾಯಿಯ ಪ್ರತಿರೂಪ ಮಗಳು, ಆದರೆ ತಾಯಿಗೆ ತನ್ನ ಸೌಂದರ್ಯದ ಪ್ರದರ್ಶನ ಮಾಡಿಕೊಳ್ಳಬೇಕೆಂಬ ಬಯಕೆ ಈಗಲೂ ಇದ್ದಿತೆಂಬುದು ಆಕೆಯ ಅಂಗಭಂಗಿ, ಮುಖಭಾವ, ಅಭಿಮಾನಪೂರಿತ ಚಂಚಲದೃಷ್ಟಿ—ಇವುಗಳಿಂದ ಯಾವಾಗಲೂ ಅಭಿವ್ಯಕ್ತವಾಗುವುದು. ಆಕೆಯ ಉಂಗುರಗೂದಲಿನ ತೋರಣದ ಕೆಳಗಿನ ಮುಖ, ನೋಟಕರ ಮನಸ್ಸನ್ನು ಸೆರೆಹಿಡಿಯುವಂತೆ ಕುಶಲತೆಯಿಂದ ಕಟ್ಟಿಕೊಂಡ ಮುಡಿ, ಮುಡಿದ ಬಾಸಿಗ, ಉಟ್ಟ ತೊಟ್ಟ ಮೆರುಗಿನ ಬಟ್ಟೆ, ಕಿವಿ ಕೊರಳುಗಳನ್ನು ಅಲಂಕರಿಸಿದ ರತ್ನಾಭರಣ ಮುತ್ತಿನ ಸರಗಳು, ಸೊಂಟದಲ್ಲಿಯ ಕಿರುಗೆಜ್ಜೆಗಳಿಂದ ಕೂಡಿದ ಚಿನ್ನದ ಕಾಂಚೀದಾಮ—ಇವೆಲ್ಲವೂ ಆಕೆಯ ಸೌಂದರ್ಯ-ಶ್ರೀಮಂತಿಕೆಗಳ ಪ್ರದರ್ಶನಪ್ರಮಾಣಗಳಾಗಿರುವುವು.

ಪುಷ್ಪಕದ ಎಡಗಡೆಯಲ್ಲಿ ಚಾಮರಧಾರಿಣಿಯಾಗಿ ನಿಂತಿರುವ ಅನುರಾಧೆಗೆ ತಾನು ಚೆಲುವೆಯಾಗಿರುವೆನೆಂಬುದರ ಅರಿವೇ ಇದ್ದಂತಿರುವುದಿಲ್ಲ. ಪುಷ್ಪಕದಲ್ಲಿರುವ ವಿಜಯವಿಟ್ಠಲನ ಉತ್ಸವಮೂರ್ತಿಯಲ್ಲಿಯೆ ಅವಳ ದೃಷ್ಟಿಗಳು ಕೀಲಿಸಿರುವುವು. ಆಕೆ ಚಾಮರ ಬೀಸುವ ರೀತಿಯನ್ನು ನೋಡಿದರೆ, ತನ್ನ ಕಾರ್ಯ ದೇವರಿಗೆ ಅಗತ್ಯವೂ ಮೆಚ್ಚಿಕೆಯೂ ಎನಿಸುವುದೆಂಬ ಶ್ರದ್ಧೆ ಆಕೆಯ ಅಂಗಾಂಗಗಳಲ್ಲಿಯೂ ತುಂಬಿನಿಂತಿದೆಯೆಂಬುದು, ಭಾವುಕರಿಗೆ ಸ್ಪಷ್ಟವಾಗಿ ಕಾಣುತ್ತಲಿತ್ತು. ಅನುರಾಧೆಗೆ ಇದೀಗ ಹದಿನೆಂಟು ವರ್ಷದ ಹೊಸಹರೆಯ. ಆಕೆಯ ಸಹಜಸೌಂದರ್ಯವನ್ನು, ವಯಸ್ಸಿಗೆ ಅನುಗುಣವಾಗಿ ಬೆಳೆದ ಆಕೆಯ ಅಂಗೋಪಾಂಗಗಳು, ಲಾವಣ್ಯದಿಂದ ಕೂಡಿದ ಅವಳ ಮೈಬಣ್ಣ—ಇವೇ ಅಲಂಕರಿಸಿದ್ದುವು. ಓರಣವಿಲ್ಲದೆ ಹೇಗೆ ಹೇಗೋ ಹೆಣೆದುಕೊಂಡ ಜಡುಮುಡಿ, ಹಿಂಬದಿಯಲ್ಲಿ ಜೋಲಾಡುತ್ತಲಿದೆ. ಮುಡಿಯ ಮೇಲ್ಗಡೆಗೆ ಒಂದೆರಡೇ ದೇವರ ನಿರ್ಮಾಲ್ಯದ ಹೂಗಳು. ಬಲಮೂಗಿನಲ್ಲೊಂದು ವಜ್ರದ ಚುಕ್ಕೆ . . . ಕೆಳಗಿವಿಗಳಲ್ಲಿ ಒಂದೊಂದೇ ಮಾಣಿಕದ ಲೋಲಕ. ಶುಭ್ರವರ್ಣದ ಚೀನಾಂಬರದ ಉಡಿಗೆ. ಹೊತ್ತುದು ಕಿತ್ತಳೆಯ ಬಣ್ಣದ ಅಂಚಲ. ಕೊರಳಲ್ಲಿಯ ಮುತ್ತಿನ ಏಕಾವಳಿ ಆ ಅಂಚಲದ ಮೇಲೆ ಎದ್ದು ಕಾಣುತ್ತಲಿದೆ. ಭಾವನಾತ್ಮಕವಾದ ಗಾಂಭೀರ್ಯದ ಮುಖ; ಚಂಚಲತೆಯನ್ನು ಹತ್ತಿರಕ್ಕೂ ಬರಮಾಡಿಕೊಳ್ಳದ ದೈವೀದೃಷ್ಟಿ! ಕೂಡಿದ ಜನರ ನೋಟ ತನ್ನ ಮೇಲೆ ಬೀಳಬಾರದೆಂಬುದು ಆಕೆಯ ಮುಖಭಾವದಲ್ಲಿ ಮೂಡಿನಿಂತಿರುವುದು.

ವಿಜಯವಿಟ್ಠಲನ ಉತ್ಸವ ಪರಿವಾರದ ದೇವದಾಸೀಸಮೂಹದಲ್ಲಿ, ಬಣ್ಣ ಬಣ್ಣದ ಸೋಗಿನ ಸೌಂದರ್ಯ ಬೇಕಾದಷ್ಟು ಕಣ್ಣಿಗೆ ಬೀಳುತ್ತಿರುವಾಗ, ಕೂಡಿದ ಜನರ ಕಣ್ಣಲ್ಲಿ ಬಣ್ಣದ ಬೊಂಬೆಯಲ್ಲದ ಈ ಅನುರಾಧೆ ಹೇಗೆ ತುಂಬಿನಿಲ್ಲಬೇಕು? ಅಲ್ಲದೆ ಅನುರಾಧೆಯ ಮುಖವೂ ಅವರಿಗೆ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ; ಕಡೆಗಣ್ಣ ಕುಡಿನೋಟದ ಕೋಲ್-ಮಿಂಚುಗಳೂ ಅವರನ್ನು ಕೆಣಕುತ್ತಿರಲಿಲ್ಲ.

ನಿತ್ಯೋತ್ಸವಕಾಲದ ಸಂಗೀತ, ನರ್ತನ, ವಾದನ, ಸ್ತ್ರೀಸೌಂದರ್ಯಪ್ರದರ್ಶನ ಇವುಗಳಿಗಾಗಿ ರಾಜಧಾನಿಯ ಜನ, ನಿತ್ಯವೂ ಅಸಂಖ್ಯವಾಗಿ ಬರುವುದು. ಉತ್ಸವಕಾಲದಲ್ಲಿ ನಿರ್ಮಾಣವಾದ ಸಾಮೂಹಿಕ ಭಕ್ತಿಭಾವದಿಂದ ದೇವರಿಗೆ ನಮಸ್ಕಾರಗಳನ್ನು ಸಲ್ಲಿಸುವುದು. ದೇವರ ನಾಮಘೋಷಣೆಯಲ್ಲಿ ಉತ್ಸಾಹದಿಂದ ಭಾಗವಹಿಸುವುದು. ಅಲ್ಲಿ ಸೇರಿದವರೆಲ್ಲರೂ ದೇವಭಕ್ತರೆಂಬ ಭ್ರಮೆ

ಯನ್ನು ಹುಟ್ಟಿಸುವಂತಹ ದೃಶ್ಯವದು. ತಾವು ಕಟ್ಟಿಸಿದ ನೂತನ ದೇವಮಂದಿರದಲ್ಲಿ ದೈವ ಭಕ್ತಿ ಬೆಳೆಯುತ್ತಲಿದೆಯೆಂದು ಶ್ರೀಕೃಷ್ಣ ದೇವರಾಯರಿಗೆ ತುಂಬ ಸಂತೃಪ್ತಿ—ಸಮಾಧಾನ.

೨

ಸುಲೋಚನೆಗೆ ತನ್ನ ಮಗಳ ವಿಷಯದಲ್ಲಿ ತುಂಬ ಅಭಿಮಾನ. ಆಕೆಯು ಸೌಂದರ್ಯದ ಸ್ವಪ್ನಸುಂದರಿಯೆ ಮಗಳಾಗಿ ಹುಟ್ಟಿದ್ದಳು. ತನ್ನ ಚೆಲುವಿಕೆಯ ಬಂಡವಾಳದ ಭರವಸೆಯ ಮೂಲಕ, ಕುಲೋಚಿತವಾದ ಕಲೆಗಳ ಸಂಪಾದನೆಯ ಕಡೆಗೆ ಅವಳು ಹೆಚ್ಚಾಗಿ ಮನಸ್ಸನ್ನು ಹರಿಸಿರಲಿಲ್ಲ. ಆದರೆ ಲತಾಂಗಿ-ಚಿತ್ರಾಂಗದೆಯರ ಕಲಾಭಿಜ್ಞತೆಯ ಮೂಲಕ, ಅವರಿಗೆ ದೇವಮಂದಿರದಲ್ಲಿ ನರ್ತಕಿಯರ ಸ್ಥಾನ ದೊರೆತುದು, ಸುಲೋಚನೆಯ ಮನಸ್ಸಿಗೆ ನೆಟ್ಟ ಮುಳ್ಳಾಯಿತು. ತನಗಿಲ್ಲದೆ ಹೋದರೂ ತನ್ನ ಮಗಳಿಗಾದರೂ ಆ ಜನಾಕರ್ಷಕ ಸ್ಥಾನವು ದೊರೆಯಬೇಕೆಂದು, ಅವಳು ಮಗಳಿಗೆ ನರ್ತನವನ್ನು ಕಲಿಸುವ ಏರ್ಪಾಡನ್ನು ಮಾಡಿದ್ದಳು. ಮೊದಮೊದಲು ಅನುರಾಧೆಗೆ ನರ್ತನವು ಬೇಡವೆನಿಸಿತಾದರೂ ನೃತ್ಯಶಿಕ್ಷಕನು ಹಾಡುತ್ತಲಿದ್ದ ಶ್ರೀಕೃಷ್ಣಗೋಪಿಕಾ ವಿಲಾಸದ ಗೀತಗಳು ಅವಳ ಮನಸ್ಸನ್ನು ಸೆಳೆದುಕೊಂಡುದರಿಂದ, ಆ ಗೀತಗಳ ಗತಿಗಳೊಂದಿಗೆ ಹೆಜ್ಜೆ ಹಾಕಹತ್ತಿದ್ದಳು. ಆ ಗತಿಬದ್ಧ ಹೆಜ್ಜೆಗಳಲ್ಲಿ ಅವಳಿಗೆ ಒಂದು ಬಗೆಯ ಉತ್ಸಾಹವೆನಿಸತೊಡಗಿತು. ಗೀತದೊಳಗಿನ ಭಾವಗಳಿಗೆ ಅನುಗುಣವಾಗಿ ಅಭಿನಯಿಸಿ, ಭಾವತನ್ಮಯತೆಯ ಸಂತೃಪ್ತಿಯನ್ನೂ ಅನುಭವಿಸತೊಡಗಿದಳು. ಮಗಳು ಆಸಕ್ತಿಯಿಂದ ನರ್ತನಕಲೆಯನ್ನು ಕಲಿಯುತ್ತಿರುವುದನ್ನು ಕಂಡು, ಸುಲೋಚನೆ ಮನದಲ್ಲಿಯೇ ಸುಖಸ್ವಪ್ನಗಳನ್ನು ಕಟ್ಟತೊಡಗಿದಳು.

ವಿಜಯವಿಟ್ಠಲನ ಕಾರ್ತಿಕೋತ್ಸವ ಕಾಲದಲ್ಲಿ ಅನುರಾಧೆಯ ವಿಶೇಷನರ್ತನಸೇವೆ ನಡೆಯಿತು. ಅಂದಿನ ಉತ್ಸವಕ್ಕಾಗಿ ಶ್ರೀಕೃಷ್ಣ ದೇವರಾಯರು ಅವರ ಪರಿವಾರದವರು, ನಗರದಲ್ಲಿಯ ಬೇರೆ ಅಧಿಕಾರಿವರ್ಗದವರು, ಸಾಮಂತ-ಮನ್ನೆಯರು ಎಲ್ಲರೂ ಬಂದಿದ್ದರು. ಸಾಂಪ್ರದಾಯಿಕವಾಗಿ ಪುಷ್ಪಕೋತ್ಸವ ಸಮಾರಂಭ ಜರುಗಿತು. ಸಮಾರಂಭದ ಸಂಭಾವಿತ ಜನಜಂಗುಳಿಯಲ್ಲಿದ್ದ ಅರಬೀಡು ತಿಮ್ಮರಾಜರು, ಪುಷ್ಪಕದ ಎಡಬದಿಯ ಚಾಮರಧಾರಿಣಿಯನ್ನು ಆಗಾಗ—ಕಣ್ಣು ಬಡಿಯದೆ—ನೋಡುತ್ತಲಿದ್ದರು. ಮತ್ತೆ ಮತ್ತೆ ಕುತೂಹಲದ ಕೆರಳಿಕೆ ಅವರ ಮುಖದಲ್ಲಿ ಮೂಡಿನಿಲ್ಲುತ್ತಿತ್ತು. ತಾವು ದೇವರ ಉತ್ಸವ ಸಮಾರಂಭದಲ್ಲಿ ಭಾಗವಹಿಸಿರುವೆವೆಂಬ ನೆನಪನ್ನೂ ಅವರು ಆಗಾಗ ಕಳೆದು



ಕೊಳ್ಳುತ್ತಲಿದ್ದರೇನೋ! ನಿತ್ಯಕ್ಕಿಂತ ಇಂದಿನ ಅನುರಾಧೆಯ ವಿಶೇಷವಾದ ಮಾರ್ಪಾಡೆಂದರೆ ಇಂದು ಆಕೆ ವೃಂದಾವನದ ರಾಧಾದೇವಿಯ ವೇಷ-ಭೂಷಣದಲ್ಲಿದ್ದಳು. ಜನಜಂಗುಳಿಯ ದೃಷ್ಟಿಗಳೂ ಅಪ್ಪಿ-ತಪ್ಪಿ ಅನುರಾಧೆಯ ಮೇಲೆ ಬೀಳುತ್ತಿದ್ದವು. ದಿನಕ್ಕಿಂತಲೂ ಹೊಸದೇನನ್ನೋ ನೋಡಿದೆವೆಂದು ವಿಸ್ಮಯದಿಂದ ಅರೆನಿಮಿಷ ಅಲ್ಲೆ ನಿಂತು, ಮತ್ತೆ ಬಣ್ಣದ ಚಿಟ್ಟೆಗಳ ಬೆನ್ನುಹತ್ತುತ್ತಿದ್ದವು.

ಪುಷ್ಪಕವು ಬಂದು ಕಲ್ಯಾಣಮಂಟಪದ ಭದ್ರಾಸನದ ಮೇಲೆ ವಿರಾಜಮಾನವಾಯಿತು. ಮಂಗಲಾರತಿಯಾಗಿ ಮಂತ್ರಪುಷ್ಪವಾದ ಮೇಲೆ ವಿವಿಧ ಸೇವೆಗಳು ಪ್ರಾರಂಭವಾದವು. ವೇದ-ಶಾಸ್ತ್ರ-ಸೇವೆಗಳೆಲ್ಲ ಮುಗಿದ ಮೇಲೆ ಸಂಗೀತ ಸೇವೆಯಾಯಿತು. ಸಂಗೀತಗಾರ ತನ್ನ ಕಲಾಸಂಪತ್ತಿನಿಂದ, ಸಮೂಹವನ್ನೆಲ್ಲ ತೃಪ್ತಿಪಡಿಸಿದ. ಆ ಮೇಲೆ ಪದ್ಧತಿಯಂತೆ ಲತಾಂಗಿ—ಚಿತ್ರಾಂಗದೆಯರ ನರ್ತನ ಕಾರ್ಯಕ್ರಮವಾಯಿತು. ಕೂಡಿದವರೆಲ್ಲರೂ ನರ್ತಕಿಯರ ನೈಪುಣ್ಯವನ್ನು ಕಂಡು ಆನಂದಿತರಾಗಿ ಪ್ರಶಂಸೆಯ ಉದ್ಗಾರಗಳನ್ನು ತೆಗೆಯುತ್ತಿದ್ದರು. ಶ್ರೀಕೃಷ್ಣದೇವರಾಯರ ಹೃದಯದ ಉಲ್ಲಾಸದ ಅರಳಿಕೆ ಮುಖದಲ್ಲಿ ಮೂಡಿನಿಂತಿತ್ತು.

ಕೀರ್ತನ ಸೇವೆಗಾಗಿ ತರುಣ ದಾಸರೊಬ್ಬರು ಮುಂದೆ ಬಂದರು. ಅವರ ಹಣೆಯನ್ನು

ತ್ರಿಪುಂಡ್ರಗಳು ಅಲಂಕರಿಸಿವೆ. ತಲೆಯ ಕೂದಲುಗಳು ಒಂದು ಬಗೆಯ ಓರಣಕ್ಕೊಳಗಾಗಿ ಹೆಗಲಮೇಲೆ ಬೆನ್ನಮೇಲೆ ಬಿದ್ದುಕೊಂಡಿವೆ, ಹೊಳಪಿನ ಕದಿರುಗಳನ್ನು ಹೊರಸೂಸುವ ಕಣ್ಣುಗಳು ಉಟ್ಟದ್ದು ಶುಭ್ರವಾದ ಪಂಚೆ,ಹೊದ್ದುಕೊಂಡುದು ಹಳದಿ ಚೀನಾಂಬರ, ಕೊರಳಲ್ಲಿ ತುಲಸೀದಲಗಳ ದಂಡೆ, ಬಲಗೈಬೆರಳು ದಂಡಿಗೆಯ ತಂತಿಗಳನ್ನು ಮಿಡಿಯುತ್ತಲಿವೆ, ಎಡಗೈಯಲ್ಲಿ ಕರತಾಳಗಳಿವೆ, ಬಂದು ನಿಂತು ಸುಸ್ವರದಲ್ಲಿ ಹಾಡತೊಡಗಿದರು.

ನೀ ಮಾಯೆಯೊಳಗೋ ನಿನ್ನೊಳು
ಮಾಯೆಯೋ ?
ನೀ ದೇಹದೊಳಗೋ ನಿನ್ನೊಳು ದೇಹವೋ—
ಕೃಷ್ಣಾ ॥ ಪಲ್ಲವಿ ॥
ಬಯಲು ಆಲಯದೊಳಗೊ ಆಲಯವು ಬಯ
ಲೊಳಗೊ
ಬಯಲು ಆಲಯವೆರಡು ನಯನದೊಳಗೋ-
ನಯನ ಬುದ್ಧಿಯ ಒಳಗೊ ಬುದ್ಧಿ ನಯನದ
ಒಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ
ವಿಠಲಾ ॥ ೧ ॥

ದಾಸರು ಭಕ್ತಿಭಾವದಲ್ಲಿ ತಲ್ಲೀನರಾಗಿ ಹಾಡುತ್ತಿದ್ದರು. ಜನರೆಲ್ಲರೂ ಸುಮ್ಮನೆ ಕುಳಿತು ಕೇಳುತ್ತಲಿದ್ದರೂ ಅಲ್ಲಲ್ಲಿ ಪಿಸುಮಾತು—ಮೆಲುಮಾತು—ಕಿವಿಗೆ ಬೀಳುತ್ತಿದ್ದವು.

' ಕಾಗಿನೆಲೆಯ ಬೀರಣ್ಣಗೌಡರಲ್ಲವೆ ಇವರು ? '

' ಅಹುದಯ್ಯಾ, ನಮ್ಮ ಅರಮನೆಯ ಗುರುಗಳು — ತಾತಾಚಾರ್ಯರು ಇದ್ದಾರಲ್ಲಾ.—ಅವರ ಶಿಷ್ಯನೀತ. ತನ್ನ ಪಾಳೆಯಗಾರಿಕೆ ಬಿಟ್ಟು ಹರಿದಾಸನಾಗಿದ್ದಾನೆ ! '

' ಭೇಷೇ ! ಭಲೇ ಗಡಿ ನೋಡು ಬೀರೇ ಗೌಡರಂದರ ! ಇವರು ಯಾಕೆ ದಾಸರಾದರೋ ಏನೋ ! '

' ಅಲ್ಲಿ ನೋಡೋ, ಆ ಚಾಮರದ ಎಡಸೇವೆಯ ಹುಡುಗಿ, ಈ ದಾಸರನ್ನು ಹೇಗೆ ಕಣ್ಣುಬಡಿಯದೆ ನೋಡುತ್ತಿದ್ದಾಳೆ ನೋಡಿದೆಯಾ ? '

ಅಹುದು, ಅನುರಾಧೆ ದಾಸರನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದಾಳೆ. ದಾಸರ ಕೀರ್ತನದಲ್ಲಿಯ ಭಕ್ತಿಭಾವ ಆಕೆಯನ್ನು ಮಂಕುಮಡಿಸಿಬಿಟ್ಟಿದೆ. ದಾಸರು ಕೀರ್ತನೆಯ ಕೊನೆಗೆ

' ಕುಸುಮದೊಳು ಗಂಧವೋ ಗಂಧದೊಳು
ಕುಸುಮವೋ
ಕುಸುಮ ಗಂಧಗಳೆರಡು ಪ್ರಾಣದೊಳಗೋ—
ಅಸಮಭವನಾಗಿ ನೆಲೆಯಾದಿಕೇಶವ ಇದನು
ಉಸುರಲೆನ್ನ ವಶವೆ ಎಲ್ಲವು ನಿನ್ನೊಳ್
ಹರಿಯೇ—'

ಎಂದು ಹಾಡುವಾಗ, ಅವರ ಕಣ್ಣಿಂದ ಕಂಬನಿ ಇಳಿಯುತ್ತಿದ್ದುವು. ಅವರನ್ನೇ ನೋಡುತ್ತಲಿದ್ದ ಅನುರಾಧೆಯ ಹೃದಯ ಜುಮ್ಮುದಟ್ಟಿತು. ಮೈಮೇಲೆ ಹೊಂಪುಳಿ ಗುಡಿಗಟ್ಟಿತು.ಆಕೆಯ ಕಣ್ಣಿಂದಲೂ ಕಂಬನಿ ಹೊರಹೊಮ್ಮಿತು, ಅರಬೀಡು ರಾಮರಾಜರು ಕುಳಿತಲ್ಲಿಂದಲೇ ತಮ್ಮ ನಿಡುನೋಟಗಳನ್ನು ಅನುರಾಧೆಯ ಮೈಗೆ ಚುಚ್ಚುತ್ತಲಿದ್ದರು, ಅನುರಾಧೆಗೆ ಅದರ ಪರಿವೆಯೇ ಇಲ್ಲ.

ದಾಸರು ಕೀರ್ತನಸೇವೆಯನ್ನು ಮುಗಿಸಿ, ತಮ್ಮ ಸ್ಥಳದಲ್ಲಿ ಕುಳಿತುಕೊಂಡರು. ಮತ್ತೆ ಒಬ್ಬಿಬ್ಬರಿಂದ ಕೀರ್ತನಸೇವೆ ಸಂದ ಬಳಿಕ, ತಾಯಿಯ ಅಜ್ಞೆಯಂತೆ—ರಾಧೆಯ ವೇಷಭೂಷಣದಲ್ಲಿದ್ದ—ಅನುರಾಧೆ ನರ್ತನಸೇವೆಗೆ ಸಿದ್ಧಳಾಗಿ ನಿಂತಳು. ಪಕ್ಕವಾದ್ಯದವರು ನರ್ತನೋಚಿತ ಧಾಟಿಯ ಗೀತವೊಂದನ್ನು ವಾದ್ಯದಲ್ಲಿ ನುಡಿಸತೊಡಗಿದರು ; ತನಗೆ ಗೊತ್ತಿದ್ದ ಗಾಯನಜ್ಞಾನದಲ್ಲಿ ಸುಲೋಚನೆ ಗೀತವನ್ನು ಹೇಳತೊಡಗಿದಳು :

" ಎಲ್ಲಿ ಹೋದನದೆಲ್ಲಿ ಅಡಗಿದ, ಫುಲ್ಲಲೋಚನ
ಮಾಧವ ?
ಇಲ್ಲಿಯೇ ಬಳಿಯಲ್ಲಿ ನಲಿವವನೆಲ್ಲಿ
ಮರೆಯಾಗಿಹನವ ?
ಯಮುನೆಯಲೆಗಳ ಕುಣಿತ ನೋಡಿರಿ,
ರಮಣನಿರುವನೆ ಅಲ್ಲಿ ?
ಕಮಲಗಳು ಬಾಯ್ದೆರೆದು ನಗುತಿವೆ,
ರವಿಸುತಿಹನೇನಲ್ಲಿ ?
ಏಕೆ ಕುಣಿವೆ ಮಯೂರಿಯೇ ನೀ
ನಿನ್ನೊಳಿಹನೇ ನನ್ನವ ?
ಎಲ್ಲಿ ಹೋದನದೆಲ್ಲಿ ಅಡಗಿದ ಫುಲ್ಲಲೋಚನ
ಮಾಧವ ? ! "

ಅನುರಾಧೆ ಭಾವತನ್ಮಯಳಾಗಿ ನರ್ತಿಸತೊಡಗಿದಳು. ಆಕೆಯ ವಿರಹಿಣಿಯ ಕರುಣಾಭಿನಯ, ಸಹೃದಯರನ್ನು ಬೆರಗುಗೊಳಿಸಿಬಿಟ್ಟಿತು. ತರುಣ ದಾಸರು ಆಕೆಯ ನರ್ತನಾನಯಗಳನ್ನು ಸಂಭ್ರಾಂತಭಾವದವರಾಗಿ ನೋಡುತ್ತಲಿದ್ದರು. ಅರಬೀಡು ರಾಮರಾಯರು ಆಕಾಂಕ್ಷೆಯ ದೃಷ್ಟಿಗಳಿಂದ ಆಕೆಯನ್ನು ನೋಡುವುದರಲ್ಲಿ ಮೈಮರೆತಿದ್ದರು. ನರ್ತನದ ಕೊನೆಯೊಂದಿಗೆ ಅಂದಿನ ಉತ್ಸವ ಸಮಾರಂಭವೂ ಮುಗಿಯಿತು.

ಕಾರ್ತಿಕೋತ್ಸವದ ಮರುದಿನ ಸಾಯಂಕಾಲ. ಅನುರಾಧೆ ತನ್ನ ಕಿರುಮನೆಯಲ್ಲಿ ಧ್ಯಾನಮಗ್ನರಾಧೆಯ ಭಾವದಲ್ಲಿ ಕುಳಿತಿದ್ದಾಳೆ. ರಾಧೆಯ ಒಳಗಣ್ಣೆದುರು ಮಾಧವನ ಮನೋರಮ ಮೂರ್ತಿಯಿರುತ್ತಿದ್ದಿತಂತೆ ; ಆದರೆ ಈ ಅನುರಾಧೆಯ ಒಳಗಣ್ಣೆದುರು ತರುಣದಾಸರ

ಮೂರ್ತಿ ನಿಂತು 'ನೀ ಮಾಯೆಯೊಳಗೊ, ನಿನ್ನೊಳು ಮಾಯೆಯೊ?' ಎಂದು ಹಾಡುತ್ತಲಿದೆ. ಆ ಭಕ್ತಿಭಾವದ ಪ್ರತಿಮೆಯನ್ನು ಅನುರಾಧೆ ಮತ್ತೆ ಮತ್ತೆ ನಿಟ್ಟಿಸಿ ಬಿಸುಸುಯ್ಯುತ್ತಲಿದ್ದಾಳೆ.

ಒಮ್ಮೆಲೆ ಉತ್ಸಾಹದ ಹೆಜ್ಜೆಗಳನ್ನಿಡುತ್ತ ತಾಯಿ ಸುಲೋಚನಾ ಅಲ್ಲಿಗೆ ಬಂದಳು. ಮಗಳು ಹೇಗೆ ಕುಳಿತಿದ್ದಾಳೆಂಬುದರ ಕಡೆಗೆ ಆಕೆಯ ಲಕ್ಷ್ಯವೆ ಇಲ್ಲ. ಬರುಬರುತ್ತಲೇ ಸಂಭ್ರಮದ ಸ್ವರದಲ್ಲಿ ಕೂಗಿದಳು:

"ಅನುರಾಧಾ, ಅನುರಾಧಾ, ವಿಜಯ ವಿಟ್ಠಲಸ್ವಾಮಿ ನಿನ್ನ ನರ್ತನಸೇವೆಗೆ ಪ್ರಸನ್ನನಾದ"

ಕುತೂಹಲದ ಧ್ವನಿಯಲ್ಲಿ ಅನುರಾಧೆ ಕೇಳಿದಳು:

"ಅಂದರೆ ಏನು ಅಮ್ಮಾ? ಏನಾಯಿತೀಗ?"

"ಏನಾಯಿತೆಂದರೆ, ಮಹಾರಾಜರ ಅಳಿಯ ನನ್ನ ಅಳಿಯನಾಗಲು ಬಯಸುತ್ತಾರೆ!"

"ನೀನೇನು ಹೇಳುತ್ತಿಯೋ ನನಗೆ ತಿಳಿಯದಮ್ಮಾ!"

"ನಿನಗೆ ಎಲ್ಲವನ್ನೂ ಒಡೆದೇ ಹೇಳಬೇಕೆ? ಅರಬೀಡು ರಾಮರಾಯರೆಂದರೆ........ ಶ್ರೀಕೃಷ್ಣದೇವಪ್ರಭುಗಳ ಅಳಿಯಂದಿರು! ಮಹಾವೀರಾಧಿವೀರರು! ಸಾಮ್ರಾಜ್ಯದ ಅಧಿಕಾರಗಳೆಲ್ಲ ಅವರ ಕೈಯಲ್ಲಿಯೇ ಇದ್ದಂತಿವೆ. ಅವರು ನಿನ್ನೆಯ ದಿನ ನಿನ್ನ ನರ್ತನವನು ನೋಡಿ ತುಂಬ ಮೆಚ್ಚಿದ್ದಾರಂತೆ. ಈಗ ನಿನ್ನನ್ನು ತಮ್ಮವಳನ್ನಾಗಿ ಮಾಡಿಕೊಳ್ಳಬೇಕೆಂಬ ಬೇಡಿಕೆಯೊಂದಿಗೆ ನಿನಗೆ ವಸ್ತ್ರಾಭರಣಗಳ ಉಡುಗರೆ ಕಳುಹಿದ್ದಾರೆ; ನಿನ್ನ ಭಾಗ್ಯಕ್ಕೆ ಎಣೆಯಿಲ್ಲ ಅನುರಾಧಾ!"

ಅನುರಾಧಾ ಸ್ಥಿರಭಾವದ ಧ್ವನಿಯಲ್ಲಿ ಹೇಳಿದಳು:

"ನನ್ನ ಭಾಗ್ಯಕ್ಕೆ ಎಣೆಯಿಲ್ಲ...! ಅಹುದೆ? ಆ ರಾಮರಾಯರು ನನಗೆ ವಿಟ್ಠಲಸ್ವಾಮಿಯನ್ನು ತೋರಿಸಬಲ್ಲರೇನಮ್ಮಾ?"

"ಅಂದರೇನಮ್ಮಾ ನಿನ್ನ ಮಾತು? ಈ ಕಲಿಯುಗದಲ್ಲಿ ಸಾಮಿಯನ್ನು ಯಾರಾದರೂ ಪ್ರತ್ಯಕ್ಷ ತೋರಿಸುವರುಂಟೇನಮ್ಮಾ?"

"ಉಂಟು, ಅಂತಹರು ಇದ್ದಾರೆ; ಅವರು ತಾವೂ ಪ್ರಭುವನ್ನು ಪ್ರತ್ಯಕ್ಷವಾಗಿ ನೋಡುವರು. ತಮ್ಮನ್ನು ನಂಬಿದವರಿಗೂ ಪ್ರತ್ಯಕ್ಷ ದರ್ಶನ ಮಾಡಿಸಬಲ್ಲರು!"

"ಅಂತಹರು ಯಾರಿದ್ದಾರಮ್ಮಾ ಈ ಕಾಲದಲ್ಲಿ?"

"ನಿನ್ನೆಯ ಮಹೋತ್ಸವ ಕಾಲದಲ್ಲಿ ಕೀರ್ತನಸೇವೆಯನ್ನು ಸಲ್ಲಿಸಿದ ಆ ತರುಣ ದಾಸರನ್ನು ನೀನೂ ನೋಡಿದೆಯಲ್ಲವೆ? ಅವರು ಕೀರ್ತನೆಯನ್ನು ಹೇಳುತ್ತಿರುವಾಗ, ಅದರಲ್ಲಿ ಕೀರ್ತಿತನಾದ ಸ್ವಾಮಿಯನ್ನು ಅವರು ಕಣ್ಣಾರೆ ಕಾಣುತ್ತಿದ್ದರು. ಅದನ್ನು ನಾನೂ ಕಂಡೆ!"

"ನಿನಗೊಂದು ಭ್ರಮೆ! ಈ ಹೊಸ ಹರಯದ ಹೆಣ್ಣುಗಳ ನೋಟ, ಯಾರ ಕಡೆಗೆ ಹೊರಳೀತೆಂಬುದರ ನಿಯಮವಿಲ್ಲ. ನೀನು ಆ ದಾಸಯ್ಯನನ್ನು ಮೆಚ್ಚಿದ್ದೀಯಾ?"

ಅನುರಾಧೆ ಶಾಂತಭಾವದಿಂದ ನುಡಿದಳು:

"ನಾನು ಮೆಚ್ಚಿದ್ದೇನೋ ಇಲ್ಲವೋ ನಾನು ಕಾಣೆ. ನನಗೆ ತಿಳಿಯದಂತೆಯೇ ನನ್ನ ಕಣ್ಣುಗಳು ಅವರ ಮೂರ್ತಿಯನ್ನು ನೋಡುತ್ತವೆ, ಕಿವಿಗಳು ಅವರ ಧ್ವನಿಯನ್ನು ಕೇಳುತ್ತವೆ, ಮನಸ್ಸು ಅವರ ಸಾಮೀಪ್ಯವನ್ನು ನೆನೆಯುತ್ತದೆ, ಹೃದಯ ಅವರನ್ನು ತನ್ನಲ್ಲಿ ತುಂಬಿಕೊಂಡಿದೆ."

"ಅಯ್ಯೊ, ಈ ಮಗುವಿಗೆ ಇನ್ನೂ ಲೋಕದ ವ್ಯವಹಾರವೇ ಗೊತ್ತಿಲ್ಲ. ಮಹಾದೇವಿಯಂತೆ ಮೆರೆದೀಯೇ, ಮಂಡಲಾಧಿಪತಿ ರಾಮರಾಯರ ಕೈಹಿಡಿದರೆ!"

"ನನಗೆ ಅಂತಹ ಮಹಾದೇವಿಯ ಮೆರವಣಿಗೆ ಬೇಕಿಲ್ಲ ತಾಯೀ! ಆ ದಾಸರ ಪಾದಸೇವೆಯನ್ನು ಮಾಡುವ ದಾಸಿಯ ಭಾಗ್ಯ ದೊರೆತರೆ ಸಾಕು!"

"ನೋಡು ಅನುರಾಧಾ! ರಾಮುರಾಯರು ಬಹಳ ಸಿಟ್ಟಿನವರು. ಅವರ ಕೋಪಕ್ಕೆ ಗುರಿಯಾಗಿ ನಾವು ಈ ನಗರದಲ್ಲಿ ಜೀವಿಸುವುದು ಶಕ್ಯವಿಲ್ಲ!"

"ಈ ನಗರವನ್ನು ಬಿಟ್ಟು ಬೇರೆ ಕಡೆಗೆ ಹೋಗಿ ಇರೋಣ!"

"ನೀನು ಹೀಗೆಂದರೆ ನಮ್ಮ ಬದುಕಿಗೆ ದಾರಿ?"

"ಎಲ್ಲರಿಗೂ ದಾರಿಯನ್ನು ತೋರಿಸಲು ಸ್ವಾಮಿ ಸಮರ್ಥನಿದ್ದಾನೆ. ನಿನ್ನೆಯ ದಿನ ಆ ದಾಸರು ಹೇಳಿದ್ದು ಕೇಳಿದೆಯೋ ಇಲ್ಲವೋ? ಎಲ್ಲವು ನಿನ್ನೊಳ್ ಹರಿಯೋ—ಎಂದರು. ನಾನು, ನೀನು, ನಿನ್ನ ಆ ರಾಮುರಾಯ, ಎಲ್ಲರೂ ಆತನ ಒಳಗೆ ಇರುವವರು!"

"ಇದೇನಮ್ಮಾ ಇದು? ಆ ದಾಸಯ್ಯ ಇವಳ ಮೇಲೆ ಮಂಕುಬೂದಿಯನ್ನು ಎರಚಿಬಿಟ್ಟಿದ್ದಾನೋ ಏನೋ!"

ಆಗಲೇ ತಲೆಬಾಗಿಲ ಬಳಿ ಯಾರೋ ಕೂಗಿದಂತಾಯಿತು. ಕೋಪದ ನಡಿಗೆಯಲ್ಲಿ ಸುಲೋಚನೆ—ಯಾರೆಂಬುದನ್ನು ನೋಡಲು ಹೋದಳು. ಬಾಗಿಲಲ್ಲಿ ನಿನ್ನೆಯ ಆ ತರುಣ ದಾಸಯ್ಯ ನಿಂತಿದ್ದಾನೆ. ನೋಡಿ ಸುಲೋಚನೆಗೆ ತಲೆ ತಿರುಗಿದಂತಾಯಿತು. ರೊಚ್ಚಿನಿಂದ ಕೇಳಿದಳು:

"ಇಲ್ಲಿಗೇಕೆ ಬಂದಿರಪ್ಪಾ, ನನ್ನ ಮನೆ ಹಾಳುಮಾಡಲಿಕ್ಕೆ?"

"ಹೀಗೆ ಕೋಪವೇಕೆ ತಾಯಿ? ನಿಮ್ಮ ಮಗಳು—ನಿನ್ನೆ ನರ್ತಿಸಿದ ಆ ಚೆಲುವೆ ಇದ್ದಾಳೆಯೋ ಮನೆಯಲ್ಲಿ? ನಾನು ಆಕೆಯನ್ನು ಕಾಣಬೇಕಮ್ಮಾ ಕೊಂಚ."

"ಏನೋ ಡೊಂಬೆದಾಸ! ನೀನು ದಾಸನೋ ವೇಷಗಾರನೋ? ನನ್ನ ಮಗಳನ್ನು ಮಂಕು ಮಾಡಿ, ಓಡಿಸಿಕೊಂಡು ಹೋಗಲು ಬಂದಿದ್ದೀಯಾ?"

"ಹಾಗೇನೂ ಇಲ್ಲ ತಾಯಿ! ಆಕೆಯ ಭಾವುಕ ಹೃದಯಕ್ಕೆ ನನ್ನ ಮೆಚ್ಚಿಕೆಯ ಕಾಣಿಕೆ ಸಲ್ಲಿಸಲು ಬಂದಿದ್ದೆ. ಆಕೆಯ ದರ್ಶನ ಮಾಡಿಸುವಿರಾ ನನಗೆ?"

"ಆಕೆಯ ದರ್ಶನ ಮಾಡಿಸಬೇಕೆ? ನಿನಗೆ ದೊಣ್ಣೆಯ ದರ್ಶನ ಮಾಡಿಸುತ್ತೇನೆ ತಡೆ!" ಸುಲೋಚನೆ ದೊಣ್ಣೆಯನ್ನು ತಂದು ದಾಸರ ತಲೆಯ ಮೇಲೆ ಹಾಕಿದಳು. ಆವೇಶದಲ್ಲಿ ಇನ್ನೊಂದು ಏಟನ್ನೆತ್ತಿ ಹಾಕಿದಳು; ಆದರೆ ಅದು ದಾಸರ ಮೈಗೆ ತಗುಲಲಿಲ್ಲ. ಆ ಏಟನ್ನು ನಿರೋಧಿಸಬೇಕೆಂದು ಹಾರಿಬಂದು ನಿಂತಿದ್ದ ಅನುರಾಧೆಯ ನಡುನೆತ್ತಿಯ ಮೇಲೆ ಬಿದ್ದಿತು. ಬಿದ್ದ ಪೆಟ್ಟಿನೊಂದಿಗೆ ಅನುರಾಧಾ 'ಅಮ್ಮಾ' ಎಂದು ಕಿರುಚಿ ನೆಲದ ಮೇಲೆ ಬಿದ್ದುಬಿಟ್ಟಳು. ತಲೆ ಒಡೆದು ನೆತ್ತರು ಹರಿಯತೊಡಗಿತು. ದಾಸರು ಕರುಣೆಯ ಸ್ವರದಲ್ಲಿ ನುಡಿದರು:

"ಅಯ್ಯೋ! ಅನಾಹುತ! ಅನುರಾಧಾ. . . . ಅನುರಾಧಾ...." ಎಂದು ಕೂಗುತ್ತ ದಾಸರು ಆಕೆಯ ತಲೆಯನ್ನು ತಮ್ಮ ತೊಡೆಯಮೇಲೆ ಇರಿಸಿಕೊಂಡರು. ವಾಸ್ತವ ಸಂಗತಿ ತಿಳಿದಾಗ ಅದು ಸುಲೋಚನೆಯ ಸಂತಾಪವನ್ನು ಮರೆಮಾಡಿತು. ಕರುಣಾಭಾವ ತಲೆಯೆತ್ತಿ 'ಅಯ್ಯೋ, ಮಗಳೇ, ಅನುರಾಧಾ!..." ಎಂದು ಕೂಗತೊಡಗಿದಳು. ಅನುರಾಧೆಯ ಪ್ರಾಣ, ದಾಸರ ಪ್ರಾಣದಲ್ಲಿ ಬೆರೆತುಕೊಂಡಿತ್ತು.

* * *

ಅನುರಾಧೆಯ ನೃತ್ಯದ ನೆನಪು, ಆಕೆಯ ಪ್ರಾಣಾಹುತಿಯ ನೆನಪು, ದಾಸರ ಭಕ್ತಿಯ ಪರಿಪಕ್ವತೆಗೆ ಕಾರಣವಾದುವು. ಆಕೆಯ ಪವಿತ್ರ ಸೌಂದರ್ಯ ಯಾವಾಗಲೂ ದಾಸರ ಹೃದಯವನ್ನು ಮಿಡಿಯುತ್ತಿತ್ತು. ಅವರು ರಾಧಾ-ಕೃಷ್ಣನ ಧ್ಯಾನ ಮಾಡುತ್ತಿರುವಾಗ ಶ್ರೀಕೃಷ್ಣನ ಪಕ್ಕದಲ್ಲಿ ರಾಧಾದೇವಿಯ ಬದಲು ಅನುರಾಧೆಯೇ ಕಾಣುತ್ತಿದ್ದಳು.

ಕೇಂಬ್ರಿಜ್‌ನಲ್ಲಿ

ಇನ್ನೊಂದು ದಿನ!

ಶ್ರೀ ಹಿರೇಮಲ್ಲೂರ ಈಶ್ವರನ್

ಬಿ. ಲಿಟ್. (ಆಕ್ಸನ್),
ಎಂ. ಎಸ್. ಎಸ್. (ದಿ ಹೇಗ),
ಡಿ. ಲಿಟ್. (ಲಾಯಿಡನ್) ಇತ್ಯಾದಿ.

ಆಕ್ಸ್‌ಫರ್ಡದಂತೆ ಕೇಂಬ್ರಿಜ್ ಖ್ಯಾತವಾದ ವಿಶ್ವವಿದ್ಯಾಲಯವಾಗಿದೆ. ಈ ವಿದ್ಯಾಕೇಂದ್ರದಲ್ಲಿ ಕಾಲೇಜುಗಳು ನಗರದಲ್ಲೆಲ್ಲ ಪಸರಿಸಿವೆ. ರೈಲುನಿಲ್ದಾಣದಲ್ಲಿಳಿದಾಗ ಅದರ ಭವ್ಯತೆ ತೋರದಿದ್ದರೂ ಊರನ್ನು ಪ್ರವೇಶಿಸಿದಾಗ ಅದರ ಹಿರಿಮೆಯು ಕಂಡುಬರುವುದು; ಅದರ ಭವ್ಯನೋಟವು ನಿಮಗೆ ಗೋಚರಿಸುವುದು. ವಸತಿಯೊದಗಿಸಿಕೊಡುವುದು ಈ ಕೇಂದ್ರದ ಇನ್ನೊಂದು ವೈಶಿಷ್ಟ್ಯವಾಗಿರುವುದು. ತಾವು ಇಲ್ಲಿ ಕಳೆದ ಒಂದು ದಿನದೊಂದಿಗೆ ಆ ಕೇಂದ್ರದ ಪರಿಚಯವನ್ನು ಲೇಖಕರು ಮಾಡಿಕೊಟ್ಟಿರುವರು.

೧೯೫೫ ನೆಯ ಇಸವಿಯ ಜೂನ್ ತಿಂಗಳಿನಲ್ಲಿ ಪ್ಯಾರಿಸ್‌ನಲ್ಲಿ ರಜೆಯದಿನಗಳನ್ನು ಕಳೆದು ಕ್ಯಾಲೆ-ಡೋವರ ಮಾರ್ಗವಾಗಿ ನಾನು ಇಂಗ್ಲಂಡಿಗೆ ತಿರುಗಿ ಹೊರಟದ್ದೆನು. ಕ್ಯಾಲೆ-ಡೋವರ ಸಮುದ್ರಯಾನದ ಕಾಲದಲ್ಲಿ ನೌಕೆಯ ಮೇಲೆ ನನಗೆ ಅದುವರೆಗೂ ಪರಿಚಯವಾಗದಿದ್ದ ಆಕ್ಸ್‌ಫರ್ಡಿನಲ್ಲಿ ಓದುವ ಬ್ರಿಟಿಶ್ ವಿದಾರ್ಥಿಯ ಪರಿಚಯವಾಯಿತು. ನಾನೊಬ್ಬನೇ ನೌಕೆಯ ಮೇಲ್ [illegible]ಯಲ್ಲಿ ನೌಕೆಯನ್ನು ಹಿಂಬಾಲಿಸುತ್ತಿದ್ದ 'ಸೀಗಲ್' ಪಕ್ಷಿಗಳನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಜಾವದಲ್ಲಿ ನನ್ನ [illegible]ಆಗುವರೀತಿಯಲ್ಲಿ ಯಾರೋ ಬೆನ್ನ [illegible] ಹೆಗಲ ಮೇಲೆ ಕೈಯಿಟ್ಟು ಮಾತನಾಡಿಸಿದರು. ಅವರ ಮಾತಿನಲ್ಲಿ ನಾವಿಬ್ಬರೂ ಬಹಳ ಕಾಲದಿಂದ ಒಬ್ಬರನ್ನೊಬ್ಬರು ಅರಿತು [illegible]ನಡೆದಂತಹ ಸ್ನೇಹ ವ್ಯಕ್ತವಾಗುತ್ತಿತ್ತು. ಆದರೂ ನನಗೆ ಅವರ ಪರಿಚಯ ಹತ್ತಲಿಲ್ಲ. 'ಕ್ಷಮಿಸಬೇಕು. ನನ್ನ ಬುದ್ಧಿಮಂದ. ಮರೆವು ಆಗಿದೆ' ಎಂದಾಗ ಅವರು ನಕ್ಕು, 'ನಾವಿಬ್ಬರೂ ಆಕ್ಸ್‌ಫರ್ಡಿಗೆ ಸೇರಿದವರು. ಜೀಸೆಸ್ ಕಾಲೇಜಿನಲ್ಲಿ ನಾನು ಓದುತ್ತಿದ್ದೇನೆ. ನೀವು ಧರಿಸಿದ 'ಟೈ' (Tie) ಮೇಲಿಂದ ನೀವು ಆಕ್ಸ್‌ಫರ್ಡಿಗೆ ಸೇರಿದವರು ಎಂದು ಗುರುತಿಸಿದೆ' ಎಂದು ಹೇಳಿದರು. ಹೌದು. ನಾವಿಬ್ಬರೂ ಆಕ್ಸ್‌ಫರ್ಡಿಗೆ ಸೇರಿದ ವಿದ್ಯಾರ್ಥಿಗಳಾಗಿದ್ದೆವು, ಒಂದು ದೇಟನಲ್ಲಿ ಅರಳಿದ ಎರಡು ಹೂವಾಗಿದ್ದೆವು.

ಡೋವರದಿಂದ ಲಿವ್ಹರ್‌ಪೂಲ್‌ಗೆ ಪ್ರವಾಸ ಮಾಡುವಾಗ ನನಗೆ ಆರಂಭದಲ್ಲಿ ತೊಂದರೆಯಾಯಿತು. ರೈಲಿನಲ್ಲಿ ನಾನು ರಿಝರ್ವೇಶನ್ ಮಾಡಿಸಿರಲಿಲ್ಲ. ರೈಲಿನಲ್ಲಿ ಎದ್ದು ನಿಂತುಕೊಂಡಿದ್ದೆ. ಗಾಡಿ ಅದೇ ಆರಂಭವಾಗಿ ಐದು ನಿಮಿಷಗಳಾಗಿದ್ದವು. ಐದು ನಿಮಿಷದ ನಂತರ ಮತ್ತೆ ಯಾರೋ ನನ್ನ ಬೆನ್ನನ್ನು ಹಿಂದಿನಿಂದ ತಟ್ಟಿದರು. ನೋಡಿದೆ, ಮತ್ತೊ ಒಮ್ಮೆ ನಾನು ಅರಿಯದ ವ್ಯಕ್ತಿಯೊಂದು ತನ್ನನ್ನು ಪರಿಚಯ ಮಾಡಿಕೊಡುತ್ತ, 'ನೀವು ಆಕ್ಸ್‌ಫರ್ಡಿನಲ್ಲಿ ಓದುತ್ತೀರಲ್ಲವೆ?' ಎಂದರು. ಅದೇ ಧ್ವನಿಯಲ್ಲಿ ಮುಂದುವರಿದು, 'ನನ್ನ ಒಬ್ಬ ಸ್ನೇಹಿತನಿಗಾಗಿ ಒಂದು ಜಾಗ ರಿಝರ್ವ ಮಾಡಲಾಗಿತ್ತು. ಆತ ಬರಲಿಲ್ಲ. ಆ ಜಾಗ ನೀವು ಉಪಯೋಗಿಸಬಹುದು' ಎಂದರು. ನನಗೆ ಅವರೂ ಆಕ್ಸ್‌ಫರ್ಡಿನ ವಿದ್ಯಾರ್ಥಿ ಇರಬಹುದು ಎಂದು ಅನಿಸಿತು. ಆದರೆ ಹೋಗಿ ಅವರ ಬಳಿ ಕುಳಿತು ಮಾತನಾಡಿದಾಗ ಅವರು ಕೇಂಬ್ರಿಜ್ಜಿನ 'ಫಿಟ್ಜ ವಿಲಿಯಮ್' ಸೊಸಾಯಟಿಯಲ್ಲಿ ಓದುವ ವಿದ್ಯಾರ್ಥಿ ಎಂದು ತಿಳಿಯಿತು. ಅವರನ್ನು ನನಗೆ ಅವರ 'ಟೈ' ನಿಂದ ಗುರುತಿಸಲು ಸಾಧ್ಯವಾಗಲಿಲ್ಲ. 'ನಾವು ಒಂದೇ ವಿಶ್ವವಿದ್ಯಾನಿಲಯಕ್ಕೆ ಸೇರದಿದ್ದರೂ ಒಂದು ನಾಣ್ಯದ ಎರಡು ಮುಖಗಳಂತಿರುವ 'ಫಿಟ್ಜ ವಿಲಿಯಮ್' ಮತ್ತು 'ಸೇಂಟ ಕ್ಯಾಥರೀನ್' ಕಾಲೇಜುಗಳಲ್ಲಿ ಓದುತ್ತಿದ್ದೇವೆ' ಎಂದು ಹೇಳಿದರು. ಲಂಡನ್ ಬರುವವರೆಗೂ ಆಕ್ಸ್‌ಫರ್ಡಿನ ಹಾಗು ಕೇಂಬ್ರಿಜ್ಜಿನ ಆ ವಿದ್ಯಾರ್ಥಿಗಳೊಂದಿಗೆ ನಾನು ತೀರ ಹತ್ತಿರದ, ಪರಿಚಯದ ಗೆಳೆಯರೊಂದಿಗೆ ಮಾತನಾಡುವಂತೆ ಸ್ವಚ್ಛಂದವಾಗಿ ಹರಟೆ ಹೊಡೆದೆನು.

ಆಕ್ಸ್‌ಫರ್ಡು ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳ ನಡುವೆ ಇರುವ ಸಂಬಂಧದ ಬಗೆಗೆ ಇಂಗ್ಲಂಡಿನಲ್ಲಿಯೂ ವಿದೇಶಗಳಲ್ಲಿಯೂ ಚಿತ್ರವಿಚಿತ್ರವಾದ ಆದರೂ ನಿಜವಾದ ಕಲ್ಪನೆಗಳು ಹರಡಿಕೊಂಡಿವೆ.

ಆಕ್ಸ್‌ಫರ್ಡಿನ ವಿದ್ಯಾರ್ಥಿಗೆ ಕೇಂಬ್ರಿಜ್ಜಿನ ವಿದ್ಯಾರ್ಥಿಯನ್ನು ಕಂಡರೆ ಆಗುವುದಿಲ್ಲ. ಕೇಂಬ್ರಿಜ್‌ನವರಿಗೆ ಆಕ್ಸ್‌ಫರ್ಡಿನವರನ್ನು ಸಹಿಸಲಾಗುವುದಿಲ್ಲ, ಅವರ ನಡುವೆ ವೈರಸಂಬಂಧ ಶತಮಾನಗಳಿಂದಲೂ ಬೆಳೆದು ಬಂದಿದೆ. ಆ ವೈರಸಂಬಂಧ ಪ್ರತಿ ವರ್ಷವೂ 'ಹೇನ್ಲೆ'ದ ಬಳಿ ಹರಿಯುವ ಥೇಮ್ಸನದಿಯಲ್ಲಿ ನಡೆಯುವ ಬೋಟ ಪಂದ್ಯಾಟದಲ್ಲಿ ವ್ಯಕ್ತವಾಗುತ್ತದೆಯೆಂಬ ವಾರ್ತೆಯೊಂದು ಜನಜನಿತವಾಗಿದೆ.

ಸೋಜಿಗವೆಂದರೆ, ಆಕ್ಸ್‌ಫರ್ಡಿನಲ್ಲಿ ಓದುವ ವಿದಾರ್ಥಿ ಆಕ್ಸ್‌ಫರ್ಡಿನ ನೆಲದ ಮೇಲೆ ನಿಂತಾಗ ಕೇಂಬ್ರಿಜ್‌ನ ಹೆಸರನ್ನು ಉಚ್ಚರಿಸುವುದಿಲ್ಲ. ಉಚ್ಚರಿಸುವ ಪ್ರಸಂಗ ಬಂದರೆ ಕೇಂಬ್ರಿಜ್‌ನ್ನು 'ಆ ವಿಶ್ವವಿದ್ಯಾನಿಲಯ' ಎಂದು ಕರೆಯುತ್ತಾನಲ್ಲದೆ, ಹೆಸರಿನಿಂದ ಕರೆಯುವುದಿಲ್ಲ. ಕೇಂಬ್ರಿಜ್ಜಿನ ವಿದ್ಯಾರ್ಥಿಗೆ ಕೇಂಬ್ರಿಜ್‌ನಲ್ಲಿ ಆಕ್ಸ್‌ಫರ್ಡಿನ ವಿದ್ಯಾರ್ಥಿಯನ್ನು ತನ್ನ ಇತರ ಸ್ನೇಹಿತರಿಗೆ ಪರಿಚಯ ಮಾಡಿಕೊಡುವ ಸಂದರ್ಭ ಎಂದಾದರೂ ಬಂದಾಗ ಅವನು 'ಆ ವಿಶ್ವವಿದ್ಯಾನಿಲಯದಲ್ಲಿ ಓದುವ' ಗೆಳೆಯನ ಪರಿಚಯ ಮಾಡಿಕೊಡುತ್ತಾನೆ. ಪ್ರಾಚ್ಯ ಸಂಸ್ಕೃತಿಯ ನೆಳಲಲ್ಲಿ ಬೆಳೆದ ನವದಂಪತಿಗಳು ಒಬ್ಬರೊಬ್ಬರ ಹೆಸರನ್ನು ಎತ್ತಿಕೊಂಡು ಮಾತನಾಡುವುದಕ್ಕೆ ನಸು ಲಜ್ಜೆಯನ್ನು ಪಡೆಯುವಂತೆ, ಸಂಸ್ಕೃತಿಯ ಪರಂಪರೆಯಲ್ಲಿ ಬೆಳೆದು ಬಂದ ಆಕ್ಸಫರ್ಡ ಹಾಗೂ ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಓದುವ ವಿದ್ಯಾರ್ಥಿಗಳು, ಕಲಿಸುವ ಶಿಕ್ಷಕರು, ಕಲಿತ ಪದವೀಧರರು ಆ ವಿಶ್ವವಿದ್ಯಾನಿಲಯಗಳ ಪರಂಪರೆಯನ್ನು ಮುಂದರಿಸಿಕೊಂಡು ಹೋಗುವಲ್ಲಿ ಬಹಳ ಅಭಿಮಾನವನ್ನು ಪಡುತ್ತಾರೆ. ಅಲ್ಲದೆ ಆ ಎರಡೂ ವಿಶ್ವವಿದ್ಯಾನಿಲಯಗಳ ನಡುವಿನ ಸಂಬಂಧವನ್ನು 'ಹುಸಿ ಮುನಿಸಿ'ನ ಮೂಲಕ

ವ್ಯಕ್ತಪಡಿಸಲು ಇಚ್ಛೆಪಡುತ್ತಾರೆ. ಆದರೆ ತಿಳಿದು ನೋಡಿದಾಗ, ಆ ಎರಡೂ ವಿಶ್ವವಿದ್ಯಾನಿಲಯಗಳ ನಡುವೆ 'ವೈರ' ಸಂಬಂಧವಿರದೆ, ಅಗಾಧವಾದ ಮೈತ್ರಿಯಿರುವುದು ಕಂಡುಬರುತ್ತದೆ. ಆದರೆ ಆ ಮೈತ್ರಿ ವ್ಯಕ್ತವಾಗುವ ಬಗೆಯೋ ಒಂದು ತೆರನಾಗಿರುತ್ತಿದೆ. ಅದೇ ಆಕ್ಸಫರ್ಡ, ಕೇಂಬ್ರಿಜ್‌ಗೆ ಸೇರಿದ ಬಳವಳಿಯಾಗಿದೆ !

ಆಕ್ಸಫರ್ಡಿನಲ್ಲಿ ಓದಿದ ಪದವೀಧರರು ತಮ್ಮ ಸುತ ಸೋದರರನ್ನು ಕಾಲಾನಂತರದಲ್ಲಿ ಆಕ್ಸಫರ್ಡಿಗೇ ಕಳಿಸಲು ಅಪೇಕ್ಷಿಸುತ್ತಾರೆ. ಕೇಂಬ್ರಿಜ್ಜಿನ ಪದವೀಧರರೂ ಕೇಂಬ್ರಿಜ್‌ನ ಕಡೆಗೇ ತಮ್ಮನ್ನು ಹಿಂಬಾಲಿಸುವವರನ್ನು ಕಳಿಸುತ್ತಾರೆ. ಈ ಪರಂಪರಾಪಾಲನೆಯಿಂದಾಗಿ ಇಂಗ್ಲಂಡಿಗೆ ಹೋದವರು ಆಕ್ಸಫರ್ಡಿನಲ್ಲಿ ಒಂದು ದಿನವನ್ನು ಕಳೆದರೆ ಕೇಂಬ್ರಿಜ್‌ನಲ್ಲಿ ಇನ್ನೊಂದು ದಿನವನ್ನು ಕಳೆಯಬಯಸುತ್ತಾರೆ. ಆಕ್ಸಫರ್ಡನ್ನು ಕಂಡ ಕಣ್ಣು ಕೇಂಬ್ರಿಜ್‌ನ್ನು ಕಾಣದೆ ತೃಪ್ತಿಯನ್ನು ಹೊಂದುವುದಿಲ್ಲ. ಆದುದರಿಂದ ಆಕ್ಸಫರ್ಡಿನ ನಂತರ ಕೇಂಬ್ರಿಜ್‌ನತ್ತ ಅವರು ಯಾಂತ್ರಿಕವಾಗಿ ಪ್ರವಾಸ ಕೈಕೊಳ್ಳುತ್ತಾರೆ !

ಆಕ್ಸಫರ್ಡಿನಲ್ಲಿ ಒಂದೆರಡು ದಿನ ಇದ್ದು ಅಲ್ಲಿನ ವಿದ್ಯಾಮಂದಿರ, ಕಾರ್ಯ ಸೌಧಗಳನ್ನು ಸಂದರ್ಶಿಸಿದ ಪ್ರವಾಸಿಗನ ಕಣ್‌ಮನಗಳಲ್ಲಿ ಕನಸಿನಲ್ಲಿ ಕಂಡ ಸ್ವರ್ಗೀಯ ದೃಶ್ಯವೊಂದರ ಅನುಭವ ತುಂಬಿದಂತಾಗುತ್ತದೆ. ಕರ್ವ್‌ನರ್ ದಿನ್ನೆಯ ಮೇಲಿಂದ, ಹೆಡಿಂಗಟನ್ ವಿಸ್ತೀರ್ಣದ ತುದಿಯಿಂದ, ಊರಿನ ಎರಡೂ ಬದಿಗಳಲ್ಲಿ ಹರಿದ ನದಿಯ ತೀರದಿಂದ, ವಿದ್ಯಾಮಂದಿರಗಳ ಮೇಲ್ಮಾಳಿಗೆಯ ಮೇಲಿಂದ ಎಲ್ಲಿಂದಾದರೂ ಒಮ್ಮೆ ನಿಂತು ಆಕ್ಸಫರ್ಡನ್ನು ನಿರೀಕ್ಷಿಸಿದರೆ ಮನಸ್ಸಿನ ಮೇಲೆ ಅಗಾಧ ಪ್ರಭಾವ, ಎಂದಿಗೂ ಅಳಿಸಿ ಹೋಗಲಾರದಂತಹ ಪರಿಣಾಮ ಉಂಟಾಗುತ್ತದೆ.

ಆಕ್ಸಫರ್ಡಿನ ಸುತ್ತಲೂ ಹಬ್ಬಿರುವ ದಿನ್ನಿಗಳ ಮೇಲಿಂದ ಬೇಸಗೆಯ ಸಂಜೆಯಲ್ಲಿ ಸೂರ್ಯ ಮುಳುಗುತ್ತಿರುವಾಗ ಆಕ್ಸಫರ್ಡನ್ನು ನೋಡಿದ ಪ್ರವಾಸಿಗನಂತೂ ತನ್ನ ಕಾಲ ಬಳಿಯಲ್ಲಿ ಅನುಪಮ ದಿವ್ಯ ಸೌಂದರ್ಯ ಸೂರೆಯಾಗಿರುವುದನ್ನು ಕಾಣುವನು. ಇಡಿಯ ನಗರ ರತ್ನಖಚಿತವಾದ ವಸನವನ್ನುಟ್ಟ ಸುಂದರಿಯೊಬ್ಬಳು ಕಾಲ ಬಳಿ ಕುಳಿತಿರುವಂತೆ ವ್ಯಕ್ತವಾಗುವುದು. ತಲೆ ತಲಾಂತರಗಳಿಂದ ಜನರು ಆ ದೃಶ್ಯವನ್ನು ಕಂಡು ಹಿಗ್ಗಿದ್ದಾರೆ. ಅದೊಂದು ವ್ಯಕ್ತಿಗತವಾದ ಅನುಭವ. ಸಂಧ್ಯಾಕಾಲದಲ್ಲಿ, ಗಗನಚುಂಬಿತ ನಕ್ಷತ್ರಾಕಾರದ. ಗೋಪುರಗಳು, ಗುಮ್ಮಟಗಳು ಕೊಪ್ಪರಿಗೆಯಾಕಾರದಲ್ಲಿ ಹಬ್ಬಿರುವ ಆಗಸದ ನಟ್ಟ ನಡುವೆ ಕೊರೆದ ಒಂದು ಗೆರೆ ಸುತ್ತು ಹಾಕಿದಂತೆ, ಐಕ್ಯದ ಮುದ್ರೆಹಾಕಿದಂತೆ ಒಟ್ಟು ಪರಿಣಾಮವನ್ನು ಅದ್ವಿತೀಯವಾಗಿ ಮೆರೆಯುತ್ತವೆ. ಆಕ್ಸಫರ್ಡಿನಲ್ಲಿ ವ್ಯಾಸಂಗವನ್ನು ಕೈಕೊಂಡ ವಿದ್ಯಾರ್ಥಿಯಂತೂ ಆ ಪರಿಣಾಮವನ್ನೆಂದಿಗೂ ಮರೆಯಲಾರನು. ಆಕ್ಸಫರ್ಡಿನ ಶಿಕ್ಷಣದ ಪ್ರಭಾವ ಆ ಐಕ್ಯವನ್ನೂ ಅದರ ಪರಿಣಾಮವನ್ನೂ ಮೆರೆಯುವುದೆ ಆಗಿದೆಯೆಂಬುದನ್ನು ಅವನೆಂದಿಗೂ ನಂಬನು.

[೧]

ಕೇಂಬ್ರಿಜ್ ಲಂಡನ್ನಿನ ಉತ್ತರಕ್ಕಿದ್ದರೆ, ಆಕ್ಸಫರ್ಡ್ ಅದರ ಪಶ್ಚಿಮ ದಿಕ್ಕಿಗಿದೆ. ಲಂಡನ್ನಿನ ಲಿವ್ವರಪೂಲ್ ರೈಲು ನಿಲ್‌ಮನೆಯಿಂದ ನೀವು ಕೇಂಬ್ರಿಜ್‌ಗೆ ಆಗಲಿ, ಆಕ್ಸಫರ್ಡಿಗೆ ಆಗಲಿ ಹೋದರೆ ಸುಮಾರು ಒಂದುವರೆ ಘಂಟೆಯಲ್ಲಿ ಅವನ್ನು ಮುಟ್ಟುತ್ತೀರಿ. ಆದರೆ ನೀವು ಆಕ್ಸಫರ್ಡ್, ಕೇಂಬ್ರಿಜ್ಜಿಗೆ ಹೋಗುವ ಮಾರ್ಗಗಳು ಪರಸ್ಪರ ವಿರುದ್ಧವಾಗಿವೆಯೆಂಬುದನ್ನು ಮರೆಯಲಾಗದು.

ಮೋಟರು, ರೈಲು, ಮತ್ತು ವಿಮಾನುಗಳ ಮೂಲಕ ನೀವು ಆಕ್ಸಫರ್ಡನ್ನು ಮುಟ್ಟುವಂತೆ ಕೇಂಬ್ರಿಜ್‌ನ್ನು ಮುಟ್ಟಬಹುದಾಗಿದೆ. ಇತಿಹಾಸಪ್ರಸಿದ್ಧವಾದ ಈ ನಗರವನ್ನು ರೈಲಿನಿಂದ ಪ್ರವೇಶಿಸುವವನು ಬಹಳ ಸೋಜಿಗಪಡುವನು. ಕೇಂಬ್ರಿಜ್‌ನ ರೈಲು ನಿಲ್‌ಮನೆ ಧಾರವಾಡದ ರೈಲು ನಿಲ್‌ಮನೆಗಿಂತಲೂ ಚಿಕ್ಕದೂ ಕುರೂಪಿಯೂ ಆಗಿದೆ. ಎರಡೂ ಕಡೆಯಿಂದ ಬರಹೋಗುವ ಗಾಡಿಗಳಿಗೆ ಒಂದೇ ಒಂದು ಕಟ್ಟೆಯಿರುತ್ತದೆ. ಗಾಡಿಯಿಂದಿಳಿದು ಹೊರಗೆ ಬಂದಾಗ 'ನಾವು ಕೇಂಬ್ರಿಜ್‌ನ ರೈಲು ನಿಲ್‌ಮನೆಯನ್ನು ತಲುಪಿದೆವೇ' ಎಂಬ ಪ್ರಶ್ನೆಯನ್ನು ನಮ್ಮಷ್ಟಕ್ಕೆ ನಾವೆ ಹಾಕಿಕೊಳ್ಳುವಂತಾಗುತ್ತದೆ. ನಗರದ ಒಂದು ಮೂಲೆಯಲ್ಲಿ ಗೂಡುಕಟ್ಟಿದಂತಿರುವ ಈ ನಿಲ್‌ಮನೆ ಕೇಂಬ್ರಿಜ್ಜಿನ ಭವ್ಯಕಲ್ಪನೆಯನ್ನೇ ಕೊಡುವದಿಲ್ಲ. ಆದರೆ ನಿಲ್‌ಮನೆಯ ಎದುರು ರಚಿತವಾಗಿರುವ ಕಮಾನುಗಳು ಅದರ ಮುಂದಣ ಭಾಗದಲ್ಲಿ ಹಬ್ಬಿರುವ ಚೌಕು, ಅಲ್ಲಿನ ಹಿಟ್ಟಿನ ಗಿರಣಿಗಳು 'ಕೇಂಬ್ರಿಜ್ಜು ಸರಸ್ವತಿಯನಿಲ್‌ಮನೆಯಾಗಿರುವುದು ನಿಜವೆ?' ಎಂಬ ಪ್ರಶ್ನೆಗೆ ಅನುಮಾನ ಬರುವಂತಹ ಉತ್ತರಗಳನ್ನು ಕಲ್ಪಿಸಿಕೊಡುವವು.

ಆದರೂ ನೀವು ಅಲೆದಾಡುವ ನೆಲವೇ ಕೇಂಬ್ರಿಜ್ಜಿಗೆ ಸೇರಿದ್ದು ಎಂಬ ನಿರ್ಣಯಕ್ಕೆ ಬರಲು ತಡವಾಗುವುದಿಲ್ಲ. ಅಲ್ಲಿಂದ ಸುಮಾರು ಹನ್ನೆರಡು ಫರ್ಲಾಂಗು ನಡೆದುಕೊಂಡು ಹೋದರೆ ಅಲ್ಲಿ ಮುಂದೆ ಯುದ್ಧದ ಸ್ಮಾರಕವಾಗಿ ನಿಲ್ಲಿಸಿರುವ ಸ್ತಂಭವನ್ನು, ಅದರ ಬಲಗಡೆಯಲ್ಲಿ ಕೇಂಬ್ರಿಜಿನ ದಕ್ಷಿಣೋತ್ತರಗಳಲ್ಲಿ ಹಬ್ಬಿದ ಒಂದು ರಸ್ತೆಯನ್ನು ನೀವು ಗುರುತಿಸುವಿರಿ. ಆ ರಸ್ತೆಯು ಹಲವು ಕಡೆ ಹಲವು ಹೆಸರು ಪಡೆದಿದೆ. ಅದಕ್ಕೆ ರೀಜಂಟ ಬೀದಿ, ಹಿಲ್‌ಬೀದಿ, ಸೇಂಟ ಆ್ಯಂಡ್ರೂ ಬೀದಿ, ಸಿಡ್ನಿ, ಬ್ರಿಜ್, ಮಾಡಲೇನ್, ಕ್ಯಾಸಲ್ ಬೀದಿಯೆಂದೂ ಹೆಸರುಗಳಿರುವವು. ಹದಿನೆಂಟನೆಯ ಶತಮಾನದಿಂದಲೂ ಕೇಂಬ್ರಿಜ್ಜಿನ ದಕ್ಷಿಣೋತ್ತರಗಳಲ್ಲಿ ಮಲಗಿರುವ ಈ ರಸ್ತೆಯು ರೋಮನ್ ರಸ್ತೆಯನ್ನು ಪ್ರತಿನಿಧಿಸುತ್ತದೆ ಮತ್ತು ವಿಶ್ವವಿದ್ಯಾನಿಲಯ ಶಿಕ್ಷಣ ಹಾಗೂ ಕಾರ್ಯಸೌಧಗಳನ್ನು ಸುತ್ತುವರಿದಿದೆ.

ಆಕ್ಸ್‌ಫರ್ಡ್ಗೆ ಇದ್ದಂತೆ ಕೇಂಬ್ರಿಜ್ಜಿನ ಹೆಸರಿಗೂ ಒಂದು ಇತಿಹಾಸವಿರುವುದನ್ನು 'ಕ್ಯಾಮ್' ನದಿಯುಮೇಲೆ ತಿರುಗಾಡುವಂದು ನಿಮ್ಮ ಗಮನಕ್ಕೆ ಬರುತ್ತಿದೆ. ರಸ್ತೆಯು ಹೆಸರು ಹೊತ್ತು ಆಕ್ಸಫರ್ಡ್ ಬಾಳಿದರೆ ನದಿಯು ಹೆಸರು ಪಡೆದು ಕೇಂಬ್ರಿಜ್ ವಾಸಿಸು



ಟ್ರಿನಿಟಿ ಕಾಲೇಜದಲ್ಲಿಯ ಗ್ರೇಟಕೋರ್ಟ

ತ್ತಿದೆ. ಅದು ಕ್ರಿಸ್ತಶಕ ನಾಲ್ವತ್ತರಲ್ಲಿ 'ಗ್ರಾಂಟಾ' ನದಿಯ ಮೇಲೆ ಸ್ಯಾಕ್ಸನ್‌ರ ವಾಸಸ್ಥಾನವಾಗಿತ್ತು. ಈಗ ಅಲ್ಲಿರುವ 'ಮಾಡ್ಲೀನ್' ಸೇತುವೆ ಇಂಗ್ಲಂಡಿನಲ್ಲಿಯೇ ಮೊತ್ತ ಮೊದಲು ಕಟ್ಟಿದ ಸೇತುವೆ. ಸುಮಾರು ೮೭೫ ರ ಎಡಬಲದಲ್ಲಿಯೇ ಆ ಊರು 'ಗ್ರಾಂಟಾಬ್ರಿಜ್' ಎಂದು ಪರಿಚಿತವಾಗಿತ್ತು. ೧೧೪೨ ರ ಹೊತ್ತಿಗೆ ಅದು 'ಕ್ಯಾಂಟಾಬ್ರಿಜ್' ಆಗಿ, ಮುಂದೆ ಕೆಲಕಾಲದಲ್ಲಿ 'ಕೇಂಬ್ರಿಜ್' ಎಂದು ಶಾಶ್ವತ ಹೆಸರನ್ನು ಪಡೆಯಿತು. ಇವತ್ತಿಗೂ ನದಿಯ ಕೆಳಭಾಗಕ್ಕೆ 'ಕ್ಯಾಮ್' ಎಂದೂ ಮೇಲ್ ಭಾಗಕ್ಕೆ 'ಗ್ರ್ಯಾಂಟಾ' ಎಂದೂ ಕರೆಯುತ್ತಾರೆ.

ರೈಲು ನಿಲುದಾಣದಿಂದ ಕೇಂಬ್ರಿಜ್‌ನ್ನು ಪ್ರವೇಶಿಸುವವನು ರೀಜಂಟ ಬೀದಿಯ ಒಂದು ಆರಂಭದಿಂದ ಮಾಡಲೇನ್ ರಸ್ತೆಯ ಇನ್ನೊಂದು ರಸ್ತೆಯ ಕೊನೆಯ ಅಂಚಿನವರೆಗೆ ನಡೆದುಕೊಂಡು ಹೋದರೆ ತನ್ನ ಬಲಗಡೆಯಲ್ಲಿ ಮೊತ್ತಮೊದಲು ಡೌನಿಂಗ ಕಾಲೇಜು ನಂತರ ಟ್ರಿನಿಟಿ, ಡಿವಿನಿಟಿ ಸ್ಕೂಲ್, ಸೇಂಟ್ ಜಾನ್ ಮತ್ತು ಮಾಡಲೇನ್, ವೆಸ್ಟ ಮಿನಿಸ್ಟರ್ ಕಾಲೇಜುಗಳನ್ನೂ ಅವುಗಳ ಹಿಂಬದಿಯ ರಸ್ತೆಯಲ್ಲಿ ಪಿಟ್ಜವಿಲಿಯಮ್ ಮ್ಯುಜಿಯಮ್, ಪೀಟರ ಹೌಸು, ಪಿಟ್ಜವಿಲಿಯಂ ಹೌಸ್, ಪೆಂಬ್ರೂಕ್, ಸೇಂಟಕ್ಯಾತ್ರಿನ್ಸ, ಕ್ವೀನ್ಸ, ಕಾರಪಸ ಕ್ರಿಸ್ತಿ, ಕಿಂಗ್ಸ್, ಕ್ಲೇರ್, ಸೆಲ್ವಿನ್, ರಿಡ್ಲೆ ಹಾಲ್, ನ್ಯೂಸ್ ಹ್ಯಾಮ್ ಕಾಲೇಜುಗಳನ್ನೂ ಸಂದರ್ಶಿಸುವನು. ರೀಜಂಟ್ ಮಾಡಲೇನ್ ರಸ್ತೆಯ ಎಡಗಡೆಯಲ್ಲಿ ಎಮ್ಯಾನುಯೆಲ್, ಕ್ರೈಸ್ತ, ಸಿಡ್ನೆಸಸೆಕ್ಸ್, ಜೀಸಸ್, ಲೆಸ್ಲೆ ಹೌಸುಗಳನ್ನೂ ನೋಡುವನು.

ಕೇಂಬ್ರಿಜ್‌ನಲ್ಲಿ, ಆಕ್ಸಫರ್ಡಿನಲ್ಲಿದ್ದ ಹಾಗೆಯೆ 'ಹೌಸಹಾಲ್ ಸೊಸಾಯಿಟಿ' ಮತ್ತು 'ಕಾಲೇಜ' ಎಂದರೆ ಎಲ್ಲಾ ಒಂದೇ ಅರ್ಥವನ್ನು ಕೊಡುವದಾದರೂ ಅವುಗಳಲ್ಲಿ ತರತಮಭಾವವಿದೆ. ಸಾಮಾನ್ಯವಾಗಿ ಅವೆಲ್ಲವುಗಳೂ ವಿದ್ಯಾರ್ಥಿಗಳ ವಸತಿಮಂದಿರಗಳಾಗಿವೆ. ಶಿಕ್ಷಣವೆಲ್ಲ ವಿಶ್ವ-ವಿದ್ಯಾನಿಲಯದ ನೇತೃತ್ವದಲ್ಲಿ, ರಚಿತವಾದ ವಿವಿಧ ವ್ಯಾಸಂಗಗೋಷ್ಠಿಗಳಲ್ಲಿ, ಪ್ರೊಫೆಸರ, ರೀಡರ್, ಲೆಕ್ಚರರ, ಡೆಮಾನ್‌ಸ್ಟ್ರೇಟರ್ ಅವರೆಲ್ಲರ ಮಾರ್ಗದರ್ಶನದಲ್ಲಿ ಮುಂದರಿಯುವುದು. ವಿವಿಧ ವ್ಯಾಸಂಗಗೋಷ್ಠಿಗಳಿಗೆ ಸುಂದರ ಕಟ್ಟಡಗಳ ಅನುಕೂಲ್ಯವೂ ವಾಚನಾಲಯಗಳ ಸೌಲಭ್ಯವೂ ಇರುವದು. ಸುಮಾರು ನಾಲ್ವತ್ತು ವರುಷಗಳ ಹಿಂದೆ ಕಾಲೇಜುಗಳೇ ಅಧ್ಯಾಪನಕಾರ್ಯವನ್ನು ಮುಂದರಿಸುತ್ತಿದ್ದವು. ಮತ್ತು ಆಗ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಕೇವಲ ಸಂಶೋಧನದಲ್ಲಿಯೂ ತಮ್ಮ ಪಾಂಡಿತ್ಯಕ್ಕೆ ಒಳಪಟ್ಟ ವಿಷಯಗಳ ಮೇಲೆ ಬೋಧನವನ್ನು ಮಾಡುತ್ತಲಿದ್ದರು. ಆದರೆ ಕಾಲೇಜುಗಳು ಕೈಕೊಂಡ ಅಂದಿನ ಶಿಕ್ಷಣ ಕೊಡುವ ಕಾರ್ಯ-ಕ್ರಮವನ್ನು ವಿಶ್ವವಿದ್ಯಾನಿಲಯವು ವಹಿಸಿಕೊಂಡಂದಿನಿಂದ ಕೇಂಬ್ರಿಜ್ ವಿಶ್ವವಿದ್ಯಾ-ನಿಲಯದಲ್ಲಿನ (ಆಕ್ಸಫರ್ಡಿನಲ್ಲಿಯೂ) ಶಿಕ್ಷಣಪದ್ಧತಿಯು ಜಾಗತಿಕ ವಿಶ್ವವಿದ್ಯಾನಿಲಯಗಳ ಪದ್ಧತಿಯಲ್ಲಿಯೇ ಅದ್ವಿತೀಯವಾಗಿದೆ. ಆಕ್ಸಫರ್ಡ ಮತ್ತು ಕೇಂಬ್ರಿಜಗಳಲ್ಲಿ ಕಾಲೇಜುಗಳು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಾಸ್ತವ್ಯವನ್ನು ಒದಗಿಸಿಕೊಡುತ್ತವೆ. ವಿಶ್ವವಿದ್ಯಾನಿಲಯವು ಅಧ್ಯಾಪನವನ್ನು ನಡಸು-ತ್ತದೆ. ವಿಶ್ವವಿದ್ಯಾನಿಲಯ ಅಧ್ಯಾಪಕ ವರ್ಗಕ್ಕೂ ಆಡಳಿತಕ್ಕೂ ಬೇಕಾಗಿರುವ ಹಣವನ್ನು ಪ್ರತಿಯೊಂದು ಕಾಲೇಜು ತಾನು ವಿದ್ಯಾರ್ಥಿಗಳ ಪ್ರವೇಶಧನದಿಂದ ಬಂದ ಹಣದಲ್ಲಿ ಕೆಲವೊಂದು ಹಣವನ್ನು ಒದಗಿಸಿ ಕೊಡುತ್ತದೆ. ಇದರಿಂದಾಗಿ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ನಡುವೆ ಅಂತರವೆ ಅಲ್ಲಿ ಉಳಿದಿಲ್ಲ.



ಕ್ಲೇರ ಕಾಲೇಜದ ಹಿಂಬದಿಯ ನೋಟ

ಕೇಂಬ್ರಿಜಿನಲ್ಲಿ ಇಪ್ಪತ್ತೆರಡು ಕಾಲೇಜುಗಳೂ ಮೂವತ್ತೆರಡು ಚರ್ಚುಗಳೂ ಇರುತ್ತವೆ. ಇಪ್ಪತ್ತೆರಡು ಕಾಲೇಜುಗಳಲ್ಲಿ ಗರ್ಟ್ಸನ್ ಮತ್ತು ನ್ಯೂಹ್ಯಾಮ ಕಾಲೇಜುಗಳೆರಡೂ ಕೇವಲ ವಿದ್ಯಾರ್ಥಿನಿಯರಿಗೆ ಮೀಸಲಾಗಿವೆ. ಆಕ್ಸಫರ್ಡ, ಕೇಂಬ್ರಿಜ್‌ಗಳಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕೂಡಿ ವಾಸಿಸುವುದಕ್ಕೆ ಅವಕಾಶವಿಲ್ಲ. ಆದರೆ ಸಹಶಿಕ್ಷಣಕ್ಕೆ ಅವಕಾಶವಿದೆ. ಕಾಲೇಜುಗಳು ಕೇವಲ ವಸತಿ ಮಂದಿರಗಳೆಂದು ನಿಯೋಜಿತವಾಗಿರುವುದರಿಂದ 'ಸಹಜೀವನ'ಕ್ಕೆ ಅಲ್ಲಿ ಎಡೆಯಿಲ್ಲ. ಸಂಪ್ರದಾಯಪಾಲನಿಗೆ 'ಆ' ವಿಶ್ವವಿದ್ಯಾ-ನಿಲಯದಂತೆ 'ಈ' ವಿಶ್ವವಿದ್ಯಾನಿಲಯವೂ ಖ್ಯಾತವಾಗಿದೆ. ಪ್ರಾಚೀನ ಕಾಲದಲ್ಲಿ 'ಹಾಲ್' 'ಸೊಸಾಯಿಟಿಗಳು' ಪಾಂಡಿತ್ಯಕ್ಕೆ ಹೆಸರಾದ ವಿದ್ಯಾ-ರ್ಥಿಗಳಿಗೆ ಅಧ್ಯಯನದ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟವು. ಧಾರ್ಮಿಕಸಂಸ್ಥೆ ಹಾಗೂ ದಾತೃಗಳಿಂದ ಅವರ ಪೋಷಣೆಗೆ ದ್ರವ್ಯ ಸಹಾಯ ಒದಗುತ್ತಲಿದ್ದಿತು. ಕಾಲಾನುಕ್ರಮದಲ್ಲಿ 'ಹಾಲ್', 'ಸೊಸಾಯಿಟಿ'ಗಳಲ್ಲಿ ಅನೇಕ ಸಂಸ್ಥೆಗಳು ಕಾಲೇಜುಗಳಾಗಿ ಪರಿವರ್ತನಹೊಂದಿದವು. ಕಾಲೇಜುಗಳು ವಸತಿ ಸೌಕರ್ಯವನ್ನು ಕಲ್ಪಿಸಿಕೊಡುವುದರ ಜೊತೆಗ, ಧಾರಾಳವಾಗಿ ದಾನ, ದತ್ತಿ, ಉಂಬಳಿಗಳನ್ನೂ ಪಡೆಯತೊಡಗಿದವು. ಅನಂತರದಲ್ಲಿ ಅವು ವಿಶ್ವವಿದ್ಯಾನಿಲಯದ ಅಧ್ಯಾಪಕವರ್ಗಕ್ಕೂ ಆರ್ಥಿಕ ಅನುಕೂಲ್ಯವನ್ನು ಒದಗಿಸಲಾರಂಭಿಸಿದವು. ಆ ಹೊತ್ತಿಗೆ ವಿಶ್ವವಿದ್ಯಾನಿಲಯದ ಸದಸ್ಯತ್ವವನ್ನು ಪಡೆಯುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಕೇಂಬ್ರಿಜ್‌ನ ಯಾವೊಂದು ಕಾಲೇಜಿನಲ್ಲಿ ಮೊತ್ತ ಮೊದಲು ಪ್ರವೇಶವನ್ನು ಪಡೆಯಬೇಕಾಗುತ್ತದೆ.

ಕೇಂಬ್ರಿಜ್ಜಿನಲ್ಲಿಯೂ ಆಕ್ಸಫರ್ಡಿನಲ್ಲಿಯೂ ಮಧ್ಯಾಹ್ನ ಹಾಗೂ ಸಂಧ್ಯಾಕಾಲದಲ್ಲಿ ಉಳಿದ ಹೊತ್ತಿಗೆ ಇಡಿಯ ಊರೆಲ್ಲ ನಿನದಗೊಳ್ಳುವಂತೆ, ಪ್ರತಿಧ್ವನಿಸುವಂತೆ ಕ್ರಿಸ್ತ ಮಂದಿರದ ಗಂಟೆಗಳು ಬಾರಿಸುತ್ತಿರುತ್ತವೆ. ಅಲ್ಲಿನ ವಿದ್ಯಾರ್ಥಿ, ಅಧ್ಯಾಪಕ ಊಟಕ್ಕೆ ಮೊದಲು ಕ್ರಿಸ್ತಮಂದಿರವನ್ನು ಪ್ರವೇಶಿಸಿ ತನ್ನ ಪೂಜೆಯನ್ನು ಸಲ್ಲಿಸುವ ಪರಿಪಾಠವಿದೆ. ಆದರೆ ಎಲ್ಲರೂ ಆ ಪರಂಪರೆಯನ್ನು ಅನುಸರಿಸದಿದ್ದರೂ ಕಾಲೇಜಿನ ಆವರಣದಲ್ಲಿ ಕ್ರಿಸ್ತಮಂದಿರವನ್ನು, ಇಲ್ಲವೆ ಕ್ರಿಸ್ತಮಂದಿರದ ಬಳಿ ಕಾಲೇಜನ್ನೂ ನಾವು ಕಾಣುತ್ತೇವೆ. ಹದಿಮೂರನೆಯ ಶತಮಾನದ ನಂತರ ಕಾಲೇಜುಗಳು ಸುವ್ಯವಸ್ಥಿತವಾದ ಆಡಳಿತಕ್ಕೆ ಒಳ

ಪಟ್ಟು ರಚಿತವಾದಂತಿಲ್ಲ. ಕಾಲೇಜಿನ ಆವರಣ. ದಲ್ಲಿ ಕ್ರಿಸ್ತಮಂದಿರ ನಿರ್ಮಿತವಾದುದನ್ನು ನಾವು ಗುರುತಿಸುತ್ತೇವೆ. ಅದಕ್ಕೂ ಪೂರ್ವ ದಲ್ಲಿದ್ದ 'ಹಾಲ್' 'ಸೋಸಾಯಿಟಿ' ಗಳಿಗೆ ಆ ಸೌಲಭ್ಯವಿರಲಿಲ್ಲ.

ಇಂದು ಕೇಂಬ್ರಿಜಿನಲ್ಲಿ ಎಂಟು ಸಾವಿರ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಓದುತ್ತಿದ್ದಾರೆ. ಊರತುಂಬ ಹೆಜ್ಜೆಹೆಜ್ಜೆಗೂ ಹಬ್ಬಿರುವ ಕಾಲೇಜುಗಳನ್ನೂ, ಕ್ರಿಸ್ತಮಂದಿರಗಳನ್ನೂ-ಶಿಕ್ಷಣಾಲಯ, ವಾಚನಾಲಯಗಳನ್ನೂ ಸಂದರ್ಶಿಸುವ ಪ್ರವಾಸಿಗನಿಗೆ 'ಕೇಂಬ್ರಿಜ್ ಆಗಲಿ, ಆಕ್ಸ್‌ಫರ್ಡ ಆಗಲಿ ಒಂದೇ ದಿನದಲ್ಲಿ ಬೆಳೆಯ ಲಿಲ್ಲ, ಅದರ ಬೆಳವಣಿಗೆಗೆ ಎಂಟು ನೂರು ವರ್ಷಗಳು ಬೇಕಾದವು' ಎನ್ನುವುದು ವಿದಿತ ವಾಗದಿರದು.

ಯುರೋಪಿನಲ್ಲಿ ಹತ್ತನೆಯ ಶತಮಾನದ ಪೂರ್ವದಲ್ಲಿ ಧಾರ್ಮಿಕಸಂಸ್ಥೆ(Church)ಗಳೇ ವಿದ್ಯಾಕೇಂದ್ರಗಳಾಗಿದ್ದವು. ಅವುಗಳ ನೇತೃತ್ವ ದಲ್ಲಿ ಶಿಕ್ಷಣಬೋಧೆ ನಡೆಯುತ್ತಲಿದ್ದಿತು. ಆದರೆ ಪದುವಾ, ಬೋಲ್ಗೋನಾ ಹಾಗೂ ಪ್ಯಾರಿಸ್‌ಗಳಲ್ಲಿ ಸ್ವಾಯತ್ತತೆಯನ್ನು ಹೊಂದಿದ ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬರತೊಡ ಗಿದ ಆ ಕಾಲದಲ್ಲಿ ಇಂಗ್ಲಂಡಿನಲ್ಲಿಯೂ ಶಿಕ್ಷಣ ಪ್ರಪಂಚದಲ್ಲಿ ಮಾರ್ಪಾಡಾಯಿತು. ಮೂರನೇ ಹೇನ್ರಿಯ ಆಳ್ವಿಕೆಯ ಕಾಲದಲ್ಲಿ (೧೨೨೯) ಕೇಂಬ್ರಿಜ್ ವಿಶ್ವವಿದ್ಯಾನಿಲಯಕ್ಕೆ ಒಂದು ಸಾಂಘಿಕ ಸ್ವರೂಪವು ಬಂದಿತೆಂದು ಹೇಳಬಹುದು. ಅಲ್ಲಿ ಮೊತ್ತಮೊದಲನೆಯ ಕಾಲೇಜು 'ಪೀಟರ್ ಹೌಸ್' ೧೨೮೪ ರಲ್ಲಿ ಸ್ಥಾಪಿತವಾಯಿತು. ಅಲ್ಲಿಯ ವರೆಗೆ ವಿದ್ಯಾರ್ಥಿಗಳು ಊರಿನಲ್ಲಿ ಬಾಡಿಗೆ ಖೋಲಿ, ಮನೆಯಲ್ಲಿ ಇರುತ್ತಿದ್ದರು.

ಊರಿನಲ್ಲಿ ಬಾಡಿಗೆ ಖೋಲಿ ಹಿಡಿದು ಓದು ವುದು ವಿದ್ವತ್ತಿಗೇ ನ್ಯೂನವೆಂದು ಭಾವಿಸಿದ ಕೇಂಬ್ರಿಜಿನ ಆಚಾರ್ಯರು ಕಾಲೇಜುಗಳನ್ನು ರಚಿಸಿ ಅಲ್ಲಿ ಇರಲು ವಾಸಸ್ಥಳಗಳನ್ನು ನಿಯೋಜಿಸಿದರು. ಅಂದಿನಿಂದ ಇಂದಿನವರೆಗೂ ಯುರೋಪಿನ ಕೆಲವೇ ವಿಶ್ವವಿದ್ಯಾನಿಲಯ ಗಳಲ್ಲಿ ಎಂದರೆ, ಆಕ್ಸ್‌ಫರ್ಡ, ಕೇಂಬ್ರಿಜ್ ಮತ್ತು ಡಬ್ಲಿನ್‌ಗಳಲ್ಲಿ ಓದು ಮತ್ತು ವಾಸ್ತವ್ಯ ಒಂದೇ ಕಡೆ ನಡೆಯುತ್ತವೆ. ಅದ್ದ ರಿಂದಲೇ, ಅಲ್ಲಿ 'ಸ್ನಾತಕ' (Grown) ಮತ್ತು ನಾಗರಿಕರ (Town) ನಡುವಿನ ಅಂತರ ಯಾರೂ ಗಮನಿಸಬಹುದಾದ ಅಂತರವಾಗಿದೆ.

[೨]

ಕೇಂಬ್ರಿಜ್ ವಿಶ್ವವಿದ್ಯಾನಿಲಯವನ್ನು ಯಾರೊಬ್ಬರೇ 'ಕಟ್ಟಲಿಲ್ಲ' ಅದು ಶತಮಾನ ಗಳ ಅವಧಿಯಲ್ಲಿ 'ಬೆಳೆಯಿತು' ಎಂದು ಈ ಮೊದಲೆ ಹೇಳಿದ್ದೇನೆ. ಅದರ ಬೆಳವಣಿಗೆಗೆ ಇಂಗ್ಲಂಡಿನ ಜನಸಾಮಾನ್ಯರೂ ಧರ್ಮಾಧಿ ಕಾರಿಗಳೂ ರಾಜಕುಟುಂಬದವರೂ ಎಲ್ಲರೂ ನೆರವಾಗಿದ್ದಾರೆಂದು ಕೇಂಬ್ರಿಜಿನ ಚರಿತ್ರೆಯೆ ಹೇಳುತ್ತದೆ.

ಆ ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಹದಿನಾಲ್ಕನೆಯ ಶತಮಾನಕ್ಕೆ ಮಹತ್ವದ ಸ್ಥಾನ ಸಿಗುತ್ತದೆ. ಆವೊಂದು ಶತಮಾನದಲ್ಲಿ ಏಳು ಕಾಲೇಜುಗಳು ಸಂಸ್ಥಾಪಿತವಾದವು. ಹದಿನೈದನೆಯ ಶತಮಾನದಲ್ಲಿ ಮತ್ತೆ ನಾಲ್ಕು ಕಾಲೇಜುಗಳು, ಹದಿನಾರರಲ್ಲಿ ಮತ್ತೆ ಏಳು ಕಾಲೇಜುಗಳು, ಹದಿನೇಳರಲ್ಲಿ ನಾಲ್ಕು, ಹತ್ತೊಂಬತ್ತರಲ್ಲಿ ಸೆಲ್ವಿನ್ ಮತ್ತು ಡೌನಿಂಗ ಮೂಡಿಬಂದವು. ಹತ್ತೊಂಬತ್ತನೆಯ ಶತ ಮಾನದ ವೈಶಿಷ್ಟ್ಯವೆಂದರೆ ಬರ್ಟನ್ (೧೮೬೭) ಮತ್ತು ನ್ಯೂನ್‌ಹ್ಯಾಮ್ ಕಾಲೇಜುಗಳು ಕೇವಲ ಹುಡಿಗೆಯರ ವಿದ್ಯಾಭ್ಯಾಸಕ್ಕಾಗಿ ರಚಿತವಾದವು. ಇಂಗ್ಲಂಡಿನ ವಿಶ್ವವಿದ್ಯಾಲಯ ಗಳ ಇತಿಹಾಸದಲ್ಲಿಯೇ ಮೊತ್ತಮೊದಲ ಬಾರಿ ಮಹಿಳೆಯ ಓದಿಗೆ ಅವಕಾಶ ಕೊಟ್ಟ ಶ್ರೇಯಸ್ಸು ಕೇಂಬ್ರಿಜ್‌ಗೆ ಹೋಗುವುದರ ಜೊತೆಗೆ, ಕ್ಲೇಅರ್, ಪೆಂಬ್ರುಕ್, ಕ್ವೀನ್ಸ, ಕ್ರಿಸ್ತಿ, ಸೇಂಟಜಾನ್, ಸಿಡ್ನಿ ಸಸೆಕ್ಸ ಕಾಲೇಜು—ಕೇಂಬ್ರಿಜಿನಲ್ಲಿ ಗಣನೀಯವಾದ ಈ ಆರೂ ಕಾಲೇಜುಗಳ ಸಂಸ್ಥಾಪನೆಗೆ ದತ್ತಿಯನ್ನು ಪಡೆದು ಕೃತಾರ್ಥತೆಯನ್ನು ಹೊಂದಿದ ಭಾಗ್ಯವೂ ಸಲ್ಲುತ್ತದೆ. ಮಹಿಳೆಯ ಓದಿಗೆ ಅವಕಾಶ ಕಲ್ಪಿಸಿಕೊಟ್ಟ ಕೇಂಬ್ರಿಜ್ ಆಕೆಯಿಂದ ನೆರವನ್ನೂ ಪಡೆದು ಪ್ರಗತಿ ಪಥದಲ್ಲಿ ಮುನ್ನಡೆಯಿತು.

ಭಾರತದಲ್ಲಿ ಕಲೆ, ಸಾಹಿತ್ಯ, ಶಿಕ್ಷಣಗಳು ಸಾರ್ವಜನಿಕರ ಆಶ್ರಯದ ಮೇಲೆ ಬೆಳೆದು ಬಂದವೆಂಬ ಮಾತನ್ನು ನಾವು ಇತಿಹಾಸ ಕಾರನ ಬಾಯಿಂದ ಕೇಳಿದ್ದೇವೆ. ಆದರೆ ಆಕ್ಸ್‌ಫರ್ಡನ್ನು ಸಂದರ್ಶಿಸಿ, ಕೇಂಬ್ರಿಜ್‌ನಲ್ಲಿ ಬಂದಿಳಿದ ಭಾರತೀಯ ಪಯಣಿಗನು ಇನ್ನಿಲ್ಲದ ಸೋಜಿಗವನ್ನು ಹೊಂದುತ್ತಾನೆ. ಅಲ್ಲಿನ ಕಾಲೇಜುಗಳನ್ನು ಪರಿಚಯಮಾಡಿಕೊಳ್ಳುತ್ತ ಮುಂದರಿದಾಗ ನಿಮಿಷ ನಿಮಿಷಕ್ಕೂ ಅವನಿಗೆ ಕೇಂಬ್ರಿಜಿನ ಬೆಳವಣಿಗೆಗೆ ರಾಜರಾಣಿಯ ರಿಂದಲೂ ಜನಸಾಮಾನ್ಯರಿಂದಲೂ ಬಂದ ದತ್ತಿಯ ಕಥೆಗಳ ಅನುಭವವಾಗುವುದು. ಆಕ್ಸ್‌ಫರ್ಡಿನಲ್ಲಿ ಕ್ವೀನ್ಸ ಕಾಲೇಜು ಒಂದು ನೇರವಾಗಿ ಇಂಗ್ಲಂಡಿನ ರಾಜವಂಶದಿಂದ ಪೋಷಿತವಾಯಿತು. ಇಲ್ಲಿ ಐದು ಕಾಲೇಜು ಗಳು—ಕಿಂಗ್ಸ, ಟ್ರಿನಿಟಿ, ಕ್ವೀನ್ಸ, ಕ್ರಿಸ್ತಿ, ಸೇಂಟ ಜಾನ್ಸ—ಆ ಬೃಹತ್‌ಮಂದಿರಗಳು ನೇರವಾಗಿ ಎಂಟನೆಯ ಎಡ್ವರ್ಡ, ಆರನೆಯ ಮತ್ತು ಏಳನೆಯ ಹೇನ್ರಿ ದೊರೆಗಳ ಪೋಷಣೆಯಲ್ಲಿ ಬೆಳೆದವು. ಕ್ವೀನ್ಸ ಕಾಲೇಜಿನ ಅಭ್ಯುದಯ ಕ್ಕಾಗಿ ಮಾರ್ಗರೆಟ್ ಮತ್ತು ಎಲಿಜಾಬೆತ್ ರಾಣಿಯರು ತಮ್ಮ ಐಶ್ವರ್ಯವನ್ನೇ ಧಾರೆ ಯಾಗೆರೆದರು. 'ಟ್ರನಿಟಿ'ಗಾಗಿ ಮೇರಿ ಬಾಳಿದಳು. ಕಾರ್ಪಸ್ ಕ್ರಿಸ್ತಿ ಕಾಲೇಜಿನ ಕಟ್ಟಡಕ್ಕೆ ರಾಣಿ ಎಲಿಜಾಬೆತ್ ಕಟ್ಟಡದ ಸಾಮಗ್ರಿಯನ್ನು ದಾನವಾಗಿತ್ತಳು. ಹೆನೋವರದ ರಾಜವಂಶಜರೂ ಆ ವಿದ್ಯಾನಿಲಯದ ಅಭಿವೃದ್ಧಿಗೆ ಧಾರಾಳವಾಗಿ ಧಾರೆಯೆರೆದರು. ಏಳನೆಯ ಎಡ್ವರ್ಡನು ಕೇಂಬ್ರಿಜಿನ ಬಗೆಗೆ ಅಗಾಧವಾದ ಪ್ರೀತಿಯನ್ನಿರಿಸಿಕೊಂಡಿದ್ದನು. ತನ್ನ ಮಗ 'ಟ್ರನಿಟಿ'ಯಲ್ಲಿ ನಾಡಿನ ಎಲ್ಲ ವಿದ್ಯಾರ್ಥಿಗಳೊಂದಿಗೆ ಓದುತ್ತ ಬೆಳೆಯಲೆಂದು ಹಾರಯಿಸಿ ಅಲ್ಲಿಗೆ ಕಳಿಸಿದನು.

ಧರ್ಮಗುರುಗಳೂ ಆ ವಿಶ್ವವಿದ್ಯಾನಿಲ ಯದ ಚಿರಂತನ ಪೋಷಣೆಯನ್ನು ಅಷ್ಟೇ ಶ್ರದ್ಧೆಯಿಂದ ನೆರವೇರಿಸಿದರು. 'ಪೀಟರ ಹೌಸ'ನ್ನು ಸಂಸ್ಥಾಪಿಸಿದವರು ಐಲಿಯ ಧರ್ಮಾಧಿಕಾರಿಗಳು (Bishop). ಗಾಸ್-ಲಿಲೆ ಮತ್ತು ಕೈಯಸ್ ಕಾಲೇಜುಗಳನ್ನು ಐಲಿಯ 'ವಿಕಾರ'ರು ಕಟ್ಟಿದರು. ಮಠವಾಗಿ ಆರಂಭವಾದ ಜೀಸಸ ಕಾಲೇಜು ಮಹಾವಿದ್ಯಾ ಮಂದಿರವಾಗಿ ಬೆಳೆಯಿತು. ಮಾಡಲೇನ್ ಕಾಲೇಜು ಕ್ರೋಲ್ಯಾಂಡ್, ಲಾಲ್ಡನ್ ಮತ್ತು ಐಲಿಊರಿನ ಸಂನ್ಯಾಸಿಗಳು ಕಟ್ಟಿದರು.

ಹಾಗೆಯೆ ಕೇಂಬ್ರಿಜಿನ ವಿದ್ಯಾಮಂದಿರದ ಗೋಡೆಗಳನ್ನು ರಚಿಸುವಲ್ಲಿಯೂ ಅಲ್ಲಿನ ಕ್ರಿಸ್ತಮಂದಿರ, ಪ್ರಾರ್ಥನಾಮಂದಿರಗಳ ನಿರ್ಮಾಣಕಾರ್ಯದಲ್ಲಿಯೂ ಕಲಾವಿದರೂ ವಿದ್ವಾಂಸರೂ ವಹಿಸಿದ ಶ್ರದ್ಧೆಯು ಅಪೂರ್ವ ವಾಗಿದೆ. ಸರ್ ಕ್ರಿಸ್ಟೊಫರ್ ಶಿನ್, ಸರ್ ಜಿ. ಜಿ. ಸ್ಕಾಟ್ ಮೊದಲಾದವರು ಕ್ಲೇಅರ್, ಪೆಂಬ್ರೂಕ್, ಸೇಂಟಜಾನ್ಸ ಮುಂತಾದ ವಿದ್ಯಾ ಮಂದಿರದ ಅಲಂಕಾರ ಕಾರ್ಯದಲ್ಲಿ ಕರಣತ್ರಯ ದಿಂದ ದುಡಿದರು. ಲೇಡಿ ಫ್ರಾನ್ಸಿಸ್ ಸಿಡ್ನಿ ಮತ್ತು ಸರ್ ಜಾರ್ಜ ಡೌನಿಂಗ ರಂತಹರು ತಮ್ಮ ಆಸ್ತಿಯೆಲ್ಲವನ್ನು ಕಾಲೇಜು ಸ್ಥಾಪಿಸು ವುದಕ್ಕೆ ಬರೆದುಕೊಟ್ಟರು. ನಮ್ಮ ನಾಡಿ ನಲ್ಲಿಯೂ ಸ್ಕೂಲು-ಕಾಲೇಜುಗಳಿಗೆ ಆಸ್ತಿ ಯನ್ನು ಕೊಡುವ ದಾನಿಗಳೂ ಅವುಗಳನ್ನು ನಡೆಸಿಕೊಂಡು ಹೋಗುವ ಧರ್ಮದರ್ಶಿಗಳೂ ಸಂನ್ಯಾಸಿಗಳೂ ಇದ್ದಾರೆ. ಆದರೆ ಆಕ್ಸ್‌ಫರ್ಡ ಕೇಂಬ್ರಿಜ್ ಮಾದರಿಯ ಕಾರ್ಯ ಇಂಗ್ಲಂಡಿನಲ್ಲಿ ಬಿಟ್ಟರೆ ಇನ್ನಾವದೇಶದಲ್ಲಿಯೂ ಆಗಿಲ್ಲವೆಂದು ತೋರುತ್ತದೆ. ಐರೋಪ್ಯರನ್ನು ಭೌತವಾದಿ (Materialist)ಗಳೆಂದು ತೆಗಳುವ ಪೌರ್ವಾತ್ಯ ಅಧ್ಯಾತ್ಮವಾದಿಗಳು ಇದಕ್ಕೆ ಏನು ಉತ್ತರ ಹೇಳುತ್ತಾರೆಯೊ !

'ಕೇಂಬ್ರಿಜ್‌ನ್ನು ಕಟ್ಟಲಿಲ್ಲ, ಅದು ಬೆಳೆಯಿತು' ಎಂಬ ಮಾತನ್ನು ಪರೀಕ್ಷಿಸುವವರು ಒಂದೆರಡು ಕಾಲೇಜುಗಳನ್ನು ಆಮೂಲಾಗ್ರ ವಾಗಿ ನೋಡಿದರೆ ಸಾಕು. ಕಾರ್ಪಸ್ ಕ್ರಿಸ್ತಿ ಕಾಲೇಜಿನ ಒಳಮೈ ಮೂಲ ಕಟ್ಟಡಕ್ಕೆ ಸೇರಿದ್ದು. ಆದರೆ ಅದರ ಮೇಲ್‌ಭಾವಣೆ ಯೆಲ್ಲ ತೀರ ಆಧುನಿಕವಾದುದು. ಪೀಟರ ಹೌಸಿನ ಅಡುಗಿಯಮನೆ ಕೇಂಬ್ರಿಜಿನಲ್ಲಿಯೇ ಪ್ರಾಚೀನವಾದುದು. ಅದರ ಪ್ರಾರ್ಥನಾ

ಮಂದಿರ ೧೭ನೆಯ ಶತಮಾನಕ್ಕೆ ಸೇರಿದ್ದು, ವಾಚನಾಲಯ ಟ್ಯೂಡರ್ ಕಾಲದ್ದು, ಸಭಾಂಗಣ, ಹೋದ ಶತಮಾನದ್ದು (೧೮೬೬-೭೦). ಗಿಲ್ಬರ್ಟ ಸ್ಕಾಟ್, ವಿಲಿಯಮ ಮಾರಿಸ್, ಫೋರ್ಡ ಮ್ಯಾಡೋಕ್ಸ ಬ್ರೌನ್ ಇವರೆಲ್ಲ ಅದರ ರಚನೆಯಲ್ಲಿ ಶ್ರಮವಹಿಸಿದರು. ೧೩೨೬ ರಲ್ಲಿ ಒಂದನೆಯ ಚಾರ್ಲಸ್ ಕಾಲದಲ್ಲಿ ಸಾಪಿತವಾದ ಕ್ಲೆಅರ ಹಾಲ್ ಕಟ್ಟಡವು ೧೮ನೇ ಶತಮಾನದಲ್ಲಿ ಮುಕ್ತಾಯವಾಯಿತು.

ಕೇಂಬ್ರಿಜಿಗೆ ಹೋಗುವವರು ಗಣಿತಶಾಸ್ತ್ರ ಓದುವುದಕ್ಕೆ ಮಾತ್ರ ಹೋಗಬೇಕು ಎಂಬ ತಿಳಿವಳಿಕೆಯೊಂದು ಪ್ರಚಾರದಲ್ಲಿದ್ದಂತೆ ತೋರುತ್ತಿದೆ. ಈ ಅಭಿಪ್ರಾಯ ಹೇಗೆ ಪ್ರಚಾರದಲ್ಲಿ ಬಂದಿತೊ ತಿಳಿಯದು. ಹದಿನೇಳನೆಯ ಶತಮಾನದಲ್ಲಿ ಬೇಕನ್, ಹದಿನೆಂಟನೆಯ ಶತಮಾನದಲ್ಲಿ ನ್ಯೂಟನ್, ಹತ್ತೊಂಬತ್ತನೆಯ ಶತಮಾನದಲ್ಲಿ ಡಾರ್ವಿನ್ ಕೇಂಬ್ರಿಜಿನಲ್ಲಿ ಓದಿ ವಿಜ್ಞಾನ ಶಾಸ್ತ್ರದಲ್ಲಿ ವಿಕ್ರಮವನ್ನೆ ಸ್ಥಾಪಿಸಿದರು. ಕೇಂಬ್ರಿಜಿನ ಆಧುನಿಕ ವಿಜ್ಞಾನಿಗಳಲ್ಲಿ ಆ್ಯಡಮ್ಸ ಏರಿ, ಕ್ಲಾರ್ಕ ಮ್ಯಾಕ್ಸವೆಲ್, ವಾರ್ಡ್ಸ ಕೆಪ್ಲಿನ್ಸ, ಸರ್ ಜೊಸೆಫ್ ಥಾಂಪ್ಸನ್‌ರನ್ನು ಹೆಸರಿಸಬಹುದಾಗಿದೆ. ವೈದ್ಯಕೀಯ ವಿಭಾಗದಲ್ಲಿ ಸರ್ ಮೈಕಲ್ ಫಾಸ್ಟರರನ್ನು ಕೇಂಬ್ರಿಜ್ ಕೊಟ್ಟಿತು. ಕಾಯದೆ ವಿಭಾಗದಲ್ಲಿ ಸರ್ ಹೇನ್ರಿ ಮೇನ್, ಸಿಜವಿಕ್; ಗಣಿತಶಾಸ್ತ್ರದಲ್ಲಿ ಬೆಂಟ್ಲೆ ಮತ್ತು ಪೋರ್ಸನ್; ಲ್ಯಾಟಿನ ಮತ್ತು ಗ್ರೀಕ್ ವಿಷಯಗಳಲ್ಲಿ ಮನ್ರೊ ಮತ್ತು ಜೆಬ್; ಅಧ್ಯಾತ್ಮಶಾಸ್ತ್ರದಲ್ಲಿ ವೆಸ್ಟ ಕಾಟ್ ಲಾಯಿಡ ಫುಟ್ ಮತ್ತು ಹೋರ್ಟರನ್ನು ಕೇಂಬ್ರಿಜಿನ ಕಾಲೇಜುಗಳು ವಿಶ್ವಕ್ಕೆ ನೀಡಿವೆ.

ಸಾಹಿತ್ಯಕ್ಷೇತ್ರದಲ್ಲಿ ಆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮಾಡಿದ ಸೇವೆ ಅಪೂರ್ವವಾಗಿದೆ. ಬಾಯರನ್, ಮೆಕಾಲೆ, ಥ್ಯಾಕರೆ, ಟೆನಿಸನ್, ಫಿಟ್ಜರಲ್ಡ, ಡ್ರಾಯಿಡನ್, ಸ್ಯಾಮುಯೆಲ್ ಬಟ್ಲರ್, ಗ್ರೇ, ಅಬ್ರಾಹಿಮ್ ಕೌಲೆ; ರಾಜಕೀಯದಲ್ಲಿ ವಿಲಿಯಮ್ ಪಿಟ್, ಕ್ರಾಮವೆಲ್ ಫೀಲ್ಡಮಾರ್ಶಲ್ ಸ್ಮಟ್ಸ, ಲಾರ್ಡ ಮಾಂಟೆಗೊಮೆರಿ; ಅರ್ಥಶಾಸ್ತ್ರದಲ್ಲಿ ಲಾರ್ಡಕೇನ್ಸ—ಹೀಗೆ ವಿದ್ಯೆಯ ಎಲ್ಲ ರಂಗಗಳಲ್ಲಿಯೂ ಆಗಸದೆತ್ತರಕ್ಕೆ ಮುಟ್ಟುವಂತಹ ಸತ್‌ಪುತ್ರರನ್ನು ನೀಡಿದ ಶ್ರೇಯಸ್ಸು ಕೇಂಬ್ರಜಿಗೆ ಸಂದಿದೆ.


[೩]

ನೋಟಕ್ಕೆ ಆಕ್ಸಫರ್ಡಿನ ಸೌಂದರ್ಯ ಕೇಂಬ್ರಜಿಗೆ ಬರುವುದಿಲ್ಲ. ಹಾಗೆ ಹೋಲಿಸುವುದೂ ಒಂದು ದೃಷ್ಟಿಯಿಂದ ತಪ್ಪಾದೀತೆಂದು ನನ್ನ ಎಣಿಕೆ. ಆ ಎರಡೂ ವಿಶ್ವವಿದ್ಯಾನಿಲಯಗಳು ಅಲ್ಲಿನ ಕಟ್ಟಡಗಳ ಸೌಂದರ್ಯದಿಂದಾಗಲಿ ಅಲ್ಲಿನ ಯಾವೊಂದು ಅಧ್ಯಾಪಕರ ಅದ್ವಿತೀಯ ಪಾಂಡಿತ್ಯದಿಂದಾಗಲಿ ಚಿರಸ್ಮರಣೀಯವಾಗಿ ಉಳಿಯುವವೆಂದು ತಿಳಿಯುವುದೂ ತಪ್ಪಾದೀತು.

ಕೇಂಬ್ರಿಜಿಗೂ ಆಕ್ಸಫರ್ಡಿಗೂ ವಿದ್ಯಾರ್ಥಿಗಳೂ ಅಧ್ಯಾಪಕರೂ ಬರುತ್ತಾರೆ, ಹೋಗುತ್ತಾರೆ. ಅಲ್ಲಿನ ವಿದ್ಯಾಮಂದಿರಗಳ ರಚನೆಯಲ್ಲಿಯೂ ಕಾಲಕ್ರಮದಲ್ಲಿ ಬದಲಾವಣೆಯೂ ನಡೆಯುತ್ತದೆ. ಆದರೆ ಪರಂಪರೆಯ ಮೇಲೆ ರಚಿತವಾದ ಆ ವಿಶ್ವವಿದ್ಯಾನಿಲಯಗಳ ಅಣುರೇಣುವಿನಲ್ಲಿಯೂ ಆ ನೆಲದ ಮೇಲೆ ಓಡಾಡುವವರ ಉಸಿರು ಆಡುತ್ತಿರುವುದನ್ನು ಯಾವ ಕಾಲದಲ್ಲಿಯೂ ಗುರುತಿಸಬಹುದಾಗಿದೆ. ಅಲ್ಲಿ ವಾಚನಾಲಯ, ತೋಂಟಪಟ್ಟಿ, ನದಿ ನಿರ್ಝರಣೆ, ಗಿಡಮರ, ವಿದ್ಯಾಮಂದಿರದ ಒಳಹೊರಗೆಲ್ಲ ಕಾಲಪುರುಷನು ಸದಾವಕಾಲವೂ ಸಂಚರಿಸುತ್ತಿದ್ದಾನೆ. ಶತಮಾನಗಳ ಕಥೆಯನ್ನು ಕಣ್ ಕಟ್ಟುವಂತೆ ವಿವರಿಸುತ್ತಿದ್ದಾನೆಂಬ ಅರಿವು ಅಲ್ಲಿ ತಿರುಗಾಡುವವರ ಅನುಭವಕ್ಕೆ ಬರುತ್ತದೆ.

'ಗ್ರ್ಯಾಂಟ ಚೆಸ್ಟರಿ'ನಲ್ಲಿ ಬಾಯರನ್' ಕವಿಯ ಹೊಂಡವಿದೆ. ಅವನು ಪ್ರತಿ ಸಂಜೆ ಅಲ್ಲಿ ಕಾವ್ಯಸಮಾಧಿಯಲ್ಲಿ ಕೂರುತ್ತಿದ್ದನು. ಕ್ರಿಸ್ತಿ ಕಾಲೇಜಿನ ಉದ್ಯಾನದಲ್ಲಿ 'ಮಲ್ಬೆರಿ' ಹಣ್ಣಿನ ಗಿಡವಿದೆ, ಅದು ಮಹಾಕವಿ ಮಿಲ್ಟನ್ ಕವಿಯ ಮಲ್ಬೆರಿ ಗಿಡವೆಂದು ಪ್ರಸಿದ್ಧವಾಗಿದೆ. ಕ್ವೀನ್ಸ ಕಾಲೇಜಿನ ಗೋಪುರದಲ್ಲಿ ಇರಾಸ್ಮಸನು ಓದುತ್ತಿದ್ದನು. ಪೆಂಬ್ರೂಕ್ ಕಾಲೇಜಿನ ಕೋಣೆಗಳಲ್ಲಿ ಗ್ರೇ ಕವಿಯು ವಾಸಿಸಿದನು. ನ್ಯೂಟನ್ ಟ್ರನಿಟಿ ಕಾಲೇಜಿನ ವಿದ್ಯಾರ್ಥಿ. ಸೇಂಟ ಜಾನ್ಸ ಕಾಲೇಜಿನಲ್ಲಿ ವರ್ಡ್ಸವರ್ಥ ಕವಿ ಅಭ್ಯಾಸಿಸಿದ.

ಈ ಎಲ್ಲ ನೆನಪುಗಳು ಆ ಭೂಮಿಯಲ್ಲಿ ತಿರುಗಾಡುವಾಗ ಮತ್ತೆ ಮತ್ತೆ ನೆನಪಿಗೆ ಬರುತ್ತವೆ. ಕೇಂಬ್ರಿಜ್ಜಿನಲ್ಲಿ ಓದುವವನು ಎಷ್ಟು ಭಾಗ್ಯಶಾಲಿ ಎಂಬ ಪ್ರಶ್ನೆ ಮನದಲ್ಲಿ ಮತ್ತೆ ಮತ್ತೆ ಬರುತ್ತದೆ. ಆಕ್ಸಫರ್ಡ, ಕೇಂಬ್ರಿಜಿನಲ್ಲಿ ಓದಿ ಬಂದವರನ್ನು ಕೇಳಿದರೆ, ಓದಿ ಬಂದವರು ಬರೆದಿರುವ ವಿವರಗಳನ್ನು ಕೇಳಿದರೆ, ಅವರ ಅನುಭವದಲ್ಲಿ ಆ ವಿದ್ಯಾನಗರಿಗಳ ಕಲ್ಲು, ಮಣ್ಣು ಕೂಡ ಜೀವಂತವಾಗಿದ್ದಂತೆ ಅನ್ನಿಸುತ್ತದೆ. ನೆನಪು ಕಹಿಯಿರಬಹುದು, ಅಹ್ಲಾದಕರವೂ ಆಗಿರಬಹುದು. ಸ್ನಾತಕ ಒಬ್ಬಂಟಿಗನಾಗಿ ದುಃಖದ ಜೀವನವನ್ನು ಕಳೆದಿರಬಹುದು, ಗೆಳತಿಯರ ಮಧ್ಯದಲ್ಲಿ ಸಂಭ್ರಮದ ಸನ್ನಿವೇಶಗಳನ್ನು ಅನುಭವಿಸಿರಬಹುದು. ಆದರೆ ಒಟ್ಟು ಅನುಭವದ ಪರಿಣಾಮ ಏನು?



ಕ್ವೀನ್ಸ್ ಕಾಲೇಜಿನ ಎರಸ್ಮಸ್ ಟಾವರ

'ಒಟ್ಟು ಪರಿಣಾಮ ಏನು?' ಎಂದು ಕೇಳುವ ಪ್ರಶ್ನೆಗೆ ಆಕ್ಸಫರ್ಡ ವಿದ್ಯಾರ್ಥಿ ಕೊಡುವ ಉತ್ತರವೆ ಬೇರೆ, ಕೇಂಬ್ರಿಜ್ಜಿನ ವಿದ್ಯಾರ್ಥಿ ಕೊಡುವ ಉತ್ತರವೆ ಬೇರೆ. ಆದರೆಅವರಿಬ್ಬರೂ ಚಳಿಗಾಲದ ದಿನಗಳಲ್ಲಿ ಅಗ್ಗಿಷ್ಟಿಕೆಯ ಮುಂದೆ ಕುಳಿತು ಅಲ್ಲಿ ಕಂಡ ಕನಸು, ಕಟ್ಟಿದ ಯೋಜನೆ, ಸಂಜೆ 'ಕ್ಲಬ್' ಸಭೆಗಳಲ್ಲಿ ಅನುಭವಿಸಿದ ಆ ಚರ್ಚೆ, ಆ ಸಹವಾಸ ವಸಂತ ಋತುವಿನ ಸಂಜೆ ಹುಲ್ಲುಗಾವಲಿನಲ್ಲಿ ಕುಳಿತು ಕಾಲೇಜಿನ ಆ ಬಯಲ ನಾಟಕಗಳನ್ನು ನೋಡಿದ ನೆನಹು, ವಾರ್ಷಿಕೋತ್ಸವದ ಇಡಿಯ ರಾತ್ರಿಯೆಲ್ಲ ಅನುಭವಿಸಿದ ಆ ನೃತ್ಯವಿಲಾಸ, ಹೊಲ ಬನಗಳಲ್ಲಿ, ನದಿ ನಿರ್ಝರಣೆಗಳ ಬಳಿಯಲ್ಲಿ ವಿಹರಿಸಿದ ಆ ಜಾವ-ಅವೆಲ್ಲ -ನೆನಪಿಗೆ ಒಟ್ಟಾಗಿ ಬಂದು ಮನಸ್ಸಿನ ಮೇಲೆ ಚಿರಂತನ ಮುದ್ರೆಯನ್ನು ಮೂಡಿಸುತ್ತವೆ. ಆ ನೆನಪಿಗೆ ಸರಿ ದೊರೆಯಾಗುವಂತಹ ಅನುಭವ ಅವನಿಗೆ ಆಯೆರಡು ವಿಶ್ವವಿದ್ಯಾನಿಲಯಗಳನ್ನು ಬಿಟ್ಟರೆ ಇನ್ನೆಲ್ಲಿಯೂ ಸಿಗುವಂತೆ ತೋರುವುದಿಲ್ಲ. ●

ಮಧ್ಯಮವರ್ಗೀಯ:

ಯಾರು ಈ ಮಧ್ಯಮವರ್ಗೀಯ ?

ಮಧ್ಯಮವರ್ಗವು ರಾಷ್ಟ್ರದ ಬೆನ್ನೆಲುಬು ಎಂದು ರಾಜಾಜಿ ಸಾರಿ ಅವರ ಮಹತ್ವವನ್ನು ರಾಷ್ಟ್ರಕ್ಕೆ ಮೊದಲುಬಾರಿಗೆ ತಿಳಿಸಿದರು. ಆದರೆ ಈ ಬೆನ್ನೆಲುಬು ರಾಷ್ಟ್ರದ ಅನೇಕ ಹೊಣೆಗಾರಿಕೆಗಳು. ಆರ್ಥಿಕ ಭಾರಗಳಿಂದ ಬಾಗತೊಡಗಿದೆ. ಯುದ್ಧದ ದುಷ್ಪರಿಣಾಮ ಈ ವರ್ಗದ ಮೇಲಾದಷ್ಟು ಬೇರಾವ ವರ್ಗದ ಮೇಲೂ ಆಗಿಲ್ಲ. ಈ ಮಧ್ಯಮವರ್ಗೀಯನ ಸ್ಥಿತಿಗತಿಗಳ ಒಂದು ಚಿತ್ರ ಈ ಲೇಖನದಲ್ಲಿದೆ.

ಲೇಖಕರು :
ಶ್ರೀ ಶ್ರೀನಿವಾಸ ಹಾವನೂರ
ಧಾರವಾಡ

ನಾನು, ನೀವು! ಈ ಪತ್ರಿಕೆಯನ್ನೋದುವ ಎಲ್ಲರೂ ಮಧ್ಯಮವರ್ಗೀಯರೇ ಎನ್ನಬಹುದು. ಮಧ್ಯಮ ವರ್ಗೀಯ ಎನ್ನುವ ಪದವನ್ನು, ಪತ್ರಿಕೆ-ಪುಸ್ತಕಗಳಲ್ಲಿ, ಭಾಷಣಗಳಲ್ಲಿ ಧಾರಾಳವಾಗಿ ಬಳಸುತ್ತಿದ್ದರೂ ಅನೇಕರಿಗೆ ಆ ಪದದ ಸ್ಪಷ್ಟಾರ್ಥವಾಗಿಲ್ಲ.

'ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ' ಎಂದು ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದ. ಭಗವಂತನ ವಾಣಿ ಅದು! ಹಾಗಾಗಿ ಆದಿಕಾಲದಿಂದಲೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬುದಾಗಿ ನಾಲ್ಕು ವರ್ಣಗಳು ನಮ್ಮ ಸಮಾಜದಲ್ಲಿ ಬಾಳಿಕೊಂಡು ಬಂದುವು. ಐತಿಹಾಸಿಕ ಕಾಲದಲ್ಲಿಯು ಕೂಡ ಇವೇ ವರ್ಣಗಳೇ ಸ್ವಲ್ಪ ಹೆಚ್ಚುಕಡಿಮೆಯಾಗಿ ಉಳಿದುಕೊಂಡುವು ಎನ್ನಬೇಕು. ಆದರೆ ಈಚಿನ ಇನ್ನೂರು ವರ್ಷಗಳಲ್ಲಿ ಈ ವರ್ಗೀಕರಣವು ಭಗವಂತನ ವಾಣಿಯನ್ನು ಲೆಕ್ಕಿಸದೇ ಹೇಳಹೆಸರಿಲ್ಲದಂತೆ ಓಡಿಹೋಯಿತು. ಈಗ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಪದಗಳು ಜನ್ಮಕ್ಕೆ ಅಂಟಿಕೊಂಡು ಬಂದ ಜಾತಿವಾಚಕಗಳಾಗಿ ಬಿಟ್ಟವೆಯಲ್ಲದೆ ಗುಣಕರ್ಮಗಳನ್ನು ಸೂಚಿಸುವ ವರ್ಣಗಳಾಗಿಲ್ಲ.

ಇಂದಿನ ಕಾಲವೆಂದರೆ ಪ್ರತಿಯೊಂದನ್ನೂ ದುಡ್ಡಿನ ಮಾನದಂಡದಿಂದ ಅಳೆದುನೋಡುವ ಕಾಲ, ಗುಣ ಮತ್ತು ಕರ್ಮಗಳನ್ನು ಅನುಸರಿಸಿ ಭಗವಂತನು ಅಜ್ಞ ಸಮಾಜವನ್ನು ವಿಭಾಗಿಸಲು ಹೋದರೆ, ಇಂದು ನಮ್ಮ ಸುಧಾರಿತ ಸಮಾಜ ತಾನೇ ಸಂಪತ್ತಿನ ಮಾನದಿಂದ ವರ್ಗಗಳನ್ನು ಕಲ್ಪಿಸಿಕೊಂಡಿತು.

ಇದ್ದವರು ಇಲ್ಲದವರು

ಆದರೆ ಈ ಮಾನದಿಂದ ಎಷ್ಟು ವರ್ಗಗಳನ್ನು ಮಾಡಬಹುದು? ದುಡ್ಡು ಇದ್ದವರದೊಂದು, ದುಡ್ಡು ಇಲ್ಲದವರದೊಂದು, ಹೀಗೆ ಎರಡೇ ತಾನೇ. ಅದರಲ್ಲಿ ಸಿರಿವಂತರು, ದುಡ್ಡಿನ ಬಲದಿಂದ ಜೀವನವನ್ನು ನಡೆಯಿಸುವವರಾದರು. ಅವರೇ ಮೇಲಿನ ವರ್ಗದವರು. ದುಡ್ಡು ಇಲ್ಲದ ಬಡವರು ಕೆಳವರ್ಗದವರೆನ್ನಿಸಿಕೊಂಡರು. ದುಡ್ಡಿದ್ದವರಿಗಾಗಿ ದುಡಿದು ತಿನ್ನಬೇಕಾಗಿ ಬಂದ ಅವರಿಗೆ ಶ್ರಮಜೀವಿ ಎಂಬ ಅಭಿಧೇಯವೂ ಬಂದಿತು.

ಆದರೆ ಇದು ಕಟ್ಟುನಿಟ್ಟಿನ ವ್ಯವಸ್ಥೆಯಾಗಲಿಲ್ಲ. ಎಲ್ಲರೂ ಸಿರಿವಂತರಾಗಲು ಸಾಧ್ಯವಿಲ್ಲವಷ್ಟೆ. ನಮ್ಮ ಬಡ ದೇಶದಲ್ಲಂತೂ ಸಿರಿವಂತರ ಸಂಖ್ಯೆ ಕಡಿಮೆಯೇ. ಬಡವರು ಸಾಕಷ್ಟು ಸಂಖ್ಯೆಯಲ್ಲಿದ್ದರೂ ಬೆವರನ್ನು ಹರಿಸಿಯೆ ಬಾಳ್ವೆ ನಡೆಸಬೇಕಾದ ಪ್ರಸಂಗ ಎಲ್ಲರಿಗೂ ಬರುವುದಿಲ್ಲ. ಎಂದರೆ ಸಿರಿವಂತರೂ ಅಲ್ಲದ ಬಡವರೂ ಅಲ್ಲದೆ ಇನ್ನೊಂದು ದೊಡ್ಡ ವರ್ಗ ನಮ್ಮ ದೇಶದಲ್ಲಿದೆ. ಇವರಲ್ಲಿ ದುಡ್ಡು ಇಲ್ಲ. ಹಾಗೆಂದು ಶ್ರಮದಿಂದ ಜೀವಿಸಬೇಕೆಂದಿಲ್ಲ. ಹಾಗೂ ಇಲ್ಲದ, ಹೀಗೂ ಅಲ್ಲದ ಅತಂತ್ರರು! ಇವರೇ ಮಧ್ಯಮವರ್ಗೀಯರು. ಹೀಗೆ ಈ ವರ್ಗದ ಹುಟ್ಟಿನಲ್ಲಿಯೆ ನಿರ್ದಿಷ್ಟ ತತ್ತ್ವವೆಂಬುದಿಲ್ಲ. ಈ ತ್ರಿಶಂಕು ಸ್ವರೂಪವೇ ಇವರ ಜೀವನದಲ್ಲಿ ಕಂಡುಬರುವುದಾಗಿದೆ. ಬಡವ ಅಥವಾ ಶ್ರಮಜೀವಿಗಳಿಗೆ ತಮ್ಮ ನಾಯಕರೆಂಬವರಿದ್ದಾರೆ. ಸಿರಿವಂತರಿಗೆ ಯಾವ ನಾಯಕರ ಅಗತ್ಯವೂ ಇಲ್ಲ. ತಮ್ಮ ದುಡ್ಡಿನ ಬಲದಿಂದ ಅವರು ಏನನ್ನೂ ಸಾಧಿಸಬಲ್ಲರು. ಆದರೆ ಈ ಅತಂತ್ರ ಮಧ್ಯಮವರ್ಗೀಯನನ್ನು ಯಾರೂ ಕೇಳುವವರೇ ಇಲ್ಲ. ಅವನ ಕಷ್ಟ ಸುಖಗಳ ಅರಿವು ಇತರರಿಗೆ ಆಗಿಲ್ಲ. ಇನ್ನು ತಾನಾಗಿ ಹೇಳಿಕೊಳ್ಳಬೇಕೆಂದರೆ ಆತ್ಮಾಭಿಮಾನ ಅಡ್ಡ ಬರುತ್ತದೆ-ಅವನಿಗೆ.

ದೇಶದ ಬೆನ್ನೆಲುಬು

ಇದನ್ನರಿತು, ದೂರದೃಷ್ಟಿಯ ರಾಜಾಜಿ ಮೊದಲಬಾರಿ ಬಹಿರಂಗವಾಗಿ ಅವನ ಬಗ್ಗೆ ಸಹಾನುಭೂತಿಯನ್ನು ತೋರಿದರು. ದೇಶದ ಬೆನ್ನೆಲುಬು ಎಂದರೆ ಮಧ್ಯಮವರ್ಗೀಯನೇ ಎಂದರು. ಹೊಸ ಹೊಸ ವಿಚಾರಗಳಿಂದ ಉದ್ಭೂತವಾದ ಸಾಮಾಜಿಕ ಸ್ಥಿತ್ಯಂತರಗಳಿಗೆ ಮಧ್ಯಮವರ್ಗೀಯನೇ ಕಾರಣ. ಕರಭಾರವನ್ನು ಹೊತ್ತು, ಜನಬಲವನ್ನು ಒದಗಿಸಿ ರಾಜ್ಯಸೂತ್ರಗಳನ್ನು ನಡೆಯಿಸುವವ ಮಧ್ಯಮವರ್ಗೀಯನೇ ಎಂದರು. ಆದರೆ ಈ ಬೆನ್ನೆಲುಬು ಬಾಗುತ್ತ, ಆದರೂ ತನ್ನ ಕರ್ತವ್ಯವನ್ನು ಸಾಗಿಸುತ್ತ, ದೇಶವು ಗೂನವಾಗತೊಡಗಿತು ಎಂದು ಹೇಳಿದರೆ ತಪ್ಪೇನು? ಮಧ್ಯಮವರ್ಗೀಯನಿಗೂ ಈಗೀಗ ಅನಿಸತೊಡಗಿದೆ—ತನ್ನಿಂದ ದೇಶಕ್ಕೆ ಇಷ್ಟೊಂದು ಉಪಕಾರವಾಗುತ್ತಿದೆ. ತನಗೆ ಮಾತ್ರ ಸಮಾಜದಲ್ಲಿ ನೆಮ್ಮದಿಯಿಂದ ಬಾಳುವ ಮೂಲಭೂತ ಅವಕಾಶವಿಲ್ಲ ಎಂದು. ಅವನ ವೈಯಕ್ತಿಕ ಹಾಗೂ ಕುಟುಂಬಜೀವನ ಅದೆಷ್ಟು ಹಸಗೆಟ್ಟು ಹೋಗಿದೆಯೆಂಬುದನ್ನೇ ಹೇಳುವ ಕಾಲವೀಗ ಬಂದಿದೆ.

ಇದಕ್ಕೂ ಮುನ್ನ ಯಾರಿಗೆ ನಾವು ಮಧ್ಯಮವರ್ಗೀಯನೆಂದು ಕರೆಯಬೇಕೇನ್ನುವುದರ ಬಗ್ಗೆ ಸ್ಪಷ್ಟಕಲ್ಪನೆ ನಮಗೇ ಇರಬೇಕಾದುದು ಅಗತ್ಯ. ಇಂಥವೇ ಲಕ್ಷಣ ವಿಶೇಷಗಳೆಂದು ಇದು ವರೆಗೆ ಗೊತ್ತುಪಡಿಸಲಾಗಿಲ್ಲ. ನಮ್ಮ ದೇಶದಲ್ಲಿ ಅವರ ಸಂಖ್ಯೆ ಎಷ್ಟು ಎಂಬುದು ಇನ್ನೂ ವಿಶದವಾಗಿಲ್ಲ. ಆ ಸಂಖ್ಯೆ ದೊಡ್ಡದು ಎಂಬುದಷ್ಟೆ ಪರಿಚಿತವಾಗಿದೆ. ಜನಗಣತಿಯ ಅಧಿಕಾರಿಗಳು ತಮ್ಮ ಪ್ರಶ್ನಾವಳಿಗೆ ದೊರೆತ ಕೆಲವು ಉತ್ತರಗಳಿಂದ,ಅಸಾಧಾರಣ ವಿವರಗಳನ್ನು ಕೊಡುತ್ತಾರೆ. ಆದರೆ ಮಧ್ಯಮವರ್ಗೀಯರ ಸಂಖ್ಯೆ ಎಷ್ಟು ಎಂಬುದನ್ನು ಹೇಳಲಾರದವರಾಗಿದ್ದಾರೆ. ನಮ್ಮ ದೇಶದಲ್ಲಿ ಮಧ್ಯಮವರ್ಗೀಯನೆಂದು ಯಾರನ್ನು ಹೆಸರಿಸಬೇಕು ಎನ್ನುವದರ ಬಗ್ಗೆ ಸಮಾಜಶಾಸ್ತ್ರಜ್ಞರಿಂದ ನಿರ್ಣಯವಾಗದಿರುವಾಗ, ಜನಗಣತಿಯವರದೇನು ತಪ್ಪಲ್ಲ. ಅಂತೆಯೆ ಸ್ಥೂಲವಾಗಿ ಮಧ್ಯಮವರ್ಗೀಯನ ಲಕ್ಷಣಗಳನ್ನು ಇಲ್ಲಿ ಕೊಡಬಯಸಿದೆ.

ಧನ ಅಥವಾ ದೇಹ ಬಲ ಇವೆರಡೂ ಇಲ್ಲದವ ಮಧ್ಯಮವರ್ಗೀಯ ಎಂದು ಹೇಳಿತಷ್ಟೆ. ಹಾಗಿದ್ದರೆ ಇವರು ಬದುಕುವುದು ಯಾತರ ಮೇಲಿಂದ? ಅದೇ ಬುದ್ಧಿ! ಇವರೆಲ್ಲರೂ

'ಬುದ್ಧಿವಂತ'ರೆಂದು ಹೇಳಲಿಕ್ಕಾಗದಿದ್ದರೂ ಬುದ್ಧಿಯ ಯೋಗ್ಯತಾನುಸಾರದ ಉಪಯೋಗದ ಬಲದಿಂದಲೇ ಇವರು ಜೀವನ ಸಾಗಿಸಬೇಕಾಗುತ್ತದೆ. ಸಂಕುಚಿತಾರ್ಥದಲ್ಲಿ ಬುದ್ಧಿಜೀವಿ ಎಂಬ ಪದವನ್ನು ಇವನಿಗೆ ಅನ್ವಯಿಸಬಹುದು. ಬುದ್ಧಿಯ ಬಲದಿಂದ ಬಾಳ್ವೆಮಾಡಬೇಕಾಗುವುದರಿಂದ ಅದನ್ನು ವ್ಯಾವಹಾರಿಕವಾಗಿ ಸ್ವಲ್ಪ ಬೆಳೆಸಿಕೊಳ್ಳಬೇಕಾಗುವುದು! ಅಂತೆಯೇ ಶಾಲೆ-ಕಾಲೇಜಿನ ಶಿಕ್ಷಣ ಅವರಿಗೆ ಅವಶ್ಯವಾಯಿತು.

ಮುಖ್ಯ ಲಕ್ಷಣಗಳು

ಹೀಗೆ ಮಧ್ಯಮವರ್ಗೀಯನ ಮುಖ್ಯ ಲಕ್ಷಣವೆಂದರೆ ಸುಶಿಕ್ಷಿತತನ. ಮೇಲೆ ಹೇಳಿದಂತೆ ಇವನಿಗೆ 'ಬುದ್ಧಿವಂತ' ಎನ್ನಲಾಗದಿದ್ದರೂ 'ಶಿಕ್ಷಣವಂತ' ಎಂದು ಧಾರಾಳವಾಗಿ ಹೇಳಬಹುದು. ಹೈಸ್ಕೂಲಿನ ಇಲ್ಲವೆ ಕಾಲೇಜಿನ ಮೆಟ್ಟಲನ್ನು ಅವನು ಖಂಡಿತವಾಗಿ ಹತ್ತಿದವನಿರುತ್ತಾನೆ. ಶಿಕ್ಷಣವನ್ನು ಪಡೆಯುವ ಯೋಗ್ಯತೆ, ಅನುಕೂಲತೆಗಳು ಇರಲಿ, ಇಲ್ಲದಿರಲಿ, ಶಿಕ್ಷಣವನ್ನು ಆತ ಹೊಂದಲೇಬೇಕು. ಪರಕೀಯರಿಂದ ರೂಪಿಸಲ್ಪಟ್ಟ ನಮ್ಮ ಶಿಕ್ಷಣ ಪದ್ಧತಿಯು ಮೂಲತಃ ನೌಕರದಾರರನ್ನು ನಿರ್ಮಿಸುವುದಕ್ಕಾಗಿ ಇದ್ದಿತು ಎಂಬುದು ಎಲ್ಲರಿಗೂ ತಿಳಿದಿದ್ದ ಮಾತು. ಸುಶಿಕ್ಷಿತರಲ್ಲಿ ಬಹುಜನ ನೌಕರದಾರರೇ ಇದ್ದವರಿದ್ದಾರೆ. ಇನ್ನು ಶಿಕ್ಷಣಕ್ಕಾಗಿ ನಗರದಲ್ಲೇ ಇರಬೇಕಾದುದರಿಂದ, ಇಂಥವರು ಅಗತ್ಯವಾಗಿ ನಗರವಾಸಿಗಳೇ ಆಗಬೇಕಾಗಿ ಬಂತು.

ಎಲ್ಲ ಶಿಕ್ಷಣವಂತರಿಗೂ ನೌಕರಿ ದೊರೆಯುವದು ಈಗಿನ ದಿನಗಳಲ್ಲಂತೂ ಅಸಂಭವ. ಹಾಗಾಗಿ, ತಮ್ಮ ಬುದ್ಧಿಯನ್ನು ವ್ಯಾವಹಾರಿಕವಾಗಿ ಬಳಸಿಕೊಳ್ಳುವ ಸಾಹಿತಿಗಳೂ ಕಲಾವಿದರೂ ಸಾಮಾಜಿಕ ಕಾರ್ಯಕರ್ತರೂ ರಾಜಕಾರಣಿಗಳೂ ಚಿಕ್ಕಪುಟ್ಟ ಉದ್ಯೋಗಸ್ಥರೂ ಮಧ್ಯಮವರ್ಗೀಯನ ಸದರಿನಲ್ಲಿಯೆ ಬರುತ್ತಾರೆ.

ಆರ್ಥಿಕ ಮಾನದಂಡದಿಂದ ಇಂದಿನ ಸಮಾಜದಲ್ಲಿ ವರ್ಗಗಳಾಗಿವೆ ಎಂದು ಮೇಲೆ ಹೇಳಿತು. ಹೆಚ್ಚು ವರಮಾನವುಳ್ಳವ ಶ್ರೀಮಂತ, ಕಡಿಮೆ ವರಮಾನವುಳ್ಳವನು ಬಡವ ಎಂದೆನ್ನಬಹುದಾದರೂ ಮಧ್ಯಮ ವರಮಾನವುಳ್ಳವನು ಮಧ್ಯಮವರ್ಗೀಯ ಎಂದೆನ್ನಲು ಬಾರದು. ದಿನಗೂಲಿಯನ್ನು ಪಡೆದು ಚರಿತಾರ್ಥ ಸಾಗಿಸುವ ಓರ್ವ ಶ್ರಮಜೀವಿ ಬಡವನಾಗಿ ಕಂಡರೂ ಇಂದಿನ ಕೆಲವು ಕಾನೂನು, ಸೌಲಭ್ಯಗಳ ಮೂಲಕ ಸಾಕಷ್ಟು ದುಡ್ಡಿದ್ದವನಲ್ಲದೆ ಉಂಡುಟ್ಟು ಸುಖವಾಗಿರುತ್ತಾನೆ. ಮನೆಯಲ್ಲಿ ಒಬ್ಬರಿಗಿಂತ ಹೆಚ್ಚು ಜನ ದುಡಿಯುವವರಿದ್ದರಂತೂ ಆ ಶ್ರಮಜೀವಿಯ ಸ್ಥಿತಿಗತಿ ಇನ್ನಷ್ಟು ಸುಸ್ಥಿತಿಯದಾಗಿರುತ್ತದೆ. 'ಕಾಲ ಬದಲಾಗುತ್ತ ನಡೆದಿದೆ' ಎಂದು ಹಳೆಯ ಮುದುಕರು ಆಡುವುದರಲ್ಲಿ ಈ ಅಂಶವೇ ಇದೆ!

ನಿಶ್ಚಿತ ವರಮಾನವಿಲ್ಲ

ಮಧ್ಯಮವರ್ಗೀಯನ ವರಮಾನವನ್ನು ಇಷ್ಟೇ ಎಂದು ಹೇಳಲುಬಾರದು. ಅದನ್ನು ನೀರ್ದಿಷ್ಟಪಡಿಸಹೋದರೆ ಸಮರ್ಪಕವೆನಿಸುವುದೇ ಇಲ್ಲ. ಆರ್ಥಿಕ ತಳಹದಿ ಎಂದ ಮೇಲೆ ಹೇಳಲೇಬೇಕು ಎಂದಾದರೆ ೧೦೦ ರೂ.ಗಳಿಂದ ೫೦೦ ರೂ. ಗಳ ವರೆಗೆ ತಿಂಗಳಗಳಿಕೆ ಇದ್ದವರು ಮಧ್ಯಮ ವರ್ಗೀಯರು ಎನ್ನಬಹುದೇನೊ. ಆದರೆ ಉಣಲು, ತೊಡಲು ಗತಿ ಇಲ್ಲದ ಕೆಲವರೂ ಇತರ ಮಧ್ಯಮ ವರ್ಗೀಯರ ಜೊತೆಗೇ ಸಮಾವೇಶ ಹೊಂದುತ್ತಾರೆ. ಅದಕ್ಕೆ ಕಾರಣವೆಂದರೆ ಅವರಲ್ಲಿ ಶಿಕ್ಷಣಕ್ಕಾಗಿ ಇರುವ 'ಅವಾಸ್ತವ' ಮಹತ್ವ.

ಇಲ್ಲಿಯೆ ಮುಂದುವರಿದವರು ಹಿಂದುಳಿದವರು ಎಂಬ ಹೊಸ ಸಾಮಾಜಿಕ ಮಾರ್ಗ ಅಲ್ಲ ರಾಜಕೀಯ ವರ್ಗಗಳತ್ತ ಬರಬೇಕಾಗುವುದು. ಆರ್ಥಿಕ ರೀತ್ಯಾ ಹಿಂದುಳಿದವರನ್ನು ಮುಂದೆ ತರಬೇಕೆನ್ನುವುದು, ಯಾವದೇ ಪ್ರಜಾಪ್ರಭುತ್ವವಾದೀ ಸರಕಾರದ ಧ್ಯೇಯವಾಗಿರಬೇಕಾಗಿರುವುದಾದರೂ ಬುದ್ಧಿಯ ಬಲದಿಂದ, ಇಷ್ಟು ದಿನಮಾನಗಳನ್ನು ಬದುಕಿ ಕಳೆದಿದ್ದಾರೆಂದು ಅವರನ್ನು ಮುಂದುವರಿದವರು ಎನ್ನಲಾಯಿತು. ಎರಡು ಹೊತ್ತಿನ ಅನ್ನಕ್ಕೆ ಗತಿ ಇಲ್ಲದ ಕೆಲವರೂ ಮುಂದುವರಿದವರೆಂಬ ಶಿರೋನಾಮೆಯನ್ನು ಹೊಂದಬೇಕಾಗಿ ಬಂತು. ಈ ಮುಂದುವರಿದವರೆಲ್ಲರೂ ಮಧ್ಯಮ ವರ್ಗೀಯರೂ ಆದರು. ಹೀಗೆ ಇಲ್ಲಿ ಹೇಳಬಯಸಿದ ಮಧ್ಯಮ ವರ್ಗೀಯರಲ್ಲಿ ಮುಂದುವರಿದವರೇ ಹೆಚ್ಚಾಗಿ ಇರುವರೆಂಬ ಮಾತಿನ ಜೊತೆಗೆ, ಆರ್ಥಿಕ ರಿತ್ಯಾ ಅನುಕೂಲ ಸ್ಥಿತಿಯಲ್ಲಿಲ್ಲದವರೂ ಈ ವರ್ಗದಲ್ಲಿ ಬರುತ್ತಾರೆ ಎಂಬುದನ್ನೂ ನೆನೆಯತಕ್ಕುದಾಗಿದೆ. ಉಪವರ್ಗಗಳು ಮಧ್ಯಮ ವರ್ಗದವರ ಸಂಖ್ಯೆ ದೊಡ್ಡದಿದೆ ಎಂದಿತಷ್ಟೆ ಶಿಕ್ಷಣ ಹಾಗೂ ಆರ್ಥಿಕ ವರಮಾನದಿಂದ ಅವರಲ್ಲೇ ಮಧ್ಯಮವರ್ಗೀಯ, ಕೆಳ ಮಧ್ಯಮ ವರ್ಗೀಯ ಎಂಬ ಅಸ್ಪಷ್ಟ ಉಪವರ್ಗಗಳೂ ಈಚೆಗೆ ಆಗಿವೆ. ಅವರಲ್ಲಿ ಕೆಳಮಧ್ಯಮದವರೇ ಹೆಚ್ಚು ಜನರಿದ್ದಾರೆ. ಇಲ್ಲಿ ಮೇಲಿನಿಂದ ಕೆಳ ಮಧ್ಯಮ ವರ್ಗಕ್ಕೆ ಹೋಗುವವರದೂ ಕೆಳದಿಂದ ಮೇಲಿನ ವರ್ಗಕ್ಕೆ ಹೋಗುವವರದೂ ಸರತಿ ಸಾಕಷ್ಟಿದೆ. ಇದು ಸ್ಥಿರವಾದ ವರ್ಗೀಕರಣವಲ್ಲವಾದ್ದರಿಂದ (fluctuating) ಸ್ಥೂಲವಾಗಿಯೆ ಇದನ್ನು ಗ್ರಹಿಸುವುದು ಒಳಿತು.

ಮಧ್ಯಮ ವರ್ಗೀಯನ ಅತಂತ್ರತೆಗೆ ಇಲ್ಲಿ ಒಂದು ಉತ್ತಮ ನಿದರ್ಶನವಿದೆ. ಮೇಲಿನ ಅಂತಸ್ತಿನಿಂದ ಕೆಳಮಧ್ಯಮ ವರ್ಗಕ್ಕೆ ಸರಿಯುತ್ತ ಹೋದ ವ್ಯಕ್ತಿ ಸಮಾಜದಲ್ಲಿ ತನ್ನ ಸ್ಥಾನಮಾನವನ್ನು, ತನ್ನ ಜೀವನ ಮಟ್ಟವನ್ನು ಕಡಿಮೆ ಮಾಡಿಕೊಳ್ಳಲು ಪರಿಸ್ಥಿತಿಗೆ ತಕ್ಕಂತೆ ಇರಲು ಎಳ್ಳಷ್ಟೂ ಇಚ್ಛಿಸುವುದಿಲ್ಲ. ಪರಿಣಾಮವಾಗಿ ಅವನೂ ಅವನ ಮುಂದಿನ ಪೀಳಿಗೆಯೂ ಅತ್ಯಂತ ದಾರುಣವಾದ ಸ್ಥಿತಿಗೆ ಬಂದು ಮುಟ್ಟುತ್ತಾರೆ. ಇನ್ನು ಕೆಳಮಧ್ಯಮ ವರ್ಗದಿಂದ ಮೇಲೆ ಏರುತ್ತ ಹೋದವರ ಜೀವನ ಮಟ್ಟವು ಬರುವ ವರಮಾನಕ್ಕಿಂತ ಮಿಗಿಲಾದದ್ದೇ ಆಗುತ್ತದೆ. ನೂರು ರೂಪಾಯಿಯಲ್ಲಿ ಮೂವರು ತಿಂಗಳ ಬದುಕು ಸಾಗುವ ಒಂದು ಕಾಲವಿತ್ತು, ಮುಂದೆ ಆ ಅಂಕಿ ಮೂರು ನೂರನ್ನು ಮುಟ್ಟಿದಾಗಲೂ ಅಡಚಣೆ, ಸಾಲ ಇರುವುದುಂಟು! ಜೊತೆಗೆ ಆಢ್ಯತೆ-ಸ್ವಪ್ರತಿಷ್ಠೆಗಳೂ ಯೋಗ್ಯತೆಯನ್ನು ಮೀರಿ ಬಿಗುತ್ತವೆ— ಅವನಲ್ಲಿ, ಅವನ ಕುಟುಂಬದವರಲ್ಲಿ!

ಮಧ್ಯಮ ವರ್ಗೀಯನ ತೊಂದರೆಗಳಿಗೆ ಅವನ ಕುಟುಂಬಪ್ರಿಯತೆಯು ಮೂಲತಃ ಕಾರಣವಾಗಿದೆ ಎಂದು ನನ್ನ ಅಭಿಪ್ರಾಯ. ಹಿಂದಿನ ಕಾಲಕ್ಕೆ ೫೦-೬೦ ಜನ ಒಂದೇ ಕುಟುಂಬದಲ್ಲಿ ವಾಸವಾಗಿರುತ್ತಿದ್ದರು. ಆ ಕಾಲ ಹೋಗಿದೆ. ಇಂದು ಪ್ರತಿಯೊಂದು ಕುಟುಂಬದಲ್ಲಿ ಸಾಧಾರಣವಾಗಿ ೬ ಜನ ಇರುತ್ತಾರೆಂದು ಜನಗಣತಿಯವರು ಹೇಳುವುದುಂಟು. ಆದರೆ ಇಂದು ಅವಿಭಕ್ತ ಕುಟುಂಬಗಳು ವಿಭಕ್ತ ಎಂದರೆ ಒಡೆಯುತ್ತಲಿವೆ ಎಂದು ಹೇಳುವುದಕ್ಕಿಂತ, ದೂರ ಸರಿಯುತ್ತಲಿವೆ ಎಂದು ಹೇಳಬಹುದು. ಇಂದಿನ ಮಧ್ಯಮ ವರ್ಗೀಯನ ಕುಟುಂಬದಲ್ಲಿ ೬-೭ ಜನರಿದ್ದರೂ ಅವನಿಗೆ ಇತರ ಬಳಗದವರು ಬೇಕು. ಇಷ್ಟೇ ಅಲ್ಲ, ಅವರ ಮೇಲೆ ಅತಿಯಾದ ಕಕ್ಕುಲಾತಿ! ಪ್ರಸಂಗ ಬಂದರೆ ಅವರ ಜವಾಬ್ದಾರಿಯನ್ನು ಹೊರಲೂ ಸಿದ್ಧ! ಇನ್ನು ಇದ್ದ ೬-೭ ಜನರಲ್ಲಿ ಅವನೊಬ್ಬನೇ ದುಡಿದು ಗಳಿಸುವವ, ಉಳಿದವರೆಲ್ಲರೂ ಅವನ ಗಳಿಕೆಯನ್ನು ನಿಶ್ಚಿಂತೆಯಿಂದ, ನಿರಾಯಾಸದಿಂದ ಬಳಸುವುದಕ್ಕೆ ಹಿಂಜರಿಯುವವರಲ್ಲ.

ಭದ್ರ ಕುಟುಂಬಪದ್ಧತಿ

ಹಾಗೆ ನೋಡಿದರೆ ನಮ್ಮ ದೇಶದ ಕುಟುಂಬ ಪದ್ಧತಿಯು ಭದ್ರವಾದುದೇ ಆಗಿದೆ. ನಮ್ಮಲ್ಲಿ ಕುಟುಂಬಕ್ಕಾಗಿ ವ್ಯಕ್ತಿಯ ಬಾಳು-ಬದುಕು ಇರುತ್ತದೆ. ಇತರತ್ರ ವ್ಯಕ್ತಿಗಾಗಿ ಕುಟುಂಬ ವ್ಯವಸ್ಥೆ ಇರುತ್ತದೆ. ಅಲ್ಲಿ ಗಂಡ, ಹೆಂಡತಿ ಇಬ್ಬರದೇ ಕುಟುಂಬ. ಮಕ್ಕಳು? ಊಂಹು. ಪ್ರಬುದ್ಧ ಮಕ್ಕಳಿಗಂತೂ ಸ್ಥಾನವೇ ಇಲ್ಲ— ಮನೆಯಲ್ಲಿ. ಶಾಲೆಗೆ ಹೋಗುವ ಮಕ್ಕಳು ಹೊರಹೊರಗೆ ಇದ್ದರೂ ನಡೆದೀತು, ಎಂಬ ಸ್ಥಿತಿ ಇತರತ್ರ ಇರುವಂತಹದು. ಹೀಗಿರುವುದು ನಮಗೂ ಒಳ್ಳೆಯದು ಎಂದು ಇಲ್ಲಿ

ಹೇಳುತ್ತಿಲ್ಲ. ಆದರೆ ಗಳಿಸುವವನ ಗಳಿಕೆಯ ಸಾಮರ್ಥ್ಯ ಏನೇ ಇರಲಿ, ಅವನ ಅವಲಂಬಿತರ ಸಂಖ್ಯೆ ದೊಡ್ಡದಾಗಿರುತ್ತದೆ. ಪರಿಣಾಮವಾಗಿ ಸಂಸ್ಕಾರದಿಂದ ಬಂದ ಅವರ ಕುಟುಂಬಶೀಲತೆಯು ಅವನನ್ನು ಹೆಚ್ಚಿನ ತ್ಯಾಗಕ್ಕೆ ಬಾಗಿಸುತ್ತದೆ. ತನ್ನ ಸ್ವಂತಕ್ಕೆ ಉಣಲು, ತೊಡಲು, ಆಮೋದಿಸಲು ಅವನು ಮನಸ್ಸು ಮಾಡುವ ಹಾಗೇ ಇಲ್ಲ. ಕುಟುಂಬದ ಇತರ ವಾಸಿಗಳಿಗೆ ಇರಲಿ ಎಂಬ ಪ್ರವೃತ್ತಿಯೇ ಅವನಲ್ಲಿರುತ್ತದೆ. ಅದರಿಂದಾಗಿ ಅವನಿಗೆ ಅಕಾಲದಲ್ಲಿ ಮುಪ್ಪು ತಲೆದೋರಿದರೆ ಆಶ್ಚರ್ಯವೇನಿದೆ? ಹೇಳುವುದಿಷ್ಟೆ. ತನ್ನ ವ್ಯಕ್ತಿಗತ ಬೇಕುಬೇಡಗಳನ್ನು ನಿವಾಳಿಸಿ ಒಗೆದು ಅವನಲ್ಲಿ ಕುಟುಂಬಪ್ರಿಯತೆ ಬೆಳೆಯುವಂತಾಗಬಾರದು.

ಹದಗೆಟ್ಟ ಆರ್ಥಿಕ ಸ್ಥಿತಿ

ಮಧ್ಯಮ ವರ್ಗೀಯನ ಆರ್ಥಿಕ ಸ್ಥಿತಿಯೋ ಅತ್ಯಂತ ಶೋಚನೀಯ. ಇಂದು ಮಹಾಯುದ್ಧಗಳು ಬೇಡ ಎಂದು ಒಕ್ಕೊರಲಿನಿಂದ ಹೇಳಬೇಕಾಗಿದ್ದರೆ ಮಧ್ಯಮ ವರ್ಗೀಯರೇ ಹೇಳಬೇಕು! ಅವರಿಗೆಯೇ ಅದರ ಹಾನಿ ತಟ್ಟುವುದು. ಯುದ್ಧ ಬಂದೊದಗಿದರೆ ಧನಿಕರು ಇನ್ನಷ್ಟು ಧನಿಕರಾಗುತ್ತಾರೆ. ಶ್ರಮಜೀವಿಗಳಾದ ಬಡವರು ಸಿರಿವಂತರಾಗುತ್ತ ನಡೆಯುತ್ತಾರೆ. ಮಧ್ಯಮ ವರ್ಗೀಯನ ಗಳಿಕೆ ಮಾತ್ರ ಅಷ್ಟೇ ಉಳಿಯುತ್ತದೆ. ವೆಚ್ಚ ಅನನ್ವಿತವಾಗಿ ಏರುತ್ತದೆ. ವೆಚ್ಚದ (ತುಟ್ಟಿಯ) ಭತ್ತೆಯನ್ನು ಅವನಿಗೆ ದಯಪಾಲಿಸಿದರೂ ಅದು ನಾಯಿಗೆ ಒಗೆದ ರೊಟ್ಟಿಯ ತುಣುಕಿನಂತೆ ಅತ್ಯಲ್ಪ. ಅಂತೂ ಮಹಾಯುದ್ಧಗಳಿಂದ ಈಚೆಗೆ ಮಧ್ಯಮ ವರ್ಗೀಯನ ಆರ್ಥಿಕ ಸ್ಥಿತಿ ಹದಗೆಡುತ್ತ ಹೋಗಿದೆಯೆಂಬುದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ.

ಇತರರಂತೆ ಅವನು ಗಳಿಕೆಯ ಹೊಸ ಸಾಧನಗಳಿಗಾಗಿ ಪ್ರಯತ್ನಿಸಲಾರ, ಅವನಿಗಿರುವುದು ಶಿಕ್ಷಣದ ಬೆಂಬಲ ಮಾತ್ರ. ಅದೂ ತಾಂತ್ರಿಕ ಶಿಕ್ಷಣವಾಗಿದ್ದರೆ, ಗಳಿಕೆಯ ಮಾರ್ಗವು ನಿರಾಯಾಸವಾಗಿ ತೋರೀತು—ಈ ಪಂಚವಾರ್ಷಿಕ ಯೋಜನೆಗಳ ಕಾಲದಲ್ಲಿ ಹೆಚ್ಚಿನ ಜನ ಮಧ್ಯಮ ವರ್ಗೀಯರು ಸಾದಾ ಶಿಕ್ಷಣದಲ್ಲಿಯೆ ತೃಪ್ತಿಹೊಂದುವ ಸ್ವಭಾವದವರಾಗಿದ್ದಾರೆ. ಅಂಥವರಿಗೆ ಜೀವನೋಪಾಯದ ಮಾರ್ಗವೆಂದರೆ, ನೌಕರಿಯೊಂದೇ. ಅದೇ ಮುಖ್ಯ. ಸರಕಾರದ್ದೇ ಆಗಲಿ, ಖಾಸಗಿಯದೇ ಆಗಲಿ, ಅದೆಷ್ಟು ಜನರಿಗೆ ನೌಕರಿ ಸಿಕ್ಕೀತು? ಅಲ್ಲದೆ ಎಲ್ಲರೂ ನೌಕರಿಗಾಗಿಯೇ ಹಪಾಪಿಸುವಾಗ, ನೌಕರಿಯ ಜೊತೆಗೆ ವರಮಾನವೂ ಕಡಿಮೆಯಾಗುತ್ತದೆ.

ಸಾಲಗಾರ

ಮೇಲಣ ವಿವೇಚನೆಯ ಮಥಿತಾರ್ಥ ನೋಡಿದರೆ ಮಧ್ಯಮವರ್ಗೀಯನ ಗಳಿಕೆ ಏಳಿಕೆಗಳಿಗೆ [illegible] ಹೊಂದುಗೊಡುತ್ತಿಲ್ಲ ಎಂಬುದಾಗಿದೆ. ಗಳಿಕೆ ಒಬ್ಬನದೇ. ಅದೂ ಕಡಿಮೆ. ಅದನ್ನು ಸ್ವಾಹಾ ಮಾಡುವ ಬಳಕೆಗಾರರ ಸಂಖ್ಯೆ ದೊಡ್ಡದು. ಪರಿಣಾಮವಾಗಿ ಇಂದು ಸಾಲಗಾರನಲ್ಲದ ಮಧ್ಯಮವರ್ಗೀಯರೇ ಇಲ್ಲ ಎನ್ನಬಹುದು! ಹಾಸಿಗೆ ಇದ್ದಷ್ಟು ಕಾಲು ಚಾಚುವುದು ಅವನ ಜಾಯಮಾನದಲ್ಲೇ ಇಲ್ಲದುದು! ಸಾಲ ಯಾತಕ್ಕಾಗಿ? ಕುಟುಂಬದ ಅಗತ್ಯದ ಹೆಸರಿನಲ್ಲಿ! ಕೌಟುಂಬಿಕ ಅಡಚಣಿಗಳಿಗಾಗಿ ಸಾಲ ತೆಗೆಯುವುದು ತಪ್ಪಲ್ಲ. ಅನಿವಾರ್ಯವೇ ಅದುದು, ಎಲ್ಲರಿಗೂ ಇರುವಂತಹದು ಎಂಬ ಸಹಜಪ್ರವೃತ್ತಿ ನಿರಾಯಾಸವೃತ್ತಿ ಅವನದಾಗಿರುತ್ತದೆ!

ಮುಂಬಯಿಯ ಒಂದು ಕಚೇರಿಯ ಮಧ್ಯಮವರ್ಗೀಯರ ಆಯವ್ಯಯದ ಅಭ್ಯಾಸ ಮಾಡಿದ ಸಮಾಜಶಾಸ್ತ್ರಕೋವಿದರು ನೂರಕ್ಕೆ ೭೦ರಷ್ಟು ಮಧ್ಯಮ ವರ್ಗೀಯರು ಸಾಲಗಾರರಿದ್ದಾರೆಂಬುದನ್ನು ಕಂಡುಹಿಡಿದಿದ್ದಾರೆ. ಯಾತಕ್ಕಾಗಿ ಸಾಲ ಎಂದು ವಿಶ್ಲೇಷಿಸಿದಾಗ ಈ ಕೆಳಗಿನ ಕಾರಣ ಹಾಗೂ ಸರಾಸರಿ ಅವರಿಗೆ ಕಂಡುಬಂದಿತು.

ಗಳಿಕೆ ಸಾಲದ್ದಕ್ಕೆ ಶೇಕಡ ೪೭ರಷ್ಟು ಜನ ಸಾಲಗಾರರೂ ಶೇಕಡ ೩೩ರಷ್ಟು ಜನ ಜಡ್ಡು ಜಾಪತ್ತುಗಳಿಗೆ ಸಾಲ ಮಾಡಿದವರು ಹೊರಟರು. ಮದುವೆ ಮುಂತಾದ ಸಮಾರಂಭಗಳಿಗಾಗಿ ಸಾಲ ಮಾಡುವವರು ೧೨ರಷ್ಟಾದರೆ ಶಿಕ್ಷಣಕ್ಕಾಗಿ ಸಾಲದವರ ಪ್ರಮಾಣ ೮ರಷ್ಟು ಎಂದು ಕಂಡುಬಂದಿತು.

ಸಾಲಗಾರ ಮಧ್ಯಮವರ್ಗೀಯರು ನೂರಕ್ಕೆ ೭೦ರಂತೆ ಇದ್ದುದಾದರೆ ಉಳಿದ ಮೂವತ್ತು ಜನರೆಲ್ಲರೂ ಉಳಿತಾಯಗಾರರು ಎಂದು ತಿಳಿಯುವಂತಿಲ್ಲ! ಅವರಲ್ಲಿ ಹೆಚ್ಚು ಜನ ಹೊಟ್ಟೆಬಟ್ಟೆಗೆ ಗಳಿಕೆಯನ್ನು ಹೇಗೋ ಹೊಂದಿಸಿಕೊಂಡು ಹೋಗಬಲ್ಲವರು. ಅದಾದರೂ ಪ್ರಯತ್ನಪೂರ್ವಕವಾಗಿ ಅಲ್ಲ. ವರಮಾನ ಅನಾಯಾಸವಾಗಿ ಹೆಚ್ಚು ಬರುವುದೆಂದೊ ಮನೆಯಲ್ಲಿ ಅವಲಂಬಿತರ ಸಂಖ್ಯೆ ಕಡಿಮೆಯೆಂದೊ ಕಾರಣ ಕೊಡಬಹುದಾಗಿದೆ.

ಸಾಲದ ಹೊಣೆಗಾರಿಕೆ

ಇನ್ನು ಸಾಲಮಾಡುವ ಪರಿಸ್ಥಿತಿ ಬರುವುದಕ್ಕೆ ಮಧ್ಯಮವರ್ಗೀಯನೇ ಮುಖ್ಯವಾಗಿ ದೋಷಾರ್ಹನಲ್ಲದೆ ಅನ್ಯರಲ್ಲ. ಗಳಿಕೆ ಸಾಲದ್ದಕ್ಕೆ ಸಾಲಮಾಡುವವರೇ ಹೆಚ್ಚು ಜನ ಎಂದು ಮೇಲೆ ಹೇಳಿದೆಯಷ್ಟೆ. ಅನವಶ್ಯಕ ಅಥವಾ ಬಿಡಬಹುದಾದ ವೆಚ್ಚದ ಬಾಬುಗಳನ್ನು ಅವರು ಬಿಟ್ಟುಕೊಟ್ಟರೆ? [illegible] ವರ್ಗೀಯ [illegible] ದಿಲ್ಲ. [illegible] ಅನಂತರ ಡಾಕ್ಟರರ ಬಿಲ್ಲನ್ನು ತುಂಬುವುದಕ್ಕಾಗಿ ಸಾಲಮಾಡುವವರು ಬರುತ್ತಾರಷ್ಟೆ. [illegible] ಬೀಳುವುದು ಕಡಿಮೆಯೆ. ಅವನ ಹೆಂಡತಿ, ಮಕ್ಕಳ ಕಸಾರಿಕೆಯು ನೂರಾರು ಮುಕುಗಳಲ್ಲಿ ಇರುತ್ತದೆ. ಗಂಡನನ್ನು ಕಚೇರಿಗೆ ಕಳಿಸಿ, ಊಟ ಮುಗಿಸಿ, ವ್ಯರ್ಥಕಾಲಹರಣವನ್ನು ಗೈದು, ಉಂಡ ಅನ್ನ ಅರಗಿಸಲಾರದೇ, ಅರ್ಥಾತ್ ದೈಹಿಕ ಶ್ರಮವೆಳ್ಳಷ್ಟನ್ನೂ ಸಹಿಸದೇ ಇರುವ ಮಧ್ಯಮವರ್ಗದ ಸುಶಿಕ್ಷಿತ ಮಹಿಳೆ ನಮ್ಮ ಆಧುನಿಕ ಸಮಾಜದಲ್ಲಿ ತನ್ನದೇ ಆದ ಸ್ಥಾನವನ್ನು ಗಳಿಸಿಕೊಂಡಿದ್ದಾಳೆ. ವೆಚ್ಚದ ವಿಷಯದಲ್ಲಿಯೋ ಅವಳು ಪಿ.ಡಬ್ಲ್ಯು.ಡಿ. ಖಾತೆಯಿದ್ದಂತೆ ಅವಳನ್ನು ಪೋಷಿಸುವುದೆಂದರೆ ಒಂದು ಬಿಳಿಯಾನೆಯನ್ನು ಸಾಕಿದಂತೆ. ಆಕೆ ಪುರುಷನಿಗೆ ಭೂಷಣಪ್ರಾಯಳು. ಆದರೆ ಪ್ರಯೋಜನ ಕಡಿಮೆ. ಅವಳ ಪತಿಯು ಆ ಭಾವನೆಯಿಂದ ನಡೆದುಕೊಂಡು ಅವಳ ಪ್ರಯೋಜನವನ್ನು ತಾನೇ ಕಡಿಮೆಯಾಗಿಸಿದ್ದಾನೆ ಎನ್ನಬಹುದು. ಸಂಸಾರವನ್ನು ಜತನದಿಂದ ಹಿಡಿತದಿಂದ ನಡೆಸಿಕೊಂಡು ಹೋಗಬೇಕೆನ್ನುವ ಬುದ್ಧಿ ಅವಳಿಗೆ ಬಹಳ ವರ್ಷಗಳ ನಂತರ ಬರುತ್ತದೆ. ಆದರೆ ಅಷ್ಟರಲ್ಲಿ ಅವಳ ಸಾಂಸಾರಿಕ ಜವಾಬ್ದಾರಿಯು ಅರ್ಧಕ್ಕಿಂತಹೆಚ್ಚಿನ ಅವಧಿ ಸಂದುತ್ತದೆ.

ತಾಪತ್ರಯಗಳು

ಮಧ್ಯಮವರ್ಗೀಯನ ನಿತ್ಯ ಜೀವನವೂ ಸಾಮಾಜಿಕ ನಡವಳಿಕೆಯ ಹೆಸರಿನಲ್ಲಿ ಪ್ರತಿಷ್ಠೆಯಲ್ಲಿ ಕೂಡಿದ್ದಾಗಿ, ಅವನ ತಾಪತ್ರಯಗಳು ಹೆಚ್ಚುತ್ತವೆ. ಅಪ್ತರೊಬ್ಬರಲ್ಲಿ ಮದುವೆ, ಉಡುಗೊರೆ ಕೊಡಲು ಕಾಸಿಲ್ಲ. ಒಮ್ಮೊಮ್ಮೆ ಅಷ್ಟೊಂದು ಯೋಗ್ಯತೆ ಇಲ್ಲದಿದ್ದರೂ ತಮ್ಮ ಯೋಗ್ಯತೆ ಮೀರಿದ ಉಡುಗೊರೆಯನ್ನು, ಅದೂ ಸಾಲ ಮಾಡಿ ಕೊಡುವ ಪ್ರಸಂಗಗಳು ಎಷ್ಟಿಲ್ಲ? ಇಂಥ ಹತ್ತಾರು ಉದಾಹರಣೆಗಳನ್ನು ಕೊಡಬಹುದಾದರೂ ಅದು ಅಗತ್ಯವಿಲ್ಲ. ಏಕೆಂದರೆ ಅವು ಮಧ್ಯಮವರ್ಗೀಯನಿಗೆ ತಿಳಿಯದವುಗಳಲ್ಲ. ಆದರೂ ಅಂಥ ವೆಚ್ಚಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಅವನ ಸಾಮಾಜಿಕ ರೀತಿನೀತಿಗಳೇ ಕಾರಣವಾಗಿವೆ. ಅವು ಆಧುನಿಕವಾಗಿ ಬಂದಂಥವುಗಳು. ಅವನ ಆದಾಯಕ್ಕೆ ಹೊಂದಿಕೊಂಡು ಹೋಗುವಂತವುಗಳಾಗಿಲ್ಲ.

ಮಧ್ಯಮವರ್ಗೀಯ ಎಂಬ ವರ್ಗದ ನಿರ್ಮಾಣ ಆರ್ಥಿಕ ತಳಹದಿಯ ಮೇಲೆ ನಿಂತೂ ಆರ್ಥಿಕವಾಗಿ ತನ್ನ ಸ್ಥಿತಿ ಮೇಲಾಯ [illegible], ತನ್ನ ಕಾಲ ಮೇಲೆಯೆ ತಾನು [illegible] ಯಾಗದೇ ನಿಂತುಕೊಳ್ಳಬೇಕಾದರೆ ತಾನು [illegible] ಮಾಡಬೇಕಾದಿದ್ದು [illegible] ಮಧ್ಯಮವರ್ಗೀಯನು [illegible] ಯಾದ್ದ ಅವನಿಗೆ ಇದು ಅಸಾಧ್ಯವೇನಲ್ಲ. [illegible]



ಬ್ರಹ್ಮಪುತ್ರಾ ತೀರದ ಒಂದು ರಮಣೀಯ ನೋಟ

ಫೋಟೋ : ಶ್ರೀ ಎ. ಎಸ್. ಆರ್. ಮೂರ್ತಿ ರಾಜಮಹೇಂದ್ರಿ

ಒಂದು ವಿವೇಚನೆ

ವಿಡಂಬನಾತ್ಮಕ ಹರಟೆ

ನಮ್ಮ ಸಾಹಿತ್ಯದಲ್ಲಿ ಅದಿಲ್ಲ, ಇದಿಲ್ಲ ಎಂದು ಹೇಳುವವರು ತಾವು ಹಾಗೆ ಹೇಳುವದರ ಅರ್ಥವನ್ನು ಸರಿಯಾಗಿ ಗ್ರಹಿಸಿಕೊಂಡಿರುವದಿಲ್ಲ. ಇಂಗ್ಲೀಷಪದಕ್ಕೆ ಸಮಾನಾರ್ಥ ಕೊಡುವ ಪದಗಳು ನಮ್ಮಲ್ಲಿ ಇರಲಿಕ್ಕಿಲ್ಲವಾದರೂ ಆ ಪದದ ಹಿನ್ನೆಲೆಯಾಗಿರುವ ದೃಷ್ಟಿಯೇ ನಮ್ಮಲ್ಲಿಲ್ಲ ಎಂದು ಹೇಳಲಾದೀತೆ? ವಿಡಂಬನಾತ್ಮಕ ಹರಟೆಯೂ ಇದೇ ಜಾತಿಯದು. ಅದರ ಸ್ವರೂಪವೆಂಥದೆಂಬುದನ್ನು ಲೇಖಕರು ಇಲ್ಲಿ ಚರ್ಚಿಸಿರುವರು.

ಲೇಖಕರು: ಶ್ರೀರಂಗ, ಬೆಂಗಳೂರು

ಪಾಶ್ಚಾತ್ಯ ಸಾಹಿತ್ಯದ ಪರಿಚಯದಿಂದ ಇಂದಿನ ನಮ್ಮ ಸಾಹಿತ್ಯ ಲೇಖನದ ಮೇಲೆಯಷ್ಟೆ ಪ್ರಭಾವ ಮೂಡಿಲ್ಲ; ನಮ್ಮ ಸಾಹಿತ್ಯ ವಿಮರ್ಶಾ ಶಾಸ್ತ್ರದಮೇಲೆಯೂ ಮಹತ್ವದ ಪರಿಣಾಮವಾಗಿದೆ. ಸಾಹಿತ್ಯಶಾಸ್ತ್ರದ ತಜ್ಞರು ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಈ ದೃಷ್ಟಿಯಿಂದ ಹೆಚ್ಚಾಗಿ ವಿಚಾರ ಮಾಡಿದಂತಿಲ್ಲ. ಅದಕ್ಕೆಂದೇ ಎಷ್ಟೋ ಸಲ "ಭಾರತೀಯ ನಾಟಕಗಳಲ್ಲಿ ಟ್ರಾಜೆಡಿಗಳೆ ಇಲ್ಲ" ಇಲ್ಲವೆ "ನಮ್ಮ ಸಾಹಿತ್ಯ ಪರಂಪರೆಯಲ್ಲಿ ಗದ್ಯದ ಮಾದರಿಗಳೆ ಇಲ್ಲ". ಮೊದಲಾದ ಅರ್ಥಶೂನ್ಯ ಅಭಿಪ್ರಾಯಗಳನ್ನು ನಮ್ಮವರು ಆಗಾಗ ಸಾರುತ್ತಾರೆ. ಒಂದು ಸಾಹಿತ್ಯ ಅದನ್ನು ನಿರ್ಮಿಸುವವರ ಜೀವನದ ಅಭಿವ್ಯಕ್ತಿಯಾಗಿದ್ದರೆ, ಜೀವನದೃಷ್ಟಿಗಳು ಭಿನ್ನಭಿನ್ನವಾದ ಸಮಾಜಗಳಲ್ಲಿ ಸಾಹಿತ್ಯದ ಅಭಿವ್ಯಕ್ತಿಯೂ ಭಿನ್ನವಾಗಿದ್ದರೆ ಅದು ಸಹಜ, ಕ್ರಮಪ್ರಾಪ್ತ, ಯಾವ ದೃಷ್ಟಿಯಿಂದಲೂ ಅಸಂಗತ ಇಲ್ಲವೆ ಆಶ್ಚರ್ಯಕಾರಕವಲ್ಲ. ಪಾಶ್ಚಾತ್ಯ ಸಾಹಿತ್ಯಶಾಸ್ತ್ರದ ಅಭ್ಯಾಸದಿಂದ ಇಂದು ಸಾಹಿತ್ಯದ ಬೆಳವಣಿಗೆ-ಪ್ರಕಾರಗಳ ಬಗ್ಗೆ ನಾವು ಕೆಲವು ವಿಷಯಗಳನ್ನು ಅರಿತುಕೊಂಡಿದ್ದೇವೆ. ನಮ್ಮ ಮಟ್ಟಿಗೆ ನಾವು ವಿದೇಶೀ ಶೈಲಿಯ ವೇಷವನ್ನು ಮಾಡಿಕೊಳ್ಳುವಂತೆ ನಮ್ಮ ಸಾಹಿತ್ಯವನ್ನೂ ವಿದೇಶೀಯ ಪಾರಿಭಾಷಿಕದಿಂದ ಗುರುತಿಸಲು ಯತ್ನಿಸುತ್ತೇವೆ. ಈ ಯತ್ನ ಎಷ್ಟರಮಟ್ಟಿಗೆ ದುಸ್ಸಾಧ್ಯ ಎಂಬುದಕ್ಕೆ ಒಂದೇ ದೃಷ್ಟಾಂತವನ್ನು ಕೊಡಬಹುದು. ಪಾಶ್ಚಾತ್ಯ ಸಾಹಿತ್ಯ ಶಾಸ್ತ್ರಕ್ಕೆ ಸಮರ್ಪಕವಾಗಿ ನಮ್ಮಲ್ಲಿ ಇದು-ವರೆಗೂ ಒಂದು ಮಾದರಿಯನ್ನು ಒಂದೇ ಶಬ್ದದಿಂದ ಗುರುತಿಸುವುದು ಶಕ್ಯವಾಗಿಲ್ಲ; ಒಮ್ಮೊಮ್ಮೆ ಶಬ್ದದ ಪಾರಂಪರಿಕ ಸಂಕೇತಕ್ಕೂ ನಾವು ಅದಕ್ಕೆ ಕೊಡಬಯಸುವ ಅರ್ಥಕ್ಕೂ ಸಂಬಂಧವಿರುವುದಿಲ್ಲ, ಎಷ್ಟೋಸಲ ಧ್ವನಿವೈಪರೀತ್ಯ ಆಡಕವಾಗಿರಬಹುದಾಗಿದೆ.

ಈ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಈ ಲೇಖದ ತಲೆಬರೆಹವೆ ಕಾರಣ. "ವಿಡಂಬನೆ" ಎಂಬುದನ್ನು ನಾವು ಇಂಗ್ಲಿಷದ satire ಎಂಬುದಕ್ಕೆ ಸಮಾನಾರ್ಥಕವಾಗಿ ಬಳಸುತ್ತಿದ್ದೇವೆ. ಆದರೆ, ಇಂಗ್ಲಿಶ ಪದಕ್ಕಿದ್ದ ಅರ್ಥ ನಮ್ಮ ಶಬ್ದಕ್ಕೆ ಸರಿಯಾಗಿ ಬಾರದು. ಪಾಶ್ಚಾತ್ಯರು satire, wit, humour, parody, comedy ಮುಂತಾಗಿ ಬಳಸುವ ಅನೇಕ ಪದಗಳ ಸೂಕ್ಷ್ಮವನ್ನು ಸಂಕೇತಿಸಿ ತೋರಿಸುವ ಬೇರೆ ಬೇರೆ ಪದಗಳು ನಮ್ಮಲ್ಲಿಲ್ಲ. (ಕಷ್ಟಬಟ್ಟು, ಹಟದಿಂದ, ಭಾಷ್ಯ ಬರೆದು ವಿವರಿಸಿ ಹೊಸತಾಗಿ ಸಮಾನಾರ್ಥಕ ಪದಗಳನ್ನು ನಿರ್ಮಿಸಬಹುದು, ಕೆಲವೆಡೆ ನಿರ್ಮಿಸಿದ್ದಾಗಿದೆ; ಆದರೆ ನಾವು ಈಗ ಹೇಳಲಿರುವ ವಿಚಾರವನ್ನೆ ಪುಷ್ಟೀಕರಿಸುವುದು.) ಅದಕ್ಕೆ ಮುಖ್ಯ ಕಾರಣವೆಂದರೆ ನಮ್ಮ ಸಮಾಜದ, ನಮ್ಮ ಪರಂಪರೆಯ ಜೀವನದೃಷ್ಟಿ. ಧರ್ಮ-ಜಾತಿ-ಉಚ್ಚ-ನೀಚ-ಹಿರಿಯ-ಕಿರಿಯ ಎಂಬ ವಿಚಾರವು ಜೀವನಸೂತ್ರವಾಗಿರುವಾಗ ಗೃಹಿಣೀತ್ವ, ಪಾತಿವ್ರತ್ಯ ವಿವಾಹ ಮೊದಲಾದ ವಿಚಾರಗಳು ಧರ್ಮದ ಮೂಲತತ್ತ್ವಗಳೆನ್ನಿಸಿದಾಗ, ಇಂದಿನ ಪ್ರಜಾಪ್ರಭುತ್ವದ ಕಾಲದಲ್ಲೂ ಕೂಡ ವ್ಯಕ್ತಿಪೂಜಕರಾಗಿರುವ ಮಟ್ಟಿಗೆ 'ನಾವಿಷ್ಣುಃ ಪೃಥಿವೀಪತಿಃ' ಎಂಬ ದೃಷ್ಟಿ ಸಮಾಜದಲ್ಲಿದ್ದಾಗ, ಬ್ರಾಹ್ಮಣ ಗುರು ಅಧಿಕಾರಿ ಮೊದಲಾಗಿ ಸುಶಿಕ್ಷಿತರೂ ಸುಸಂಸ್ಕೃತರೂ ಕೂಡ ಹಿರಿಮೆಯನ್ನು ಮೆರೆಸುವುದು ಪರಂಪರಾ-ಸಹಜವೆನ್ನಿಸುವಾಗ ನಮ್ಮ ಜೀವನದಲ್ಲೂ ಸಾಹಿತ್ಯದಲ್ಲೂ ವಿಮರ್ಶಾಬುದ್ಧಿಗೂ ಹಾಸ್ಯ ದೃಷ್ಟಿಗೂ ನಿರ್ಬಂಧಗಳಿದ್ದುವು. ಆ ನಿರ್ಬಂಧಗಳಿಗನುಗುಣವಾಗಿ ನಮ್ಮ ಜೀವನ ಮತ್ತು ನಮ್ಮಸಾಹಿತ್ಯ ರೂಪುಗೊಂಡಿವೆ. ಆ ದೃಷ್ಟಿಯಿಂದಲೆ ನಾವು ಈ ಸಂದರ್ಭದಲ್ಲಿ ವಿಚಾರವನ್ನು ಮಾಡಬಹುದು.

ಇಂಗ್ಲಿಷದ Satire ಶಬ್ದಕ್ಕೆ ಸಮರ್ಪಕವಾದ, ಸಮಾನಾರ್ಥಕವಾದ ಶಬ್ದ ನಮ್ಮಲ್ಲಿದ್ದಿರಲಿಲ್ಲ ಎಂದಮಾತ್ರಕ್ಕೆ ಆ Satire ಎಂಬ ಕಲ್ಪನೆಯ ಹಿಂದಿದ್ದ ದೃಷ್ಟಿಯೆ ನಮ್ಮವರಿಗಿದ್ದಿರಲಿಲ್ಲ ಎಂದು ಮಾತ್ರ ಅರ್ಥವಲ್ಲ; ಆದರೆ ಅದನ್ನು ವ್ಯಕ್ತಪಡಿಸುವ ರೀತಿ ಬೇರೆಯದಾಗಿರಬಹುದಲ್ಲ? ದೃಷ್ಟಾಂತಕ್ಕೆ, ಸಾಹಿತ್ಯದರ್ಪಣದಲ್ಲಿ ಹಾಸ್ಯರಸ ಸಂದರ್ಭದಲ್ಲಿ ಉದಾಹರಿಸಿದ ಈ ಶ್ಲೋಕವನ್ನು ನೋಡಬಹುದು:

> ಗುರೋರ್ಗಿರಃ ಪಂಚ ದಿನಾನ್ಯಧೀತ್ಯ
> ವೇದಾಂತಶಾಸ್ತ್ರಾಣಿ ದಿನತ್ರಯಂ ಚ।
> ಅಮೀ ಸಮಾಘ್ರಾಯ ಚ ತರ್ಕವಾದಾನ್
> ಸಮಾಗತಾಃ ಕುಕ್ಕುಟಮಿಶ್ರಪಾದಾಃ॥

"ಅಯ್ದು ದಿನಗಳವರೆಗೆ ಗುರುವಿನ ಉಪನ್ಯಾಸಗಳನ್ನೂ ಮೂರು ದಿನಗಳಲ್ಲಿ ವೇದಾಂತ ಶಾಸ್ತ್ರಗಳನ್ನೂ ಓದಿಕೊಂಡು ತರ್ಕವಾದಗಳನ್ನು ಮೂಸಿ ನೋಡಿ ಇದೊ ಬರುತ್ತಿದ್ದಾರೆ ಡಾಕ್ಟರ್ (ಮಿಶ್ರಪಾದ) ಕುಕ್ಕುಟ ಅವರು!"

ಈ ಶ್ಲೋಕವನ್ನು ಹಾಸ್ಯರಸದ ದೃಷ್ಟಾಂತವಾಗಿ ಕಾಣಿಸಿದ್ದರೂ ಈ ಹಾಸ್ಯದ ರೀತಿ ಬೇರೆಯಾಗಿದೆ. ಒಂದೆರಡು ವಾರ ಸಂಚರಿಸಿ ದೇಶದ ಬಗ್ಗೆ 'ಅಧಿಕೃತ' ಗ್ರಂಥಗಳನ್ನು ಬರೆಯುವವರು. ೮—೧೦ ದಿನ ಸಾಂಸ್ಕೃತಿಕ ಶಿಷ್ಟಮಂಡಲದ ಸದಸ್ಯನಾಗಿ ವಿದೇಶದಲ್ಲಿ ಸ್ಮೃತಿಗೆಟ್ಟು ಸಂಚರಿಸಿ ಮರಳಿ ಬಂದು 'ಅಧಿಕೃತ' ಅಭಿಪ್ರಾಯ ಕೊಡುವವರು, ಅಧಿಕಾರ ಪದವನ್ನೇರಿದ ಮಾತ್ರಕ್ಕೆ ಉದ್ಘಾಟಕರಾಗಿ ಬೇಕಾದ ವಿಷಯದ ಬಗ್ಗೆ ತಜ್ಞರಂತೆ ಮಾತನಾಡುವವರು,—ಇಂತಹರ ಸ್ಮರಣೆ ಬರುವುದಲ್ಲವೆ ಈ ಶ್ಲೋಕವನ್ನು ಓದಿ? ಆ ಮೇಲೆ 'ಕುಕ್ಕುಟ' ಎಂಬ ಶಬ್ದದ ಸಂದರ್ಭದಲ್ಲಿ ಅಂತಹರ ಬಗ್ಗೆ ನಮ್ಮಲ್ಲಿ ಯಾವ ಅಭಿಪ್ರಾಯ ಉಂಟಾಗಬಹುದು? ಈ ದೃಷ್ಟಿಯಿಂದ ನೋಡಿದಲ್ಲಿ ಇದು 'ವಿಡಂಬನೆ' (Satire)ಗೆ ತೀರ ಹತ್ತಿರದ್ದೆನ್ನಿಸಬಹುದಾಗಿದೆ.

ಹಾಗಾದರೆ 'ವಿಡಂಬನೆ'ಯ ಲಕ್ಷಣವೇನು? ಮೇಲಿನ ದೃಷ್ಟಾಂತದಲ್ಲಿ ಸಾಹಿತ್ಯದರ್ಪಣದ ಮೇರೆಗೆ ಹಾಸ್ಯರಸವಿದೆ. ಅದನ್ನು ನಾವೂ ಒಪ್ಪುವೆವು. ಆದರೆ ಅಷ್ಟಕ್ಕೆಯೇ ಅದು 'ವಿಡಂಬನೆ' ಎನ್ನಿಸದು. ಅದೇಕೆ? ಅಷ್ಟಕ್ಕೆಯೇ ಆ ಶ್ಲೋಕ ಅರ್ಥಪೂರ್ಣವೂ ಎನ್ನಿಸದು. 'ಕುಕ್ಕುಟ' ಎಂಬ ಪದಪ್ರಯೋಗಕ್ಕಾಗಿ ನಮಗೆ ನಗೆ ಬರುವುದೇನೋ ನಿಜ.

ಆದರೆ ಜೊತೆಗೆ ಕವಿ ಎಷ್ಟೊಂದು ವಿವರಗಳನ್ನು ಕೊಟ್ಟಿದ್ದಾನಲ್ಲ? ಅಯ್ದು ದಿನಗಳ ಪಾಠ, ಮೂರು ದಿನಗಳ ಅಭ್ಯಾಸ, ಕ್ಷಣಮಾತ್ರದ ಆಘ್ರಾಣ (ತೀರ ಮುಖಕ್ಕೆ ಹತ್ತಿರ ಹಿಡಿದುಕೊಂಡರೆ ಅಷ್ಟು ತೀವ್ರ ಪಾಂಡಿತ್ಯ ಪ್ರಾಪ್ತಿಯಾಗುವುದೆಂಬ ಭಾವನೆಯೇನೊ!)- ಈ ವಿವರಗಳಿಂದ ನಮಗೆ 'ಮಿಶ್ರಪಾದ'ರ ಚಿತ್ರ ಮುಂದೆ ನಿಲ್ಲುವುದಲ್ಲದೆ ಆ ಘನ ಪಂಡಿತರ ಬಗ್ಗೆ ತಿರಸ್ಕಾರ ಭಾವನೆಯೂ ಮೂಡುವುದು. ತಿರಸ್ಕಾರ ಮತ್ತು ಹಾಸ್ಯ ಇವೆರಡೂ ಪರಸ್ಪರಪೋಷಕವಾಗಿ ಅಭಿಪ್ರೇತವಾದಾಗಲೆ ಶ್ಲೋಕವನ್ನು ಪೂರ್ತಿಯಾಗಿ ತಿಳಿದುಕೊಂಡಂತಾಗುವುದು. ಬರೀ ಹಾಸ್ಯರಸವೆ ಅಭಿಪ್ರೇತವಾಗಿದ್ದರೆ ಮೊದಲಿನ ಮೂರು ಪಾದಗಳಲ್ಲಿದ್ದ ಕ್ರಮಬದ್ಧ ಒಂದೇ ಒಂದು ವಿಚಾರದ ಅಗತ್ಯವಿದ್ದಿರಲಿಲ್ಲ; ತಿರಸ್ಕಾರದ ಭಾವನೆಯನ್ನೇ ಮೂಡಿಸುವುದಾಗಿದ್ದರೆ 'ಮಿಶ್ರಪಾದ' ಎಂಬ ಪದದ ಅಗತ್ಯವೂ ಇದ್ದಿರಲಿಲ್ಲ. ಎರಡೂ ಭಾವನೆಗಳು ಒಂದಕ್ಕೊಂದು ಪೋಷಕವಾಗಿ ನಮಗೆ ಹೊಳೆದಾಗ ಬೇರೊಂದು ಉದ್ದೇಶ ಕವಿಗಿದೆ ಎಂಬುದು ಸ್ಪಷ್ಟವಾಗುವುದು.

'ವಿಡಂಬನೆ'ಯಲ್ಲಿ ಮುಖ್ಯವಾದುದು ಶಬ್ದಗಳ ಅರ್ಥವಲ್ಲ; ಆ ಶಬ್ದಗಳಿಂದ ಅಭಿಪ್ರೇತವಾಗುವ ಅರ್ಥ. ವರ್ಣನೆಗೆ ಮುಖ್ಯವಾದ ವಿಷಯದ ಉಲ್ಲೇಖ ಅಲ್ಲಿರುವುದಿಲ್ಲ. ಈ ದೃಷ್ಟಿಯಿಂದ ವ್ಯಾಜೋಕ್ತಿ, ವ್ಯಾಜಸ್ತುತಿ, ಪರಿಕರ ಮುಂತಾದ ಕೆಲವು ಸಾಂಪ್ರದಾಯಿಕ ಅಲಂಕಾರಗಳ ಮೂಲತತ್ತ್ವ ಇಲ್ಲಿರುವುದು; ಜೊತೆಗೆ, ವರ್ಣಿಸಬೇಕಿದ್ದ ವಿಷಯದ ಗುಣಧರ್ಮಗಳಿಂದ ಆರೋಪಿತವಾದ ಅಪ್ರಸ್ತುತ ವಿಷಯದ ಉಲ್ಲೇಖವಿರುವುದು. ದೃಷ್ಟಾಂತದಲ್ಲಿ "ಕುಕ್ಕುಟ" ಎಂಬುದು; ವರ್ಣನೆಯ ವಿಷಯವಾದ ಪುಸ್ತಕಪಂಡಿತರ ಅಧ್ಯಯನಾದಿ ಗುಣಧರ್ಮಗಳನ್ನು "ಕುಕ್ಕುಟ"ದಲ್ಲಿ ಆರೋಪಿಸಲಾಗಿದೆ. ಆದರೆ ಇಲ್ಲಿಯ ಉದ್ದೇಶವು ಕುಕ್ಕುಟ ಮತ್ತು ಪುಸ್ತಕಪಂಡಿತ ಇವರಲ್ಲಿರುವ ಸಾಮ್ಯ—ವೈಷಮ್ಯ—ಸಾಧರ್ಮ್ಯ ಇಂತಹದೊಂದನ್ನೂ ತೋರಿಸುವುದಲ್ಲ. ಇದಲ್ಲದೆ ಪುಸ್ತಕಪಂಡಿತರನ್ನು "ಕುಕ್ಕುಟ" (ನಾಯಿ) ಎಂದು ಬೈಯುವ ಉದ್ದೇಶವೂ ಇಲ್ಲಿಲ್ಲ. ಅದರಂತೆಯೆ ನಾಯಿಯ ದೇಹಕ್ಕೆ ಪಂಡಿತಮನುಷ್ಯನ ಮುಖವನ್ನು ಹೊಂದಿಸುವ ವ್ಯಂಗ್ಯಚಿತ್ರದ ಇಲ್ಲವೆ ಅಣಕಿನ ಉದ್ದೇಶವೂ ಇಲ್ಲಿಲ್ಲ. ಅಣಕು, ಅಪಹಾಸ್ಯ, ಅತಿಶಯೋಕ್ತಿ ಮೊದಲಾದ ಯಾವುದೂ ಇಲ್ಲಿ ಮುಖ್ಯವಾಗಿ ಅಭಿಪ್ರೇತವಾಗಿಲ್ಲ. ಆದರೆ ಒಟ್ಟಿನಲ್ಲಿ, ಈ ಪುಸ್ತಕಪಂಡಿತರು ನಾಯಿಯಂತೆ ಎನ್ನದೆ, ನಾಯಿಯೆ ಪುಸ್ತಕಪಂಡಿತನಾಗಲು ಪ್ರಯತ್ನಿಸಿದೆ ಎಂಬ ಅರ್ಥಯೋಜನೆಯಿಂದ ನಾಯಿಯ ಪ್ರಯತ್ನಕ್ಕಾಗಿ ಹೊರಹೊಮ್ಮುವ ತಿರಸ್ಕಾರವು ಆನುಷಂಗಿಕವಾಗಿ 'ಪಂಡಿತ' ಬಗ್ಗೆ ಮೂಡಿ ನಿಲ್ಲುವುದು.

'ವಿಡಂಬನೆ'ಯ ನಿಜ ಸ್ವರೂಪವನ್ನು ಅರಿತುಕೊಳ್ಳಲು ಮೇಲೆ ಕಾಣಿಸಿದ ಸೂಕ್ಷ್ಮವನ್ನು ತಿಳಿದುಕೊಳ್ಳುವುದು ಅಗತ್ಯವಾಗಿದೆ. ನಾಯಿಯು ಅಧ್ಯಯನಾದಿಗಳಲ್ಲಿ ತೊಡಗಿದ್ದಕ್ಕೆ ನಮ್ಮಲ್ಲಿ ನಾಯಿಯ ಬಗ್ಗೆ ದ್ವೇಷ ಇಲ್ಲವೆ ಅಸಹ್ಯಭಾವ ಮೂಡುವುದೆ? ಇಲ್ಲವೆ ನಾಯಿಯ ಬಗ್ಗೆ ಕನಿಕರ ಎನ್ನಿಸುವುದೇ? ಅಥವಾ ಎಷ್ಟಾದರೂ ನಾಯಿ ನಾಯಿಯೆ— ಎಂಬ ತಿರಸ್ಕಾರ ಭಾವ ಮೂಡುವುದೇ? ನಾಯಿಯ ಬಗ್ಗೆ ದ್ವೇಷ ಮೂಡುವುದಂತೂ ಶಕ್ಯವಿಲ್ಲ ಎಂಬುದು ನಿರ್ವಿವಾದ. ಒಂದು ವೇಳೆ ಕನಿಕರ ಎನ್ನಿಸುವುದು ಶಕ್ಯವಿದೆ. ಆದರೆ ಸದ್ಯದ ಸಂದರ್ಭದಲ್ಲಿ ಅದು ಶಕ್ಯವಿಲ್ಲ ಎಂಬುದು ಶ್ಲೋಕದಲ್ಲಿಯ ಶಬ್ದಯೋಜನೆಯಿಂದ ಸ್ಪಷ್ಟವಾಗುವುದು. ನಾಯಿಗೆ ತಿಳುವಳಿಕೆ ಇಲ್ಲ, ಅದಕ್ಕಾಗಿ ಹೀಗೆ ಮಾಡುತ್ತಿದೆ ಎನ್ನುವಾಗ ನಮ್ಮಲ್ಲಿ ಕನಿಕರ ಮೂಡಬಹುದು. ಆದರೆ 'ಈ ಕುಕ್ಕುಟಮಿಶ್ರಪಾದ'ರು ಅಂತಹರಲ್ಲ; "ಅಯ್ದು ದಿನ", "ಮೂರು ದಿನ", "ವೇದ-ಶಾಸ್ತ್ರ" ಇಂತಹ ವಿಚಾರಗಳನ್ನು ಅರಿತ ಕುಕ್ಕುಟರಾಯರಿವರು. ಆ ಅರಿಕೆಯ ಸಂದರ್ಭದಲ್ಲಿ ನಮಗೆ ಎನ್ನಿಸುವುದು ತಿರಸ್ಕಾರ ಮಾತ್ರ. ಇಷ್ಟೇ ಅಲ್ಲ, ತನ್ನಂತೆ ಮಿಕ್ಕವರಲ್ಲೂ ತಿರಸ್ಕಾರಭಾವ ಮೂಡಲಿ ಎಂಬುದಕ್ಕೆ ಕವಿಯು ಬುದ್ಧಿಪೂರ್ವಕ ಅಂತಹ ಶಬ್ದಯೋಜನೆಯನ್ನು ಮಾಡಿದ್ದಾನೆ.

'ವಿಡಂಬನೆ'ಗೆ ಮುಖ್ಯ ಉದ್ದೇಶ ತಿರಸ್ಕಾರವನ್ನು ಹುಟ್ಟಿಸುವುದು; ಆದರೆ ಅದು ದ್ವೇಷ ಇಲ್ಲವೆ ಅಸಹ್ಯಮೂಲಕವಾಗಿ ಅಲ್ಲ, ಹಾಸ್ಯದ ಮೂಲಕವಾಗಿ. ಈ ಕಾರಣಕ್ಕಾಗಿ ವಿಡಂಬನೆಯು ವಿಲಕ್ಷಣ ಪ್ರಭಾವಶಾಲಿಯಾದ ಅಸ್ತ್ರವಾಗುವುದು. ವಿಡಂಬನೆಗೆ ಗುರಿಯಾದವನಿಗೆ ಸಮಾಧಾನವಿಲ್ಲ, ಪ್ರತೀಕಾರವಿಲ್ಲ, ಮಿಕ್ಕವರೆಲ್ಲರೂ ನಗೆಯಲ್ಲಿ ಆ ಮಾತನ್ನು ಹೇಳುವರೆಂಬುದಕ್ಕಾಗಿ ಅವನು ಸಿಟ್ಟಿಗೇಳುವಂತಿಲ್ಲ. ಇಷ್ಟೇ ಅಲ್ಲದೆ ವಿಡಂಬನೆಯಿಂದ ಅವನಿಗಾಗಬಹುದಾದ ನೋವು ಮಿಕ್ಕವರ ದೃಷ್ಟಿಯಲ್ಲಿ ನೋವು ಎನ್ನಿಸಿ ತೋರಿಸುವುದೂ ಶಕ್ಯವಿಲ್ಲ. ಸಾಮಾನ್ಯವಾಗಿ ಎಲ್ಲ ನೋವುಗಳಂತೆ ಕಾಲಾನುಸಾರ ಗುಣ ಹೊಂದುವ ನೋವು ಅಲ್ಲ. ಇನ್ನೊಬ್ಬರು ಅದನ್ನು ನೆನೆದರೆ ಸಾಕು, ಇವನಿಗೆ ನೋವು, ಕೊನೆಯದಾಗಿ, ಮನುಷ್ಯಸ್ವಭಾವವು "ಆ ವಿಡಂಬನೆಯ ವಸ್ತು ತಾನೇ" ಎಂದು ಬಹಿರಂಗವಾಗಿ ಸಾರಲೂ ಕೊಡುವುದಿಲ್ಲ. ಈ ಕಾರಣಕ್ಕಾಗಿ ವಿಡಂಬನೆಯು ಎಂತಹ ವಿರೋಧಿಯನ್ನೂ ಸರ್ವಾಧಿಕಾರಿಯನ್ನೂ ಸಮಾಜ ಶಕ್ತಿಯನ್ನೂ ಎದುರಿಸಿ ಅವನ್ನು ಸೋಲಿಸಿದ ದೃಷ್ಟಾಂತಗಳಿವೆ ಇತಿಹಾಸದಲ್ಲಿ. ಫ್ರಾನ್ಸ್ ದೇಶದ ವೊಲ್ತೈರ್ ಮತ್ತು ಇಂಗ್ಲಿಷ ಸಾಹಿತ್ಯದ ಜೋನಾಥನ್ ಸ್ವಿಫ್ಟ್ ಇವರ ಕೆಲವು ವಿಡಂಬನಾಸಾಹಿತ್ಯ ಇಂದಿಗೂ ಅಜೇಯವಾಗಿ ಮೆರೆಯುತ್ತಿವೆ.

ಪದ್ಯ ಮತ್ತು ಗದ್ಯ ಎರಡೂ ಶೈಲಿಗಳಲ್ಲಿ ವಿಡಂಬನಾಸಾಹಿತ್ಯದ ರಚನೆಯಾಗುತ್ತಿದ್ದರೂ ಕ್ರಮೇಣ ಗದ್ಯವೇ ಹೆಚ್ಚಾಗಿ ವಿಡಂಬನೆಯ ವಾಹಕವಾಗಿದೆ. ಪ್ರಬಂಧ (ಲಘು) ಮತ್ತು ಹಾಸ್ಯಪ್ರಬಂಧ ಇವೆರಡರ ಬೆರಕೆಯ ರೂಪದಲ್ಲಿ ವಿಡಂಬನಾತ್ಮಕ ಹರಟೆ ಹುಟ್ಟಿದೆ. ಅಜ್ಞಾನ, ಅಂಧಶ್ರದ್ಧೆ, ಅಧಿಕಾರದರ್ಪ, ವೈಭವ, ಮದ, ಲಂಚಗುಳಿತನ ಮುಂತಾಗಿ ಎಲ್ಲಿ ವೈಯಕ್ತಿಕವಾಗಿ ಆರೋಪ ಸಿದ್ಧಮಾಡಲು ಶಕ್ಯವಿಲ್ಲವೊ, ಅಂತಹ ಸಮಾಜಘಾತಕ ಶಕ್ತಿಗಳಿಗೆ ಇಂದು ವಿಡಂಬನಾತ್ಮಕ ಹರಟೆ ಮಾರಕವಾಗಬಹುದಾಗಿದೆ. ಅದನ್ನು ಬರೆಯಲು ಸಮಾಜದ ಮತ್ತು ಸುತ್ತುಮುತ್ತಲಿನ ಪೂರ್ತಿಜ್ಞಾನ ಅಗತ್ಯವಿದ್ದಂತೆ, ರಕ್ತಸುರಿಸದೆ ನೋವನ್ನುಂಟುಮಾಡುವ, ನೊಂದವನನ್ನು ನೋಡಿದರೆ ನಿರ್ದಯತೆಯಾಗಲಿ ಕನಿಕರವಾಗಲಿ ಮೂಡದೆ ನಗೆಯಿಂದ ತಿರಸ್ಕಾರವನ್ನು ಮೂಡಿಸಬಲ್ಲ ಶಬ್ದಪ್ರಭುತ್ವ ಮತ್ತು ಶೈಲಿ ಅಗತ್ಯವಿವೆ.

ನಮ್ಮ ರಾಜ್ಯಾಂಗ ಘಟನೆ—ಆದರ್ಶ ಮತ್ತು ಅನ್ವೇಷಣೆಗಳು

ಭಾರತದ ರಾಜ್ಯಘಟನೆಯು ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ದಯಪಾಲಿಸಿದ್ದು ಅದರ ಅತ್ಯಂತ ಮಹತ್ವದ ಅಂಶವಾಗಿದೆ. ಇದು ಲಿಖಿತ ಘಟನೆಯಾಗಿರುವದರಿಂದ ವ್ಯಾಖ್ಯಾನದ ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದು. ಕಾಲಕಾಲಕ್ಕೆ ವರಿಷ್ಠ ನ್ಯಾಯಾಲಯವು ಕೊಡುವ ನಿರ್ಣಯಗಳನ್ನು ಅನುಲಕ್ಷಿಸಿ ತಿದ್ದುಪಡಿಮಾಡಲಾಗುತ್ತಿದೆ. ಆದರೆ ನಮ್ಮ ಘಟನೆಯು ಇರಿಸಿಕೊಂಡ ಆದರ್ಶಗಳಿಂದ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಹೀಗಾಗಿ ಹೊಸ ಅನ್ವೇಷಣೆಗಳೂ ತಲೆದೋರುವವು. ಇದರ ತಾತ್ವಿಕ ವಿವೇಚನೆಯನ್ನು ಲೇಖಕರು ಈ ಲೇಖದಲ್ಲಿ ನೀಡಿರುವರು.

ಲೇಖಕರು :
ಶ್ರೀ ಸೇವ ನಮಿರಾಜಮಲ್ಲ
ಎಂ. ಏ., ಬಿ. ಎಲ್,
ಆ್ಯಡ್ವೊಕೇಟ, ಮಂಗಳೂರು

ಭಾರತದ ರಾಜ್ಯಾಂಗಘಟನೆಯು ಇತರ ದೇಶಗಳ ರಾಜ್ಯಾಂಗ ಘಟನೆಗಿಂತ ಬಹಳ ಹೆಚ್ಚು ದೊಡ್ಡದಾದುದು. ಅದು ವಿಸ್ತಾರವಾದಂತೆ ಅದರಲ್ಲಿ ಕ್ಲಿಷ್ಟತೆಯೂ ಹೆಚ್ಚುವುದು ಸ್ವಾಭಾವಿಕ. ಯಾವುದೇ ಶಾಸನವಾದರೂ ಅದರ ಪಠ್ಯ ಎಷ್ಟು ಸಂಕ್ಷಿಪ್ತವಾಗಿದೆಯೋ, ಅದರ ವಾಕ್ಯರಚನೆ ಎಷ್ಟು ಸ್ಪಷ್ಟವಾಗಿದೆಯೊ ಅಷ್ಟರ ಮಟ್ಟಿಗೆ ಅದು ನ್ಯಾಯವ್ಯವಹಾರದಲ್ಲಿ ವಾದಗ್ರಸ್ತ ಅಥವಾ ಚರ್ಚಾಸ್ಪದವಾಗುವುದಿಲ್ಲ. ಅದರ ಪ್ರತಿಯೊಂದು ಶಬ್ದದ ವಿವರಣೆಗೂ ನ್ಯಾಯಾಲಯದ ಆಶ್ರಯ ಪಡೆಯಬೇಕಾಗುವುದಿಲ್ಲ. ಶಾಸನದ ಪಠ್ಯ ವಿಸ್ತಾರವಾದೊಡನೆ ಅದರಲ್ಲಿ ಅಸ್ಪಷ್ಟತೆ ಹೆಚ್ಚುತ್ತದೆ: ಕೊನೆಗೆ ಶಬ್ದ, ಅಕ್ಷರ, ಪೂರ್ಣವಿರಾಮ ಅಲ್ಪವಿರಾಮಾದಿ ಸಂಕೇತಗಳ ಬಗ್ಗೆಯೂ ವಿವಾದ ನಡೆಯುತ್ತದೆ.

ಬ್ರಿಟಿಶರ ಕಾನೂನಿನ ಪರಂಪರೆಯ ವರ್ಚಸ್ಸು ನಮ್ಮ ರಾಜ್ಯಾಂಗ ಘಟನೆಯಲ್ಲೂ ಹೀಗೆ ಕಂಡುಬರುತ್ತದೆ. ವಾಸ್ತವಿಕವಾಗಿ ನೋಡಿದರೆ ಬ್ರಿಟಿಶರಿಗೆ ರಾಜ್ಯಾಂಗ ಘಟನೆಯೇ ಇರುವುದಿಲ್ಲ. ಅವರದು ಬರೆದಿಡದ ರಾಜ್ಯಾಂಗ. ಆದ್ದರಿಂದ ಅದರ ಚೌಕಟ್ಟು ಮಿದುವಾಗಿದೆ. ಅದನ್ನು ಬೇಕಾದಂತೆ ತಿದ್ದಿಕೊಳ್ಳಬಹುದು. ಆದರೆ ನಮ್ಮ ರಾಜ್ಯಾಂಗ ಘಟನೆ ಹಾಗಲ್ಲ. ಅದರ ಚೌಕಟ್ಟು ಶಿಥಿಲವಾದುದು. ಆಡಳಿತಾಂಗ, ನ್ಯಾಯಾಂಗ ಮತ್ತು ಶಾಸಕಾಂಗಗಳ ಹಕ್ಕುಬಾಧ್ಯತೆಗಳು, ಪ್ರಜೆಗಳ ಮೂಲಭೂತ ಹಕ್ಕುಗಳು, ಸರ್ಕಾರವು ಅನುಸರಿಸಬೇಕಾದ ಪ್ರಜಾಕ್ಷೇಮದ ಧ್ಯೇಯಗಳು ಎಲ್ಲ ಅದರಲ್ಲಿ ಕ್ರೋಢೀಕರಿಸಲ್ಪಟ್ಟಿವೆ. ಅದನ್ನು ಬದಲಿಸುವುದು ಇಲ್ಲವೆ ತಿದ್ದುಪಡಿ ಮಾಡುವುದು ಅಷ್ಟು ಸುಲಭಸಾಧ್ಯವಲ್ಲ. ನಮ್ಮ ಶಾಸಕಾಂಗದ ಏಕಪಕ್ಷಬಾಹುಲ್ಯದಿಂದಾಗಿ ಈ ವರೆಗೆ ಈ ರಾಜ್ಯಾಂಗದ ತಿದ್ದುಪಡಿಯ ಕೆಲಸ ಹೆಚ್ಚು ಕಷ್ಟವಿಲ್ಲದೆ ಸಾಗಿದೆಯೆನ್ನಬಹುದು. ಆದರೆ ಈ ಏಕಪಕ್ಷದ ಆಡಳಿತೆ ಎಷ್ಟು ಸಮಯದ ವರೆಗೆ ಮುಂದರಿದೀತೆನ್ನುವುದು ಅಸಾಧ್ಯ. ಯಥಾಸ್ಥಿತಿಯಾಗಿ ರಾಜ್ಯಭಾರ ನಡೆದರೆ ಒಂದಲ್ಲ ಒಂದು ದಿನ ಇಂದಿನ ಆಳುವ ಪಕ್ಷದ ಬಲ ಪಾರ್ಲಿಮೆಂಟಿನಲ್ಲಿ ಕುಗ್ಗಬಹುದು. ರಾಜ್ಯಸರಕಾರಗಳಲ್ಲಿ ಕೆಲವಾದರೂ ಪ್ರತಿಪಕ್ಷಗಳ ಆಡಳಿತೆಗೆ ಒಳಗಾಗಬಹುದು. ಇಂಥ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯಾಂಗದ ಸ್ವರೂಪವು ಅತ್ಯಂತ ಶಿಥಿಲವಾಗದಿರದು. ಅದನ್ನು ಆಗ ಎಲ್ಲಾದರೂ ತಿದ್ದುಪಡಿ ಮಾಡೋಣವೆಂದರೆ ಅದಕ್ಕೆ ಬೇಕಾದ ಬಹುಮತ ಸಿಗದೆ ಹೋಗಬಹುದು.

ವ್ಯಾಖ್ಯಾನದ ಕ್ಲಿಷ್ಟ ಸಮಸ್ಯೆಗಳು

ಆದರೆ ಲಿಖಿತ ರಾಜ್ಯಾಂಗಘಟನೆಯಲ್ಲಿ ಆಗಾಗ್ಗೆ ವ್ಯಾಖ್ಯಾನದ ಬಗ್ಗೆ ಕ್ಲಿಷ್ಟ ಸಮಸ್ಯೆಗಳು ತಲೆದೋರುವುದು ಸ್ವಾಭಾವಿಕ. ಅಂಥ ಸಂದರ್ಭಗಳಲ್ಲಿ ಒಮ್ಮೊಮ್ಮೆ ರಾಜ್ಯಾಂಗದ ಅಧಿಕೃತವ್ಯಾಖ್ಯಾನ ನೀಡಬಲ್ಲ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶರಲ್ಲಿ ಕೂಡಾ ಮತಭೇದ ಉಂಟಾಗುತ್ತದೆ. ಅಂಥ ಸಂದರ್ಭದಲ್ಲಿ ಆ ಕ್ಲಿಷ್ಟ ಅಂಶವನ್ನು ಸ್ಪಷ್ಟೀಕರಿಸುವ ರಾಜ್ಯಾಂಗದ ತಿದ್ದುಪಡಿಯ ಅವಶ್ಯಕತೆ ಉಂಟಾಗುತ್ತದೆ. ಉದಾಹರಣೆಗೆ ಅಂತರ್ ರಾಜ್ಯ ಮಾರಾಟಕರ ಹೇರುವ ಸಂಬಂಧದಲ್ಲಿ ರಾಜ್ಯಾಂಗದ ೨೮೬ ನೇ ನಿಬಂಧನೆಯು ಮಹತ್ವದ ಮತಭೇದಕ್ಕೆ ಅವಕಾಶವಿತ್ತಿತು. ಒಂದು ರಾಜ್ಯದ ಹೊರಗೆ ಖರೀದಿ ಮಾಡಿದ ಸರಕನ್ನು ಆ ರಾಜ್ಯದ ಒಳಗೆ ತರುವಾಗ ಮಾರಾಟಕರ ಹೇರಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆಯೆ? ಎಂಬುದು ಮುಖ್ಯ ಪ್ರಶ್ನೆಯಾಗಿತ್ತು. ಇದನ್ನು ಪರಿಹರಿಸಲು ರಾಜ್ಯಾಂಗವನ್ನು ತಿದ್ದುಪಡಿ ಮಾಡಿ ಕೇಂದ್ರ ಸರ್ಕಾರದ ಕೇಂದ್ರ ಮಾರಾಟಕರವನ್ನು ರಾಜ್ಯ ಸರ್ಕಾರಗಳಿಗೆ ಹೊರಿಸುವ ಅಧಿಕಾರ ಪರಿಮಿತಿಯನ್ನು ಸ್ಪಷ್ಟೀಕರಿಸಬೇಕಾಯಿತು.

ನಮ್ಮ ರಾಜ್ಯಾಂಗದಲ್ಲಿ ಈ ವರೆಗೆ ಏಳೆಂಟು ತಿದ್ದುಪಡಿಗಳು ಆಗಿವೆ. ಅವುಗಳಲ್ಲಿ ಮುಖ್ಯವಾದವುಗಳು ನಾಗರಿಕರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದವುಗಳು. ರಾಜ್ಯಾಂಗವನ್ನು ರಚಿಸುವಾಗ ಮೂಲಭೂತ ಹಕ್ಕುಗಳ ಅಧ್ಯಾಯವನ್ನು ಹೆಚ್ಚಾಗಿ ಐರ್ಲೆಂಡ್ ದೇಶದ ರಾಜ್ಯಾಂಗದ ಮೇಲೆ ಹೊಂದಿಸಿಕೊಳ್ಳಲಾಯಿತು. ಆದರೆ ಅದರ ನಿಬಂಧನೆಗಳ ವ್ಯಾಪ್ತಿಗಳನ್ನು ಸೀಮಿತಗೊಳಿಸಲು ಅವುಗಳನ್ನು ಪದೇ ಪದೇ ತಿದ್ದುಪಡಿ ಮಾಡಬೇಕಾಯಿತು.

ಮಹತ್ವದ ನಾಗರಿಕ ಹಕ್ಕುಗಳು

ಮೂಲಭೂತ ಹಕ್ಕುಗಳನ್ನು ನೀಡುವ ನಿಬಂಧನೆಗಳ ಪೈಕಿ ೧೯ ನೆಯ ನಿಬಂಧನೆಯಲ್ಲಿ ಸೂಚಿಸಲಾದ ನಾಗರಿಕ ಹಕ್ಕುಗಳು ಅತ್ಯಂತ

ಮಹತ್ವದವು. ಈ ಹಕ್ಕುಗಳೇ ಪ್ರಜಾಸತ್ತೆಯ ಅಡಿಗಲ್ಲು. ಆದರೆ ರಾಜ್ಯಾಂಗವು ಸ್ವೀಕಾರವಾದ ಮರು ವರ್ಷದಲ್ಲೇ ಈ ನಿಬಂಧನೆಗೆ ತಿದ್ದುಪಡಿಗಳನ್ನು ಮಾಡಲಾಯಿತು. ಈಗ ಈ ನಿಬಂಧನೆಯು ಹೀಗಿದೆ:

೧೯. (೧) ಎಲ್ಲಾ ನಾಗರಿಕರಿಗೂ ಈ ಹಕ್ಕುಗಳಿರಬೇಕು—

(ಎ) ವಾಕ್ ಮತ್ತು ವಕ್ತವ್ಯ ಸ್ವಾತಂತ್ರ್ಯ;

(ಬಿ) ಶಾಂತಿಯುತವಾಗಿ ಮತ್ತು ನಿರಾಯುಧರಾಗಿ ಸಮಾವೇಶಗೊಳ್ಳುವುದು.

(ಸಿ) ಸಂಘ ಅಥವಾ ಒಕ್ಕೂಟಗಳನ್ನು ರಚಿಸುವುದು.

(ಡಿ) ಭಾರತದ ಪ್ರದೇಶದಲ್ಲಿ ಸ್ವತಂತ್ರವಾಗಿ ಸಂಚರಿಸುವುದು.

(ಇ) ಭಾರತದ ಪ್ರದೇಶದ ಯಾವ ಭಾಗದಲ್ಲಿಯೂ ವಾಸಿಸುವುದು ಮತ್ತು ನೆಲಿಸುವುದು.

(ಎಫ್) ಆಸ್ತಿಯನ್ನು ಪಡಕೊಳ್ಳುವುದು, ಅನುಭವಿಸುವುದು ಮತ್ತು ಅದನ್ನು ಮಾರುವುದು ಮತ್ತು

(ಜಿ) ಯಾವುದೇ ವೃತ್ತಿಯನ್ನನುಸರಿಸುವುದು ಅಥವಾ ಯಾವುದೇ ಉದ್ಯೋಗ, ಕಸಬು ಅಥವಾ ವ್ಯಾಪಾರವನ್ನು ನಡೆಸುವುದು.

೨. (೧) ನೇ ಉಪನಿಬಂಧನೆಯ (ಎ) ಅಂಶವು ಕೊಟ್ಟಿರುವ ಹಕ್ಕಿನ ಮೇಲೆ ದೇಶದ ಭದ್ರತೆಗಾಗಿ, ವಿದೇಶಗಳೊಡನಿರುವ ಮೈತ್ರಿ ಸಂಬಂಧವನ್ನು ಊರ್ಜಿತಗೊಳಿಸಲಿಕ್ಕಾಗಿ, ಸಾರ್ವಜನಿಕ ಶಾಂತಿ, ಸಭ್ಯತೆ ಅಥವಾ ನೀತಿಗಾಗಿ ಅಥವಾ ನ್ಯಾಯಾಲಯವನ್ನು ಭಂಗಿಸಿದ ಅಪಮಾನ ಅಥವಾ ಒಂದು ದುಷ್ಕೃತ್ಯದ ಪ್ರಚೋದನೆಯ ಸಂಬಂಧದಲ್ಲಿ, ನ್ಯಾಯವಾದ ನಿರ್ಬಂಧವನ್ನು ಪ್ರಸ್ತುತ ಊರ್ಜಿತದಲ್ಲಿರುವ ಶಾಸನವು ಹೇರಿಸುವುದನ್ನಾಗಲಿ ಅಥವಾ ರಾಜ್ಯವು ಅಂಥ ಶಾಸನವನ್ನು ರಚಿಸುವುದನ್ನಾಗಲಿ ಆ ಅಂಶವು ಬಾಧಿಸದು.

೩. ಅದೇ ಉಪನಿಬಂಧನೆಯ (ಬಿ) ಅಂಶವು ನೀಡಿರುವ ಹಕ್ಕನ್ನು ಸಾರ್ವಜನಿಕ ಶಾಂತಿಗಾಗಿ, ಊರ್ಜಿತದಲ್ಲಿರುವ, ಕಾನೂನಿನಲ್ಲಿರುವ ಅಥವಾ ಇನ್ನು ಮುಂದೆ ಸರ್ಕಾರವು ಮಾಡುವ ಕಾನೂನಿನಲ್ಲಿರುವ ನಿರ್ಬಂಧಗಳಿಗೆ ಆ ಅಂಶವು ಬಾಧಿಸದು.

೪. ಆ ಉಪನಿಬಂಧನೆಯ (ಸಿ) ಅಂಶದಲ್ಲಿ ನೀಡಿರುವ ಹಕ್ಕಿನ ಮೇಲೆ ಸಾರ್ವಜನಿಕ ಶಾಂತಿಗಾಗಿ ಅಥವಾ ನೀತಿಗಾಗಿ ಊರ್ಜಿತದಲ್ಲಿರುವ ಅಥವಾ ಮುಂದೆ ಸರಕಾರವು ಮಾಡಬಹುದಾದ ಕಾನೂನು ನ್ಯಾಯವಾದ ನಿರ್ಬಂಧಗಳನ್ನು ಹೇರಿಸುವುದನ್ನು ಈ ಹಕ್ಕು ಬಾಧಿಸದು.

೫. ಆ ಉಪನಿಬಂಧನೆಯ (ಡಿ), (ಇ) ಮತ್ತು (ಎಫ್) ಅಂಶಗಳು ನೀಡಿರುವ ಹಕ್ಕನ್ನು ಸಾರ್ವಜನಿಕರ ಹಿತಕ್ಕಾಗಿ ಅಥವಾ ಪರಿಶಿಷ್ಟ ಗುಡ್ಡಗಾಡು ಪಂಗಡವೊಂದರ ಹಿತರಕ್ಷಣೆಗಾಗಿ ಊರ್ಜಿತದಲ್ಲಿರುವ ಕಾನೂನು ಅಥವಾ ಮುಂದೆ ಸರಕಾರವು ಮಾಡುವ ಕಾನೂನು ನಿರ್ಬಂಧಿಸುವುದು. ಆ ಅಂಶಗಳ ಹಕ್ಕುಗಳು ಬಾಧಿಸಲಾರವು.

೬. ಆ ಉಪನಿಬಂಧನೆಯ (ಜಿ) ಅಂಶವು ನೀಡಿರುವ ಹಕ್ಕಿನ ಮೇಲೆ ಸಾರ್ವಜನಿಕ ಹಿತಕ್ಕಾಗಿ ನ್ಯಾಯ್ಯವಾದ ನಿರ್ಬಂಧಗಳನ್ನು ಊರ್ಜಿತದಲ್ಲಿರುವ ಕಾನೂನು ಅಥವಾ ಮುಂದೆ ಸರಕಾರವು ಮಾಡಬಹುದಾದ ಕಾನೂನು ಹೇರಿಸುವುದನ್ನು ಮತ್ತು ವಿಶೇಷವಾಗಿ ಈ ಕೆಳಗಿನವುಗಳಿಗೆ ಸಂಬಂಧಿಸಿದ ಊರ್ಜಿತದಲ್ಲಿರುವ ಕಾನೂನು ಅಥವಾ ಮುಂದೆ ಮಾಡಲ್ಪಡಬಹುದಾದ ಕಾನೂನುಗಳಿಗೆ ಬಾಧಿಸುವುದಿಲ್ಲ.

(ಒಂದು) ಯಾವುದೇ ಉದ್ಯೋಗ, ಕಸಬು ಅಥವಾ ವ್ಯಾಪಾರಕ್ಕೆ ಬೇಕಾಗುವ ವೃತ್ತಿಪರ ಅಥವಾ ತಾಂತ್ರಿಕ ಅರ್ಹತೆ ಅಥವಾ

(ಎರಡು) ನಾಗರಿಕರನ್ನು ಪೂರ್ಣ ಅಥವಾ ಪಾಕ್ಷಿಕವಾಗಿ ಹೊರತುಪಡಿಸಿ ಯಾವುದೇ ಕಸಬು, ವ್ಯಾಪಾರ, ಉದ್ಯಮ ಅಥವಾ ಸೇವೆಯನ್ನು ಸರಕಾರ ಅಥವಾ ಸರಕಾರದ ಒಡೆತನದಲ್ಲಿರುವ ಅಥವಾ ಸರಕಾರದಿಂದ ನಿಯಂತ್ರಿಸಲ್ಪಡುವ ಸಂಸ್ಥೆಯು ನಿರ್ವಹಿಸುವುದು.

ವಾಕ್‌ಸ್ವಾತಂತ್ರ್ಯ

ಈ ನಿಬಂಧನೆಗೆ ೨ನೆಯ ಉಪನಿಬಂಧನೆಯನ್ನೂ ೬ನೆಯ ಉಪನಿಬಂಧನೆಯ ಅಂತ್ಯದ ಎರಡು ಭಾಗಗಳನ್ನೂ ೧೯೫೧ನೇ ಜೂನದಲ್ಲಿ ತಿದ್ದುಪಡಿಯಾಗಿ ಸೇರಿಸಲಾಯಿತು. ೨ನೆಯ ಉಪನಿಬಂಧನೆಯನ್ನು ರಾಮೆಶ್ ಥಪ್ಪರ್‌ರ ವ್ಯಾಜ್ಯದಲ್ಲಿ ವರಿಷ್ಠ ನ್ಯಾಯಾಲಯವು ಸಾಮಾನ್ಯ ಅಥವಾ ಸ್ಥಳೀಯ ಶಾಂತಿಭಂಗವನ್ನುಂಟು ಮಾಡುವ ಕೃತ್ಯವು ಮೂಲಭೂತ ಹಕ್ಕಿನಲ್ಲಿರುವ ವಾಕ್‌ಸ್ವಾತಂತ್ರ್ಯವನ್ನು ಸೀಮಿತಗೊಳಿಸಲು ಸಮರ್ಥ ಕಾರಣವಲ್ಲವೆಂದು ತೀರ್ಮಾನಿಸಿತ್ತು. ಈಗ ಆಗಿರುವ ತಿದ್ದುಪಡಿಯಲ್ಲಿ ದೇಶದ ಭದ್ರತೆಯೆಂದರೆ ದಂಗೆ, ಸರಕಾರವನ್ನು ತಳ್ಳಿಹಾಕಲು ಮಾಡುವ ದುಷ್ಕೃತ್ಯಗಳು, ವಿದೇಶಿ ಆಕ್ರಮಣಗಳು ಸೇರಿವೆ. 'ವಿದೇಶಿ ದೇಶಗಳೊಳಗಿನ ಮೈತ್ರಿ ಸಂಬಂಧ' ದ ಪ್ರಶ್ನೆಯಲ್ಲಿ ಪಾಕಿಸ್ತಾನ ಮತ್ತು ಇತರ ಕಾಮನ್‌ವೆಲ್ತ್ ದೇಶಗಳು 'ವಿದೇಶ' ಗಳಲ್ಲ. ಸಾರ್ವಜನಿಕ ಭದ್ರತೆಯು ಸರಕಾರಿ ನೌಕರರನ್ನು ಅಥವಾ ಇತರ ನೌಕರರು ಕೆಲಸ ಮಾಡದಂತೆ ಪ್ರಚೋದಿಸುವುದೂ ಅವರಲ್ಲಿ ಶಿಸ್ತುಭಂಗವನ್ನುಂಟುಮಾಡುವುದೂ 'ಸಾರ್ವಜನಿಕ ಶಾಂತಿ' ಗೆ ವ್ಯತಿರಿಕ್ತವಾಗಿವೆ. ನೈತಿಕ ಪತನವನ್ನು ಪ್ರಚೋದಿಸುವ ವಾಕ್‌ಸ್ವಾತಂತ್ರ್ಯ ಸೀಮಿತಗೊಂಡಿದೆ; ವಾಕ್‌ಸ್ವಾತಂತ್ರ್ಯದ ಬಲದಿಂದ ಒಂದು ನ್ಯಾಯಾಲಯದ ಕಾರ್ಯಾಚರಣೆಯನ್ನು ಟೀಕಿಸಬಾರದು. ಹಾಗೆಯೇ ಇತರರಿಗೆ ಅಪಮಾನಕರವಾಗುವ ರೀತಿಯಲ್ಲಿ ವರ್ತಿಸಲು ಸಾಧ್ಯವಿಲ್ಲ. ಒಬ್ಬನ ಮರ್ಯಾದೆ

ಮತ್ತು ಖ್ಯಾತಿ ಕೂಡ ಆಸ್ತಿಯೆಂದು ಪರಿಗಣಿಸಲ್ಪಟ್ಟಿವೆ. ಯಾವುದೇ ದುಷ್ಕೃತ್ಯವನ್ನು ಪ್ರಚೋದಿಸಲಿಕ್ಕೂ ಈ ವಾಕ್‌ಸ್ವಾತಂತ್ರ್ಯವು ಅವಕಾಶ ನೀಡದು. ಈ ತಿದ್ದುಪಡಿಯಿಂದಾಗಿ ಇಂಡಿಯನ್ ಪಿನಲ್ ಕೋಡಿನ ಸಂಬಂಧಪಟ್ಟ ಅಂಶಗಳು ರಾಜ್ಯಾಂಗ ಶಾಸನಬದ್ಧವಾಗಿ ಪರಿಣಮಿಸಿದುವು.

ಆದರೆ 'ಪಿಕೆಟಿಂಗ್' ಅಥವಾ ಶಾಂತಿಯುತ ಮತಪ್ರದರ್ಶನ ಮಾಡುವ ಹಕ್ಕು ಈ ಮೂಲಭೂತ ಹಕ್ಕಿನಲ್ಲಿ ಅಡಕವಾಗಿದೆಯೆ? ಮೆಂಗನ್ (೧೯೫೨ ಮದ್ರಾಸು) ಮತ್ತು ದಾಮೋದರ್ (೧೯೫೧ ಮುಂಬಯಿ) ರ ವ್ಯಾಜ್ಯಗಳಲ್ಲಿ ಪಿಕೆಟಿಂಗ್ ಶಾಂತಿಭಂಗವನ್ನು ಮಾಡಬಹುದೆಂಬ ದೃಷ್ಟಿಯಿಂದಲೂ ಯಾರ ವಿರುದ್ಧ /ಪಿಕೆಟ್ ಮಾಡಲಾಗುವುದೋ ಅವರ ನಾಗರಿಕ ಸ್ವಾತಂತ್ರ್ಯವು ಅದರಿಂದ ಕುಂಠಿತವಾಗಬಹುದೆಂಬುದರಿಂದಾಗಿಯೂ ಅದು ವಾಕ್‌ಸ್ವಾತಂತ್ರ್ಯದಲ್ಲಿ ಸೇರಿಲ್ಲವೆಂದು ತೀರ್ಮಾನಿಸಲಾಗಿತ್ತು. ಇತ್ತೀಚೆಗೆ ಮದ್ರಾಸ್ ನ್ಯಾಯಾಲಯದಲ್ಲಿ ಎಸ್. ಸಿ. ಸಿ. ಅಂತೋನಿ ಪಿಳ್ಳೈಯ ವ್ಯಾಜ್ಯದಲ್ಲಿಯೂ ನ್ಯಾಯಮೂರ್ತಿಗಳು ಮತಪ್ರದರ್ಶನ ಮಾಡುವ ಹಕ್ಕು ಮೂಲಭೂತ ಸ್ವಾತಂತ್ರ್ಯದಲ್ಲಿ ಸೇರಿದೆಯೋ ಇಲ್ಲವೋ ಎಂದು ಸಂಶಯಪಡುತ್ತ ಇದನ್ನು ರಾಜ್ಯಾಂಗವನ್ನು ಬದಲಿಸಿಯಾದರೂ ಸ್ಪಷ್ಟಪಡಿಸಬೇಕೆಂದು ಅಭಿಪ್ರಾಯವಿತ್ತಿರುವರು.

ಸಂಸತ್ತಿನ ಹಕ್ಕುಬಾಧ್ಯತೆಗಳು

ಸಂಸತ್ತಿನ ಮತ್ತು ಅದರ ಸದಸ್ಯರ ವಾಕ್ ಸ್ವಾತಂತ್ರ್ಯದ ಸವಲತ್ತು ಮೇಲಿನ ನಾಗರಿಕರ ವಾಕ್‌ಸ್ವಾತಂತ್ರ್ಯದ ಹಕ್ಕಿಗಿಂತ ಮಿಗಿಲಾದುದು. ಇತ್ತೀಚೆಗೆ ಆಚಾರ್ಯ ಕೃಪಲಾನಿಯವರು ಸಂಸತ್ತಿನಲ್ಲಿ ಸರಕಾರದ ಭದ್ರತಾ ನೀತಿಯ ವಿರುದ್ಧ ಭಾಷಣ ಮಾಡಿದುದನ್ನು ಅವಹೇಳನಮಾಡಿ ಮುಂಬಯಿಯ 'ಬ್ಲಿಜ್' ಪತ್ರಿಕೆಯು ಒಂದು ಬರಹವನ್ನು ಪ್ರಕಟಿಸಿತು. ಅದರ ವಿರುದ್ಧ ಸಂಸತ್ತಿನ ಸವಲತ್ತು ಸಮಿತಿಯು ಕ್ರಮವನ್ನು ಕೈಕೊಂಡು ಪತ್ರಿಕೆಯ ಸಂಪಾದಕರಿಗೆ ಮತ್ತು ಅದರ ದೆಹಲಿ ಸುದ್ದಿಗಾರರಿಗೆ ಶಿಕ್ಷೆ ವಿಧಿಸಿತು. ಈ ತೀರ್ಮಾನವು ತಮ್ಮ ವಾಕ್‌ಸ್ವಾತಂತ್ರ್ಯಕ್ಕೆ ವ್ಯತಿರಿಕ್ತವಾಗಿದೆಯೆಂದು ಇಬ್ಬರು ಅಪಾದಿತರೂ ವರಿಷ್ಠ ನ್ಯಾಯಾಲಯಕ್ಕೆ ರಿಟ್ ಮನವಿ ಸಲ್ಲಿಸಿದರು ಆದರೆ ಸಂಸತ್ತಿನ ಹಕ್ಕು ನಾಗರಿಕನ ಹಕ್ಕಿಗಿಂತ ಶ್ರೇಷ್ಠವಾದುದೆಂದೂ ಸಂಸತ್ತಿನ ಹಕ್ಕನ್ನು ಪರಿಶೀಲಿಸುವ ಅಧಿಕಾರ ನ್ಯಾಯಾಂಗಕ್ಕಿಲ್ಲವೆಂದೂ ವರಿಷ್ಠ ನ್ಯಾಯಾಲಯ ತೀರ್ಮಾನಿಸಿತು. ಆದರೆ ರಾಜ್ಯಾಂಗ ಘಟನೆಯಲ್ಲಿ ಈ ಬಗ್ಗೆ ಸ್ಪಷ್ಟವಾದ ಉಲ್ಲೇಖವಿಲ್ಲದಿದ್ದುದು ದೊಡ್ಡ ಕೊರತೆಯಾಗಿ ಕಂಡುಬಂದಿದೆ.

ಇನ್ನು ಸಂಘಗಳನ್ನು ಕಟ್ಟುವ ಸ್ವಾತಂತ್ರ್ಯದ ಬಗ್ಗೆಯೂ ನಿರ್ಬಂಧಗಳಿವೆ. ಆದರೆ ಅಪಾಯಕಾರಿಯಾದ ಉದ್ದೇಶವನ್ನಿಟ್ಟುಕೊಂಡ ಸಂಘಗಳ ಸ್ವಾತಂತ್ರ್ಯವನ್ನು ಸರ್ಕಾರವು ಆ ಸಂಘದ ಸದಸ್ಯರೊಡನೆ ವಿಚಾರಣೆ ನಡೆಸದೆ ಅದರ ಮೇಲೆ ನಿರ್ಬಂಧ ಹೇರಲು ಸಾಧ್ಯವಿಲ್ಲವೆಂದು ರಾವ್‌ರ ವ್ಯಾಜ್ಯದಲ್ಲಿ (೧೯೫೨) ವರಿಷ್ಠ ನ್ಯಾಯಾಲಯ ತೀರ್ಮಾನಿಸಿದೆ. ದೇಶದೊಳಗೆ ಚಲನಾ ಸ್ವಾತಂತ್ರ್ಯಕ್ಕೆ ಸರ್ಕಾರವು ನಾಗರಿಕನ ಮೇಲೆ ಮಾಡುವ ನಿರ್ಗಮನ ಆಜ್ಞೆಯು ವ್ಯತಿರಿಕ್ತವಾಗಿದೆಯೆಂದು ಗುರುಬಚನ್ (೧೯೫೨) ರ ವ್ಯಾಜ್ಯದಲ್ಲಿ ವರಿಷ್ಠ ನ್ಯಾಯಾಲಯವು ತೀರ್ಮಾನಿಸಿದೆ.

ಆಸ್ತಿಯ ಹಕ್ಕು

ಆಸ್ತಿಯನ್ನು ಖರೀದಿ ಮಾಡುವ, ಅನುಭೋಗಿಸುವ ಮತ್ತು ಮಾರಾಟ ಮಾಡುವ ಹಕ್ಕು ಒಬ್ಬ ನಾಗರಿಕ ಮತ್ತು ಇನ್ನೊಬ್ಬ ನಾಗರಿಕನ ಆಸ್ತಿಯ ಸಂಬಂಧದ ವಿವಾದವನ್ನು ಬಾಧಿಸುವುದಿಲ್ಲ. ಅದಲ್ಲದೆ ಸರ್ಕಾರವು ಆಸ್ತಿಯ ಒಡೆತನದ ಹಕ್ಕನ್ನು ಚಲಾಯಿಸುವುದನ್ನು ನಿಷೇಧಿಸುವುದಿಲ್ಲ. ಆದರೆ ಇದಕ್ಕೆ ೩೧ ನೇ ಮತ್ತು ೩೧ (ಎ) ನಿಬಂಧನೆಗಳು ನಿರ್ಬಂಧವನ್ನು ಹೇರುತ್ತವೆ. ೧೯೫೫ ರಲ್ಲಿ ತಿದ್ದುಪಡಿಯಾದ ಮೇರೆಗೆ ಈ ನಿಬಂಧನೆಯನ್ವಯ ಸಾರ್ವಜನಿಕ ಉದ್ದೇಶಕ್ಕಾಗಿ ಶಾಸನಬದ್ಧವಾಗಿ ಸರ್ಕಾರವು ಪರಿಹಾರಧನವನ್ನಿತ್ತು ವಶಪಡಿಸಿಕೊಳ್ಳಬಹುದು; ಮತ್ತು ಹಾಗೆ ನೀಡಿದ ಪರಿಹಾರಧನವು ಕಡಿಮೆಯಾಯಿತೆಂಬ ಬಗ್ಗೆ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಲು ನಾಗರಿಕರಿಗೆ ಹಕ್ಕಿಲ್ಲ. ಇದು ಸ್ಥಿರ ಸೊತ್ತೂ ಆಗಿರಬಹುದು, ಚರಸೊತ್ತೂ ಆಗಿರಬಹುದು. ಅಲ್ಲದೆ, ಅಡವು, ಧಾರ್ಮಿಕ ಉಂಬಳಿಯ ವ್ಯವಸ್ಥೆ ಹಾಗೂ ಉತ್ತರಾಧಿಕಾರದ ಹಕ್ಕು, ವಾಣಿಜ್ಯ ಅಥವಾ ಉದ್ಯಮದಲ್ಲಿರುವ ಹಕ್ಕು, ವ್ಯಾಪಾರಸಂಸ್ಥೆಗಳಲ್ಲಿರುವ ಪಾಲುಗಾರಿಕೆಯ ಹಕ್ಕು, ಸರ್ಕಾರಿ ನೌಕರನ ಸಂಬಳ ಮತ್ತು ಪ್ರತಿಸ್ವಾಧೀನದಿಂದ ಬಂದ ಹಕ್ಕುಗಳೆಲ್ಲ ಆಸ್ತಿಗಳೆಂದು ಈ ತನಕ ನಿರ್ಣಯವಾದ ವ್ಯಾಜ್ಯಗಳಲ್ಲಿ ಸ್ಪಷ್ಟವಾಗಿದೆ.

ಆದರೆ ಸಾರ್ವಜನಿಕ ಉದ್ದೇಶವೆಂದರೆ ಏನು? ಇದು ತುಂಬಾ ವಾದಗ್ರಸ್ತ ವಿಷಯ. ಅದು ಜನಸಾಮಾನ್ಯದ ಹಿತವೋ? ಅಥವಾ ಸಾರ್ವಜನಿಕರಿಗೆ ಅದರಿಂದ ಪ್ರಯೋಜನವಿರಬೇಕೊ ಅಥವಾ ಸಾರ್ವಜನಿಕರು ಅದನ್ನು ಉಪಯೋಗಿಸಬೇಕೋ? ತಂಬಿರನ್‌ವ್ಯಾಜ್ಯದಲ್ಲಿ (೧೯೫೨) ಮದ್ರಾಸು ನ್ಯಾಯಾಲಯವು ಅಂಥ ಆಸ್ತಿಯ ಸ್ವಾಧೀನ ಪಡಿಸಿಕೊಳ್ಳುವಿಕೆಯು ಸರ್ವಜನರಿಗೂ ಅಥವಾ ಬಹುಮಂದಿಗೂ ಅದನ್ನು ಅನುಭೋಗಿಸುವ ಅಥವಾ ಅನುಭೋಗದಲ್ಲಿ ಪಾಲುಗಾರರಾಗುವ ಅವಶ್ಯವಿಲ್ಲವೆಂದು



ತೀರ್ಮಾನಿಸಿದೆ. ಸಾರ್ವಜನಿಕ ಪ್ರಯೋಜನಕ್ಕಿರುವ ಯೋಜನೆಗೆ ಅಂಥ ಸ್ವಾಧೀನತೆಯಿಂದ ಪ್ರಯೋಜನವಾದರೆ ಅದು ಸಾರ್ವಜನಿಕ ಉದ್ದೇಶವಾಗುವುದೆಂದು ವರಿಷ್ಠ ನ್ಯಾಯಾಲಯವು ನಾಸ್‌ಜೀ (೧೯೫೬) ಯ ವ್ಯಾಜ್ಯದಲ್ಲಿ ತೀರ್ಮಾನಿಸಿದೆ. ಈ ಪ್ರಕಾರ ರಾಜ್ಯಾಂಗ ಘಟನೆಯಲ್ಲಿರುವ ಸಾರ್ವತ್ರಿಕ ಶಿಕ್ಷಣ, ಸಾರ್ವತ್ರಿಕ ಪಾನನಿರೋಧ ಇತ್ಯಾದಿ ರಾಜ್ಯದ ನಿರ್ದೇಶಕ ನೀತಿಗಳನ್ನು ಕಾರ್ಯಗತಗೊಳಿಸಲು ಸರಕಾರವು ಮಾಡುವ ಆಸ್ತಿಯ ಸ್ವಾಧೀನವು ಸಾರ್ವಜನಿಕ ಉದ್ದೇಶವಾಗಿದೆಯೆಂದು ವರಿಷ್ಠ ನ್ಯಾಯಾಲಯವು ಕಾಮೇಶ್ವರ್ (೧೯೫೨-೫೪) ವ್ಯಾಜ್ಯದಲ್ಲೂ ಮದ್ರಾಸು ನ್ಯಾಯಾಲಯವು ಸತ್ಯವತಿ(೧೯೫೨)ಯ ವ್ಯಾಜ್ಯದಲ್ಲೂ ತೀರ್ಮಾನಿಸಿವೆ.

೩೧ ಎ ನಿಬಂಧನೆಯು ೧೯೫೧ ರಲ್ಲಿ ಸೇರಿಸಲ್ಪಟ್ಟು ೧೯೫೫ ರಲ್ಲಿ ಪುನಃ ತಿದ್ದಲ್ಪಟ್ಟಿತು. ಇದರ ಮೇರೆಗೆ ಯಾವುದೇ 'ಎಸ್ಟೇಟ್' ಅಂದರೆ ಜಾಗೀರ್, ಇನಾಮ್, ಮುಂತಾದ ಹಿಡುವಳಿಗಳನ್ನು ಅಥವಾ ಅವುಗಳ ಹಕ್ಕುಗಳನ್ನು ಸರ್ಕಾರವು ಸ್ವಾಧೀನ ಪಡಿಸುವುದು ೧೯ ಅಥವಾ ೩೧ ನೇ ನಿಬಂಧನೆಗಳಿಗೆ ವ್ಯತಿರಿಕ್ತವಾಗುವುದಿಲ್ಲ. ಹಾಗೆಯೇ ವ್ಯಾಪಾರಸಂಸ್ಥೆಗಳನ್ನು ವಶಪಡಿಸಿಕೊಳ್ಳುವಿಕೆ, ಖನಿಜ ಸಂಶೋಧನೆಗಳ ಬಗ್ಗೆಯೂ ಸರ್ಕಾರ ಈ ಅಧಿಕಾರವನ್ನು ಚಲಾಯಿಸಬಹುದು.

ಸರಕಾರ ವಶಪಡಿಸಿಕೊಳ್ಳುವುದು

ಹೀಗಾಗಿ ಸುಧಾರಣಾ ಮಸೂದೆಯನ್ನು ತರಲು ಸರಕಾರಕ್ಕೆ ಅನುಕೂಲವಾಗಿದೆ. ಸರಕಾರವು ಭೂಮಿಗೆ ಇಂತಿಷ್ಟೇ ಪರಿಹಾರ ನೀಡಬೇಕೆಂದು ನಿಶ್ಚೈಸಿದರೆ ಅದರ ಬಗ್ಗೆ ಭೂಮಿಯ ಒಡೆಯನು ಏನೂ ಹೇಳುವಂತಿಲ್ಲ. ಅವನು ನ್ಯಾಯಾಲಯಕ್ಕೆ ಹೋಗಿ ತನ್ನ ಆಸ್ತಿಯನ್ನು ಸರಕಾರವು ಕಡಿಮೆ ಪ್ರಮಾಣದ ಪರಿಹಾರ ಧನವನ್ನಿತ್ತು ವಶಪಡಿಸಿಕೊಂಡು, ತನ್ನ ೧೯ (೧) (ಎಫ್) ನಿಬಂಧನೆಯ ಆಸ್ತಿ ಅನುಭೋಗದ ಹಕ್ಕಿಗೆ ಧಕ್ಕೆ ತಂದಿದೆ ಎಂದು ವ್ಯಾಜ್ಯ ಹೂಡುವಂತಿಲ್ಲ. ಆದರೆ ಭೂಸುಧಾರಣಾ ಮಸೂದೆಯು ೩೧ ನೇ ನಿಬಂಧನೆಯಲ್ಲಿ ಉಲ್ಲೇಖಿಸಿರುವ 'ಸಾರ್ವಜನಿಕ ಉದ್ದೇಶ' ಎಂಬ ಪದಕ್ಕೆ ಅನ್ವಯಿಸುತ್ತದೆಯೆ ? ಎಂಬುದು ವಿವಾದಾಸ್ಪದ ವಿಷಯ.

೩೧ ನೇ ನಿಬಂಧನೆಯ ಮೊದಲ ತಿದ್ದುಪಡಿಗಳನ್ನೂ, ೩೧ ಎ ನಿಬಂಧನೆಯನ್ನು ಸಂಸತ್ತಿನಲ್ಲಿ ಮೊದಲು ಮಂಡಿಸಿದ ಶ್ರೀ ಸಿ. ರಾಜಗೋಪಾಲಾಚಾರಿಯವರೇ ಭೂಸುಧಾರಣಾ ಮಸೂದೆಯನ್ನು ಸರಕಾರವು ರೈತವಾರಿ ಭೂಮಿಯನ್ನು ವಶಪಡಿಸಿಕೊಳ್ಳುವುದೂ 'ಸಾರ್ವಜನಿಕ ಉದ್ದೇಶ'ದಲ್ಲಿ ಎಂದೂ ಸೇರಿರಲಿಲ್ಲವೆಂದು ವಾದಿಸುತ್ತಿದ್ದಾರೆ. ಕೇರಳ ಭೂಸುಧಾರಣಾ ಶಾಸನದ ರಾಜ್ಯಾಂಗಬದ್ಧತೆಯನ್ನು ಪ್ರಶ್ನಿಸಿ ವರಿಷ್ಠ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳೂ ದಾಖಲಾಗಿವೆ. ಬಹುಶಃ ಈ ಲೇಖನ ಪ್ರಸಿದ್ಧವಾಗುವ ಒಳಗೆ ಈ ಕುರಿತು ವರಿಷ್ಠ ನ್ಯಾಯಾಲಯದ ತೀರ್ಮಾನವೂ ಆಗಬಹುದು.


ಸಮಾಜವಾದಿ ಮಾದರಿ ಸಮಾಜ

ರಾಜ್ಯಾಂಗಘಟನೆಯನ್ನು ಸ್ವೀಕರಿಸಿದ ಐದು ವರ್ಷಗಳ ಬಳಿಕ ದೇಶದ ಬಹುಮತ ಪಕ್ಷವಾದ ಕಾಂಗ್ರೆಸ್ ಸಮಾಜವಾದೀ ಮಾದರಿಯ ಸಮಾಜದ ತತ್ವಪ್ರಣಾಳಿಕೆಯನ್ನು ರಚಿಸಿತೆಂಬುದನ್ನು ನಾವು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಉತ್ಪಾದನಾಮೂಲಗಳನ್ನು ಸಂಪೂರ್ಣ ರಾಷ್ಟ್ರೀಕರಣ ಮಾಡುವುದೇ ಸಮಾಜವಾದದ ಮುಖ್ಯ ತತ್ವ. ಈ ನೀತಿಯನ್ನು ಕಾರ್ಯಗತಗೊಳಿಸಲು ರಾಜ್ಯಾಂಗ ಘಟನೆಯು ಅನುಕೂಲವಿರಬೇಕಾದುದು ಅವಶ್ಯ. ಆದರೆ ನಮ್ಮ ಪ್ರಸ್ತುತ ರಾಜ್ಯಾಂಗ ಘಟನೆ, ಅದರಲ್ಲೂ ನಾಗರಿಕರಿಗೆ ಕೊಟ್ಟಿರುವ ಮೂಲ

ಭೂತ ಹಕ್ಕುಗಳು ಸಮಾಜವಾದದ ಅನುಸರಣೆಗೆ ಅಷ್ಟು ಅನುಕೂಲವಾಗಿವೆಯೆಂದು ಹೇಳಲು ಸಾಧ್ಯವಿಲ್ಲ. ಅದಕ್ಕಾಗಿಯೇ ರಶಿಯದಂತಹ ಸಮಾಜವಾದೀ ರಾಷ್ಟ್ರಗಳ ರಾಜ್ಯಾಂಗ ಘಟನೆಯಲ್ಲಿ ಈ ಮೂಲಭೂತ ನಾಗರಿಕಹಕ್ಕು ಹಾಗೂ ಸ್ವಾತಂತ್ರ್ಯಗಳ ಉಲ್ಲೇಖವೇ ಇರುವುದಿಲ್ಲ. ಅಲ್ಲಿ ಸರಕಾರದ ಮಾತೇ ಕೊನೆಯದು. ಸರಕಾರದ ಶಾಸನವನ್ನು ರಾಜ್ಯಾಂಗಘಟನೆಯೊಡನೆ ಹೋಲಿಸಿ ಅದರ ಕುರಿತು ತೀರ್ಮಾನವನ್ನೀಯುವ ಅಧಿಕಾರವು ಯಾವ ನ್ಯಾಯಾಲಯಕ್ಕೂ ಇರುವುದಿಲ್ಲ.

ಸಮಾಜವಾದದ ದಾರಿಯಲ್ಲಿ ನಮ್ಮ ಸರ್ಕಾರ ಅಂಬೆಗಾಲಿಕ್ಕಲು ಆರಂಭಿಸಿದೆಯಷ್ಟೆ. ಈಗಾಗಲೇ ಇದು ಸಾಕಷ್ಟು ರಾಜ್ಯಾಂಗ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ರಾಜ್ಯಾಂಗ ಘಟನೆಯನ್ನು ಬೇಕಾದಂತೆ ಎಷ್ಟು ಬಾರಿ ತಿದ್ದಬಹುದು? ಇದು ದೊಡ್ಡ ಪ್ರಶ್ನೆ. ಪ್ರತಿಸಲ ನ್ಯಾಯಾಲಯವು ಒಂದು ಶಾಸನವು ರಾಜ್ಯಾಂಗ ಶಾಸನಕ್ಕೆ ವ್ಯತಿರಿಕ್ತವಾಗಿದೆಯೆಂದು ತೀರ್ಮಾನಿಸಿದೊಡನೆ, ರಾಜ್ಯಾಂಗವನ್ನು ತಿದ್ದುತ್ತ ಹೋಗಬಹುದೆ? ರಾಜಕೀಯ ಸಿದ್ಧಾಂತಿಗಳಿಗೂ ರಾಜ್ಯಾಂಗಘಟನೆಗೂ ಒಮ್ಮತವಾಗುವ ಸಂಭವ ಅಷ್ಟು ಹೆಚ್ಚಿಲ್ಲ. ಇದಕ್ಕೆ ಮೊದಲೇ ಹೇಳಿದಂತೆ ನಮ್ಮ ರಾಜ್ಯಾಂಗ ಘಟನೆಯ ಉದ್ದ ಮತ್ತು ಅಸ್ಪಷ್ಟ ಶಬ್ದಜಾಲವೇ ಮುಖ್ಯ ಕಾರಣವೆನ್ನಬೇಕು.

ಅದರೊಡನೆ ಜಾತಿವಾದವನ್ನು ತಡೆಹಾಕುವ ಬಗ್ಗೆ ರಾಜ್ಯಾಂಗಘಟನೆಯ ತಿದ್ದುಪಡಿಯಾಗಬೇಕೆನ್ನುತ್ತಾರೆ. ಭಾಷಾವಾದವನ್ನು ಶಾಸನಬಾಹಿರವೆಂದು ವಿಧಿಸಬೇಕೆನ್ನುತ್ತಾರೆ. ಈ ರೀತಿಯ ನಿರ್ಬಂಧಗಳು ರಾಜ್ಯಾಂಗದ ಮೂಲತತ್ವಗಳನ್ನು ಯಾವ ರೀತಿಯಲ್ಲಿ ಚಿತ್ರಹಿಂಸೆಗೊಳಿಸಬಹುದೆಂದು ಊಹಿಸಲು ಸಾಧ್ಯವಿಲ್ಲ. ನಮ್ಮಲ್ಲಿರುವ ಎಲ್ಲ ದೋಷಗಳ ನಿವಾರಣೆಗೆ ಹೀಗೆ ರಾಜ್ಯಾಂಗಘಟನೆಯ ಮೊರೆಹೋಗುವ ಉತ್ಸುಕತೆಯು ನಮ್ಮ ಉತ್ಸಾಹಪೂರ್ಣ ರಾಜಕಾರಣಿಗಳನ್ನು ಆವರಿಸಿರುವುದು ರಾಜ್ಯಾಂಗ ಶಾಸನದ ದೃಷ್ಟಿಯಿಂದ ಸ್ವಾಗತಾರ್ಹವಲ್ಲವೆನ್ನದೆ ವಿಧಿಯಿಲ್ಲ.



ಸ್ವಂತ ಪರಿಶ್ರಮದಿಂದ ಕೋಟ್ಯಾಧಿಶನಾದವನೊಬ್ಬ ಯುರೋಪ ಪ್ರಯಾಣ ಕೈಕೊಂಡಾಗ ಅತಿ ಶ್ರೇಷ್ಠ ಹೋಟೆಲ್ಲೊಂದಕ್ಕೆ ಹೋದನು. ಅಲ್ಲೂ ಪ್ರಥಮ, ದ್ವಿತಿಯ, ತೃತೀಯ ಹೀಗೆ ಮೂರು ವರ್ಗದ ಕೋಣೆಗಳಿದ್ದವು. ಮ್ಯಾನೇಜರನು ಯಾವ ವರ್ಗದ ಕೋಣೆ ತಮಗೆ ಬೇಕೆಂದು ಕೋಟ್ಯಾಧೀಶನಿಗೆ ಕೇಳಿದಾಗ ಕೋಟ್ಯಾಧೀಶನು "ತೃತೀಯ ವರ್ಗದ್ದು ಇರಲಿ. ಅದರ ಭಾಡಿಗೆ ಎಲ್ಲಕ್ಕಿಂತ ಕಡಿಮೆಯಷ್ಟೇ" ಎಂದನು. ಮ್ಯಾನೇಜರನು ಆಶ್ಚರ್ಯಚಕಿತನಾಗಿ "ಆದರೆ ನಿಮ್ಮ ಮಗನು ಯಾವಾಗಲೂ ಪ್ರಥಮ ವರ್ಗದ ಕೋಣೆಯಲ್ಲೇ ಉಳಿಯುತ್ತಾನಲ್ಲ" ಎಂದನು. ಆಗ ಉತ್ತರ ಬಂತು: "ಹೌದು ಅವರ ತಂದೆ ಕೋಟ್ಯಾಧೀಶ. ಆದರೆ ನಾನು ಬಡವನ ಮಗ"

ನೀರಿಗೆ ನೈದಿಲೆ ಶೃಂಗಾರ...



“ನನಗೆ ಮಗು ಬೇಡ” ಎಂದವಳು ಹೇಳಿದಳು. ಅದೇ ಅವರಲ್ಲಿ ಘರ್ಷಣೆಗೆ ಕಾರಣವಾಯಿತು. ಅವಳಿಗೆ ಕಾಯಿಲೆಯಾಗಲು ಈ ಘಟನೆ ಮೂಲವಾಯಿತು. ಡಾಕ್ಟರರಿಗೂ ನಿಲುಕಲಾರದ ಕಾಯಿಲೆಯದು. ಹವೆ ಬದಲಾವಣೆಗಾಗಿ ಕಾರವಾರಕ್ಕೆ ಬಂದರು. ಅಲ್ಲಿ ನೆರೆಯ ಕೋಣೆಯಲ್ಲಿ ಉಳಿದ ಕುಟುಂಬವೊಂದರ ಮುದ್ದು ಮಗುವನ್ನು ಗಂಡ ಮೆಚ್ಚಿಕೊಂಡು ಮಾತನಾಡುವುದು ಅವಳಿಗೆ ಸಹಿಸದಾಯಿತು. ಆದರೆ ಅದೇ ಅವಳ ಕಂಣು ತೆರೆಯುವಂತೆ ಮಾಡಿತು. ಬೇಕು ಎಂದರೆ ಸಿಗಬಹುದಾದ ಸುಂದರ ಕುಸುಮವನ್ನು ತಾನು ಪಡೆಯದೇ ಬಿಟ್ಟಿದ್ದೆನಲ್ಲ ಎಂದವಳಿಗೆ ಖೇದವಾಯಿತು. ಇದೊಂದು ಸುಂದರವಾದ ಮನೋವಿಶ್ಲೇಷಣಾತ್ಮಕ ಕಥೆ.

ಲೇಖಿಕೆ :
ಶ್ರೀಮತಿ ಅನುಪಮಾ ನಿರಂಜನ
ಧಾರವಾಡ

ಮೇಜಿನ ಮೇಲೆ ನೀಲಿಬಣ್ಣದ ಟೇಬಲ್ ಕ್ಲಾತ್. ಎದುರು ಬದುರು ಎರಡು ಬಿಳಿಯ ಪಿಂಗಾಣಿ ತಟ್ಟೆಗಳು. ಎಡಬದಿಗೆ ಫೋರ್ಕ್, ಬಲಬದಿಗೆ ಚಮಚೆ. ತಟ್ಟೆಯ ಮೇಲೆ ಚಾಕು. ಮೇಜಿನ ನಡುವೆ ಟ್ರೇಯಲ್ಲಿ ಬ್ರೆಡ್ ಮತ್ತು ಬೆಣ್ಣೆ. ಉಪ್ಪು ಹಾಗೂ ಮೆಣಸಿನ ಸ್ಪ್ರಿಂಕ್-ಲರ್‌ಗಳು.

“ಬ್ರೆಕ್‌ಫಾಸ್ಟ್ ತಯಾರ ಹೈ ಸಾಬ್!”

ಅವಳು ಕುರ್ಚಿಯ ಮೇಲೆ ಕುಳಿತು ಬ್ರೆಡ್ಡಿನ ಬದಿಗಳಿಗೆ ಬೆಣ್ಣೆ ಹಚ್ಚಿ, ತಟ್ಟೆಗಳಲ್ಲಿರಿಸಿ ಕರೆದಳು :

“ಬನ್ನಿ.”

ಮುಖಕ್ಷೌರ ಮುಗಿಸಿಕೊಂಡು ಟವೆಲಿನಿಂದ ಮುಖವನ್ನೊತ್ತುತ್ತಾ ಆತ ಬಂದ.

ಅವಳು ಕೇಳಿದಳು.

“ಉಪ್ಪು ಹಾಕ್ಲಾ?”

“ಹಾಕ್ಕೋತೀನಿ.”

ಬ್ರೆಡ್ಡನ್ನು ಜಗಿಯುತ್ತಾ ಆತ ಜಗಲಿಯಿಂದ ಹೊರನೋಡುತ್ತ ಕುಳಿತ.

ಅವರಿಗೂ ಡಾಕಿಗೂ ಮಧ್ಯೆ ಕರಿದಾದ ಟಾರು ರೋಡು. ಅದರಾಚೆಗೆ ಸಮುದ್ರದ ಬ್ಯಾಕ್ ಬೇ. ನಿಂತ ನೀರು ನೀಲಿಗಪ್ಪು. ಪ್ರಶಾಂತತೆಯ ಮಂಜು. ಡಾಕಿಗೆ ಆತು ನಿಂತಿದ್ದ ಹೇರು ದೋಣಿಗಳು. ನೀರಿನಾಚೆ ಹಸಿರು ಚೆಲುವಿನಾಗರವಾದ ಎತ್ತರದ ಬೆಟ್ಟ. ಮೇಲೆ, ಇನ್ನೂ ಮೇಲೆ, ಬಿಳಿ ಕಪ್ಪು ಮೋಡಗಳ ರಂಗೋಲೆಯಿದ್ದ ಆಗಸ. ಸ್ವಚ್ಛಂದವಾಗಿ ಹಾರುತ್ತಿದ್ದ ಹಕ್ಕಿಗಳ ಹಿಂಡು.

“ಮಮ್ಮಾ!”

ಅವನು ತಲೆ ತಿರುಗಿಸಿ ನೋಡಿದ. ಪುಟ್ಟ ಬಾಲಿಕೆಯೊಬ್ಬಳು ಕಂಕುಳಲ್ಲಿ ಸಣ್ಣ ಬಿಳಿಯ ನಾಯಿಮರಿಯೊಂದನ್ನು ಹಿಡಿದುಕೊಂಡು, ನಾಲ್ಕನೆಯ ನಂಬರಿನ ರೂಮಿನೊಳಗಡೆ ಧಾವಿಸುತ್ತಿದ್ದಳು.

ನಾಲ್ಕು ದಿನಗಳ ಪರಿಚಯದ ಸಲುಗೆಯಿಂದ ಈತ ಕರೆದ:

“ಮೀನಾ, ಇಲ್ಬಾ!”

ಮಗು ನಿಂತು, ಅವನತ್ತ ಹೊರಳಿ, ಮೆಲ್ಲನೆ ಹತ್ತಿರಕ್ಕೆ ನಡೆದುಬಂದು ಮುಗುಳು ನಕ್ಕಿತು.

“ನಾಯಿಮರಿಗೆ ಬ್ರೆಡ್ ಬೇಕಾ?”

“ಕೊಡು,” ಎನ್ನುತ್ತಾ ನಾಯಿಮರಿಯನ್ನು ತನ್ನ ಮುಖದ ಹತ್ತಿರ ಹಿಡಿದುಕೊಂಡು, “ಕುರೋ ಕುರೋ ನಾಯ್ಮರೀ... ತಿನ್ನು....ತಿನ್ನೊ....” ಎಂದು ಅವನಿತ್ತ ಬ್ರೆಡ್ಡನ್ನು ಅದರ ಬಾಯಿಗೆ ತುರುಕಿದಳು.

ಕೆಂಪು ಫ್ರಾಕಿನ, ಕೆದರಿದ ಕೂದಲ ಆ ಹುಡುಗಿಯನ್ನು ಪ್ರೀತಿಯಿಂದ ಎತ್ತಿ ಅವನು ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳಹೋದ.

“ನೀನೂ ಬ್ರೆಡ್ ತಿನ್ನು.”

“ಉಹೂ.” ಎಂದಳು ಬಾಲೆ. “ನಾ ಬ್ರೆಡ್ ತಿಂದಿದೀನಿ...ಮತ್ತೆ... ಅವನ ಕಿವಿಯ ಹತ್ತಿರ ಬಾಗಿ, “ಒಂದು ರವೆ ಉಂಡೇನೂ ತಿಂದೆ” ಎನ್ನುತ್ತಾ ನಕ್ಕಳು.

“ನಂಗೆ?”

“ತಕೋ ಇಲ್ಲಿದೆ...” ಎಂದು ತನ್ನ ಹೊಟ್ಟೆ ತೋರಿಸಿ ಮಗು ಫಕಫಕನೆ ನಕ್ಕಿತು.

ಅದು ವರೆಗೂ ಸುಮ್ಮನೆ ಕುಳಿತಿದ್ದ ರಾಧೆ ಅಂದಳು :

“ಕಾಫಿ ಆರೋಗುತ್ತೆ- ಕುಡೀರಿ!”

“ಕುಡಿಯೋಣ. ದಿನಾ ಇದ್ದದ್ದು ಇದು. ಅಲ್ವಾ ಮೀನಾ? ಹೂಂ.. ಮತ್ತೆ ನೀವೆಲ್ಲಾ ಈಗ ಎಲ್ಲಿಗೋಗ್ತೀರಾ?”

“ಮರಳಲ್ಲಿ ಆಟ ಆಡೋಕೆ!”

“ನಿನ್ನ ಮಮ್ಮ, ಪಪ್ಪ, ಇಬ್ರೂ ನಿನ್ಜೊತೆ ಮರಳಾಟ ಆಡ್ತಾರಾ?”

ಕ್ರೋಧದಿಂದ ರಾಧೆಯ ಮೈ ಕಂಪಿಸಿತು.

“ಸಾಕು ನಿಮ್ಮ ಮುದ್ದು! ಕಾಫಿ ಕುಡೀರಿ!”

“ರಾಧಾ!”

“ಮುದ್ದಿಗೂ ಮಿತಿ ಇರ್ಬೇಕು!” ಅವಳು ಹಂಗಿಸಿದಳು.

“ನಮ್ಮ ಮಕ್ಳು ಇಲ್ದಿದ್ರೆ ಬೇರೇವುನ್ನಾದ್ರೂ ಪ್ರೀತಿ ಮಾಡೋಣ.”

ಅವರ ಏರಿದ ದನಿ ಕೇಳಿಸಿದ ಮಗುವಿನ ತಾಯಿ, ತಮ್ಮ ಕೋಠಡಿಯ ಬಾಗಿಲಲ್ಲಿ ನಿಂತು ಮೀನಾ ಎಂದು ಕೂಗಿದರು. ಮಗು ನಾಯಿಮರಿಯೊಂದಿಗೆ ಓಡಿ ಹೋಯಿತು.

ಆತ ಅವಳನ್ನು ದುರುದುರನೆ ನೋಡುತ್ತ, ಕಾಫಿ ಕುಡಿಯದೆಯೆ ಎದ್ದು ರೂಮಿನೊಳಗಡೆ ಹೋದ.

ಮತ್ತೆ ಅದೇ ಕಥೆ.

ನಮ್ಮ ಮಕ್ಕಳು ಇಲ್ದಿದ್ರೆ . . .

[ಮಕ್ಕಳು! ವರ್ಷಕ್ಕೊಂದೊಂದು ಮಗುವನ್ನು ಹೆರುತ್ತಿದ್ದರು ತನ್ನ ತಾಯಿ. ಊದಿಕೊಂಡ ಹೊಟ್ಟೆ ನೋಡಿದರೆ ಅಬ್ಬಾ . . . ಎಷ್ಟು ಅಸಹ್ಯವಾಗುತ್ತಿತ್ತು ತನಗೆ! ಹದಿಮೂರುಮಕ್ಕಳಲ್ಲಿ ತಾನು ಮೂರನೆಯವಳು. ಮನೆಯ ತುಂಬಾ ಕೊಳಕು; ರಂಪ; ಅಳು . . . ಕೋಳಿ ಹಿಂಡಿನ ಹಾಗೆ! ಥೂ . .]

ಅವಳು ಕಾಫಿ ಕುಡಿಯಲೆತ್ನಿಸಿದಳು. ಬಹು ಕಹಿ. ತುಸು ಸಕ್ಕರೆ ಹಾಕಿ ತಿರುವಿ ಮತ್ತೆ ಕುಡಿಯಹೋದಳು ಮತ್ತೂ ಕಹಿಯೇ.

[ತನ್ನ ಅಕ್ಕನ ಪಾಲಿಗೆ ಜೀವನ ಎಷ್ಟೊಂದು ಕಹಿಯಾಗಿತ್ತು! ನಾಲ್ಕನೆಯ ಹೆರಿಗೆಗೆಂದು ಅವಳು ತವರುಮನೆಗೆ ಬಂದಿದ್ದಾಗ . . . ಅಬ್ಬಾ—ಎಂತಹ ನೋವಪ್ಪ ಅದು! ಹಗಲು ರಾತ್ರೆ . . . ಮೂರು ದಿವಸ ಒಂದೇ ಸಮನೆ ಅವಳು ಚೀರುತ್ತಿದ್ದಳು. ಅದನ್ನು ಕೇಳಿ

ತನಗೆ ಹೆದರಿಕೆಯುಂಟಾಗಿತ್ತು. ಅಂತಹ ಪಾಡು ತನಗೆಂದೂ ಬರಬಾರದು ಎಂದು ದೇವರಲ್ಲಿ ಮೊರೆಯಿಟ್ಟಿದ್ದೆ. ಆ ಮೇಲೆ— ನೋವಿನಿಂದ ನಿರ್ಜೀವಳಾದ ಅಕ್ಕ ಕೊನೆಯುಸಿರೆಳೆದಿದ್ದಳು. ಹೊಟ್ಟೆಯೊಳಗಿನ ಮಗುವೂ ಸತ್ತಿತ್ತು . . .]

ಎದುರಿಗಿನ ಕಪ್ಪು-ಸಾಸರು ಮ್ಲಾನತೆಯ ಮುಖವಾಡ ಧರಿಸಿದ್ದುವು.

[" ಇವರಿಗೆ ಸಿಟ್ಟು ಬಂದಿರ್ಬೇಕು ! "]

ಕಾಫಿಯನ್ನು ಕುಡಿಯಲಾರದೆ ಅವಳು ಅದನ್ನು ಕೆಳಗಿಟ್ಟು, ಒಳಗಡೆ ಹೋದಳು. ಸಿಗರೇಟು ಸೇದುತ್ತಾ ಮಂಚದ ಮೇಲೆ ನತಶಿರನಾಗಿ ಕುಳಿತಿದ್ದ ಅತ, ಅವಳು ಬಂದರೂ ಆ ಕಡೆ ನೋಡಲಿಲ್ಲ.

ಮಾತನಾಡಲು ಧೈರ್ಯಸಾಲದೆ ಆಕೆ, ನಿಂತಲ್ಲೇ ನಿಂತಳು.

" ರಾಧಾ, ಆ ಮಗು ನಮ್ದಲ್ಲ. ಬೇರೆ ಯಾರೋ ಪುಣ್ಯಾತ್ಮರದ್ದು. ನಿಂಗೆ ಅದನ್ನ ಪ್ರೀತಿಸೋಕೆ ಆಗ್ದಿದ್ರೆ ಹೋಗ್ಲಿ Please ದ್ವೇಷಿಸ್ಬೇಡ ! "

ಅವನು ಸಂಕಟದಿಂದ ಎಡಗೈಯಿಂದ ಮುಖ ಮುಚ್ಚಿಕೊಂಡ. ಮುಸುಕಿದ್ದ ಮೋಡ ದಟ್ಟೈಸಿ, ಕಪ್ಪು ಕವಿಯಿತು. ಅವಳು ಹಾಸಿಗೆಯ ಮೇಲೆ ಬಿದ್ದು ಅಳತೊಡಗಿದಳು.

ರೂಮಿನ ಹೊರಗಡೆ ನೀಲಿ ಆಕಾಶ, ಕಣ್ತಣಿಸುವ ನೀರು. ಎಲ್ಲವೂ ಸೌಮ್ಯ. ಒಳಗಡೆ ಮನಸ್ಸಿನ ರಾಕೆಟನ್ನು ದೂರ ಸಿಡಿಸುವಂತಹ ಕಾಠಿನ್ಯತೆ.

[' ಆಕೆಯ ಮನಸ್ಸಿಗೆ ಬೇಸರ ಉಂಟುಮಾಡಬೇಡಿ !' ಕೊರಳೊಳಗೆ ಸ್ಟೆತಸ್ಕೋಪ್ ಹಾಕಿಕೊಂಡು, ಗಂಭೀರವದನರಾಗಿ ಮಾತಾಡುತ್ತಿದ್ದ ಡಾಕ್ಟರು.]

ಸಿಟ್ಟಿನ ಮಂಜು ಕರಗಿತು. ಕನಿಕರದ ಬಿಸಿಲು ಮೂಡಿತು.

ಅವನು ಮೇಲೆದ್ದು ಹೊರಗಿನಿಂದ ಕಾಫಿ ತಂದ. ಅವಳ ತಲೆಯನ್ನು ತನ್ನೆದೆಗೊರಗಿಸಿಕೊಂಡು ಮೃದುಲ ಧ್ವನಿಯಲ್ಲಿ ಅಂದ :

"ಅಳಬೇಡ ಏಳು. ಕಾಫಿ ಕುಡಿಯೋಣ !" ಕಾಫಿ ಇನ್ನೂ ಆರಿರಲಿಲ್ಲ.

* * *

ಪಾದಗಳು ಚಲಿಸುತ್ತಿದ್ದುವು. ಒಂದು ಜೊತೆ ಚಪ್ಪಲಿಗಳು. ಮತ್ತೊಂದು ಜೊತೆ ಬೂಟುಗಳು. ಅವು ಟಾರು ರೋಡನ್ನು ಮೆಟ್ಟಿ, ಕೆಳಗಿಳಿದುವು ಮರಳಿಗೆ. ಮರಳ ಮೇಲೆ ಪಾದಗಳ ಗುರುತು ಮೂಡಿತು. ತೆರೆಯ ನೀರು ನುಗ್ಗಿ ಬಂದು ಆ ಗುರುತನ್ನು ಅಳಿಸಿಹಾಕಿತು.

ಒದ್ದೆಯಾದ ಚಪ್ಪಲಿಗಳನ್ನು ಕಳಚುತ್ತಾ ಅವಳು ಮರಳುರಾಶಿಯ ಮೇಲೆ ಕುಳಿತಳು.

ನೀಲದಂಡೆಯ ಎದುರು ವಿಶಾಲವಾದ ಜಲರಾಶಿ, ನಸುನೀಲ ಬಣ್ಣದ ಸಮುದ್ರದ ನೀರಮೇಲೆ, ಸಂಜೆಸೂರ್ಯನ ಸೊಬಗಿನ ಕಿರಣಗಳು ಚೆಲ್ಲಿ ಬಿದ್ದಿದ್ದುವು. ಆ ರೇಖೆಯನ್ನು ದಾಟ ಮೂಡುತ್ತಿದ್ದವು ಅನಂತ ತೆರೆಗಳು. ನಗುತ್ತ ಕುಲುಕುತ್ತ ಹೊರಟ ತೆರೆಗಳು, ದಡಬಂದ ಹಾಗೆ ಭೋರ್ಗರೆದು ಅಪ್ಪಳಿಸುತ್ತಿದ್ದುವು. ಅಚ್ಚರಿಯ ರಾಶಿರಾಶಿ ಹೂಮುತ್ತು ಚೆಲ್ಲಿ ಮಂದವಾಗಿ ನಿರ್ಗಮಿಸುತ್ತಿದ್ದುವು.



ಎಡಭಾಗದಲ್ಲಿ ನೀರಮೇಲೆ ತಲೆಯೆತ್ತಿ ನಿಂತ ಗಿರಿಶೃಂಗ, ಸಮುದ್ರದೇವತೆಗೆ ಇಟ್ಟ ಕಸ್ತೂರಿ ತಿಲಕ. ಆಕಾಶದಲ್ಲಿ ಸಂಚರಿಸುತ್ತಿದ್ದ ಪುಟ್ಟ ಹಕ್ಕಿಗಳಂತಿದ್ದುವು, ಸಮುದ್ರದಲ್ಲಿ ವಿಹರಿಸುತ್ತಿದ್ದ ಸಣ್ಣ ದೋಣಿಗಳು. ದಿಗಂತದಂಚಿನಲ್ಲಿ ಬಿಳಿಯುಡುಗೆ ಧರಿಸಿ ನಿಶ್ಚಲವಾಗಿ ನಿಂತ ಹಡಗು. ಅದಕ್ಕೂ ಬೆಟ್ಟಕ್ಕೂ ಮಧ್ಯೆ ಕಣ್ಣು ಮಿಟುಕಿಸುತ್ತಿದ್ದ ದೀಪಸ್ತಂಭದ ನಡುಗಡ್ಡೆ, ಗಂಧರ್ವಲೋಕದ ಒಂದು ಚುಕ್ಕೆ.

"ಈ ಕಾರವಾರದಲ್ಲೇ ಇದ್ಬಿಡೋಣ ಅನಿಸತ್ತೆ!"

—ಎಂದು ಮೈಮರೆತು ಆಕೆ ಅಂದಳು.

"ಹಾಗಾದ್ರೆ ಈ ಊರು ನಿಂಗೆ ಬೇಜಾರಾಗ್ಲಿಲ್ಲ?"

"ಇವನ್ನೆಲ್ಲಾ ನೋಡ್ತಾ ಇದ್ರೆ ಎಂದಿಗಾದ್ರೂ ಬೇಸ್ರ ಆಗೋದುಂಟೆ?"

[ಪ್ರಕೃತಿಯೊಂದೇ ಅಲ್ಲ; ಜೀವನವೂ ಬೇಸರ ತಾರದು—ಎಂದು ಮದುವೆಯಾದಾಗ ಆಕೆ ಬಗೆದಿದ್ದಳು.

ಆದರೆ ಘರ್ಷಣೆ ಬಂದೇ ಬಂತು.

"ನಂಗೇ ಮಕ್ಕಳು ಬೇಡ!" ಎಂದಿದ್ದಳು ಅವಳು.

ಆಶ್ಚರ್ಯದಿಂದ ಅವನು ಅವಳನ್ನೇ ದಿಟ್ಟಿಸಿದ್ದ. ಮುಂದೆ ಅವನಿಗೆ ತಿಳಿಯಿತು, ಅವಳು ಹುಡುಗಾಟಕೆಗೆ ಹೇಳಿದ ಮಾತಲ್ಲ ಅದು ಎಂಬುದು. ಅವನಿಗೆ ಬೇಸರವಾಯಿತು, ಸಂಕಟವಾಯಿತು.

ಮದುವೆಯಾಗಿ ಎರಡು ವರುಷ ಕಳೆದರೂ ಅವರಿಬ್ಬರೇ. ನೆರೆಯವರ ಹಂಗಿಸುವ ಮಾತುಗಳು ನಾಟುತ್ತಿದ್ದುದು ಅವನಿಗೆ; ಅವಳಿಗಲ್ಲ.

ಬೇಸರವಾದಾಗ ಅವನು ನೆರೆಹೊರೆಯ ಮಕ್ಕಳೊಂದಿಗೆ ಆಡುತ್ತಿದ್ದ. ಅವರಿಗೆ ಚಾಕೋಲೇಟ್, ಬಿಸ್ಕತ್ತುಗಳನ್ನು ತಂದು ಕೊಡುತ್ತಿದ್ದ.

ತನ್ನ ಮೇಲಿಲ್ಲದ ಪ್ರೀತಿ, ಅವರ ಮೇಲೆ—ಎಂದವಳಿಗೆ ಮತ್ಸರವಾಗುತ್ತಿತ್ತು.

"ಹಾಗೆ ಕೊಡ್ಬೇಡಿ. ನೋಡಿದವ್ರು ಏನಾದ್ರೂ ಅಂದ್ಕೋತಾರೆ."

"ನಮ್ಮ ಮನೆಲಿ ಮಗು ಇದ್ದಿದ್ರೆ ಬೇರೇವ್ರಿಗೆ ನಾನ್ಯಾಕೆ ಕೊಡ್ತಿದ್ದೆ?"

"ಮತ್ತೆ ಅದೇ ಮಾತಾಡ್ತೀರಿ!"

ಅವನು ಸಿಟ್ಟಿನಿಂದ ಕೇಳಿದ:

"ಹೇಳು ನೀನು ಮದುವೆಯಾದ್ರೂ ಯಾಕಾದೆ?"

ಆ ಪ್ರಶ್ನೆಗೆ ಅವಳಲ್ಲಿ ಉತ್ತರವಿರಲಿಲ್ಲ.

"ನಿಮ್ಗೆ ಮಗು ಬೇಕೂಂತಾದ್ರೆ ದತ್ತಕ್ಕೆ ತೆಗೆದುಕೊಳ್ಳೋಣ."

"ಯಾರಾದ್ರೂ ನಕ್ಕಾರು ರಾಧಾ!"

ಅವಳನ್ನು ಆತ ತುಂಬಾ ಪ್ರೀತಿಸುತ್ತಿದ್ದ. ಆದರೆ ಹೂ, ಮಿಡಿಗಳಿಲ್ಲದ ಪ್ರೀತಿಯ ಕುಡಿ ಸದಾಕಾಲವೂ ಹಸುರಾಗಿಯೇ ಉಳಿಯುವುದು ಸಾಧ್ಯವೇ?

ಅವಳು ಕಡೆಯ ಮಾತನ್ನಾಡಿದ್ದಳು:

"ನಿಮ್ಗೆ ಮಕ್ಕಳು ಬೇಕೇ ಬೇಕೂಂತಾದ್ರೆ ವಿವಾಹ ವಿಚ್ಛೇದನ ಮಾಡ್ಕೊಂಡ್ಬಿಡಿ. ಬೇರೆ ಮದುವೆ ಮಾಡ್ಕೊಳ್ಳಿ!"

"ಬಾಯ್ಮುಚ್ಚು!" ಎಂದು ಸಹನೆಮೀರಿ ಅವನು, ಅವಳ ಕೆನ್ನೆಗೆ ಹೊಡೆದಿದ್ದ.

ಆ ಘಟನೆಯೇ ಕಾಹಿಲೆಗೆ ಮೂಲವಾಯಿತು.

ರಾಧೆ ರೋಗಿಯಾದಳು. ಯಾವ ಡಾಕ್ಟರೂ ಹೆಸರಿಸಲಾರದ ಕಾಹಿಲೆ. ಹಸಿವೆ ಇಲ್ಲ, ನಿದ್ರೆಯಿಲ್ಲ, ನಿಲ್ಲಲು ಏಳಲು ತ್ರಾಣ ಇಲ್ಲ. ಜೀವವಿದ್ದೂ ಇಲ್ಲದಂತೆ.

"ಹವ ಬದಲಾವಣೆಗೆ ಎಲ್ಲಾದರೂ ಸಮುದ್ರತೀರಕ್ಕೆ ಕರಕೊಂಡು ಹೋಗಿ. ಆಕೆಯ ಮನಸ್ಸಿಗೆ ಬೇಸರ ಉಂಟುಮಾಡಬೇಡಿ!"

ಅದು ಡಾಕ್ಟರ ಆದೇಶ. ಕಾರವಾರಕ್ಕೆ ಅವರಿಬ್ಬರೂ ಬಂದುದು ಅದಕ್ಕೆ ಅನುಸಾರವಾಗಿ.]

ಹಳೆಯ ನೆನಪಿನಿಂದ ಅವಳ ಮುಖ ಬಾಡಿತು.

ಅಷ್ಟರಲ್ಲಿ ಹಿಂಬದಿಯಿಂದ ಹತ್ತಿರದಲ್ಲೇ ಒಂದು ಮಗು ಕೂಗಿತು,

"ಈಗ್ಬಂದೆ ಪಪ್ಪಾ ... ಇಲ್ಲೊಂದು ಕಪ್ಪೆಚಿಪ್ಪಿದೆ!"

ತಿರುಗಿ ನೋಡಿದ ಅವರಿಬ್ಬರೂ ಕಂಡುದು, ಹಳದಿ ಬಣ್ಣದ ಹೂಗಳಿದ್ದ ಫ್ರಾಕನ್ನು ತೊಟ್ಟ ಮುದ್ದು ಮಗುವನ್ನು. ಬಾಬ್ ಮಾಡಿದ ಅವಳ ಕೂದಲನ್ನು ರಿಬ್ಬನ್ ಹಿಡಿದಿತ್ತು. ಕಾಲುಗಳಲ್ಲಿ ಕೆಂಪು ಬೂಟು, ನೀಲಿ ಕಾಲುಚೀಲ.

"ಬಾ ಮೀನಾ ... ಇಕೋ ಇಲ್ಲಿ ಬೇಕಾದಷ್ಟು ಕಪ್ಪೆಚಿಪ್ಪುಗಳಿವೆ .." ಎಂದು ಈತ ಕರೆದ.

ಬಾಲೆ ಅವರ ಹತ್ತಿರ ಬಂದು ನಿಂತಳು.

"ಆರಿಸಿಕೊಡ್ತೀನಿ" ಎಂದ ಅವನು.

ಮಗು ಮತ್ತು ಅವನು ಕಪ್ಪೆಚಿಪ್ಪುಗಳನ್ನು ಆರಿಸುವುದನ್ನು ನೋಡುತ್ತಾ ರಾಧೆ ಕುಳಿತಳು.

[ನಿಂಗೆ ಅದನ್ನು ಪ್ರೀತಿಸೋಕೆ ಆಗ್ದಿದ್ರೆ ಹೋಗ್ಲಿ, Please ದ್ವೇಷಿಸಬೇಡ.]

ಆ ಮಗುವಿನ ಮೇಲೆ ತನಗೇಕೆ ದ್ವೇಷ?

"ನೀರಿನ ಹತ್ರ ಹೋಗ್ಬೇಡ ಮೀನಾ!"—ತುಸು ದೂರದಲ್ಲೇ ಮರಳಿನ ಮೇಲೆ ಕುಳಿತಿದ್ದ ಮೀನಾಳ ತಾಯಿ ಹೇಳಿದ ಮಾತು.

"ಇಲ್ಲ, ಮಮ್ಮಾ!"

ಮಮ್ಮಾ ss

[ಮುರುಳಿಯ ನಾದವನ್ನೂ ಮೀರಿಸುವ ಸುಂದರ ದನಿ]

ಅದು ರಾಧೆಯ ಹೃದಯದಲ್ಲಿ ನಾಟಿತು.

ತುಸು ಹೊತ್ತು ಕಳೆದ ಬಳಿಕ, ಕೈತುಂಬಾ ಕಪ್ಪೆಚಿಪ್ಪು, ಶಂಖಗಳನ್ನು ಹಿಡಿದುಕೊಂಡು ದಿಗ್ವಿಜಯಿಯಂತೆ ಬಾಲೆ ಹತ್ತಿರ ಬಂದಳು. ಕರವಸ್ತ್ರದಿಂದ ಕೈ ಒರೆಸಿಕೊಳ್ಳುತ್ತಾ ಆತನೂ ಒಳಗೆ ಬಂದ.

"ಈಗ ಗುಬ್ಬಚ್ಚಿಗೂಡು ಕಟ್ಟೋಣ!"

"ಹೂಂ. ಕಾಲು ಇಡ್ತೀನಿ," ಎಂದಿತು ಮಗು.

ಅವನು ಅವಳ ಪಾದದ ಮೇಲೆ ಮರಳನ್ನು ಹಾಕಿ, ಒತ್ತತೊಡಗಿದ.

"ನೀನೂ ಹಾಕು!" ಎಂದಿತು ಮಗು ರಾಧೆಗೆ.

ಹಿಂದಿನ ಪ್ರಹಸನವನ್ನು ಮರೆ ಮಾಡಲೆಂಬಂತೆ ರಾಧೆ, ತಾನೂ ಆ ಆಟಕ್ಕೆ ಸೇರಿಕೊಂಡಳು.

ಹೊತ್ತು ಮುಳುಗಿತು.

"ಬಾ ಮಗೂ ಹೋಗೋಣ!"

ಮಗು ಫ್ರಾಕಿನಲ್ಲಿ ಕಪ್ಪೆಚಿಪ್ಪು ಕಟ್ಟಿಕೊಂಡು ತಂದೆ ತಾಯಿಯಿದ್ದಲ್ಲಿಗೆ ಧಾವಿಸಿದಳು. ಆ ಮೂವರು ಮರೆಯಾಗುವ ವರೆಗೆ ಇವರು ಅವರನ್ನೇ ನೋಡುತ್ತ ಕುಳಿತರು.

ಕತ್ತಲು ಕವಿಯಿತು. ಆವನು ತನ್ನ ಬದಿಯಲ್ಲಿ ಮರಳಮೇಲಿದ್ದ ಅವಳ ಕೈ ಹಿಡಿದುಕೊಂಡ. ಹೃದಯದ ಭಾವನೆಗಳಿಗೆ ಮಾತು ಬಾರದು.

ರಾಧೆ ಎದುರಿಗಿದ್ದ ಗುಬ್ಬಚ್ಚಿಗೂಡನ್ನು ತದೇಕಚಿತ್ತಳಾಗಿ ದಿಟ್ಟಿಸಿದಳು.

* * *

ಸ್ನಾನ ಮುಗಿಸಿ ಬಂದ ಆಕೆ, ಕೂದಲನ್ನು ಬಾಚುತ್ತಾ ಕನ್ನಡಿಯ ಮುಂದೆ ಕುಳಿತಿದ್ದಳು. ದಟ್ಟವಾದ, ನೀಳವಾದ ಕೇಶರಾಶಿ. ರಾಶಿರಾಶಿಯಾಗಿ ಬಿದ್ದಿದ್ದ ಮರಳು. ಯಾರಿಗೂ ಬೇಡವಾದ ಉಸುಕು, ಗುಬ್ಬಚ್ಚಿಗೂಡು ಕಟ್ಟಲು ಆಗುತ್ತಿತ್ತು. ಆದರೆ ಒಂದು ಪಾದವೋ, ಸಮುದ್ರದ ತೆರೆಯೋ ಬಂದಿತೆಂದರೆ ಅದು ನೆಲಸಮ.

ಗುಬ್ಬಚ್ಚಿ ಗೂಡಿನೊಳಗಡೆ ಪುಟ್ಟ ಪಾದ. ನೀಲಿ ಸಾಕ್ಸ. ದುಂಡಗಿನ ಪುಟ್ಟ ಮುಖ. [ನೀನೂ ಹಾಕು.]

ಕನ್ನಡಿಯೊಳಗೂ ಆ ದುಂಡುಮುಖ?

ರಾಧೆ ಕೂದಲನ್ನು ಸರಿಸುತ್ತಾ ತಿರುಗಿ ನೋಡಿದಳು.

ಕುರ್ಚಿಯ ಹಿಂದೆ ಮೀನಾ ಗಂಭೀರವಾಗಿ ನಿಂತಿದ್ದಳು, ಪುಟ್ಟ ಗೊಂಬೆಯೊಂದನ್ನು ಎತ್ತಿಕೊಂಡು.

"ನಂಗೂ ಜಡೆ ಬೇಕು. ಪೇಟೇಲ ಸಿಗುತ್ತಾ ಅದು?"

ರಾಧೆಗೆ ಆ ಮಾತು ಕೇಳಿ ನಗಬೇಕೆನ್ನಿಸಿತು.

ಅದರ ಬದಲು ಅವಳ ಹಣೆ ತುಸು ನಿರಿಗೆಗಟ್ಟಿತು. ರಾಧೆ ಮಾತನಾಡದೆ ಮತ್ತೆ ಕೂದಲನ್ನು ಬಾಚಲು ಮೊದಲಿಟ್ಟಳು.

ಮಗು ಅವಳ ಸೆರಗನ್ನು ಹಿಡಿದೆಳೆಯಿತು. ಮುಂದೆ ಬಂದು ಅವಳ ಎದೆಯ ಮೇಲೆ ಹರಡಿದ್ದ ಕೂದಲನ್ನು ಮುಟ್ಟಿನೋಡಿತು. ಮೃದುವಾಗಿ ನಕ್ಕಿತು.

ಮಗುವಿನ ಕೈ ತನ್ನ ಎದೆಯ ಮೇಲಾಡಿದಾಗ, ರಾಧೆಗೆ ಏನೋ ಕಸಿವಿಸಿಯಾಯಿತು. ಒಂದು ಬಗೆಯ ಆನಂದವಾಯಿತು. ಆ ಮಗುವನ್ನು ಬಿಗಿದಪ್ಪಬೇಕು ಎನಿಸಿತು. ಅದರ ತಲೆ ನೇವರಿಸಬೇಕು, ಕೆನ್ನೆಗೆ ಮುತ್ತು ಕೊಡಬೇಕು– ಎಂದು ಬಯಕೆಯಾಯಿತು.

"ಮಗೂ," ಎಂದವಳು ಬಹು ಕಷ್ಟದಿಂದ ಹೇಳುವ ಹೊತ್ತಿಗೆ, ಅವಳ ಹಣೆಯಲ್ಲಿ ಬೆವರಿನ ಹನಿಗಳು ಮೂಡಿದುವು.

ಅಷ್ಟು ಹೊತ್ತಿಗೆ, "ನಾಟಿಗರ್ಲ್ ಮೀನಾ!" ಎನ್ನುತ್ತಾ ಆತ, ಸ್ನಾನ ಮುಗಿಸಿ ಒಳಬಂದ. ಮಗು ಅವನ ಬಳಿಗೋಡಿತು.

"ನನ್ನ ಪಾಪಚ್ಚೀಗೆ ತಿಂಡಿ ಬೇಕಂತೆ."

"ಯಾವ ತಿಂಡಿ? ಬ್ರೆಡ್ಡೋ, ಬಿಸ್ಕತ್ತೋ?"

"ಬಿಸ್ಕತ್ತು," ಎಂದಿತು ಮಗು, ತುಂಟ ನಗೆ ನಗುತ್ತಾ.

ಅವನು ಕಪಾಟಿನೊಳಗಿಂದ ಬಿಸ್ಕತ್ತು ತೆಗೆದುಕೊಟ್ಟ.

"ಒಂದು ನಿಂಗೆ. ಇನ್ನೊಂದು ಪಾಪಚ್ಚೀಗೆ."

ಮಗು ಬೊಂಬೆಯ ಬಾಯಿಗೆ ಬಿಸ್ಕತ್ತನ್ನು ಇಟ್ಟ ನೆಪ ಮಾಡಿ, ತಾನು ಅದನ್ನು ಬಾಯಿಯೊಳಕ್ಕೆ ಹಾಕಿಕೊಂಡಿತು.

"ಪಾಪಚ್ಚೀಗೆ ಸಾಕಂತೆ!" ಎಂದಿತು.

ಅವನು ಮಗುವನ್ನು ಬಿಗಿದಪ್ಪಿ ಜೋರಾಗಿ ನಗತೊಡಗಿದ. ಜಡೆ ಹಾಕಿಕೊಳ್ಳುತ್ತಿದ್ದ ರಾಧೆ, ಅವರ ಕಡೆಗೆ ತಿರುಗಿ ನೋಡಿದಳು.

"ನಾಳೆ ಬಸ್ಸಲ್ಲಿ ಕೂತ್ಕೊಂಡು ಪೀಪ್ ಅಂತ ಊರಿಗ್ಹೋಗ್ತೀವಿ!"

ಮಗು ನಾಳೆಯೇ ಊರಿಗೆ ಹೋಗುತ್ತದೆಂದು ಅವನಿಗೆ ನಿರಾಸೆಯಾಯಿತು. ಬೇಸರವಾಯಿತು.

ರಾಧೆಯ ಮುಖಕನ್ನಡಿಯಲ್ಲೂ ವ್ಯಥೆ ತುಂಬಿತು.

"ನೀನಿಲ್ಲೇ ಇರು ಮಗೂ," ಎಂದವನು ಬೇಡಿಕೊಂಡ.

"ಊರಲ್ಲಿ ನನ್ನ ಬೇರೆ ಪಾಪಚ್ಚಿಗ್ಳು ಇವೆ. ನನ್ಹತ್ರ ಕುದ್ರೆ ಇದೆ, ಮೊಲ ಇದೆ, ಆನೆ ಇದೆ.... ಎಲ್ಲಾ ಇದೆ. ನಾನು ಹೋಗ್ಬೇಕು."

[ತಮ್ಮ ಮನೆಯಲ್ಲಿ ಗೊಂಬೆಗಳಿರಲಿಲ್ಲ. 'ಒಂದಿಷ್ಟು ಗೊಂಬೆಗಳನ್ನು ಕೊಂಡುಕೊಳ್ಳಬೇಕು' ಎಂದವಳು ಯೋಚಿಸಿದಳು.]

"ಇವತ್ತೂ ನಂಗೆ ಕಪ್ಪೆಚಿಪ್ಪು ತಂದ್ಕೊಡ್ತೀಯಾ?" ಎಂದು ಕೇಳಿತು ಮಗು.

"ಅವತ್ತು ಆರ್ಸಿಕೊಟ್ಟದ್ದು ಎಲ್ಹೋಯ್ತು?"

"ಹುಳ ಇತ್ತು. ಮಮ್ಮ ಎಸೆದ್ಬಿಡು ಅಂದ್ಲು."

ಕತ್ತಲಿನಲ್ಲಿ ಅವನಿಗೆ ಒಂದು ಬೆಳಕಿನಗೆರೆ ಕಾಣಿಸಿತು.

"ನನ್ಜೊತೆ ಬೀಚಿಗೆ ಬಾ ನಿಂಗೆ ಬೇಕಾದಷ್ಟು ಆರ್ಸಿಕೊಡ್ತೀನಿ."

"ಈಗಲೇನಾ?"

"ಹೂಂ. ನಿಮ್ಮಮ್ಮನ್ನ ಕೇಳ್ಬಾ. ಬೇಗ್ಬರ್ಬೇಕು ತಿಳೀತಾ?"

ಮಗು ಗೊಂಬೆಯನ್ನೆತ್ತಿಕೊಂಡು ಓಡಿತು. ರಾಧೆ ಅರಳಿದ ಕಣ್ಣುಗಳಿಂದ ಮಗುವಿನ ಪುಟ್ಟ ಪಾದಗಳನ್ನೇ ನೋಡಿದಳು.

"ರೆಡಿ ಆಗು," ಎಂದು ಅವನು ಹೇಳದೆಯೇ ಆಕೆ ಸೀರೆ ಬದಲಾಯಿಸಿ ಹೊರಡಲು ಸನ್ನದ್ಧಳಾದಳು. ಅವನೂ ಬೂಟು ಏರಿಸಿದ.

ಆದರೆ ಮಗುವಿನ ಸುಳಿವೇ ಇಲ್ಲ.

ಅವರಿಬ್ಬರೂ ಬಾಗಿಲ ಬಳಿ ಬಂದರು. ಅಲ್ಲಿ ನಿಂತರು. ಹೋಟೆಲಿನ ನಾಲ್ಕನೆಯ ನಂಬರಿನ ಕೊಠಡಿಯ ಬಾಗಿಲು ಮುಚ್ಚಿತ್ತು. ಒಳಗೆ ಮಗು ಅಳುವ ಶಬ್ದ, ತಾಯಿ ಗದರಿಸುವ ಸದ್ದು.

ಅವನು ಅವಳ ಮುಖ ನೋಡಿದ. ಕೆಳಗುರುಳಲು ಸಿದ್ಧವಾಗಿದ್ದ ಎರಡು ದೊಡ್ಡ ಕಂಬನಿಗಳು, ಅವನ ಕಣ್ಣುಗಳನ್ನೂ ಅಶ್ರುಪೂರಿತವಾಗಿ ಮಾಡಿದುವು.

* * *

ಅಂದು ಸಂಜೆ ಬೀಚಿನಲ್ಲಿ ಅದೆಷ್ಟೋ ಮಕ್ಕಳಿದ್ದುವು. ಅವರಿಬ್ಬರ ಕಣ್ಣುಗಳು ಮಾತ್ರ ಬೇರೊಂದು ಮಗುವಿಗಾಗಿ ಹುಡುಕಿದುವು.

ರಾಧೆ ಬಣ್ಣಬಣ್ಣದ ಕಪ್ಪೆಚಿಪ್ಪುಗಳನ್ನು ಆರಿಸಿದಳು. ಹಸಿರು, ಬಿಳಿ, ಕಪ್ಪು, ಕೆಂಪು, ಹಳದಿ, ನೇರಳೆ. ಅದರಲ್ಲಿ ಎಷ್ಟೊಂದು ವೈವಿಧ್ಯ! ಆಕಾರದಲ್ಲಿ, ರೂಪದಲ್ಲಿ, ಚೆಲುವಿನಲ್ಲಿ ಒಂದರಂತೆ ಇನ್ನೊಂದಿಲ್ಲ. ಕಪ್ಪೆಚಿಪ್ಪುಗಳನ್ನು ಕರವಸ್ತ್ರಗಳಲ್ಲಿ ಕಟ್ಟುತ್ತಾ ಆಕೆ ಸಾಗರದೆಡೆಗೆ ದಿಟ್ಟಿಸಿದಳು. ಆ ನೀರಿನ ಲಾವಣ್ಯ ಅವಳಲ್ಲಿ ಸುಪ್ತಬಯಕೆಯನ್ನು ಕೆದರಿತು. ಎದೆಯೊಳಗಿನ ಶೂನ್ಯ ಹೆಡೆಯಾಡಿಸಿ ನಕ್ಕಿತು.

ಅವರೆದುರಿಗೆ ಇಬ್ಬರು ಮಕ್ಕಳು ಗುಬ್ಬಚ್ಚಿಗೂಡು ಕಟ್ಟುತ್ತಿದ್ದರು. ಎಳೆತನದ ಉತ್ಸಾಹ ಆನಂದ, ಸಂಸಾರದ ಚೈತನ್ಯದ ಉಸಿರು ಅದಿಲ್ಲದ ಬಾಳು ಬತ್ತಿದ ಹೊಳೆ.

ಮರುದಿನ ಬೆಳಗ್ಗೆ ಅವರಿನ್ನೂ ಕಾಫಿ ಕುಡಿಯುವ ಮೊದಲೇ ನಾಲ್ಕನೆಯ ರೂಮಿನವರು ಹೊರಡುವ ಸಿದ್ಧತೆ ನಡೆಸಿದ್ದರು.

ಟ್ಯಾಕ್ಸಿ ಬಂತು. ಸೂಟ್‌ಕೇಸ್, ಬೆಡ್ಡಿಂಗ್ ಕಾರಿನ ಹಿಂಬದಿಯಲ್ಲಿ ಕುಳಿತುವು.

ಎರಡು ಕಂಕುಳುಗಳಲ್ಲಿ ಎರಡು ಗೊಂಬೆಗಳನ್ನಿರಿಸಿಕೊಂಡಿದ್ದ ಬಾಲೆ, ತಾಯಿಯ ಜೊತೆ ರೂಮಿನಿಂದ ಹೊರಬಿತ್ತು.

ಅವರಿಬ್ಬರೂ ಬಾಗಿಲಿಗೆ ಬಂದು ನಿಂತರು, ಮಗು ತಮ್ಮತ್ತ ಬರಬಹುದು ಎಂಬ ಆಶೆಯಿಂದ. ಆದರೆ ಕಾರು ಹತ್ತುವ ಸಂಭ್ರಮದಲ್ಲಿದ್ದ ಮಗು ತಾಯಿಯನ್ನು ಬಿಟ್ಟು ಮುಂದೆ ಓಡಿತ್ತು.

ರಾಧೆ ಅವಸರದಿಂದ ಒಳಗೆಹೋಗಿ ಕರವಸ್ತ್ರದಲ್ಲಿ ಸುತ್ತಿದ ಕಪ್ಪೆಚಿಪ್ಪುಗಳನ್ನು ತಂದು ಗಂಡನ ಕೈಲಿರಿಸಿದಳು. ಅವನು ಓಡುತ್ತಾ ಟ್ಯಾಕ್ಸಿಯ ಬಳಿ ಹೋಗಿ, ಅದನ್ನು ಮಗುವಿನ ಕೈಗಿತ್ತ.

ಕೃತಜ್ಞತೆಯ ತುಂಬು ನಗು ಪ್ರಪಂಚದ ಎಲ್ಲ ಸಿರಿಗಳಿಗಿಂತ ಹೆಚ್ಚಿನದಾದ ಆ ಹಸುಳೆ ನಗೆ ಅವನಿಗೆ ದೊರೆತ ಅಮೂಲ್ಯ ಉಡುಗೊರೆ.

ಟ್ಯಾಕ್ಸಿ ಚಲಿಸಿದ ಹಾಗೆ ಮಗು ಉಚ್ಚಧ್ವನಿಯಲ್ಲಿ ನುಡಿಯಿತು.

"ಬೈ.... ಬೈ..."

ಅದರ ಪುಟ್ಟ ಕೈ ಹೊರಗೆ ಅಲುಗಾಡಿತು.

ರಾಧೆ ತನ್ನರಿವಿಲ್ಲದಂತೆಯೇ ಕೈಗಳನ್ನೆತ್ತಿ ವಿದಾಯ ಹೇಳಿದಳು.

* * *

ಯಾವ ಪ್ರಕೃತಿ ಸೌಂದರ್ಯ ಅವಳ ಮನವನ್ನು ಪುನೀತಗೊಳಿಸಿತ್ತೋ ಅದು ಈಗ ಬರಡಾಗಿ ಕಂಡಿತು.

ಚೆಲುವು ಜೀವತಳೆದು, ನವಿಲಿನ ಹಾಗೆ ಗರಿಗೆದರಿ ನರ್ತಿಸಿ ಮಾಯವಾಗಿತ್ತು.

ಬೇಕು ಎಂದರೆ ಸಿಗಬಹುದಾದ ಸುಂದರ ಕುಸುಮವನ್ನು ತಾನು ಪಡೆಯದೆಬಿಟ್ಟೆನಲ್ಲ— ಎಂದು ಅವಳಿಗೆ ಖೇದವಾಯಿತು.

ಸುತ್ತಲಿನ ವಾತಾವರಣದಲ್ಲಿ ಕವಿದುಬಂದ ಶೂನ್ಯದ ಹೊಗೆಯನ್ನು ಬದಿಗೆ ಸರಿಸಲೆತ್ನಿಸುತ್ತ, ಗಂಡನ ಕಡೆ ನೋಡಿ ಅವಳೆಂದಳು.

"ನಾನೀಗ ಸರಿಯಾಗಿದೀನಿ. ಊರಿಗೆ ಹೋಗೋಣ!"




ಮಫತ್‌ಲಾಲ್
ಗ್ರುಪ್‌ನವರ
ಶುಭಾಶಯಗಳು
MAFATLAL GROUP



ಪಾಶ್ಚಾತ್ಯರ ದೃಷ್ಟಿಯಲ್ಲಿ ಮಹಾಭಾರತ

ಪ್ರೊ. ಕೆ. ಟಿ. ಪಾಂಡುರಂಗಿ, ಎಂ. ಎ.
ಕೋಲಾರ

ಪಾಶ್ಚಾತ್ಯರು ಮಹಾಭಾರತವು ಮೂರು ಹಂತಗಳಲ್ಲಿ ಬೆಳವಣಿಗೆ ಹೊಂದಿದೆ; ಮೊದಲಲ್ಲಿ ಈ ಕಾವ್ಯವು ಕೌರವರ ಶೌರ್ಯ ಸದ್ಗುಣಗಳನ್ನು ಹೊಗಳುವ ಕಾವ್ಯವಾಗಿದ್ದು ನಂತರ ಪಾಂಡವರನ್ನು ಹೊಗಳುವ ಕಾವ್ಯವಾಯಿತು, ಮೊದಲು ಲೌಕಿಕ ಕಾವ್ಯವಾಗಿದ್ದು ನಂತರ ಧರ್ಮ, ನೀತಿ, ಮತೀಯ ವಿಷಯಗಳು ಸೇರಿ ಧಾರ್ಮಿಕ ಕಾವ್ಯವಾಗಿದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಈ ಅಭಿಪ್ರಾಯ ಭಾರತೀಯ ಸಾಹಿತ್ಯ ಸಂಸ್ಕೃತಿಗಳ ಪರಂಪರೆಯನ್ನರಿಯದೆ ರೂಪಗೊಂಡುದಾಗಿದ್ದು ಅದರಲ್ಲಿ ತಥ್ಯವಿಲ್ಲವೆಂಬ ಅಂಶವನ್ನು ಲೇಖಕರು ಇಲ್ಲಿ ವಿಶದಪಡಿಸಿರುವರು.

ಮಹಾಭಾರತದಲ್ಲಿಯ ನಲದಮಯಂತಿ ಮತ್ತು ಇನ್ನು ಕೆಲವು ಉಪಾಖ್ಯಾನಗಳನ್ನು ಲ್ಯಾಟಿನ್ ಭಾಷೆಗೆ ಭಾಷಾಂತರಿಸಿ ಬೋಪ (Bopp) ನೆಂಬ ಜರ್ಮನ್ ವಿದ್ವಾಂಸನು ಕ್ರಿ. ಶ. ೧೮೨೯ ರಲ್ಲಿ ಪಾಶ್ಚಾತ್ಯರಿಗೆ ಮಹಾಭಾರತದ ಪರಿಚಯ ಮೊದಲಿಗೆ ಮಾಡಿಕೊಟ್ಟನು.

ಚಾರ್ಲಸ್ ವಿಲ್ಕಿನ್ಸ್‌ನು (Charles wilkins) ಭಗವದ್ಗೀತೆ ಮತ್ತು ಶಾಕುಂತಲ ನಾಟಕಗಳನ್ನು ಕ್ರಿ. ಶ. ೧೭೮೫ ಮತ್ತು ೧೭೮೯ರಲ್ಲಿ ಈ ಮೊದಲೇ ಇಂಗ್ಲಿಷಿಗೆ ಭಾಷಾಂತರಿಸಿದ್ದನು. ಗೀತೆ ಮತ್ತು ಶಕುಂತಲೆಯ ಕಥೆಗಳು ಮಹಾಭಾರತದಲ್ಲಿ ಬಂದಿರುವದರಿಂದ ಈ ಗ್ರಂಥದ ವಿಷಯದಲ್ಲಿ ಪಾಶ್ಚಾತ್ಯರ ಆಸ್ಥೆಯು ಈಗಾಗಲೇ ಕೆರಳಿದ್ದಿತು.

ಬೋಪನು ತಾನು ಪ್ರಕಟಿಸಿದ ಉಪಾಖ್ಯಾನಗಳ ಮುನ್ನುಡಿಯಲ್ಲಿ 'ಮಹಾಭಾರತದ ಎಲ್ಲ ಭಾಗಗಳೂ ಒಂದೇ ಕಾಲದಲ್ಲಿ ಮತ್ತು ಒಬ್ಬರಿಂದಲೇ ಬರೆದವುಗಳಲ್ಲ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ಈ ವಿಷಯದಲ್ಲಿ ಪಾಶ್ಚಾತ್ಯರು ನಂತರ ಸುಮಾರು ನೂರುವರುಷ ಕಾಲ ನಡಿಸಿಕೊಂಡು ಬಂದ ವಾದವಿವಾದಕ್ಕೆ ಚಾಲನೆಯನ್ನು ಕೊಟ್ಟನು.

'ಮಹಾಭಾರತವನ್ನು ವ್ಯಾಸರು ನಾರದ, ದೇವಲ, ಶುಕ ಮತ್ತು ವೈಶಂಪಾಯನರಿಗೆ ಹೇಳಿ ಅದನ್ನು ಮನುಷ್ಯಲೋಕದಲ್ಲಿ ಪ್ರಚಾರ ಮಾಡಲು ವೈಶಂಪಾಯನರಿಗೆ ಹೇಳಿದರು. ವೈಶಂಪಾಯನರು ಜನಮೇಜಯನ ಸರ್ಪ ಸತ್ರಕಾಲದಲ್ಲಿ ಜನಮೇಜಯನಿಗೂ ಅಲ್ಲಿದ್ದ ಸೌತಿಯೇ ಮೊದಲಾದವರಿಗೂ ಹೇಳಿದನು. ಸೌತಿಯು ಶೌನಕನಿಗೆ ಅವನ ದ್ವಾದಶವರ್ಷದ ಯಜ್ಞದ ಕಾಲದಲ್ಲಿ ಹೇಳಿದನು.' ಹೀಗೆಂದು ಆದಿಪರ್ವದ ಮೊದಲನೆಯ ಅಧ್ಯಾಯದಲ್ಲಿ ಬರುತ್ತದೆ. ಈ ಉಲ್ಲೇಖವನ್ನು ತೆಗೆದುಕೊಂಡು ಸಿ. ಲಾಸೆನ್ (C. Lassen) ಎಂಬ ವಿದ್ವಾಂಸನು ವೈಶಂಪಾಯನನು ಜನಮೇಜಯನಿಗೆ ಹೇಳಿದ್ದು ಭಾರತವೆಂದೂ ಸೌತಿಯು ಶೌನಕನಿಗೆ ಹೇಳಿದ್ದು ಮಹಾಭಾರತವೆಂದೂ ಊಹಿಸುತ್ತಾನೆ. ಶೌನಕನ ಶಿಷ್ಯನಾದ ಆಶ್ವಲಾಯನು ತನ್ನ ಗೃಹ್ಯಸೂತ್ರಗಳಲ್ಲಿ ಭಾರತ ಮತ್ತು ಮಹಾಭಾರತ ಎಂಬ ಎರಡು ಹೆಸರುಗಳನ್ನು ಒಂದೇ ಸೂತ್ರದಲ್ಲಿ ಉಲ್ಲೇಖಿಸುತ್ತಾನೆ. ಇದು ಈ ಗ್ರಂಥಕ್ಕೆ ಮೂಲ ರೂಪ ಮತ್ತು ವಿಸ್ತೃತರೂಪಗಳಿರುವದನ್ನು ಸೂಚಿಸುತ್ತದೆ ಎಂದು ಲಾಸೆನ್ ತನ್ನ ಊಹೆಯನ್ನು ಸಮರ್ಥಿಸಿದನು. ಈ ದ್ವಿತೀಯ ವಿಸ್ತೃತರೂಪಕ್ಕೆ ಕಾಲಾಂತರದಲ್ಲಿ ಇನ್ನೂ ಅನೇಕ ವಿಷಯಗಳ ಸೇರ್ಪಡೆಯಾಗಿ ಈಗ ನಮ್ಮೆದುರಿಗಿರುವ ತೃತೀಯ ವಿಸ್ತೃತರೂಪವಾಯಿತೆಂದು ಅವನು ಊಹಿಸುತ್ತಾನೆ. ಎರಡನೆಯ ವಿಸ್ತೃತರೂಪವು ಕ್ರಿ. ಪೂ. ೪೦೦ ಸುಮಾರಿಗೆ ಆಗಿರಬೇಕು ಮತ್ತು ಬೌದ್ಧ ಪೂರ್ವಕಾಲೀನ ಭಾರತದ ಸಂಸ್ಕೃತಿಯ ಚಿತ್ರಣವಾಗಿರಬೇಕು. ಇದರ ನಂತರ ಬಂದ ಮೂರನೆಯ ವಿಸ್ತೃತರೂಪದಲ್ಲಿ ಸೇರಿಕೊಂಡ ವಿಷಯಗಳಲ್ಲಿ ಕೃಷ್ಣನಿಗೆ ಸಂಬಂಧಪಟ್ಟವು ಮುಖ್ಯವಾದವುಗಳು. ಪಾಂಡವರಿಗೆ ಹೆಚ್ಚಿನ ಪ್ರಾಮುಖ್ಯ ಬಂದುದೂ ಈ ಮೂರನೆಯ ಆವೃತ್ತಿಯಲ್ಲಿಯೇ. ಅನೇಕ ವೈಷ್ಣವ ಆಖ್ಯಾನಗಳೂ ಭಾಗವತಧರ್ಮದ ವಿಷಯಗಳೂ ಈ ಅವಧಿಯಲ್ಲಿಯೇ ಸೇರಿದವು. ಈ ಎಲ್ಲ ವಿಷಯಗಳನ್ನು ತೆಗೆದುಹಾಕಿದರೆ ನಮಗೆ ಮೂಲಭಾರತವು ಉಪಲಬ್ಧವಾಗುವದು.

'ಮಹಾಭಾರತವು ಅನೇಕ ಕರ್ತೃಕ ಮತ್ತು ಭಿನ್ನ ಕಾಲೀನ' ಎಂಬ ಬೋಪನು ಬಿತ್ತಿದ ಬೀಜಕ್ಕೆ ಲಾಸೆನ್‌ನು 'ಅದು ಮೂರು ಆವೃತ್ತಿಯುಳ್ಳದ್ದು ಮತ್ತು ಮೂಲದಲ್ಲಿ ಧರ್ಮಾತೀತವೂ ಕೌರವ ಪ್ರಧಾನವೂ ಆಗಿದ್ದು ನಂತರ ಕೃಷ್ಣ ಮತ್ತು ಪಾಂಡವರ ಪ್ರಾಧಾನ್ಯವುಳ್ಳದ್ದೂ ಧರ್ಮಬೋಧಕವೂ ಆಯಿತು' ಎಂಬ ಮೊಳಕೆಯನ್ನು ಹುಟ್ಟಿಸಿದನು.

ಚಿಕ್ಕ ಮೂಲದಿಂದ ಮಹಾಭಾರತ

ಇದೇ ಅವಧಿಯಲ್ಲಿ ವೆಬರ (Weber) ನೆಂಬ ವಿದ್ವಾಂಸನು —

ಅಷ್ಟೌ ಶ್ಲೋಕಸಹಸ್ರಾಣಿ ಅಷ್ಟೌ ಶ್ಲೋಕ-
ಶತಾನಿ ಚ-
'ಅಹಂ ವೇದ್ಮಿ ಶುಕೋ ವೇತ್ತಿ ಸಂಜಯೋ
ವೇತ್ತಿ ವಾ ನ ವಾ

ಎಂಬ ಆದಿಪರ್ವದಲ್ಲಿ ಬರುವ ಶ್ಲೋಕವನ್ನು ಆಧಾರವಾಗಿಟ್ಟುಕೊಂಡು ಮೂಲಭಾರತವು ಎಂಟು ಸಾವಿರದ ಎಂಟನೂರಾ ಎಂಬತ್ತು ಶ್ಲೋಕಗಳುಳ್ಳದ್ದು ಮಾತ್ರವಾಗಿದ್ದಿತೆಂದೂ ಮುಂದೆ ಕ್ರಮೇಣ ಬೆಳೆದು ಒಂದು ಲಕ್ಷ ಶ್ಲೋಕಗಳ ಮಹಾಭಾರತವಾಯಿತೆಂದೂ ಊಹಿಸಿದನು. ಈಗಿದ್ದ ಮಹಾಭಾರತದಲ್ಲಿ ಯುದ್ಧಕ್ಕೆ ಸಂಬಂಧಿಸಿದ ಕಥಾಭಾಗವೇ ಮೂಲಭಾರತವಾಗಿರಬೇಕು. ಆದಿ, ವನ, ಶಾಂತಿ ಅನುಶಾಸನ ಮೊದಲಾದ ಪರ್ವಗಳಲ್ಲಿಯ ನೈತಿಕ ಧಾರ್ಮಿಕ ವಿಷಯಗಳೂ ನೂರಾರು ಉಪಾಖ್ಯಾನಗಳೂ ನಂತರ ಸೇರಿಸಲ್ಪಟ್ಟಿರಬೇಕು ಎಂದು ಇವನು ಅಭಿಪ್ರಾಯ

ಪಟ್ಟನು. ಕುರು ವಂಶದವರನ್ನು ಕುರಿತು ಇದ್ದ ಪ್ರಾಚೀನ ವೀರಗಾಥೆಗಳೇ ಮಹಾಭಾರತಕ್ಕೆ ಉಗಮಸ್ಥಾನಗಳು. ಇವು ಋಗ್ವೇದದಲ್ಲಿರುವ 'ನಾರಾಶಂಸೀ' ಗಾಥೆಗಳ ಮಾದರಿಯವು. ಅನೇಕ ಶತಮಾನಗಳಿಂದ ಜನತೆಯ ಬಾಯಿಯಲ್ಲಿದ್ದ ಇವನ್ನು ಯಾವನೋ ಕವಿಯು ಒಂದು ವೀರಕಾವ್ಯವನ್ನಾಗಿ ಪರಿವರ್ತಿಸಿದನು. ಮುಂದೆ ಅನೇಕರ ಕೈಚಳಕದಿಂದ ಅತಿ ವಿಸ್ತೃತವಾದ ಮಹಾಭಾರತವಾಯಿತು ಎಂಬುದು ಇವನ ವಾದಸರಣಿಯು.

ಪ್ರಸಿದ್ಧ ಸಂಶೋಧಕನಾದ ಮಾಕ್ಸಮ್ಯೂಲರನು (Maxmuller) 'ವೇದಗಳಲ್ಲಿ ಕೌರವ-ಪಾಂಡವರ ಯುದ್ಧದ ಉಲ್ಲೇಖವೇ ಬರುವುದಿಲ್ಲ. ಕುರು ಮತ್ತು ಭರತರ ಹೆಸರುಗಳು ವೈದಿಕ ವಾಙ್ಮಯದಲ್ಲಿಯೂ ಪಾಣಿನಿಯ ಸೂತ್ರಗಳಲ್ಲಿಯೂ ಬರುತ್ತವೆ. ಆದರೆ ಪಾಂಡುರಾಜನ ಅಥವಾ ಪಾಂಡವರ ಹೆಸರುಗಳು ಬರುವದಿಲ್ಲ. ಪಾಂಡುರಾಜನು ಇಬ್ಬರು ಹೆಂಡಂದಿರನ್ನು ಮದುವೆಯಾಗುವದು, ಕಿರಿಯ ಹೆಂಡತಿ ಸತಿ ಹೋಗುವದು, ಐದು ಜನ ಪಾಂಡವರು ಒಬ್ಬಳನ್ನೇ ಮದುವೆಯಾಗುವದು ಇವೆಲ್ಲ ವೈದಿಕ ಧರ್ಮಕ್ಕೆ ವಿರುದ್ಧವಾದ ಸಂಪ್ರದಾಯಗಳು. ಆದುದರಿಂದ ಮೂಲದಲ್ಲಿ ಕೌರವರ ವೀರಕಥೆಯಾಗಿದ್ದ ಹಾಗೂ ಲೌಕಿಕ ಕಾವ್ಯವಾಗಿದ್ದ ಈ ಗ್ರಂಥವನ್ನು ವೈದಿಕ ಸಂಪ್ರದಾಯದವರು ಪರಿಷ್ಕರಿಸಿದ್ದಾರೆ. ಈ ಪರಿಷ್ಕರಣದಲ್ಲಿಯೂ ಪಾಂಡವರ ಮೂಲ ಕಥೆಯಲ್ಲಿಯ ಐದು ಜನರು ಒಬ್ಬಳನ್ನು ಮದುವೆ ಮಾಡಿಕೊಳ್ಳುವದೇ ಮೊದಲಾದ ಅವೈದಿಕ ಅಂಶಗಳನ್ನು ತೆಗೆದು ಹಾಕುವದು ಸಾಧ್ಯವಾಗಿಲ್ಲ. ಆದರೂ ಗ್ರಂಥದ ಮೂಲಸ್ವರೂಪವೇ ಬದಲಾಗುವಷ್ಟು ಇದರಲ್ಲಿ ಧರ್ಮ, ನೀತಿ, ಆಚಾರಗಳ ವಿಷಯಗಳನ್ನು ಸೇರಿಸಿ ಇದನ್ನು ವಿಸ್ತೃತವಾದ ಧಾರ್ಮಿಕ ಕಾವ್ಯವನ್ನಾಗಿ ಮಾಡಲಾಗಿದೆ' ಎಂದು ತನ್ನ ವಿಚಾರಗಳನ್ನು ವ್ಯಕ್ತಪಡಿಸಿದ್ದಾನೆ.

ಮಹಾಭಾರತದಲ್ಲಿಯ ಮೂಲ ಭಾಗವನ್ನು ಹುಡುಕುವ ಸುದೀರ್ಘ ಪ್ರಯತ್ನವನ್ನು ಕೈಕೊಂಡವರಲ್ಲಿ ಸೋರೆನ್‌ಸೆನ್ (Sorensen) ಎಂಬ ಸ್ಕ್ಯಾಂಡಿನೇವಿಯದ ಪಂಡಿತನು ಪ್ರಮುಖನು. ಇವನು ಮಹಾಭಾರತವು ಮೂಲತಃ ಏಕಕರ್ತೃಕವೆಂಬುದನ್ನು ಒಪ್ಪಿಕೊಂಡನು. ಏಕಕರ್ತೃಕವಾದುದರಿಂದಲೇ ಇದರಲ್ಲಿ ಪರಸ್ಪರ ವಿರೋಧ, ಪುನರುಕ್ತಿ ಮತ್ತು ಅಪ್ರಸ್ತುತ ವಿಷಯಗಳಿರಬಾರದೆಂದು ವಾದಿಸಿದನು. ತನ್ನ ಈ ವಿಚಾರಕ್ಕನುಸರಿಸಿ ಇಡೀ ಮಹಾಭಾರತವನ್ನು ಸೂಕ್ಷ್ಮವಾಗಿ ಓದಿ ಪರಸ್ಪರ ವಿರುದ್ಧ, ಪುನರುಕ್ತ ಮತ್ತು ಅಪ್ರಸ್ತುತವೆಂದು ತನಗನಿಸಿದ ಶ್ಲೋಕಗಳನ್ನೆಲ್ಲ ತೆಗೆದು ೭೭೦೦೦ ಶ್ಲೋಕಗಳ ಮೂಲ ಮಹಾಭಾರತವನ್ನು ಸಿದ್ಧಪಡಿಸಿದನು.

> ಇದಂ ಶತಸಹಸ್ರಂತು ಲೋಕಾನಾಂ ಪುಣ್ಯ
> ಕರ್ಮಣಾಮ್ ।
> ಉಪಾಖ್ಯಾನೈಃ ಸಹ ಜ್ಞೇಯಮಾದ್ಯಂ
> ಭಾರತಮುತ್ತಮಮ್
> ಚತುರ್ವಿಂಶತಿಸಾಹಸ್ರೀಮ್ ಚಕ್ರೇ
> ಭಾರತಮುತ್ತಮಮ್
> ಉಪಾಖ್ಯಾನೈರ್ವಿನಾ ತಾವತ್ ಭಾರತಂ
> ಪ್ರೋಚ್ಯತೇ ಬುಧೈಃ ॥

ಉಪಾಖ್ಯಾನಗಳನ್ನು ಬಿಟ್ಟರೆ ಮಹಾಭಾರತದ ವಿಸ್ತಾರ ಇಪ್ಪತ್ತುನಾಲ್ಕು ಸಾವಿರ ಶ್ಲೋಕಗಳು. ಅವುಗಳನ್ನೂ ಹಿಡಿದರೆ ಅದರ ವಿಸ್ತಾರ ಒಂದು ಲಕ್ಷ ಶ್ಲೋಕಗಳು ಎಂದು ಆದಿಪರ್ವದಲ್ಲಿ ಹೇಳಿದೆ. ಆದುದರಿಂದ ಸೋರೆನ್‌ಸೇನನ ಇಪ್ಪತ್ತೇಳು ಸಾವಿರದ ಮೂಲಭಾರತವು ಸ್ವಲ್ಪ ಹೆಚ್ಚು ಕಡಿಮೆ ಈ ಉಲ್ಲೇಖದ ಅಂಕಿಗೆ ಸಮೀಪವಾದಂತಾಯಿತು. ಆದರೆ ಈ ಸಾರದಲ್ಲಿಯೂ ಅರ್ವಾಚೀನವಾದ ಹೆಸರುಗಳೂ ವಿಷಯಗಳೂ ಉಳಿದುಕೊಂಡದ್ದು ಅವನ ದೃಷ್ಟಿಗೆ ಬಿದ್ದಿತು. ಆದುದರಿಂದ ಅದನ್ನು ಮತ್ತೊಮ್ಮೆ ಪರಿಶೀಲಿಸಿ ಎಂಟು ಸಾವಿರ ಶ್ಲೋಕಗಳ ಸಾರವನ್ನು ತೆಗೆದನು. ಈ ಅಂಕಿಯು 'ಅಷ್ಟ ಶ್ಲೋಕ ಸಹಸ್ರಾಣಿ' ಎಂಬ ಇನ್ನೊಂದು ಉಕ್ತಿಗೆ ಸಮೀಪವಾಯಿತು. ಆದರೆ ಇದನ್ನು ಓದಿ ನೋಡಿದಾಗ ಇದು ಮೂಲಭಾರತವಾಗುವದರ ಬದಲಾಗಿ ತಲೆಯೂ ಇಲ್ಲದ ಕಾಲೂ ಇಲ್ಲದ ಒಂದು ಬಿಡಿ ಪದ್ಯಗಳ ಸಂಗ್ರಹವಾಯಿತು. ಸೋರೆನ್‌ಸೇನನು ಯಾವ ಅಂತರ್ದೃಷ್ಟಿಯಿಂದ ಈ ಮೂಲವನ್ನು ಹುಡುಕಿತೆಗೆದನೋ ಎಂಬುದೇ ಒಂದು ಸಮಸ್ಯೆಯಾಗಿದೆ ಎಂದು ಈ ಮೂಲದ ವಿಷಯದಲ್ಲಿ ಆಗಸ್ಟ ಬಾರ್ತನು (Auguste Barth) ಉದ್ಗಾರ ತೆಗೆದಿರುವನು.

ಸೋರೆನ್‌ಸೇನ್‌ನಂತೆಯೇ ಲ್ಯುಡವಿಗನೆಂಬ ಪ್ರಸಿದ್ಧ ವೈದಿಕವಿದ್ವಾಂಸನು ಪ್ರಕ್ಷಿಪ್ತ ಭಾಗಗಳನ್ನು ಹುಡುಕಿ ತೆಗೆಯಲು ಕೆಲವು ಸೂತ್ರಗಳನ್ನು ಕಲ್ಪಿಸಿದನು. 'ಹಿಂದುಮುಂದಿನ ಕಥಾಭಾಗಗಳಿಗೆ ಸರಿಯಾದ ಹೊಂದಿಕೆಯಿಲ್ಲದಿರುವ ಭಾಗಗಳು, ಮೂಲಕಥೆಗೆ ಪೋಷಕವಲ್ಲದಿರುವ ಭಾಗಗಳು, ಕವಿಯು ಕಷ್ಟಪಟ್ಟು ರಚಿಸಿದ ಶ್ಲೋಕಗಳು, ಒಮ್ಮೆ ಹೇಳಿದ್ದನ್ನೇ ವಿಸ್ತರಿಸಿ ಮತ್ತು ವ್ಯತ್ಯಾಸ ಮಾಡಿ ಹೇಳಿದ ಭಾಗಗಳು, ಛಂದಸ್ಸು ಭಾಷೆ ಶೈಲಿಗಳು ಒಮ್ಮೆಲೇ ಬದಲಾದ ಭಾಗಗಳು, ದೂರಾನ್ವಿತವಾದ ಉದ್ದೇಶಗಳಿರುವ ಭಾಗಗಳು ಇವೆಲ್ಲವನ್ನೂ ಪ್ರಕ್ಷಿಪ್ತವೆಂದು ಪರಿಗಣಿಸಬೇಕೆಂದು, ಅವನು ಹೇಳಿದನು. ಆದರೆ ಸುದೈವದಿಂದ ಈ ಸೂತ್ರಗಳನ್ನು ಹಚ್ಚಿ ಅವನೂ ಒಂದು ಸಾರವನ್ನು ಸಿದ್ಧಪಡಿಸಲಿಲ್ಲ. ಈ ಸೂತ್ರಗಳು ನೋಡಲು ಎಷ್ಟು ಸಮಂಜಸ ಮತ್ತು ವಿಚಾರಪೂರ್ಣವಾಗಿ ಕಾಣುವವೋ 'ಅನ್ವಯಿಸಲು' ಅಷ್ಟೇ ಕಠಿಣವಾಗಿರುವವು. ಇಂಥ ಆಯ್ಕೆಯಲ್ಲಿ ವೈಯಕ್ತಿಕ ಅಭಿರುಚಿ ಮತ್ತು ಅಭಿಪ್ರಾಯಗಳಿಂದ ದೂರವಾಗಿರುವದು ಕಷ್ಟ. ಮೂಲಲೇಖಕನ ಅಸ್ತಿತ್ವ, ವಿಚಾರಧಾರೆ, ಭಾಷೆ, ಶೈಲಿ, ಎಲ್ಲ ವಾದಗ್ರಸ್ತವಾಗಿರುವ ಪ್ರಾಗೈತಿಹಾಸಿಕ ಕೃತಿಗಳಿಗೆ ಇಂಥ ಸೂತ್ರಗಳನ್ನು ಅನ್ವಯಿಸುವದು ಅಶಕ್ಯವಾದ ವಿಷಯ.

ಸಾಂಕೇತಿಕ ಪಾತ್ರಗಳು

ಈ ಸೂತ್ರಗಳನ್ನು ರೂಪಿಸುವದಲ್ಲದೆ ಲ್ಯುಡ್‌ವಿಗ್‌ನು (Ludwig) ಇನ್ನೊಂದು ವಿಚಾರವನ್ನು ಮುಂದಿಟ್ಟನು. 'ಮಹಾಭಾರತವು ಋತುಪರಿವರ್ತನೆಗಳ ಒಂದು ರೂಪಕ. ಇಲ್ಲಿ ಬರುವ ಪಾತ್ರಗಳು ಸಾಂಕೇತಿಕವಾದವುಗಳು. ಅವು ನಿಜವಾದ ವ್ಯಕ್ತಿಗಳಲ್ಲ. ದ್ರೌಪದಿಯು ಪೃಥ್ವಿಯು. ಧೃತರಾಷ್ಟ್ರನು ಪ್ರಕಾಶಹೀನನಾದ ಸೂರ್ಯನು. ದ್ರೌಪದಿಯ ವಸ್ತ್ರಾಪಹರಣವು ಪೃಥ್ವಿಯ

ಮೇಲೆ ಸಸ್ಯಗಳಿಲ್ಲದ ಕಾಲವನ್ನು ಸೂಚಿಸುವದು.' ಎಂಬಿತ್ಯಾದಿಯಾಗಿ ಅವನು ಒಂದು ಸಾಂಕೇತಿಕಚಿತ್ರವನ್ನೇ ಕಲ್ಪಿಸಿರುವನು. ವೇದಗಳಿಗೂ ಮಹಾಭಾರತಕ್ಕೂ ಸೂಕ್ಷ್ಮವಾದ ಸಂಬಂಧವನ್ನು ತೋರಿಸಿರುವನು.

ಮಹಾಭಾರತದ ಮೂಲಭಾಗವನ್ನೂ ಬೆಳವಣಿಗೆಯನ್ನೂ ಹುಡುಕುವದರ ಪ್ರಯತ್ನದ ಜೊತೆಗೆ ಅದರಲ್ಲಿಯ ಕಥೆ ಮತ್ತು ವಿಷಯಗಳ ಬಗ್ಗೆಯೂ ಮೊಕ್ಸಮುಲರ್, ವೆಬರ್, ಲ್ಯುಡ್‌ವಿಗ್ ಮೊದಲಾದವರು ಕೆಲವು ವಿಚಾರಗಳನ್ನು ವ್ಯಕ್ತಪಡಿಸಿದ್ದರು. ಆದರೆ ಅಡಾಲ್ಪ ಹಾಜಮನ್ (Holtzman) ಎಂಬ ಪಂಡಿತನು ತಿರುವುಮುರುವು ಸಿದ್ಧಾಂತ (Invertion Theory) ಎಂದು ಪ್ರಸಿದ್ಧವಾದ ವಿಚಿತ್ರವಾದ ಸಿದ್ಧಾಂತವೊಂದನ್ನು ಮಂಡಿಸಿದನು. ಈ ಸಿದ್ಧಾಂತದಂತೆ ಮಹಾಭಾರತವು ಮೂಲತಃ ಕೌರವರ ಪರಾಕ್ರಮವನ್ನೂ ಸದ್ಗುಣಗಳನ್ನೂ ಹೊಗಳುವ ವೀರಗಾಥೆಗಳ ರೂಪದಲ್ಲಿತ್ತು. ಅದನ್ನು ನಂತರ ಯಾವನೋ ಒಬ್ಬ ಬುದ್ಧಿಶಾಲಿಯಾದ ಕವಿಯು ಯುದ್ಧದ ಹಿಂಸಾ-ಚಾರಗಳನ್ನೆಲ್ಲ ನಿಂದಿಸಿ ಒಬ್ಬ ಬೌದ್ಧ ರಾಜನ ಬಹುಶಃ — ಅಶೋಕನಿರಬಹುದು — ವರ್ಣನೆಯ ಕಾವ್ಯವನ್ನಾಗಿ ಮಾಡಿದನು. ಮುಂದೆ ಹಿಂದೂ ಧರ್ಮವು ಪ್ರಬಲವಾದ ಮೇಲೆ ಇದು ಮತ್ತೆ ಹಿಂದೂಕಾವ್ಯವಾಯಿತು. ಆದರೆ ಈ ಪರಿವರ್ತನೆಯಲ್ಲಿ ಕೌರವರನ್ನು ದುರ್ಜನರೆಂದು ತೋರಿಸಿ ಪಾಂಡವರನ್ನು ಮೇಲಕ್ಕೇರಿಸಲಾಯಿತು. ಕೃಷ್ಣನು ದೇವತೆಯಾದನು. ಮಹಾಭಾರತವನ್ನು ಸೂಕ್ಷ್ಮವಾಗಿ ನೋಡಿದರೆ ಮುಖ್ಯ ಭಾಗಗಳಾದ ಯುದ್ಧಕ್ಕೆ ಸಂಬಂಧಿಸಿದ ಪರ್ವಗಳಲ್ಲಿ ಕೌರವರೇ ನ್ಯಾಯ ಮತ್ತು ಧರ್ಮಪರರಾಗಿರುವದು ಕಂಡುಬರುವದು. ಕೃಷ್ಣನ ಪ್ರಚೋದನೆಯಿಂದ ಧರ್ಮರಾಜನು ಸುಳ್ಳು ಹೇಳುವನು, ಭೀಮ, ಅರ್ಜುನರು ಯುದ್ಧದ ನಿಯಮಗಳನ್ನು ಮುರಿಯುವರು. ಆದುದರಿಂದ ಮಹಾಭಾರತದಲ್ಲಿ ಕೌರವರ ಪ್ರಶಂಸೆ ಬರುವ ಭಾಗಗಳು ಪ್ರಾಚೀನ. ಪಾಂಡವರ ಪ್ರಶಂಸೆ ಬರುವವು ನಂತರದವು. ಧರ್ಮ, ನೀತಿ ಇತ್ಯಾದಿ ಹಿಂದೂ ಧರ್ಮದ ಹೊಗಳಿಕೆ ಬರುವ ಭಾಗಗಳಂತೂ ತೀರ ಇತ್ತೀಚಿನವು. ಈ ಭಾಗಗಳ ಕಾಲವು ಕ್ರಿ. ಶ. ೧೨ ರ ವರೆಗೂ ತಡವಾಗಿದ್ದಿರಬಹುದು.

ಹಾಜಮನ್ನನ ವಿಚಾರಗಳು ವಿಪರ್ಯಸ್ತ ವಿಮರ್ಶೆ ಮತ್ತು ಸ್ವಕಪೋಲಕಲ್ಪನೆಗಳಿಂದ ತುಂಬಿದ್ದರಿಂದ ಇನ್ನಿತರ ಪಾಶ್ಚಾತ್ಯ ವಿದ್ವಾಂಸರು ಅವುಗಳನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳದಿದ್ದರೂ ಅದರಲ್ಲಿ ಕೆಲವಂಶಗಳನ್ನು ಒಂದಿಲ್ಲೊಂದು ರೀತಿಯಿಂದ ಮತ್ತೆ ಮಂಡಿಸುತ್ತಲೇ ಬಂದರು.

ಸಂಸ್ಕೃತ ಸಾಹಿತ್ಯದ ಇತಿಹಾಸವನ್ನು ಬರೆದ ಮೆಕ್ಡನಲ್‌ನು (Macdonell) ಮಹಾಭಾರತದ ಕಥೆಗೆ ಅಕ್ಕ ಪಕ್ಕದ ರಾಜದವರಾದ ಕುರು—ಪಾಂಚಾಲರ ಯುದ್ಧದ ಗಾಥೆಗಳೇ ಉಗಮವಾಗಿವೆ. ಇವರಿಬ್ಬರ ಹೆಸರುಗಳೂ ಯಜುರ್ವೇದದಲ್ಲಿ ಬರುತ್ತವೆ. ಕಾಠಕದಲ್ಲಿ ಧೃತರಾಷ್ಟ್ರ ವೈಚಿತ್ರ್ಯವೀರ್ಯನ ಹೆಸರು ಬರುತ್ತದೆ. ಈ ಕುರು-ಪಾಂಚಾಲರ ವೀರಗಾಥೆಗಳನ್ನು ಸಂಕಲಿಸಿ ಯಾವನೋ ಒಬ್ಬ ಕವಿಯು ಒಂದು ವೀರ ಕಾವ್ಯವನ್ನು ರಚಿಸಿದನು. ಅದರಲ್ಲಿ ಶೂರರೂ ಸದ್ಗುಣಿಗಳೂ ಆದ ಕೌರವರನ್ನು ಪಾಂಡವರು ಮೋಸದಿಂದ ಕೊಂದ ಕಥೆ ವರ್ಣಿತವಾಗಿತ್ತು. ಈ ಕಾಲದಲ್ಲಿ ಬ್ರಹ್ಮನು ಮುಖ್ಯ ದೇವತೆಯಾಗಿದ್ದನು. ಮುಂದೆ ವಿಷ್ಣುವಿಗೆ ಪ್ರಾಧಾನ್ಯ ಬಂದಮೇಲೆ ಕೃಷ್ಣನು ವಿಷ್ಣುವಿನ ಅವತಾರನೆಂದು ಪರಿಗಣಿಸಲ್ಪಟ್ಟನು. ಮತ್ತು ಪಾಂಡವರು ವಿಷ್ಣುಭಕ್ತರೆಂದು ವರ್ಣಿಸಲ್ಪಟ್ಟರು. ಪಾಂಡವರು ಯುದ್ಧಕಾಲದಲ್ಲಿ ಮಾಡಿದ ಅನ್ಯಾಯವನ್ನು ಮುಚ್ಚಲು ಕೌರವರು ಪಾಂಡವರಿಗೆ ಹಿಂಸೆ ಕೊಟ್ಟರೆಂಬ ಕಥೆಗಳು ಕಲ್ಪಿತವಾದವು. ಪಾಂಡವರಿಗೆ ಅನುಕೂಲವಾಗುವಂತೆ ಮಹಾಭಾರತವು ಪರಿವರ್ತಿತವಾಯಿತು. ಧರ್ಮ, ನೀತಿ ಮತ್ತು ಮತೀಯ ವಿಷಯಗಳು ಸೇರಿಸಲ್ಪಟ್ಟವು' ಎಂದು ಬರೆದಿದ್ದು ಹಾಜಮನ್‌ನ

ವಿಚಾರಗಳಲ್ಲಿಯು ಮಹಾಭಾರತವು ಬೌದ್ಧ ಕಾವ್ಯವಾದ ವಿಚಾರವೊಂದನ್ನು ಬಿಟ್ಟು ಉಳಿದವುಗಳನ್ನು ಸಮರ್ಥಿಸಿರುವದು ಸ್ಪಷ್ಟವಾಗಿ ಕಂಡುಬರುವದು.

ಶ್ರೋಡರ್ (Schroeder) ಎಂಬ ವಿಮರ್ಶಕನೂ ಹಾಜಮನ್‌ನ ವಿಚಾರಗಳನ್ನು ಮೇಲಿನಂತೆ ತುಸು ತಿದ್ದಿ ಒಪ್ಪಿಕೊಂಡಿರುವನು.

ಇವರ ನಂತರ ಮಹಾಭಾರತದ ಬಗ್ಗೆ ಅನೇಕ ಗ್ರಂಥಗಳನ್ನು ಬರೆದವನು ಅಮೇರಿಕೆಯ ವಿದ್ವಾಂಸನಾದ ಹಾಪ್‌ಕಿನ್ಸ್‌ನು (Hopkinn) ಇವನು ಮಾಡಿದ ಅತ್ಯಂತ ಮಹತ್ವದ ಶೋಧವೆಂದರೆ ಮಹಾಭಾರತವೆಂಬ ಗ್ರಂಥವೇ ಇಲ್ಲವೆಂಬುದು. ' A text That is no text ' ಎಂಬುದು ಇವನ ವಾದ. ನಮ್ಮೆದುರಿಗಿರುವ ಮಹಾಭಾರತವೆಂಬ ಹೆಸರಿನ ಶ್ಲೋಕಗಳ ರಾಶಿಯು ಅಸಂಗತಿ, ವ್ಯಾಘಾತ, ಮೂಢನಂಬಿಕೆಗಳು, ಕಾಲವಿಪರ್ಯಾಸ, ಪ್ರಕ್ಷೇಪ ಮತ್ತು ಬಾಹ್ಯ ಬೆಳವಣಿಗೆಯಿಂದ ಕೂಡಿದ ಅವ್ಯವಸ್ಥಿತವಾದ ಶ್ಲೋಕಗಳರಾಶಿಯು ಎಂದು ಅವನು ನಿಷ್ಠುರವಾಗಿ ಹೇಳುತ್ತಾನೆ. ಈ ಗ್ರಂಥದ ಪ್ರಾಚೀನತೆ ಮತ್ತು ಏಕರೂಪತೆಯನ್ನು ಅವನು ಕುಚೇಷ್ಟೆಯಿಂದ ಹೀಗೆ ವರ್ಣಿಸುತ್ತಾನೆ—'ಚತುಃಷಷ್ಠಿ ಕಲೆಗಳು, ಹದಿನೆಂಟು ಪುರಾಣಗಳು, ತ್ರಿಮೂರ್ತಿಪೂಜೆ, ಅರ್ವಾಚೀನ ಮತಗಳು, ಇತ್ತೀಚಿನ ಧರ್ಮಶಾಸ್ತ್ರಗಳು, ಅರ್ವಾಚೀನ ಛಂದಸ್ಸಿನ ಪ್ರಯೋಗ, ವೇದಗಳನ್ನು ಬರೆದಿಡುವದು, ಗ್ರೀಕ ಶಬ್ದಗಳ ಬಳಕೆ ಇವೆಲ್ಲ ಗೊತ್ತಿದ್ದ ಕಾಲದಲ್ಲಿ ಈ ಗ್ರಂಥದ ಅನೇಕ ಹಸ್ತಪ್ರತಿಗಳನ್ನು ಬರೆದಿಟ್ಟದ್ದ ಕಾಲದಲ್ಲಿ ಗ್ರಂಥವು ಇನ್ನೂ (ಪುರಾಣಿಕ ಮನೆಯಲ್ಲಿ ನಿರ್ಮಾಣವಾಗುತ್ತಲೇ ಇತ್ತು' ಎಂದು ಅವನು ಹಾಸ್ಯಮಾಡುತ್ತಾನೆ. ಆದರೂ ಅವನು) ಗ್ರಂಥವೇ ಅಲ್ಲದ ಈ ಗ್ರಂಥವನ್ನು ಅಧ್ಯಯನ ಮಾಡಿ ಕ್ರಿ. ಪೂ. ೪೦೦ ರಲ್ಲಿ ಇದು ಕೌರವರ ಗುಣಗಾನ ಮಾಡುವ ವೀರಗಾಥೆಗಳ ರೂಪದಲ್ಲಿತ್ತು ಕ್ರಿ. ಪೂ. ೨೦೦ ರಲ್ಲಿ ಕೃಷ್ಣ ಮತ್ತು ಪಾಂಡವರ ಕಥೆಯನ್ನು ಸೇರಿಸಿ ವೀರಕಾವ್ಯವಾಯಿತು. ಕ್ರಿ.ಶ. ೨೦೦ ಸುಮಾರಿಗೆ ಕೃಷ್ಣನು ದೇವರಾದನು. ಪಾಂಡವರ ಕೈಮೇಲಾಯಿತು. ಧರ್ಮ ನೀತಿ ಭಾಗಗಳು ಸೇರಿಕೊಂಡವು. ಕ್ರಿ. ಶ. ೪೦೦ ಹೊತ್ತಿಗೆ ಆದಿ, ಶಾಂತಿ ಮತ್ತು ಅನುಶಾಸನ ಪರ್ವಗಳು ಮತ್ತಷ್ಟು ಬೆಳೆದವು. ಅಂದಿನಿಂದ ಇಂದಿನ ವರೆಗೆ ಈ ಗ್ರಂಥವು ಬೆಳೆಯುತ್ತಲೇ ಬಂದಿದೆಯೆಂಬ ಒಂದು ಕೋಷ್ಟಕವನ್ನು ಸಿದ ಪಡಿಸಿದನು.

ಐತಿಹಾಸಿಕ ಘಟನೆ

ಭಾರತೀಯ ಸಾಹಿತ್ಯ ಚರಿತ್ರಕಾರರಾದ ವಿಂಟರನಿಟ್ಸರು (Winternitz) ತಮಗಿಂತ ಮೊದಲಿನ ಎಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಅವುಗಳಲ್ಲಿ ಅತಿ ವಿಪರ್ಯಸ್ತವಾದ ಹಾಗೂ ಕಲ್ಪನಾಪ್ರಚುರವಾದ ವಿಚಾರಗಳನ್ನೆಲ್ಲ ಬದಿಗಿರಿಸಿ, ಮಹಾಭಾರತಕ್ಕೆ ಮೂಲವಾದ ಕೌರವ-ಪಾಂಡವರ ಯುದ್ಧವು ಐತಿಹಾಸಿಕಘಟನೆ, ವೀರಗಾಥಾರೂಪದಲ್ಲಿದ್ದ ಅದನ್ನು ಧರ್ಮ, ನೀತಿ, ಸಂಪ್ರದಾಯದ ಉಪದೇಶ, ದೇವತೆಗಳ ಕಥೆ ಇತ್ಯಾದಿಯನ್ನು ಬೋಧಿಸಲು ಉಪಯೋಗಿಸಿಕೊಳ್ಳಲಾಗಿದೆ. ಕಾಲಕ್ರಮದಲ್ಲಿ ಶಿವ, ವಿಷ್ಣು ಮುಂತಾದವರ ಮಹಿಮೆಗಳೂವೈರಾಗ್ಯೋಪದೇಶವೂಮತೀಯ-ವಿಷಯಗಳೂ ಸೇರಿಕೊಂಡಿವೆ. ಇಷ್ಟೊಂದು ವಿಸ್ತೃತವಾದ ಮತ್ತು ಅನೇಕ ಕಡೆಗೆ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳನ್ನೊಳಗೊಂಡ ಈ ಗ್ರಂಥವು ಈಗಿದ್ದ ರೂಪದಲ್ಲಿಯೇ ಏಕಕರ್ತೃಕವೆನ್ನುವದಾದರೆ ಆ ಕರ್ತನು ಏಕಕಾಲದಲ್ಲಿಯೆ ಅತಿ ಮೂರ್ಖನೂ ಅತಿ ಬುದ್ಧಿವಂತನೂ ಆಗಿರುವನೆಂದು ಹೇಳಬೇಕಾಗುತ್ತದೆ. ಅದುದರಿಂದ ಈ ಗ್ರಂಥವು ಶತಮಾನಗಳವರೆಗೆ ಬೆಳೆದುಬಂದ ಅನೇಕರ ಕೃತಿಯಾಗಿದೆ. ಇದೊಂದು ಸಾಹಿತ್ಯದೈತ್ಯ (Literary monstar) ಎಂದು ಹೇಳುತ್ತಾರೆ.

ಪಾಶ್ಚಾತ್ಯರ ಈ ವಿಚಾರಸರಣಿಯು ಒಂದು ನೂರು ವರ್ಷಗಳಕಾಲ ಬಲವತ್ತರವಾಗಿ ಪ್ರತಿಪಾದಿತವಾದ್ದರಿಂದ ಅವರ ಆಶ್ರಯದಲ್ಲಿಯೇ ಶಿಕ್ಷಣಪಡೆದ ಭಾರತೀಯರೂ ಕೆಲವರು ಇದೇ

ತರಹದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಬಂಗಾಲದ ಶ್ರೀ ರಮೇಶಚಂದ್ರ ದತ್ತರು, 'ಕಾಲಕ್ರಮದಲ್ಲಿ ಮಹಾಭಾರತವು ತುಂಬ ಜನಪ್ರಿಯವಾಯಿತು. ಪ್ರತಿಯೊಂದು ತಲೆಮಾರಿನ ಕವಿಗಳೂ ತಮ್ಮದನ್ನು ಸೇರಿಸಿದರು. ಪ್ರತಿಯೊಬ್ಬ ಮತಸ್ಥಾಪಕನೂ ತನ್ನ ವಿಚಾರಗಳನ್ನು ಬೆರೆಸಿದನು. ಸ್ಮೃತಿ ಮತ್ತು ಧರ್ಮಶಾಸ್ತ್ರಗಳ ಭಾಗಗಳು ಇದರಲ್ಲಿ ಸೇರಿಸಲ್ಪಟ್ಟವು. ವರ್ಣ ಮತ್ತು ಆಶ್ರಮಗಳ ಆಚಾರ ನಿಯಮಗಳು ಸೇರ್ಪಡೆಯಾದವು. ಜನಜನಿತವಾದ ಕಥೆ, ಉಪಾಖ್ಯಾನ, ದಂತಕಥೆಗಳು, ಸಂಪ್ರದಾಯಗಳು ಇದರಲ್ಲಿ ಕೂಡಿಕೊಂಡವು. ಕೃಷ್ಣಪಂಥವು ಇದರಲ್ಲಿ ಪ್ರಧಾನವಿಷಯವಾಯಿತು. ಈ ಎಲ್ಲ ಬೆಳವಣಿಗೆಯಿಂದ ಮೂಲ ಕಾವ್ಯದ ಸ್ವರೂಪವೇ ಗುರುತಿಸಲಾರದಷ್ಟು ಬದಲಾಯಿತು." ಎಂದು ಹಳಹಳಿಸಿ ನೀತಿ, ಧರ್ಮ, ಉಪಾಖ್ಯಾನ ಮೊದಲಾದ ಭಾಗಗಳನ್ನೆಲ್ಲ ಬಿಟ್ಟು ಕೌರವ-ಪಾಂಡವರ ಕಥೆಯ ಇಂಗ್ಲೀಷ್ ಅನುವಾದವನ್ನು ಸಿದ್ಧಪಡಿಸಿದರು.

ಮಹಾರಾಷ್ಟ್ರದ ಸಿ. ವ್ಹಿ. ವೈದ್ಯರು ಮಹಾಭಾರತವು ಮೂರು ಆವೃತ್ತಿಯುಳ್ಳದ್ದಾಗಿದೆಯೆಂದು ಪ್ರತಿಪಾದಿಸಿದ್ದಾರೆ.

ಮನ್ವಾದಿ ಭಾರತಂ ಕೇಚಿತ್ ಆಸ್ತಿಕಾದಿ
ತಥಾಪರೇ।
ತಥೋಪರಿಚರಾದನ್ಯೇ ವಿಪ್ರಾಃ
ಸಮ್ಯಗಧೀಯತೇ॥

ಮನ್ವಾದಿ, ಆಸ್ತಿಕಾದಿ ಮತ್ತು ಉಪರಿಚರಾದಿ ಎಂದು ಮಹಾಭಾರತದಲ್ಲಿಯೇ ಅದರ ಮೂರು ಆವೃತಿಗಳಿರುವದನ್ನು ಹೇಳಿದೆ. ಮನ್ವಾದಿ ಎಂದರೆ 'ನಾರಾಯಣಂ ನಮಸ್ಕೃತ್ಯ' ಎಂದು ಮೊದಲಿನಿಂದಲೂ ಆರಂಭವಾದುದು. ಆಸ್ತಿಕಾದಿ ಎಂದರೆ ಆಸ್ತಿಕ ಪರ್ವದಿಂದ ಆರಂಭವಾದದ್ದು. ಉಪರಿಚರಾದಿ ಎಂದರೆ ಅಂಶಾವತರಣ ಪರ್ವದಲ್ಲಿಯ ಉಪರಿಚರನ ಕಥೆಯಿಂದ ಆರಂಭವಾದದ್ದು ಎಂದು ಗ್ರಂಥದ ಮೂರು ಹಂತದ ಬೆಳವಣಿಗೆಗೆ ಗ್ರಂಥದಲ್ಲಿಯೇ ಪ್ರಮಾಣವಿದೆಯೆಂದು ತೋರಿಸುತ್ತಾರೆ. ಅಲ್ಲದೆ 'ಅಷ್ಟಶ್ಲೋಕ ಸಹಸ್ರಾಣಿ' ಎಂಬ ವಚನವೂ 'ಚತುರ್ವಿಂಶತಿ ಸಾಹಸ್ರೀಮ್ ಉಪಾಖ್ಯಾನೈಃ ವಿನಾತಾವತ್' ಎಂಬ ವಚನವೂ 'ಏಕಂ ಶತಸಹಸ್ರಂತು' ಎಂಬ ವಚನವೂ ಎಂಟು ಸಾವಿರದ ಎಂಟು ನೂರು, ಇಪ್ಪತ್ತುನಾಲ್ಕು ಸಾವಿರ ಮತ್ತು ಒಂದು ಲಕ್ಷ ಎಂದು ಮೂರು ವಿಧವಾಗಿ ಮಹಾಭಾರತದ ಗಾತ್ರದ ಸಂಖ್ಯೆಯನ್ನು ಕೊಡುತ್ತನೆ. ಆದುದರಿಂದ ಗ್ರಂಥದ ಮೂರು ಹಂತದ ಬೆಳವಣಿಗೆಗೆ ಆಂತರಿಕ ಪ್ರಮಾಣವಿದೆಯೆಂದು ವಾದಿಸಿ ಈ ಮೂರು ಹಂತಗಳಲ್ಲಿಯೂ ಗ್ರಂಥದಲ್ಲಿ ಯಾವ ಯಾವ ವಿಷಯಗಳಿದ್ದವೆಂಬುದನ್ನು ಅವರು ವಿವರವಾಗಿ ಚರ್ಚಿಸುತ್ತಾರೆ.

ಪಾಶ್ಚಾತ್ಯ ವಿದ್ವಾಂಸರೆಲ್ಲ ಮಹಾಭಾರತದಲ್ಲಿಯ ಧಾರ್ಮಿಕ ಮತ್ತು ನೈತಿಕ ಭಾಗಗಳು ಮೂಲ ಕಥೆಗೆ ಸಂಬಂಧವಿಲ್ಲದವು. ನಂತರ ಸೇರಿಸಿದವು ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಆದರೆ ಜೊಸೆಫ್ ದಾಲ್ಹಮನ್ (Dalhman) ಎಂಬ ಜರ್ಮನ್ ವಿದ್ವಾಂಸನು ಮಾತ್ರ ಕಾವ್ಯಭಾಗ ಮತ್ತು ಧರ್ಮಭಾಗಗಳ ಸಮನ್ವಯವನ್ನು ಎತ್ತಿಹಿಡಿಯುತ್ತಾನೆ. 'ಮಹಾಭಾರತದಲ್ಲಿಯ ನೀತಿ ಮತ್ತು ಧರ್ಮದ ಭಾಗಗಳು ಅದರ ಮೌಲಿಕವಾದ ಮತ್ತು ಆವಶ್ಯಕವಾದ ಅಂಗಗಳು. ಕೌರವ ಪಾಂಡವರ ಕಥೆಯನ್ನು ಸತ್ಯ, ನೀತಿ, ಧರ್ಮ ಮುಂತಾದವುಗಳನ್ನು ವಿವರಿಸುವ ದೃಷ್ಟಿಯಿಂದಲೇ ಕವಿಯು ಅಳವಡಿಸಿಕೊಂಡಿದ್ದಾನೆ. ಕೇವಲ ಕಥೆಯನ್ನು ಹೇಳುವದು ಅವನ ಉದ್ದೇಶವಲ್ಲ. ಆದುದರಿಂದ ಕಥೆಯು ಮಾತ್ರವಿರುವ ಮೂಲ ಕಾವ್ಯವನ್ನು ಹುಡುಕುವ ಪ್ರಯತ್ನವೇ ಅಸಂಗತ' ಎಂದು ಅವನು ಅಭಿಪ್ರಾಯಪಡುವನು. ಅನೇಕ ಉಪಕಥೆಗಳೂ ಘಟನೆಗಳೂ ಕವಿಕಲ್ಪಿತವಿದ್ದು ಸತ ಮತ್ತು ಧರ್ಮಗಳನ್ನು ವಿವರಿಸುವ ತನ್ನ ಉದ್ದೇಶ ಸಾಧನೆಗಾಗಿ ಕವಿಯು ಅವುಗಳನ್ನು ಸೃಷ್ಟಿಸಿರುವನು ಎಂದು ಅವನು ಹೇಳುವನು. ದಾಲ್ಹಮನ್‌ನ ಈ ವಿಚಾರಗಳನ್ನು ಅವನ ಗುರು ವೆಬರನು ಅನುಮೋದಿಸಿರುವನು. ಜಕೋಬಿ, ಬಾರ್ತ ಮೊದಲಾದವರು ಕಾವ್ಯಭಾಗ ಮತ್ತು ಧರ್ಮಭಾಗಗಳಲ್ಲಿ ಸಮನ್ವಯವಿರುವದನ್ನು ಬಹುಮಟ್ಟಿಗೆ ಒಪ್ಪಿಕೊಂಡರು.

ಮೂರು ಮುಖ್ಯ ಅಂಶಗಳು

ಪಾಶ್ಚಾತ್ಯರ ದೃಷ್ಟಿಯಲ್ಲಿ ಮಹಾಭಾರತದ ಈ ವಿವರವಾದ ವಿವೇಚನೆಯಿಂದ ಮೂರು ಮುಖ್ಯವಾದ ಅಂಶಗಳು ವ್ಯಕ್ತವಾಗುವವು. (೧) ಮಹಾಭಾರತವು ಮೂರು ಮುಖ್ಯವಾದ ಹಂತಗಳಲ್ಲಿ ಮತ್ತು ಅನೇಕ ಪ್ರಕ್ಷೇಪಗಳಿಂದ ಬೆಳವಣಿಗೆಯನ್ನು ಹೊಂದಿದೆ. (೨) ಮೂಲದಲ್ಲಿ ಈ ಕಾವ್ಯವು ಕೌರವರ ಶೌರ್ಯ ಮತ್ತು ಸದ್ಗುಣಗಳನ್ನು ಹೊಗಳುವ ಕಾವ್ಯವಾಗಿದ್ದು ನಂತರದಲ್ಲಿ ಪಾಂಡವರನ್ನು ಹೊಗಳುವ ಕಾವ್ಯವಾಗಿದೆ. (೩) ಮೊದಲು ಲೌಕಿಕವಾಗಿದ್ದ ಈ ಕಾವ್ಯವು ನಂತರ ಧರ್ಮ, ನೀತಿ ಮತೀಯ ವಿಷಯಗಳು ಸೇರಿ ಧಾರ್ಮಿಕ ಕಾವ್ಯವಾಗಿದೆ.

ಈ ಮೂರು ಅಭಿಪ್ರಾಯಕ್ಕೆ ಬಂದು ಮುಟ್ಟಲು ಅವರು ಕೊಟ್ಟಿರುವ ಕಾರಣಗಳೂ ಉಲ್ಲೇಖಿಸಿದ ಪ್ರಮಾಣಗಳೂ ಹೂಡಿದ ತರ್ಕವೂ ಮತ್ತು ಕಟ್ಟಿಕೊಂಡ ಕಲ್ಪನಾ ವೈವಿಧ್ಯವೂ ಬಹುಮುಖ್ಯವಾಗಿದ್ದು ಅವನ್ನೆಲ್ಲ ಸ್ವಲ್ಪದರಲ್ಲಿಯೇ ವಿಮರ್ಶಿಸುವದು ಅಸಾಧ್ಯ. ಆದರೂ ಅವರ ತರ್ಕದಲ್ಲಿಯ ಮೂಲಭೂತವಾದ ದೋಷಗಳನ್ನೂ ಅವರು ಉಲ್ಲೇಖಿಸಿದ ಪ್ರಮಾಣ ವಚನಗಳ ಸಂದರ್ಭ ಬೇರೆಯಾಗಿರುವದನ್ನೂ ಅವರ ಕಲ್ಪನೆಗಳು ಭಾರತೀಯ ಸಾಹಿತ್ಯ ಸಂಸ್ಕೃತಿಗಳ ಪರಂಪರೆಯನ್ನರಿಯದೆ ಕೇವಲ ಪಾಶ್ಚಾತ್ಯ ದೃಷ್ಟಿಯಿಂದ ಕಾವ್ಯ ರಚ

ನೆಯ ಸಂದರ್ಭ, ಉದ್ದೇಶ ಮತ್ತು ಕಾವ್ಯ ವಸ್ತುಗಳ ಮೌಲ್ಯವನ್ನು ಅಳೆಯಲು ಹೊರಟದ್ದರ ಪರಿಣಾಮವೆಂದೂ ತೋರಿಸಿ ಕೊಡದಿದ್ದರೆ ನಮ್ಮ ದೇಶದ ಈ ಮಹಾಗ್ರಂಥದ ವಿಷಯದಲ್ಲಿ ನಮಗೆ ಬುದ್ಧಿ ಸಾಂಕರ್ಯವುಳಿಯುವದು ಖಂಡಿತ. ಈ ಕಾರ್ಯವನ್ನು ಶ್ರೀ ಅರವಿಂದ ಘೋಷರಂಥ ತಪಸ್ವಿಗಳೂ ಡಾ. ಸುಕ್ಥಂಕರರಂಥ ಆಧುನಿಕ ವಿದ್ವಾಂಸರೂ ಮಾಡಿರುವರು. ಈ ವಿದ್ವಜ್ಜನರ ಸಮರ್ಥನೆಗೆ ಮತ್ತೆ ಮತ್ತೆ ಪುಷ್ಟಿಯನ್ನು ಕೊಡುತ್ತ ಹೋಗುವದು ಮಹಾಭಾರತದ ಅಭ್ಯಾಸಿಗಳ ಕರ್ತವ್ಯವು. ಈ ದೃಷ್ಟಿಯಿಂದ ಕೆಳಗೆ ನಿರ್ದೇಶಿಸಿದ ಕೆಲವಂಶಗಳನ್ನು ಗಮನಿಸಬಹುದು.

ಮಹಾಭಾರತವು ಮೂರು ಹಂತಗಳಲ್ಲಿ ಬೆಳೆಯಿತು ಎಂಬ ಸಿದ್ಧಾಂತಕ್ಕೆ ಕೊಟ್ಟ ಮುಖ್ಯವಾದ ಕಾರಣಗಳು ಎರಡು.

೧) ಗ್ರಂಥದಲ್ಲಿಯೇ ಗ್ರಂಥದ ವಿಸ್ತಾರ ಎಂಟು ಸಾವಿರದ ಎಂಟನೂರು, ಇಪ್ಪತ್ತು ನಾಲ್ಕು ಸಾವಿರ ಮತ್ತು ಒಂದು ಲಕ್ಷ ಎಂದು ಮೂರುವಿಧವಾಗಿ ಹೇಳಿದ್ದು.

೨) ಗ್ರಂಥದ ಆರಂಭ ಮನ್ವಾದಿ, ಆಸ್ತಿಕಾದಿ ಮತ್ತು ಉಪರಿಚರಾದಿ ಮೂರು ಎಂದು ಗ್ರಂಥದಲ್ಲಿಯೇ ಹೇಳಿದ್ದು.

ಈ ಆಂತರಿಕ ಪ್ರಮಾಣವನ್ನು ಕೊಡುವವರು ಈ ಉಲ್ಲೇಖಗಳು ಬಂದ ಸಂದರ್ಭಗಳನ್ನು ಸಂಪೂರ್ಣವಾಗಿ ಅಲಕ್ಷ್ಯಮಾಡಿ ಇವು ಮಹಾಭಾರತದ ಮೂರು ಹಂತಗಳ ಗಾತ್ರವೆಂದು ಭಾವಿಸಿದ್ದು ತುಂಬ ಆಶ್ಚರ್ಯಕರ. ಮಹಾಭಾರತದಲ್ಲಿ ಅನೇಕ ಕೂಟಶ್ಲೋಕಗಳಿರುವವೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಈ ಕೂಟಶ್ಲೋಕಗಳು ಎಂಟು ಸಾವಿರದ ಎಂಟುನೂರಾ ಎಂಬತ್ತು ಎಂಬುದು 'ಅಷ್ಟ ಶ್ಲೋಕಸಹಸ್ರಾಣಿ' ಎಂಬ ವಚನದ ಅಭಿಪ್ರಾಯ. ಆದುದರಿಂದಲೇ 'ಅಹಂ ವೇದ್ಮಿ ಶುಕೋ ವೇತ್ತಿ ಸಂಜಯೋ ವೇತ್ತಿ ವಾ ನ ವಾ' ಇವುಗಳ ಅರ್ಥ ನನಗೆ (ವ್ಯಾಸರಿಗೆ) ಗೊತ್ತು. ಶುಕನಿಗೆ ಗೊತ್ತು. ಸಂಜಯನಿಗೆ (ದಿವ್ಯ ದೃಷ್ಟಿಯನ್ನು ಕೊಟ್ಟ ಕಾಲದಲ್ಲಿಯ) ಕೆಲವು ಮಾತ್ರ ಗೊತ್ತು ಎಂಬ ಉತ್ತರಾರ್ಧವು ಸಮಂಜಸವಾಗುತ್ತದೆ. ಇದು ಮೂಲಭಾರತದ ಗಾತ್ರವೆಂದು ಸೂಚಿಸಲು ಅಲ್ಲಿ ಯಾವ ಸಂದರ್ಭವೂ ಇಲ್ಲ ಮತ್ತು ಹಾಗೆ ತಿಳಿದಲ್ಲಿ ಉತ್ತರಾರ್ಧವು ಅಸಂಗತವಾಗುತ್ತದೆ.

ಇನ್ನು ಮನ್ವಾದಿ, ಆಸ್ತಿಕಾದಿ ಮತ್ತು ಉಪರಿಚರಾದಿ ಇವು ಮಹಾಭಾರತದ ಮೂರು ಆರಂಭಗಳನ್ನು ಸೂಚಿಸುವವು ಎಂಬುದು ಸರಿಯಲ್ಲ. ಅವು ಮಹಾಭಾರತವನ್ನು ಓದುವ ಮೂರು ದೃಷ್ಟಿಕೋನಗಳಾಗಿವೆ. 'ಮನ್ವಾದಿ' ಎಂದರೆ ಕೌರವ-ಪಾಂಡವರು ಸಾಮಾನ್ಯ ಪುರುಷರು ಎಂಬ ದೃಷ್ಟಿಯಿಂದ ಈ ಗ್ರಂಥವನ್ನು ಓದುವದು. 'ಆಸ್ತಿಕಾದಿ' ಎಂದರೆ ಪಾಂಡವರು ಧರ್ಮದ ಪ್ರತಿನಿಧಿಗಳು ಸತ್ಯ, ನ್ಯಾಯ, ಧರ್ಮಕ್ಕಾಗಿ ಹೋರಾಡಿದವರು ಮತ್ತು ಕೌರವರು ಅಧರ್ಮದ ಪ್ರತಿನಿಧಿಗಳು ರಾಜ್ಯಲೋಭ, ಅಸೂಯೆ, ಅಧರ್ಮದಿಂದ ಹೋರಾಡಿದವರು ಎಂದು ಅನಾದಿಯಾಗಿ ನಡೆದುಬಂದ ದೈವೀ ಮತ್ತು ಆಸುರೀ ಸಂಪತ್ತುಗಳ ಹೋರಾಟ 'ಯತೋ ಧರ್ಮಃ ತತೋಜಯಃ' ಎಂಬ ದೃಷ್ಟಿಯಿಂದ ಓದುವದು. 'ಉಪರಿಚರಾದಿ' ಎಂದರೆ ಕೌರವ-ಪಾಂಡವರೂ ಅವರ ಯುದ್ಧವೂ ಅದರ ಜಯಾಪಜಯಗಳೂ ಎಲ್ಲವೂ ಶ್ರೀ ಕೃಷ್ಣನ ಆಧೀನ, ಪ್ರಪಂಚದ ಆಗು-ಹೋಗುಗಳೆಲ್ಲ ಪರಮಾತ್ಮನ ಆಧೀನ ಎಂಬ ಪರಮಾತ್ಮನ ದೃಷ್ಟಿಯಿಂದ ಈ ಗ್ರಂಥವನ್ನು ಓದುವದು. 'ನಾರಾಯಣಂ ನಮಸ್ಕೃತ್ಯ' ಎಂಬ ಮಹಾಭಾರತದ ಮೊದಲನೆಯ ಅಧ್ಯಾಯದಲ್ಲಿ ಬಂದ ವಿವರಗಳನ್ನೂ ಆಸ್ತಿಕನ ಕಥೆಯನ್ನು ಹೇಳುವದರ ಉದ್ದೇಶ, ಹಿನ್ನೆಲೆ ಮತ್ತು ಅದರ ಫಲಿತಾಂಶಗಳನ್ನೂ ಉಪರಿಚರನ ಕಥೆಯಲ್ಲಿಯ ಅಂಶಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಗ್ರಂಥಕಾರರ ಈ ದೃಷ್ಟಿಕೋಣವು ಸ್ಪಷ್ಟವಾಗುವದು. ಮಹಾಕೃತಿಗಳಿಗೆ ಕಾವ್ಯದ ಉದ್ದೇಶವೊಂದನ್ನು ಬಿಟ್ಟು ಬೇರೆ ನೈತಿಕ ಅಥವಾ ಆಧ್ಯಾತ್ಮಿಕ ಉದ್ದೇಶಗಳನ್ನಿಟ್ಟುಕೊಳ್ಳುವದು ಬೇರೆ ದೇಶದ ಮಹಾಕೃತಿಗಳಲ್ಲಿ ಇರಲಿಕ್ಕಿಲ್ಲ. ಅಥವಾ ನಾವಿರುವ ದೇಶ ಕಾಲ ಮಾನಗಳಿಗೆ ಅದರ ಔಚಿತ್ಯ ಅಥವಾ ವಾಸ್ತವತೆ ನಮ್ಮ ಬುದ್ಧಿಗೋಚರವಾಗಲಿಕ್ಕಿಲ್ಲ. ಆದರೆ ಅದು ಮಹಾಭಾರತವೇ ಹಾಗಿದ್ದಿದ್ದಿಲ್ಲವೆಂದು ಹೇಳಲು ಸಬಲ ಕಾರಣವಾಗುವದಿಲ್ಲ.

ಮೂರು ದೃಷ್ಟಿಕೋನಗಳ ಬಗ್ಗೆ ಮಧ್ವಾಚಾರ್ಯರ ವಿಚಾರಗಳು

ಈ ಮಹಾಗ್ರಂಥವನ್ನು ಓದುವ ಈ ಮೂರು ದೃಷ್ಟಿಕೋಣಗಳನ್ನು ಶ್ರೀ ಮಧ್ವಾಚಾರ್ಯರು 'ಭಾರತಾರ್ಥಃ ತ್ರಿಧಾ ಪ್ರೋಕ್ತಃ ಸ್ವಯಂ ಭಗವತೈವ ಹಿ' 'ಭಾಷಾಸ್ತು ತ್ರಿವಿಧಾಃ ತತ್ರ ಮಯಾ ವೈ ಸಂಪ್ರದರ್ಶಿತಾಃ' ಇತ್ಯಾದಿಯಾಗಿ ತಮ್ಮ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ವಿವರವಾಗಿ ಚರ್ಚಿಸಿ ಈ ಗ್ರಂಥದ ಚಾರಿತ್ರಿಕ, ನೈತಿಕ ಮತ್ತು ಆಧ್ಯಾತ್ಮಿಕ ಅರ್ಥಗಳ ಸಾರವನ್ನು ಕೊಟ್ಟದ್ದಾರೆ. ಡಾ. ಸುಕ್ಥಂಕರರು ಶ್ರೀ ಮಧ್ವಾಚಾರ್ಯರ ಈ ವಿಚಾರಗಳನ್ನು ಆಧುನಿಕ ರೀತಿಯಲ್ಲಿ ಚರ್ಚಿಸಿ ಸಮರ್ಥಿಸಿದ್ದಾರೆ.

ಇನ್ನು ನಾವು ಇಂಥ ಅಲೌಕಿಕವೆನಿಸುವ ಅರ್ಥವನ್ನು ತುಸು ಬದಿಗಿಟ್ಟು ಇವು ಮೂರು ಆವೃತ್ತಿಗಳ ಆರಂಭವೆಂದು ಗ್ರಹಿಸಿದರೂ ಮಹಾಭಾರತದ ಮೂರು ಹಂತಗಳ ಬೆಳವಣಿಗೆಯ ಸಿದ್ಧಾಂತಕ್ಕೆ ಯಾವ ಪ್ರಯೋಜನವೂ ಆಗುವದಿಲ್ಲ. ಮನ್ವಾದಿ ಮತ್ತು ಆಸ್ತಿಕಾದಿ ಎಂದು ಹೇಳಲಾಗುವ ಭಾಗಗಳು ಎರಡು ಸಾವಿರ ಶ್ಲೋಕಗಳಿಗಿಂತ ಹೆಚ್ಚಿಲ್ಲ. ಆದುದರಿಂದ ಮೊದಲನೆಯ ಆವೃತ್ತಿಗಿಂತ ಎರಡನೆಯದರಲ್ಲಿ ಸುಮಾರು ಒಂದೂವರೆ ಸಾವಿರ ಶ್ಲೋಕಗಳು ಹೆಚ್ಚಾದವು. ಮೂರನೆಯವರಲ್ಲಿ ಇನ್ನೂ ಐದುನೂರು ಹೆಚ್ಚಿದವು. ಎಂದು ಹೇಳಿದಂತಾಗುವದು. ಒಂದು ಲಕ್ಷದ ಗ್ರಂಥಕ್ಕೆ ಹೀಗೆ ಒಂದೆರಡು ಸಾವಿರದ ಪೀಠಿಕಾ ಭಾಗಗಳು ಸೇರಿಸಲ್ಪಟ್ಟರೆ ಅದು ಹೊಸದೊಂದು ಆವೃತ್ತಿಯಾಗುವದಿಲ್ಲ. ಇದೇ ಉತ್ತರವೇ ವ್ಯಾಸನು ತನ್ನ ಹೆಸರನ್ನೇ ಹೇಗೆ ಹೇಳಿಕೊಂಡನು. ತಾನು ಇದನ್ನು ಬೇರೆಯ



ಸೋರುವುದರಿಂದ ಸಂರಕ್ಷಣೆ !

ವರಿಗೆ ಹೇಳಿದ ಕಥೆಯನ್ನು ತಾನೇ ಹೇಗೆ ಹೇಳಿದನು. ವೈಶಂಪಾಯನನು ಸೌತಿಗೆ ಹೇಳಿದ್ದನ್ನು ವೈಶಂಪಾಯನನೇ ಹೇಗೆ ಹೇಳಿಕೊಳ್ಳುವನು ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರವಾಗುವದು. ಅವೆಲ್ಲ ಗ್ರಂಥದ ಪೀಠಿಕಾ ಭಾಗಕ್ಕೆ ಸೇರಿದ ವಿಷಯಗಳಾಗಿದ್ದು ಅದೊಂದು ಆ ಕಾಲದ ಶೈಲಿಯೆಂದು ನಾವು ಭಾವಿಸಬಹುದು. ಅಥವಾ ಭಾರತದ ಉಪದೇಶ ಪರಂಪರೆಯ ಉಲ್ಲೇಖವೆಂದು ಭಾವಿಸಬಹುದು. ಅವು ಗ್ರಂಥದ ಮೂರು ಪರಿಷ್ಕರಣಗಳಿಗೆ ಪ್ರಮಾಣವಾಗುವದಿಲ್ಲ.

ಹೀಗೆಂದ ಮಾತ್ರಕ್ಕೆ ಮಹಾಭಾರತದಲ್ಲಿ ಒಂದಕ್ಷರವೂ ಪ್ರಕ್ಷಿಪ್ತವಾಗಿಲ್ಲವೆಂದೂ ಈಗ ನಮ್ಮೆದುರಿಗಿದ್ದ ಮಹಾಭಾರತವು ಒಂದಕ್ಷರವೂ ಬದಲಾಗದೆ ವ್ಯಾಸರು ಬರೆದಂತೆಯೇ ಇದೆಯೆಂದೂ ನಮ್ಮ ಅಭಿಪ್ರಾಯವಲ್ಲ. ಪ್ರಾಚೀನ ವ್ಯಾಖ್ಯಾನಕಾರರ ಮತ್ತು ಮತಾಚಾರ್ಯರ ಅಭಿಪ್ರಾಯವೂ ಹೀಗಿರಲಿಲ್ಲ.

> ಕ್ವಚಿತ್ ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂ-
> ತರಿತಾನಪಿ ।
> ಕುರ್ಯುಃ ಕ್ವಚಿಚ್ ವ್ಯತ್ಯಾಸಂ ಪ್ರಮಾದಾತ್
> ಕ್ವಚಿದನ್ಯಥಾ ॥

'ಕೆಲವೆಡೆ ಪ್ರಕ್ಷೇಪಗಳಿವೆ. ಕೆಲವೆಡೆ ಮೂಲದಲ್ಲಿದ್ದುದನ್ನು ಬಿಟ್ಟುಬಿಟ್ಟದ್ದಾರೆ. ಕೆಲವೆಡೆ ಅಜ್ಞಾನದಿಂದಲೂ ಕೆಲವೆಡೆ ಉದ್ದೇಶಪೂರ್ವಕವಾಗಿಯೂ ಬದಲು ಮಾಡಿದ್ದಾರೆ' ಎಂದು ಶ್ರೀಮಧ್ವಾಚಾರ್ಯರು ತಮ್ಮ ಕಾಲದಲ್ಲಿ ಮಹಾಭಾರತದ ಸ್ಥಿತಿಯನ್ನು ವರ್ಣಿಸಿದ್ದಾರೆ. 'ದೇಶೇ ದೇಶೇ ತಥಾ ಗ್ರಂಥಾನ್ ದೃಷ್ಟ್ವಾ ಚಾಪಿ ಪೃಥಗ್ವಿಧಾನ್' ಆದುದರಿಂದ ದೇಶದ ಎಲ್ಲ ಮೂಲೆಗಳಲ್ಲಿಯೂ ಸಂಚರಿಸಿ ಈ ಗ್ರಂಥದ ಅನೇಕ ಪ್ರತಿಗಳನ್ನು ನೋಡಿ ತಾತ್ಪರ್ಯವನ್ನು ನಿರ್ಣಯಿಸಿದ್ದೇವೆ ಎಂದು ಹೇಳಿದ್ದಾರೆ. ಆದುದರಿಂದ ಈ ಮಹಾಗ್ರಂಥದಲ್ಲಿ ಅಲ್ಲಲ್ಲಿ ಪ್ರಕ್ಷೇಪಗಳಿವೆ. ಅವುಗಳನ್ನು ಹುಡುಕಿ ತೆಗೆಯುವ ಕೆಲಸವನ್ನು ಹಿಂದಿನವರು ಮಾಡಿದ್ದಾರೆ. ಇಂದಿನವರೂ ಮಾಡಬಹುದು. ಆದರೆ ಮೂಲಗ್ರಂಥವೇ ಆಮೂಲಾಗ್ರ ಮೂರು ಸಾರೆ ಪರಿಷ್ಕರಣೆ ಹೊಂದಿತೆಂಬುದೂ ಅದರ ಸ್ವರೂಪವೇ ಬದಲಾಯಿತೆಂಬುದೂ ನಿರಾಧಾರವಾದ ವಿಮರ್ಶೆ. ಇಲಿಯಡ್ ಮತ್ತು ಓಡೆಸಿ (Iliad and Odyssey) ಇವೆರಡರ ಎಂಟು ಪಟ್ಟು ವಿಸ್ತಾರವಾದ ಈ ಗ್ರಂಥದ ಗಾತ್ರವನ್ನು ನಂಬಲು ಅಸಮರ್ಥರಾಗಿ ಪಾಶ್ಚಾತ್ಯರು ಮೂಲ ಕಾವ್ಯವನ್ನು ಹುಡುಕುವ ದ್ರಾವಿಡ ಪ್ರಾಣಾಯಮ ಮಾಡಿ ನಿಷ್ಕಾರಣವಾಗಿ ಶ್ರಮಪಟ್ಟಿರುವರು. ಇವರ ಈ ಶ್ರಮವನ್ನು ಶ್ರೀ ಅರವಿಂದರು 'Intellectual cardhouses' ಎಂದು ಕರೆದಿದ್ದಾರೆ.

ಪಾಶ್ಚಾತ್ಯರ ವಿಮರ್ಶೆಯಲ್ಲಿಯ ಎರಡನೆಯ ಅಂಶವು 'ಮೂಲದಲ್ಲಿ ಈ ಗ್ರಂಥವು ಕೌರವರ ವರ್ಣನಪರವಾದ ಕಾವ್ಯವಾಗಿದ್ದು ನಂತರ ಪಾಂಡವರನ್ನು ಹೊಗಳುವ ಕಾವ್ಯವಾಗಿದೆ' ಎಂಬುದು. ಇದಕ್ಕೆ ಅವರು ಕೊಡುವ ಕಾರಣಗಳು ಎರಡು. ೧) ವೈದಿಕ ವಾಙ್ಮಯದಲ್ಲಿಯೂ ಪಾಣಿನಿಯ ಸೂತ್ರಗಳಲ್ಲಿಯೂ ಕೌರವರ ಹೆಸರು ಬರುತ್ತದೆ. ಪಾಂಡವರ ಉಲ್ಲೇಖವಿಲ್ಲ. ೨) ಯುದ್ಧಕಾಲದಲ್ಲಿ ಪಾಂಡವರ ವರ್ತನೆಯು ನ್ಯಾಯಸಮ್ಮತವಲ್ಲವಾದ್ದರಿಂದ ಮೂಲದಲ್ಲಿ ಅವರು ಕಾವ್ಯದ ನಾಯಕರಾಗಿರಲಿಕ್ಕಿಲ್ಲ.

ಇಬ್ಬರೂ ಕುರುವಂಶದವರು

ಈ ಎರಡು ಕಾರಣಗಳೂ ಅಷ್ಟೊಂದು ಸಮರ್ಪಕವಾಗಿಲ್ಲ. ಪಾಂಡುರಾಜನ ಮಕ್ಕಳು ಮತ್ತು ಧೃತರಾಷ್ಟ್ರನ ಮಕ್ಕಳು ಎಂದು ಪ್ರತ್ಯೇಕಿಸಿ ಮಾತನಾಡುವ ಪ್ರಸಂಗವಿದ್ದಾಗ ಮಾತ್ರ ಮಹಾಭಾರತವು ಪಾಂಡವರು, ಕೌರವರು ಎಂದು ಅವರನ್ನು ಕರೆಯುವದು. ನಿಜವಾಗಿ ಅವರಿಬ್ಬರೂ ಕೌರವರು. ಅಂದರೆ ಕುರುವಂಶಕ್ಕೆ ಸೇರಿದವರು, ಕುರು ದೇಶದ ರಾಜಮನೆತದವರು. ಆದುದರಿಂದ ವೈದಿಕ ವಾಙ್ಮಯದಲ್ಲಿ ಬಂದ ಕೌರವರು ಎಂಬ ಉಲ್ಲೇಖವು ಪಾಂಡವರನ್ನು ಹೊರತುಪಡಿಸಿದ ಕೌರವರಿಗೆ ಮಾತ್ರ ಉಲ್ಲೇಖವೆಂದು ಹೇಳುವದು ಸರಿಯಲ್ಲ. ಇಬ್ಬರೂ ಎದುರುಬದುರಾಗಿ ಶತ್ರುಗಳಾಗಿ ನಿಂತ ಕಥೆಯನ್ನು ವಿಪುಲವಾಗಿ ವರ್ಣಿಸುವ ಮಹಾಭಾರತದಲ್ಲಿಯೇ ನೂರಾರು ಕಡೆಗೆ ಪಾಂಡವರನ್ನು 'ಕೌರವಾಃ' ಎಂದು ಸಂಬೋಧಿಸಲಾಗಿದೆ. ಅವರ ಮಕ್ಕಳು ಮೊಮ್ಮಕ್ಕಳಾದ ಪರೀಕ್ಷಿತ, ಜನಮೇಜಯರನ್ನೂ 'ಕೌರವ' ಎಂದು ಸಂಬೋಧಿಸಲಾಗಿದೆ. ಹೀಗಿರುವದರಿಂದ ಕೇವಲ ಎರಡು ಮೂರು ಕಡೆಗೆ ಬಂದ ವೈದಿಕ ಉಲ್ಲೇಖಗಳಲ್ಲಿ ಪಾಂಡವರನ್ನು ಪ್ರತ್ಯೇಕವಾಗಿ ನಿರ್ದೇಶಿಸಬೇಕಾಗಿತ್ತೆಂದು ಅಪೇಕ್ಷಿಸುವದು ಸಹಜವಾಗುವದಿಲ್ಲ. ಸಂಸ್ಕೃತದಲ್ಲಿ ಕುರು-ಪಾಂಡವ ನ್ಯಾಯವೆಂಬ ಗಾದೆ ಇದೆ. ಈ ನ್ಯಾಯದಂತೆ ಕೌರವ ಶಬ್ದಕ್ಕೆ ಪಾಂಡವರೂ ಎಂದರ್ಥ, ಆದರೆ ಪಾಂಡವರನ್ನು ಪ್ರತ್ಯೇಕವಾಗಿ ನಿರ್ದೇಶಿಸಿದಾಗ ಮಾತ್ರ ಕೌರವ ಶಬ್ದಕ್ಕೆ ಧೃತರಾಷ್ಟ್ರನ ಮಕ್ಕಳು ಎಂದರ್ಥ ಮಾಡಬೇಕು.

ಇನ್ನು ಯುದ್ಧಕಾಲದಲ್ಲಿ ಪಾಂಡವರ ವರ್ತನೆಯು ದ್ರೋಣ, ಭೀಷ್ಮ, ಕರ್ಣ, ದುರ್ಯೋಧನರನ್ನು ಕೊಲ್ಲುವಾಗ ನ್ಯಾಯಸಮ್ಮತವಾಗಿಲ್ಲವೆನ್ನುವ ವಿಷಯವು ದೀರ್ಘ ಚರ್ಚೆಯ ಮತ್ತು ಧರ್ಮಸೂಕ್ಷ್ಮದ ವಿಷಯ. ಅದನ್ನು ಸ್ವಲ್ಪದರಲ್ಲಿ ಚರ್ಚಿಸಲು ಬರುವದಿಲ್ಲ. ಆದರೂ ಉದಾಹರಣೆಗೆಂದು ದ್ರೋಣನ ವಿಷಯವನ್ನೇ ತೆಗೆದುಕೊಳ್ಳೋಣ. ದ್ರೋಣನು ಕೌರವರ ರಾಜ್ಯಕ್ಕೆ ಬಂದು ನೆಲಿಸಿದ್ದು ಪಾಂಚಾಲರ ಮೇಲಿನ ದ್ವೇಷದಿಂದ. ಅವರ ಮೇಲೆ ಎಂದಾದರೊಮ್ಮೆ ಸೇಡು ತೀರಿಸಿಕೊಳ್ಳ

ಬೇಕೆಂಬ ಬುದ್ಧಿಯಿಂದ. ಆದುದರಿಂದ ಪಾಂಡವರು ಪ್ರಿಯಶಿಷ್ಯರಾದರೂ ಕೌರವರು ರಾಜ್ಯ ಲೋಭದಿಂದ ಅವರನ್ನು ಹಿಂಸಿಸಿದ್ದು ಗೊತ್ತಿದ್ದರೂ ಪಾಂಚಾಲರು ಪಾಂಡವರ ಪಕ್ಷ ಕಟ್ಟಿದ್ದರಿಂದ ದ್ರೋಣಾಚಾರ್ಯರು ಕೌರವ ಪಕ್ಷದಲ್ಲುಳಿದರು. ಆದುದರಿಂದ ಅವರು ಯುದ್ಧದಲ್ಲಿ ಭಾಗವಹಿಸಿದ್ದೇ ದ್ವೇಷದಿಂದ ಮತ್ತು ಅಧರ್ಮದ ಪರವಾಗಿಯಾಗಿದ್ದಿತು. ಮುಂದೆ ಯುದ್ಧ ನಡೆದಾಗ ಪಾಂಚಾಲರು ಅವರ ಮೇಲೆ ಮತ್ತೆ ಮತ್ತೆ ಏರಿಹೋಗಿ ಅವರನ್ನು ರೇಗಿಸಿದರು. ಆಗ ದ್ರೋಣರು ಬ್ರಹ್ಮಾಸ್ತ್ರವನ್ನು ಹೊರತೆಗೆದರು. ಕ್ಷತ್ರಿಯರಿಗೆ ಬ್ರಹ್ಮಾಸ್ತ್ರವು ಗೊತ್ತಿರುವದಿಲ್ಲ. ಗೊತ್ತಿಲ್ಲದ ಅಸ್ತ್ರದಿಂದ ಯುದ್ಧ ಮಾಡುವದು ಅಧರ್ಮ. ಆದುದರಿಂದ ಅದನ್ನು ಉಪಯೋಗಿಸಬಾರದೆಂದು ದೇವತೆಗಳೂ ಋಷಿಗಳೂ ಎಷ್ಟು ಹೇಳಿದರೂ ದ್ರೋಣಾಚಾರ್ಯರು ಕೇಳಲಿಲ್ಲ. ಅದನ್ನು ಪ್ರಯೋಗಿಸಿದರು. ಹೀಗಾಗಿ ಯುದ್ಧ ಧರ್ಮದ ಕಟ್ಟಳೆಯನ್ನು ಮೊದಲು ಮುರಿದವರು ದ್ರೋಣಾಚಾರ್ಯರು. ಈ ರೀತಿಯಾಗಿ ಸತ್ಯವನ್ನು ಬಿಟ್ಟಮೇಲೆ ಅವರು ಮನೋವಿಕಾರಕ್ಕೆ ಶೋಕಕ್ಕೆ, ವಿಷಾದಕ್ಕೆ ಒಳಗಾಗುವದು ಸುಲಭ. ಅದನ್ನು ತೋರಿಸುವದಕ್ಕೋಸ್ಕರವೇ ಧರ್ಮರಾಜನಿಂದ 'ಅಶ್ವತ್ಥಾಮಾ ಹತಃ' ಎಂದು ಹೇಳಿಸಲಾಯಿತು. ದ್ರೋಣಾಚಾರ್ಯರು ವಿಕಾರವಶರಾದರು. ಯುದ್ಧ ಧರ್ಮವನ್ನು ಬಿಟ್ಟದ್ದರ ದ್ವೇಷದ ಮತ್ತು ಅಧರ್ಮದ ಫಲವನ್ನನುಭವಿಸಿದರು. ಈ ಹಿನ್ನೆಲೆಯಲ್ಲಿ ನೋಡಿದರೆ ಧರ್ಮರಾಜನು ಸುಳ್ಳು ಹೇಳಿದ್ದು ವೈಯಕ್ತಿಕ ತಪ್ಪಾದರೂ ದ್ರೋಣಾಚಾರ್ಯರಿಗೆ ಬಗೆದ ಅನ್ಯಾಯವಾಗುವದಿಲ್ಲ. ಅವರು ಈಗಾಗಲೇ ಯುದ್ಧ ಧರ್ಮವನ್ನು ಮುರಿದು ಯುದ್ಧ ಭೂಮಿಯಲ್ಲಿ ನ್ಯಾಯವನ್ನು ಕೇಳುವ ಅಧಿಕಾರವನ್ನು ಕಳೆದುಕೊಂಡಿದ್ದರು. ತನ್ನ ವೈಯಕ್ತಿಕ ತಪ್ಪಿಗಾಗಿ ಮುಂದೆ ಧರ್ಮರಾಜನು ತುಸು ಹೊತ್ತು ನರಕಯಾತನೆಯನ್ನನುಭವಿಸಿದನು. ಹೀಗೆಯೇ ಭೀಷ್ಮ, ಕರ್ಣ, ದುರ್ಯೋಧನರ ಮರಣದ ಕಥಾಭಾಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ನ್ಯಾಯಾನ್ಯಾಯಗಳ ಸೂಕ್ಷ್ಮವು ತಿಳಿಯುವದು.

ಇನ್ನು ಮೂರನೆಯ ಅಂಶವಾದ 'ಮೂಲತಃ ಮಹಾಭಾರತವು ಲೌಕಿಕ ಕಾವ್ಯವಾಗಿದ್ದು ಧಾರ್ಮಿಕ ಮತ್ತು ನೈತಿಕ ಅಂಶಗಳು ನಂತರ ಸೇರಿಸಲ್ಪಟ್ಟವು.' ಎಂಬ ವಿಷಯದಲ್ಲಿ ಜರ್ಮನ್ ವಿದ್ವಾಂಸ ಡಾಲ್ಹಮನ್‌ನ ವಿಚಾರಗಳನ್ನು ಈಗಾಗಲೇ ನಿರ್ದೇಶಿಸಿದ್ದೇವೆ.

ಮಹಾಭಾರತದ ಕಥೆಯನ್ನೂ ಪಾತ್ರಗಳನ್ನೂ ವಿಂಗಡಿಸಿ ನೋಡಿದರೆ ಅದು ಅನಾದಿಯಿಂದಲೂ ನಡೆದುಕೊಂಡು ಬಂದ ಧರ್ಮ-ಅಧರ್ಮಗಳ, ನ್ಯಾಯ—ಅನ್ಯಾಯಗಳ ಹೋರಾಟದ ಚಿತ್ರಣವೆಂಬುದು ಸ್ಥೂಲ ದೃಷ್ಟಿಯವರಿಗೂ ಕಂಡುಬರುವದು. ಇಲ್ಲಿರುವ ಪಾತ್ರಗಳಲ್ಲಿ ದುರ್ಯೋಧನನು ಲೋಭ, ಅಸೂಯೆ ಮತ್ತು ಅಹಂಕಾರಗಳ ಪ್ರತೀಕ, ಧೃತರಾಷ್ಟ್ರನು ಹೊಯ್ದಾಟದ ಮೂರ್ತಿ. ಕೇಳಿದ ತತ್ತ್ವೋಪದೇಶವನ್ನು ಗಾಳಿಗೆ ಬಿಟ್ಟು ಮಗನ ಮೋಹದಿಂದ ಮತ್ತೆ ಅಧರ್ಮಕ್ಕೆ ಆಶೀರ್ವಾದ ಮಾಡುವವನು. ಕರ್ಣನು ಅಭಿಮಾನದ ಮೇರುಪರ್ವತ. ಅವನ ದಾನವೂ ಅಭಿಮಾನದ ಇನ್ನೊಂದು ರೂಪಾಂತರ. ಶಕುನಿಯು ಕುತಂತ್ರ ಜಾಲಗಳ ಸಂಚಾಲಕ. ವಿದುರನು ವಿವೇಕದ ಮೂರ್ತಿ. ದ್ರೋಣಾಚಾರ್ಯರು ಪ್ರತೀಕಾರ ಬುದ್ಧಿಯ ಪ್ರತೀಕ. ಅವರ ಈ ಗುಣ ಅವರ ಮಗ ಅಶ್ವತ್ಥಾಮನಲ್ಲಿ ಇನ್ನೂ ಒಡೆದುಕಾಣುತ್ತದೆ. ಭೀಷ್ಮಾಚಾರ್ಯರು ಪರಮತತ್ತ್ವಜ್ಞಾನಿ. ಆದರೆ ಕುಲಪಿತಾಮಹನಾದುದರಿಂದ ಕುಲವನ್ನು ಬಿಡುವಂತಿಲ್ಲ. ಕುಲದ ಒಂದು ಶಾಖೆ ಇನ್ನೊಂದು ಶಾಖೆಯೊಡನೆ ಹೋರಾಡಿದಾಗ ಅಧಿಕಾರದಲ್ಲಿದ್ದ

ಪಕ್ಷವನ್ನೇ ಹಿಡಿದು ಹೋರಾಡುವ ವಿಧೇಯ. ಇದೊಂದು ಚಿತ್ರವಿದ್ದರೆ ಪಾಂಡವರದು ಇನ್ನೊಂದು ಚಿತ್ರ. ಧರ್ಮನು ಸತ್ಯ ಮತ್ತು ಶಾಂತಿ ನಿಷ್ಠ. ಕ್ಷತ್ರಿಯಯೋಗ್ಯವಾದ ಜೂಜಾಟಕ್ಕೆ ಕರೆದರೆ ಒಲ್ಲೆನೆನ್ನಲಾರ. ಯಕ್ಷ ಪ್ರಶ್ನೆಯೇ ಮೊದಲಾದ ಭಾಗಗಳಲ್ಲಿ ಅವನು ತೋರಿಸುವ ಧರ್ಮಜ್ಞಾನ ಅಗಾಧ. ದ್ರೌಪದಿಯು ಸ್ವಾಭಿಮಾನದ ಮೂರ್ತಿ. ಆದರೆ ಪತಿಪರಾಯಣೆ. ಭೀಮನೂ ಹಾಗೆಯೇ ಸ್ವಾಭಿಮಾನ ಮತ್ತು ವಿಧೇಯತೆಗಳ ಗೊಂದಲದಲ್ಲಿ ಸಿಕ್ಕಿ ಬಿದ್ದವ. ಅರ್ಜುನನು ಧೋರಣೆಯ ವಿಷಯವನ್ನು ಅಣ್ಣನಿಗೂ ಕೃಷ್ಣನಿಗೂ ಬಿಟ್ಟ ಕಾರ್ಯತತ್ಪರ. ಶಕುನಿಯು ಈ ಗ್ರಂಥದಲ್ಲಿಯ ಆಸುರೀಭಾಗಕ್ಕೆ ಸೂತ್ರಚಾಲಕನಾದರೆ ಶ್ರೀಕೃಷ್ಣನು ಇಲ್ಲಿಯ ದೈವೀ ಭಾಗಕ್ಕೆ ಸೂತ್ರಚಾಲಕನು. ಇವರಿಬ್ಬರಲ್ಲಿ ಯಾರು ಹೆಚ್ಚು ಮೋಸಗಾರರು ಎನ್ನುವದಕ್ಕಿಂತ ಯಾರ ಉದ್ದೇಶವು ಹೆಚ್ಚು ಮೋಸದ ಗುರಿಯುಳ್ಳದ್ದು ಎನ್ನುವದು ಮುಖ್ಯ. ಇಂಥ ಪಾತ್ರಗಳ ಸುತ್ತಲೂ ಹೆಣೆದ ಕಥೆಯು ಧರ್ಮ ಅಧರ್ಮಗಳ, ನ್ಯಾಯ ಅನ್ಯಾಯಗಳ ಬಿರುಸಾದ ಚರ್ಚೆಯಿಂದ ತುಂಬಿದ್ದರೆ, ಉಪದೇಶಗಳ ರಾಶಿಯಿಂದ ಕೂಡಿದ್ದರೆ, ಅಧ್ಯಾತ್ಮ ಚರ್ಚೆಗಳ ಆಕಾರವಾಗಿದ್ದರೆ ಇವೆಲ್ಲವುಗಳನ್ನು ಮನದಟ್ಟು ಮಾಡಲು ನೂರಾರು ಉಪಾಖ್ಯಾನಗಳೂ ಉಪಕಥೆಗಳೂ ತುಂಬಿಕೊಂಡಿದ್ದರೆ ಅವು ಕೃತಿಗೆ ಹೊರಪಟ್ಟವು ಎಂದು ಹೇಳುವದು ಸಮಂಜಸವಾಗುವದಿಲ್ಲ. ಕವಿಯ ಉದ್ದೇಶವೇ ಅಷ್ಟು ವ್ಯಾಪಕವಿಲ್ಲವೆಂದು ಹೇಳಲು ಆಧಾರಗಳೇನು?

ಲೌಕಿಕ ಕಾವ್ಯವೆ?

ಇದೆಲ್ಲವನ್ನು ಮರೆತು ನಾವು ಕ್ಷಣ ಹೊತ್ತು ಇದು ಕೇವಲ ಲೌಕಿಕಕಾವ್ಯವಿತ್ತೆಂದು ಭಾವಿಸಿಕೊಳ್ಳೋಣ. ಆಗ ಕಾವ್ಯದ ಘಟನೆಗಳಿಗೂ ಪಾತ್ರಗಳ ವರ್ತನೆಗೂ ಸ್ವಭಾವಕ್ಕೂ ಯೋಗ್ಯವಾದ ಕಾವ್ಯೋದ್ದೇಶವನ್ನು ಕಲ್ಪಿಸುವದೇ ಕಷ್ಟವಾಗುವದು. ಇಂಥ ಕೇವಲ ಲೌಕಿಕ ಕಾವ್ಯದಲ್ಲಿ ಧರ್ಮರಾಜನು ಜೂಜಾಟಕ್ಕೆ ಏಕೆ ಒಪ್ಪಿದನು? ಆಸ್ತಿಯನ್ನೂ ಅಣ್ಣ ತಮ್ಮಂದಿರನ್ನೂ ಕೊನೆಗೆ ಹೆಂಡತಿಯನ್ನೂ ಏಕೆ ಪಣಕ್ಕೆ ಹಚ್ಚಿದನು? ಅವರಾದರೂ ಅದಕ್ಕೆ ಏಕೆ ಒಪ್ಪಿಕೊಂಡರು? ಮುಂದೆ ಅನೇಕ ಧರ್ಮಸಂಕಟಗಳಿಗೀಡುಮಾಡುವ ಈ ಮಹತ್ವದ ಘಟನೆಗೆ ಕೇವಲ ಲೌಕಿಕಕಾವ್ಯದ ಪರಿಸರದಲ್ಲಿ ಹೇಗೆ ಸ್ಥಾನವನ್ನು ಕಲ್ಪಿಸುವದು? ಧರ್ಮರಾಜನ ಮುಂದಿನ ವ್ಯಕ್ತಿತ್ವದ ಛಾಯೆಯಿಲ್ಲದಿದ್ದರೆ ಅವನೊಬ್ಬ ಜೂಜಾಟದ ವ್ಯಸನಿ ಹಾಗೂ ಮೂರ್ಖನೆಂದು ನಾವು ಚಿತ್ರಿಸಿಕೊಳ್ಳಬೇಕಾಗುತ್ತದೆ. ಇಂಥ ಮೂರ್ಖನನ್ನು ಕುರಿತು ಕವಿಯು ಯಾವ ರಸ ಅಥವಾ ಭಾವಗಳನ್ನು ಚಿತ್ರಿಸಲು ಕಾವ್ಯವನ್ನು ಬರೆದನೋ ಊಹಿಸುವದೂ ಕಷ್ಟ. ಲೌಕಿಕ ಕಾವ್ಯದ ಮೂಲವಾದ ವೀರಗಾಥೆಗೆ ನಾಯಕನೆಂದು ಹೇಳಲಾಗುವ ದುರ್ಯೋಧನನ ಚಿತ್ರವನ್ನು ಕಣ್ಣು ಮುಂದೆ ತರುವದೂ ಕಷ್ಟ. ಪಾಂಡವರಿಲ್ಲದೆ ಕರ್ಣನಿಲ್ಲ. ಕರ್ಣನಿಲ್ಲದೆ ದುರ್ಯೋಧನನ ವೀರಾವೇಶವಿಲ್ಲ. ದುರ್ಯೋಧನನಿಗೆ ಅವನ ಅಭಿಮಾನವೇ ಸ್ವತ್ತು. ಅದನ್ನು ಪ್ರಚೋದಿಸುವವರು ಯಾರು? ಅವನು ಅಹಂಕಾರ, ರಾಜ್ಯದ ಅಸೂಯೆಗಳಿಂದ ಸದ್ಗುಣಿಯಾದರೆ ಯುದ್ಧದ ಮೂಲವೇನು? ಕೃಷ್ಣನಿಲ್ಲದ ಮಹಾಭಾರತದ ಕಲ್ಪನೆಯನ್ನು ಮಾಡಿಕೊಳ್ಳುವದೇ ಅಶಕ್ಯ. ಸಂಧಾನ ಮತ್ತು ಯುದ್ಧದ ಪರ್ವಗಳಲ್ಲಿ ಕೃಷ್ಣನನ್ನು ಬಿಟ್ಟರೆ ಈ ಮಹಾಕೃತಿಯಲ್ಲಿ ಉಳಿಯುವದೇನು? ವಿದುರನ ನೀತಿ, ಭೀಷ್ಮಾಚಾರ್ಯರ ತತ್ವಜ್ಞಾನಗಳನ್ನು ಬಿಟ್ಟರೆ ಆ ಪಾತ್ರಗಳು ಕಾವ್ಯದಲ್ಲಿ ನಿರರ್ಥಕವಾದ ಪಾತ್ರಗಳು. ಆದುದರಿಂದ ಮಹಾಭಾರತವನ್ನು ಕೇವಲ ಲೌಕಿಕ ಕಾವ್ಯವೆಂದು ಹೇಳುವದೆಂದರೆ ಅದರಲ್ಲಿಯ ಎಲ್ಲ ಪಾತ್ರಗಳನ್ನೂ ಎಲ್ಲ ಭಾಗಗಳನ್ನೂ ಕಳೆದುಕೊಂಡಂತೆಯೇ ಸರಿ.

ಆದುದರಿಂದ ಕವಿಯು ಉದ್ದೇಶಪೂರ್ವಕವಾಗಿಯೇ ಒಂದು ಧಾರ್ಮಿಕ ಮತ್ತು ನೈತಿಕ ಕಾವ್ಯವನ್ನು ಬರೆದಿದ್ದಾನೆ. ಕಥೆಯನ್ನೂ ಪಾತ್ರಗಳನ್ನೂ ಅದರಂತೆಯೇ ಸೃಷ್ಟಿಸಿದ್ದಾನೆ. ಪಾಂಡವರಲ್ಲಿ ಧರ್ಮ, ಸತ್ಯ ಮತ್ತು ನ್ಯಾಯಗಳ ಗುಣಗಳನ್ನಿಟ್ಟು ಅಲ್ಲಲ್ಲಿ ಅವರು ಸಕಾರಣವಾಗಿ ಎಡವಿದಂತೆಯೂ ತೋರಿಸಿದ್ದಾನೆ. ಕೌರವರಲ್ಲಿ ದ್ವೇಷ, ಅಸೂಯೆ, ಅಹಂಕಾರಗಳನ್ನಿಟ್ಟು ಅವರೂ ಅಭಿಮಾನ, ಧೈರ್ಯ, ಸಾಹಸಗಳನ್ನು ತೋರಿಸಿದ್ದನ್ನೂ ಚಿತ್ರಿಸಿದ್ದಾನೆ. ಇವರೀರ್ವರ ಭವಿತವ್ಯವನ್ನು ಶ್ರೀಕೃಷ್ಣನ ಕೈಯಲ್ಲಿರಿಸಿದ್ದಾನೆ. ಮಾನವರಲ್ಲಿಯ ಮೂಲಭೂತವಾದ ಅಂತಸ್ಸತ್ವ ಮತ್ತು ಬಾಹ್ಯಲೋಭಗಳ ಹೋರಾಟವನ್ನು ಭಾರತೀಯ ಸಮಾಜ, ಸಂಸ್ಕೃತಿ, ತತ್ವಜ್ಞಾನಗಳ ಆವರಣದಲ್ಲಿ ಚಿತ್ರಿಸಿದ್ದಾನೆ. ಮಹಾಭಾರತವೊಂದು ಮುದಿ ಹೆಂಡಂದಿರ ಕಥೆಯೆಂದು (Old wives story) ನಮ್ಮ ವಿದ್ವಾಂಸರು ಭಾವಿಸಿದ್ದಾರೆ ಎಂದು ಅರವಿಂದರು ನೊಂದುಕೊಂಡು ಹೇಳಿದ್ದು ಎಷ್ಟೊಂದು ನಿಜವಾಗಿದೆ.

ಧರ್ಮೇ ಚ ಅರ್ಥೇ ಚ ಕಾಮೇ ಚ ಮೋಕ್ಷೇ ಚ
ಭರತರ್ಷಭ ।
ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ
ತತ್ ಕ್ವಚಿತ್ ॥

ಮಾನವನ ಲೌಕಿಕ, ನೈತಿಕ ಮತ್ತು ಆಧ್ಯಾತ್ಮಿಕ ಜೀವನಕ್ಕೆ ಪೋಷಕವಾದದ್ದೆಲ್ಲವೂ ಇದರಲ್ಲಿದೆ. ಇಲ್ಲಿಲ್ಲದ್ದು ಬೇರೆಲ್ಲಿಯೂ ಇಲ್ಲ ಎಂಬ ಮಾತಿನ ಮರ್ಮವನ್ನು ಅರಿತರೆ ಈ ಮಹಾಗ್ರಂಥದ ನಿಜವಾದ ಸ್ವರೂಪವು ಸ್ಪಷ್ಟವಾಗುವದು.

ಆಧಾರ ಗ್ರಂಥಗಳು

1. C. Lassen : Indische Alterthumskunde
2. A. Weber : Indische Studien
3. Max Muller ; History of Ancient Sanskrit Literature.
4. Sorensen : Index to the names of Mahabharata. VR-Text.
5. Ludwig : Uber die Mythische Grundlage dem Mahabharata.
6. Holtzman : Das Mahabharata und seine Teile.
7. Macdonell : A history of Sanskrit literature.
8. Hopkins : The Great Epics of India.
9. Winternitz : A. History of Indian literature.
10. C. V. Vaidya : The Mahabharata a Criticism.
11. Dalhman : Das Mahabharata als Epos und Rechtsbuch.
12. Sri Aurobindo : Vyasa and Valmiki.
13. Sukthankar : on the Meaning of Mahabharata.

ವಿಜ್ಞಾನದ ಮಿತಿ

ಲೇಖಕರು: ಶ್ರೀ ಬಿ. ವ್ಹಿ. ಸುಬ್ಬರಾಯಪ್ಪ
ಕೇಂದ್ರ ಆಹಾರ ವಿಜ್ಞಾನ ಸಂಶೋಧನ ಸಂಸ್ಥೆ ಮೈಸೂರು

ವಿಜ್ಞಾನಕ್ಕೆ ಮಿತಿ ಇದೆ; ಅದರ ಸ್ವರೂಪವೇ ಅಂತಹದು. ಮನುಷ್ಯನ ವ್ಯಕ್ತಿತ್ವವನ್ನು ಉತ್ತಮಗೊಳಿಸಲು ಅದಕ್ಕೆ ಸಾಧ್ಯವಾಗಿಲ್ಲ. ಇಂದಿನ ವೈಜ್ಞಾನಿಕ ಯುಗದಲ್ಲಿ ಇದು ಹೆಚ್ಚು ಹೆಚ್ಚಾಗಿ ಬೆಳಕಿಗೆ ಬರುತ್ತಿದೆ. ಇದನ್ನು ಅರಿತು ವ್ಯಕ್ತಿಯು ಏಕೆ, ಹೇಗೆ ಸುಸಂಸ್ಕೃತನಾಗಬೇಕು, ಈ ವಿಜ್ಞಾನ ಪ್ರಪಂಚದಲ್ಲಿ – ಎಂಬುದನ್ನು ಈ ಲೇಖನವು ವಿಮರ್ಶಿಸುತ್ತದೆ.

ಇದು ವಿಜ್ಞಾನ ಪ್ರಪಂಚ. ವಿಜ್ಞಾನವು ಜನರ ಜೀವನವನ್ನು ನಾನಾ ರೀತಿಗಳಲ್ಲಿ ಸುಧಾರಿಸಿದೆ, ಸುಧಾರಿಸುತ್ತಿದೆ. ವಿಜ್ಞಾನಕ್ಕೆ ಸಂಬಂಧಿಸಿದ ತಂತ್ರಜ್ಞಾನವು (ಟೆಕ್ನಾಲಜಿ) ಕಳೆದ ನೂರು-ನೂರೈವತ್ತು ವರ್ಷಗಳಲ್ಲಿ ಬೆಳೆದು ಈಗ ಬೃಹದಾಕಾರವನ್ನು ತಾಳಿದೆ. ಇದರಿಂದ ತನ್ನ ಇಚ್ಛೆಯನ್ನು ನಿಯೋಜಿತ ರೀತಿಯಲ್ಲಿ ನಡೆಸಿಕೊಳ್ಳಲು ಮನುಷ್ಯನಿಗೆ ಸಾಧ್ಯವಾಗಿದೆ. ಹೊಸ ಹೊಸ ಸಾಹಸೋದ್ಯಮಗಳಲ್ಲಿ ತೊಡಗಲು ಅವಕಾಶವಾಗಿದೆ; ಬೇರೆ ಬೇರೆ ಲೋಕಗಳನ್ನು ನೋಡಬೇಕೆಂಬ ಬಯಕೆ ಪೂರಯಿಸುವ ಕಾಲ ಸನ್ನಿಹಿತವಾಗುತ್ತಿದೆ. ವಿಜ್ಞಾನದ ಮಹತ್ವ ಅಷ್ಟರಮಟ್ಟಿಗೆ ಅಭ್ಯುದಯದಲ್ಲಿದೆ.

ಹೀಗಿರುವಲ್ಲಿ ವಿಜ್ಞಾನಕ್ಕೆ ಮಿತಿ ಇದೆ, ಆ ಮಿತಿಯನ್ನು ನಾವು ತಿಳಿದುಕೊಳ್ಳಬೇಕು ಎಂದು ಯೋಚಿಸುವುದು ಹಾಸ್ಯಾಸ್ಪದ ಎಂದು ಅನೇಕರಿಗೆ ಅನಿಸಬಹುದು. ವಿಜ್ಞಾನವನ್ನು ಒಂದು ದೃಷ್ಟಿಯಿಂದ, ಮೇಲೆ ಮೇಲೆ ಮಾತ್ರ ನೋಡುವವರಿಗೆ ಈ ಭಾವನೆಯುಂಟಾಗಬಹುದು. ಆದರೆ ಸ್ವಲ್ಪಸೂಕ್ಷ್ಮವಾಗಿ ಆಲೋಚಿಸಿದರೆ, .ಇಂದಿನ ಜೀವನವೈಖರಿಯಲ್ಲಿ ವಿಜ್ಞಾನಕ್ಕೆ ಮಿತಿ ಇರುವುದು ಎದ್ದು ಕಾಣುತ್ತದೆ.

ವಿಜ್ಞಾನ ಎಂದಕೂಡಲೇ, ರೇಡಿಯೋ, ಏರೋಪ್ಲೇನ್, ರಾಕೆಟ್, ಆಕಾಶಯಾನ ಸಾಧನಗಳು ದೊಡ್ಡ ದೊಡ್ಡ ಕಾರ್ಖಾನೆಗಳು, ನಾನಾರೀತಿಯ ಯಂತ್ರಗಳು, ಹೊಸ ಹೊಸ ನಮೂನೆಯ ವಸ್ತುಗಳು, ಸೌಕರ್ಯ ಸೌಲಭ್ಯಗಳು ಎಂದು ನಾವು ಸಾಮಾನ್ಯವಾಗಿ ಭಾವಿಸಿಕೊಳ್ಳುತ್ತೇವೆ. ವಿಜ್ಞಾನ ಪ್ರಪಂಚವೆಂದರೆ, ಇವೆಲ್ಲವೂ ಇರುವ ಪ್ರಪಂಚ, ಇವುಗಳಿಂದ ಜೀವನ ವ್ಯವಹಾರವು ಹಸನಾಗುತ್ತಿರುವ ಪ್ರಪಂಚ ಎಂದು ತಿಳಿದುಕೊಂಡಿದ್ದೇವೆ. ಈ ತಿಳಿವಳಿಕೆ ತಪ್ಪು ಎನ್ನುವುದಕ್ಕಾದೀತೆ? ಆದರೆ ಇದು ಸಂಪೂರ್ಣವಾಗಿ ನಿಜ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ವಿಜ್ಞಾನದ ಸ್ವರೂಪ ಇಷ್ಟು ಮಾತ್ರವಲ್ಲ.

ವಿಜ್ಞಾನದ ಸ್ವರೂಪ

ಇಂದಿನ ಯಂತ್ರಸಾನ್ನಿಧ್ಯ ಜೀವನದಲ್ಲಿ, ವಿಜ್ಞಾನವು ಒಂದು ಜ್ಞಾನ ಎಂಬುದನ್ನು ನಾವು ಮರೆಯಬಾರದು, ಆ ಜ್ಞಾನದ ಸ್ವರೂಪವನ್ನು ತಿಳಿಯಲು ಪ್ರಯತ್ನಿಸದಿರಬಾರದು. ಜ್ಞಾನಕ್ಕೆ ಎರಡು ಮುಖಗಳಿವೆ: ಒಂದು, ತನ್ನನ್ನು ತಾನು ಸಂಪೂರ್ಣವಾಗಿ ತಿಳಿದುಕೊಂಡು ಅನುಭವಿಸುವುದು - ಇದು ಆತ್ಮಜ್ಞಾನ. ಎರಡನೆಯದು, ತನ್ನ ಸುತ್ತಲಿರುವುದನ್ನು ಹಾಗೂ ತನಗೆ ಸಂಬಂಧಿಸಿದ ಕೆಲವು ವಸ್ತು ವಿಷಯಗಳನ್ನು ತಿಳಿದುಕೊಳ್ಳುವುದು, ವಿಜ್ಞಾನ. ಶರೀರದಲ್ಲಿ ನಡೆಯುತ್ತಿರುವ ಸ್ಥೂಲಕಾರ್ಯಗಳು, ಸುತ್ತಲೂ ಇರುವ ಜೀವ, ನಿರ್ಜೀವ ವಸ್ತುಗಳು-ಇವುಗಳ ಅನುಭವ ಜಾನವೇ ವಿಜ್ಞಾನ.

ವಸ್ತುಗಳ ಅನುಭವವಾಗುವುದು ನಮಗೆ ಇಂದ್ರಿಯಗಳ ಮೂಲಕ. ಆದುದರಿಂದ ವಿಜ್ಞಾನವು ನಮ್ಮ ಪಂಚೇಂದ್ರಿಯಗಳ ಜ್ಞಾನಕ್ಕೆ ಮಾತ್ರಸಂಬಂಧಿಸಿದೆ ಎಂದು ಹೇಳದೆ ವಿಧಿ ಇಲ್ಲ. ಅನೇಕ ವೇಳೆ ಇಂದ್ರಿಯಗಳು ವಸ್ತುಗಳ ಸ್ಥೂಲಸ್ವರೂಪವನ್ನು ಮಾತ್ರ ನಮಗೆ ತಿಳಿಸಿಕೊಡುತ್ತವೆ. ಅವುಗಳ ಒಳ ವಿಷಯಗಳನ್ನು ಅರಿಯಲು ವಿಜ್ಞಾನವು ನಾನಾ ಬಗೆಯ ಯಂತ್ರಗಳನ್ನು, ಸಾಧನಗಳನ್ನು ರಚಿಸಿಕೊಂಡಿದೆ. ಬಹುಸೂಕ್ಷ್ಮವಾದ ದೃಷ್ಟಿ ಸಾಧನಗಳು, ಶ್ರವಣಸಾಧನಗಳು, ಸ್ಪರ್ಶ ಸಾಧನಗಳ ಸಹಾಯದಿಂದ ಇಂದ್ರಿಯಗಳು ಪ್ರಕೃತಿಯ ಸ್ವರೂಪವನ್ನು ಹೆಚ್ಚುಹೆಚ್ಚಾಗಿ ತಿಳಿಸಿಕೊಡಲು ಸಾಧ್ಯವಾಗಿದೆ. ದೂರದರ್ಶಕ ಯಂತ್ರ, ಸೂಕ್ಷ್ಮದರ್ಶಕಯಂತ್ರ, ರೇಡಿಯೋ, ರಾಡಾರ್, ಟೆಲಿವಿಜನ್, ಮುಂತಾದ ಇಂದು ಸರ್ವೇಸಾಮಾನ್ಯವಾಗಿರುವ ಯಂತ್ರಗಳು ಇವುಗಳಿಗೆ ಉದಾಹರಣೆಗಳು. ಹೀಗೆ ಇಂದ್ರಿಯಗಳ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ವಿಜ್ಞಾನವು ಸೂಕ್ಷ್ಮರೀತಿಯಲ್ಲಿ ಮುಂದುವರಿಯಲು ಸಾಧ್ಯವಾಗಿದೆ.

ಘ್ರಾಣೇಂದ್ರಿಯದ ಸಾಮರ್ಥ್ಯ

ಆದರೆ ನಮ್ಮ ಒಂದು ಇಂದ್ರಿಯದ ಸಾಮರ್ಥ್ಯವನ್ನು ಹೆಚ್ಚಿಸಲು ವಿಜ್ಞಾನಕ್ಕೆ ಇದುವರೆವಿಗೂ ಸಾಧ್ಯವಾಗಿಲ್ಲ ಎಂದರೆ ಆಶ್ಚರ್ಯವಾಗಬಹುದು. ಮೂಗು ವಾಸನೆಯನ್ನು ಬಹು ಬೇಗ ಪತ್ತೆ ಹಚ್ಚುತ್ತದೆ. ಸುವಾಸನೆ ಇಲ್ಲವೆ ದುರ್ವಾಸನೆಯನ್ನುಂಟು ಮಾಡುವ ವಸ್ತು ಎಷ್ಟೇ ಅಲ್ಪಪ್ರಮಾಣದಲ್ಲಿದ್ದರೂ ಅದನ್ನು ವಿಶಿಷ್ಟವಾಗಿ ಕಂಡುಹಿಡಿಯುತ್ತದೆ. ಅಂತಹ ಸೂಕ್ಷ್ಮ ಅನುಭವವನ್ನು ಮೂಗು ನಮಗೆ ಉಂಟುಮಾಡಿಕೊಡುತ್ತದೆ. ನಾಯಿಯ ಮೂಗಿನಲ್ಲಿ ಈ ಸೂಕ್ಷ್ಮಾನುಭವವು ಅತ್ಯಂತಹೆಚ್ಚಿನ ಮಟ್ಟದಲ್ಲಿರುತ್ತದೆ. ಪ್ರಪಂಚದ ಯಾವ ಪ್ರಯೋಗಶಾಲೆಯಲ್ಲಿಯೂ ನಾಯಿಯ ಮೂಗಿನಂತಹ ಒಂದು ಸೂಕ್ಷ್ಮ ಯಂತ್ರವನ್ನು ರಚಿಸಲು ಸಾಧ್ಯವಾಗಿಲ್ಲ. ಕಳ್ಳರನ್ನು ಪತ್ತೆಮಾಡಲು 'ಪೋಲಿಸ್ ನಾಯಿ'ಯ ಬಳಕೆಯನ್ನು ತಪ್ಪಿಸಲು ಸದ್ಯದಲ್ಲಿ ಬಹುಶಃ ಆಗಲಾರದು. ಪ್ರಕೃತಿಯ ಈ ಗುಟ್ಟನ್ನು ಬಯಲು ಮಾಡಲು ವಿಜ್ಞಾನವು ಇನ್ನೂ ಬಹು ಶ್ರಮಪಡಬೇಕಾಗಿದೆ.

ಇದು ಹೇಗಾದರೂ ಇರಲಿ. ವಿಜ್ಞಾನವು ಈಗಾಗಲೇ ಪ್ರಕೃತಿಯ ಅನೇಕ ರಹಸ್ಯಗಳನ್ನು ತಿಳಿದುಕೊಂಡಿದೆ. ಇವುಗಳಿಂದ ಮನುಷ್ಯನಿಗೆ ಪ್ರಕೃತಿವಿಶೇಷಗಳ ಮೇಲೆ ಹತೋಟಿ, ಕೆಲವು ವೇಳೆ ಯಜಮಾನತ್ವವು ಸಹ, ಲಭಿಸಿದೆ.

ಮನುಷ್ಯನ ಸಹಜಪ್ರವೃತ್ತಿ

ಈಗ ಒಂದು ಪ್ರಶ್ನೆ: ಮನುಷ್ಯ ಪ್ರಕೃತಿಯ ರಹಸ್ಯಗಳನ್ನು ಏಕೆ ತಿಳಿದುಕೊಳ್ಳಲು ಪ್ರಯತ್ನಿಸಬೇಕು; ಪ್ರಕೃತಿಯ ಮೇಲೆ ಹತೋಟಿ ಇಟ್ಟುಕೊಳ್ಳಲು ಏಕೆ ಹವಣಿಸಬೇಕು? ಈ ಪ್ರಶ್ನೆ ಮನುಷ್ಯನ ಮಾನಸಿಕ ರಚನೆಗೆ ಸಂಬಂಧಿಸಿದುದು. ಅವನಿಗೆ ಒಂದು ಸಹಜಪ್ರವೃತ್ತಿ ಇದೆ. ಸುತ್ತಲಿನ ಸನ್ನಿವೇಶ ತನ್ನ ಇಷ್ಟಾನುಸಾರವಾಗಿರಬೇಕು; ಹೆಚ್ಚು ಹೆಚ್ಚು ಶಕ್ತಿಯುತನಾಗಬೇಕು ಎನ್ನುವುದೇ ಈ ಸಹಜಪ್ರವೃತ್ತಿ. ಈ ಪ್ರವೃತ್ತಿಯ ಕಾರಣದಿಂದಲೇ, ಮನುಷ್ಯನ ಚರಿತ್ರೆಯಲ್ಲಿ ಶಕ್ತಿಪ್ರದರ್ಶನ, ಶಕ್ತಿಪೂಜೆ, ಶಕ್ತಿಮೂಲಗಳನ್ನು ಹುಡುಕಿಕೊಂಡು ಹೋಗುವುದು — ಇವುಗಳನ್ನು ನಾವು ಕಾಣುತ್ತೇವೆ. ವಿಜ್ಞಾನವು ಸಹ ಅವನ ಈ ಸಹಜಪ್ರವೃತ್ತಿಗೆ ಪೋಷಕವಾಗಿ ಬೆಳೆದುಕೊಂಡು ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ

ಮಾತನ್ನು ಇಂದಿನ ವಿಜ್ಞಾನಿಗಳು, ರಾಜಕಾರಣಿಗಳು ಮತ್ತು ಸಮಾಜಧುರೀಣರು ಬಹುಶಃ ಒಪ್ಪಲಾರರು. ಆದರೆ ವಿಜ್ಞಾನದ ಚರಿತ್ರೆಯನ್ನು ಒಂದು ಹೊಸ ದೃಷ್ಟಿಯಿಂದ, ಕೇವಲ ಚಾರಿತ್ರಿಕ ಘಟನೆಗಳನ್ನು ಮಾತ್ರ ಪರಿಗಣಿಸದೆ, ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಮಾತಿನ ಸತ್ಯಾಂಶವು ಬಯಲಾಗುತ್ತದೆ.

ವಿಜ್ಞಾನದ ಚರಿತ್ರೆಯ ಪ್ರಕಾರ ಮನುಷ್ಯನ ಶಕ್ತಿಮೂಲಗಳ ಅನ್ವೇಷಣೆಯನ್ನು ಮುಖ್ಯವಾಗಿ ಈ ರೀತಿ ತಿಳಿಸಬಹುದು. ಚಲಿಸುವ ಅಥವಾ ಬೀಸುವ ಗಾಳಿಯಿಂದ ಶಕ್ತಿಯನ್ನು ಪಡೆದಿದ್ದು, ನೀರಿನ ಹಬೆಯ ಶಕ್ತಿ; ಜಲಪಾತದಿಂದ ಪಡೆದ ಶಕ್ತಿ ಅಥವಾ ವಿದ್ಯುಚ್ಛಕ್ತಿ, ಇದ್ದಿಲು, ಕಲ್ಲಿದ್ದಲಿನಿಂದ ಒದಗಿಬಂದ ಶಕ್ತಿ; ಪೆಟ್ರೋಲಿಯ ಎಣ್ಣೆಗಳ ದಹನದಿಂದುಂಟಾಗುವ ಶಕ್ತಿ ಮತ್ತು ಈಗ ಕೆಲವು ವಿಶೇಷ ಬಗೆಯ ಪರಮಾಣುಗಳಿಂದ ಪಡೆಯುತ್ತಿರುವ ಶಕ್ತಿ. ಜೀವನವು ಉತ್ತಮ ಮಟ್ಟದಲ್ಲಿರಲು ಈ ಶಕ್ತಿಗಳೆಲ್ಲ ಉಪಯೋಗವಾಗುವಂತೆ ಅವನು ಅನೇಕ ಸಾಧನಗಳನ್ನು ನಿರ್ಮಿಸಿಕೊಂಡಿದ್ದಾನೆ. ಈ ಸಾಧನೆಗಳೆಲ್ಲ ಅವನ ನಿಶ್ಚಯಕ್ಕೆ ತಕ್ಕಂತೆ ಕೆಲಸ ಮಾಡುತ್ತಿವೆ.

ಒಂದು ದೃಷ್ಟಿಯಲ್ಲಿ ಮನುಷ್ಯನು ಇಂದು ಬಹಳ ಪ್ರಬಲನಾಗಿದ್ದಾನೆ. ಅನೇಕ ಸೌಕರ್ಯ ಸೌಲಭ್ಯಗಳನ್ನು ಉತ್ಪನ್ನ ಮಾಡಿಕೊಳ್ಳುವಷ್ಟರ ಮಟ್ಟಿಗೆ ಶಕ್ತಿಯುತನಾಗಿದ್ದಾನೆ. ವಿಜ್ಞಾನದ ಫಲವಾಗಿ ಹೊಸ ರೀತಿಯ ಜೀವನ, ಹೊಸ ರೀತಿಯ ವ್ಯವಹಾರ, ನಾನಾ ಆಸೆ, ಆಕಾಂಕ್ಷೆಗಳ ಪೂರೈಕೆ—ಇವೆಲ್ಲ ಸಾಧ್ಯವಾಗಿವೆ.

ವಿಜ್ಞಾನವು ಕಳೆದ ಸುಮಾರು ಇನ್ನೂರು ವರ್ಷಗಳಲ್ಲಿ ಬಹು ಪರಿಣಾಮಕಾರಿಯಾದ ಕೆಲಸವೊಂದನ್ನು ಮಾಡುತ್ತ ಬಂದಿದೆ; ಕ್ರಮೇಣ, ಸಮಾಜವನ್ನೇ ಗೊತ್ತುಗುರಿಯಿಲ್ಲದಂತೆ ಪರಿವರ್ತನೆ ಮಾಡುತ್ತಾ ಬಂದಿದೆ. ಯಾವೊಂದು ಮತವಾಗಲಿ, ರಾಜಕೀಯ ಗೊಂದಲ ಅಥವಾ ಕ್ರಾಂತಿಯಾಗಲಿ, ಘೋರ ಯುದ್ಧಗಳಾಗಲಿ ವಿಜ್ಞಾನವು ಮಾಡಿರುವಷ್ಟು ಮಟ್ಟಿಗೆ ಸಮಾಜವನ್ನು ಬದಲಾಯಿಸಿಲ್ಲ. ವಿಜ್ಞಾನದಿಂದ ಕೆಲವು ದೇಶಗಳಲ್ಲಿ ಇಡಿ ಸಮಾಜದ ಸ್ವರೂಪವೇ ಬದಲಾಯಿಸಿದೆ. ಬಹುಶಃ ನಮ್ಮ ಪೂರ್ವಿಕರು ಇನ್ನು ಮುಂದೆ ಹೀಗಾಗುವುದೆಂದು ಊಹಿಸಿದ್ದಿರಲಾರರು! ಊಟ, ಉಡಿಗೆ, ವಾಸ, ವ್ಯವಹಾರ, ಪ್ರಯಾಣ, ಅಭಿಪ್ರಾಯ ವಾಹನಗಳು, ರೋಗಗಳನ್ನು ಗುಣಪಡಿಸುವುದು—ಇವೇ ಮೊದಲಾದವುಗಳಲ್ಲಿ ಅಸಾಧಾರಣ ಬದಲಾವಣೆಗಳು ಉಂಟಾಗಿವೆ. ಇವೆಲ್ಲಕ್ಕೂ ವಿಜ್ಞಾನ ಮತ್ತು ತಂತ್ರಜ್ಞಾನಗಳೇ ಮುಖ್ಯ ಕಾರಣ.

ವಿಜ್ಞಾನದ ಮಿತಿ

ನಿತ್ಯ ಜೀವನದಲ್ಲಿ ಇಷ್ಟೆಲ್ಲ ಮಹತ್ತರ ಬದಲಾವಣೆಗಳುಂಟಾಗುತ್ತಿದ್ದರೂ ಒಂದು ಕೊರತೆಯಿಂದ ಮನುಷ್ಯನು ಇನ್ನೂ ಪೇಚಾಟದಲ್ಲಿದ್ದಾನೆ. ವಿಜ್ಞಾನವು ಸಮಾಜ ಜೀವನದಲ್ಲಿ ಹೊಂದಿಕೊಂಡು ಪರಿಣಾಮಗಳನ್ನುಂಟು ಮಾಡುವುದಕ್ಕೆ ಮುಂಚಿತವಾಗಿದ್ದ ಪೇಚಾಟದಲ್ಲಿಯೇ ಅವನು ಇನ್ನೂ ಸಿಕ್ಕಿಕೊಂಡು ತೊಳಲುತ್ತಿದ್ದಾನೆ. ವಿಜ್ಞಾನ ಪ್ರಪಂಚದಲ್ಲಿ ಪ್ರಕೃತಿಯ ಪ್ರಕೋಪ-ಮಳೆ, ಬಿರುಗಾಳಿ, ಪ್ರವಾಹಗಳು—ರೋಗರುಜಿಗಳು, ದುಷ್ಟಪ್ರಾಣಿಗಳು ಮುಂತಾದವುಗಳಿಗೆ ಹೆದರದೆ ಇರುವ ಮನುಷ್ಯನು ಅವುಗಳನ್ನು ಎದುರಿಸಲು ಸಾಕಷ್ಟು ಶಕ್ತಿ ಹಾಗೂ ಸಾಧನಗಳನ್ನು ಸಂಪಾದಿಸಿಕೊಂಡಿರುವ ಮನುಷ್ಯನು ಇಂದು ಇನ್ನೂ ಭಯಗ್ರಸ್ತನಾಗಿದ್ದಾನೆ. ಇನ್ನೊಬ್ಬನನ್ನು ಕಂಡರೆ ಭಯಪಡುತ್ತಾನೆ, ಸಂಶಯವನ್ನು ವ್ಯಕ್ತಪಡಿಸುತ್ತಾನೆ. ಎಂದ ಮೇಲೆ, ವಿಜ್ಞಾನದಿಂದ ಅಸಾಧಾರಣವಾದವುಗಳು ದೊರೆತಿದ್ದರೂ ಅವನು ಭಯವಿಮುಕ್ತನಾಗಿಲ್ಲ. ಇದೇ ವಿಜ್ಞಾನದ ಮಿತಿ. ಮನುಷ್ಯನ ನೆಮ್ಮದಿ ಸ್ಥಿತಿಗೆ ಭಂಗವನ್ನುಂಟು ಮಾಡುವ ಭಯದಿಂದ ಅವನನ್ನು ಪಾರುಮಾಡಲು ವಿಜ್ಞಾನಕ್ಕೆ ಸಾಧ್ಯವಾಗಿಲ್ಲ; ಬಹುಶಃ ಸಾಧ್ಯ

ವಾಗಲಾರದು!: ಎಂದು ಸದ್ಯದಲ್ಲಿ ಹೇಳಲೂ ಬಹುದು.

ಈ ಪ್ರಪಂಚದ ಎಲ್ಲ ದೇಶಗಳೂ ತಮ್ಮ ಅಭ್ಯುದಯಕ್ಕಾಗಿ ವಿಜ್ಞಾನ ಮತ್ತು ತಂತ್ರ ಜ್ಞಾನಗಳನ್ನೇ ಮರೆಹೊಕ್ಕಿವೆ. ಅವುಗಳ ಬೆಳವಣಿಗೆಗಾಗಿ ಎಲ್ಲ ಸರಕಾರಗಳೂ ಕಂಕಣಬದ್ಧವಾಗಿ ಕೆಲಸ ಮಾಡುತ್ತವೆ. ಆದರೆ ಈಗ ಒಬ್ಬ-ಇನ್ನೊಬ್ಬ, ಒಂದು ಗುಂಪಿನ ಜನ-ಇನ್ನೊಂದು ಗುಂಪಿನ ಜನ, ಒಂದು ದೇಶ-ಇನ್ನೊಂದು ದೇಶ, ಹಲವು ದೇಶಗಳು-ಮತ್ತೆ ಕೆಲವು ದೇಶಗಳು—ಇವುಗಳಲ್ಲಿ ಪರಸ್ಪರ ಭಯಮಿಶ್ರ ಶಂಕೆಗಳನ್ನು ನಾವು ಕಾಣುತ್ತಿದ್ದೇವೆಯೋ ಹೊರತು ವಿಜ್ಞಾನವು ಅನುಗೊಳಿಸಿರುವ ಒಂದು ಹೊಸ ಪ್ರಪಂಚವನ್ನೇ ಅಲ್ಲ, ವಿಜ್ಞಾನಕ್ಕೆ ಇರುವ ಮಿತಿಯೇ ಇದಕ್ಕೆ ಕಾರಣ.

ವಿಜ್ಞಾನಕ್ಕೆ ಒಂದು ಎಲ್ಲೆ ಕಟ್ಟು ಇದೆ. ಅನುಭವವಾಗುವ ಜ್ಞಾನದ ಪರಿಧಿಯನ್ನು ಮೀರಿ ವ್ಯಾಪಿಸಿಕೊಳ್ಳಲು ವಿಜ್ಞಾನವು ಇಷ್ಟಪಡುವುದಿಲ್ಲ, ಅಂತಹ ಸ್ಥಿತಿಯಲ್ಲಿ ಅಸಂಗತ ಕಾರ್ಯ, ಕಾರಣಗಳಿಗನುಸಾರವಾಗಿರುವುದಿಲ್ಲ ಎಂದು ವಿಜ್ಞಾನದ ಶಂಕೆ. ವಿಜ್ಞಾನದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವಾಗ ಈ ಶಂಕೆ ಹಾಗೂ ಮೇಲೆ ತಿಳಿಸಿದ ಮಿತಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ವ್ಯಕ್ತಿತ್ವದ ಅಧಃಪತನ

ಮನುಷ್ಯ ಸಂಘಜೀವಿ, ಸಮಾಜಶಿಶು ಎಂದು ಶಾಸ್ತ್ರಜ್ಞರು ಕರೆಯುವದುಂಟು. ಏಕೆಂದರೆ, ತನ್ನಂತಿರುವ ಇತರರೊಡನೆ ಸೇರುವುದು, ಸಮೂಹಗಳನ್ನುಂಟುಮಾಡಿಕೊಳ್ಳುವುದು, ಸಮಾಜವನ್ನು ಕಟ್ಟುವುದು, ಸಾಮಾಜಿಕ ವ್ಯವಹಾರಗಳನ್ನು ನಡೆಸಲು ಅವಕಾಶಗಳನ್ನು ಮಾಡಿಕೊಳ್ಳುವುದು ಅವನ ಹುಟ್ಟುಗುಣವೆಂದು ಭಾವಿಸಲಾಗಿದೆ. ಆದರೆ, ಸಮೂಹದಲ್ಲಿ ಇದ್ದುಕೊಂಡೇ ವ್ಯಕ್ತಿಯಾಗಿ, ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದೂ ಅವನ ವೈಶಿಷ್ಟ್ಯಗಳಲ್ಲಿ ಒಂದಾಗಿದೆ. ವ್ಯಕ್ತಿತ್ವ ಸುಸಂಸ್ಕೃತವಾದಷ್ಟೂ ಸಮೂಹಕ್ಕೂ ವ್ಯಕ್ತಿಗೂ ಘರ್ಷಣೆ ಕಡಿಮೆ.

ವ್ಯಕ್ತಿಯು ವ್ಯಕ್ತಿತ್ವವನ್ನು ಸಂಸ್ಕರಿಸಿ, ಅದು ಉದಾತ್ತವಾಗುವಂತೆ ಮಾಡಲು ವಿಜ್ಞಾನಕ್ಕೆ —ಮಿತಿ ಇರುವ, ಶಂಕೆ ಇರುವ ಈ ಜ್ಞಾನಕ್ಕೆ — ಸಾಧ್ಯವೇ? ಅದು ಹೇಗೆ ಸಾಧ್ಯವಾದೀತು? ಈ ಒಂದು ಅಂಶವು ಇಂದಿನ ವಿಜ್ಞಾನಪ್ರಪಂಚದಲ್ಲಿ ಒಂದು ಸಮಸ್ಯೆಯಾಗಿದೆ. ಇದೇ ಪರಿಸ್ಥಿತಿಯಲ್ಲಿ ಪ್ರಪಂಚವು ಮುಂದುವರಿಯುವುದಾದಲ್ಲಿ, ಈ ಸಮಸ್ಯೆಯು ಜಟಿಲವಾಗಿ ಪರಿಣಮಿಸಬಹುದು; ವ್ಯಕ್ತಿಯು ವ್ಯಕ್ತಿತ್ವದ ಅಧಃಪತನವಾಗಬಹುದು. ಈ ಸೂಚನೆಯು ವಿಜ್ಞಾನ ಕ್ಷೇತ್ರದಲ್ಲಿ ಮುಂದುವರಿದಿರುವ ಹಾಗೂ ವಿಜ್ಞಾನದಿಂದಲೇ ಬಹುಮಟ್ಟಿಗೆ ಜೀವನವನ್ನು ರೂಪಿಸಿಕೊಂಡಿರುವ ಅಮೆರಿಕಾ ದೇಶದಲ್ಲಿ ಆಗಲೇ ಕಾಣಬರುತ್ತಿದೆ. ಕೆಲವು ದಿವಸಗಳ ಹಿಂದೆ, ಅಮೆರಿಕಾದ ಅಧ್ಯಕ್ಷ ಕೆನೆಡಿಯವರು ಆ ದೇಶದಲ್ಲಿ ಗೋಚರವಾಗುತ್ತಿರುವ ಮಾನಸಿಕ ಅಧಃಪತನದ ಬಗೆಗೆ ಸಂಶೋಧನೆಗಳನ್ನು ನಡೆಸಬೇಕೆಂದು ಒಂದು ಆಜ್ಞೆಯನ್ನು ಹೊರಡಿಸಿದರು. ಇಂದಿನ ವೈಜ್ಞಾನಿಕ ಯುಗದಲ್ಲಿ, ಇದು ಅಪೂರ್ವವಾದ, ಅಸಾಧಾರಣವಾದ, ಆದರೆ ಅನಿರೀಕ್ಷಿತವಲ್ಲದ ಕಾರ್ಯಕ್ರಮವೇ ಸರಿ. ವಿಜ್ಞಾನದ ಮಿತಿಯನ್ನು ಅರಿತಿರುವವರಿಗೆ ಇದು ಅನಿರೀಕ್ಷಿತವಲ್ಲ; ಆದರೆ ತಂತ್ರಜ್ಞಾನಕ್ಕೇ ಶರಣುಹೋಗಿರುವ ದೇಶವೇ ಮೊತ್ತಮೊದಲು ಈ ಮಹತ್ತರ ಪ್ರಯೋಗವನ್ನು ನಡೆಸುತ್ತಿದೆಯೆಲ್ಲಾ ಎನ್ನುವುದು ಅಪೂರ್ವವೇ.

ವೈಯುಕ್ತಿಕ ಜೀವನವು ಪುಷ್ಟವಾದಷ್ಟೂ, ಸಂಸ್ಕೃತವಾದಷ್ಟೂ ಸಮಾಜಜೀವನವು ಉನ್ನತ ಸ್ಥಿತಿಗೆ ಬರಲು ಅವಕಾಶವಾಗುತ್ತದೆ. ಈಗ ಸಮಾಜಜೀವನದ ಕಡೆಗೆ ಹೆಚ್ಚು ಗಮನವನ್ನು ಕೊಡಲ್ಪಾಗುತ್ತಿದೆ. ಆದರೆ, ಅದರ ಅಂಗವಾಗಿರುವ ವೈಯುಕ್ತಿಕಜೀವನವನ್ನು ಮರೆತರೆ ಇಟ್ಟಿಗೆ ಇಲ್ಲದೆ ಮನೆಯನ್ನು ಕಟ್ಟಿದಂತಾಗುವುದಿಲ್ಲವೇ?

ನಮ್ಮ ದೇಶದಲ್ಲಿ ಇಂದು

ಈ ಮಾತು ನಮ್ಮ ದೇಶಕ್ಕೆ ಎಂದಿಗಿಂತಲೂ ಈಗ ಬಹುವಾಗಿ ಅನ್ವಯಿಸುತ್ತದೆ. ಸ್ವಾತಂತ್ರ್ಯ ಬಂದ ಮೇಲೆ, ಆಧುನಿಕವಾಗಿ ಸಮಾಜವನ್ನು ನಿರ್ಮಾಣಮಾಡಬೇಕೆಂದು ಹಗಲಿರುಳೂ ಪ್ರಯತ್ನಗಳು ನಡೆಯುತ್ತಿವೆ. ಆಧುನಿಕವಾಗಿ ಎಂದರೆ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಫಲವಾಗಿ ಒದಗಿಬರುವ ಸೌಲಭ್ಯಗಳನ್ನು ಎಲ್ಲರಿಗೂ ದೊರಕಿಸಿಕೊಡುವುದು ಎಂದರ್ಥ. ಇದನ್ನೇ ನಮ್ಮ ಸರಕಾರಗಳು ಒತ್ತಿಹೇಳುತ್ತಿವೆ; ಈ ದೃಷ್ಟಿಯಿಂದಲೇ ಪಂಚವರ್ಷ ಯೋಜನೆಗಳನ್ನು ರೂಪಿಸುತ್ತಿವೆ. ಈಗಾಗಲೇ ಅನೇಕ ಕೈಗಾರಿಕೆಗಳು, ಕಾರ್ಖಾನೆಗಳು, ವಾಹನವ್ಯವಸ್ಥೆಗಳು, ವಸತಿಸೌಕರ್ಯಗಳು, ಆಹಾರೋತ್ಪಾದನೆ—ಇವೇ ಮೊದಲಾದವು ವೈಜ್ಞಾನಿಕ ರೀತಿಯಲ್ಲಿ ಸಜ್ಜುಗೊಂಡಿವೆ. ಇವು ನಿತ್ಯಜೀವನವನ್ನು ಉತ್ತಮರೀತಿಯಲ್ಲಿ ನಡೆಸುವದಕ್ಕೆ ಸಾಧನಗಳಾದರೂ ವ್ಯಕ್ತಿತ್ವವನ್ನು ಉತ್ತಮಗೊಳಿಸಲು ಸಾಧನಗಳಲ್ಲ ಎಂದು ಒತ್ತಿಹೇಳಬೇಕಾಗಿಲ್ಲ.

ಹಿಂದೆ ನಮ್ಮ ದೇಶದಲ್ಲಿ ವ್ಯಕ್ತಿಯ ಉದ್ಧಾರಕ್ಕೆ ಹೆಚ್ಚು ಗಮನವನ್ನು ಕೊಡಲಾಗುತ್ತಿದ್ದಿತು. ಅದಕ್ಕೆ ತಕ್ಕಂತೆ ತತ್ವಗಳ ನಿರೂಪಣೆಯಾಯಿತು. ಅಂದಿನ ಜೀವನಪರಿಸ್ಥಿತಿಗೆ ಆ ತತ್ವಗಳು ಬಹುಮಟ್ಟಿಗೆ ಹೊಂದಿಕೊಂಡಿದ್ದವು. ಆದರೆ ಅವುಗಳನ್ನು ಇಂದಿನ ಜೀವನಕ್ಕೆ ಹೊಂದಿಸಿಕೊಳ್ಳುವ ಬಗೆಯನ್ನು ಪ್ರತಿಯೊಬ್ಬರೂ ವೈಯುಕ್ತಿಕವಾಗಿ ಕಂಡುಕೊಳ್ಳಬೇಕಾಗಿದೆ.

ಸರಕಾರವು ಸಮಾಜದ ದೃಷ್ಟಿಯಿಂದ ಸೌಕರ್ಯ ಸೌಲಭ್ಯಗಳನ್ನು ವೈಜ್ಞಾನಿಕವಾಗಿ ಒದಗಿಸಿಕೊಡಲು ಪರಿಶ್ರಮ ಪಡುತ್ತಿರುವಾಗ, ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವವನ್ನು ಎತ್ತರದಲ್ಲಿಟ್ಟುಕೊಳ್ಳಲು ಪರ್ಯಾಲೋಚಿಸಬೇಕು. ಅವನು ವಿಜ್ಞಾನಿಯಾಗಿರಲಿ ತಂತ್ರಜ್ಞನಾಗಿರಲಿ—ತನ್ನ ವ್ಯಕ್ತಿತ್ವದ ಹಿರಿಮೆಯ ಕಡೆಗೆ ಮನಸ್ಸನ್ನು ಹರಿಯಬಿಡಲೇಬೇಕು. ಏಕೆಂದರೆ, ತಾನು ಕಲಿತ ವಿಜ್ಞಾನವು ಅಥವಾ ನಿರತನಾಗಿರುವ ತಂತ್ರಶಾಸ್ತ್ರವು ಈ ಮಾರ್ಗದಲ್ಲಿ ಅವನಿಗೆ ಬೆಳಕನ್ನು ತೋರಿಸಿರುವುದಿಲ್ಲ.

ಮನುಷ್ಯಬುದ್ಧಿ ಪ್ರಧಾನನಾದ ಜೀವಿ. ಬುದ್ಧಿಶಕ್ತಿಯಿಂದಲೇ ಅವನು ಪ್ರಕೃತಿಯನ್ನು ತನ್ನ ವಶಮಾಡಿಕೊಳ್ಳಲು ಪ್ರಯತ್ನಿಸಿ, ಸ್ವಲ್ಪಮಟ್ಟಿಗೆ ಜಯಶೀಲನಾಗಿರುವುದು; ಹಲವಾರು ಶಕ್ತಿಮೂಲಗಳನ್ನು ತನ್ನದಾಗಿ ಮಾಡಿಕೊಂಡಿರುವುದು. ಈಗ ಆ ಬುದ್ಧಿಶಕ್ತಿಯನ್ನು ಇನ್ನೊಂದು ಕ್ಷೇತ್ರಕ್ಕೆ ಹರಿಯಬಿಡಬೇಕಾದ ಕಾಲ ಒದಗಿದೆ. ತನ್ನ ವ್ಯಕ್ತಿತ್ವವನ್ನು ಅರ್ಥಮಾಡಿಕೊಂಡು, ಕ್ಷೇತ್ರಜ್ಞನಾಗಿ, ಅದು ವಿಕಾಸಗೊಳ್ಳಲು ಸ್ವಚಿಂತನೆ ಮಾಡಬೇಕಾಗಿದೆ. ಇದಕ್ಕೆ ಸೂಚಕವಾಗಿರುವುದು, ವಿಜ್ಞಾನಪ್ರಪಂಚದ, ವಿಜ್ಞಾನದ ಮಿತಿ.

ಚದುರಂಗವನ್ನು ಕುರಿತು

ಲೇಖಕರು : ಶ್ರೀ ರಾ ಕು.
ಹಾವೇರಿ

ಚದುರಂಗದ ಆಟ ಇಂದು ಕಡಿಮೆಯಾಗಿದೆ. ಅಲ್ಲದೆ ಮೊದಲಿನ ರಾಜಗಾಂಭೀರ್ಯವನ್ನು ಅದು ಉಳಿಸಿಕೊಂಡಿಲ್ಲ. ಅದರ ವಿಶಿಷ್ಟ ಸ್ವರೂಪವೇ ಹೀಗಾಗಲು ಕಾರಣವಾಗಿರುವುದು. ಈ ಆಟಕ್ಕೆ ಕೇವಲ ಬುದ್ಧಿವಂತಿಕೆಯೊಂದಿದ್ದರೆ ಸಾಲದು. ಗಂಟೆಗಟ್ಟಲೆ ಕೂಡುವ ಸೈರಣೆ ಬೇಕು; ಚೆನ್ನಾಗಿ ವ್ಯೂಹರಚಿಸುವ ಮುತ್ಸದ್ದಿತನ ಬೇಕು. ಲೇಖಕರು ಇಲ್ಲಿ ಅದರ ಪೂರ್ವೋತ್ತರಗಳನ್ನು ಒಳ್ಳೆ ಹೃದಯಂಗಮವಾಗಿ ನಿರೂಪಿಸಿದ್ದಾರೆ.

ಯಾರಾದರೂ ಇಬ್ಬರು ಎದುರುಬದುರಾಗಿ ಕುಳಿತು, ಗದ್ದಕ್ಕೆ ಕೈ ಹಚ್ಚಿಕೊಂಡು, ಕೆಳಗಡೆಗೆ ದಿಟ್ಟಿಸಿ ನೋಡುತ್ತ ದೀರ್ಘಕಾಲದವರೆಗೆ ಗಂಭೀರ ಮೌನದಿಂದ ವಿಚಾರಮಗ್ನರಾಗಿ ಉಳಿದಿದ್ದರೆ, ಅವರು ಚದುರಂಗ ಆಡುತ್ತಿದ್ದಾರೆ ಎಂದು ತಿಳಿಯಬೇಕು. ಏಕೆಂದರೆ ಸುಮ್ಮನೆ ಕುಳಿತು ಕಾಯಿ ನೋಡುತ್ತಿರುವುದು ಈ ಆಟದ ಮುಖ್ಯ ಲಕ್ಷಣ. ರಾಜಮ-ಹಾರಾಜರೂ ಮಂತ್ರಿಗಳೂ ಹಿಂದಕ್ಕೆ ಈ ಆಟ ಆಡುತ್ತಿದ್ದರಂತೆ. ಈಗಿನ ಕಾಲದಲ್ಲಿ ಬಹುಶಃ ಮುದುಕರೂ ಮೂಕರೂ ಈ ಆಟವನ್ನು ಚೆನ್ನಾಗಿ ಆಡಬಹುದೆಂದು ತೋರುತ್ತದೆ. ಅಷ್ಟು ಸಹನಶಕ್ತಿಯೂ ಸಮಯಾವಕಾಶವೂ ಸಾಮಾನ್ಯರಿಗೆ ಹೇಗೆ ಸಾಧ್ಯ? ಇದು ಸಾಮಾನ್ಯರ ಆಟವೂ ಅಲ್ಲ. ಅರಸರಲ್ಲದವರ ಆಟಗಳಲ್ಲಿ ಆವೇಶ, ಅಹಂಕಾರ, ಕೂಗಾಟ ಕುಣಿದಾಟಗಳಿರಬಹುದು; ಮೂದಲಿಸಿ, ಮತ್ಸರಿಸಿ ನಕ್ಕು-ನಗಿಸಲೂಬಹುದು; ಎಲ್ಲಕ್ಕೂ ಮಹತ್ವದ ಅಂಶವೆಂದರೆ—ಆಟ ಮುಗಿಯಿತು ಎಂದು ಒಮ್ಮೆ ಅಲ್ಲಿಂದ ಎದ್ದು ಹೋಗಬಹುದು. ರಾಜಪ್ರವೃತ್ತಿಯು ಚದುರಂಗ ವಿಲಾಸದಲ್ಲಿ ಇಂತಹ ಅನಾರ್ಯ ವ್ಯಾಪಾರಕ್ಕೆ ಅವಕಾಶವಿಲ್ಲ, ಪೂರ್ವಕಾಲದ ಜನರು ಅನಂತತೆಯನ್ನು ಕೈಚಾಚಿ ಹಿಡಿಯುವ ಅವಿರತ ಪ್ರಯತ್ನದಲ್ಲಿ ಉಳಿದೆಲ್ಲವನ್ನು ನಿಃಸಾರವೆಂದು ಕಡೆಗಣಿಸಿ ನಿಂತರು; ಅತ್ತಲಿತ್ತ ಹೋಗದಂತೆ ಮೈಯನ್ನೂ ಮನವನ್ನೂ ಕಟ್ಟಿ ನಿಲ್ಲಿಸಿ ತಪಸ್ಸು ಮಾಡಲು ಸಮರ್ಥರಾದರು. ಅಷ್ಟಾವಧಾನಿ- ಶತಾವಧಾನಿಗಳು ಆ ಕಾಲದಲ್ಲಿಯೆ ಕಾಣಿಸಿಕೊಂಡರು. ಅಂತಹ ಪ್ರವೃತ್ತಿಯಿದ್ದುದರಿಂದಲೆ ಅವರು ಚದುರಂಗವನ್ನು ಚೆನ್ನಾಗಿ ಆಡುತ್ತಿದ್ದರು. ಅವರು ಮಾಡಿದಂತೆ ನಾವು ಮಾಡಲಾರೆವು; ಹಾಗೆಯೆ ಅವರು ಆಡಿದಂತೆ ನಾವು ಆಡಲಾರೆವು. ಏಕೆಂದರೆ ಹುರುಡು-ಹುಮ್ಮಸ್ಸುಗಳ ರಭಸದಲ್ಲಿ ಗಡಿಬಿಡಿ ಮಾಡಿ ಸಣ್ಣದೊಂದುಸೋಲನ್ನೊಗೆಲುವನ್ನೊಹೊತ್ತುಕೊಂಡು ಹೋಗುವುದೂ ಆಮೇಲೆ ಅದನ್ನು ಅಷ್ಟಕ್ಕೇ ಮರೆತು ಬಿಡುವುದೂ ನಮಗೆ ರೂಢಿಯಾಗಿದೆ. ಆಟವೆಂಬುದು ಬರಿ ಆಟವಾಗಿ ನಿಂತಿದೆ. ಸಮಗ್ರ ಜೀವನದ ಒಂದು ಅಂಶವೆಂ-ದಾಗಲಿ, ನಮ್ಮ ಅಭಿವ್ಯಕ್ತಿಯ ಒಂದು ರೂಪವೆಂದಾಗಲಿ ಆಟವನ್ನು ನಾವು ಆಡುವುದಿಲ್ಲ.

ಹಾಗಾದರೆ ಈಗ ಚದುರಂಗ ಆಡುವವರಿಲ್ಲವೆ? ಇದ್ದಾರೆ. ನಾವೂ ಆಡುತ್ತೇವೆ. ಆದರೆ ನಮ್ಮ ಆಟ ನಮ್ಮಂತೆಯೆ ಸಾಮಾನ್ಯವಾಗಿದೆ. ಹಿಂದಣ ಧೀರೋದಾತ್ತರ ಗಂಭೀರ ಕ್ರೀಡೆಯಾಗಿ ಅದು ಈಗ ಉಳಿದಿಲ್ಲ. ಈ ಆಟದ ಸ್ವಭಾವವೆ ಹಾಗಿದೆ. ಮುಂಗೋಪಿಗಳನ್ನೂ ಚಂಚಲಚಿತ್ತರನ್ನೂ ಕಂಡರೆ ಅದರ ಕಾಯಿಗಳಿಗೆ ಆಗದು. ಇಂತಹ ಪಾಪಿಗಳು ಕೈಯಿಟ್ಟರೆ ಅವು ಅನುಚಿತವಾಗಿ ನಡೆದು, ಗಡಿಬಿಡಿಯಿಂದ ಹೊಡೆದಾಡಿ, ಪಟಪಟ ಪ್ರಾಣಾರ್ಪಣಮಾಡಿ, ಆಟವನ್ನು "ಗೊಡ್ಡು" ಮಾಡಿಬಿಡುತ್ತವೆ. ಚಂದುರಂಗದ ಕಾಯಿಗಳಲ್ಲಿ ರಜಪೂತ ರಕ್ತ ಕುದಿಯುತ್ತಿದೆ. ಅಪವಿತ್ರರಿಗೆ ತಲೆಬಾಗಿ ಅವರ ಕೈಯಲ್ಲಿ ನಡೆಯುವುದಕ್ಕಿಂತ "ಜೋಹಾರ" ಮಾಡುವುದೆ ಲೇಸೆಂದು ಅವು ನಂಬಿವೆ. "ಹರಾಕಿರಿ" ಅವುಗಳ ಜನ್ಮಸಿದ್ಧಹಕ್ಕು. ಹಾಗಾದರೆ ಕಾಯಿ ಹೊಡೆವುದೆ ಒಂದು ಅಪರಾಧವೊ ಎಂದು ಕೇಳೀರಿ. ಕೊಂದು ಒಗೆಯುವುದಕ್ಕಿಂತ ಜೀವಂತವಾಗಿ ಸೆರೆ ಹಿಡಿವುದು ಜಾಣನ ಹಾದಿ. ಅಮಾತ್ಯ ರಾಕ್ಷಸನನ್ನು ಚಾಣಕ್ಯ ಹೇಗೆ ತನ್ನ ಹಿಡಿತಕ್ಕೆ ಒಳವಡಿಸಿಕೊಂಡನು? ಅದು ಚದುರಂಗ ಪದ್ಧತಿ. ಚೆನ್ನಾಗಿ ಆಡುವವನು ಎದುರಾಳಿಯ ಕಾಯಿ ಕೊಲ್ಲುವ ಹವ್ಯಾಸಕ್ಕೆ ಬೀಳುವುದಿಲ್ಲ, ವೈರಿಯ ಕಾಯಿ ಅವನಿಗೇ ಕಾಲ್ತೊಡಕಾಗುವಂತೆ ಮಾಡುವುದು ಈ ಆಟದ ಗುಟ್ಟು. ಇದು ಸೈನ್ಯದಂತೆ ವ್ಯೂಹ ಕಟ್ಟಿ ಯುದ್ಧ ಮಾಡುವ ಆಟವಾದುದರಿಂದ ಇಲ್ಲಿ ಹಿಂಸಾಚಾರಕ್ಕೆ ಆಸ್ಪದವಿದ್ದೇ ಇದೆ. ಆದರೆ ಅನವಶ್ಯಕ ಹಿಂಸೆ ಇಲ್ಲಿ ನಡೆಯಲಾರದು. ನಾನು ನೋಡಿದ ಆಟಗಳಲ್ಲಿ ಕೊನೆಕೊನೆಗೆ ಮಾತ್ರ ಹತ್ಯಾಕಾಂಡ ನಿಷ್ಕರುಣವಾಗಿ ನಡೆದುದುಂಟು. ವೈರಿ ಸೇನಾಬಲವನ್ನು ತುಂಡರಿಸುವುದೊಂದೆ ಅಲ್ಲದೆ ಈ ಮೂಕ ಕ್ರೀಡಾಪಟು ತನ್ನ ಆನೆ, ಕುದುರೆ, ಒಂಟೆ ಮೊದಲಾದುವೆಲ್ಲವನ್ನೂ ತನ್ನ ಎದು-ರಾಳಿಯ ಕೈಯಿಂದ ಕೊಲ್ಲಿಸಿ, ಅವನನ್ನು ಪಾಪಕ್ಕೂ ಪೇಚಿಗೂ ಗುರಿಮಾಡುತ್ತಾನೆ. ಕೊಲ್ಲಲು ಒಲ್ಲೆನೆಂದರೆ ನಡೆಯದಂತಹ ಪರಿ-ಸ್ಥಿತಿಯನ್ನು ನಿರ್ಮಾಣಮಾಡಿ, ಒಂದೊಂದು ಪಾತಕದಿಂದ ಅವನು ಒಂದೊಂದೆ ಹೆಜ್ಜೆ ಬಲೆಯಲ್ಲಿ ನಡೆದು ಬರುವಂತೆ ಎಳೆತಂದು, ಕೊನೆಗೊಂದು ಪೇದೆಯಿಂದ "ಶಹಾ" ಕೊಟ್ಟು, "ಮಾತು" ಮಾಡಿಬಿಡುತ್ತಾನೆ. ಇವನು ಹೇಳಿ



ದಂತೆ ಅವನು ಕೇಳಬೇಕು. ಇವನು ಆಡಿಸಿದಂತೆ ಅವನು ಆಡಬೇಕು. ಅದು ಕೌಶಲ; ಅದೇ ವಿಜಯ. ಆಕಸ್ಮಿಕವಾದ ವಿಜಯವಾಗಲಿ, ಅನಿರೀಕ್ಷಿತ ಭಾಗ್ಯವಾಗಲಿ, ಚದುರಂಗದಲ್ಲಿ ಅಪರೂಪವಾದುದರಿಂದ, ಈ ಆಟದಲ್ಲಿ ಉದ್ವೇಗಕ್ಕಾಗಲಿ, ಉನ್ಮಾದಕ್ಕಾಗಲಿ ಅವಕಾಶವೇ ಇಲ್ಲ. ಎಂತಹ ಇರುಕಿನಲ್ಲಿ ಸಿಕ್ಕುಬಿದ್ದಿದ್ದರೂ ಆಟಕ್ಕೆ ಕುಳಿತ ಇಬ್ಬರೂ ಸ್ಥಿತಪ್ರಜ್ಞರು ಮೌನ-ಸಾವಧಾನಗಳನ್ನು ಕಳೆದುಕೊಳ್ಳುವುದಿಲ್ಲ. ಇದು ಆಟದಿಂದ ಬಂದ ಸಂಸ್ಕೃತಿಯೊ ಅಥವಾ ಆ ಸಂಸ್ಕೃತಿಯ ಬಲದಿಂದಲೆ ಈ ಆಟವೊ? ಮರಾಠಿಯವರು ಇದಕ್ಕೆ "ಬುದ್ಧಿಬಳ" ಎಂಬುದುಂಟು. ಬುದ್ಧಿವಂತರು ಮಾತಾಡದೆ ಮುಂದಿಯನ್ನು ಹಣ್ಣು ಮಾಡಬಲ್ಲರು; ಮತ್ತು ಹಣ್ಣಾಗಿ ಸೋಲುವವರೆಗೂ ಮಾತಾಡದೆ ಸೆಣಸಬಲ್ಲರು. "ಆಡದೆ ಮಾಡುವವನು ರೂಢಿಯೊಳಗುತ್ತಮನು" ಎಂದು ಹೇಳಿದ ಸರ್ವಜ್ಞ ಚದುರಂಗವನ್ನು ಆಡುತ್ತಿದ್ದನೋ ಇಲ್ಲವೊ? ಈ ತತ್ವವನ್ನಂತೂ ತಿಳಿಸಿದ್ದಾನೆ.

ಸಹನೆ ಮತ್ತು ಯೋಜನೆ ಎರಡೂ ಸತತ ಪರಿಶ್ರಮದಿಂದ ಸಾಧ್ಯವಾಗುವ ಬದುಕು. ಈ ಆಟವನ್ನು ಕಲಿತ ಹೊಸದರಲ್ಲಿ ನನ್ನ ಹಿಂಸಾಪ್ರವೃತ್ತಿ ಅತ್ಯಂತ ಉಲ್ಬಣವಾಗಿತ್ತು. ಎದುರಾಳಿಯ ಕಾಯಿಗಳನ್ನು ಚೆನ್ನಟ್ಟಿ ಹಿಡಿದು ಕಗ್ಗೊಲೆ ಮಾಡುವ ದುಃಸಾಹಸದಲ್ಲಿ ನನ್ನ ಕಾಯಿಗಳನ್ನು ನಾನು ಕಂಡಕಂಡ ಹಾಗೆ ಬಲಿಕೊಡುತ್ತಿದ್ದೆ. ಯುದ್ಧವೆಂದ ಮೇಲೆ ಹಾಗೆ ಆಗತಕ್ಕದ್ದೆ ಎಂದು ನನ್ನ ಭಾವನೆಯಾಗಿತ್ತು. ಕಲಿಂಗವಿಜಯದಿಂದ ಅಶೋಕ ಚಕ್ರವರ್ತಿಯಲ್ಲಿ ಉಂಟಾದ ಪರಿವರ್ತನೆ ನನ್ನಲ್ಲಿ ಕಂಡು ಬರಲಿಲ್ಲ. ಏಕೆಂದರೆ ವಿಜಯ ನನಗೆ ಎಂದೂ ದೊರೆಯಲಿಲ್ಲ. ಕೊಲ್ಲದೆ ಕಾಡಿ ಕಟ್ಟಿಹಾಕುವ ಕಲಾವಿದನೊಬ್ಬನು ನನಗೆ ಗಂಟುಬೀಳದೆ ಹೋಗಿದ್ದರೆ ನಾನು ಈ ಪಾಪದ ಹಾದಿಯಲ್ಲಿ ಹಿಂದಿರುಗಲಾರದಷ್ಟು ದೂರ ಹೋಗುತ್ತಿದ್ದೇನೆಂದು ತೋರುತ್ತದೆ, ಆದರೆ ಇದು ನನ್ನದೆ ದೋಷವೆಂದೂ ನಾನು ಒಪ್ಪಲಾರೆ. ನನ್ನೊಡನೆ ಆಡುವವರು ಆ ಬುದ್ಧಿಯನ್ನು ಕೆರಳಿಸಿ, ಪ್ರವರ್ಧಿಸುತ್ತಿದ್ದರು. ನಾನು ಒಲ್ಲೆನೆಂದರೂ ಬಿಡದೆ ನನ್ನಿಂದ ತಮ್ಮ ಕಾಯಿ ಹೊಡೆಯಿಸುತ್ತಿದ್ದರು. ಮುಂದಿಯ ಕಾಯಿ ಹೊಡೆದು ಹೊಡೆದು, "ಶಹಾ" ತೆಗೆದುಕೊಳ್ಳುವುದೆ ಚದುರುಗವೆಂದು ನನಗೆ ಖಚಿತವಾಯಿತು. ಇನ್ನು ಹೊಡೆಯಲಿಕ್ಕೆ ಆಗದು ಎಂಬಂತಾದರೆ ಆಗ ಆಟ ಮುಗಿಯಿತೆಂದೂ ಅದಕ್ಕೇ "ಮಾತು" ಎನ್ನುವರೆಂದೂ ನನಗೆ ತಿಳಿಯಿತು. ಇದರಲ್ಲಿ ಸೋತೆನೆಂಬ ನೋವಿಲ್ಲದಂತೆ ನನ್ನ ವೈರಿಗಳು ನನಗೆ ತಿಳಿಹೇಳುವರು. "ಕಾಯಿ ಸೋಲುತ್ತವೆ; ಕಾಯಿ ಗೆಲ್ಲುತ್ತವೆ. ನಾವು ನೀವು ಏನು? ಬರಿ ಕಾಯಿ ಎತ್ತಿಡುವವರು." ಮಾತು ಎಷ್ಟು ವಿಚಿತ್ರ! ಆದರೆ ತತ್ವ ಎಷ್ಟು ಸುಂದರ! ಸ್ಥಿತಪ್ರಜ್ಞನ ಅವಸ್ಥೆಗೆ ನಾವೆಲ್ಲರೂ ಮುಟ್ಟಲಿಕ್ಕಿಲ್ಲ. ಆದರೆ ಆಟದ ತತ್ವ ಯಾವಾಗಲೂ ಆ ನಿಟ್ಟಿಗೆ ಬೆರಳು ಮಾಡಿ ತೋರುತ್ತದೆ.

ಚದುರಂಗ ಶ್ರೀಮಂತರ ವಿಲಾಸ! ಆನೆ ಕುದುರೆಗಳನ್ನೂ ಎಂಟೆಂಟು ಕಾಲಾಳುಗಳನ್ನೂ ಇಟ್ಟುಕೊಂಡು ಆಟವಾಡುವುದು ದೊಡ್ಡ ಮಾತೆನಿಸಲಿಕ್ಕಿಲ್ಲ. ರಾಜರನ್ನೂ ಮಂತ್ರಿಗಳನ್ನೂ ಬೆರಳತುದಿಯಲ್ಲಿಟ್ಟು ಎಲ್ಲಿ ಬೇಕೆಂದರಲ್ಲಿ ಎತ್ತಿಟ್ಟು ಒಬ್ಬ ರಾಜನನ್ನು ಉಳಿಸಿ, ಇನ್ನೊಬ್ಬನನ್ನು ಸೆರೆಹಿಡಿದು ನಿಲ್ಲಿಸುವ ಶ್ರೀಮಂತಿಕೆ ಎಲ್ಲರ ತಲೆಗೆ ಹಿಡಿಸಲಾರದು. ಈ ಆಟಕ್ಕೆ ಕುಳಿತವನಿಗೆ ಬೇರೆ ಯಾವ ಕೆಲಸವೂ ಇರಕೂಡದು. ಏಕೆಂದರೆ ಚದುರಂಗದಲ್ಲಿ ಮಗ್ನನಾದವನು ಹೊರಗಿನ ಜಗತ್ತನ್ನು ಕಳೆದುಕೊಂಡು ಆ ಪಟದಲ್ಲಿ ಮಾತ್ರ ಉಳಿಯುತ್ತಾನೆ. ಕೆಲ ಬುದ್ಧಿವಂತರು ತಿಂಗಳು


ಗಟ್ಟಲೆ ಒಂದೆ ಆಟ ಆಡುವರೆಂದು ಕೇಳಿದ್ದೇನೆ. ದಿನವಿಡೀ ಆಡಿ, ಅಲ್ಲಿಗೆ ಬಿಟ್ಟು, ಮರುದಿನ ಮತ್ತೆ ಆಡಿ—ಹೀಗೆ ಆಟ ಮುಗಿವ ವರೆಗೆ ನೆಲಕ್ಕೆ ಊರಿಕೊಂಡು, ಅನನ್ಯಮನಸ್ಕನಾಗಿ ಕುಳಿತುಕೊಳ್ಳುವ ಅನುಕೂಲತೆ ಬೇಕು. ಮನಸ್ಸೂ ಶ್ರೀಮಂತವಾಗಿರಬೇಕು. ಮಾತಾಡದೆ, ಆವೇಶವಿಲ್ಲದೆ, ಅವಸರವಿಲ್ಲದೆ ಅಧೋಮುಖಿಯಾಗಿ, ಆಲೋಚನಮಗ್ನನಾಗಿ ನೋಡಬೇಕು, ಕೂಡಬೇಕು; ಕೂಡಬೇಕು, ನೋಡಬೇಕು. ಈ ಆಟವನ್ನು ಪಟದಲ್ಲಿ ಆಡುವುದಕ್ಕಿಂತ ಮನದಲ್ಲಿ ಆಡುವುದೆ ಹೆಚ್ಚೆಂದು ತೋರುತ್ತದೆ. ಚದುರಂಗದಲ್ಲಿ ಆಡುವವರಷ್ಟೆ ನೋಡುವವರೂ ಸಮಾಧಾನವುಳ್ಳವರಿರಬೇಕು. ಹಾಗಿಲ್ಲದಿದ್ದರೆ ಈ ಕ್ರೀಡಾಪಟುಗಳ ಮೆದುಳಿನ ಬಗೆಗೆ ಅವ್ಯವಧಾನಿ ಪ್ರೇಕ್ಷಕರಲ್ಲಿ ಪ್ರಬಲವಾದ ಸಂಶಯ ಮೇಳಬಹುದು. ಎಷ್ಟೋ ಸಲ ಉತ್ಸಾಹೀ ಪ್ರೇಕ್ಷಕರು ಆಟಗಾರರಿಗೆ "ಈಕಾಯಿ ಹೊಡೆ" "ಅಲ್ಲಿ ಶಹಾ ಕೊಡು" ಇತ್ಯಾದಿ ಸಲಹೆ ಕೊಡುವುದುಂಟು. ಆಡುವ ಕಲ್ಲು ಅಲುಗದೆ ಕುಳಿತಿರುತ್ತವೆ. ಪೀಡೆ ಬಹಳವಾದರೆ "ಹೀಗೊ? ನೋಡೋಣ" ಎಂಬ ಉತ್ತರ ಬಹುಶಃ ಎಂದಾದರೊಮ್ಮೆ ಬರಬಹುದು.

ಇದು ಮುಂಚಿತವಾಗಿ ನನಗೆ ತಿಳಿದಿದ್ದರೆ ಬಹುಶಃ ನಾನು ಅದನ್ನು ಕಲಿಯುವ ಗೋಜಿಗೆ ಹೋಗುತ್ತಿದ್ದಿಲ್ಲವೊ ಏನೊ! ನಾನಾಗಿ ಇದನ್ನು ಕಲಿಯಲಿಕ್ಕೆ ಹೋದವನೂ ಅಲ್ಲ. ನನಗೆ ಒಮ್ಮೆಲೆ ಈ ಆಟವನ್ನು ಕಲಿಸಿಬಿಟ್ಟರು. ಕಲಿಸುವವರು ಕಲಿಸಲಿ, ನಾನೇಕೆ ಕಲಿಯಬೇಕಾಗಿತ್ತು? ನಾನಾಗಿ ಹಾಕಿಕೊಂಡ ಈ ಪ್ರಶ್ನೆ ತುಸು ಅಸಭ್ಯವಾಗಿರುವುದರಿಂದ ಅದಕ್ಕೆ ನಾನು ಉತ್ತರ ಕೊಡಲೊಲ್ಲೆ. ನೀವೇ ನೋಡಿರಿ. ನಾವು ಅನೇಕ ವಿಷಯಗಳನ್ನು ಸಹಜವಾಗಿ ಕಲಿತು ಬಿಡುತ್ತೇವೆ. ಅವೆಲ್ಲಕ್ಕೂ ಕಾರಣಗಳೇನು ಎಂದಾಗಲಿ, ಕಾರಣಗಳು ಇದ್ದುವೆಂದಾಗಲಿ ನಾವು ಹೇಗೆ ಹೇಳೋಣ? ಏಕೆ ಎಂದರೆ ಏನೋ ಒಂದು ಹೇಳಿ ಬಿಡುತ್ತೇವೆ. (ಇದಕ್ಕೂ ಒಂದು ಕಾರಣವಿದ್ದರೆ ನನಗೆ ಅದು ತಿಳಿಯದು,) ಒಂದು ಸಂಸ್ಥಾನದಲ್ಲಿ ನೌಕರಿ ಮಾಡುತ್ತಿದ್ದಾಗ ಚದುರಂಗ ನನಗೆ ಅಂಟಿಕೊಂಡಿತು; ಎಂದರೆ ನನಗೆ ಅದನ್ನು ಅಂಟಿಸಲಾಯಿತು. "ಕಾರಣವಿಲ್ಲ" ಎಂದೆನಲ್ಲವೆ? ಕೇಳಿರಿ ಈಗ ಹೇಳಿಬಿಡುತ್ತೇನೆ. ಅಹುದಾದರಹುದೆನ್ನಿ, ಅಲ್ಲವಾದರಲ್ಲವೆನ್ನಿ.

ಮದುವೆಯಾಗಲಿರುವ ಮನುಷ್ಯನು ಮಾವನ ಮನೆಗೆ ಹೋಗುವುದಕ್ಕಿಂತ ಬಹು ಪೂರ್ವದಲ್ಲಿ ಇಸ್ಪೇಟು, ಗಂಜೀಫು, ಚದುರಂಗ, ಪಗಡೆ—ಇವುಗಳನ್ನು, ಕನಿಷ್ಟಪಕ್ಷಕ್ಕೆ ಇವುಗಳಲ್ಲಿ ಒಂದನ್ನಾದರೂ ಕಲಿತಿರಲೇಬೇಕು ಎಂಬುದು ಆ ಸಂಸ್ಥಾನೀಗೃಹಸ್ಥರ ಸಿದ್ಧಾಂತ. ಈ ಆಟವೂ ಬಾರದಿದ್ದರೆ ಅವನೆಂತಹ ಅಳಿಯ! ದೀಪಾವಳಿಯಲ್ಲಿ ಮಾವನ ಮನೆಗೆ ಹೋಗಿ ಇವನು ಮಾಡುವುದಾದರೂ ಏನು? ಒಂದಿಲ್ಲೊಂದು ದಿನ ನಾನೂ ಅಳಿಯನಾಗುವವನೆಂದೂ ಅಳಿಯನಾಗದೆ ಉಳಿಯುವುದು ಸುಸಂಸ್ಕೃತನ ಲಕ್ಷಣವಲ್ಲವೆಂದೂ ನನ್ನಲ್ಲಿ ಬಿಂಬಿಸಲು ಅವರು ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ನಾನು ಅವರಿಗೆ ಎಷ್ಟೂ ಎದುರಾಗಲಿಲ್ಲವೆಂದು ಒಪ್ಪಿಕೊಂಡು ಬಿಡುತ್ತೇನೆ, ಇವರು ಕಲಿಸುವ ಆಟಕ್ಕಿಂತ, ಇವರು ಹೂಡಿದ ವಾದಕ್ಕಿಂತ ಅಪರಿಚಿತದ ಆಕರ್ಷಣೆ ಬಲವತ್ತರವಾಗಿ ನನ್ನ ಚಿತ್ತ ಸೋತಿತು.

ಅಳಿಯತನದ ಲಕ್ಷಣಗಳಿಗೆ ತಮ್ಮ ಸಂಸ್ಥಾನದ ಒಬ್ಬ ಪ್ರಜೆ ಎರವಾಗದಂತೆ ನೋಡಿಕೊಳ್ಳುವುದು ಅವರ ನೈತಿಕ ಹೊಣೆಯಾಗಿತ್ತು. ಅದುದರಿಂದ ಚದುರಂಗವನ್ನು ನನಗೆ ಕಲಿಸಲೇಬೇಕು. ಇದು ಅವರು ಕೊಟ್ಟ ಕಾರಣ. ಆದರೆ ಅವರ ನಿಜವಾದ ಹೇತು ಏನಿತ್ತೆಂಬ ವಿಷಯ ನನಗೆ ಸಂಶಯವಿದೆ. ಬಹುಶಃ ಅವರಿಗೆ ಯಾವಾಗಲೂ ಸೋಲುವ ಒಬ್ಬ ಆಟಗಾರ ಬೇಕಾಗಿತ್ತೆಂದು ತೋರುತ್ತದೆ. ಏಕೆಂದರೆ ಅವರು ನನಗೆ ಕೇವಲ ಸೋಲುವ ಆಟವನ್ನೇ ಕಲಿಸಿದರು. "ಇಲ್ಲಿ ಬಿಡು, ಅಲ್ಲಿ ಹೊಡೆ, ಇಲ್ಲಿ ಸರಿ" ಎಂದು ಹೇಳಿ ಹೇಳಿ ನನ್ನ ಸೈನ್ಯವನ್ನೆಲ್ಲ ಧ್ವಂಸಮಾಡಿ, ಈ ಧೂರ್ತರು ನನ್ನ ಅನಾಥರಾಜನನ್ನು, ಕೆಲಸಕ್ಕೆ ಬಾರದ ಒಂದು ಪೇದೆಯಿಂದ ಕಟ್ಟಹಾಕಿಸುವರು. "ಈ ಧೂರ್ತತೆಯನ್ನು ನೀನೇಕೆ ಅನುಕರಿಸಲಿಲ್ಲ?" ಎಂದು ಕೇಳಬೇಡಿ. ಧೂರ್ತತೆಯನ್ನೂ ದುಷ್ಟತೆಯನ್ನೂ ಅನುಕರಣಮಾಡಿ ಅವರಂತೆ ಆಗಲು ಸಾಧ್ಯವಿದ್ದರೆ ನಾನೇಕೆ ಹೀಗಿರುತ್ತಿದ್ದೆ? ನಾನು ಹಾಗೆ ಆಗಲಿಲ್ಲವೆಂಬುದೆ ಸಂತೋಷ. ಜಗತ್ತಿನಲ್ಲಿ ಸಜ್ಜನರ ಸಂಖ್ಯೆ ಇಳಿಯಲಿಲ್ಲವೆಂದು ನಿಮಗೂ ಸಂತೋಷವಾಗಬೇಕು.

ಹೀಗೆ ಸೋತು ಸಜ್ಜನಿಕೆಯ ಸಂಪತ್ತನ್ನು ಉಳಿಸಿಕೊಂಡ ನಾನು ಸಂಸ್ಥಾನವನ್ನು ಬಿಟ್ಟು ಇನ್ನೊಂದು ಊರಿಗೆ ಬಂದಮೇಲೆ, ನನ್ನ ಗುರುಗಳು ಕಲಿಸಿದ ಕೌಶಲ್ಯವನ್ನು ಇನ್ನೊಬ್ಬ ಶಿಷ್ಯನಿಗೆ ಪ್ರದಾನಮಾಡಿ. ಋಷಿಋಣದಿಂದ ಮುಕ್ತನಾದೆ. ಎಂದರೆ ಅವನಿಗೂ ಸೋಲುವ ಆಟ ಕಲಿಸಿದೆ. ಅವನು ತನ್ನಂತೆ ಇನ್ನು ಕೆಲವರನ್ನು ತರಬೇತುಗೊಳಿಸಿದರಿಂದ ಚದುರಂಗದಾಟ ಹೊಸಮುಖವೊಂದನ್ನು ಪಡೆಯಿತು. ಏಕೆಂದರೆ ಈ ನನ್ನ ಶಿಷ್ಯಕೋಟಿಯ ಆಟಗಳಲ್ಲಿ ಗೆಲವೆಂಬುದು ಯಾರಿಗೂ ಇಲ್ಲ. ಇಬ್ಬರೂ ಎದುರಾಳಿಗಳು ಸೋಲುವ ಸಾಹಸದಲ್ಲಿ ಅವಿಶ್ರಾಂತ ಪ್ರಯತ್ನಮಾಡುತ್ತಿರುವಾಗ ಗೆಲವು ಯಾರಿಗಾದೀತು? ಸೋಲಾದರೂ ಏಕಾದೀತು? ಹೀಗೆ ಆಡುವವರಲ್ಲಿ ಮನಸ್ತಾಪಕ್ಕೆ ಅಥವಾ ಮುಖಭಂಗಕ್ಕೆ ಎಡೆಯಿಲ್ಲದ್ದರಿಂದ ಈ ಆಟದಲ್ಲಿ ಬಹಳ ಜನ ತಲೆ ಹಾಕಿದರು. ನನ್ನ ಮೊದಲನೆಯ ಶಿಷ್ಯನು ಮಾತ್ರ ನನಗೆ ನಿಷ್ಠನಾಗಿ ಉಳಿಯಲಿಲ್ಲ. ಈ ವಿದ್ಯೆಯಲ್ಲಿ ಅವನಿಗೆ ಆಸಕ್ತಿ ಅಸದಳವಾಗಿ ಅವನು ಹೊರಗಿನ ಯಾರುಯಾರ ಸಂಗಡವೊ ಆಡಿ ಕೆಲವು ಹೊಸ ಗತ್ತುಗಳನ್ನು ಕಲಿತುಕೊಂಡುಬಂದು ನನ್ನನ್ನು ಎರಡು ಸಲ ಗೆದ್ದುಬಿಟ್ಟನು. "ಶಿಷ್ಯಾದಿಚ್ಛೇತ್ ಪರಾಜಯಂ" ಎಂಬ ಶ್ಲೋಕವನ್ನು ನಾನು ಅನೇಕ ಗುರುಗಳ ಮೇಲೆ ಪ್ರಯೋಗಿಸಿದ್ದುಂಟು. ಆದರೆ ಅದರ ಅರ್ಥ ಇಷ್ಟು ಮರ್ಮಭೇದಿಯೂ ಆಗಬಹುದೆಂದು ಅನುಭವ ನನಗೆ ಬಂದದ್ದು ಇವನಿಂದಲೆ. ಅವನು ಈಗ ನನ್ನ ಗುರುವಾಗಿ ನನ್ನ ಸುಪ್ತಚ್ಛಲವನ್ನು ಬಡಿದೆಬ್ಬಿಸಿದನು. ಹೊಸ ಅಡ್ಡ ಹಿಡಿತಗಳನ್ನು ನಾನೂ ವಶಮಾಡಿಕೊಂಡು ಬಂದಿರುವುದರಿಂದ ನಮ್ಮ ಆಟ ಮತ್ತೆ ಯಥಾಪೂರ್ವಸ್ಥಿತಿಗೆ ಎಂದರೆ ಸೋಲು-ಗೆಲವುಗಳಿ



ಲ್ಲದ ಸಮಸ್ಥಿತಿಗೆ ಬಂದುನಿಂತಿದೆ. ನಮ್ಮನ್ನು ಕಂಡರಾಗದವರು ಇದಕ್ಕೆ "ಗೊಡ್ಡು" ಆಟ ಎನ್ನುತ್ತಾರೆ. ಆ ಮಾತು ಬೇರೆ.

ಅಳಿಯನಿಗೆ ಅಲಂಕಾರವಾದ ಇತರ ಆಟಗಳನ್ನು ನಾನೇಕೆ ಕಲಿಯಲಿಲ್ಲವೊ ನಾನು ಅರಿಯೆ. ಯಾರೂ ನನಗೆ ಕಲಿಸಲಿಲ್ಲವೆಂದು ಕಾಣುತ್ತದೆ. ಅವರೇಕೆ ಕಲಿಸಲಿಲ್ಲವೆಂಬುದನ್ನು ಈಗ ಊಹಿಸಬೇಕಾಗಿದೆ. ಅವರು ಬುದ್ಧಿವಂತರೆಂಬಲ್ಲಿ ನನಗೆ ಸಂದೇಹವಿಲ್ಲ. ಪಗಡೆಯನ್ನೋ ಅಂತಹ ಇನ್ನೊಂದು ಯಾವದೋ ಆಟವನ್ನೋ ಆಡಿ, ಪಾಂಡವರು ರಾಜ್ಯ ಕಳೆದುಕೊಂಡು ಮಹಾಭಾರತವನ್ನು ಬರೆಯಿಸಿದರು. ನಳ ಎಂಬುವನೂ ಹಾಗೆಯೇ ಮಾಡಿದ್ದರಿಂದ ಒಂದು ಮಹಾಕಾವ್ಯ ಹುಟ್ಟಬಂತು. ನನಗೆ ಅಂತಹ ಭಾಗ್ಯವಿಲ್ಲವೆಂಬುದು ನನ್ನ ಗುರುಗಳಿಗೆ ತಿಳಿದಿತ್ತು. ಏಕೆಂದರೆ ಕಳೆದುಕೊಳ್ಳಲು ನನಗೆ ರಾಜ್ಯವಾದರೂ ಎಲ್ಲಿತ್ತು. ಇಸ್ಪೇಟು ಆಡಿ ಆಸ್ತಿಕಳೆದುಕೊಳ್ಳುವುದು ಸಾಧ್ಯವೆಂದು ಹೇಳುತ್ತಾರೆ. ಆ ಸಂಸ್ಥಾನದಲ್ಲಿ ಗುಪ್ತವಾಗಿ ಆಡಾಡುತ್ತ ಆಸ್ತಿ ಬಿಟ್ಟುಕೊಡುವವರಿದ್ದರೆಂದೂ ಅಂತಹ ಮಹಾತ್ಮರನ್ನು ಕಂಡುಹಿಡಿವ ಪ್ರಯತ್ನದಲ್ಲಿ ಸರಕಾರ ತೊಡಗಿತ್ತೆಂದೂ ನಾನು ಕೇಳಿದ್ದೆ. ಕದ್ದು ಕದ್ದು ಮಾಡುವ ಪ್ರಾವೀಣ್ಯಕ್ಕೆ ನಾನು ಅನರ್ಹನೆಂದು ಅವರು ಭಾವಿಸಿರಬೇಕು. ಗಂಜೀಫು ಆಡಿ ಯಾರು ಏನನ್ನುಕಳೆದುಕೊಂಡರೊ ನನಗೆ ತಿಳಿಯದು. ಏಕೆಂದರೆ ಈ ಆಟ ಆಡುವವರನ್ನು ನಾನು ಈ ವರೆಗೆ ಕಂಡಿಲ್ಲ. ಚದುರಂಗದಲ್ಲಿ ತಾಳ್ಮೆಗೇಡಿತನವೊಂದನ್ನು ಬಿಟ್ಟರೆ ಮತ್ತೇನನ್ನೂ ಕಳೆದುಕೊಳ್ಳುವುದು ಸಾಧ್ಯವಿಲ್ಲ. ಈ ಮಾತನ್ನು ಎಲ್ಲರೂ ಒಪ್ಪಲಿಕ್ಕಿಲ್ಲ. ಏಕೆಂದರೆ ತಾಳ್ಮೆಯನ್ನು ಬಲಿಸುವುದಕ್ಕಿಂತ ಹಾಳು ಮಾಡುವುದೆ ಈ ಆಟದ ಗುಣವೆಂಬಂತೆ ಕೆಲವರು ಆಡುತ್ತಾರೆ. ತಾಳ್ಮೆಯಿದ್ದರೆ ಬೆಳೆದೀತು. ಅದೇ ಇಲ್ಲದಿದ್ದರೆ? "ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇಸತಃ."

ಚದುರಂಗದ ವಿಷಯದಲ್ಲಿ ಇನ್ನೇನಾದರೂ ಹೇಳುವುದಕ್ಕಿಂತ ಮುಂಚೆ ಆ ಆಟದ ಬಗೆಗಿರುವ ನನ್ನ ಜ್ಞಾನವನ್ನು ನಿಮ್ಮ ಮುಂದೆ ಬಿಚ್ಚಿ ಇಡುವುದು ಅವಶ್ಯವೆಂದು ತೋರುತ್ತದೆ. ಈ ಮುಂದೆ ಕೊಡುವ ವಿವರಣೆಯಿಂದ ಆಟದ ಪರಿಚಯ ನಿಮಗೆ ಆಗಲಿಕ್ಕಿಲ್ಲ. ಆದರೆ ನಾನು ಎಷ್ಟು ತಿಳಿದುಕೊಂಡಿದ್ದೇನೆ ಎಂಬುದಾದರೂ ನಿಮಗೆ ಹೊಳೆಯುತ್ತದೆ. ಇನ್ನು ಕೇಳಿರಿ ಚದುರಂಗ ಎಂತಹ ಆಟ? ನೀವು "ಹುಲಿಮನೆ" ಆಡಿರಬಹುದು. ಇದೂ ಅಂತಹದೆ ಒಂದು ಆಟ. ಮೂರು ಹುಲಿಗಳನ್ನು ಕುರಿಗಳು ಕಟ್ಟಿಹಾಕುವ ಹಾಗೆ, ಚದುರಂಗದಲ್ಲಿ ೧೬ ಕಾಯಿ ಕೂಡಿ ಒಬ್ಬ ರಾಜನನ್ನು ಕಟ್ಟಿಹಾಕುತ್ತವೆ. ಆ ರಾಜನಿಗೂ ಅಷ್ಟೇಬಲ, ಅದೇ ಬಗೆಯ ಕಾಯಿ ಇರುತ್ತವೆ. ಒಂದು ಮುಖ್ಯ ಭೇದ ಮಾತ್ರ ಇದೆ. ಒಂಟಿ ಕುರಿ ಸಿಕ್ಕಾಗ ಹುಲಿ ಅದರ ಮೇಲೆ ಲಾಗ ಹಾಕಿ ಕೊಂದುಹಾಕುತ್ತದೆ. ಎರಡು ಕುರಿ ಒಂದರಹಿಂದೊಂದು ನಿಂತಾಗ ಮಾತ್ರ ಈ ಅಳುಬುರುಕ ಹುಲಿ ಹೆದರಿಕೊಂಡು ಹಿಂದೆ ಸರಿಯುತ್ತದೆ. ಚದುರಂಗದ ಕಾಯಿ ಅಂಜುಬುರುಕ ಜಾತಿಯಲ್ಲ. ಅದು ನೂರಕ್ಕೆ ನೂರು ಕ್ಷತ್ರಿಯವಂಶ. ಮುಂದೆ ಬಂದ ಕಾಯಿ ಅಲ್ಪವಾಗಿರಲಿ ಅಧಿಕವಾಗಿರಲಿ, ಅರಕ್ಷಿತವಾಗಲಿ ಸುರಕ್ಷಿತವಾಗಲಿ, ನಿಮ್ಮ ಯಾವುದಾದರೂ ಒಂದು ಕಾಯಿ ಅದನ್ನು ಒಂದೇ ಏಟಿಗೆ ಹೊಡೆದು ಕೊಲ್ಲಬಲ್ಲದು; ಮತ್ತು ತಿರುಗಿ ಹೊಡೆಸಿಕೊಂಡು ಕೂಡಲೆ ವೀರಸ್ವರ್ಗವನ್ನು ಈಡಾಡಲೂ ಬಲ್ಲದು. ಆದರ ಸೇಡನ್ನು ನಿಮ್ಮ ಇನ್ನೊಂದು ಕಾಯಿ ತೀರಿಸಿಕೊಳ್ಳಬಹುದು. ಇದರಲ್ಲಿಯ ಎಲ್ಲ ಕಾಯಿ "ಕಾ ಚಿಂತಾ ಮರಣೇ ರಣೇ" ಎಂಬ ಕಲಿಗಳೆ. ಕೈಲಾಗದವನೆಂದರೆ ರಾಜ ಒಬ್ಬನೆ. ಈ ಪ್ರಾಣಿ ಒಂದು ಸಲಕ್ಕೆ ಒಂದೆ ಹೆಜ್ಜೆ ಸರಿಯಬಲ್ಲ. ತಾನಾಗಿ ಮುಂದೆಯ ಮೇಲೆ ಏರಿಹೋಗುವ ಚಪಲ

ಇವನಿಗಿಲ್ಲ. ಆದರೆ ಅದು ಅಹಿಂಸೆಯಲ್ಲ. ದಿಕ್ಕಿಲ್ಲದ ಒಂದು ಕಾಯಿ ಅಳವಿನಲ್ಲಿ ಸಿಕ್ಕರೆ ಅದನ್ನು ಆಗಲೆ ಮುಗಿಸಿಬಿಡುವ ಹಿಂಸಾ ಬುದ್ಧಿ ಇವನಿಗಿದೆ. ಆ ಕಾಯಿಗೊಂದು ಬೆಂಬಲವಿದ್ದರೆ ಮಾತ್ರ ಇವನು ಬಾಲಮುದುಡಿಕೊಂಡು ಅದಕ್ಕೆ ಹಾದಿ ಬಿಟ್ಟುಕೊಡುತ್ತಾನೆ. ಹೀಗೆ ನಿಮ್ಮ ಕಾಯಿ ಅವನೆದುರಿಗೆ ಬಂದು ನಿಂತು "ದಾರಿ ಬಿಡು" ಎಂದು ಒತ್ತಾಯಪಡಿಸುತ್ತಾ ಹೋಗಿ ಅವನಿಗೆ ದಾರಿ ಬಿಟ್ಟು ಸರಿಯುವುದಕ್ಕಾಗಲಿ, ಏರಿಬಂದು ಹೊಡೆಯುವುದಕ್ಕಾಗಲಿ ಸಾಧ್ಯವಾಗದಂತೆ ಮಾಡಿಬಿಟ್ಟರೆ ನೀವು ಗೆದ್ದಿರಿ.

ಚದುರಂಗ ನಾನು ಹೇಳಿದಷ್ಟು ಹಗುರಾಗಿಲ್ಲವೆಂಬುದನ್ನು ನೀವು ನೆನಪಿಡಬೇಕು. ಏಕೆಂದರೆ ಇದರಲ್ಲಿ ಒಂದು ಆಟದಂತೆ ಇನ್ನೊಂದು ಇರುವುದಿಲ್ಲ. ಅನಂತವಾದ ವೈವಿಧ್ಯಕ್ಕೆ ಆಸ್ಪದವಿರುವುದರಿಂದ ಎಂತಹ ಕುಶಲನಾದವನೂ ಮತ್ತೆ ಮತ್ತೆ ತಲೆ ಕೆರೆದುಕೊಳ್ಳಬೇಕಾಗುತ್ತದೆ. ಇದರಲ್ಲಿಯ ಕಾಯಿ ಎಲ್ಲ ಕಡೆಗೆ ಓಡಾಡುವುದರಿಂದ ಮತ್ತು ಓಡಾಡುವ ಮನೆಗಳ ಸಂಖ್ಯೆ ಅಧಿಕವಾಗಿರುವುದರಿಂದ ಪಟದ ಚಿತ್ರ ಪ್ರತಿಯೊಂದು ಸಲ ಹೊಸ ರೂಪವನ್ನು ಧರಿಸುತ್ತದೆ. ಈ ಕಾಯಿಗಳಿಗೆ ಒಂದು ವ್ಯಕ್ತಿತ್ವವಿದೆ; ತಮ್ಮ ಗತಿಗಳನ್ನು ಪರಿಸ್ಥಿತಿಗೆ ತಕ್ಕಂತೆ ಮಾರ್ಪಡಿಸಿಕೊಳ್ಳುವ ಶಕ್ತಿಯಿದೆ, ಸೌಕರ್ಯವಿದೆ. ಆದುದರಿಂದ ಆಡುವವನ ಬಯಕೆಗೆ ಆತಂಕವಿಲ್ಲ. ಪಗಡೆಯ ಆಟವನ್ನೆ ನೋಡಿರಿ. ಚಕ್ರವರ್ತಿಗಳನ್ನು ಭ್ರಷ್ಟಗೊಳಿಸಿದ ಆ ಕ್ರೂರವಾದ ಆಟದಲ್ಲಿ ಆಡುವವನ ಕೈಯಲ್ಲಿ ಏನುಂಟು? ಬಿದ್ದ "ಫಾಶಿ" ಗಳ ನಿರ್ಣಯದಂತೆ ಮನೆಬಿಡುವ ಕಠೋರ ಗುಲಾಮೀ ಪದ್ಧತಿ ಬಳ್ಳೆಯವರಿಗೆ ಉಳಿಗಾಲವಿಲ್ಲದಂತೆ ಮಾಡಿತು. ಪಟ್ಟಹಿಡಿದ ಈ ಬಣ್ಣದ ಕಾಯಿಗಳ ಬಿಂಕವಾದರೂ ಎಂತಹದು! ಅವು ಮುಂದಿಟ್ಟ ಹೆಜ್ಜೆಯನ್ನು ಹಿಂದೆ ತೆಗೆಯವು. ಮುಂದೆ ಹೋಗಿ "ಮುಲ್ಲಿ" ಯಾದಾವು; ಬಯಲಲ್ಲಿ ಸಿಕ್ಕು ಬಡಿಸಿಕೊಂಡು ಬಂದಾವು. ಆದರೂ ಹಿಂದೆ ಸರಿಯುವುದಿಲ್ಲ! ಚದುರಂಗದಲ್ಲಿ ಇಂತಹ ಅವಿವೇಕದ ಹಟಮಾರಿತನವಿಲ್ಲ; ಅಲ್ಲದೆ ಪಗಡೆಯ ಕಾಯಂತೆ ಮತ್ತೆ ಮತ್ತೆ ಹುಟ್ಟಬಂದು ಅದೆ ತಪ್ಪುಮಾಡುವ ಕರ್ಮವೂ ಇಲ್ಲ. ಇದ್ದರೆ ಗೆಲವು, ಸತ್ತರೆ ಸ್ವರ್ಗ. ಸ್ವರ್ಗಸ್ವಾಗತಾರ್ಹವಾದರೂ ಅದಷ್ಟು ಬೇಗ ಅದನ್ನು ಹಿಡಿಯುವುದಕ್ಕೆ ನಾವು ಹೋಗುವುದಿಲ್ಲ. ಆದಿಯ ಮುಂದಿದೆ "ಸ್ವರ್ಗ" ಎಂಬ ಪರಿಸ್ಥಿತಿ ನಿರ್ಮಾಣವಾದಾಗ ಚದುರಂಗದ ಸೇನಾನಿಗಳು ಅತ್ತಿತ್ತ ಸರಿದು, ಸಾವನ್ನು ಸೋಲಿಸುತ್ತವೆ. ಅವುಗಳದು ಯಾವಾಗಲೂ ಗತ್ತುಗಾರಿಕೆಯ ಯುದ್ಧ.

ಚದುರಂಗವೆಂಬ ಹೆಸರೆ ಹೇಳುವಂತೆ ಅದರಲ್ಲಿ ನಾಲ್ಕು ಬಗೆಯ ಸೇನಾಶಕ್ತಿಗಳೂ ಅವುಗಳ ಅಧಿಪತಿ ರಾಜನೂ ಅವನಿಗೊಬ್ಬ ಮಂತ್ರಿಯೂ ಉಂಟು. ಎಲ್ಲವೂ ಒಂದೇ ಬಗೆಯಾಗಿಲ್ಲವಾದುದರಿಂದ ಒಂದೊಂದರ ಪರಿಚಯವನ್ನು ನಾವು ಬೇರೆ ಬೇರೆಯಾಗಿಯೆ ಮಾಡಿಕೊಳ್ಳಬೇಕು. ಇವುಗಳಲ್ಲಿ ಬಹುಸಂಖ್ಯಾಕವಾದುವು "ಪೇದೆ" ಎಂಬ ಸಣ್ಣ ಕಾಯಿಗಳು. ಪಗಡೆಯಿಂದ ನಡೆದುಬಂದ ಪ್ರಾಚೀನ ಸಂಸ್ಕೃತಿಯನ್ನು ಅಚ್ಚಳಿಯದೆ ಉಳಿಸಿಕೊಂಡು ಬಂದ ಸೈನಿಕರೆಂದರೆ ಇವರೆ. ಪೇದೆಗಳು ಧರ್ಮಯುದ್ಧಮಾಡಿ ಸ್ವರ್ಗವನ್ನು ಸೂರೆಗೊಳ್ಳುವವರು. ಹಿಂದೆ ಸರಿದು ಅವರಿಗೆ ಗೊತ್ತಿಲ್ಲ. ತಮ್ಮ ನ್ಯಾಯ್ಯವಾದ ಪಥದಿಂದ ಪ್ರವಿಚಲರಾಗದ ಈ ಧೀರರು ಒಮ್ಮೆ ಮಾತ್ರ ಹಾದಿಬಿಟ್ಟು ಹೋಗುತ್ತಾರೆ. ಇನ್ನೊಬ್ಬನನ್ನು ಸಂಹಾರ ಮಾಡುವಾಗ ಇವರು ನೇರವಾಗಿ ಹೋಗುವುದಿಲ್ಲ. ಪೇದೆಯ ಕಣ್ಣೆ ವಕ್ರ; ಎದುರಿಗೆ ಏರಿಬಂದವನನ್ನು ಇದು ಕಣ್ಣೆತ್ತಿ ನೋಡದು. ಆದರೆ ಮಗ್ಗುಲಿಗೆ ಬಂದು ನಿಂತವನನ್ನು ಮಾತ್ರ ಜೀವಂತವಾಗಿ ಉಳಿಯಗೊಡುವುದಿಲ್ಲ. ಇದರ ಹೊಡೆತವೆ "ಯಾಸಿ." ಹೀಗೆ ಯಾರನ್ನಾದರೂ ಹೊಡೆದು ಕೊಂದ ಮೇಲೆ ಈ ಪ್ರಾಣಿ ತನ್ನ ಮೊದಲಿನ ಸ್ಥಾನಕ್ಕೆ ಬರುವುದಿಲ್ಲ. ಖೂನಿಯಾದ ಮನೆಯ ಸಾಲನ್ನೆ ಹಿಡಿದು ಮುಂದೆ ಸಾಗುವುದು ಅದರ ಸ್ವಭಾವ. ಉದ್ದಂಡವೃತ್ತಿಯ ಈ ಪೇದೆಯನ್ನು ರಕ್ಷಿಸಲು ಇನ್ನೊಬ್ಬರು ಯಾರಾದರೂ ಅದರ ಬೆನ್ನು ಕಾಯುತ್ತಿರಬೇಕಾಗುತ್ತದೆ. ಇದನ್ನು ಉಳಿಸಲು ಸಾಧ್ಯವಾದಷ್ಟು ಕಾಲ ಅದರ ವೈರಿಯೂ ಪ್ರಯತ್ನಿಸುತ್ತಾನೆಂದು ಹೇಳಿದರೆ ನಿಮಗೆ ಸೋಜಿಗವೆನಿಸೀತು. ಅನೇಕ ಸಲ ಸತ್ಯ ಸೋಜಿಗವೆ ಆಗಿರುತ್ತದೆ. ಎಡಬಲದ ಹೊಡೆತಕ್ಕೆ ಏನೂ ಸಿಗದಂತೆ ಇದರ ಮುಂದೊಂದು ಇಂತಹದೇ ಕಾಯಿ ಕೂಡಿಸಿಬಿಟ್ಟರೆ ತೀರಿತು. ಇದು ಶ್ರವಣಬೆಳುಗೊಳದ ಗೋಮಟೇಶ್ವರನಂತೆ ಅಚಲವಾಗಿ ನಿಂತುಬಿಡುವುದು. ವೈರಿಯಾದವನಿಗೆ ಈ ಸ್ಥಿತಿ ಎಷ್ಟೋ ಸಲ ಅತ್ಯಂತ ಅನುಕೂಲವಾಗುವುದು. ಏಕೆಂದರೆ ಹೀಗೆ ಪ್ರತಿಮಾಯೋಗದಲ್ಲಿ ನಿಂತ ಪೇದೆ ತನ್ನನ್ನು ದಾಟ ಹೋಗಲು ಯಾರಿಗೂ ಅವಕಾಶ ನೀಡುವುದಿಲ್ಲ. ಶತ್ರುಪಕ್ಷದವರು ಬೇಕಾದರೆ ಅವನನ್ನು ಕೊಂದು ಮುಂದೆ ಬಂದಾರು. ಆದರೆ ಅವನ ಪಕ್ಷದವರು ಮಾತ್ರ ಏನನ್ನೂ ಮಾಡಲಾರರು. ಬಂಧುಹತ್ಯೆ ಎಂತಹ ಪ್ರಸಂಗದಲ್ಲಿಯೂ ಒಂದು ಪಾತಕವೆ ಎಂಬ ಧರ್ಮಬುದ್ಧಿ ಇದಲ್ಲ. ಸ್ವಕೀಯರ ಹತ್ಯೆ ಮಾಡುವ ಶಕ್ತಿ ಈ ಕಾಯಿಗಳಿಗೆ ಎಂದಿಗೂ ಇಲ್ಲ. ಅವನು ನಿಂತ ಹಾದಿ ಅವನವರಿಗೆ ಮುಚ್ಚಿಹೋದಂತೆಯೆ. ಸ್ವ-ಪರ ಭೇದವನ್ನು ತಿಳಿದುಕೊಂಡು ಲಾಭದಾಯಕವಾಗಿ ನಡೆದುಕೊಳ್ಳಲಾರದ ಈ ಅಲ್ಪರನ್ನು ಏನೆಂದು ಸಾಕಿ, ಮುಂದಿಟ್ಟುಕೊಂಡು ಆಡಿಸಬೇಕೊ ಆಡುವವರೆ ಬಲ್ಲರು. ಎದುರಾಳಿಯ ಮರ್ಯಾದೆ ಕಳೆಯುವ ಉದ್ದೇಶವೆ ಇರಬೇಕು. ಇಂತಹ ಎಬ್ಬಂಕ ಆಳಿನಿಂದ ವೈರಿಭೂಪನನ್ನು ಕಟ್ಟಿ ನಿಲ್ಲಿಸಿದರೆ ಅದೇನು ಸಾಮಾನ್ಯ ಸಿದ್ಧಿಯೆ? ತನ್ನ ಹುಡುಗ ಚಟ್ಟರಿಂದ ದ್ರುಪದರಾಜ

ನನ್ನು ತನ್ನ ಹೊರಸಿನ ಕಾಲಿಗೆ ಬಿಗಿಸಿಕೊಂಡ ದ್ರೋಣನಿಗೆ ಯಾವ ಸಂತೋಷವಾಯಿತೊ ಅಂತಹದೆ ಒಂದು ಅಂತಸ್ತೃಪ್ತಿ ಈ ಚದುರಂಗ ಚತುರನಿಗೆ ಆಗುತ್ತಿದ್ದೀತು.

ಉಳಿದ ಕಾಯಿಗಳು ಸ್ವತಂತ್ರವೃತ್ತಿಯ ಸೇನಾಶಕ್ತಿಗಳು. ಹಿಂದೆ ಮುಂದೆ, ಎಡಕ್ಕೆ ಬಲಕ್ಕೆ, ಎಷ್ಟು ಬೇಕಾದಷ್ಟು ಸರಿದಾಡುವ ಸೌಲಭ್ಯ ಅವುಗಳಿಗೆ ಇದೆ. ಆದರೆ ಒಂದೊಂದು ವರ್ಗಕ್ಕೂ ಒಂದು ಗತಿಕ್ರಮ ನಿಯಮಿತವಾಗಿದೆ. ಆನೆಯೆಂಬುದು ಯಾವಾಗಲೂ ಸೂರ್ಯವೀಥಿ-ಚಂದ್ರವೀಥಿಗಳಲ್ಲಿ ಎಡೆಯಾಡುವ ದೊಡ್ಡ ಸತ್ವ. ಪಟದ ಅಂಚಿಗೆ ಸಮಾಂತರವಾಗಿಯೆ ಅದರ ನಡೆ. ವಕ್ರಗತಿಯಲ್ಲಿ ಸಂದಿಗೊಂದಿ ಹೋಗುವ ಹೀನ ವೃತ್ತಿ ಅದಕ್ಕೆ ಸಲ್ಲದು. ಒಂಟೆ ಹಾಗೆ ಮಾಡಬಲ್ಲದು. ಮತ್ತು ಅದು ಹಾಗಷ್ಟೆ ಹೋಗತಕ್ಕದ್ದು. ಏಕೆಂದರೆ ಸರಳವಾಗಿ ಹೋಗುವ ಸ್ವಭಾವವೆ ಅದಕ್ಕಿಲ್ಲ. ಪಟದ ತಳರೇಖೆಗೆ ೪೫ ಅಂಶದ ಕೋನ ಮಾಡಿಕೊಂಡು ಮೂಲೆಯ ಹಾದಿಗಳಲ್ಲಿಯೆ ಅದು ಹಾಯ್ದಾಡುವುದು. ಇದು ಯಾವಾಗಲೂ ಉಪದಿಕ್ಕುಗಳನ್ನು ಹುಡುಕಿಕೊಂಡು ಹೋಗುವ ಪ್ರಾಣಿ, ಆದರೆ ಅದು ತನ್ನದಲ್ಲದ ಸ್ಥಾನಕ್ಕೆ ಎಂದೂ ಕಾಲಿಕ್ಕದು. ಬಿಳಿ ಮನೆಯ ಒಂಟೆಗೆ ಯಾವಾಗಲೂ ಬಿಳಿ ಮನೆ, ಕರಿಯದಕ್ಕೆ ಕರಿ ಮನೆ, ಮಂತ್ರಿಯೆಂಬವನು ಉಭಯಗತಿಗಳಲ್ಲಿ ನಿಷ್ಣಾತನಾದವನು. ಬೇಕಾದ ದಿಕ್ಕಿಗೆ ಬೇಕಾದಷ್ಟು ದೂರ ಸರಳವಾಗಿ ಹೋಗಿ ಬರುವ ವಿದ್ಯೆ ಇವನಿಗೆ ಕರಗತವಾಗಿದೆ. ಆಟದ ಕಾಯಿಗಳಲ್ಲಿ ಇದೇ ಬಹು ಮುಖ್ಯವಾದದ್ದು. ಇದು ಹೋದರೆ ಆಟಗಾರನ ಬಲಗೈ ಮುರಿದಂತೆ ಎಂದು ಹೇಳುತ್ತಾರೆ. ಆದರೆ ಇದನ್ನು ಕಳೆದುಕೊಂಡ ಮೇಲೂ ಆಟ ಗೆದ್ದುದನ್ನು ನಾನು ಕಂಡಿದ್ದೇನೆ.

ಆನೆ, ಒಂಟೆ ಹಾಗೂ ಮಂತ್ರಿ ಇವು ಮೂರೂ ಪ್ರಬಲಶಕ್ತಿಗಳು. ಆದರೆ ಇವು ಯಾವಕ್ಕೂ ನಮ್ಮ ಶಾಲಾ ವಿದ್ಯಾರ್ಥಿಯಷ್ಟು ಶಿಕ್ಷಣ ದೊರೆತಿಲ್ಲವೆಂದು ಕನಿಕರದಿಂದ ಹೇಳಬೇಕಾಗಿದೆ. ಮತ್ತೇನೂ ಬೇಡ, ನಮ್ಮ ಮಕ್ಕಳಿಗೆ ತಿಳಿದಿರುವ ಒಂದೆರಡು ನೀತಿಕಥೆಗಳನ್ನಾದರೂ ಇವು ತಿಳಿದಿದ್ದರೆ, ಇನ್ನಷ್ಟು ವಿವೇಕದಿಂದ ನಡೆಯಬಹುದಾಗಿತ್ತೊ ಏನೊ! ತಮ್ಮ ಹಾದಿಗೆ ಅಡ್ಡವಾಗಿ ಒಂದು ಕಾಯಿ ಬಂದರೆ ಇವು ಏನು ಮಾಡುತ್ತವೆಂದು ತಿಳಿದಿದ್ದೀರಿ? ಬಂದ ಹಾದಿಗೆ ಸುಂಕವಿಲ್ಲವೆಂಬಂತೆ ತಿರುಗಿ ಹೋಗುತ್ತವೆ; ಸಾಧ್ಯವಾದರೆ ಶ್ವಾಪದಗಳಂತೆ ಆ ಕಾಯನ್ನು ಹರಿದು ತಿನ್ನುತ್ತವೆ. ಒಂದೇ ಆಡು ಹಾಯ್ದು ಹೋಗಬಲ್ಲ ಸೇತುವೆಯ ಮೇಲೆ ಎರಡೂ ಚಾಣ ಹೋತಗಳು ದಾಟ ಹೋದಂತೆ ಇವು ಮಾಡಲಾರವು. ಏಕೆಂದರೆ ಇವು ಸೇತುವೆ ದಾಟಲಿಕ್ಕೆ ಹೊರಟ ಹೋತಗಳಲ್ಲ; ಹೊಡೆದಾಡುವುದಕ್ಕೆ ನಿಂತ ಎದುರಾಳಿಗಳು. ಇಂತಹರಿಗೆ ಯಾವ ಇಸೋಪನು ಏನು ನೀತಿ ಕಲಿಸಬಲ್ಲ? ಚದುರಂಗದ ಕಾಯಿಯೆಲ್ಲ ಮೊಂಡ ಜಾತಿಯಲ್ಲವೆಂಬುದಕ್ಕೆ ಕುದುರೆಯೆಂಬ ಕಾಯಿಗಳಿವೆ. ಇವು ನಡುವೆ ನಿಂತವರ ತಲೆಯ ಮೇಲೆ ಜಿಗಿದು ಆಚೆಗೆ ಹೋಗಬಲ್ಲವು. ಭಾಮಿನೀಷಟ್ಪದಿಯ ರಚನೆಯಂತೆ ಈ ಕುದುರೆಯ ಗತಿ ಮಿಶ್ರವಾಗಿದೆ. ಒಂದು ಹೆಜ್ಜೆ ಒಂಟೆಯದೂ ಇನ್ನೊಂದು ಹೆಜ್ಜೆ ಆನೆಯದೂ ಕೂಡಿಕೊಂಡು ಕುದುರೆಯ ನಡಗೆ ಹಂಡಬಂಡವಾಗಿ ಇರುವುದರಿಂದ ಅದನ್ನು ಹಿಡಿದು ನಿಲ್ಲಿಸುವುದು ಬಲು ತೊಡಕಿನ ಕೆಲಸ. ಮಧ್ಯದಲ್ಲಿ ಒಂದು ಕುದುರೆ ನಿಂತಿದ್ದರೆ ಅದು ಇದೇ ದಿಕ್ಕಿಗೆ ಹೋದೀತೆಂದು ನಿರ್ಧರಿಸುವುದು ಯಾವಾಗಲೂ ಸಾಧ್ಯವಿಲ್ಲ. ಬೇರೆ ಬೇರೆಯಾದ ಎಂಟು ಸ್ಥಳಗಳಲ್ಲಿ ಯಾವುದಾದರೂ ಒಂದಕ್ಕೆ ಅದು ಜಿಗಿಯಬಹುದು. ಕುದುರೆಯ ನೆಲೆ ತಿಳಿಯದು ಎಂಬುದು ಏಕೆ ಮತ್ತೆ? ಇದು ಬಲು ಮಂಗನಂತಹ ಕಾಯಿ, ಶಹಾ ಕೊಡುವಲ್ಲಿ ಕುದುರೆ ಅಗ್ರಗಣ್ಯ. "ಕಾಥ ಶಹಾ" ಮಾಡಿ

ಘರ್ಜಿತಿನ್ನುವುದಕ್ಕಿಂತಲೂ ಇದು ಸರ್ವೋತ್ಕೃಷ್ಟ ಸಾಧನ. ಮಾತು ಮಾಡುವ ಕಾಲದಲ್ಲಿ ಎಷ್ಟು ಮನೆ ಹಿಡಿದು ಪೇಚು ಒಡ್ಡುತ್ತದೆ! ನನ್ನ ಶಿಷ್ಯನಿಗೆ ಈ ಕಾಯಿ ಕಂಡರಾಗದು. ನನ್ನ ಯಾವ ಕಾಯಿ ಬಿಟ್ಟರೂ ಇದನ್ನು ಮಾತ್ರ ಅವನು ಉಳಿಯಗೊಡುವುದಿಲ್ಲ. ತನ್ನ ಆನೆ, ಕುದುರೆ, ಒಂಟೆ, ಕೊನೆಗೆ ಮಂತ್ರಿಯನ್ನು ಕೂಡ ಬಲಿಕೊಟ್ಟು ನನ್ನ ಕುದುರೆ ಕೊಲ್ಲಲು ಅವನು ಬದ್ಧಕಂಕಣನಾಗಿ ಹೊರಡುತ್ತಾನೆ. ಅಶ್ವಮೇಧ ಅವನ ಆದ್ಯ ಕರ್ತವ್ಯ. ಈ ಏಕಗ್ರಾಹಿಯಾದ ದುರುದ್ದೇಶವೆ ಅನೇಕಸಲ ಅವನ ಸೋಲಿಗೆ ಸೋಪಾನವಾಗುತ್ತದೆ. ಅವನ ಕುದುರೆಗಳನ್ನು ನಾನು ತೆಗೆದುಹಾಕಿದರೆ ಅವನು ಮರುಗುವುದಿಲ್ಲ. ಒಮ್ಮೊಮ್ಮೆ ಒಳ್ಳೆಯದೆ ಆಯಿತೆನ್ನುತ್ತಾನೆ. ಏಕೆಂದರೆ ಅವುಗಳ ಅಡ್ಡ ಹಾರಿಕೆ ಅವನಿಗೆ ಎಷ್ಟೋಸಲ ಎಡಚಾಗಿದೆ. ಚದುರಂಗದಾಟಕ್ಕೆ ಅವನು ಅನೇಕ ತಿದ್ದುಪಡಿಗಳನ್ನು ಸಿದ್ಧಪಡಿಸಿಟ್ಟುಕೊಂಡಿದ್ದಾನೆ. ಅವುಗಳಲ್ಲಿ ಮುಖ್ಯವಾದದ್ದು "ಈ ಕುದುರೆಯೆಂಬ ಕಾಯಿಗಳನ್ನು ಕಿತ್ತು ಒಗೆಯುವುದು."

ಈ ಶಿಷ್ಯನ ಎರಡನೆಯ ಗುರುವೊಬ್ಬನಿದ್ದಾನೆ. ಅವನ ವ್ಯಾಪಾರವೆಲ್ಲ ಎರಡು ಒಂಟೆಗಳ ಮೇಲೆ ನಡೆಯತಕ್ಕದ್ದು. ಅವನ ಆಟ ನೋಡಿದಾಗ ಒಂಟೆಯಂತಹ ಉತ್ತಮ ಕಾಯಿ ಇನ್ನೊಂದಿಲ್ಲವೆನಿಸುತ್ತದೆ. "ಒಂಟೆಯ ಹಿಡಿತ" ಏನೆಂಬುದನ್ನು ಅವನ ಆಟ ಅಷ್ಟು ಸೊಗಸಾಗಿ ಪ್ರಕಟಗೊಳಿಸುತ್ತದೆ. ಆದರೆ ಅವನ ಗುಣವೆ ಅವನ ದೋಷವಾಗಿದೆ. ಈ ಒಂಟೆ ಕಳೆದು ಹೋಯಿತೊ, ಅವನ ಆಟ ಪಾತಾಳಕ್ಕೆ ಇಳಿದು ಹೋಗುತ್ತದೆ. ಹೀಗೆ ಯಾವುದಾದರೂ ಒಂದು ಕಾಯಿಯ ಬಲದಿಂದ ಆಟವಾಡುವವನು ತನ್ನ ಕೈಯನ್ನು ತಾನೆ ಕಟ್ಟಿಸಿಕೊಳ್ಳುತ್ತಾನೆ. ಸಮಗ್ರದೃಷ್ಟಿ ಹಾಗೂ ಸಮಷ್ಟಿಯ ಹದ ಎರಡೂ ಇದ್ದವನು ಎಂದಿಗೂ ಗೆದ್ದವನೆ. ಮಂತ್ರಿ ಮತ್ತು ಆನೆ ಎರಡರ ಬಲದಿಂದ ಅರಸನನ್ನು ಇರುಕಿಗೆ ಹಾಕಿ, ಎಳೆದು ತರುವುದು ಸಾಮಾನ್ಯವಾದ ಪದ್ಧತಿ. ಆದರೆ ರಾಜನು ಬಯಲಲ್ಲಿ ಸಿಕ್ಕಾಗ ಮಾತ್ರ ಈ ವಿಧಾನ ಸುಕರವಾಗುತ್ತದೆ. ಏಕೆಂದರೆ ಈ ರಾಜನೆಂಬವನು ಹಾವಿನ ಜಾತಿ. ಎಲ್ಲಾದರೂ ಒಂದು ಸಂದು ಸಿಕ್ಕರಾಯಿತು, ಅದರೊಳಗೆ ಅಡಗಿಕೊಂಡು ಕುಳಿತುಬಿಡುತ್ತಾನೆ. ಕುದುರೆ ಒಂಟೆಗಳಿದ್ದರೆ ಇಂತಹ ಹೊತ್ತಿನಲ್ಲಿ ಅಹಿಂಸಾಮಯವಾಗಿಯೆ ಈ ಅಡಗಿಕುಳಿತ ಅರಸನನ್ನು ಹೊರಗೆಳೆದು ಹಣ್ಣು ಮಾಡಬಹುದು. ಅಲ್ಲದಿದ್ದರೆ ಒಂದೆರಡು ಬಲಿ ಕೊಡಬೇಕಾದೀತು. ಈ ತೊಂದರೆ ಬೇಡವೆಂದು ಕೆಲವರು ಮುಂಚಿತವಾಗಿಯೆ ಎಲ್ಲ ಸೈನ್ಯವನ್ನು ತರಿದುಹಾಕಿ ಸಂದಿಗೊಂದಿ ಉಳಿಯದಂತೆ ನೋಡಿಕೊಳ್ಳುತ್ತಾರೆ. ಒಡ್ಡಿದ ಬಲೆಯ ವರೆಗೆ ಅವನು ನಡೆದು ಬರಲೆಂದು ಇವರು ಹುಡುಕಿ ಹಿಡಿವುದೂ ಅವನು ನುಸುಳಿಕೊಂಡು ತಪ್ಪಿಸುವುದೂ ನಡೆಯುತ್ತದೆ. ಆಟದಲ್ಲಿ ಅತಿ ಸ್ವಾರಸ್ಯವಾದ ಆದರೆ ಒಮ್ಮೊಮ್ಮೆ ಬಲು ತಲೆ ಕೆಡಿಸುವ ಭಾಗ ಎಂದರೆ ಇದೇ. ಮುಂದಿನ ಹತ್ತು ಆಟಗಳನ್ನು ಲೆಕ್ಕ ಹಾಕಿ ಇವನು ಬಲೆಹೆಣೆಯುತ್ತಾನೆ. ಅದೆಲ್ಲವನ್ನೂ ಊಹಿಸಿ ಅವನು ತಪ್ಪಿಸಿಕೊಳ್ಳಲು ಹವಣಿಸುತ್ತಾನೆ. 'ಶಹಾ' ತಪ್ಪಬಾರದು; ತನ್ನ ಕಾಯಿ ಸಾಯಬಾರದು; ಅರಸನಿಗೆ ಅಡಲು ಮನೆಯಿರಬೇಕು. ಈ ಮನೆಗೇ ಅವನು ಬಂದು ನಿಲ್ಲಬೇಕು. ಈ ಪೇದೆಯಿಂದಲೆ ಆಟ ಮುಗಿಯಬೇಕು. ಇದು ಒಬ್ಬನ ಲೆಕ್ಕ. ಇದೆಲ್ಲವನ್ನೂ ತಪ್ಪಿಸಿಬಿಡುವುದು ಇನ್ನೊಬ್ಬನ ಲೆಕ್ಕ. ಎರಡೂ ನಿಟ್ಟಿನ ಮೆದುಳು ಬಹಳ ಕೆಲಸ ಮಾಡುತ್ತವೆ. 'ಬುದ್ಧಿ ಬಲ' ಎಂಬ ಹೆಸರಿಗೆ ಅರ್ಥ ಬರತೊಡಗುತ್ತದೆ.

ಇಷ್ಟು ಪೇಚಾಟ ಏಕೆಂದರೆ ಇದು ಭಾರತೀಯ ಆಟವಾದುದರಿಂದ. ಅದರಲ್ಲೂ 'ಪಾಚ ಮೊಹರೀ' ಆದರೆ ಗೆಲ್ಲುವವನು ಬಲ್ಲಿದನೆ ಆಗಿರಬೇಕು. ಪಾಶ್ಚಾತ್ಯ ಪದ್ಧತಿಯ

ಆಟದಲ್ಲಿ ಈ ದುಃಖವಿಲ್ಲ. 'ಮಾತು' ಮಾಡಿದರೆ ಆಯಿತು. ಪೇದೆಯಿಂದಲೆ ಆಗಬೇಕೆಂಬ ಛಲವಿಲ್ಲ. ಅವರ ರಾಜನು ನಮ್ಮ ರಾಜನಂತೆ ಒಮ್ಮೆ ಕುದುರೆಯ ಜಿಗಿತ ಜಿಗಿಯುವುದಿಲ್ಲ. ಆನೆಯ ಸ್ಥಾನಕ್ಕೆ ತಾನು ಕುಳಿತು ಅದನ್ನು ಈಚೆಗೆ ತಳ್ಳುತ್ತಾನೆ. ಈ ಕ್ಯಾಸ್ಲಿಂಗ್ ವಿಧಾನದಿಂದ ಕೆಲಸ ಹಗುರಾಗುತ್ತದೆ. 'ಮಸ್ತು' ಬಿಡುವ ಅಗತ್ಯವೂ ಇಲ್ಲವಾದ್ದರಿಂದ ಈ ಆಟವನ್ನು ದುಃಖವಿಲ್ಲದೆ ಆಡಬಹುದು. ಭಾರತೀಯರಿಗೆ ಇದು ಬರಿ ಆಟವೆನಿಸೀತು; ಆದರೆ ಅದೆಂದಿಗೂ "ಬುದ್ಧಿಬಳ"ವಾಗಲಿಕ್ಕಿಲ್ಲ. ಸರಳವೂ ಸುಲಭವೂ ಆದದ್ದರಲ್ಲಿ ಸ್ವಾರಸ್ಯ ಏನು ಕಂಡೀತು? ಜಟಿಲ ಜಟಿಲವಾಗಿರುವುದನ್ನು ಹಿಡಿದು ಬಿಡಿಸುವುದೆ ಬುದ್ಧಿವಂತಿಕೆ, ಬಿಡಿಸಲಾಗದಂತೆ ತೊಡಕು ಹಾಕುವುದು ಅದಕ್ಕೂ ಹೆಚ್ಚಿನ ಧೀಮಂತಿಕೆ. ಈ ಎರಡೂ ಕೂಡಿದರೆ ಅದು "ಚದುರಂಗ" ಆಗುತ್ತದೆ. ಮೂವತ್ತೆರಡು ಕಾಯಿಗಳನ್ನು ಅರವತ್ತುನಾಲ್ಕು ಮನೆಗಳಲ್ಲಿ ಸುಮ್ಮನೆ ಸರಿಸಿ ಇಟ್ಟರೆ ಅದೇನು ಆಟವಾಯಿತು?

ಮಾತು ಮಾಡುವವರು ಸೋಲುವವನಿಗೆ ರಾಜನಲ್ಲದೆ ಇನ್ನೊಂದು ಕಾಯಿ ಉಳಿಸಿಕೊಡುವುದುಂಟು. ಅದು "ಮಸ್ತು" ಎಂದರೆ ನೀವು ಅದನ್ನು ಕೊಲ್ಲುವಂತಿಲ್ಲ. ಏಕಾಕಿ ದುರ್ಯೋಧನನಂತೆ ಅರಕ್ಷಿತವಾಗಿದ್ದರೂ ಈ ಮಸ್ತು ಎಲ್ಲಿ ಬೇಕಲ್ಲಿ ನುಗ್ಗಿ ಯಾರನ್ನಾದರೂ ಕೊಲ್ಲಬಲ್ಲದು. ಆದರೆ ಅದಕ್ಕೆ ಕೊಲ್ಲಲು ಅವಕಾಶವೇ ಸಿಗುವುದಿಲ್ಲ. ಸುಮ್ಮನೆ ಎಡತಾಕಿ ತನ್ನ ಒಡೆಯನಿಗೆ ಉಪಯೋಗವಿಲ್ಲದಂತೆ ನಡೆದುಕೊಳ್ಳುವುದೆ ಅದರ ಭಾಗ್ಯವಾಗುತ್ತದೆ. ಆತ್ಮತತ್ವದಂತೆ ಅದು ಕೊಲ್ಲುವುದೂ ಇಲ್ಲ, ಸಾಯುವುದೂ ಇಲ್ಲ. "ಯ ಏನಂ ವೇತ್ತಿ ಹಂತಾರಂ ಯ ಏನಂ ಮನ್ಯತೇ ಹತಂ, ಉಭೌ ತೌ ನ ವಿಜಾನೀತಃ ನಾಯಂ ಹಂತಿ ನ ಹನ್ಯತೇ." ಇಷ್ಟೇ ಅಲ್ಲ. ತನ್ನ ದುರ್ಗತಿಯಿಂದ ತನ್ನ ಅರಸನನ್ನು ಸೋಲಿಗೆ ಗುರಿ ಮಾಡುವುದಕ್ಕೂ ಅದು ಕಾರಣವಾಗಬಹುದು.

ಜಾಣನಾದ ಆಟಗಾರ ಇಷ್ಟೊಂದು ದಣಿಯುವುದಿಲ್ಲ. ರಾಜನನ್ನು ಒಂದು ಮನೆ ಹೊರಗೆಳೆದರೆ ಸಾಕು, ಅಲ್ಲಿಯೆ, ಅವನನ್ನು ಕಟ್ಟಿ "ಮಾತು" ಮಾಡಿ ಬಿಡುವ ಹದ ಅವನಿಗಿರುತ್ತದೆ. ಆ ರಾಜನ ಸೈನ್ಯ ಸಮಗ್ರವಾಗಿ ಇದ್ದರೂ ಅವನು ನಿಃಸಹಾಯನಾಗಿ ನಿಲ್ಲುತ್ತಾನೆ. ದುಃಶಾಸನನನ್ನು ಭೀಮಸೇನ ಹಿಡಿದೆಳೆದಂತೆ ಉಭಯ ಸೇನಾಸಮಕ್ಷದಲ್ಲಿ ಒಂದು ಕಾಯಿ ಅವನನ್ನು ಹೆಡಮುರಿಗೆ ಕಟ್ಟಿ ನಿಲ್ಲಿಸುತ್ತದೆ. ರಾಜನಾದವನಿಗೆ ಸುತ್ತಲೂ ಒಂದು ಪರಿವಾರ ಏಕೆ ಬೇಕೆಂಬುದನ್ನು ಚದುರಂಗ ತಿಳಿಸಿ ಕೊಡುತ್ತದೆ. ಅರಕ್ಷಿತನಾದ ಅರಸ ಅಪಾಯವನ್ನು ಆಹ್ವಾನಿಸುತ್ತಾನೆ. ಆನೆ-ಕುದುರೆಗಳು ಅರಸನಿಗೊಂದು ವೈಭವವಲ್ಲ, ಆತ್ಮರಕ್ಷಣೆಯ ಉಪಾದಾನ, ಆಟದಲ್ಲಿ ದಾಳಿಯಿಡುವ ಮೊದಲು ಆಟಗಾರರು ತಮ್ಮ ಅರಸನಿಗೊಂದು ಕೋಟೆ ಕಟ್ಟಿಕೊಟ್ಟು ಅವನು ಸುರಕ್ಷಿತವಾಗಿರುವಂತೆ ಕಾವಲಿಡುತ್ತಾರೆ. ಪದ್ಮವ್ಯೂಹದ ಮಧ್ಯದಲ್ಲಿ ದ್ರೋಣಾಚಾರ್ಯರು ಜಯದ್ರಥನನ್ನು ಭದ್ರವಾಗಿ ಬಚ್ಚಿಟ್ಟಂತೆ ಅರಸನನ್ನು ಬಿಗಿಯಾದ ಕಾವಲಲ್ಲಿ ನಿಲ್ಲಿಸುತ್ತಾರೆ. ಭಾರತಯುದ್ಧದ ಶ್ಯೇನವ್ಯೂಹ, ಶಕಟವ್ಯೂಹಗಳಂತೆ ಚದುರಂಗದಲ್ಲಿ ಯಾವ ಯಾವ ವ್ಯೂಹಕ್ಕೆ ಏನೇನು ಹೆಸರುಂಟೊ ನಾನು ಹೇಳಲಾರೆ. ನನ್ನ ಚದುರಂಗ ಚಾತುರ್ಯ ಅಷ್ಟು ಮುಂದುವರೆದಿಲ್ಲ. ಎಂತಹ ಚಕ್ರವ್ಯೂಹವನ್ನೂ ಭೇದಿಸಿ ವೈರಿಯನ್ನು ವಧೆ ಮಾಡುವ ಅರ್ಜುನರಿದ್ದಾರೆ. ಒಳಗೆ ನುಗ್ಗಿ ಅಳಿದುಹೋಗುವ ಅಭಿಮನ್ಯುಗಳೂ ಇದ್ದಾರೆ. ತನ್ನ ಉದ್ದೇಶದ ಸುಳಿವು ಹತ್ತದಂತೆ ಸರಿದಾಡುವ ಕಾರಸ್ಥಾನಕ್ಕೆ ಕೃಷ್ಣನಂತಹ ಕುಶಲಮತಿಯೆಬೇಕು. ಚದುರಂಗವೊಂದು ಭಾರತವಾಗಲಿಕ್ಕಿಲ್ಲ. ಆದರೆ ಆ ಕಥೆಯ ಪ್ರತಿಚ್ಛಾಯೆ ಈ ಆಟದಲ್ಲಿ ಕ್ಷಣಕ್ಷಣಕ್ಕೆ ಮಿಂಚುತ್ತದೆ. ಭಾರತದ ಸೂತ್ರಧಾರ ಹೇಳಿದ ಸ್ಥಿತಪ್ರಜ್ಞನ ಭಾಷೆ ಆಟಗಾರನಿಗೆ ಆದರ್ಶವಾಗುತ್ತದೆ. ಆಟದ ಪಟದಲ್ಲಿ ಮೈಗೂಡಿಸಿಕೊಂಡ ಈ ಹದ ಅವನ ನಿತ್ಯದ ಜೀವನಕ್ಕೂ ನಿಲುಕಲಿಕ್ಕಿಲ್ಲವೆ? ಜೀವನದಲ್ಲಿಯ ಈ ಹದ ಕಂಡುಕೊಳ್ಳದವನು ಆಟದಲ್ಲಾದರೂ ಅದನ್ನು ಹೇಗೆ ಪಡೆದಾನು?

ಪೂರ್ವಕಾಲದ ರಾಜಾಧಿರಾಜರೂ ಮುತ್ಸದ್ದಿಮೇಧಾವಿಗಳೂ ಈ ಆಟವನ್ನು ಆಡುತ್ತಿದ್ದರೆಂಬುದನ್ನು ನೆನೆದಾಗ ಅವರ ವಿಷಯದಲ್ಲಿ ನನಗೆ ಗೌರವದ ಭಾವನೆ ಮೂಡುತ್ತದೆ. ಮನುಷ್ಯಕುಲದ ಮೊದಲವರ್ಗವೆಂದು ಜನತೆ ಇವರನ್ನು ಏಕೆ ಮನ್ನಿಸುತ್ತಿತ್ತೆಂಬುದು ನನಗೆ ಅರ್ಥವಾಗುತ್ತದೆ. ಅವರು ತಮ್ಮ ಉಜ್ವಲ ಚರಿತ್ರೆಯಲ್ಲಿ ಆದ್ಯಂತವಾಗಿ ತೋರಿದ ಅಗಾಧ ಧೈರ್ಯ, ಸ್ಥೈರ್ಯಗಳಾಗಲಿ, ಸಹಸ್ರಕಾಲ ನಿಲ್ಲುವಂತೆ ಸ್ಪಷ್ಟಮಾಡಿದ ಅವರ ಶಿಲ್ಪ-ಸಾಹಿತ್ಯ-ಸಾಮ್ರಾಜ್ಯಗಳಾಗಲಿ ಕೇವಲ ಆಕಸ್ಮಿಕ ಘಟನೆಗಳಾಗಿರಲಿಲ್ಲ; ಚರಿತ್ರೆಯ ವೈಚಿತ್ರ್ಯಗಳಾಗಿರಲಿಲ್ಲ. ಅವು ಅವರ ಜೀವನದ ಒಂದು ಅಭಿವ್ಯಕ್ತಿ, ಸ್ವಭಾವದ ಒಂದು ಪ್ರತೀಕ, ಈ ಕೃತಿಗಳಿಗಿಂತಲೂ ಅವುಗಳ ಹಿಂದಿರುವ ಮನಸ್ಸು ಎಂತಹದು! ಎಂತಹ ಸೂಕ್ಷ್ಮವಾದ ದೂರದೃಷ್ಟಿ! ಏನು ಸಮರ್ಥವಾದ ಸೃಷ್ಟಿ! ಇದ್ದ ಸಾಮ್ರಾಜ್ಯಗಳನ್ನು ಮುರಿಯುವುದಕ್ಕೂ ಅವುಗಳಿಗಿಂತ ಉತ್ತಮವಾದುದನ್ನು ಕಟ್ಟಿ ನಿಲ್ಲಿಸುವುದಕ್ಕೂ ಅವರು ಏಕೆ ಸಮರ್ಥರಾದರು? ಸಮಗ್ರಜೀವನವೆ ಅವರಿಗೊಂದು ಚದುರಂಗದ ಪಟವಾಗಿತ್ತು. ಚದುರಂಗದ ಚಿಕ್ಕಪ್ರಯೋಗಶಾಲೆಯಲ್ಲಿ ಪ್ರತ್ಯಕ್ಷಜೀವನದ ಸಮಸ್ಯೆಗಳನ್ನು ಚಿತ್ರಿಸಿ ಬಿಡಿಸುವ ಕುಶಲತೆ ಅವರಿಗೆ ಕರಗತವಾಗಿತ್ತು.

ಉತ್ತಮವಾದ ಆಟ ಜೀವನದ ಒಂದು ನಕ್ಷೆ. ಮನುಷ್ಯನ ಮೂಲಪ್ರವೃತ್ತಿಗಳನ್ನು ತೃಪ್ತಿಪಡಿಸುವುದೊಂದೆ ಆಟದ ಉದ್ದೇಶವಾಗಿರಲಾರದು. ತನ್ನ ಪ್ರಭುಶಕ್ತಿ ಉತ್ಸಾಹಶಕ್ತಿಗಳಿಗೆ ಹೊಸ ಕ್ಷೇತ್ರವನ್ನು ನಿರ್ಮಿಸಿಕೊಂಡು, ವ್ಯಕ್ತಿತ್ವವಿಕಾಸದ ಯೋಜನೆಗೆ ತನ್ನ ಮೂಲಪ್ರವೃತ್ತಿಗಳನ್ನು ಅಳವಡಿಸಿಕೊಳ್ಳುವುದು ಸಂಸ್ಕೃತಿಯ ಸತತ ಪ್ರಯತ್ನವಾಗಿದೆ. ಆಟಗಾರನು ಆಟದಲ್ಲಿ ತನ್ನ ಜೀವನದ ಪ್ರತಿಬಿಂಬವನ್ನು ರೂಪಿಸುತ್ತಿರುತ್ತಾನೆ. ದೂರದರ್ಶಿಯಾಗಿ ತನ್ನ ಯೋಜನೆಯ ಪೂರ್ವಪ್ರತಿಯನ್ನು ಮನಸ್ಸಿನಲ್ಲಿ ನಿರ್ಮಿಸಿಕೊಂಡು ಅದರ ಮೂಲಸ್ತಂಭಗಳನ್ನು ಒಂದೊಂದಾಗಿ ನಿಲ್ಲಿಸತೊಡಗುತ್ತಾನೆ. ಈ ಯೋಜನೆಯ ನಿರ್ವಹಣದಲ್ಲಿ ಎದುರಾದ ಪ್ರತಿಕ್ರಿಯೆಗಳನ್ನು ನಿವಾರಿಸಿ ಮುಂದುವರೆಯುತ್ತಾನೆ. ತನ್ನಷ್ಟೇ ಸ್ವತಂತ್ರನಾದ ಇನ್ನೊಬ್ಬ ಎದುರಾಳಿಯುಂಟೆಂಬುದನ್ನು ಗಮನಿಸಿ ಆತನ ಕ್ರಿಯೆ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುತ್ತಾನೆ. ಈ ಸ್ಮರಣೆ, ಈ ತಿಳಿವಳಿಕೆ ಇನ್ನಷ್ಟು ವಿಶಾಲವಾಗಿ ಪಟದ ಹೊರಗಿನ ಘಟನೆಗಳಿಗೂ ಅದೇಕೆ ಹಬ್ಬಲಿಕ್ಕಿಲ್ಲ? ಭವಿಷ್ಯತ್ತಿನ ಪೂರ್ವನಿರೀಕ್ಷೆ, ಇನ್ನೊಬ್ಬನ ಕಣ್ಣಲ್ಲಿ ನಿಂತು 'ತನ್ನನ್ನೇ ತಾನು ನೋಡಿಕೊಳ್ಳುವ ಹದ ಇವೆರಡನ್ನೂ ಈ ಆಟ ಕಲಿಸಿಕೊಡುತ್ತದೆ.

ಚದುರಂಗವನ್ನು ಚೆನ್ನಾಗಿ ಆಡುವವನಿಗೆ ತನ್ನ ಎದುರಿಗೆ ಇರುವ ಕಾಯಿ ಒಂದರಂತೆ ಒಂದಿಲ್ಲದ ಸಜೀವಶಕ್ತಿಗಳೆಂಬುದು ತಿಳಿದಿರುತ್ತದೆ. ಇವುಗಳಲ್ಲಿ ಕೆಲವು ಮೇಲೆ ಕೆಲವು ಕೀಳು ಇರಬಹುದಾದರೂ ಸ್ಥಾನಬಲದಿಂದ, ಪ್ರಸಂಗವಶದಿಂದ, ಆಡುವವನ ಕೈವಾಡದಿಂದ ಎಂತಹ ಸಣ್ಣ ಕಾಯಿಯೂ ಅತ್ಯಂತ ಪ್ರಚಂಡವಾಗಿ ಪರಿಣಮಿಸಬಹುದು. ಹೀನಶಕ್ತಿಯನ್ನು ಪ್ರಬಲಶಕ್ತಿಯಾಗಿ ಪರಿವರ್ತಿಸುವುದಕ್ಕೆಂದೇ ಅವನು ತನ್ನ ಬುದ್ಧಿಯನ್ನು ಬಳಸುತ್ತಿದ್ದಾನೆ. ಸೋಲು ಸನ್ನಿಹಿತವೆಂದು ತೋರಿದಾಗಲೂ ಬುದ್ಧಿವಂತಿಕೆಯಿಂದ ಗೆಲವಿನ ಹಾದಿ ಹಿಡಿಯುವ ಪ್ರಯತ್ನವನ್ನು ಅವನು ಬಿಟ್ಟುಕೊಡುವುದಿಲ್ಲ. ಆಟದಲ್ಲಿಯ ಸೋಲು ಗೆಲವು ತನ್ನ ಕೈಯ ಕೆಲಸವೆಂದು ಅವನು ನಂಬಿರುತ್ತಾನೆ. ಈ ಚಿತ್ತವೃತ್ತಿ, ಈ ತಿಳಿವಳಿಕೆ ಅವನ ಜೀವನವನ್ನೂ ತುಂಬಿಕೊಂಡರೆ, ಅವನು ಪಟದ ಮುಂದೆ ಕುಳಿತದ್ದು ಸಾರ್ಥಕ. ಅಂತಹ ಆಟಗಾರನಿಂದ ಆ ಆಟವೂ ಸಾರ್ಥಕ.

ಜ್ಯೋತಿಷಿ: ಶ್ರೀ ಕೃಷ್ಣಶಾಸ್ತ್ರಿ ಭಿಡೆ
ಭವಿಷ್ಯ ಕಥನ ಆಫೀಸ
ಮನೆ ನಂಬರ ೨೮೮೦. (ಸಿಟಿ ಪೋಲೀಸ ಸ್ಟೇಶನ್ ಎದುರಿಗೆ)
ಖಡೇಬಾಜಾರ ಬೆಳಗಾವಿ

★ ವರ್ಷ ಭವಿಷ್ಯ ★

ಶಕೆ ೧೮೮೩ ಕಾರ್ತಿಕ ಶುದ್ಧ ೧ ಗುರುವಾರದಿಂದ ಶಕೆ ೧೮೮೪ ಆಶ್ವಿನ ಬಹುಳ ೩೦ ರವಿವಾರ ವರೆಗಿನ ಅಂದರೆ ೧೯೬೧ ನವಂಬರ ೯ ರಿಂದ ೧೯೬೨ ಅಕ್ಟೋಬರ ೨೮ ರ ವರೆಗಿನ ಒಂದು ವರ್ಷದ ಭವಿಷ್ಯ.

(ಈ ದೀಪಾವಳಿಯಿಂದ ಮುಂದಿನ ದೀಪಾವಳಿಯ ವರೆಗೆ)

ಸೂಚನೆ:— ಅಷ್ಟಗ್ರಹಗಳ ಫಲದ ಪರಿಣಾಮವು ಸ್ವಲ್ಪ ಹೆಚ್ಚು ಕಡಮೆ ಪ್ರಮಾಣದಿಂದ ಅನುಕೂಲ ಪ್ರತಿಕೂಲ ಇರುವದು. ಆದರೆ ಇದೆಲ್ಲ ಆಗುವಾಗ ರವಿಯು ಯಾವ ರಾಶಿಯಲ್ಲಿ ಮತ್ತು ಯಾವ ಅಂಶದಲ್ಲಿ ಇದ್ದು ಅವನ ಷಡ್‌ಭಾಂತರ ಪೂರ್ಣವಾಗುವ ವರೆಗೆ ಮಾತ್ರ ಆಗುವದು, ಅಂದರೆ ಅಷ್ಟಗ್ರಹ ಯೋಗವಾಗುವಾಗ ಸೂರ್ಯನು ಮಕರರಾಶಿಯಲ್ಲಿ ೨೨ನೆ ಅಂಶದಲ್ಲಿರುವನು. ಅವನು ಕರ್ಕ ರಾಶಿಯ ೨೯ ನೇ ಅಂಶದಲ್ಲಿ ಹೋಗುವ ವರೆಗೆ ಮಾತ್ರ ಅದರ ಫಲದ ಪರಿಣಾಮವಾಗಬಲ್ಲದು. ಹಾಗೆ ಸೂರ್ಯನು ೧೯೬೨ ಅಗಸ್ಟ ೮ ರಂದು ಷಡ್‌ಭಾಂತರವನ್ನು ಪೂರ್ಣಮಾಡುವನು. ಅಂದರೆ ಅಷ್ಟಗ್ರಹದ ಪರಿಣಾಮ ಸುಮಾರು ಆರು ತಿಂಗಳು ಮಾತ್ರ ಆಗುವದು.

ಈ ವರ್ಷಭವಿಷ್ಯವು ಸ್ಥೂಲಮಾನದ್ದು. ಅವರವರ ಜನ್ಮಕುಂಡಲಿಯ ಮೇಲಿಂದ ಭವಿಷ್ಯವನ್ನು ಹೇಳಿದರೆ ಮಾತ್ರ ಅದು ಪೂರ್ಣವಾಗಿ ಸತ್ಯವಾಗಿ ಪರಿಣಮಿಸುವದು. ಆದ್ದರೂ ಈ ಭವಿಷ್ಯದಿಂದ ಆಯಾ ರಾಶಿಯವರಿಗೆ ಆಗಬಹುದಾದ ದುಷ್ಟ—ಸತ್ಪರಿಣಾಮಗಳ ಕಲ್ಪನೆ ಮಾತ್ರ ನಿಶ್ಚಿತವಾಗಿ ಬರುವದು. ಜನ್ಮರಾಶಿಯಂತೆ ಜನ್ಮಲಗ್ನದಿಂದಲೂ ಭವಿಷ್ಯವನ್ನು ಹೇಳಿದರೆ ಅದು ಹೆಚ್ಚು ನಿಜವಾಗಿ ಪರಿಣಮಿಸಿದ್ದು ಕಂಡುಬರುವದು.

ಮೇಷ

ಒಟ್ಟಿಗೆ ಈ ರಾಶಿಯವರಿಗೆ ಈ ವರ್ಷ ಫೆಬ್ರುಆರಿ ೨೪ ರಿಂದ ಸಪ್ಟಂಬರ ೨೯ ರ ವರೆಗೆ ಬಹಳ ಉತ್ತಮ, ಯಶಸ್ವಿ, ಮತ್ತು ಒಳ್ಳೆ ಹೆಸರು ತರುವಂತಹದು ಎನಿಸುವದು. ಇದು ನಿಶ್ಚಿತ.

ಈ ರಾಶಿಯ ಜನರ ಆರೋಗ್ಯ ಈ ವರ್ಷ ಪೂರ್ಣ ನಿರೋಗಿಯುಳಿಯದಿದ್ದರೂ ಹಾಸಿಗೆ ಹಿಡಿಯುವಷ್ಟು ಯಾವ ವಿಕಾರವೂ ಆಗುವುದಿಲ್ಲ. ಮೈಯಲ್ಲಿ ಉಷ್ಣತೆ ಎನಿಸಿದರೂ ಮತ್ತು ಅದರಿಂದ ಕಣ್ಣುನೋವು, ಕಿವಿಯಲ್ಲಿ ಯಾವಾಗಲೂ ಶಬ್ದ ಕೇಳಿಬರುವದು, ಮೂತ್ರ ಹೊಯ್ಯುವಾಗ ತೊಂದರೆಯಾಗುವದು, ಇವೆಲ್ಲ ತೊಂದರೆ ಯಾವಾಗಲಾದರೂ ಅಗಬಹುದು. ಉಳಿದ ವಿಷಯಗಳಲ್ಲಿ ದೇಹಸುಖಕ್ಕೆ ಅವಶ್ಯಕವಾದ ಬಾಹ್ಯಾಂಗ ವಸ್ತುಗಳು ಈ ವರ್ಷ ಪೂರ್ಣ ಅನುಕೂಲ ಇರುವವು ಇದು ನಿಶ್ಚಯ. ಆದರೆ ಅವುಗಳ ಉಪಭೋಗ ನಿಶ್ಚಿತ ಸಮಯದಲ್ಲಿ ಆಗುವದಕ್ಕೆ ಮಾತ್ರ ಹಲವಾರು ಅನಪೇಕ್ಷಿತ ಅಡಚಣಿಗಳು ಬರುವವು. ಅದಕ್ಕಾಗಿ ಮನೋಭಂಗವಾಗಿ ಯಾವಾಗಾದರೊಮ್ಮೆ ತಲೆಗೆ ಬಹಳ ತ್ರಾಸೆನಿಸುವದು. ಅದರಲ್ಲಿಯೂ ಫೆಬ್ರುಆರಿ ೨೪ ರ ನಂತರದ ಅವಧಿಯು ಬಹಳ ಅನುಕೂಲ.

ಹೆಂಡತಿಯ ಆರೋಗ್ಯ ಈ ವರ್ಷ ಬಹಳ ಚನ್ನಾಗಿ ಉಳಿದು ಅವಳ ವರ್ತನೆಯು ಬಹಳ ಚಾಣಾಕ್ಷತನದ್ದಾಗುವದು. ನಿತವ್ಯಯದಿಂದ ಮತ್ತು ಕುಟುಂಬದಲ್ಲಿಯ ಎಲ್ಲರನ್ನು ಸಂಭಾಳಿಸಿಕೊಂಡು ಪ್ರಪಂಚರಥವನ್ನು ಸರಾಗವಾಗಿ ಸಾಗಿಸುವಳು. ಆದರೆ ಅವಳ ದೂರದರ್ಶಿತ್ವದ ಬೆಲೆ ನಿಮಗೆ ತಿಳಿಯದ್ದರಿಂದ ಉಭಯತರಲ್ಲಿ ಯಾವಾಗಾದರೊಮ್ಮೆ ಬಹಳ ಮತಭೇದವಾಗುವದು. ಅದರಂತೆ ಈ ರಾಶಿಯವರಲ್ಲಿ ಯಾರ ವಿವಾಹವಾಗಿರುವದಿಲ್ಲವೊ ಮತ್ತು ಯಾರು ಈ ವರ್ಷ ಮದುವೆಮಾಡಿಕೊಳ್ಳಬಯಸುವರೊ ಅವರ ಮದುವೆ ಫೆಬ್ರುಆರಿ ೨೪ ರ ನಂತರವೇ ಆಗುವದು. ಆದರೆ ಮದುವೆ ಕೂಡುವಾಗ ಬಹಳ ತೊಂದರೆಯಾಗುವದು. ಗೊಂದಲವೂ ಆಗುವದು. ಮತ್ತು ಲಗ್ನವನ್ನು ಬಹಳ ಗದ್ದಲ ಮಾಡದೆ ಹೇಗಾದರೂ ಮಾಡಿ ಮುಗಿಸಿಬಿಡಬೇಕಾಗುವದು. ಆದರೆ ಪತಿ ಇಲ್ಲವೆ ಪತ್ನಿಯು ಪರಸ್ಪರ ಪೂರ್ಣವಾಗಿ ರೂಪ, ಗುಣ ಮತ್ತು ಶಿಕ್ಷಣದಿಂದ ಅನುರೂಪ ಇರುವರು. ಆದರೆ ಪ್ರತಿ ಒಬ್ಬರ ಸ್ವಭಾವದ ಪೂರ್ಣ ಪರಿಚಯವಾಗಲಿಕ್ಕೆ ಮಾತ್ರ ಕೆಲ ಹೆಚ್ಚು ಕಾಲಾವಧಿ ಹಿಡಿಯುವದು. ಅದರಂತೆ ಪ್ರಾಪಂಚಿಕ ಸುಖದಲ್ಲಿ ಹೊರಗಿನಿಂದ ನೋಡುವವರಿಗೆ ಅನುಕೂಲವೆನಿಸಿದರೂ ಒಳಗೊಳಗೆ ಪ್ರತಿಯೊಬ್ಬರು ಸಕಾರಣವಾಗಿ ಇಲ್ಲವೆ ಕೆಲ ಸಂದರ್ಭಗಳಲ್ಲಿ ನಿಷ್ಕಾರಣವಾಗಿ ಅಸಂತುಷ್ಟ ಇದ್ದದ್ದು ಕಂಡು ಬರುವದು.

ಮಕ್ಕಳಲ್ಲಿ ಯಾರ ಮದುವೆಯನ್ನಾದರೂ ಈ ವರ್ಷ ಮಾಡುವದಿದ್ದರೆ ಅವರೇ ಮೊದಲು ಅದಕ್ಕೆ ಅಷ್ಟೊಂದು ಅನುಕೂಲ ಇರುವದಿಲ್ಲ. ಆದರೆ ಬಹಳ ತಿಳಿಸಿ ಹೇಳಿದ ಬಳಿಕ ಲಗ್ನಕೆ ಒಪ್ಪುವರು. ಆದರೆ ವಧೂ-ವರರ ಪರಸ್ಪರ ಮೆಚ್ಚಿಗೆಯಾಗಲಿಕ್ಕೆ ಬಹಳ ತೊಂದರೆಯೆನಿಸುವದು. ಫೆಬ್ರುಆರಿ ಒಳಗಂತೂ ಕೂಡಿಬರುವ ಹೆಸರೇ ಎತ್ತಬೇಡಿ. ಮಾರ್ಚ ನಂತರ ಮಾತ್ರ ಕೂಡಿಬರುವದು. ಮುಂದೆ ಮದುವೆ ವ್ಯವಸ್ಥಿತವಾಗಿ ಮತ್ತು ಮನಸ್ಸಿಗೆ ಬಂದಂತೆ ಆಗುವದು. ಅಳಿಯ ಇಲ್ಲವೆ ಸೊಸೆ ತಮ್ಮ ಸಂಗಾತಿಗಿಂತ ಗುಣ ರೂಪಗಳಿಂದ ಒಂದು ತೂಕ ಹೆಚ್ಚೇ ಇರುವರು. ನಿಮ್ಮ ಮಕ್ಕಳೆಲ್ಲರ ಉನ್ನತಿಗೆ ಈ ವರ್ಷ ಬಹಳ ಅನುಕೂಲ. ಮತ್ತು ಫೆಬ್ರುಆರಿ ೨೪ರ ನಂತರವಂತೂ ಅದು ಹೆಚ್ಚು ಪ್ರತ್ಯಯಕ್ಕೆ ಬರಹತ್ತುವದು. ಕಲಿಯುವವರು ಒಳ್ಳೆ ಯಶಸ್ವಿಯಾಗುವರು. ಆದರೆ ಅವರಲ್ಲಿ ಅನೇಕರು ನಿಮ್ಮ ಆಜ್ಞೆಯಲ್ಲಿ ಅಷ್ಟೊಂದು ಉಳಿಯುವದಿಲ್ಲ. ಸ್ವತಃದ ವಿಚಾರದಂತೆ ವರ್ತಿಸಹತ್ತುವರು. ಅದರಿಂದ ನಿಮಗೆ ಯಾವಾಗಾದರೊಮ್ಮೆ ಬಹಳ ಕೆಡಕೆನಿಸುವದು.

ಉದ್ಯೋಗ-ಧಂದೆ ದೃಷ್ಟಿಯಿಂದ ಈ ವರ್ಷ ಬಹಳ ಪ್ರಗತಿಯದೆನಿಸುವದು. ಫೆಬ್ರುಆರಿ ೨೪ರಿಂದ ಮುಂದೆ ಬರುವ ಹನ್ನೊಂದನೆ ಗುರುವಿನಿಂದ ಅದು ಬಹಳ ಜೋರಿನಲ್ಲಿ ಆಗುವದು. ಧಂದೆಯಲ್ಲಿ ಹೊಸ ಹೊಸ ಯೋಜನೆಯನ್ನು

ಮಾಡುವಿರಿ ಮತ್ತು ಅವು ಲಾಭದಾಯಕವೇ ಎನಿಸುವವು. ಪಾಲುಗಾರಿಕೆಯ ಧಂದೆಯಲ್ಲಿಯೂ ಬಹಳ ಲಾಭ ಎನಿಸುವದು. ಮತ್ತು ನಿಮ್ಮ ನಿಮ್ಮಲ್ಲಿ ಐಕಮತ್ಯವುಳಿಯುವದು. ಬಹುತರ ಜನರಿಗೆ ಈ ವರ್ಷ ಗುಪ್ತ ಧನ ಇಲ್ಲವೆ ಆಕಸ್ಮಿಕ ಧನ ಸಿಕ್ಕುವದು. ಆಸ್ತಿಯ ಇಲ್ಲವೆ ಮೂಲ್ಯವಾನ್ ವಸ್ತುವಿನ ಲಾಭವಾಗುವ ಯೋಗ ನಿಶ್ಚಯವಾಗಿ ಇದೆ. ವಿಶೇಷವಾಗಿ ದಿಸೆಂಬರ ೧೫ಕ್ಕಿಂತ ಮೊದಲು ಇಲ್ಲವೆ ಮಾರ್ಚ ೩ ರಿಂದ ಎಪ್ರಿಲ ೧೦ ಇಲ್ಲವೆ ಜೂನ ೨೯ ರಿಂದ ಅಗಸ್ಟ ೧೨ರ ಮಧ್ಯಂತರ ಕಾಲದಲ್ಲಿ ಅದು ನಿಶ್ಚಯವಾಗಿ ಆಗುವದು. ಧಂದೆಯಲ್ಲಿ ಪತ್ತು ಮತ್ತು ಪ್ರತಿಷ್ಠೆ ದಿನದಿನಕ್ಕೆ ಹೆಚ್ಚುತ್ತ ನಡೆಯುವದು. ಆದರೆ ಹಿತಶತ್ರುಗಳು ಅದನ್ನು ಕಡಮೆ ಮಾಡಲು ವಿಪರೀತ ಪ್ರಯತ್ನ ಮಾಡುವರು. ಸಾನಿಕ ದರ್ಜೆ ಹೆಚ್ಚುವಂಥ ಅನೇಕ ಘಟನೆಗಳು ನಡೆಯುವವು ಮತ್ತು ಉದ್ಯೋಗದ ಹಿತಸಂಬಂಧಗಳನ್ನು ದೂರದೂರದ ಪ್ರಾಂತಗಳೊಡನೆ ಕ್ವಚಿತ್ ಪರದೇಶಗಳೊಡನೆ ಕೂಡ ಬೆಳೆಸಲು ಅನುಕೂಲವಾದ ೧೦ನೇ ಶನಿಯು ಇಡಿ ವರ್ಷ ಒಳ್ಳೆ ಕಾರಕನೆನಿಸುವನು.

ನೋಕರರಿಗೂ ಈ ವರ್ಷ ಹೆಚ್ಚಿಗೆ ಕೆಲಸವೆನಿಸುವದು ಮಾತ್ರ; ಆದರೆ ಉಳಿದ ಯಾವ ರೀತಿಯಿಂದಲೂ ಅವರಿಗೆ ಕಿರಿಕಿರಿಯೆನಿಸುವದಿಲ್ಲ. ಇಷ್ಟೇ ಅಲ್ಲ ಹನ್ನೊಂದನೇ ಗುರು. ಇರುವಾಗ ಮೇಲಿನ ಗ್ರೇಡೂ ಸಿಕ್ಕುವದು. ಅದರಂತೆ ಲಾಭವೂ ಹೆಚ್ಚುವದು ಬದಲಿಯಾದರೆ ನಾಲ್ಕನೇ ರಾಹುವಿನ ಪರಿಣಾಮವಾಗಿ ಅನನುಕೂಲ ಸ್ಥಳಕ್ಕೆ ಅಂದರೆ ಬೇಡಾದ ಸ್ಥಳಕ್ಕೆ ಆಗುವದು. ವರಿಷ್ಠರ ಮರ್ಜಿ ಮಾತ್ರ ಚೆನ್ನಾಗಿ ಉಳಿಯುವದು. ಕೈಕೆಳಗಿನ ನವಕರರು ಮಾತ್ರ ಅಲ್ಪಸ್ವಲ್ಪ ತೊಂದರೆಕೊಡುವರು. ಒಡೆತನದ ವಾಹನಗಳಿದ್ದರೂ ಅವುಗಳಿಂದ ಒಳ್ಳೆ ಸುಖ ನಿಮಗೆ ಸಿಕ್ಕಲಾರದು. ಏನೋ ಅಲ್ಪಸ್ವಲ್ಪ ದೊರೆತರೂ ವೆಚ್ಚದಮಾನದಿಂದ ಅದು ಬಹಳ ತುಟ್ಟಿಯೆನಿಸುವದು. ರೊಕ್ಕ ಬೇಕಾದಷ್ಟು ಸಿಕ್ಕರೂ ಅದರ ಸಂಗ್ರಹ ಮಾತ್ರ ಆಗುವದಿಲ್ಲ. ವಾಸ್ತವಿಕ ಮಾತಿಗಾಗಿ ಕೂಡ ಬಹಳಷ್ಟು ಹಣ ವೆಚ್ಚಮಾಡಿ ದೊಡ್ಡತನವನ್ನು ಉಳಿಸಿಕೊಳ್ಳಬೇಕಾಗುವದು. ಶ್ರಮಿಕ ಲಾಭಕ್ಕೆ ದಿಸೆಂಬರ ೧೫ ರಿಂದ ಜನೆವರಿ ೨೪ ಮಾರ್ಚ ೩ ರಿಂದ ಎಪ್ರಿಲ ೧೦ ಮೇ ೨೦ ರಿಂದ ಜೂನ ೨೯ ಮತ್ತು ಅಗಸ್ಟ ೧೨ ರಿಂದ ಸಪ್ಟೆಂಬರ ೨೯ ಈ ಅವಧಿ ಬಹಳ ಅನುಕೂಲವೆನಿಸುವದು. ಧಂದೆಯಲ್ಲಿ ಇಲ್ಲವೆ ನೋಕರಿಯಲ್ಲಿ ಮಾಡಿದ ಸಾಹಸ ಮೈಮೇಲೆ ಬರದೆ ಮನಸ್ಸಿನಂತೆ ಯಶಸ್ವಿಯಾಗುವದು.

ಈ ವರ್ಷ ಅಣ್ಣತಮ್ಮಂದಿರಿಂದ ಮತ್ತು ಆಪ್ತರಿಂದ ಬಹಳ ತೊಂದರೆಯಾಗುವದು. ಧಾರ್ಮಿಕ ಮತ್ತು ಮಂಗಲ ಕಾರ್ಯಗಳು ಕೆಲವು ಪೂರ್ವಯೋಜಿತವಾದಂತೆ ಮತ್ತು ಕೆಲವು ಒಮ್ಮೆಲೆ ಕೂಡಿಬರುವ ಯೋಗ ಬಹಳಷ್ಟಿದೆ. ಆದು ಅನೇಕ ಸಲ ಬರುವದು. ಮನಸ್ಸಿನಲ್ಲಿದ್ದರೂ ಸಣ್ಣ ದೊಡ್ಡ ಯಾತ್ರೆ ಮಾಡುವ ಯೋಗ ಬರುವದಿಲ್ಲ. ಮನೆಯಲ್ಲಿಯ ನೋಕರರು ಬಹಳ ಅವ್ಯವಸ್ಥಿತರಾಗಿ ವರ್ತಿಸುವರು ಇಲ್ಲವೆ ಮೇಲಿಂದ ಮೇಲೆ ಕಾಯಿಲೆ ಬೀಳುವ ಇಲ್ಲವೆ ಅಪರಿಹಾರ್ಯ ಕಾರಣಗಳಿಗಾಗಿ ಮೇಲಿಂದ ಮೇಲೆ ಗೈರಹಾಜರ ಉಳಿಯುವರು. ನಿದ್ದೆ ಹತ್ತುವದೇ ಇಲ್ಲ ನಿಮಗೆ. ಆದರೆ ಸ್ವಪ್ನಗಳು ಬಿದ್ದರೆ ಅವು ಶುಭ ಮತ್ತು ಭಾವೀ ಸೂಚಕವಾದುವು ಇರುವವು. ಫೆಬ್ರುಅರಿ ೨೪ ರಿಂದ ಮಿತ್ರಸುಖಕ್ಕೆ ಈ ವರ್ಷ ಬಹಳ ಅನುಕೂಲ. ದಾವೆ ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಯ ವಿಷಯಗಳಲ್ಲಿ ಪ್ರತಿಪಕ್ಷಿಗಳ ಜೋರು ಹೆಚ್ಚಿಗೆ ಇದ್ದರೂ ಫೆಬ್ರುಅರಿ ೨೪ ರಿಂದ ಸಪ್ಟೆಂಬರ ೨೯ ರ ವರೆಗೆ ಯಶಸ್ಸು ನಿಮ್ಮ ಉಡಿಯಲ್ಲಿಯೆ ಹೆಚ್ಚಿಗೆ ಬೀಳುವದು. ಆದರೆ ಈ ಸಲ ಗುಪ್ತ ಶತ್ರುಗಳೇ ನಿಮಗೆ ಹೆಚ್ಚು.

ಈ ವರ್ಷ ಹಡೆಯಲಿರುವ ಹೆಣ್ಣುಮಕ್ಕಳು ಒಳ್ಳೆ ಸುಖಪ್ರಸೂತರಾಗುವರು. ಫೆಬ್ರುಅರಿ ೨೪ರ ನಂತರ ಹಡೆಯುವವರಿಗೆ ಪುತ್ರಲಾಭದ ಯೋಗವಿದೆ.

ಫೆಬ್ರುಅರಿ ೨೪ ರಿಂದ ಜೂನ ೨೯ರೊಳಗಾಗಿ ಯಾರ ಪರೀಕ್ಷೆಯಾಗುವದೊ ಮತ್ತು ಅಗಸ್ಟ ೧೨ ರಿಂದ ಸಪ್ಟೆಂಬರ ೨೯ ರೊಳಗಾಗಿ ಯಾರ ಪರೀಕ್ಷೆಯಿದೆಯೋ ಅವರು ಒಳ್ಳೇ ಯಶಸ್ಸು ಸಂಪಾದಿಸುವರು.

ಈ ವರ್ಷ ಅಭೂತಪೂರ್ವ 'ಅಷ್ಟಗ್ರಹ ಯೋಗ' ವಿದೆ. ಅದು ಪುಷ್ಯ ಬಹುಳ ತ್ರಯೋದಶಿ ಶನಿವಾರ ಸೂರ್ಯೋದಯ ನಂತರ ಘ. ೨೬ಕ್ಕೆ ಸುರುವಾಗಿ ಮಾಘ ಶುದ್ಧ ೧ ಸೋಮವಾರ ಘ. ೨೭ರ ವರೆಗೆ ಇರುವದು. ಅಂದರೆ ಫೆಬ್ರುಅರಿ ೩ರ ಸಾಯಂಕಾಲ ೫-೩೦ ರಿಂದ ಫೆಬ್ರುಅರಿ ೫ರ ಸಾಯಂಕಾಲ ೫-೪೫ರ ವರೆಗೆ ಇರುವದು. ಈ ಅಷ್ಟಗ್ರಹಯೋಗದ ಬಗೆಗೆ ನಡೆದ ತರ್ಕವಿತರ್ಕದಿಂದ ಜಗತ್ತಿನ ಜನರೆಲ್ಲ ಗಾಬರಿಗೊಂಡಿರುವರು. ಆದರೂ ಇದಷ್ಟೊಂದು ಭಯಾವಹವಿರುವದಿಲ್ಲ. ಏಕೆಂದರೆ ಅಮಾವಾಸ್ಯೆಯಿಂದ ಚಂದ್ರನು ಕ್ಷೀಣ ಮತ್ತು ನಿಸ್ತೇಜನಾಗುವನು. ಮತ್ತು ಮಂಗಳ, ಬುಧ, ಗುರು, ಶುಕ್ರ ಮತ್ತು ಶನಿ ಈ ಗ್ರಹಗಳು ರವಿಯ ಸಾನ್ನಿಧ್ಯದಿಂದ ಅಸ್ತಂಗತವಾಗಿರುವವು. ಮತ್ತು ಕೇತು ಕೇವಲ ಛಾಯಾಗ್ರಹವಾಗಿದೆ. ಅರ್ಥಾತ್ ಈ ಅಷ್ಟ ಗ್ರಹಗಳ ಪರಿಣಾಮ ಕಲ್ಪನೆ ಮಾಡಿದಷ್ಟು ಭೀಕರವಾಗಿರುವದಿಲ್ಲ. ಹಾಗಾಗದಿದ್ದ ಅನುಭವ ಅನಂತರ ಪ್ರತಿಯೊಬ್ಬರಿಗೆ ಬರಬಹುದು.

ಈ ಅಷ್ಟಗ್ರಹಯೋಗ ಮಕರದಲ್ಲಿ ಆಗುವದು. ಅಂದರೆ ಮೇಷ ರಾಶಿಯವರಿಗೆ ಇದು ೧೦ನೆಯ ಸ್ಥಾನದಲ್ಲಿದೆ. ಇದರಿಂದ ತಂದೆ ತಾಯಿಗಳಿಗೆ ಕ್ಲೇಶ, ಆಪ್ತವಿರೋಧ, ಗ್ರಾಮಸ್ಥರಿಂದ ತೊಂದರೆ, ಸ್ಥಾವರದಲ್ಲಿ ನಿಸರ್ಗ ಕೋಪದಿಂದ ಸ್ವಲ್ಪ ಹಾನಿ; ಈ ಪ್ರಕಾರ ಕಷ್ಟ ಫಲ. ಆದರೆ ಧಂದೆ ಕೂಲಿಯವರಲ್ಲಿ ಒಳ್ಳೆ ಪ್ರಗತಿಯಾಗುವದು. ಪ್ರತಿಷ್ಠೆ ಹೆಚ್ಚುವದು. ಲಾಭದಲ್ಲಿ ಪ್ರತ್ಯಕ್ಷ ಮತ್ತು ಭವಿಷ್ಯತ್ತಿನಲ್ಲಿ ಹೆಚ್ಚಳವಾಗುವಂಥ ದೊಡ್ಡ ಘಟನೆಗಳು ಸಂಭವಿಸುವ ಶುಭ ಫಲಗಳು ದೊರೆಯುವವು. ಆದರೂ ಕ್ಲೇಶ ಪರಿಹಾರಕ್ಕಾಗಿ 'ಸರ್ವಾರಿಷ್ಟಶಾಂತಿ'ಯೆಂಬ ಶಾಂತಿರೂಪ ಧಾರ್ಮಿಕ ಕಾರ್ಯವನ್ನು ಮಾಡಬೇಕು.

ವೃಷಭ

ಒಟ್ಟಾರೆ ಈ ರಾಶಿಯವರಿಗೆ ಈ ವರ್ಷ ಪ್ರಾಪಂಚಿಕ ದೃಷ್ಟಿಯಿಂದ ಅಷ್ಟೊಂದು ಸುಖದಾಯಕವೆನಿಸದಿದ್ದರೂ ವ್ಯವಸಾಯದ ದೃಷ್ಟಿಯಿಂದ ಅತ್ಯಂತ ಉತ್ಕರ್ಷದ್ದು ಮತ್ತು ವೈಭವದ್ದೆನಿಸುವದು.

ಈ ರಾಶಿಯ ಜನರ ಆರೋಗ್ಯ ಕೆಲವೊಮ್ಮೆ ಅತಿ ಉತ್ತಮ; ಕೆಲವೊಮ್ಮೆ ಒಮ್ಮೆಲೆ ಕೆಟ್ಟು ಬಹಳ ಜರ್ಜರಿತ ಮಾಡಿಬಿಡುವುದು. ವಿಶೇಷವಾಗಿ ನವಂಬರ ೨೯ ರ ವರೆಗಿನ ಕಾಲವು ಮತ್ತು ಅನಂತರ ದಿಸೆಂಬರ ೨೩ ರಿಂದ ಜನೆವರಿ ೧೫, ಮಾರ್ಚ ೨೯ ರಿಂದ ಎಪ್ರಿಲ್ ೨೨ ಮತ್ತು ಅಗಸ್ಟ ೩೧ರಿಂದ ಮುಂದಿನ ಕಾಲವೆಲ್ಲ ಸ್ವಲ್ಪ ಹೆಚ್ಚು ಕಡಮೆ ಕಷ್ಟದ್ದೇ ಎನಿಸುವದು. ಕೆಮ್ಮು ಮತ್ತು ವೀರ್ಯದೋಷದಸಂಬಂಧದ ವಿಕಾರವಾಗುವ ಸಂಭವ ಹೆಚ್ಚಿಗಿದೆ.

ಅವಾಂತರ ವಿಷಯಗಳಲ್ಲಿ ಆವಶ್ಯಕ ದೇಹ ಸುಖಕ್ಕೆ ಕೂಡ ಈ ವರ್ಷ ಸಾಧಾರಣವೇ ಇದೆ. ಮನಸ್ಸಿನ ವಿರುದ್ಧ ಅನೇಕ ಸಂಗತಿಗಳು ಜರಗುವವು. ಅಣ್ಣ-ತಮ್ಮಂದಿರು ಕ್ಷುಲ್ಲಕ ಕಾರಣಗಳಿಗಾಗಿ ಸಂಬಂಧ ಕೆಡಿಸಿಕೊಳ್ಳುವರು. ಅಲ್ಲದೆ ತಮ್ಮನ್ನು ಮುಳುಗಿಸಿದ ಸುಳ್ಳೊಂದು ಸೊಟ್ಟೊಂದು ಅಪವಾದಹೊರಿಸುವ ಪ್ರಯತ್ನ ಮಾಡುವರು. ನಿಮ್ಮ ತಂದೆ ತಾಯಿ ಇದ್ದರೆ ಅವರಾದರೂ ಅವರ ಪಕ್ಷವನ್ನೇ ವಹಿಸುವರು. ಏಕತ್ರ ಕುಟುಂಬವಿದ್ದರೆ ದಿಸೆಂಬರ ೧೫ ರಿಂದ ಜನೆವರಿ ೨೪ ಇಲ್ಲವೆ ಅಗಸ್ಟ ೧೨ ರಿಂದ ಸಪ್ಟಂಬರ ೨೯ ಈ ಅವಧಿಯಲ್ಲಿ ವಿಭಕ್ತವಾಗುವ ಪಾಳಿ ಬರುವದು. ಆದರೆ ಕೌಟುಂಬಿಕ ಉತ್ಕರ್ಷದ ಕೆಲ ಘಟನೆಗಳೂ ೧೦ ನೇ ಗುರು ಬಂದ ಬಳಿಕ ಅಂದರೆ ಫೆಬ್ರುಅರಿ ೨೪ ರ ನಂತರ ನಡೆಯುವ ಯೋಗವಿದೆ.

ಹೆಂಡತಿಯು ಆರೋಗ್ಯ ಈ ವರ್ಷ ಸರಿಯಿದ್ದರೂ ಬಹುತರ ವಿಷಯುಗಳಲ್ಲಿ ನಿಮ್ಮಿಬ್ಬರದು ಕೂಡಿ ನಡೆಯುಬವದಿಲ್ಲ. ಅವಳು ಸ್ವಾರ್ಥ ಬುದ್ಧಿಯುವಳಾಗುವಳು. ಆದರೆ ನೀವು ಮಾತ್ರ ನಿಮಗೆ ಹಾನಿಯಾದರೂ ಚಿಂತೆಯಿಲ್ಲ. ವ್ಯಾಜ್ಯ ಬೇಡ ವೈರ ಬೇಡವೆಂದು, ಬಗೆಯುವಿರಿ. ಮತ್ತು ಇಂಥವೇ ಕೆಲ ಕಾರಣಗಳಿಂದ ಪರಸ್ಪರ ಸಹವಾಸದಲ್ಲಿಯೂ ಅನೇಕ ಸಲ ವೈತ್ಯಯುಬರಹತ್ತುವದು. ನಿಮ್ಮ ಮದುವೆ ಇನ್ನೂ ಆಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಅದು ಮಾತ್ರ ನಿಶ್ಚಯುವಾಗಿ ಸಾಧ್ಯವಾಗುವದು. ಕೂಡಿ ಬರುವದಕ್ಕೆ ಅಷ್ಟೊಂದು ತೊಂದರೆಯಾಗುವದಿಲ್ಲ. ಫೆಬ್ರುಅರಿ ೨೪ ರ ನಂತರ ಕೂಡಿಬರುವದು. ವಧೂವರರು ಪರಸ್ಪರ ಬಹಳ ಅನುರೂಪ. ಒಂದೊನ್ನೆ ಕೆಲವುಟ್ಟಗೆ ಸ್ಪರ್ಧೆ ಹುಟ್ಟಿಸುವಷ್ಟು ಇರುವರು.

ಅದರಂತೆ ನಿಮ್ಮ ಮಕ್ಕಳ ಮದುವೆ ಈ ವರ್ಷ ಮಾಡುವದಿದ್ದರೆ ಅದು ನಿಶ್ಚಯವಾಗಿ ಆಗುವದು. ಆದರೆ ಫೆಬ್ರುಅರಿ ೨೪ ಕ್ಕಿಂತ ಮೊದಲು ಅದು ಅಪ್ರಯಾಸದಿಂದ ಕೂಡಿ ಬಂದು ಅಂದಾಜಿಗಿಂತ ಹೆಚ್ಚು ಉತ್ತಮ ಪರಿಸ್ಥಿತಿಯಲ್ಲಿದ್ದ ಸ್ಥಳ ಸಿಕ್ಕುವದು. ಆದರೆ ಆ ಬಳಿಕ ಕೂಡಿ ಬರುವವರಿಗೆ ಅಷ್ಟೊಂದು ಚೆನ್ನಾಗಿಲ್ಲ. ವಿರುದ್ಧ ಪಕ್ಷದವರು ಕೆಲವುಟ್ಟಗೆ ಕಿವಿ ಊದಿ ಮಾತುಕತೆಗಳನ್ನು ಶಿಥಿಲಗೊಳಿಸಲು ಪ್ರಯತ್ನಮಾಡುವರು. ಆದರೆ ಲಗ್ನ ಯಾವಾಗಾದರೂ ಆಗಲಿ ಅಳಿಯು ಇಲ್ಲವೆ ಸೊಸೆ ಎಲ್ಲ ಬಗೆಯಿಂದ ಅಭಿಮಾನ ಹುಟ್ಟಿಸುವಂಥವರಿರುವರು. ಫೆಬ್ರುಅರಿ ೨೪ ಕ್ಕಿಂತ ಮೊದಲು ಮಕ್ಕಳೊಡನೆ ನಿಮ್ಮದು ಸ್ವಲ್ಪ ಕೆಡುವದು. ಆದರೆ ಅನಂತರ ಚೆನ್ನಾಗಿ ಕೂಡುವದು. ಮಕ್ಕಳ ಉನ್ನತಿಗೆ ಈ ವರ್ಷ ಫೆಬ್ರುಅರಿ ೨೪ರ ನಂತರವೇ ಹೆಚ್ಚು ಅನುಕೂಲವಿದೆ. ಅದರಲ್ಲಿಯೂ ಕೆಲವರಿಗೆ ಎಪ್ರಿಲ ೨೯ ರಿಂದ ಅಗಸ್ಟ ೭ ರ ವರೆಗೆ ಮತ್ತು ಕೆಲವರಿಗೆ ಸಪ್ಟೆಂಬರದಲ್ಲಿ ಜನ ಹೊಗಳುವಷ್ಟು ಉನ್ನತಿಯಾಗುವದು.

ಈ ವರ್ಷವಿಡಿ ನವಮ ಅರ್ಥಾತ್ ಭಾಗ್ಯ ಸ್ಥಾನದಲ್ಲಿ ಅಂದರೆ ಮಕರದಲ್ಲಿ ಸ್ವರಾಶಿಯಲ್ಲಿ ಶನಿ ಮತ್ತು ಫೆಬ್ರುಅರಿ ೨೪ರ ವರೆಗೆ ಇವನ ಜೊತೆ ಇರುವ ಲಾಭೇಶ ಗುರು ಇವರ ಮೂಲಕ ಕಲ್ಪನಾತೀತ ಭಾಗ್ಯದ್ದೆನಿಸುವದು. ಅಲ್ಲದೆ ಶನಿಯೆ ದಶಮ, ಅರ್ಥಾತ್ ಕರ್ಮಾಧಿಪತಿಯಿದ್ದು ವೃಷಭ ರಾಶಿಯ ಮುಖ್ಯ ರಾಜಯೋಗಕರ್ತನಿರುವನು. ಅದರಂತೆ ಫೆಬ್ರುಅರಿ ೨೪ರ ನಂತರ ಬರುವ ೧೦ನೇ ಗುರು ಉದ್ಯೋಗದಲ್ಲಿಯು ಯುಶಸ್ಸಿಗೆ ೯ನೇ ಗುರುವಿಗಿಂತ ಹೆಚ್ಚು ಉತ್ತಮನಿರುವನು. ಏಕೆಂದರೆ ನವಮದಲ್ಲಿ ರಾಶಿ ಮಕರ ಅದರ ನೀಚ ರಾಶಿಯಾಗಿದೆ. ಆದರೆ ದಶಮದಲ್ಲಿದ್ದ ಕುಂಭ ಇದು ಬೌದ್ಧಿಕ ಅಲ್ಲದೆ ಮಿತ್ರರಾಶಿಯಿರುವದರಿಂದ ಮತ್ತು ಈ ಸ್ಥಳವು ಅಗ್ರಹಕ್ಕೆ ಹೆಚ್ಚು ಬಲಿಷ್ಠವಾಡುವ ಗುಣಧರ್ಮದ್ದಾಗಿರುವದರಿಂದ ಈ ಕುಂಭ ರಾಶಿಯಲ್ಲಿ ಅದು ಬಂದಂದಿನಿಂದ ಅಲೌಕಿಕ ಕೃತ್ಯಗಳಿಂದ ಬಹಳ ಪ್ರಸಿದ್ಧಿಗೆ ತರುವದು. ಅನೇಕರಿಗೆ ರಾಜಕೀಯ ಮಹತ್ವ ಪ್ರಾಪ್ತವಾಗುವದು. ಅನೇಕರಿಗೆ ನೋಕರಿಯಲ್ಲಿ ಅಸಂಭಾವ್ಯವೆನಿಸಿದ ಮೇಲಿನ ಗ್ರೇಡು ಸಿಕ್ಕುವದು. ವ್ಯಾಪಾರಸ್ಥರಿಗೆ ಲಾಭದಾಯಕ ಅನೇಕ ಅವಕಾಶಗಳು ಮೇಲಿಂದ ಮೇಲೆ ದೊರೆಯುವವು. ನಾಲ್ಕು ಕಡೆ ಅವರ ಹೆಸರು ಪ್ರಸಿದ್ಧಿಗೆ ಬರುವದು. ಬಹಳಷ್ಟು ಪ್ರತಿಷ್ಠೆ ಹೆಚ್ಚುವದು. ಲೌಕಿಕಕ್ಕೊಪ್ಪುವಂಥ ಔದ್ಯೋಗಿಕ ಮತ್ತು ಸಾರ್ವಜನಿಕ ಕೃತ್ಯಗಳನ್ನು ಬಹಳಷ್ಟು ಮಾಡುವಿರಿ ಮತ್ತು ದುಡ್ಡು ಕೂಡಿಸುವದಷ್ಟೆ ನಿಮ್ಮ ಧ್ಯೇಯ ಉಳಿಯದೆ ಪರೋಪಕಾರ ಮತ್ತು ಪರೋತ್ಕರ್ಷ ಬಹಳಷ್ಟು ಸಾಧ್ಯವಾಗುವದು. ಧಂದೆಯವರಿಗೆ ನವಂಬರ ೨೬ ರಿಂದ ಡಿಶೆಂಬರ ೧೫ ಜನೆವರಿ ೩ ರಿಂದ ಎಪ್ರಿಲ ೪ ಮತ್ತು ಜುಲೈ ೩ರಿಂದ ಅಗಸ್ಟ ೭ ಈ ಕಾಲ ಬಹಳಷ್ಟು ಲಾಭದಾಯಕವೆನಿಸುವದು. ಅದರಂತೆ ನವಂಬರ ೨೯ ರಿಂದ ದಿಸೆಂಬರ ೨೩ ಜನೆವರಿ ೧೫ ರಿಂದ ಎಪ್ರಿಲ ೨೨ ಮತ್ತು ಜೂನ ೧೧ರಿಂದ ಅಗಸ್ಟ ೨ ಈ ಕಾಲ ನೋಕರರಿಗೆ ಹೆಚ್ಚು ಅನುಕೂಲವೆನಿಸುವದು. ಬದಲಿಯಾದರೆ ಯೋಗ್ಯಸ್ಥಳಕ್ಕೆ ಆಗಿ ವರಿಷ್ಠರ ಮರ್ಜಿ ಬಹಳಾಗುವದು.

ಈ ವರ್ಷ, ಬಹಳಷ್ಟು ಲಾಭದಾಯಕವೆನಿಸಿದರೂ ಸಂಗ್ರಹಕ್ಕೆ ಮಾತ್ರ ಹಾಗಿರುವದಿಲ್ಲ. ವಿಪರೀತ ವೆಚ್ಚ ಬರುವದು. ಒಂದೆರಡು ಸಲ ಸಣ್ಣ ದೊಡ್ಡ ಕಳವುಗಳಾಗುವ ಅಂಜಿಕೆ ಇದೆ. ಕಳ್ಳನಾದರೂ ನಿಮ್ಮ ಗುಂಪಿನೊಳಗಿನವನೇ ಇರುವನು. ಅಪ್ತರಿಗಿಂತ ಮಿತ್ರಸುಖ ಹೆಚ್ಚಿಗೆ ದೊರೆಯುವದು. ಆಸ್ತಿಯಲ್ಲಿ ಹರಿಮುರಿಯಿಂದ ಕೆಲವುಟ್ಟಗೆ ಹಾನಿಯಾಗುವದು. ನಿದ್ದೆ ಬಹಳ ಕಡಮೆ. ಫೆಬ್ರುಅರಿ ೨೪ಕ್ಕಿಂತ ಮೊದಲು ಯಾವದೊಂದು ಯಾತ್ರೆ ಇಲ್ಲವೆ ವಿಶಿಷ್ಟ ಧಾರ್ಮಿಕ ಕೃತ್ಯ ನಡೆಯುವದು.

ದಾವೆ ಫಿರ್ಯಾದಿ ಇಲ್ಲವೆ ಸ್ಪರ್ಧೆಯ ಕೆಲಸಗಳಲ್ಲಿ ಫೆಬ್ರುಅರಿ ೨೪ಕ್ಕಿಂತ ಮೊದಲು ನಿಮಗೆ ಸ್ವತಃಕ್ಕೆ ಹೆಚ್ಚು ಯಶಸ್ಸು. ಅನಂತರ ಪ್ರತಿಪಕ್ಷಿಗಳದೇ ಹೆಚ್ಚು ಜೋರು. ವಾದ-ಗ್ರಸ್ತ ಸಂಗತಿಗಳು ನಿರ್ಣಯುವಾಗದೆ ಹಾಗೆಯೇ ನೆನೆಗುದಿಗೆ ಬೀಳುವವು.

ಫೆಬ್ರುಅರಿ ೨೪ರೊಳಗಾಗಿ ಹಡೆಯುವ ಸ್ತ್ರೀಯರು ಅತ್ಯಂತ ಸುಲಭವಾಗಿ ಪ್ರಸವ ಹೊಂದಿದರೂ ಕನ್ಯಾರತ್ನ ಹುಟ್ಟುವವು. ಅನಂತರ ಹಡೆದವರಿಗೆ ಸ್ವಲ್ಪ ಕಷ್ಟವಾದರೂ ಸುಂದರ ಪುತ್ರರತ್ನ ಪ್ರಾಪ್ತವಾಗುವ ಯೋಗವಿದೆ.

ಫೆಬ್ರುಅರಿ ೨೪ಕ್ಕಿಂತ ಮೊದಲು ಪರೀಕ್ಷೆಯಾದವರು ನಿಶ್ಚಯುವಾಗಿ ಪಾಸಾಗುವರು. ಆದರೆ ಗುಣಗಳು ಅಷ್ಟೊಂದು ಹೆಚ್ಚಿಗೆ ಬೀಳುವದಿಲ್ಲ. ಅನಂತರ ಯಾರ ಪರೀಕ್ಷೆಯಾಗುವದೋ ಅವರ ಪರಿಣಾಮ ಬಹಳಷ್ಟು 'ಕಡಕ' ವಾದರೂ ಯಶಸ್ಸು ಸಿಕ್ಕುವದು, ಇಷ್ಟೇ ಅಲ್ಲ, ಪ್ರಥಮ ಇಲ್ಲವೆ ದ್ವಿತೀಯ ಶ್ರೇಣಿಯಲ್ಲಿ ಬರುವಿರಿ.

ಅಷ್ಟಗ್ರಹ ನವಮ ಸ್ಥಾನದಲ್ಲಿ ಆಗುವದರಿಂದ ಅಣ್ಣತಮ್ಮಂದಿರ ಪರಿವಾರಕ್ಕೆ ಮತ್ತು ನಿಮ್ಮ ಆಪ್ತೇಷ್ಟರಿಗೆ ಮತ್ತು ಪೂಜ್ಯ ವ್ಯಕ್ತಿಗಳಿಗೆ ಆರೋಗ್ಯ ದೃಷ್ಟಿಯಿಂದ ಅನುಕೂಲವಿರುವದಿಲ್ಲ. ಆದರೆ ನಿಮ್ಮ ಭಾಗ್ಯ ಮತ್ತು ಉತ್ಕರ್ಷಕ್ಕೆ ಅಲ್ಲದೆ ಕೀರ್ತಿಯ ಪ್ರಸಾರಕ್ಕೆ ಬಹಳ ಉತ್ತಮವಿದೆ.

ಮಿಥುನ

ಒಟ್ಟಾರೆ ಈ ವರ್ಷ ಈ ರಾಶಿಯವರಿಗೆ ಪ್ರಾಪಂಚಿಕ, ಔದ್ಯೋಗಿಕ ಮತ್ತು ಮಾನಸಿಕ ದೃಷ್ಟಿಯಿಂದ ಬಹಳ ತ್ರಾಸದಾಯಕವಿದ್ದರೂ ಮಾರ್ಚ ೨೪ ರಿಂದ ಬರುವ ೯ ನೇ ಗುರುವಿನಿಂದ ಆ ತೊಂದರೆ ಪರಿಣಾಮದಲ್ಲಿ ಅಷ್ಟೊಂದು ಬಾಧಕವೆನಿಸುವದಿಲ್ಲ. ಇದು ಪೂರ್ಣ ನಿಶ್ಚಿತ.

ಇಡಿ ವರ್ಷ ಈ ರಾಶಿಯವರಿಗೆ ಅಷ್ಟಮ ಶನಿ ಇರುವದರಿಂದ ಅದರಂತೆ ಕೇತುವೂ ಅಷ್ಟಮದಲ್ಲಿರುವದರಿಂದ ಈ ರಾಶಿಯ ಪ್ರತಿಯೊಬ್ಬರೂ ಯಾವದೇ ಬಗೆಯಿಂದ ಹಯಗಯ ಮಾಡದೆ ಮೊದಲು ಪ್ರಕೃತಿಯನ್ನು ಜಪ್ಪಿಸಿಕೊಳ್ಳಬೇಕು. ಇದು ಶ್ರೇಯಸ್ಕರವೆನಿಸುವದು. ಅದರಲ್ಲಿಯೂ ಫೆಬ್ರುಅರಿ ೨೪ ರ ವರೆಗೆ ಗುರು ಕೂಡ ೮ ನೆ ಯವನಿರುವದರಿಂದ ಹೆಚ್ಚು ಜಪ್ಪಿಸಬೇಕು. ೫೦ ವರ್ಷದ ಮೇಲಿನ ವಯಸ್ಸಿನವರಂತೂ ಕೇವಲ ಮಧ್ಯಾಹ್ನದ ಭೋಜನ ಮಾಡಿ ರಾತ್ರಿ ಲಂಘನ ಮಾಡಬೇಕು. ಇಲ್ಲವೆ ಅಲ್ಪೋಪಹಾರ ತೆಗೆದುಕೊಳ್ಳುವದು ಇಷ್ಟ. ಹಲ್ಲು ಬಾರದಿದ್ದ ಮಕ್ಕಳಿಗೆ ಕೂಡ ಅಜೀರ್ಣವಾಗದಂತೆ ನೋಡಿಕೊಳ್ಳಬೇಕು. ಅದರಂತೆ ರಕ್ತದ ಒತ್ತಡ ಮತ್ತು ಮಧುಮೇಹ ಇದ್ದವರು ಕೂಡ ಪಥ್ಯದ ಬಗ್ಗೆ ಬಹಳ ದಕ್ಷತೆ ವಹಿಸಬೇಕು ಮತ್ತು ಆಯುಷ್ಯವೃದ್ಧಿಗಾಗಿ ಶನಿಯ ೨೩ ಸಾವಿರ ಜಪ ಮತ್ತು ಕೇತುವಿನ ೧೭ ಸಾವಿರ ಜಪ ಹಾಗು ಗುರುವಿನ ೧೯ ಸಾವಿರ ಜಪ ಮಾಡಬೇಕು. ಅನಾಂತರ ವಿಷಯಗಳಲ್ಲಿ ಈ ವರ್ಷ ದೇಹಸುಖಕ್ಕೆ ಅನುಕೂಲವಿದ್ದು ಫೆಬ್ರುಅರಿ ೨೪ ರ ನಂತರ ಆವಶ್ಯಕ ಸಂಗತಿಗಳಲ್ಲಿ ಇಲ್ಲವೆ ವಸ್ತುಗಳಲ್ಲಿ ಒಳ್ಳೆ ಅನುಕೂಲತೆಯೆನಿಸುವದು.

ಹೆಂಡತಿಯ ಆರೋಗ್ಯಕ್ಕೂ ಈ ವರ್ಷ ಫೆಬ್ರುಅರಿ ೨೪ ರ ವರೆಗೆ ಬಹಳ ಕ್ಲೇಶಕಾರಕವಿದೆ. ಅನಂತರ ಮಾತ್ರ ಅವಳ ಆರೋಗ್ಯ ಚೆನ್ನಾಗಿ ಉಳಿದು ಉಭಯತರಿಗೂ ಚೆನ್ನಾಗಿ ಕೂಡಿ ನಡೆಯುವದು. ಫೆಬ್ರುಅರಿ ೨೪ ರ ನಂತರ ಅವಳ ಹೇಳಿಕೆಯಂತೆ ನಡೆಯುವದರಲ್ಲಿ ಹೆಚ್ಚು ಹಿತ ಮತ್ತು ಯಶಸ್ಸು ಕಂಡು ಬರುವದು. ಆದರೆ ಹೆಂಡತಿಯ ಹೊರತು ಉಳಿದವರೊಡನೆ ಯಾವಾಗಲೂ ಮತಭೇದ ಮತ್ತು ಕಲಹವಿದ್ದೇ ಇರುವದು. ಮತ್ತು ಅನೇಕಸಲ ಮನಸ್ಸು ವಿರಸಗೊಂಡು ಸಂಸಾರದಲ್ಲಿಯ ಮಹತ್ವದ ಕೆಲಸಗಳಲ್ಲಿ ಕೂಡ ದುರ್ಲಕ್ಷವಾಗುವದು. ಇಲ್ಲವೆ ಆ ಕೆಲಸ ಮಾಡಬಾರದೆಂದು ಮನಸ್ಸು ಉದಾಸೀನಗೊಳ್ಳುವದು. ಮನೆಯಲ್ಲಿಯ ಕೆಲವು ಜನರು ಅಮೂಲ್ಯ ವಸ್ತುಗಳೊಡನೆ ಕೆಲ ಅಂಥಿಂಥ ವಸ್ತುಗಳನ್ನು ಒಯ್ಯುವರು. ಅನೇಕ ಸಲ ನಿಮ್ಮ ನಿಮ್ಮಲ್ಲಿ ಬಾಯಿಗೆ ಬಾಯಿ ಹತ್ತುವದು. ಒಮ್ಮೊಮ್ಮೆ ಕೈಗೆ ಕೈ ಹತ್ತುವ ಪ್ರಸಂಗವೂ ಬರುವದು. ಈ ರಾಶಿಯವರ ವಿವಾಹವಾಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಮಾರ್ಚ ಬರುವ ವರೆಗೆ ಸ್ವಸ್ಥ ಕೊಡ್ರಬೇಕು. ಮುಂದೆ ಮಾತ್ರ ಚಟುವಟಿಕೆ ಪ್ರಾರಂಭಿಸಿದ ಅಲ್ಪಾವಧಿಯಲ್ಲಿಯೇ ಕೂಡಿ ಬಂದು ಲಗ್ನವಾಗಿ ಹೋಗುವದು. ಪತಿ ಇಲ್ಲವೆ ಪತ್ನಿ ನಿಮಗಿಂತ ರೂಪದಿಂದ ಅಷ್ಟೊಂದು ಮೇಲುಗೈಯಿರದಿದ್ದರೂ ಗುಣದಿಂದ ಮಾತ್ರ ಹಾಗೆ ಇರುವರು ಮತ್ತು ಪರಸ್ಪರರಲ್ಲಿ ಬೇಗನೆ ಆದರಭಾವ ಮತ್ತು ಪ್ರೇಮ ಹೆಚ್ಚುವದು.

ಅದರಂತೆಯೆ ನಿಮ್ಮ ಮಕ್ಕಳಲ್ಲಿ ಯಾರದಾದರೂ ಮದುವೆಯಾಗುವದಿದ್ದರೆ ಅವರಿಗಾದರೂ ಮಾರ್ಚದಿಂದ ಉತ್ತಮ ಬಾಶಿಂಗಬಲ ಬರುವದರಿಂದ ಕೂಡಿಬರಲಿಕ್ಕೆ ಬಹಳಷ್ಟು ಪ್ರಯತ್ನ ಮಾಡಬೇಕಾಗುವದಿಲ್ಲ. ಸಹಜವಾಗಿ ಮಾತುಕತೆ ನಡೆಸುವಾಗ ಅಪೇಕ್ಷಿಸಿದ್ದಕ್ಕಿಂತ ಹೆಚ್ಚು ಉತ್ತಮ ಸ್ಥಳ ದೊರೆಯುವದು ಮತ್ತು ಗೊತ್ತುಮಾಡಿದ ನಾಲ್ಕೆಂಟು ದಿನಗಳಲ್ಲಿಯೇ ಲಗ್ನವಾಗಿ ಹೋಗುವದು. ಸೊಸೆ ಇಲ್ಲವೆ ಅಳಿಯ ಅತ್ಯಂತ ಜಾಣರಿದ್ದರೂ ಸ್ವಲ್ಪ ಸುಧಾರಿಸಿದ ಆಚಾರವಿಚಾರದವರಿರುವರು. ಮಕ್ಕಳೆಲ್ಲರ ಉತ್ಕರ್ಷಕ್ಕೆ ಈ ವರ್ಷ ಮಾರ್ಚದಿಂದಲೆ ಒಳ್ಳೆ ಯಶೋದಾಯಕವಿದೆ. ವಿಶೇಷವಾಗಿ ಫೆಬ್ರುಅರಿ ೨೪ ರಿಂದ ಎಪ್ರಿಲ ೨೨, ಮೇ ೧೬ ರಿಂದ ಆಗಸ್ಟ ೨ ಮತ್ತು ಮುಂದೆ ಆಗಸ್ಟ ೩೧ ರ ನಂತರದ ಕಾಲವು ಹೆಚ್ಚು ಉತ್ತಮ ಮತ್ತು ಪ್ರತ್ಯಕ್ಷವಾಗಿ ಯಶಸ್ಸನ್ನು ಕೊಡುವಂತಹದಿದೆ. ಗಂಡುಮಕ್ಕಳಿಗಿಂತ ಹೆಣ್ಣು ಮಕ್ಕಳು ಹೆಚ್ಚು ಪ್ರೇಮದಿಂದ ನಡೆಯುವರು. ಮಕ್ಕಳಲ್ಲಿ ಒಬ್ಬರಿಗೆ ಪರದೇಶಗಮನದಂಥ ಮಹತ್ವದ ಅವಕಾಶವೂ ಸಿಕ್ಕುವದೆಂದು ಎನಿಸುವದು.

ಫೆಬ್ರುಅರಿ ೨೪ರ ನಂತರ ಸ್ವತಃ ನಿಮ್ಮ ಧಂದೆ, ಕೂಲಿಯಲ್ಲಿ ಭವಿಷ್ಯತ್ತಿನಲ್ಲಿ ಉತ್ಕರ್ಷವಾಗುವಂಥ ಘಟನೆಗಳು ಹೆಚ್ಚಿಗೆ ನಡೆದರೂ ಈ ವರ್ಷ ನಿಮಗೆ ಪ್ರತ್ಯಕ್ಷ ಯಶಸ್ಸಾಗಲಿ ಲಾಭವಾಗಲಿ ಅಷ್ಟೊಂದು ದೊರೆಯುವದಿಲ್ಲ. ಆದರೆ ಅಷ್ಟಮೇಶ ಶನಿ ಅಷ್ಟಮದಲ್ಲಿಯೇ ಇರುವದರಿಂದ ಅನೇಕರಿಗೆ ಸಟ್ಟಾ, ಲಾಟರಿ, ಕ್ರಾಸವರ್ಡ ವಾರಸಾ ಮುಂತಾದ ಮಾರ್ಗಗಳಿಂದ ಅಕಸ್ಮಾತ್ ದ್ರವ್ಯಲಾಭ ಬಹಳವಾಗುವದು. ಅಂದರೆ ಪರಿಸ್ಥಿತಿಯಲ್ಲಿ ಸ್ವಲ್ಪಾದರೂ ಸುಧಾರಣೆಯಾಗುವಷ್ಟಾದರೂ ಲಾಭವಾಗುವದು. ಎಷ್ಟೊಂದು ಸರಳತನದಿಂದ ಉದ್ಯೋಗ ಮಾಡಿದರೂ ಅದರ ಬೆಲೆ ಯಾರಿಗೂ ತಿಳಿಯದು. ಅಷ್ಟೊಂದು ಬಲಿಷ್ಠ ದೈವ ಈ ವರ್ಷ ನಿಮಗಿಲ್ಲವೇ ಇಲ್ಲ. ನೌಕರಿಯಲ್ಲಿ ಇಮ್ಮಡಿ ಕೆಲಸ ಮಾಡಿದರೂ ಒಡೆಯರ ಇಲ್ಲವೆ ವರಿಷ್ಠರ ಲಕ್ಷ್ಯಕ್ಕೆ ಅದು ಬರುವದಿಲ್ಲ. ಅವರ ತಲೆಯಲ್ಲಿಯೂ ಅದು ಸುಳಿಯುವದಿಲ್ಲ. ಆದರೆ ಮಾರ್ಚದಿಂದ ಅದರಲ್ಲಿ ಸ್ವಲ್ಪ ಸುಧಾರಣೆಯಾಗುವದು. ಮತ್ತು ಮಾರ್ಚ ೩ ರಿಂದ ಜೂನ ೨೯ರ ಕಾಲವು ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಈ ಮೂರರೂ ದೃಷ್ಟಿಯಿಂದ ಸ್ವಲ್ಪಾದರೂ ಅನುಕೂಲವಾಗಿ ಪರಿಣಮಿಸುವದು. ಬದಲಿಯಾದರೆ ಆರೋಗ್ಯ ದೃಷ್ಟಿಯಿಂದ ಒಳ್ಳೆ ಹವೆಯ ಆದರೆ ಲಾಭದ ದೃಷ್ಟಿಯಿಂದ ಶುಷ್ಕವಾದ ಸ್ಥಳಕ್ಕೆ ಆಗುವದು. ಆಗಷ್ಟ ೧೨ರಿಂದ ೨೯ ಸಪ್ಟಂಬರದಷ್ಟೊತ್ತಿಗೆ ಅನೇಕರಿಗೆ ಸಮೀಪದ ಯಾತ್ರೆ ಘಟಿಸುವ ಯೋಗವಿದೆ. ಪ್ರತ್ಯಕ್ಷ ಭೆಟ್ಟಿಗಿಂತ ಲೇಖನ ಕೆಲಸ ಹೆಚ್ಚು ಅನುಕೂಲ. ನಾಲ್ಕು ದುಡ್ಡು ಕೂಡಿಬೀಳುವ ಅವಕಾಶವಿಲ್ಲದಿದ್ದರೂ ಸಾಲವಾಗುವದಿಲ್ಲ. ಆದರೆ ಮೊದಲು ಯಾರಿಗಾದರೂ ಸಾಲವಿದ್ದರೆ ಅದರ ವಸೂಲಿಗಾಗಿ ತಗಾದೆ ಹೆಚ್ಚಿ ಬಹಳ ಹೈರಾಣ ಆಗಬೇಕಾಗುವದು. ಒಳ್ಳೇ ಕೆಲಸಗಳನ್ನು ಮಾಡುವದು ಗೊತ್ತಾದರೂ ಅವು ಒದಗಿಬರುವದಕ್ಕೆ ಅವಕಾಶವೇ ಸಿಕ್ಕುವದಿಲ್ಲ.

ದಾವೆ ಫಿರ್ಯಾದಿ ಇಲ್ಲವೆ ಸ್ಪರ್ಧೆಯಲ್ಲಿ ಫೆಬ್ರುವರಿ ೨೪ಕ್ಕಿಂತ ಮೊದಲು ಯಾವ ನಿರ್ಣಯ ಹತ್ತುವದೋ ಅದು ಪ್ರತಿಪಕ್ಷಿಗಳಿಗೆ ಅನುಕೂಲವಾಗುವದು. ಆದರೆ ಮೇಲಿನ ತಾರೀಖಿಗಿಂತ ಹಿಂದುಗಡೆ ಆದರೆ ನಿಮಗೆ ಅನುಕೂಲವಾಗುವ ಸಂಭವ ಹೆಚ್ಚು. ಶತ್ರುಗಳಲ್ಲಿ ಒಬ್ಬಿಬ್ಬರು ಅಪಘಾತಕ್ಕೆ ಬಲಿಯಾಗುವ ಸಂಭವವೂ ಇದೆ. ಈ ವರ್ಷ ಮಿತ್ರರೂ ಒಡೆದು ನಡೆಯುವರು.

ಯಾವ ಸ್ತ್ರೀಯರು ಮಾರ್ಚದೊಳಗಾಗಿ ಹಡೆಯುವರೋ ಅವರು ಬಹಳ ಕಷ್ಟದಿಂದ ಹಡೆಯುವರು. ಮತ್ತು ಬಹುಶಃ ಅವರಿಗೆ ಹೆಣ್ಣು ಹುಟ್ಟುವವು. ಆದರೆ ಮಾರ್ಚದ ನಂತರ ಹಡೆಯುವವರಿಗೆ ಗಂಡು ಹುಟ್ಟುವದಲ್ಲದೆ ಪ್ರಸೂತಿಕಷ್ಟವೂ ಅಷ್ಟೊಂದು ಎನಿಸುವದಿಲ್ಲ.

ಫೆಬ್ರುಅರಿ ೨೪ಕ್ಕಿಂತ ಮೊದಲು ಪರೀಕ್ಷೆಯಿದ್ದವರು ಅದಕ್ಕೆ ಕೂಡದಿರುವದು ಒಳಿತು. ಆದರೆ ಅನಂತರ ಪರೀಕ್ಷೆಯಿದ್ದವರು ಪರೀಕ್ಷೆಯಲ್ಲಿ ಪಾಸಾಗುವದು ನಿಶ್ಚಿತವಾದ್ದರಿಂದ ನಿಶ್ಚಿಂತರಾಗಿ ಪರೀಕ್ಷೆ ಕಟ್ಟಬೇಕು.

ಬರುವ ಅಷ್ಟಗ್ರಹಯೊಗವು ಅಷ್ಟಮಸ್ಥಾನದಲ್ಲಿಯೇ ಆಗುವದರಿಂದ ಆರೋಗ್ಯಕ್ಕಾಗಿ ಆಗಾಗ ಜಪ್ಪಿಸಿಕೊಂಡು ಇರಬೇಕು. ಯಾವದೇ ಬಗೆಯ ಸಾಹಸಕಾರ್ಯ ಮಾಡಬಾರದು. ತಿನ್ನುಣ್ಣುವದರಲ್ಲಿಯೂ ಮಿತಿಯಿರಲಿ. ಕ್ಲೇಶಪರಿಹಾರ್ಥವಾಗಿ ಸರ್ವಾರಿಷ್ಟ ಶಾಂತಿಯನ್ನು ಮಾಡಬೇಕು. ಅನಂತರ ಮಾತ್ರ ನಿರ್ಭೀತಿಯಿಂದ ಇರಬೇಕು.

ಕರ್ಕ

ಒಟ್ಟಾರೆ ಈ ರಾಶಿಯವರಿಗೆ ಈ ವರ್ಷ ಬಹುತರ ವಿಷಯಗಳಲ್ಲಿ ತೊಂದರೆಯದು ಮತ್ತು ಜಿಕೇರಿಯದು ಇದೆಯೆಂಬುದನ್ನು ಪ್ರತ್ಯೇಕ ನಿರ್ದಿಷ್ಟಪಡಿಸಿ ಹೇಳಬೇಕಾಗಿಲ್ಲ.

ಈ ರಾಶಿಯವರಿಗಾದರೂ ಮಿಥುನ ರಾಶಿಯವರಂತೆ ಈ ವರ್ಷ ಫೆಬ್ರುಅರಿ ೨೪ರಿಂದ ೮ನೇ ಗುರು ಬರುವದರಿಂದ ಅಂದಿನಿಂದ ಪ್ರಕೃತಿಯನ್ನು ಬಹಳ ಜಪ್ಪಿಸಬೇಕು ಮತ್ತು ವರ್ಷಾರಂಭದಿಂದಲೇ ದೇಹಸ್ಥಾನದಲ್ಲಿದ್ದ ಮೊದಲನೇ ರಾಹುವಿನಿಂದ ಅವಿಶ್ರಾಂತ ಶ್ರಮವನ್ನು ಮಾಡಲೇಕೂಡದು. ಮತ್ತು ಎಣ್ಣೆಯಲ್ಲಿ ಕರಿದ ಪದಾರ್ಥವನ್ನು ಪೂರ್ಣವಾಗಿ ಬಿಟ್ಟುಗೊಡಬೇಕು. ಗ್ಯಾಸ ಆಗುವ ತೊಂದರೆಯಿದ್ದವರಿಗೆ ಈ ೮ನೇ ಗುರು ಬಹಳ ತೊಂದರೆ ಕೊಡುವನು. ಅದರಲ್ಲಿಯೂ ಮಾರ್ಚ ೩ರಿಂದ ಜುಲೈ ೧೦ರ ಅವಧಿಯಲ್ಲಿ ಅದು ಹೆಚ್ಚು ಕಂಡುಬರುವದು. ಕ್ಲೇಶಪರಿಹಾರ್ಥ ಗುರುವಿಗಾಗಿ ಕಡಲೆಬೇಳೆ ಮತ್ತು ರಾಹುವಿಗಾಗಿ ಬಿಳಿಎಳ್ಳು ನಿಮ್ಮ ಶಕ್ತಿಯಿದ್ದುದಕ್ಕಿಂತ ಸ್ವಲ್ಪ ಹೆಚ್ಚೇ ದಾನಕೊಡಬೇಕು. ಉಳಿದ ವಿಷಯಗಳಲ್ಲಿಯೂ ಈ ವರ್ಷ ದೇಹಸುಖಕ್ಕೆ ಅಷ್ಟೊಂದು ಸಮಾಧಾನಕರವಿರುವದಿಲ್ಲ. ಉಪಭೋಗದ ಪ್ರತಿಯೊಂದು ವಿಷಯದಲ್ಲಿ ಮೊದಲು ಬಹಳಷ್ಟು ಮನೋಭಂಗವಾಗಹತ್ತುವದು ಮತ್ತು ನಿಮ್ಮ ಸ್ವಭಾವವು ವಿಲಕ್ಷಣ ಸಂಶಯದ ಮತ್ತು ಚಿರಡಿಯದಾಗುವದು.

ಹೆಂಡತಿಯ ಆರೋಗ್ಯವೂ ಅಷ್ಟೊಂದು ನಿರೋಗಿ ಉಳಿಯುವದಿಲ್ಲ. ೭ ನೇ ಗುರುವು ಇರುವ ವರೆಗೆ ಅಂದರೆ ಫೆಬ್ರುಅರಿ ೨೪ ರ ವರೆಗೆ ಮನೆ ಮಾರಿಗೆಯ ಉಪಚಾರದಿಂದ

ಗುಣವಾಗುವಷ್ಟು ಸೌಮ್ಯವಿರುವದು. ಅನಂತರ ಮಾತ್ರ ಭಾರ್ಯಾಸ್ಥಾನದಲ್ಲಿ ಕೇವಲ ಶನಿ ಮತ್ತು ಕೇತು ಈ ಪಾಪಗ್ರಹಗಳು ಇರುವದರಿಂದ ಅವಳ ಆರೋಗ್ಯ ಹೆಚ್ಚು ಕೆಡುವದು. ಕೆಲ ಸಮಯ ಆಸ್ಪತ್ರಿಯಲ್ಲಿಯೂ ಇಡಬೇಕಾದ ಪ್ರಸಂಗ ಬರುವದು. ವಿಶೇಷವಾಗಿ ಜನೆವರಿ ೨೪ ರಿಂದ ಮಾರ್ಚ ೩ ರ ವರೆಗೆ ಹೆಚ್ಚು ಜಪ್ಪಿಸಬೇಕು. ಏಕೆಂದರೆ ಆ ಅವಧಿಯಲ್ಲಿ ಜೇನೆಗಿಂತ ಸ್ಟೋವದಂತಹ ದಾಹಕ ವಸ್ತುವಿನಿಂದ ಧಕ್ಕೆಯಾಗುವ ಸಂಭವ ಹೆಚ್ಚು. ಆದರೂ ಶನಿಯೇ ಭಾರ್ಯೇಶನಿರುವದರಿಂದ ಜೀವಕ್ಕೆಮಾತ್ರ ಏನೂ ಅಪಾಯವಿಲ್ಲ. ಇದನ್ನು ನಿಶ್ಚಿತವಾಗಿ ತಿಳಿಯಿರಿ. ಉಳಿದ ಎಲ್ಲ ವಿಷಯಗಳಲ್ಲಿ ಅವಳದು ನಿಮ್ಮದು ಚೆನ್ನಾಗಿ ಕೂಡಿ ನಡೆಯುವುದು. ಆದರೆ ಆ ಮಾನದಿಂದ ಪ್ರಾಪಂಚಿಕ ಸುಖ ಅಷ್ಟೊಂದು ಚೆನ್ನಾಗಿ ಲಭಿಸುವದಿಲ್ಲ. ಮನೆಯಲ್ಲಿ ಉಳಿದವರ ನಡತೆ ಮಾತ್ರ ಬಹಳಷ್ಟು ತಾಪದಾಯಕ ಮತ್ತು ಮಗರೂರಿಯದಾಗುವದು ಮತ್ತು ೨೯ ಸಪ್ಟಂಬರದಿಂದ ಅದು ಅಸಹ್ಯ ಕೂಡ ಆಗುವದು. ಆದರೆ ಇನ್ನೂ ನಿಮ್ಮ ಮದುವೆಯಾಗಿರದಿದ್ದರೆ ಮತ್ತು ಈ ವರ್ಷ ಆಗುವದಿದ್ದರೆ ಅದನ್ನು ತಹಕೂಬ ಇಡುವದೇ ಹೆಚ್ಚು ಹಿತಕರ. ಏಕೆಂದರೆ ೭ ನೇ ಗುರು ಇರುವ ವರೆಗೆ ಯಾರದಾದರೂ ಮದುವೆ ಒಂದು ವೇಳೆ ಕೂಡಿ ಬಂದರೂ ಅದು ಪ್ರತ್ಯಕ್ಷ ಸಾಧ್ಯವಾಗುವದಕ್ಕೆ ಅನೇಕ ಅಡಚಣೆಗಳು ಬರುವವು ಮತ್ತು ಆಕಸ್ಮಾತ್ತಾಗಿಯೇ ಬರುವವು. ಏಕೆಂದರೆ ಈಗಿದ್ದ ೭ನೇ ಗುರು ಮಕರದಲ್ಲಿ ಅಂದರೆ ತನ್ನ ನೀಚರಾಶಿಯಲ್ಲಿರುವನು. ಆದುದರಿಂದ ಯಾವದೊಂದು ಶುಭ ಕಾರ್ಯವನ್ನು ಅವನು ಸುಸೂತ್ರ ಮಾಡಿಸಲಾರನು. ಆದರೆ ೮ ನೇ ಗುರು ಬಂದಾಗ ಯಾರ ಲಗ್ನ ಗೊತ್ತಾಗುವದೋ ಅವರದು ಕೂಡ ಪರಸ್ಪರ ಮತಭೇದದಿಂದ ಒದಗಿಬರುವದಿಲ್ಲ.

ನಿಮ್ಮ ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಅಂದಾಜಿಗಿಂತ ಅನುಕೂಲವಾಗಿದ್ದರೂ ಅವರ ವಿವಾಹಕ್ಕೆ ಫೆಬ್ರುಅರಿ ೨೪ ರ ವರೆಗೆ ಮಧ್ಯಮ ಬಾಶಿಂಗಬಲವೇ ಇದೆ. ಒಂದು ವೇಳೆ ಕೂಡಿ ಬಂದರೆ ನಿಮ್ಮ ಹಿತ ಶತ್ರುಗಳೇ ಅದರಲ್ಲಿ ಅಡ್ಡಗಾಲ ಹಾಕುವರು. ಒಂದುವೇಳೆ ಲಗ್ನವಾದರೆ ಹೇಗೆ ಹೇಗೊ ದಗದಗಿಯಿಂದ ಮತ್ತು ಅಂಜುತ್ತಂಜುತ್ತ ಮಾಡಬೇಕಾಗುವದು ಆದರೆ ಸೊಸೆ ಮತ್ತು ಅಳಿಯ ನೋಡಲಿಕ್ಕೆ ಸಾದಾ ಭೋಳೆ ತೋರಿದರೂ ಸುದ್ಯೆವಿಗಳಿದ್ದುದರ ಪ್ರತ್ಯಯ ಬೇಗ ಕಂಡುಬರುವದು. ಮಕ್ಕಳಲ್ಲಿ ಅನೇಕರು ನಿಮ್ಮನ್ನು ತಮ್ಮ ವರ್ಚಸ್ಸಿನಲ್ಲಿಯೇ ತರುವ ಪ್ರಯತ್ನ ಮಾಡುವರು.

ಧಂದೆ ಕೂಲಿಯವರು ಈ ವರ್ಷವನ್ನು ಹೇಗೆ ಹೇಗೊ ನೂಕುತ್ತ ಮುಂದಿನ ವರ್ಷವನ್ನು ಮುಟ್ಟುವರು. ಗುರುಅಷ್ಟಮಕ್ಕೆ ಬಂದ ನಂತರ ಧಂದೆಯವರಿಗೆ ಬಹಳ ತೊಂದರೆಯಾಗುವದು. ದುಡ್ಡು ತುಂಬಿದರೂ ದಾರಿಯಲ್ಲಿಯ ಸರಕುಗಳು ಕಳವಾಗಿ ಹೋಗುವವು, ಇಲ್ಲವೆ ಕೆಡುವವು ಅಥವಾ ನಾಶವಾಗಿ ಹೋಗುವ ಸಂಭವವಿದೆ. ಯಾರ ವ್ಯವಹಾರ ವ್ಯವಸ್ಥಿತ ನಡೆದಿದೆಯೋ ಅವರಿಗೆ ಸರಕಾರದ ನಿಯಂತ್ರಣ ಮತ್ತು ಬಗೆ ಬಗೆಯ ಟ್ಯಾಕ್ಸಗಳು ಹಣ್ಣು ಮಾಡುವವು. ಪತ್ತು ಮತ್ತು ಪ್ರತಿಷ್ಠೆ ಹೇಗಾದರೂ ಉಳಿದರೆ ಸಾಕು ಎನ್ನುವ ಸರತಿ ಬರುವದು. ಅದರಲ್ಲಿಯೂ ಪ್ರಾರಂಭದಿಂದ ದಿಶೆಂಬರ ೨೩ರ ನಂತರದವರೆಗೆ ಮತ್ತು ಅನಂತರ ಜನೆವರಿ ೧೫ ರಿಂದ ಫೆಬ್ರುಅರಿ ೯, ಮಾರ್ಚ ೩ ರಿಂದ ಮೇ ೧೬, ಮತ್ತು ಜೂನ ೧೧ ರಿಂದ ಅಗಸ್ಟ ೨ ರ ವರೆಗಿನ ಕಾಲ ಮಾತ್ರ ಅಂದಾಜಿನಷ್ಟು ಫಾಯದೆ ಕೊಡುವದು. ನೋಕರರಿಗೆ ಕೂಡ ವರಿಷ್ಠರ ಮರ್ಜಿ ಹಿಡಿದು ಸಾಕು ಬೇಕಾಗಿ ಹೋಗುವದು. ಅನೇಕರಿಗೆ ನಾಲ್ಕೆಂಟು ರೂಪಾಯಿ ಲಂಚತಿಂದ ಕ್ಷುಲ್ಲಕ ಆರೋಪಗಳು ಬರುವವಲ್ಲದೆ ಅದಕ್ಕಾಗಿ ಸಸ್ಪೆಂಡ ಕೂಡ ಆಗುವದು. ಒಮ್ಮೊಮ್ಮೆ ಕ್ಷುಲ್ಲಕತಪ್ಪಿಗಾಗಿಯೂ ಸಸ್ಪೆಂಡಿನ ಸರತಿ ಬರುವದು. ಮೇಲಿನ ಗ್ರೇಡಿನ ಹೆಸರನ್ನಂತೂ ಎತ್ತಬೇಡಿರಿ. ಬದಲಿಯಾದರೆ ಹೆಸರಿಗೆ ದೊಡ್ಡ ಸ್ಥಳಕ್ಕೆ. ಆದರೆ ಕೆಲಸಕ್ಕೆ ಅನನುಕೂಲ ಸ್ಥಳಕ್ಕೆ ಆಗುವದು. ಯೋಜಿಸಿದ ದಿಕ್ಕಿಗೆ ಪ್ರವಾಸವಾಗುವದಿಲ್ಲ. ಒಂದು ವೇಳೆ ಪ್ರವಾಸವಾದರೆ ವಿರುದ್ಧ ದಿಕ್ಕಿಗೆ ಆಗುವದು. ಶಿಲ್ಲಕು ಇದ್ದ ಹಣವು ಕೂಡ ನಿರುದ್ದೇಶದಿಂದ ಎರಡನೆಯವರ ಕೈಯಲ್ಲಿ ಉಳಿಯುವದರಿಂದ ನಿಮಗೇ ಎರಡನೆಯವರ ಸಹಾಯದ ಯಾಚನೆ ಮಾಡುವ ಪ್ರಸಂಗ ಬರುವದು. ಆಪ್ತರಲ್ಲಿ ಕೆಲವರು ನಿರರ್ಥಕವಾಗಿ ನಿಮ್ಮನ್ನು ದ್ವೇಷಿಸುವರು. ವಾಹನವಿದ್ದರೂ ಅದರ ಸುಖವನ್ನನುಭೋಗಿಸದ ಪರಿಸ್ಥಿತಿ ಬರುವದು. ಹೊಸ ಆಸ್ತಿಯಂತೂ ಆಗುವದಿಲ್ಲ. ಇದ್ದ ಹಳೆಯ ಆಸ್ತಿ ಹಾಗೆಯೆ ಉಳಿಯುವದು. ಮಿತ್ರರೂ ವಿರೋಧಿಗಳಾದ ಅನುಭವ ಬರುವದು.

ದಾವೆ ಫಿರ್ಯಾದಿ ಇಲ್ಲವೆ ಸ್ಪರ್ಧೆಯಲ್ಲಿ ಈ ವರ್ಷ ಕೆಲ ಮಹತ್ವದ ಕೆಲಸಗಳಲ್ಲಿ ಮಾತ್ರ ಒಳ್ಳೆ ಯಶಸ್ಸು ದೊರೆಯುವದು. ಆದರೆ ಉಳಿದದ್ದು ಹಾಗೆಯೆ ನೆನೆಗುದಿಗೆ ಬೀಳುವದು. ಮತ್ತು ಶತ್ರುಗಳ ಜೋರು ಬಹಳಷ್ಟು ಸಡಿಲಾಗುವ ಘಟನೆಗಳೂ ಆಕಸ್ಮಿಕವಾಗಿ ನಡೆಯುವವು. ದಿಶೆಂಬರ ೧೫ ರಿಂದ ಜನೆವರಿ ೨೪ ಮತ್ತು ಜೂನ ೨೯ ರಿಂದ ಅಗಸ್ಟ ೧೨ ಈ ಕೆಲಸಕ್ಕೆ ಒಳ್ಳೆ ಯಶಸ್ವಿಯಾಗಿದೆ.

ಈ ರಾಶಿಯ ಸ್ತ್ರೀಯರು ಫೆಬ್ರುಅರಿ ೨೪ ರೊಳಗಾಗಿ ಹಡೆದರೆ ಸುಲಭವಾಗಿ ಹಡೆಯುವರು. ಆದರೆ ಹುಟ್ಟುವ ಮಗು ಅಶಕ್ತ ಮತ್ತು ಬಹುಶಃ ಕನ್ಯಾ. ಅನಂತರ ಸ್ವಲ್ಪ ಕಷ್ಟದಿಂದ ಹಡೆದರೂ ಕನ್ಯಾ ಇಲ್ಲವೆ ಪುತ್ರ ಸಶಕ್ತ ಉಳಿವವು.

ಯಾರ ಪರೀಕ್ಷೆ ಈ ವರ್ಷ ಇದೆಯೊ ಅವರೆಲ್ಲ ಇಮ್ಮಡಿ ಪರಿಶ್ರಮವನ್ನು ಮಾಡಬೇಕು. ಏಕೆಂದರೆ ಫೆಬ್ರುಅರಿ ೨೪ಕ್ಕಿಂತ ಮೊದಲು ಪರೀಕ್ಷೆ ಕಟ್ಟುವವರು ಅಷ್ಟಕ್ಕಷ್ಟೆ ಗುಣ ತಕ್ಕೊಂಡು ಪಾಸಾಗುವರು.

ಅಷ್ಟಗ್ರಹ ಸಪ್ತಮಸ್ಥಾನದಲ್ಲಿ ಬರುವದರಿಂದ ನಿಮ್ಮ ಮತ್ತು ಹೆಂಡತಿಯ ಆರೋಗ್ಯವನ್ನು ಬಹಳ ಜಪ್ಪಿಸಬೇಕು. ಪಾಲುಗಾರಿಕೆ ಇದ್ದ ಧಂದೆ ಒಡೆಯುವದು. ದಾವೆ ಫಿರ್ಯಾದಿ ಮಾಡುವ ಪ್ರಸಂಗ ಕ್ಷುಲ್ಲಕ ಕಾರಣಕ್ಕಾಗಿ ಬರುವದು. ಮನೆಯನ್ನ ಉಂಡು ಎರಡನೆಯವರ ಮರ್ಜಿ ಹಿಡಿಯುವ ಪ್ರಸಂಗ ಅನೇಕರ ಮೇಲೆ ಬರುವದು. ಒಟ್ಟಾರೆ ಅಷ್ಟಗ್ರಹ ಅಲ್ಪ ಸ್ವಲ್ಪ ತೊಂದರೆ ಕೊಡುವದು.

ಸಿಂಹ

ಒಟ್ಟಿಗೆ ಈ ವರ್ಷವು ಈ ರಾಶಿಯವರಿಗೆ ಪ್ರಾಪಂಚಿಕ ಔದ್ಯೋಗಿಕ ಮತ್ತು ಆರ್ಥಿಕ ಹೀಗೆ ಅನೇಕ ವಿಷಯಗಳಲ್ಲಿ ಒಳ್ಳೆ ಪ್ರಗತಿಯದಾಗಿದೆ. ಹೀಗೆ ತಿಳಿದುಕೊಂಡು ಈ ರಾಶಿಯವರು ಆಗಾಗ ಬರುವ ಅವಕಾಶಗಳ ಪೂರ್ಣ ಲಾಭ ಪಡೆದುಕೊಳ್ಳಬೇಕು.

ಈ ರಾಶಿಯವರ ಆರೋಗ್ಯ ಒಟ್ಟಿಗೆ ನಿರೋಗಿಯುಳಿಯುವುದು. ಆದರೆ ಫೆಬ್ರುಅರಿ ೨೪ ರ ವರೆಗೆ ತಿನ್ನುಣ್ಣುವದರಲ್ಲಿ ಮಾತುಕತೆಗಳಲ್ಲಿ ಸ್ವೇಚ್ಛೆಯಿಂದ ಅನೇಕರು ವರ್ತಿಸುವ ಸಂಭವವಿದೆ. ಹಾಗೆ ಮಾಡಿದಲ್ಲಿ ಅಜೀರ್ಣ ಮತ್ತು ಉಷ್ಣದಿಂದ ಆರೋಗ್ಯ ಕೆಟ್ಟ ತಕರಾರೂ ಬರುವದು ಅಷ್ಟೆ. ಆದರೆ ಅನಂತರ ಅಂದರೆ ಫೆಬ್ರುಅರಿ ೨೪ ರಿಂದ ಮುಂದೆ ೭ ನೇ ಗುರು ಬಂದ ನಂತರ ನಿಮ್ಮ ಪರಿಸ್ಥಿತಿ ಸುಧಾರಿಸುವದು ಮತ್ತು ಅನೇಕರಿಗೆ ಹೊಸ ಶಕ್ತಿ ಬಂದಂತಾಗಿ ತೂಕವೂ ಹೆಚ್ಚುವದು. ಉಳಿದ ವಿಷಯಗಳಲ್ಲಿಯೂ ದೇಹಸುಖಕ್ಕೆ ಈ ವರ್ಷವು ಅನನುಕೂಲವಿರುವದಿಲ್ಲ. ತದ್ವಿರುದ್ಧ ಮಾರ್ಚ್ದಿಂದ ಬಗೆಬಗೆಯ ಸುಖಾನುಕೂಲತೆಗಳುಂಟಾಗುವವು. ಅಂದಿನಿಂದ ಅಶಕ್ಯ, ದುರ್ಘಟ ಇಲ್ಲವೆ ದುರ್ಲಭವೆನಿಸುವ ಸಂಗತಿಗಳು ಇಲ್ಲವೆ ವಸ್ತುಗಳು ಅಲ್ಪಾಯಾಸದಿಂದ ಸಾಧ್ಯವಾಗಿ ಮನಸ್ಸಿನಲ್ಲಿ ಹುಮ್ಮಸ್ಸು ಹೆಚ್ಚುವದು.

ಸ್ತ್ರೀ ಸುಖಕ್ಕೂ ಈ ವರ್ಷ ಫೆಬ್ರುಅರಿ ೨೪ ರ ವರೆಗೆ ಅನುಕೂಲವಿಲ್ಲ. ಇಬ್ಬರಲ್ಲಿ ಯಾರೊಬ್ಬರು ಗ್ರಾಮಾಂತರಕ್ಕೆ ಹೋಗುವದರಿಂದ ಇಲ್ಲವೆ ಬೇರೆ ಯಾವದೇ ಒಂದು ಇಷ್ಟಾಪತ್ತಿಯಿಂದ ಸಹವಾಸಸುಖ ಸಿಕ್ಕುವದಿಲ್ಲ. ಆದರೆ

ಆ ತಾರೀಖಿನ ನಂತರ ಮಾತ್ರ ಪೂರ್ಣ ಸಹವಾಸ ಸುಖ ಸಿಕ್ಕುವದು. ಉಭಯತರಲ್ಲಿ ಅಭೂತಪೂರ್ವ ಪ್ರೇಮ ನೆಲೆಸುವದು. ಪರಸ್ಪರ ವಿಚಾರಗಳೂ ಹೊಂದುವವು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕಸುಖ ಬಹಳ ಚನ್ನಾಗಿ ದೊರೆಯುವದು. ಮೊದಲು ನಿಮ್ಮ ವಿರುದ್ಧ ನಡೆಯುವವರೂ ಈಗ ನೀವು ಹೇಳಿದಂತೆ ಕೇಳಹತ್ತುವರು. ಆಪ್ತರಲ್ಲಿ ಆದರ ಹೆಚ್ಚುವದು. ಅದರಲ್ಲಿಯೂ ವಿಶೇಷ ಪ್ರೇಮವಿದ್ದವರು ಬಹಳ ಉತ್ಕರ್ಷ ಹೊಂದುವರು. ನಿಮ್ಮ ಒಡೆತನದ್ದಿರಲಿ, ಬೇರೆಯವರದಿರಲಿ ಅಥವಾ ಬಾಡಿಗೆಯದಿರಲಿ ವಾಹನ ಸುಖ ಬಹಳ ಅನುಕೂಲ ದೊರೆಯುವದು. ಹೊಸದಾಗಿ ಸ್ಥಾವರ ಆಸ್ತಿಯನ್ನು ಮಾಡುವಿರಿ. ಅದರಂತೆ ಊರಲ್ಲಿ ಮತ್ತು ಹೊರಗೆ ನಿಮ್ಮ ಪ್ರತಿಷ್ಠೆ, ವರ್ಚಸ್ಸು, ಹೆಚ್ಚುವವು. ಅಂಥ ಘಟನೆಗಳು ನಡೆಯುವವು. ನಿಮ್ಮ ಮದುವೆಯಾಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಫೆಬ್ರುಅರಿ ೨೪ ಕ್ಕಿಂತ ಮೊದಲು ನಿಮಗೆ ನಕಾರಾತ್ಮಕ ಉತ್ತರದೊರೆಯುವದು. ಆದರೆ ಅನಂತರ ಮೊದಲು ನಿಮಗೆ ನಕಾರ ಹೇಳಿದವರು ನಿಮ್ಮನ್ನು ಪ್ರಾರ್ಥಿಸುತ್ತ ಬರುವರು. ಅಲಭ್ಯವೆನಿಸಿದ್ದ ಸ್ಥಳವೂ ಅನೇಕರಿಗೆ ಸಿಕ್ಕಬಹುದು. ವಧೂ ಇಲ್ಲವೆ ವರ ನಿಮ್ಮಗಿಂತ ಸ್ವಲ್ಪ ಎಡ ಇದ್ದರೂ ಬುದ್ಧಿ ಬಹಳ ತೀಕ್ಷ್ಣ ಸ್ವಭಾವ ಬಹಳ ಒಳ್ಳೇದು. ನಿಮ್ಮ ಮೇಲೆ ಅವರು ಬೇಗನೆ ವರ್ಚಸ್ಸು ಸ್ಥಾಪಿಸುವರು.

ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಇಡೀ ವರ್ಷ ಬಾಶಿಂಗ ಬಲವಿದೆ. ಆದರೂ ಫೆಬ್ರುಅರಿ ೨೪ ರ ವರೆಗೆ ಬಹಳ ಪ್ರಯಾಸದಿಂದ ಅನಂತರ ಅಲ್ಪಾಯಾಸದಿಂದ ಲಗ್ನ ಕೂಡಿಬರುವ ಯೋಗವಿದೆ. ಸೊಸೆ ಇಲ್ಲವೆ ಅಳಿಯ ರೂಪ ಮತ್ತು ಗುಣಗಳಿಂದ ಅಪೇಕ್ಷೆಗಿಂತ ಒಂದು ಗುಂಜಿ ತೂಕ ಹೆಚ್ಚು ಒಳ್ಳೆಯವರು. ಮಕ್ಕಳ ಉತ್ಕರ್ಷಕ್ಕೂ ಈ ವರ್ಷ ಅನುಕೂಲ. ಅದರಲ್ಲಿಯೂ ಗಂಡು ಮಗುವಿಗಿಂತ ಹೆಣ್ಣು ಹುಡಿಗೆಯ ಉತ್ಕರ್ಷ ಹೆಚ್ಚು.

ಧಂದೆ ಕೂಲಿಯ ದೃಷ್ಟಿಯಿಂದ ಈ ವರ್ಷ ಬಹಳ ಯಶಸ್ಸಿನದು. ಉತ್ಕರ್ಷವಾಗಿ ಹೆಚ್ಚು ಲಾಭವೂ ದೊರೆಯುವದು. ಫೆಬ್ರುಅರಿ ೨೪ ರಿಂದ ಅದು ಹೆಚ್ಚು ವಿಸ್ತಾರಗೊಳ್ಳುವದು. ಮತ್ತು ಜನೆವರಿ ೨೪ ರಿಂದ ಎಪ್ರಿಲ ೧೦, ಮೇ ೨೦ ರಿಂದ ಜೂನ ೨೯ ಮತ್ತು ಆಗಸ್ಟ ೧೨ರಿಂದ ಸಪ್ಟೆಂಬರ್ ೨೯ ಈ ಕಾಲ ಬಹಳ ಉಲಾಢಾಲಿಯದು ಮತ್ತು ವಿಪುಲ ಲಾಭದ್ದಾಗಿ ಪರಿಣಮಿಸುವದು. ತಪ್ಪೆಂದು ಎನಿಸುವದರಲ್ಲಿಯೂ ಹಾನಿಯಾಗದೆ ಲಾಭವೇ ಆಗುವದು. ಅದರಂತೆಯೇ ನೋಕರರಿಗೆ ಒಳ್ಳೆ ವರಿಷ್ಠರ ಇಲ್ಲವೆ ಒಡೆಯರ ಕೈಕೆಳಗೆ ಕೆಲಸ ಮಾಡುವ ಅವಕಾಶ ಸಿಕ್ಕುವದು. ಅದರಿಂದ ನಿಮ್ಮ ಗ್ರೇಡು ಹೆಚ್ಚಿ ಸಂಬಳದಲ್ಲಿಯೂ ಹೆಚ್ಚಳವಾಗುವದು. ಅವರು ನಿಮ್ಮಲ್ಲಿಯ ಗುಣಗಳಿಗೆ ಯೋಗ್ಯ ಪುರಸ್ಕಾರ ಕೊಡುವರು. ಬದಲಿಯಾದರೆ ಕೆಲಸದ ದೃಷ್ಟಿಯಿಂದ ಅತಿ ಉತ್ತಮ. ಆದರೆ ಇರುವಿಕೆಯ ದೃಷ್ಟಿಯಿಂದ ಸ್ವಲ್ಪ ಅನನುಕೂಲ ಸ್ಥಳಕ್ಕೆ ಆಗುವದು ಇಷ್ಟೇ. ಖರ್ಚು ಅಷ್ಟಕ್ಕಷ್ಟೇ. ಮತ್ತು ಅದೂ ಇಷ್ಟ ಕಾರ್ಯಗಳಲ್ಲಿಯೇ ಆಗುವದು. ಕೆಲಮಟ್ಟಿಗೆ ಹಣ ಕೂಡಿಯೂ ಬೀಳುವದು. ಮಿತ್ರಸುಖ ಅನುಕೂಲ. ಅವರ ಸಲಹೆಯೂ ನಿಮಗೆ ಸಿಕ್ಕುವದು. ಎರಡು ಮೂರು ಸಲ ದೂರದ ಪ್ರವಾಸ ಮಾಡುವಿರಿ. ಹೋಗಿ ಬರುವಾಗ ಯಾತ್ರೆಯನ್ನೂ ಸಾಧಿಸುವ ಸಂಭವವಿದೆ. ಹಿತ ಶತ್ರುಗಳು ಅನೇಕರಿದ್ದರೂ ಪತ್ತು ಪ್ರತಿಷ್ಠೆ ಮತ್ತು ಲೌಕಿಕ ಇಮ್ಮಡಿಯಾಗುವವು.

ದಾವೆ ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಗಳ ಕೆಲಸಗಳಲ್ಲಿ ಫೆಬ್ರುಅರಿ ೨೪ ಕ್ಕಿಂತ ಮೊದಲು ಯಾವದೊಂದು ವಿರುದ್ಧವು ಅಗಬಹುದು. ಆದರೆ ಅನಂತರ ಮಾತ್ರ ಬಹುಶಃ ಎಲ್ಲವೂ ನಿಮಗೆ ಅನುಕೂಲ. ಪ್ರತಿಪಕ್ಷಿಗಳಲ್ಲಿ ಬಲಿಷ್ಠರಿದ್ದವರ ಜೀವಕ್ಕೆ ಅಪಾಯವಾಗುವ ಸಂಭವವೂ ಇದೆ.

ಹಡೆಯುವ ಸ್ತ್ರೀಯರಿದ್ದರೆ ಫೆಬ್ರುಅರಿ ೨೪ ಕ್ಕಿಂತ ಮೊದಲು ಹಡೆದರೆ ಪ್ರಸೂತಿ ಕಷ್ಟ ಬಹಳ ಎನಿಸಿದರೂ ಮಗು ಸಶಕ್ತವಿರುವದು. ಆದರೆ ಅನಂತರ ಪ್ರಸೂತಿ ಸುಲಭವಾದರೂ ಮಗು ಮಾತ್ರ ಅಶಕ್ತವಿರುವದು. ಬಹುಶಃ ಈ ವರ್ಷ ಈ ರಾಶಿಯವರಿಗೆಲ್ಲ ಗಂಡುಮಗು ಹುಟ್ಟುವ ಯೋಗವಿದೆ.

ಫೆಬ್ರುಅರಿ ೨೪ ರ ನಂತರ ಪರೀಕ್ಷೆಯಾದ ವಿದ್ಯಾರ್ಥಿಗಳು ಖಾತ್ರಿಯಿಂದ ತೇರ್ಗಡೆ ಹೊಂದುವರು. ಕ್ಲಾಸು ದೊರೆಯಲಿ ದೊರೆಯದಿರಲಿ ಪಾಸಂತೂ ಆಗುವರು.

ಅಷ್ಟಗ್ರಹ ಷಷ್ಠ ಸ್ಥಾನದಲ್ಲಿ ಆಗುವದರಿಂದ ಮಾತುಲ ಪಕ್ಷಕ್ಕೆ ಕ್ಲೇಶವಾಗುವದು. ಸ್ವತಃ ನಿಮಗೆ ಸಂಕಟಗಳು ನಾಶವಾಗಿ ರೋಗದಿಂದ ಮುಕ್ತರಾಗುವಿರಿ. ಶತ್ರುಗಳ ಮೇಲೆ ವಿಜಯ ಸಾಧಿಸುವಿರಿ ಮತ್ತು ಅಪೇಕ್ಷಿತ ವಿಷಯಗಳಲ್ಲಿ ಒಳ್ಳೆ ಯಶಸ್ಸು ದೊರೆಯುವದು. ಈ ಎಲ್ಲ ಫಲಗಳು ಅಷ್ಟಗ್ರಹಯೋಗದಿಂದ ದೊರೆಯುವವು.

ಕನ್ಯಾ

ಒಟ್ಟಾರೆ ಈ ವರ್ಷ ಈ ರಾಶಿಯವರಿಗೆ ಮಧ್ಯಮವಾಗಿಯೇ ಹೋಗುವದು. ಕೆಲವೊಮ್ಮೆ ಅನುಕೂಲ ಕೆಲವೊಮ್ಮೆ ಪ್ರತಿಕೂಲ ಹೀಗೆ ಘಟನೆ ಸಂಭವಿಸಿದ್ದು ಅನುಭವಕ್ಕೆ ಬರುವದು.

ಈ ರಾಶಿಯ ಜನರಿಗೆ ವರ್ಷಾರಂಭದಲ್ಲಿ ಆರೋಗ್ಯ ಸರಿಯಿರುವದು ಆದರೆ ಫೆಬ್ರುಅರಿ ೨೪ ರ ನಂತರ ಅಪಚನ, ಗ್ಯಾಸಾಗುವದು, ಸ್ವಲ್ಪ ನಿದ್ರಾನಾಶ ಮೊದಲಾದ್ದರಿಂದ ಸ್ವಲ್ಪಾದರೂ ಆರೋಗ್ಯ ಕೆಡುವದು. ಇದನ್ನು ತಿಳಿದಿರಬೇಕು. ಈ ವಿಕಾರ ಕ್ಷುಲ್ಲಕವಿದ್ದರೂ ದಿನವೂ ತೊಂದರೆ ಕೊಡುವವು. ಉಳಿದ ವಿಷಯಗಳಲ್ಲಿ ದೇಹಸುಖ ಅನುಕೂಲ. ಮತ್ತು ೩-೧-೧೯೬೨ ರ ವರೆಗೆ ಮತ್ತು ಅನಂತರ ಎಪ್ರಿಲ ೨೯ ರಿಂದ ಜುಲೈ ೨೨ ರ ವರೆಗೆ ಮತ್ತು ಮುಂದೆ ಆಗಸ್ಟ ೨೫ ರ ನಂತರದ ಕಾಲದಲ್ಲಿ ಹೆಚ್ಚು ಸಮಾಧಾನದ್ದಾಗಿ ಪರಿಣಮಿಸುವದು.

ಹೆಂಡತಿಯ ಆರೋಗ್ಯವೂ ಫೆಬ್ರುಅರಿ ೨೪ ರ ವರೆಗೆ ಅನುಕೂಲವಿದ್ದರೂ ಮುಂದೆ ಉಳಿಯುವದಿಲ್ಲ. ನೈ ಒಜ್ಜೆಯಾದಂತೆನಿಸುವದು. ಅಮ್ಲ ಪಿತ್ತ ಇಲ್ಲವೆ ಕಾಲು ಸೆಳೆಯಹತ್ತುವ ಮೊದಲಾದ್ದರಿಂದ ಕ್ಲೇಶವಾಗುವ ಸಂಭವವಿದೆ. ಆದರೂ ಉಭಯತರ ಜಡ್ಡು ಮನೆ ಮಾರಿಗೆಯ ಔಷಧಿಗಳಿಂದಲೆ ವಾಸಿಯಾಗುವದು. ಉಭಯತರು ಪರಸ್ಪರ ಪ್ರೇಮ ಆದರಗಳಿಂದ ಇರುವಿರಿ. ಬಹುತರ ವಿಷಯಗಳಲ್ಲಿ ಪ್ರಾಪಂಚಿಕಸುಖ ಅನುಕೂಲ. ಇನ್ನೂ ನಿಮ್ಮ ವಿವಾಹವಾಗಿದ್ದಿಲ್ಲವಾದರೆ ಮತ್ತು ಈ ವರ್ಷ ಮಾಡಿಕೊಳ್ಳಬಯಸಿದರೆ ಫೆಬ್ರುಅರಿ ೨೪ ರ ವರೆಗೆ ಮಾತ್ರ ಒಳ್ಳೆ ಬಾಶಿಂಗಬಲವಿದೆ. ಅಷ್ಟರಲ್ಲಿ ಅದು ಬೇಗ ಕೂಡಿ ಬಂದು ಲಗ್ನವು ಆಗಿ ಹೋಗುವದು. ಆದರೆ ಮುಂದಕ್ಕೆ ಹಾಕಿದರೆ ಮಾತ್ರ ಅನೇಕ ಅಡಚಣಿಗಳು ಬರುವವು. ವಧೂ ಇಲ್ಲವೆ ವರ ಪರಸ್ಪರ ಅನುರೂಪ ದೊರೆಯುವರು. ಮಕ್ಕಳ ಮದುವೆ ಮಾಡುವದಿದ್ದರೆ ಅದಕ್ಕೆ ಫೆಬ್ರುಅರಿ ೨೪ ಕ್ಕಿಂತ ಮೊದಲು ಹೆಚ್ಚು ಬಾಶಿಂಗಬಲವಿದೆ. ಮುಂದೆ ಮಾತ್ರ ಅಷ್ಟೊಂದಿಲ್ಲ. ಒಂದೊಮ್ಮೆ ಮುಂದೆ ಲಗ್ನ ಸಂಭವಿಸಿದರೆ ಅದನ್ನು ಹೇಗೆ ಹೇಗೋ ಮುಗಿಸಬೇಕಾಗುವದಲ್ಲದೆ ಅನೇಕ ಅಡಚಣಿಗಳನ್ನು ಸಹಿಸಬೇಕಾಗುವದು. ಸೊಸೆ ಇಲ್ಲವೆ ಅಳಿಯ ಸಹ ಅಷ್ಟೊಂದು ಮೆಚ್ಚಿಗೆಯವರಿರುವರೆಂದು ಹೇಳಲು ಬರುವದಿಲ್ಲ.

ಮಕ್ಕಳ ಉನ್ನತಿಗೆ ಮಾತ್ರ ಈ ವರ್ಷ ಬಹಳ ಉತ್ತಮ. ಆದರೆ ಫೆಬ್ರುಅರಿ ೨೪ ರ ನಂತರ ಅವರ ಆರೋಗ್ಯಕ್ಕೆ ಅಷ್ಟೊಂದು ಅನುಕೂಲವಿಲ್ಲ. ಒಬ್ಬನಿಗೆ ಸಂಧಿವಾತದಂಥ ವಿಕಾರವಾಗುವ ಭೀತಿಯಿದೆ. ಆದರೆ ಅವರೆಲ್ಲ ನಿಮ್ಮ ಮರ್ಜಿಯಂತೆ ನಡೆಯುವರು.

ಧಂದೆ ಕೂಲಿಯವರಿಗೆ ಈ ವರ್ಷ ಫೆಬ್ರುಅರಿ ೨೪ ರ ವರೆಗೆ ಅನುಕೂಲವಿದ್ದರೆ ನೋಕರರಿಗೆ ಅನಂತರ ಹೆಚ್ಚು ಅನುಕೂಲ. ವಿಶೇಷವಾಗಿ ದಿಶೆಂಬರ ೨೩ರ ವರೆಗೆ ಮತ್ತು ಮುಂದೆ ಜನೆವರಿ ೧೫ ರಿಂದ ಫೆಬ್ರುವರಿ ೨ ಮಾರ್ಚ ೫ ರಿಂದ ೨೯, ಎಪ್ರಿಲ ೨೨ರಿಂದ ಮೇ ೧೬, ಜೂನ

೧೧ ರಿಂದ ಜುಲೈ ೬ ಮತ್ತು ಸಪ್ಟಂಬರ ೧ ರಿಂದ ಮುಂದಿನ ಕಾಲ ದ್ರವ್ಯ ಲಾಭಕ್ಕೆ ಅನುಕೂಲ ಹೆಚ್ಚು. ಧಂದೆಯುವರಿಗೆ ಅದರಲ್ಲಿ ಪತ್ತು ಮತ್ತು ಪ್ರತಿಷ್ಠೆ ಹೆಚ್ಚು ಚೆನ್ನಾಗಿ ಉಳಿಯುವದು. ಆದರೆ ವಿಸ್ತರಣದ ಯೋಜನೆ ಮಾತ್ರ ಅರ್ಥಸ್ಥಿತಿಯಲ್ಲಿಯೆ ಉಳಿಯುವವು. ನೋಕರರಿಗೆ ವರಿಷ್ಠರ ಮರ್ಜಿ ಫೆಬ್ರುಅರಿ ೨೪ ರ ನಂತರ ಹೆಚ್ಚು ಚೆನ್ನಾಗಿ ಉಳಿಯುವದು. ಹಕ್ಕುದಾರರಿಗೆ ಕೂಡ ಈ ವರ್ಷ ಮೇಲಿನ ಗ್ರೇಡು ಸಿಕ್ಕುವದು ಕಠಿಣವಿದೆ. ಬದಲಿಯಾದರೆ ಎಲ್ಲ ಬಗೆಯಿಂದ ಅನುಕೂಲ ಸ್ಥಳಕ್ಕೆ ಆಗುವದು. ಆದರೆ ಅಲ್ಲಿ ನಿಮ್ಮ ಕೈಕೆಳಗಿನವನೊಬ್ಬನು ನಿರರ್ಥಕವಾಗಿ ನಿಮಗೆ ಪೀಡೆಕೊಡುವನು. ದೂರದ ಪ್ರವಾಸ ಎರಡು ಮೂರು ಸಲ ನಿಶ್ಚಿತವಾಗಿದ್ದರೂ ಘಟಿಸುವದಿಲ್ಲ. ಆದರೆ ಸಮೀಪದ ಪ್ರವಾಸ ಮಾತ್ರ ಮನಸ್ಸಿನಲ್ಲಿಲ್ಲದಿದ್ದರೂ ಅನೇಕ ಸಲ ಒದಗುವದು. ಅನೇಕ ವಿಷಯಗಳಲ್ಲಿ ಸಾಹಸವನ್ನೇನೋ ಮಾಡುವಿರಿ ಮತ್ತು ಅವುಗಳಲ್ಲಿ ಎಷ್ಟೋ ಫಲಪ್ರದವೂ ಆಗುವವು. ಈ ವರ್ಷ ಹೊಸ ಸಂಗ್ರಹದ ಯೋಗ ಹೆಚ್ಚಿಗೆ ಇಲ್ಲದಿದ್ದರೂ ಮೊದಲಿನ ಸಂಗ್ರಹದಿಂದ ಹಣ ತೆಗೆವ ಪ್ರಸಂಗವೂ ಬರುವದಿಲ್ಲ. ಫೆಬ್ರುಅರಿ ೨೪ ರಿಂದ ಕುಟುಂಬದಲ್ಲಿಯ ಇಬ್ಬರು ಮೂವರು ಕನಿಷ್ಟ ಒಬ್ಬನದಾದರೂ ವಿಶೇಷವಾಗಿ ಉತ್ಕರ್ಷ ಆಗುವದು. ಆದುದರಿಂದಲೆ ಅಣ್ಣ ತಮ್ಮಂದಿರು ಇಲ್ಲವೆ ಆಪ್ತರಲ್ಲಿಯ ಕೆಲವರು ನಿಮ್ಮಲ್ಲಿ ದ್ವೇಷಬುದ್ಧಿಯನ್ನು ತಾಳುವರು ಇಲ್ಲವೆ ಆ ಉತ್ಕರ್ಷದ ಬಗ್ಗೆ ಏನೇನೋ ಹರಟಹತ್ತುವರು. ವಾಹನಸುಖ ತ್ರಾಸದಾಯಕ. ಫೆಬ್ರುಅರಿ ೨೪ರ ವರೆಗೆ ಮಿತ್ರಸುಖ ಉತ್ತಮ ದೊರೆಯುವದು. ಆದರೆ ,ಮುಂದೆ ಮಾತ್ರ ಅಷ್ಟೊಂದು ಚೆನ್ನಾಗಿ ನಡೆಯುವದಿಲ್ಲ. ಒಳ್ಳೆ ಮತ್ತು ಕೆಟ್ಟ ಕನಸು ಬೀಳುವವು ಆದರೆ ಅವೆಲ್ಲ ಭಾವೀ ಸೂಚಕವಿರುವವು. ಬಂಧುಗಳಲ್ಲಿ ಒಬ್ಬನ ಲೌಕಿಕ ಬಹಳ ಹೆಚ್ಚುವದು. ಸ್ವತಃ ನಿಮ್ಮಿಂದ ಫೆಬ್ರುಅರಿ ೨೪ ಕ್ಕಿಂತ ಮೊದಲು ವಿಶೇಷ ರೀತಿಯಿಂದ ದೈವಿಕ ಉಪಾಸನೆ ನಡೆಯುವದು.

ದಾವೆ ಫಿರ್ಯಾದೆ ಮತ್ತು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಯಾವ ನಿರ್ಣಯಗಳು ಮಾರ್ಚ ೩ ರಿಂದ ಎಪ್ರಿಲ ೧೦ರ ವರೆಗೆ ಮತ್ತು ಸಪ್ಟೆಂಬರ ೨೯ರ ನಂತರ ಆಗುವದೋ ಅದು ನಿಮಗೆ ಪೂರ್ಣ ಅನುಕೂಲವಾಗುವವು.

ಈ ವರ್ಷ ಹಡಿಯಲಿದ್ದ ಸ್ತ್ರೀಯರಿಗೆ ಅಂದಾಜಿಗಿಂತ ಹೆಚ್ಚು ಕಷ್ಟವನ್ನು ಸಹಿಸಬೇಕಾಗುವದು. ಆದರೆ ಅದರಲ್ಲಿಯೂ ಫೆಬ್ರುಅರಿ ೨೪ರ ವರೆಗೆ ಹಡೆಯುವವರಿಗೆ ಪುತ್ರ ಲಾಭದ ಯೋಗವಿದೆ. ಮತ್ತು ಅನೇಕ ಸ್ತ್ರೀಯರ ಮಕ್ಕಳಿಗೆ ಪೂರ್ವಜನ್ಮದ ಯಾವದೊಂದು ಚಿಹ್ನವಿರುವ ಸಂಭವವಿದೆ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಫೆಬ್ರುಅರಿ ೪ಕ್ಕಿಂತ ಮೊದಲು ಇದೆಯೋ ಅವರು ಕದಾಚಿತ್ ಕ್ಲಾಸಿನಲ್ಲಿ ಪಾಸಾಗಬಹುದು. ಅನಂತರ ಪರೀಕ್ಷೆಯಿದ್ದವರು ಸಾದಾ ಪಾಸಾಗುವರು. ಪಾಸಾಗುವದು ಮಾತ್ರ ನಿಶ್ಚಿತ.

ಅಷ್ಟಗ್ರಹಯೋಗ ಪಂಚಮಸ್ಥಾನದಲ್ಲಿ ಆಗುವದರಿಂದ ಕ್ರೂರ ದೇವತೆಯ ಉಪಾಸನೆಯ ಹುಚ್ಚನ್ನುಹೆಚ್ಚಿಸುವದು. ವಿಚಾರಗಳನ್ನು ಮೇಲಿಂದ ಮೇಲೆ ಬದಲು ಮಾಡಬೇಕೆಂದೆನಿಸುವದು: ಇಲ್ಲವೆ ಅಂಥ ಪ್ರಸಂಗವೇ ಬರುವದುಂಟು. ಮಕ್ಕಳಿಗೆ ಕ್ಲೇಶ, ಇಲ್ಲದಿದ್ದರೆ ಅವರು ದೂರ ದೇಶಕ್ಕೆ ಪ್ರಯಾಣ ಬೆಳೆಸುವದರಿಂದ ವಿರಹವ್ಯಥೆಯೆನಿಸುವದು ಆದರೆ ಲಾಭ ಮತ್ತು ಕೀರ್ತಿಗೆ ಈ ಯೋಗ ಒಳ್ಳೆ ಅನುಕೂಲವಿದೆ; ಪೂರಕವಿದೆ.

ತೋಂದರೆ ನಿಜವಾಗಿ ಆಗುವದು. ಇದಿ ವರ್ಷ ಆವಳ ಸಹವಾಸ ಮಾತ್ರ ಇರುವದು. ಆದರೆ ಉಭಯತರಲ್ಲಿ ಯಾನಾಗಲಾದರೂ ತಮ್ಮ ತಮ್ಮ ಜಾಣತನದ ಬಗ್ಗೆ ನಿರರ್ಥಕ ದುರಭಿಮಾನವೆನಿಸಿ ವಿತಂಡವಾದ ನಡೆಯುವ ಪ್ರಸಂಗ ಬರುವದು. ಅದರಂತೆ ಯಾರ ಮದುವೆ ಈ ವರ್ಷ ಆಗಲಿದೆಯೊ ಅವರಿಗೆ ಫೆಬ್ರುಅರಿ ೨೪ರ ನಂತರವೆ ಅದು ಅಲ್ಪಾಯಾಸದಿಂದ ಕೂಡಿಬರುವದು. ಆದರೆ ಕೆಲವೊಂದು ಅನಪೇಕ್ಷಿತ ಅಡಚಣಿಗಾಗಿ ಗೊತ್ತುಪಡಿಸಿದ ಮುಹೂರ್ತವನ್ನು ಹಿಂದೆಮುಂದೆ ಸರಿಸಬೇಕಾಗುವದು. ಅಲ್ಲದೆ ಎರಡೂ ಪಕ್ಷಗಳಿಗೆ ಅಷ್ಟೊಂದು ಮನಃಸಮ್ಮಿಲನವು ಆಗುವದಿಲ್ಲ. ಆದರೆ ವಧು ಮತ್ತು ವರ ಎಲ್ಲ ವಿಷಯಗಳಲ್ಲಿ ಅಷ್ಟೇ ಯೋಗ್ಯತೆಯುವರಾಗಿದ್ದರೂ ಒಮ್ಮನಸ್ಸಿನವರಾಗಬೇಕಾದರೆ ಬಹಳ ಕಾಲ ಗತಿಸಬೇಕಾಗುವದು.

ಈ ವರ್ಷ ನಿಮ್ಮ ಮಕ್ಕಳಲ್ಲಿ ಯಾರದಾದರೂ ಮದುವೆ ಮಾಡುವದಿದ್ದರೆ ಅದಕ್ಕಾದರೂ ಅಂದಿನಿಂದಲೆ ಗುರುಬಲ ಉತ್ತಮ ಇರುವದರಿಂದ ಕೂಡಿ ಬರುವಲ್ಲಿ ಬಹಳಷ್ಟು ಅಡಚಣಿ ಬರದೆ ನಿಮ್ಮಕ್ಕಿಂತ ಬಹಳ ದೊಡ್ಡವರ ಮಧ್ಯಸ್ತಿಯ ಮೂಲಕ ಕೂತಕೂತಲ್ಲಿಯೇ ಕೂಡಿಬರುವದು. ಮತ್ತು ಸ್ಥಳವೂ ನೀವು ಅಪೇಕ್ಷಿಸಿದ್ದಕ್ಕಿಂತ ಹೆಚ್ಚು ಉತ್ತಮವಿರುವದು. ಆದರೆ ವಧೂವರರ ಮೈಕಟ್ಟು ಎತ್ತರಳತೆ ಮಾತ್ರ ಅಷ್ಟೊಂದು ಶೋಭಾಯಮಾನವಿರುವದಿಲ್ಲ. ಆದರೆ ರೂಪದಿಂದ ಈ ದೋಷವು ಮುಚ್ಚಿಹೋಗುವದು. ಸೊಸೆ ಇಲ್ಲವೆ ಅಳಿಯ ನಿಮ್ಮ ಪೂರ್ಣ ಮೆಚ್ಚಿಗೆಯುವರು ದೊರೆಯುವರು. ಮತ್ತು ನಿಮ್ಮದು ಅವರದು ಒಟ್ಟಾರೆ ಚೆನ್ನಾಗಿ ಕೂಡಿ ನಡೆಯುವದು. ಮಕ್ಕಳ ಉನ್ನತಿಗೂ ಈ ವರ್ಷ ಮೇಲಿನ ತಾರೀಖಿನಿಂದಲೇ ಹೆಚ್ಚು ಅನುಕೂಲವಿದೆ.

ಧಂದೆ ಕೂಲಿಯುವರಿಗೂ ಈ ವರ್ಷ ಬಹಳ ಉತ್ತಮ. ಫೆಬ್ರುಅರಿ ೨೪ ರಿಂದ ಒಂದೊಂದು ಹೆಜ್ಜೆ ಮುಂದೆ ಬಿದ್ದುದರ ಅನುಭವ ಬರುವದು. ಧಂದೆಯವರ ಮನೋರಥ ಬಹಳಷ್ಟು ಪೂರ್ಣವಾಗುವದು. ನೋಕರರಿಗೆ ಹಕ್ಕು ಬಹಳಷ್ಟು ಇಲ್ಲದಿದ್ದರೂ ಮೇಲಿನ ಗ್ರೇಡು ಒಮ್ಮೆಲೆ ಸಿಕ್ಕುವದು. ಮತ್ತು ಅದು ಕಾಯಂವೇ ಆಗುವದು. ವರಿಷ್ಠರು ನಿಮ್ಮ ಮೇಲೆ ಕೆಲಸದ ಹೆಚ್ಚಿನ ಭಾರವನ್ನು ವಹಿಸಿದರೂ ನಿಮ್ಮ ಭಾವೀ ಕಲ್ಯಾಣದ ಬಗ್ಗೆ ಶಿಫಾರಸಿನ ವರದ ಹಸ್ತವನ್ನು ಇಡುವರು. ಬದಲಿಯಾದರೆ ಕೆಲಸದ ದೃಷ್ಟಿಯಿಂದ ಬಹಳ ದಗದಗಿಯ ಆದರೆ ಇತರ ದೃಷ್ಟಿಯಿಂದ ಅತಿ ಉತ್ತಮ ಸ್ಥಳ ಸಿಕ್ಕುವದು. ಕೈಕೆಳಗಿನ ಜನರು ಮಾತ್ರ ನಿಮ್ಮ ವಿರುದ್ಧ ಗುಪ್ತವಾಗಿ ಚಟುವಟಿಕೆ ನಡೆಸುವರು. ಆದರೆ ಪರಿಣಾಮಮಾತ್ರ ಅವರಿಗೇ ಪ್ರತಿಕೂಲವಾಗುವದು. ವಿಶೇಷತಃ ದಿಶೆಂಬರ ೧೪ ರ ವರೆಗೆ

ತುಲಾ

ಒಟ್ಟಾರೆ ಈ ವರ್ಷ ಈ ರಾಶಿಯುವರಿಗೆ ಬಹುತರ ವಿಷಯಗಳಲ್ಲಿ ಕಷ್ಟಕ್ಕಿಂತ ಸುಖವೇ ಹೆಚ್ಚೆಂಬುದು ನಿಶ್ಚಿತ.

ಈ ರಾಶಿಯ ಜನರ ಆರೋಗ್ಯ ನಿರೋಗಿಯೆ ಉಳಿಯುವದು. ಮತ್ತು ಫೆಬ್ರುಅರಿ ೨೪ರ ನಂತರ ಅದು ಹೆಚ್ಚು ಸದೃಢವಾದದ್ದು ಕಂಡುಬರುವದು. ಆದರೂ ಜನೆವರಿ ೨೪ರಿಂದ ಮಾರ್ಚ ೩ ಇಲ್ಲವೆ ಸಪ್ಟಂಬರ ೨೯ರ ನಂತರ ಒಂದೆರಡು ಸಣ್ಣ ದೊಡ್ಡ ಅಪಘಾತವಾಗುವ ಸಂಭವ ಮಾತ್ರ ಇರುವದು. ಯಾವದೊಂದು ಭಾರವಾದ ಪದಾರ್ಥ ಮೈಮೇಲೆ ಬೀಳುವದರಿಂದ ಈ ಅಪಘಾತ ಸಂಭವಿಸುವದು. ಎಲ್ಲ ವಿಷಯಗಳಲ್ಲಿ ದೇಹಸುಖ ಮನಸ್ಸಿನಂತೆಯೇ ಸಿಕ್ಕುವದು. ಮನೆಯುವರೆಲ್ಲ ತಮ್ಮ ತಮ್ಮ ಉದ್ಯೋಗ ವ್ಯವಸಾಯಗಳಲ್ಲಿ ನಿರತರಾಗುವರು. ಆದರೆ ಎರಡನೆಯವರೊಡನೆ ಮಾತ್ರ ಸ್ವಲ್ಪ ತುಚ್ಛತೆಯಿಂದ ನಡೆದುಕೊಳ್ಳುವರು. ಆದರೆ ಫೆಬ್ರುಅರಿ ೨೪ರ ನಂತರ ಮನೆಯಲ್ಲಿಯ ನೋಕರ ಚಾಕರರಲ್ಲಿ ಕೆಲವರು ಮನೆ ಬಿಟ್ಟು ಹೋಗುವರು. ಆಪ್ತರಲ್ಲಿ ಕೆಲವರೊಡನೆ ಬದ್ಧದ್ವೇಷ ಬೆಳೆಯುವದು. ಆಸ್ತಿಯಲ್ಲಿ ಕೆಲಮಟ್ಟಿಗೆ ಹೆಚ್ಚಳವಾಗುವದು. ಆದರೆ ಕಾಯಂ ಉತ್ಪನ್ನದಲ್ಲಿ ಮಾತ್ರ ಬಹಳ ಹರಿಮುರಿಯಾಗಿ ಹಾನಿಯಾಗುವದು.

ಹೆಂಡತಿಯ ಆರೋಗ್ಯ ಲೋಕದೃಷ್ಟಿಯಿಂದ ನಿರೋಗಿ ಎನಿಸಿದರೂ ಪ್ರತ್ಯಕ್ಷವಾಗಿ ಅವಳಿಗೆ ಒಂದಿಲ್ಲೊಂದು ಬಗೆಯಿಂದ ಕ್ಲೇಶವಿದ್ದದ್ದೇ. ಹೀಗೆ ಅವಳಿಗಂತೂ ಭಾಸವಾಗುವದು. ವಿಶೇಷವಾಗಿ ಉಷ್ಣದಿಂದ ಅಲ್ಪ ಸ್ವಲ್ಪ

ಮತ್ತು ಅನಂತರ ಮಾರ್ಚ ೩ ರಿಂದ ಎಪ್ರಿಲ ೧೦, ಮೇ ೨೦ ರಿಂದ ಜೂನ ೨೯ ಮತ್ತು ಅಗಷ್ಟ್ ೧೨ ರಿಂದ ಸಪ್ಟೆಂಬರ್ ೨೯ ಈ ಅವಧಿ ಧಂದೆಯುವರ ಲಾಭಕ್ಕೆ ಉತ್ತಮವಿದೆ. ಅದರಂತೆ ದಿಶೆಂಬರ ೧೫ ರಿಂದ ಜನೆವರಿ ೧೪, ಫೆಬ್ರುಅರಿ ೧೨ ರಿಂದ ಮಾರ್ಚ ೧೪, ಎಪ್ರಿಲ ೧೩ ರಿಂದ ಜುಲೈ ೧೬, ಅಗಷ್ಟ ೧೭ ರಿಂದ ಸಪ್ಟಂಬರ ೧೭ ಮತ್ತು ಅಕ್ಟೋಬರ ೧೭ ರ ನಂತರದ ಅವಧಿಯು ನೋಕರರಿಗೆ ಹೆಚ್ಚು ಲಾಭದಾಯಕವಾಗಿರುವದು. ಈ ವರ್ಷ ಪ್ರವಾಸದ ಯೋಗ ಮೇಲಿಂದ ಮೇಲೆ ಬರುವದು. ಕೆಲ ಸಲ ಆಕಸ್ಮಿಕವಾಗಿಯೂ ಪ್ರವಾಸ ಯೋಗ ಲಭಿಸುವದು. ಅದರ ಉದ್ದೇಶವೂ ಸಾಧಿಸುವದು. ಮಿತ್ರಸುಖ ಅನುಕೂಲ. ಆದರೆ ಅವರಲ್ಲಿ ಕೆಲವರು ಹಿಂದಿನಿಂದ ನಿಮ್ಮನ್ನು ನಿಂದಿಸುವದು ಕಂಡು ಬರುವದು. ಸರಕಾರಿ ಕೆಲಸಗಳು ವ್ಯವಸ್ಥಿತವಾಗಿ ನಡೆಯುವಂತೆ ಖಾಸಗಿ ಕೆಲಸಗಳು ಅಷ್ಟೊಂದು ವ್ಯವಸ್ಥಿತವಾಗಿ ಸಾಗುವದಿಲ್ಲ. ವಾಹನಸುಖದಲ್ಲಿ ಆಯುತ್ತ ಸಮಯಕ್ಕೆ ಏನಾದರೊಂದು ಗೊಂದಲ ಏಳುವದು. ಎಷ್ಟೋ ಸಲ ಆ ರೀತಿ ಅನುಭವ ಬರುವದು. ಪ್ರತ್ಯಕ್ಷ ಭೆಟ್ಟಿಯ ಕೆಲಸಕ್ಕಿಂತ ಲೇಖನ ಕೆಲಸ ಹೆಚ್ಚು ಚೆನ್ನಾಗಿ ನಡೆದುದು ಕಂಡುಬರುವದು. ಕೆಲವೊಂದು ಹಣ ಇಲ್ಲವೆ ಆಸ್ತಿ ಸಂಗ್ರಹದಲ್ಲಿ ಬೀಳುವದು. ಧಾರ್ಮಿಕ ಒಂದೆರಡು ಕೃತ್ಯಗಳು ಇಲ್ಲವೆ ಮಂಗಲ ಕಾರ್ಯಗಳು ನಿಶ್ಚಿತವಾಗಿ ಘಟಸುವವು. ಮೊದಲಿಗಿಂತ ನಿದ್ರೆ ಬಹಳಷ್ಟು ಕಡಮೆಯಾದುದು ಕಂಡು ಬರುವದು.

ದಾವೆ ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ದಗದಗಿ ಮತ್ತು ವೆಚ್ಚ ಒಂದೂವರೆ ಪಟ್ಟು ಹೆಚ್ಚುವದು. ಆದರೆ ಹದಿನಾರರಲ್ಲಿ ಕನಿಷ್ಟ ಹತ್ತು ಹನ್ನೆರಡಾದರೂ ಯಶಸ್ವಿಯಾಗುವವು. ಫೆಬ್ರುಅರಿ ೨೪ ರ ನಂತರ ಶತ್ರುಗಳಲ್ಲಿ ಒಬ್ಬಿಬ್ಬರು ಅವರ ತಪ್ಪುಗಳಿಂದಲೆ ರಸಾತಳಕ್ಕೆ ಹೋದುದು ಕಂಡುಬರುವದು.

ಸ್ತ್ರೀಯರ ಪ್ರಸೂತಿ ಫೆಬ್ರುಅರಿ ೨೪ ಕ್ಕಿಂತ ಮೊದಲು ಆಗುವದಿದ್ದರೆ ಅವರು ಮೊದಲಿನಿಂದಲೆ ಡಾಕ್ಟರರ ಸಲಹೆಯಂತೆ ನಡೆಯಬೇಕು. ಅನಂತರ ಹಡೆಯುವವರು ಧೈರ್ಯದಿಂದ ಇರಬೇಕು. ಪುತ್ರರತ್ನ ಹುಟ್ಟುವ ಸಮಾಧಾನವನ್ನು ಪ್ರತೀಕ್ಷಿಸುತ್ತ ಇರಬೇಕು.

ವಿದ್ಯಾರ್ಥಿಗಳ ಪರೀಕ್ಷೆ ಫೆಬ್ರುಅರಿ ೨೪ ರ ನಂತರ ಆಗುವದಿದ್ದರೆ ಅವರಲ್ಲಿ ಪ್ರತಿಶತ ೮೦ ರಷ್ಟು ಜನ ಖಾತ್ರಿಯಿಂದ ಪಾಸಾಗುವರು. ಅವರಲ್ಲಿ ೪೦ ರಷ್ಟು ಜನ ವರ್ಗವನ್ನು ಪಡೆಯುವರು.

ಅಷ್ಟಗ್ರಹ ಯೋಗವು ಈ ರಾಶಿಯವರಿಗೆ ಚತುರ್ಥಸ್ಥಾನದಲ್ಲಿ ಆಗುವದರಿಂದ ಮಾತೃ-ಪಿತೃ ಕ್ಲೇಶ. ಅಣ್ಣತಮ್ಮಂದಿರಿಂದ ಗ್ರಾಮಕಂಟಕರಿಂದ ತೊಂದರೆ. ವಾಹನಪೀಡೆ. ಮನಸ್ಸು ಸುಸ್ಥಿತಿಯಲ್ಲಿ ಇಲ್ಲದಿರುವದು ಈ ಮೊದಲಾದ ಫಲಗಳನ್ನು ಕೊಡುವದು.

ವೃಶ್ಚಿಕ

ಈ ರಾಶಿಯವರಿಗೆ ಈ ವರ್ಷ ಅಷ್ಟೊಂದು ಭಾಗ್ಯೋದಯದ್ದು ಇಲ್ಲವೆ ಅತ್ಯಂತ ಲಾಭದ್ದು ಇರದೆ ಎಲ್ಲ ವಿಷಯಗಳಲ್ಲಿ ಅವಶ್ಯವಿದ್ದಷ್ಟು ಸುಖ ಮತ್ತು ಸಮಾಧಾನ ನಿಶ್ಚಿತವಾಗಿ ಸಿಕ್ಕುವವು.

ಈ ರಾಶಿಯ ಜನರ ಆರೋಗ್ಯ ನಿರೋಗಿಯಿದ್ದರೂ ಫೆಬ್ರುಅರಿ ೨೪ ರ ನಂತರ ಎರಡನೆಯವರಿಗಾದ ಕಾಯಿಲೆಯನ್ನು ನೋಡಿ ತಮಗೂ ಹಾಗೆಯೇ ಆಗಿದೆಯೆಂಬ ತಪ್ಪು ಭಾವನೆ ಮೇಲಿಂದ ಮೇಲೆ ಉಂಟಾಗುವದು. ಅದರಿಂದ ಮಾನಸಿಕ ತೊಂದರೆ ನಿಷ್ಕಾರಣ ಮಾಡಿಕೊಳ್ಳುವಿರಿ. ಆದರೆ ಮಾರ್ಚ ೩ ರಿಂದ ಎಪ್ರಿಲ ೧೦ ಮತ್ತು ಅಗಷ್ಟ ೧೨ ರಿಂದ ಸಪ್ಟಂಬರ ೨೯ ರ ವರೆಗೆ ಅನುಕ್ರಮವಾಗಿ ಹೃದಯವಿಕಾರದ ಮತ್ತು ಮೂಲವ್ಯಾಧಿಯ ಜನರು ಸ್ವಲ್ಪ ಪಥ್ಯದಿಂದಲೆ ಇರಬೇಕು. ಮತ್ತು ಸೌಮ್ಯ ಉಪಚಾರದಿಂದ ಪ್ರಕೃತಿಯನ್ನು ರಕ್ಷಿಸಿಕೊಳ್ಳಬೇಕು. ಉಳಿದ ವಿಷಯಗಳಲ್ಲಿ ದೇಹಸುಖ ಬಹಳ ಉತ್ತಮವು ದೊರೆವ ಯೋಗವಿದ್ದರೂ ನಾಲ್ಕನೆ ಗುರು ಇರುವಾಗ ಅಂದರೆ ಫೆಬ್ರುಅರಿ ೨೪ ರ ನಂತರದ ಅವಧಿಯಲ್ಲಿ ಅಣ್ಣತಮ್ಮಂದಿರು ಆಪ್ತರು ಮತ್ತು ಆಶ್ರಿತರೊಡನೆ ಮೇಲಿಂದ ಮೇಲೆ ತಿಕ್ಕಾಟವೆದ್ದು ಲೋಕನಿಂದೆ-ಸ್ತುತಿಗಳನ್ನು ಮೇಲಿಂದ ಮೇಲೆ ಎದುರಿಸಬೇಕಾಗುವದು.

ಹೆಂಡತಿಯ ಆರೋಗ್ಯಕ್ಕೂ ಈ ವರ್ಷ ಅದೇ ಹಾಡು. ಸುಳ್ಳು ಸುಳ್ಳೆ ಕಾಯಿಲೆಯಾಗಿದೆಂಬ ಭಾವನೆಯಾಗಿ ಬಳಲುವಳು. ವಸ್ತುತಃ ಅವಳು ನಿರೋಗಿಯೇ ಆಗಿರುವಳು. ಆದರೆ ಜೂನ ೨೯ ರಿಂದ ಅಗಷ್ಟ ೧೨ ರ ಮಧ್ಯಂತರ ಅವಧಿಯಲ್ಲಿ ಸಣ್ಣದೊಂದು ಅಪಘಾತದಿಂದ ತೊಂದರೆಯಾಗುವ ಸಂಭವವಿದೆ. ಉಭಯತರಲ್ಲಿ ಯಾವಾಗಲಾದರೂ ಭಿನ್ನಾಭಿಪ್ರಾಯವಾಗುವದು. ಇದರಿಂದ ಇಲ್ಲವೆ ಬೇರೆ ಅಲ್ಪಸ್ವಲ್ಪ ಕಾರಣಕ್ಕಾಗಿ ಒಂದೆರಡು ತಿಂಗಳು ಅವಳಿಂದ ದೂರ ಇರಬೇಕಾಗುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕೆಲವೊಮ್ಮೆ ಉತ್ತಮವಿದ್ದರೆ ಮತ್ತೆ ಕೆಲ ಸಲ ಅಷ್ಟೇ ನಿರುತ್ಸಾಹಕರವಾಗಿರುವದು. ಇನ್ನೂ ನಿಮ್ಮ ಮದುವೆಯೇ ಆಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಫೆಬ್ರುಅರಿ ೨೪ ರೊಳಗೆ ಸಾಧ್ಯವಾದರೆ ಆಗುವದು. ಅನಂತರ ಮಾತ್ರ ಅನೇಕರು ನಿರಾಶೆ ಹೊಂದಬೇಕಾಗುವದು. ಒಂದು ವೇಳೆ ಮದುವೆ ಒದಗಿ ಬಂದರೂ ಪ್ರತ್ಯಕ್ಷವಾಗಿ ಮಾಲೆ ಹಾಕುವ ದಿನ ಹಾಗೆಯೇ ಮುಂದೆ ಮುಂದೆ ಹೋಗುವದು.

ಅದರಂತೆಯೇ ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಅದಾದರೂ ಸಾಧ್ಯವಾಗುವದು ಕಠಿನವೇ. ಅನೇಕರ ಮದುವೆ ಗೊತ್ತಾಗಿಯೂ ಸುಳ್ಳೊಂದು ಸೊಟ್ಟೊಂದು ಕಾರಣದಿಂದ ಅದು ಮುರಿದುಹೋಗುವ ಸಂಭವವೂ ಇದೆ. ಒಂದು ವೇಳೆ ಕೂಡಿಬಂದರೆ ಸೊಸೆ ಇಲ್ಲವೆ ಅಳಿಯ ನೀವು ಎಣಿಸಿದ ಸ್ವಭಾವಕ್ಕಿಂತ ತೀರ ಬೇರೆ ಸ್ವಭಾವದವರಾಗಿರುವರೆಂದು ಬೇಗ ಕಂಡುಬರುವದು. ಮಕ್ಕಳ ಉತ್ಕರ್ಷಕ್ಕೆ ಮಾತ್ರ ಈ ವರ್ಷ ಬಹಳ ಅನುಕೂಲವಿರುವದು. ಆದರೂ ಅದಕ್ಕಾಗಿ ಒಬ್ಬಿಬ್ಬರು ದೂರ ದೇಶಕ್ಕೆ ಇಲ್ಲವೆ ಪರದೇಶಕ್ಕೆ ಹೋಗುವ ಪಾಳಿ ಬರುವದು. ಎಲ್ಲರಿಂದ ನಿಮಗೆ ಒಳ್ಳೆ ಸುಖ ದೊರೆಯುವದು. ಆದರೆ ಹತ್ತಿರದವರ ಆರೋಗ್ಯಕ್ಕೆ ಈ ವರ್ಷ ಬಹಳ ತೊಂದರೆ ಇದೆ.

ಧಂದೆ ಕೂಲಿಯವರಿಗೆ ಈ ವರ್ಷ ಬಹಳ ಉತ್ತಮವಾಗಿದ್ದು ನೋಕರರಿಗೆ ಫೆಬ್ರುಅರಿ ೨೪ರ ವರೆಗೆ ಮತ್ತು ಧಂದೆಯವರಿಗೆ ಅನಂತರದ ಕಾಲ ಬಹಳ ಯಶದ್ದು ಮತ್ತು ಲಾಭದ್ದಾಗಿರುವದು. ಅದರಲ್ಲಿಯೂ ನವಂಬರ ೨೬ರಿಂದ ಡಿಶೆಂಬರ ೧೫, ಜನೆವರಿ ೩ರಿಂದ ಮಾರ್ಚ ೧೦, ಎಪ್ರಿಲ ೨೯ರಿಂದ ಜುಲೈ ೩, ಜುಲೈ ೨೨ರಿಂದ ಅಗಷ್ಟ ೭ ಮತ್ತು ಅಗಷ್ಟ ೨೫ ರಿಂದ ಅನಂತರ ಕಾಲವೆಲ್ಲ ವಿಶೇಷ ಲಾಭದ್ದಾಗಿ ಪರಿಣಮಿಸುವದು. ಅದರಂತೆಯೇ ಅನೇಕರಿಗೆ ಜುಲೈ ೩ರಿಂದ ೨೨ರ ಅವಧಿಯಲ್ಲಿ ಗುಪ್ತ ಇಲ್ಲವೆ ಆಕಸ್ಮಾತ್ ಮತ್ತು ಅದೂ ಬಹಳ ಹಣದ ಇಲ್ಲವೆ ಅಷ್ಟು ಬೆಲೆ ಬಾಳುವ ವಸ್ತುವಿನ ಲಾಭವಾಗುವದು ನಿಶ್ಚಿತ. ಹೆಚ್ಚು ವೆಚ್ಚವಾಗಿ ಸಂಗ್ರಹ ಮಾತ್ರ ಅಷ್ಟೊಂದು ಆಗುವದಿಲ್ಲ. ತದ್ವಿರುದ್ಧ ಉದ್ರಿ ಕೈಗಡ ಇಲ್ಲವೆ ಸಾಲ ಮಾಡುವ ಸರತಿ ಬರುವದು. ಆದರೆ ಆಯಾ ಕೆಲಸಗಳಲ್ಲಿ ವ್ಯವಸ್ಥಿತ ರೀತಿಯಿಂದ ಮತ್ತು ಮನಸ್ಸಿಗೆ ಸಮಾಧಾನವೆನಿಸುವಂತೆ ಹಣ ವೆಚ್ಚವಾಗುವದು. ಮನೋರಂಜನದ ಪ್ರಸಂಗ ಹಲವು ಸಲ ಬರುವದು. ಅದರಂತೆಯೇ ನಿಮ್ಮ ಮಾತುಕತೆ ನಡತೆ ಎರಡನೆಯವರನ್ನು ಬಹಳಷ್ಟು ಸಂತೋಷಪಡಿಸುವದು. ಬದಲಿಯಾದರೆ ಅಪರಿಚಿತ ಜನರಿದ್ದಲ್ಲಿ ಮತ್ತು ಬಹಳ ಅನನುಕೂಲ ಸ್ಥಳಕ್ಕೆ ಆಗುವದು. ಅಲ್ಲಿ ಬಹಳಷ್ಟು ಶ್ರಮವನ್ನು ಮಾಡಬೇಕಾಗುವದು. ಆದರೂ ವರಿಷ್ಠರು ಇಲ್ಲವೆ ಆಶ್ರಯದಾತರು ಸಹಾನುಭೂತಿಯಿಂದ ನೋಡಿಕೊಳ್ಳುವರು. ಧಂದೆಮಾಡುವವರು ತಮ್ಮ ಧಂದೆಯ ಸ್ಥಳವನ್ನು ಸಂತೋಷದಿಂದಾಗಲಿ ಇಲ್ಲವೆ ಅಸಂತೋಷದಿಂದಾಗಲಿ ಬದಲಿಸಿ ಬೇರೆ ಸ್ಥಳಕ್ಕೆ ಹೋಗುವ ಸಂಭವ ಬಹಳಿದೆ. ಪ್ರತಿಷ್ಠೆಯೇನೋ ನೋಡಲಿಕ್ಕೆ ಹೆಚ್ಚಿದಂತೆ ತೋರಿದರೂ ನಿಜವಾಗಿ ಹಾಗಿರುವದಿಲ್ಲ.

ಮಿತ್ರಕಾರ್ಯಕ್ಕಾಗಿ ಮನಸ್ಸಿಲ್ಲದಿದ್ದರೂ ಕೆಲ ಕಾರ್ಯಗಳನ್ನು ಮಾಡಬೇಕಾಗುವದು. ಹಣವನ್ನು ವೆಚ್ಚಮಾಡಬೇಕಾಗುವದು. ದೂರದ ಪ್ರವಾಸ ಒಂದೆರಡು ಸಲ ಒದಗಿಬರುವದು ಮತ್ತು ಅಲ್ಲಿ ಉಳಿಯುವ ಅವಧಿಯೂ ಒಂದು ಒಂದೂವರೆಪಟ್ಟು ಹೆಚ್ಚುವದು. ಲೇಖನ ಕೆಲಸ ಪ್ರತ್ಯಕ್ಷ ಭೆಟ್ಟಿಯ ಕೆಲಸಗಳಿಗಿಂತ ಬಹಳ ಉತ್ತಮ.

ದಾವೆ ಫಿರ್ಯಾದಿ ಮತ್ತು ಇತರ ಸ್ಪರ್ಧೆಯ ಕೆಲಸಗಳಲ್ಲಿ ಉಭಯ ಪಕ್ಷದವರಿಗೂ ಯಶಾಪಯಶಸ್ಸಿನ ಪ್ರಮಾಣ ಅಷ್ಟಕ್ಕಷ್ಟೆ. ಅದರಲ್ಲಿಯೂ ಜನೆವರಿ ೨೪ ರಿಂದ ಮಾರ್ಚ ೩ ಮತ್ತು ಮೇ ೨೦ ರಿಂದ ಜೂನ ೨೯ ಹಾಗೂ ಸಪ್ಟಂಬರ ೨೯ ರಿಂದ ಮುಂದಿನ ಕಾಲ ಸ್ವತಃ ನಿಮಗೆ ವಿಶೇಷ ಯಶಪ್ರದವೆನಿಸುವದು.

ಈ ವರ್ಷ ಫೆಬ್ರುಅರಿ ೨೪ ಕ್ಕಿಂತ ಮೊದಲು ಹಡೆಯುವ ಸ್ತ್ರೀಯರಿಗೆ ಸ್ವಲ್ಪೂ ಕಷ್ಟವೆನಿಸುವದಿಲ್ಲ. ಆದರೆ ಹುಟ್ಟುವ ಮಕ್ಕಳು ಬಹುಶಃ ಹೆಣ್ಣು. ಆದರೆ ಅನಂತರ ಹಡೆಯುವ ಸ್ತ್ರೀಯರಿಗೆ ಹೆಚ್ಚು ಕಷ್ಟವೆನಿಸಿದರೂ ಬಹುಶಃ ಗಂಡು ಹುಟ್ಟಿದ ಸುಖ ಪ್ರಾಪ್ತವಾಗುವದು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಫೆಬ್ರುಅರಿ ೨೪ ಕ್ಕಿಂತ ಮೊದಲು ಮತ್ತು ಮಾರ್ಚ ೩೦ ರಿಂದ ಎಪ್ರಿಲ ೧೪, ಎಪ್ರಿಲ ೨೯ ರಿಂದ ಜುಲೈ ೩ ಮತ್ತು ಜುಲೈ ೨೨ ರಿಂದ ಅಗಸ್ಟ ೭ ಹಾಗು ಸಪ್ಟಂಬರದಿಂದ ಮುಂದಿನ ಕಾಲದಲ್ಲಿ ಇದ್ದರೆ ಅವರು ನಿದಾನ ಪಾಸಾಗುವಷ್ಟು ಗುಣ ಪಡೆದು ಯಶಸ್ವಿಯಾಗುವರು.

ಅಷ್ಟಗ್ರಹ ಈ ರಾಶಿಯವರಿಗೆ ಮೂರನೇ ಸ್ಥಾನದಲ್ಲಿ ಆಗುವದು. ಇದರಿಂದ ಅದು ನಿಮ್ಮ ಮತ್ತು ಹೆಂಡತಿಯ ಬಂಧುವರ್ಗದವರಿಗೆ ಸ್ವಲ್ಪ ಕ್ಲೇಶಕರ. ಆದರೆ ಸ್ವತಃ ನಿಮಗೆ ಒಳ್ಳೆ ಲಾಭಕರವಿದೆ. ಆಯಾ ಕೆಲಸಗಳಲ್ಲಿ ವಿಶೇಷ ಧಾಡಸೀ ಇಲ್ಲವೆ ಸಾಹಸವನ್ನು ಮಾಡಬೇಕಾಗುವದು. ಇಂಥ ಬಹುತರ ಕೆಲಸಗಳಲ್ಲಿ ಯಶಸ್ವಿಯಾಗುವಿರಿ.

ಧನು

ಒಟ್ಟಾರೆ ಈ ವರ್ಷ ಈ ರಾಶಿಯವರಿಗೆ ಸ್ವಲ್ಪ ಹೆಚ್ಚು ಕಡಮೆ ತೊಂದರೆಯದೇ ಇದೆ. ಹೇಗಾದರೂ ಮಾಡಿ ಮುಂದಿನ ವರ್ಷವನ್ನು ಮುಟ್ಟುವೆವು ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡು ಯಾವ ವಿಷಯದಲ್ಲಿಯೂ ಅತಿರೇಕವಾಗದಂತೆ ಮೊದಲಿನಿಂದಲೆ ನಡೆದುಕೊಳ್ಳಬೇಕು.

ಕಳೆದ ೫-೫॥ ವರ್ಷಗಳಿಂದ ಇದ್ದ ಸಾಡೇಸಾತಿಯು ಇನ್ನೂ ಎರಡೂವರೆ ವರ್ಷ ಉಳಿದದ್ದು ಈ ವರ್ಷವೂ ಅದು ಇರುವದು. ಅದರಲ್ಲಿಯೂ ಈ ವರ್ಷ ೮ ನೇ ರಾಹು ಇರುವನು. ಆದುದರಿಂದ ಈ ರಾಶಿಯ ಜನರು ವಿಶೇಷ ಪ್ರಕೃತಿಯನ್ನು ಜಪ್ಪಿಸಿಕೊಳ್ಳಬೇಕು. ವೈದ್ಯರಿಗೆ ಇಲ್ಲವೆ ಡಾಕ್ಟರರಿಗೆ ತಿಳಿಯದಂಥ ವಿಲಕ್ಷಣ ಕ್ಲೇಶವಾಗುವ ಸಂಭವವಿದೆ. ಯಾವದೊಂದು ಮಾತಿನ ಬಗ್ಗೆ ಅಂಜಿಕೆಯುಂಟಾಗುವದು. ಪೈಶಾಚಿಕ ಪೀಡೆ ಇಲ್ಲವೆ ಎರಡನೆಯವರು ಮಾಟ ಮುಂತಾದ್ದನ್ನು ಮಾಡುವದರಿಂದ ಅಥವಾ ಎತ್ತರ ಗಿಡದ ಮೇಲಿಂದ ಇಲ್ಲವೆ ಟಾಂಗಾ, ಮೋಟರ, ಸೈಕಲ್ ಇಲ್ಲವೆ ವಾಹನದ ಮೇಲಿಂದ ಬಿದ್ದು ಅಪಘಾತ ಹೊಂದುವದರಿಂದ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಕ್ಲೇಶವಾಗುವ ಸಂಭವವಿದೆ. ಅದರಲ್ಲಿಯೂ ನವಂಬರ ೨೯, ದಿಸೆಂಬರ ೨೩, ಎಪ್ರಿಲ ೨೨ ರಿಂದ ಮೇ ೧೬ ಮತ್ತು ಜೂನ ೧೧ ರಿಂದ ಜುಲೈ ೭ ಈ ಅವಧಿಯಲ್ಲಿ ಈ ಬಗೆಯ ಅಪಘಾತವಾಗುವ ಯೋಗ ಹೆಚ್ಚಿಗೆ ಇದೆ. ಅದರಂತೆಯೇ ವರ್ಷವಿಡೀ ಇರುವ ದ್ವಿತೀಯ ಕೇತುವಿನಿಂದ ಇತರ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಸಿಕ್ಕುವದು ಕೂಡ ಕಠಿನವಾಗುವದು. ಕುಟುಂಬದಲ್ಲಿಯ ಪ್ರತಿಯೊಬ್ಬರಿಗಾಗಿ ನೀವು ಬೇಕಾದಷ್ಟು ಕಷ್ಟವನ್ನು ಸಹಿಸಿದರೂ ಅದು ಅವರ ಲಕ್ಷ್ಯಕ್ಕೆ ಬಾರದೆ ಎಲ್ಲರೂ ನೀವು ಅವರಿಗಾಗಿ ಏನೂ ಮಾಡಿಲ್ಲೆಂದು ಆರೋಪಿಸುವರು. ಹೆಂಡತಿಯನ್ನು ಬಿಟ್ಟು ಉಳಿದವರಾರೂ ನಿಮ್ಮೊಡನೆ ಒಳ್ಳೆ ರೀತಿಯಿಂದ ನಡೆದುಕೊಳ್ಳುವದಿಲ್ಲ. ಆದುದರಿಂದ ಈ ವರ್ಷ ಯಾರಾದರೂ ಸಂತುಷ್ಟರಾಗಬಹುದು ಎಂಬ ಆಶೆಯಿಂದ ಶಾರೀರಿಕ ಮಾನಸಿಕ ಇಲ್ಲವೆ ಆರ್ಥಿಕ ಯಾವದೇ ಬಗೆಯ ಶ್ರಮವಹಿಸದೆ ಇರುವದೇ ಹಿತಕರವೆನಿಸುವದು.

ಆದರೆ ಸ್ತ್ರೀಸುಖಕ್ಕೆ ಮತ್ತು ಬಹುತರವಾಗಿ ಇಡೀ ವರ್ಷ ಅವಳ ಆರೋಗ್ಯಕ್ಕೆ ಅನುಕೂಲವಿದೆ; ಅವಳ ವಿಚಾರದಂತೆಯೇ ನಡೆಯುವದು ಬಹಳ ಯಶಸ್ವಿಯೆನಿಸುವದು. ಆದರೂ ಅವಳ ಆರೋಗ್ಯ ದಿಶೆಂಬರ ೧೫ ರ ವರೆಗೆ ಮತ್ತು ಅನಂತರ ಜನೆವರಿ ೨೪ ರಿಂದ ಮಾರ್ಚ ೩ ಮತ್ತು ಅಗಸ್ಟ ೧೨ ರಿಂದ ಸಪ್ಟಂಬರ ೨೯ ಈ ಕಾಲ ಸ್ವಲ್ಪ ತಕರಾರಿನದು ಎನಿಸುವದು. ಅದರಂತೆ ಈ ರಾಶಿಯ ಯಾವದೇ ಸ್ತ್ರೀ ಇಲ್ಲವೆ ಪುರುಷರ ವಿವಾಹವಿನ್ನೂ ಆಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವ ವಿಚಾರವಿದ್ದರೆ ಅದು ಫೆಬ್ರುಅರಿ ೨೪ ರ ನಂತರ ಸಾಧಿಸುವದು. ಆದರೆ ಮದುವೆ ಗೊತ್ತಾಗುವಾಗ ಯಾತಾಯಾತ ಬಹಳ. ಎರಡೂ ಪಕ್ಷಗಳಲ್ಲಿಯ ಜನರು ಬಹಳ ಖಂಭೀರರು ಮತ್ತು ಸತ್ಯವಚನಿಗಳಾಗಿದ್ದರೂ ಕೆಲ ಅನಪೇಕ್ಷಿತ ಅಡಚಣಿಗಳು ಮಧ್ಯದಲ್ಲಿಯೇ ಬರುವದರಿಂದ ಉಭಯ ಪಕ್ಷಗಳಲ್ಲಿಯೂ ವಿರಸವುಂಟಾಗುವದು. ಆದರೆ ಪತಿ ಇಲ್ಲವೆ ಪತ್ನಿ ಪರಸ್ಪರರಿಗೆ ಪೂರ್ಣ ಅನುರೂಪ ಸಿಕ್ಕುವರು. ಮತ್ತು ಸಾಡೇಸಾತಿಯ ನಂತರ ಉಭಯತರ ಸುದೈವದಿಂದ ಸಂಸಾರ ಬಹಳ ಸುಖದಿಂದ ಮತ್ತು ಥಾಟನಿಂದ ಸಾಗುವದು.

ಅದರಂತೆಯೇ ನಿಮ್ಮ ಮಕ್ಕಳ ಮದುವೆ ಈ ವರ್ಷ ಮಾಡುವದಿದ್ದರೆ ಅವರಿಗೆ ಇಡೀ ವರ್ಷ ಅನುಕೂಲವೇ ಇದೆ. ವಿಶೇಷವಾಗಿ ದಿಸೆಂಬರ ೧೫ ರಿಂದ ಜನೆವರಿ ೨೪, ಮಾರ್ಚ ೩ ರಿಂದ ಎಪ್ರಿಲ ೧೦ ಮತ್ತು ಮೇ ೨೦ ರಿಂದ ಜೂನ ೨೯ ಈ ಮಧ್ಯಂತರ ಅವಧಿಯಲ್ಲಿ ಅಲ್ಪಾಯಾಸದಿಂದ ಕೂಡಿಬರುವದು ಮತ್ತು ಗೊತ್ತುಪಡಿಸಿದ ಸಮಯಕ್ಕೆ ವ್ಯವಸ್ಥಿತವಾಗಿ ಆಗುವದು. ಆದರೆ ಅದಕ್ಕಾಗಿ ಆಗುವ ವೆಚ್ಚದ ಪ್ರಮಾಣ ಮಾತ್ರ ಅಂದಾಜಿಗಿಂತ ಎರಡು ಎರಡೂವರಿ ಮಡಿ ಹೆಚ್ಚುವದು. ಸೊಸೆ ಇಲ್ಲವೆ ಅಳಿಯ, ನಿಮ್ಮ ಮಗ ಇಲ್ಲವೆ ಮಗಳಿಗಿಂತ ಹೆಚ್ಚು ಜಾಣರು ಮತ್ತು ರೂಪದಿಂದ ಮೇಲ್ಗೈಯವರಿರುವರು. ಮಕ್ಕಳೆಲ್ಲರ ಉತ್ಕರ್ಷಕ್ಕೆ ಈ ವರ್ಷ ಮಾತ್ರ ಬಹಳ ಮಂದಗಾಮಿಯಾಗಿದ್ದರೂ ಪ್ರಗತಿಯಲ್ಲಿ ಮಾತ್ರ ಕೊರತೆ ಬೀಳುವದಿಲ್ಲ. ಆದರೆ ಈ ವರ್ಷ ಕೆಲ ವಿಷಯಗಳಲ್ಲಿಯಾದರೂ ನಿಮ್ಮದೂ ಅವರದೂ ಕೆಡುವ ಯೋಗವೂ ಇದೆ.

ಧಂದೆ ಕೂಲಿಯವರಿಗೆ ಈ ವರ್ಷ ಮೂಲತಃ ಅಷ್ಟಕ್ಕಷ್ಟೆ. ಆದರೂ ಧಂದೆಯವರು ದಿವಾಳಿ ತೆಗೆವ ಮತ್ತು ನೋಕರರು ಡಿಸಮಿಸ್ ಇಲ್ಲವೆ ಸಸ್ಪೆಂಡ ಆಗುವ ಅಂಜಿಕೆ ಸ್ವಲ್ಪೂ ಇರುವದಿಲ್ಲ. ಆದರೆ ಸ್ವತಂತ್ರ ಧಂದೆಯವರಿಗೆ ಫೆಬ್ರುಅರಿ ೨೪ ರ ವರೆಗೆ ಮತ್ತು ನೋಕರರಿಗೆ ಅನಂತರದ ಕಾಲ ಬಹಳ ಜಿಕೇರಿಯದು. ಎಷ್ಟೇ ಸರಳ ರೀತಿಯಿಂದ ಮತ್ತು ಸತ್ಯವಾಗಿ ವರ್ತಿಸಿದರೂ ಗಿರಾಕಿಗಳು, ಆಶ್ರಯದಾತರು ಇಲ್ಲವೆ ವರಿಷ್ಠರು ಮೊದಲಾದ ಸಂಬಂಧಿಕರು ಅಸಂತುಷ್ಟರೇ ಇರುವರು. ಧಂದೆಯವರಿಗೆ ತಮ್ಮ ಪತ್ತು ಮತ್ತು ನೋಕರರಿಗೆ ತಮ್ಮ ಪ್ರತಿಷ್ಠೆಯನ್ನು ಕಾಯಂ ಉಳಿಸಿಕೊಳ್ಳುವದಕ್ಕಾಗಿ ಸಂತೋಷದಿಂದಾಗಲಿ, ಒತ್ತಾಯದಿಂದಾಗಲಿ ಶಕ್ತಿಮೀರಿ ವೆಚ್ಚ ಮಾಡಬೇಕಾದ ಪ್ರಸಂಗ ಬರುವದು. ಧಂದೆಯವರಿಗೆ ನೆರೆಯವರಿಂದ ಸತ್ಯಾಸತ್ಯ ಕಾರಣಕ್ಕಾಗಿ ಮೇಲಿಂದ ಮೇಲೆ ತೊಂದರೆ. ಆದರೆ ನೋಕರರಿಗೆ ಕೈಕೆಳಗಿನವರು ಕಾಲ ಕಾಲಕ್ಕೆ ನಿಮ್ಮನ್ನು ವಿಸಮ್ರಗೊಳಿಸುವರು. ಅದರಲ್ಲಿಯೂ ದಿಶೆಂಬರ ೧೫ ರ ವರೆಗೆ ಮತ್ತು ಅನಂತರ ಎಪ್ರೀಲ ೧೦ ರಿಂದ ಮೇ ೨೦ ಮತ್ತು ಸಪ್ಟಂಬರ ೨೪ ರ ವರೆಗೆ ಈ ಬಗೆಯಾಗಿದ್ದು ಅನಂತರದಲ್ಲಿ ಹೆಚ್ಚು ಯಾತಾಯಾತವೆನಿಸುವದು. ಸಂಗ್ರಹವನ್ನು ಬೆಳಿಸಿಕೊಳ್ಳುವ ಅವಕಾಶವೇ ಬರುವದಿಲ್ಲ. ಆದರೆ ಅನೇಕರು ಹೆಚ್ಚು ಸಂಗ್ರಹ

ಮಾಡಬೇಕೆಂಬ ದುರ್ಬುದ್ಧಿಯಿಂದ ಯಾವ ದೊಂದು ಹೊಸ ಧಂದೆಯಲ್ಲಿ ಹಣವನ್ನು ಹಾಕುವರು. ಮತ್ತು ಅದನ್ನು ಪೂರ್ಣವಾಗಿ ಕಳೆದುಕೊಳ್ಳುವರು. ಆದುದರಿಂದ ಈ ವರ್ಷ ದೇವರ ದಯೆಯಿಂದ ಸಿಕ್ಕಷ್ಟರಲ್ಲಿಯೇ ಸಂತೋಷ ಹೊಂದಿ ಜೀವನ ಸಾಗಿಸುವದು ಒಳಿತು. ಆದರೆ ಫೆಬ್ರುಅರಿ ೨೪ ರ ನಂತರ ಭಾವೀ ಸೂಚಕವಾದ ಕೆಲ ಘಟನೆಗಳು ಮಂದಗತಿಯಿಂದಲಾದರೂ ನಿಶ್ಚಯವಾಗಿ ಸಂಭವಿಸಹತ್ತುವವು. ಮತ್ತು ಈ ಸಮಯ ದಲ್ಲಿ ಯಾತ್ರೆಯೂ ಘಟಿಸುವ ಯೋಗವಿದೆ. ಇಲ್ಲವೆ ಕೀರ್ತಿಪದ, ಪರೋಪಕಾರದ ಇಲ್ಲವೆ ಧಾರ್ಮಿಕ ಕೃತ್ಯಗಳನ್ನು ನೀವು ಮಾಡುವಿರಿ. ಮೊದಲು ಸಾಲ ಇದ್ದವರಿಗೆ ಅವರಿಗೆ ಸಾವ ಕಾರರ ಒತ್ತಾಯ ಬಹಳಷ್ಟು ಆಗುವದು. ಆದರಲ್ಲಿಯೂ ನಿಮ್ಮಕ್ಕಿಂತ ಹೆಚ್ಚು ಧನ ಕೊರತೆಯಿದ್ದವರಿಂದ ತೊಂದರೆ ಹೆಚ್ಚು. ಮಿತ್ರಸುಖ ಚೆನ್ನಾಗಿ ದೊರೆತರೂ ಅವ ರಲ್ಲಿಯ ಕೆಲವರು ಉಪೇಕ್ಷಿಸುವದುಂಟು.

ದಾವೆ, ಫಿರ್ಯಾಧಿ ಇಲ್ಲವೆ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಸುಮಾರಾಗಿ ಒಂದುಮೂರಾಂಶ ನಿಮಗೆ ಅನುಕೂಲ. ಉಳಿದ, ಎರಡು ಮೂರಾಂಶ ಪ್ರತಿಪಕ್ಷಿಗಳಿಗೆ ಅನುಕೂಲ. ಆದಷ್ಟು ಒಡಂಬಡಿಕೆಯ ಧೋರಣವನ್ನು ಸ್ವೀಕರಿಸಿದರೆ ಅದಾದರೂ ಬಹಳಷ್ಟು ಯಶ ಸ್ವಿಯಾಗುವ ಸಂಭವವಿದೆ.

ಫೆಬ್ರುಅರಿ ೨೪ ರ ನಂತರ ಹಡೆಯುವ ಸ್ತ್ರೀ ಯರಿಗೆ ಸ್ವಲ್ಪೂ ಕಷ್ಟವಾಗದೆ ಬಹುಶಃ ಪುತ್ರ ಪ್ರಾಪ್ತಿಯೇ ಆಗುವದು.

ಫೆಬ್ರುಅರಿ ೨೪ ಕ್ಕಿಂತ ಮೊದಲು ಪರೀಕ್ಷೆ ಯಿದ್ದ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಯಶ ಸ್ವಿಯಾಗುವರೆಂಬುದು ಸಂಶಯಾಸ್ಪದವೇ. ಅನಂತರ ಪರೀಕ್ಷೆ ಕಟ್ಟುವವರಲ್ಲಿ ಬಹಳಷ್ಟು ಜನ ಖಾತ್ರಿಯಿಂದ ಪಾಸಾಗುವರು.

ಅಷ್ಟಗ್ರಹಯೋಗವು ನಿಮಗೆ ದ್ವಿತೀಯ ಸ್ಥಾನದಲ್ಲಾಗುವದರಿಂದ ವಿಲಕ್ಷಣ ಗೃಹಕಲಹ ವುಂಟು ಮಾಡುವದು, ಅವಿಭಕ್ತ ಕುಟುಂಬ ವಿಭಕ್ತವಾಗುವ ಪ್ರಸಂಗಬರುವದು. ಸಂಗ್ರಹ ಶನಿ ನೇತ್ರ ಪೀಡೆ ಮತ್ತು ಮಾತಾಡಿದು ನಿಷ್ಕಾರಣವಾಗಿ ವಿಪರ್ಯಾಸವಾಗುವಿಕೆ ಮೊದ ಲಾದ್ದು ಸಂಭವಿಸುವದು. ಈ ಅನಿಷ್ಟ ಫಲ ಪರಿಹಾರಾರ್ಥವಾಗಿ ಸರ್ವಾರಿಷ್ಟ ಶಾಂತಿಯನ್ನು ಮಾಡಬೇಕು. ಅಲ್ಲದೆ ರಾಹುವಿಗಾಗಿ ೧೮ ಸಾವಿರ ಜಪ ಮಾಡಬೇಕು.

ಮಕರ

ಒಟ್ಟಾರೆ ಈ ರಾಶಿಯವರಿಗೆ ಈ ವರ್ಷ ಶಾರೀರಿಕ ಮಾನಸಿಕ ದೃಷ್ಟಿಯಿಂದ ಸ್ವಲ್ಪ ತೊಂದರೆಯದಿದ್ದರೂ ಔದ್ಯೋಗಿಕ ಮತ್ತು ಲಾಭದ ವಿಷಯಗಳಲ್ಲಿ ಮಾತ್ರ ಬಹಳ ಅನು ಕೂಲವಿರುವದೆಂಬುದು ನಿಶ್ಚಿತ.

ಈ ರಾಶಿಯವರಿಗೆ ಸಾಡೇಸಾತಿಯು ಇನ್ನು ಬಹಳ ದಿನ ಅಂದರೆ ಸುಮಾರು ಐದು ವರ್ಷ ಇರುವದು. ಈಗ ನಡುವಿನ ಎರಡೂವರೆ ವರ್ಷದ ಸಾಡೇಸಾತಿಯನ್ನು ಅನುಭೋಗಿ ಸುತಿರುವಿರಿ. ಆದರೆ ಸಾಡೇಸಾತಿಯ ಶನಿಯು ಈ ರಾಶಿಯ ಸ್ವಾಮಿಯೇ ಇದ್ದುದ ರಿಂದ ಮೊದಲಿನ ೨॥ ವರುಷಗಳಷ್ಟು ಈ ಅವಧಿಯು ವಿಶೇಷ ಕಷ್ಟದ್ದೆನಿಸುವದಿಲ್ಲ. ಅಲ್ಪ ಸ್ವಲ್ಪ ಕಷ್ಟವಾದರೂ ಅದರ ಪರಿಣಾಮ ಅಷ್ಟೊಂದು ಹಾನಿಕಾರಕವಾಗುವದಿಲ್ಲ. ಕೊನೆಗೆ ಆಯಾ ವಿಷಯಗಳಲ್ಲಿ ಯಶಸ್ಸು ಸಿಕ್ಕುವದು ಇದು ನಿಶ್ಚಿತ. ಈ ವರ್ಷದ ಮಟ್ಟಿಗೆ ವಿಚಾರಿಸಿದ್ದಾದರೆ ಈ ರಾಶಿಯವರಿಗೆ ಶನಿಯ ಜೊತೆ ಶುಭ ಗ್ರಹ ಗುರು ಮತ್ತು ಪಾಪಗ್ರಹ ರಾಹು ಇರುವರು. ಗುರು ಫೆಬ್ರು ಅರಿ ೨೪ ರಂದು ಈ ರಾಶಿಯಿಂದ ಕುಂಭ ರಾಶಿಗೆ ಹೋಗುವನು. ಅರ್ಥಾತ ಅನಂತರ ಶನಿ ಮತ್ತು ರಾಹು ಈ ಎರಡು ಪಾಪಗ್ರಹ ಗಳೇ ಈ ರಾಶಿಯಲ್ಲಿ ಉಳಿಯುವವು. ಆದುದ ರಿಂದ ಅಂದಿನಿಂದ ಈ ರಾಶಿಯವರ ಆರೋಗ್ಯ ಅಷ್ಟೊಂದು ಚೆನ್ನಾಗಿ ಉಳಿಯುವದಿಲ್ಲ. ದಿನ-ವೂ ಏನಾದರೊಂದು ತಕರಾರು ಇದ್ದದ್ದೆ. ವಾತ ಪಿತ್ತದ ವಿಕಾರ ಹೆಚ್ಚಿಗೆ ಎನಿಸುವದು. ಆದರೆ ಹಾಸಿಗೆ ಹಿಡಿದು ಬೀಳುವಷ್ಟು ಯಾವ ಕ್ಲೇಶ ವಾಗುವದಿಲ್ಲ ಇದು ನಿಶ್ಚಿತ. ಅದರಲ್ಲಿಯೂ ಫೆಬ್ರುಅರಿ ೨೪ ರಿಂದ ಮೇ ೨೦ ಮತ್ತು ಜುಲ್ಯೆ ೧೬ ರಿಂದ ಸಪ್ಟಂಬರ ೧೭ ಈ ಅವಧಿಯಲ್ಲಿ ಇದು ಕಂಡುಬರುವದು. ಉಳಿದ ವಿಷಯ ಗಳಲ್ಲಿ ದೇಹಸುಖಕ್ಕೆ ಈ ವರ್ಷ ಬಹಳ ಉತ್ತಮ. ಆ.ಬಗೆಯ ಅನುಭವ ಫೆಬ್ರುಅರಿ ೨೪ರಿಂದ ಬರಹತ್ತುವದು. ಕುಟುಂಬದಲ್ಲಿಯ ಪ್ರತಿಯೊಬ್ಬರು ತಮ್ಮತಮ್ಮಷ್ಟಕ್ಕೆ ಉತ್ಕರ್ಷ ಹೊಂದುವರು. ಮತ್ತು ತಮ್ಮ ಮತಾನುಸಾರ ನಡೆಯುವರು. ಕೌಟುಂಬಿಕ ಉತ್ಕರ್ಷದ ಕೆಲ ವಿಷಯಗಳು ಮೊದಲು ಮನಸ್ಸಿನಲ್ಲಿಲ್ಲ ದಿದ್ದರೂ ಒಮ್ಮೆಲೆ ಅನುಕೂಲವಾಗಿ ಪರಿಣ ಮಿಸಿ ಒಟ್ಟಾರೆ ಗೃಹಸೌಖ್ಯ ಸಮಾಧಾನಕಾರಕ ವಾಗಿ ಪರಿಣಮಿಸುವದು.

ಹೆಂಡತಿಯ ಆರೋಗ್ಯಕ್ಕೆ ಈ ವರ್ಷ ಅಷ್ಟೊಂದು ಅನುಕೂಲವಿಲ್ಲದಿದ್ದರೂ ನಿತ್ಯವೂ ಚಿಲ್ಲರೆ ಕಷ್ಟಗಳು ಬರುವವು. ತಲೆತಿರುಗು ವದು ಚಕ್ಕರಬರುವ ಸಂಭವ ಹೆಚ್ಚು. ಅದ ರಂತೆಯೇ ಎಷ್ಟೋ ಜನರ ಮೈಯಲ್ಲಿ ದೇವರು ಬರುವದು ದೆವ್ವಬರುವದು ಈ ಅನುಭವವೂ ಆಗುವದು. ಉಭಯತರ ಪ್ರೇಮವುಳಿದು ಬಹುತರ ವಿಷಯಗಳಲ್ಲಿ ಐಕಮತ್ಯ ಉಳಿ ಯುವದು. ಆದರೆ ಇನ್ನು ಯಾರ ವಿವಾಹ ವಾಗಿಲ್ಲವೋ ಯಾರದು ಈ ವರ್ಷ ಆಗತಕ್ಕ ದ್ದಿದೆಯೊ ಅವರದು ಈಸಲ ನಿಶ್ಚಯವಾಗಿ ಮದುವೆಯಾಗುವದು. ಅದರಲ್ಲಿಯೂ ಫೆಬ್ರು ಅರಿ ೨೪ಕ್ಕಿಂತ ಮೊದಲು ಅಲ್ಪಾಯಾಸದಿಂದ ಕೂಡುವದು. ಆದರೂ ಯಾವಾಗ ಮದುವೆ ಯಾದರೂ ವ್ಯವಸ್ಥಿತ ರೀತಿಯಿಂದಾಗುವದು. ಮತ್ತು ಪತಿ ಇಲ್ಲವೆ ಪತ್ನಿ ಪೂರ್ಣ ಅನುರೂಪ ಇರುವರು.

ಅದರಂತೆಯೆ ನಿಮ್ಮ ಮಕ್ಕಳ ಮದುವೆ ಈ ಸಲ ಮಾಡುವದಿದ್ದರೆ ಅದಕ್ಕೂ ಉತ್ತಮ ಚಾಶಿಂಗಬಲವಿದೆ. ಆದರೆ ಫೆಬ್ರುಅರಿ ೨೪ ರ ನಂತರ ಅದು ಸಹಜವಾಗಿ ಕೂಡುವದು ಮತ್ತು ಸೊಸೆ ಇಲ್ಲವೆ ಅಳಿಯ ಮನಸ್ಸಿಗೆ ಒಪ್ಪುವಂಥವರಿರುವರು ರೂಪಗುಣಗಳಿಂದ ಯುಕ್ತರಾಗಿರುವರು. ಅದರಂತೆಯೆ ಮಕ್ಕಳ ಉತ್ಕರ್ಷಕ್ಕೆ ಈ ವರ್ಷ ಚೆನ್ನಾಗಿದೆ. ಫೆಬ್ರು ಅರಿ ೨೪ ರ ನಂತರವೆ ಹೆಚ್ಚು ಅನುಕೂಲವಿದೆ. ಅವರಲ್ಲಿ ಒಬ್ಬನಂತೂ ಬಹಳ ಉತ್ಕರ್ಷ ಹೊಂದುವನು.

ಧಂದೆ ಇಲ್ಲವೆ ನೋಕರಿಯ ವಿಷಯದಲ್ಲಿ ಸಾಡೇಸಾತಿಯಿದ್ದರೂ ಈ ವರ್ಷ ಬಹಳ ಪ್ರಗ ತಿಯದಿದೆ. ಇದು ನಿಶ್ಚಿತ. ಪ್ರತಿಯೊಬ್ಬನಿಗೆ ಅಂದಾಜಿಗಿಂತ ಹೆಚ್ಚು ದ್ರವ್ಯ ಲಾಭವಾಗು ವದು ಮತ್ತು ಅದರಲ್ಲಿ ಬಹಳಷ್ಟು ಕೂಡಿ ಹಾಕಲೂ ಬರುವಂತಿದೆ. ವೆಚ್ಚ ಕೂಡ ಅಂದಾ ಜಿನಲ್ಲಿಯೇ ಉಳಿಯುವದು. ಆಯಾ ವಿಷಯ ಗಳು ಮನಸ್ಸಿನಂತೆಯೇ ಪೂರ್ಣಗೊಳ್ಳುವವು. ಧಂದೆಯವರಿಗೆ ಡಿಸೆಂಬರ ೧೫ ರ ವರೆಗಿನ ಅವಧಿ ಮತ್ತು ಅನಂತರ ಜನೆವರಿ ೨೪ ರಿಂದ ಮಾರ್ಚ ೩, ಮೇ ೨೦ ರಿಂದ ಅಗಷ್ಟ ೧೨, ಸಪ್ಟಂಬರ ೨೯ ರಿಂದ ಮುಂದಿನ ಕಾಲವೆಲ್ಲ ಬಹಳ ಲಾಭದ್ದಾಗಿ ಪರಿಣಮಿಸುವದು. ಆದರೆ ನವಕರರಿಗೆ ಡಿಸೆಂಬರ ೩ ವರೆಗಿನ ಮತ್ತು ಅನಂತರ ಫೆಬ್ರುವರಿ ೯ ರಿಂದ ಮಾರ್ಚ ೫,. ಮಾರ್ಚ ೨೯ ರಿಂದ ಎಪ್ರಿಲ ೨೨, ಮೇ ೧೬ ರಿಂದ ಜುಲ್ಯೆ ೭ ಮತ್ತು ಅಗಸ್ಟ ೩೧ ರಿಂದ ಮುಂದಿನ ಎಲ್ಲ ಕಾಲ ಬಹಳ ಲಾಭದ್ದೆನಿಸು ವದು ಕೆಲ ಧಂದೆಯವರಿಗೆ ಒಳ್ಳೆ ಲಾಭದ ಎರ ಡನೇ ಉದ್ಯೋಗವು ಸಿಕ್ಕುವ ಸಂಭವವಿದೆ. ನೋಕರರಿಗೂ ತಮ್ಮನೋಕರಿಯನ್ನು ಸಂಭಾ ಳಿಸಿಕೊಂಡು ಎರಡನೆಯದೊಂದು ಲಾಭದ ಚಾಬು ದೊರೆಯುವದು. ಪತ್ತು ಮತ್ತು ಪ್ರತಿಷ್ಠೆ ಹೆಚ್ಚಿ, ಮಿತ್ರಸುಖ ಉತ್ತಮ ದೊರೆ ಯುವದು. ಕೆಲವರು ನಿಮ್ಮ ಕೆಲಸವನ್ನು ಪುರಸ್ಕರಿಸುವರು. ಮಿತ್ರರ ಮನಸ್ಸು ನಿಮ್ಮ ಬಗೆಗೆ ಎಷ್ಟೊಂದು ಪ್ರೀತಿಯದು ಮತ್ತು ನಿರ್ಮಲವಾಗಿರುವದೊ ಅಷ್ಟು ನಿಮ್ಮ ಮನಸ್ಸು ಮಾತ್ರ ಅವರ ಬಗೆಗೆ ಅಷ್ಟೊಂದು ಪರಿಶುದ್ಧ ವಾಗಿರುವದಿಲ್ಲ. ಬದಲಿಯಾದರೆ ಕೆಲಸದ ದೃಷ್ಟಿ ಯಿಂದ ಸೋಯಿಯ ಆದರೆ ಜೀವನದ ದೃಷ್ಟಿ ಯಿಂದ ಅನನುಕೂಲ ಇಂಥ ಸ್ಥಳಕ್ಕೆ ಬದಲಿ ಯಾಗುವ ಸಂಭವವಿರುವದು. ಗ್ರೇಡ ಸಿಗುವ ಅವಕಾಶವಿದ್ದರೆ ಅದು ನಿಶ್ಚಯವಾಗಿ

ಸಿಕ್ಕುವದು. ದೂರದ ಪ್ರವಾಸ ಐದಾರು ಸಲ ಒದಗುವದು ಮತ್ತು ಫೆಬ್ರುಅರಿ ೨೪ ಕ್ಕಿಂತ ಮೊದಲು ಯಾವದೊಂದು ಯಾತ್ರೆ ಇಲ್ಲವೆ ವಿಶಿಷ್ಟ ಧಾರ್ಮಿಕ ಕಾರ್ಯ ನಡೆವುದು ಲೇಖನ ಕೆಲಸಗಳಿಗಿಂತ ಭೆಟ್ಟಿ ಹೆಚ್ಚು ಫಲದ್ರೂಪವಾಗುವದು.

ವರ್ಷಾರಂಭದಿಂದ ದಿಸೆಂಬರ ೧೫ರ ವರೆಗೆ ಅನಂತರ ಮಾರ್ಚ ೩ರಿಂದ ಎಪ್ರಿಲ ೧೦ ಮತ್ತು ಜೂನ ೨೯ರಿಂದ ಅಗಸ್ಟ ೧೨ ಈ ಅವಧಿಯಲ್ಲಿ ಯಾವ ಸ್ತ್ರೀಯರು ಹಡೆಯುವರೊ ಅವರಿಗೆ ಸ್ವಲ್ಪ ಕಷ ವೆನಿಸುವದು. ಮತ್ತು ಫೆಬ್ರುಅರಿ ೨೪ರ ನಂತರ ಹಡೆದವರಿಗೆ ಬಹುಶಃ ಗಂಡು ಹುಟ್ಟುವದು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ದಿಸೆಂಬರ. ೨೩ ರಿಂದ ಜನೆವರಿ ೧೫ ಮಾರ್ಚ ೨೯ ರಿಂದ ಎಪ್ರಿಲ ೨೨ ಮತ್ತು ಅಗಸ್ಟ ೨ ರಿಂದ ಅಗಸ್ಟ ೩೧ ಈ ಅವಧಿಯಲ್ಲಿ ಆಗುವದೋ ಅವರ ಯಶಸ್ಸಿನ ಬಗ್ಗೆ ಬಹಳ ಸಂಶಯುವಿದ್ದರೂ ಉಳಿದ ಅವಧಿಯಲ್ಲಿ ಪರೀಕ್ಷೆ ಕಟ್ಟಿದವರು ಮಾತ್ರ ನಿಶ್ಚಯದಿಂದ ಪಾಸಾಗುವರು. ಇಷ್ಟೇ ಅಲ್ಲ ಫೆಬ್ರುಅರಿ ೯ ರಿಂದ ಮಾರ್ಚ ೨೯ ಮತ್ತು ಎಪ್ರಿಲ ೨೨ ರಿಂದ ಮೇ ೧೬ ಈ ಅವಧಿಯಲ್ಲಿ ಪರೀಕ್ಷೆ ಕಟ್ಟಿದವರು ವರ್ಗವನ್ನೂ ಸಂಪಾದಿಸುವರು.

ಅಷ್ಟಗ್ರಹ ಯೋಗವು ಪ್ರಥಮ ಅರ್ಥಾತ್ ದೇಹಸ್ಥಾನದಲ್ಲಿ ಆಗುವದರಿಂದ ಪ್ರಕೃತಿಗೆ ಬಹಳ ತೊಂದರೆಯೆನಿಸುವದು. ಮನಸ್ಸಿನ ವಿರುದ್ಧ ಕೆಲ ಕೆಲಸಮಾಡಬೇಕಾಗುವದು. ಬಗೆಬಗೆಯ ಸಂಶಯ ಕುತರ್ಕಗಳಿಂದ ಮನಸು ಸದಾ ಚಿಂತೆ ಮತ್ತು ಭಯಗ್ರಸ್ತವಾಗಿರುವದು. ದಾವೆ ಫಿರ್ಯಾದಿ ಖಾಸಗಿ ಸ್ಪರ್ಧೆಯ ಕಾರ್ಯಗಳಲ್ಲಿ ನಿಮ್ಮ ಜನರೆ ನಿಮಗೆ ತಿರುಗಿ ಬೀಳುವರು. ಕೆಲವೊಮ್ಮೆ ತಲೆಗೆ ಬಹಳಷ್ಟು ಚಕ್ರ ಬರಹತ್ತುವದು. ಆದರೆ ವೆಚ್ಚ ಮಾತ್ರ ಸಹಿಸಲಾರದಷ್ಟು ಹೆಚ್ಚಿಗೆ ಆಗುವದು. ಸೊಸೆ ಇಲ್ಲವೆ ಅಳಿಯ ಎಲ್ಲ ವಿಷಯಗಳಲ್ಲಿಯೂ ಪೂರ್ಣವಾಗಿ ಮನಸ್ಸಿಗೆ ಬರುವರು. ಮಕ್ಕಳ ಉನ್ನತಿಗಾಗಿ ಮೇಲಿನ ತಾರೀಕಿನಿಂದಲೆ ಒಳ್ಳೆ ಕಾಲ ಬರುವದು. ಮತ್ತು ನಿಮ್ಮಿಬ್ಬರಲ್ಲಿ ಚೆನ್ನಾಗಿ ಕೂಡಿ ನಡೆಯುವದು.

ಧಂದೆ ಕೂಲಿಯವರಿಗೆ ಈ ವರ್ಷ ಸಾಡೇಸಾತಿ ಮತ್ತು ೧೨ನೇ ಗುರು ಇರುವದರಿಂದ ಫೆಬ್ರುಅರಿ ೨೪ರ ವರೆಗೆ ಬಹಳ ಜಿಕೇರಿಯದಿದ್ದರೂ ಅನಂತರ ಒಂದೊಂದೇ ಅಡಚಣೆ ನಿವಾರಣೆ ಹೊಂದಿ ಯೋಜಿಸಿದ ಕಾರ್ಯಗಳಲ್ಲಿ ಸಾವಕಾಶವಾಗಿಯಾದರೂ ಕೊನೆಯಲ್ಲಿ ಬಹಳಷ್ಟು ಯಶಸ್ಸು ನಿಶ್ಚಯವಾಗಿ ಸಿಕ್ಕುವದು. ಧಂದೆಯವರಿಗೆ ಕೊಡತಕ್ಕೊಳ್ಳುವ ವಿಷಯಗಳಲ್ಲಿ ಬಹಳ ಜಿಕೇರಿಯಾಗುವದು. ಆದರೆ ಅಬ್ರು ಇಲ್ಲವೆ ಪತ್ತು ಮಾತ್ರ ಪೂರ್ಣ ಉಳಿಯುವದು. ಇಷ್ಟೇ ಅಲ್ಲ ಮಾರ್ಚ ೩ ರಿಂದ ಎಪ್ರಿಲ ೧೦ ಮತ್ತು ಅಗಸ್ಟ ೧೨ ರಿಂದ ಸಪ್ಟೆಂಬರ ೨೯ ಈ ಅವಧಿಯಲ್ಲಿ ಅನೇಕರಿಗೆ ಕೇವಲ ಮುಖ ಪರಿಚಯವಿದ್ದವರಿಂದ ಮತ್ತು ಬಹಳ ವರ್ಚಸ್ಸಿನ ಜನರಿಂದ ಅಪೇಕ್ಷಿತ ವಿಷಯಗಳಲ್ಲಿ ಬಹಳ ಸಹಾಯ ಸಿಕ್ಕುವ ಸಂಭವವಿದೆ. ಪಾಲುಗಾರಿಕೆಯ ಧಂದೆ ಇದ್ದರೆ ಅದು ಒಡೆಯುವದೋ ಹೇಗೆ ಎಂಬ ಬಗ್ಗೆ ಬಹಳಷ್ಟು ಸಂಶಯಬರುವದು. ಕೊನೆಯಲ್ಲಿ ಹಾಗೇನೂ ಆಗದೆ ಅದು ಕಾಯಂ ಉಳಿಯುವದು. ಮಿತ್ರರಿಂದ ಕೊಡತಕ್ಕೊಳ್ಳುವದಿದ್ದರೆ ಅವರಿಗೆ ಆ ಮಿತ್ರರು ಫೆಬ್ರುಅರಿ ೨೪ ರ ವರೆಗೆ ವಸೂಲಿಗಾಗಿ ಪರಕೀಯರಿಗಿಂತ ಹೆಚ್ಚು ತೊಂದರೆ ಕೊಡುವರು. ಆದರೆ ಈಗ ಇರುವ ೬ನೇ ರಾಹು ಶತ್ರು ಮತ್ತು ಸಂಕಟಗಳ ದಮನಕರ್ತನಾಗಿರುವದರಿಂದ ಯಾರ ಆಟವನ್ನೂ ನಡೆಯಗೊಡುವದಿಲ್ಲ. ನೋಕರರಿಗೆ ಗ್ರೇಡ ಸಿಕ್ಕುವ ಹಕ್ಕು ಇದ್ದರೆ ಅದು ಮಾರ್ಚ ೩ ರಿಂದ ಎಪ್ರಿಲ ೧೦ ಇಲ್ಲವೆ ೨೦ ರಿಂದ ಜೂನ ೨೯ ಈ ಅವಧಿಯಲ್ಲಿ ಬಹುಶಃ ಸಿಕ್ಕುವದು. ವರಿಷ್ಠರು ನಿಮ್ಮ ಬಗ್ಗೆ ಅಸಂತುಷ್ಟರಿದ್ದರೂ ಕೈಕೆಳಗಿನ ನೋಕರರು ಬಹಳ ಛಲಿಸುವರು. ಬದಲಿಯಾದರೆ ಅತಿ ಖರ್ಚಿನ ಉಳಿದ ರೀತಿಯಿಂದಲೂ ಅನನುಕೂಲವಾದ ಸ್ಥಳಕ್ಕೆ ಆಗುವದು. ಅತಿ ಮಹತ್ವದ ಸರಕಾರಿ ಕೆಲಸವಿದ್ದರೆ ಯೋಗ್ಯ ವಸೀಲಿ ಹಚ್ಚಿದರೆ ಅದು ನಿಶ್ಚಯವಾಗಿ ಮನಸ್ಸಿನಂತೆ ಕೈಗೂಡುವದು. ದೂರದ ಪ್ರವಾಸ ಅನೇಕ ಸಲ ಘಟಿಸುವದು. ಅದರ ಉದ್ದೇಶವೂ ಸ್ವಲ್ಪ ಹಿಂದೆ ಮುಂದೆ ಆದರೆ ಖಾತ್ರಿಯಿಂದ ಫಲಿಸುವದು. ವಿಶೇಷವಾಗಿ ಲಾಭಕ್ಕೆ ಈ ವರ್ಷಾರಂಭದಿಂದ ನವಂಬರ ೨೯ ರ ವರೆಗೆ ಅನಂತರ ಡಿಶೆಂಬರ ೨೩ ರಿಂದ ಜನೆವರಿ ೧೫ ಮಾರ್ಚ ೫ ರಿಂದ ಮೇ ೧೬ ಜುಲೈ ೭ ರಿಂದ ಅಗಸ್ಟ ೨ ಮತ್ತು ಅಗಸ್ಟ ೩೧ ರಿಂದ ಮುಂದಿನ ಕಾಲ ಬಹಳ ಅನು

ಕುಂಭ

ಈ ವರ್ಷ ಈ ರಾಶಿಯವರಿಗೆ ಫೆಬ್ರುಅರಿ ೨೪ಕ್ಕಿಂತ ಮೊದಲು ಬಹಳ ಮತ್ತು ಅನಂತರ ಕಿಂಚಿತ್ ಸೌಮ್ಯ ಆದರೆ ಬಹಳ ದಗದಗಿಯದು ಈ ಬಗೆಯ ಅನುಭವ ಬರುವದೆಂಬದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಕಳೆದ ಫೆಬ್ರುಅರಿಯಿಂದ ಈ ರಾಶಿಯವರಿಗೆ ಪ್ರಾರಂಭವಾದ ಸಾಡೇಸಾತಿಯು ಇನ್ನೂ ಬಹಳ ದಿನಗಳ ವರೆಗೆ ಅಂದರೆ ಸುಮಾರಾಗಿ ೭ ವರ್ಷಗಳ ವರೆಗೆ ಉಳಿಯುವದು. ಮೊದಲಿನ ಎರಡೂವರೆ ವರ್ಷ ಶನಿ ೧೨ ನೆಯವನಿದ್ದು ಈ ವರ್ಷ ಅದೇ ಉಳಿಯುವನು. ಈ ಸ್ಥಾನವು ವ್ಯಯಸ್ಥಾನವಾಗಿರುವದು. ಅರ್ಥಾತ್ ಬಹುತರ ಕೆಲಸಗಳಲ್ಲಿ ವೆಚ್ಚ ಮತ್ತು ಶ್ರಮ ಯಶಸ್ಸಿಗಿಂತ ಸ್ವಲ್ಪ ಹೆಚ್ಚೇ ಆಗಹತ್ತುವದು. ಅಲ್ಲದೆ ಮಕರದಂತೆ ಈ ರಾಶಿಸ್ವಾಮಿಯೂ ಶನಿಯೇ ಇರುವದರಿಂದ ಈ ರಾಶಿಯ ಜನರ ಆರೋಗ್ಯ ಅಷ್ಟೊಂದು ಅನುಕೂಲವಿಲ್ಲ. ಫೆಬ್ರುಅರಿ ೨೪ ರ ವರೆಗಂತೂ ಶನಿಯ ಜೊತೆ ಗುರುವೂ ೧೨ನೆಯವನಾಗಿರುವನು. ಅವನು ಹೆಚ್ಚು ತಾಪ ಕೊಡುವನು. ಆದರೂ ಸ್ವರಾಶಿಯ ಸ್ವಾಮಿಯು ವಿನಾಶಕನಿರುವದಿಲ್ಲ. ಆದುದರಿಂದ ಯಾವದೇ ಬಗೆಯ ಧಕ್ಕೆ ಇರುವದಿಲ್ಲ. ಅದರಂತೆ ಜನೆವರಿ ೨೪ರಿಂದ ಮಾರ್ಚ ೩ರ ಮಧ್ಯಂತರ ಅವಧಿಯಲ್ಲಿ ಯಾವದೊಂದು ಅಪಘಾತದ ಅಂಜಿಕೆ ಇದೆ. ಉಳಿದ ವಿಷಯಗಳಲ್ಲಿ ಮಾತ್ರ ಫೆಬ್ರುಆರಿ ೨೪ರಿಂದ ದೇಹಸುಖ ಬಹಳ ಅನುಕೂಲ. ಕುಟುಂಬದಲ್ಲಿಯ ಜನ ತಮ್ಮ ತಮ್ಮ ಕರ್ತವ್ಯಗಳನ್ನು ವ್ಯವಸ್ಥಿತ ರೀತಿಯಿಂದ ಸಾಗಿಸುವರು. ಆದರೆ ಅವರಿಗಾಗಿ ಸಾಲ ಮಾಡಿಯಾದರೂ ಹಬ್ಬವನ್ನು ಮಾಡಬೇಕಾಗುವದು. ಆದರೂ ಅದರಲ್ಲಿಯ ಉದ್ದೇಶ ಸಾಧ್ಯವಾಗುವದು.

ಹೆಂಡತಿಯ ಆರೋಗ್ಯ ಒಟ್ಟಾರೆ ಅನುಕೂಲ. ಆದರೆ ನಿಮ್ಮ ಸ್ವಭಾವದ ಬಗೆಗೆ ಅವಳು ಸ್ವಲ್ಪ ಅಸಂತುಷ್ಟವೇ. ಉಭಯತರಲ್ಲಿ ಆಗಾಗ ಬಹಳಷ್ಟು ಕೆಡುವದು. ಆದರೂ ಜನರ ಕಿವಿಗೆ ಅದು ಬಂದು ಮುಟ್ಟುವದಿಲ್ಲ. ಎಪ್ರಿಲ ೧೦ರಿಂದ ಮೇ ೨೦ರ ಅವಧಿಯಲ್ಲಿ ಅವಳ ಆರೋಗ್ಯಕ್ಕೆ ಸ್ವಲ್ಪಾದರೂ ಕ್ಲೇಶವಿದ್ದೇ ಇದೆ. ಈ ರಾಶಿಯವರ ವಿವಾಹವಿನ್ನೂ ಆಗುವದಿದ್ದರೆ ಈ ವರ್ಷ ಅದನ್ನು ಮಾಡಬೇಕೆಂದಿದ್ದರೆ ಫೆಬ್ರುಅರಿ ೨೪ರೊಳಗಾಗಿ ಅದು ಕೂಡಿಬರುವ ಯೋಗ ಸ್ವಲ್ಪೂ ಇಲ್ಲ. ಅನಂತರ ಬರುವ ಜನ್ಮಸ್ಥ ಅಂದರೆ ಮೊದಲನೇ ಗುರುವಿನ ಕಾಲದಲ್ಲಿ ಬಾಶಿಂಗಬಲ ಬಂದು ಆದಷ್ಟು ಬೇಗ ಲಗ್ನವಾಗಿ ಹೋಗುವದು. ಮತ್ತು ಮೊದಲು ಯಾವ ವಧು ಇಲ್ಲವೆ ವರನೊಡನೆ ಲಗ್ನವಾಗುವದಿಲ್ಲೆಂದು ಸ್ಪಷ್ಟವಾಗಿದ್ದಿತೋ ಅದೇ ಕನ್ಯಾ ಇಲ್ಲವೆ ವರನೊಡನೆ ಮದುವೆಯಾಗುವದು ಇದು ನಿಶ್ಚಿತ. ಖರ್ಚು ಅಂದಾಜಿಗಿಂತ ಹೆಚ್ಚಿಗೆಯಾದರೂ ಕಾರ್ಯ ಮಾತ್ರ ಒಳ್ಳೆ ವೈಭವದಿಂದ ಸಾಂಗವಾಗುವದು. ವಧು ಇಲ್ಲವೆ ವರ ಪೂರ್ಣ ಅನುರೂಪ ಇರುವರು.

ಆದರಂತೆಯೇ ನಿಮ್ಮ ಮಕ್ಕಳ ಮದುವೆ ಈ ವರ್ಷ ಮಾಡುವದಿದ್ದರೆ ಅದಕ್ಕೂ ಫೆಬ್ರುಅರಿ ೨೪ರ ನಂತರ ಉತ್ತಮ ಬಾಶಿಂಗಬಲ ಬರುವದರಿಂದ ಮನಸ್ಸಿಗೆ ಬರುವಂಥ ಉತ್ತಮ ಮನೆತನದೊಡನೆ ಸಂಬಂಧ ಕೂಡಿಬಂದು ಅಲ್ಪಾಯಾಸದಿಂದ ಗೊತ್ತಾದ ಮುಹೂರ್ತಕ್ಕೆ ನಿರ್ವಿಘ್ನದಿಂದ ಲಗ್ನವಾಗು

ಕೂಲವಾಗಿ ಪರಿಣಮಿಸುವದು. ಈ ಸಲ ಯಾವದೇ ಬಗೆಯ ಸಂಗ್ರಹಕ್ಕೆ ಅನುಕೂಲ ಯೋಗವಿರುವದಿಲ್ಲ. ಆದರೆ ಸಂಗ್ರಹವಿದ್ದದ್ದು ಮಾತ್ರ ಖಾತ್ರಿಯಿಂದ ಉಳಿಯುವದು. ಪೂಜ್ಯ ವ್ಯಕ್ತಿಗಳ ಸಹವಾಸ ಬಹಳಷ್ಟು ದೊರೆಯುವದು. ಆದರೆ ಯಾತ್ರೆಯು ಸಂಭವ ಕಡಮೆ.

ದಾವೆ ಫಿರ್ಯಾದಿ ಖಾಸಗಿ ಸ್ಪರ್ಧೆಯಲ್ಲಿ ಫೆಬ್ರುಅರಿ ೨೪ ಕ್ಕಿಂತ ಮೊದಲು ಹೊರಬಿದ್ದ ನಿರ್ಣಯಗಳು ನಿಮ್ಮ ವಿರುದ್ಧ ಆದರೆ ಅನಂತರದ ನಿರ್ಣಯಗಳು ನಿಮಗೆ ಅನುಕೂಲವಾಗಿ ಪರಿಣಮಿಸುವವು.

ಫೆಬ್ರುಅರಿ ೨೪ಕ್ಕಿಂತ ಮೊದಲು ಹಡೆವ ಸ್ತ್ರೀಯರು ಅಲ್ಪಸ್ವಲ್ಪ ಕಷ್ಟದಿಂದ ಕನ್ಯಾ ಹಡೆಯುವರು. ಆದರೆ ಅನಂತರ ಹಡೆಯುವವರು ಸುಲಭವಾಗಿ ಹಡೆಯುವರು ಮತ್ತು ಪುತ್ರ ಪ್ರಾಪ್ತಿಯ ಸಂತೋಷವನ್ನು ಹೊಂದುವರು.

ಫೆಬ್ರುಅರಿ ೨೪ಕ್ಕಿಂತ ಮೊದಲು ಪರೀಕ್ಷೆ ಕಟ್ಟಿದ ವಿದ್ಯಾರ್ಥಿಗಳು ಪಾಸಾಗುವದು ಬಹಳ ಕಠಿಣ. ಆದರೆ ಅನಂತರ ಪರೀಕ್ಷೆ ಕಟ್ಟಿದವರು ಅವಶ್ಯವಿದ್ದಷ್ಟು ಗುಣಗಳಿಂದಲಾದರೂ ಪಾಸಾಗುವರು.

ಅಷ್ಟಗ್ರಹ ದ್ವಾದಶ ಉರ್ಫ ವ್ಯಯಸ್ಥಾನದಲ್ಲಿ ಆಗುವದರಿಂದ ಬಹಳ ವೆಚ್ಚ. ಜಾಮೀನ ಆಗುವ ಇಲ್ಲವೆ ಅದರ ಹಣವನ್ನು ತುಂಬುವ ಪ್ರಸಂಗ ಬರುವದು. ಕೆಲ ವಸ್ತುಗಳು ಕಳೆಯುವ ಇಲ್ಲವೆ ಕಳವಾಗಿ ಹೋಗುವ ಅಂಜಿಕೆ ಇದೆ. ವಿಪರೀತ ಲೋಕಾಪವಾದ ಬರುವದು ಮತ್ತು ಕಾಲಿಗೆ ಕೆಲವೊಂದು ಪೀಡೆಯಾಗುವದು. ಈ ಬಗೆಯ ಫಲ ಸಿಕ್ಕುವದು.

ಮೀನ

ಒಟ್ಟಿಗೆ ಮಾರ್ಚದಿಂದ ೧೨ ನೇ ಗುರು ಇದ್ದರೂ ಪ್ರಾಪಂಚಿಕ ಸುಖ, ಧಂದೆ ಇಲ್ಲವೆ ನೋಕರಿಯಲ್ಲಿ ಉಪಜೀವನ ಸಾಗಿಸಲಿಕ್ಕೆ ಅನುಕೂಲ ಮತ್ತು ಲೋಕಪ್ರತಿಷ್ಠೆಗೆ ಈ ವರ್ಷ ಬಹಳ ಉತ್ತಮವಿರುವದು. ಈ ಬಗೆಯ ಅನುಭವ ಅನೇಕರಿಗೆ ಬಹುಶಃ ನಿಶ್ಚಿತವಾಗಿ ಬರುವದು.

ವರ್ಷವಿಡೀ ಏಕಾದಶ ಶನಿಯಿರುವದರಿಂದ ಈ ರಾಶಿಯ ಜನರ ಆರೋಗ್ಯ ಬಹಳ ಉತ್ತಮ. ಆದರೂ ಫೆಬ್ರುಅರಿ ೨೪ ರಿಂದ ಬರುವ ದ್ವಾದಶ ಗುರುವಿನ ಪರಿಣಾಮವಾಗಿ ಅದು ಹಾಗಿಲ್ಲವೆಂದು ಭಾಸವಾಗಹತ್ತುವದು. ಅದರಲ್ಲಿಯೂ ಮಾರ್ಚ ೩ ರಿಂದ ಎಪ್ರಿಲ ೧೦ ರ ವರೆಗೆ ಯಂತ್ರಗಳಲ್ಲಿ ಕೆಲಸ ಮಾಡುತ್ತಿದ್ದವರು ಅಪಘಾತವಾಗದಂತೆ ದಕ್ಷತೆಯನ್ನು ವಹಿಸತಕ್ಕದ್ದು. ಇತರ ವಿಷಯಗಳಲ್ಲಿ ದೇಹಸುಖಕ್ಕೆ ಈ ವರ್ಷ ಬಹಳ ಅನುಕೂಲ. ಆದರೆ ಮಕ್ಕಳು ಅದರಂತೆ ವಿಶ್ವಾಸದಲ್ಲಿದ್ದ ಕೆಲ ಜನರು ಅಪ್ರಿಯ ಕೆಲಸ ಮಾಡುವದರಿಂದ ಮನಸ್ಸಿಗೆ ಬಹಳಷ್ಟು ಆಘಾತವೆನಿಸುವದು. ಅಲ್ಲದೆ ಇತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮಾರ್ಚ ೩ ರಿಂದ ಎಪ್ರಿಲ ೧೦ ಈ ಅವಧಿಯನ್ನು ಬಿಟ್ಟು ಉಳಿದ ಕಾಲದಲ್ಲಿ ಬಹಳ ಉತ್ತಮ ಸಿಕ್ಕುವದು. ಈ ಅವಧಿಯಲ್ಲಿ ಮನೆಯಲ್ಲಿಯೆ ದುಸುಮುಸಿ ನಡೆಯುವದು ಮತ್ತು ಸ್ವಲ್ಪ ಕಲಹವೂ ಆಗುವ ಪ್ರಸಂಗ ಒಂದೆರಡು ಸಲ ಬರುವ ಅಂಜಿಕೆ ಇದೆ.

ಹೆಂಡತಿಯ ಆರೋಗ್ಯ ಈ ವರ್ಷ ಚೆನ್ನಾಗಿ ಇದೆ. ಆದರೂ ಮೇ ೨೦ ರಿಂದ ಜೂನ ೨೯ ಮತ್ತು ಅಗಷ್ಟ ೭ ರಿಂದ ೨೫ ಈ ಮಧ್ಯಂತರ ಅವಧಿಯಲ್ಲಿ ಅವಳಿಗೆ ಸ್ವಲ್ಪ ಮಾನಸಿಕ ತೊಂದರೆಯ ಯೋಗವಿದೆ. ಉಭಯತರಲ್ಲಿ ಪ್ರೇಮ ಮತ್ತು ಆದರ ನಿರ್ವ್ಯಾಜ್ಯ ಉಳಿಯುವವು. ಆದರೂ ಯಾವನೊಬ್ಬ ಶಕುನಿಯು ಇಬ್ಬರಲ್ಲಿ ಕಿಲ್ಮಿಷವನ್ನುಂಟು ಮಾಡುವ ದುಷ್ಟ ಪ್ರಯತ್ನವನ್ನು ಜುಲೈ ೭ ರಿಂದ ಅಗಷ್ಟ ೨ ರೊಳಗಾಗಿ ಮಾಡುವ ಸಂಭವವಿದೆ. ಅದರಂತೆ ಇನ್ನೂ ನಿಮ್ಮ ವಿವಾಹವಾಗಿರದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ, ಅವರಿಗೆ ಫೆಬ್ರುಅರಿ ೨೪ ರ ವರೆಗೆ ಮಾತ್ರ ಬಾಶಿಂಗ ಬಲವಿದೆ. ಹೀಗೆ ತಿಳಿದುಕೊಂಡು ವರ್ಷದ ಆರಂಭದಿಂದಲೆ ಪ್ರಯತ್ನ ನಡೆಸಬೇಕು. ಅಂದರೆ ಬಹಳಷ್ಟು ದಗದಗಿ ಮತ್ತು ನಿರರ್ಥಕ ವೆಚ್ಚವಾಗದೆ ಲಗ್ನ ಕೂಡಿ ಬರುವದು. ಮತ್ತು ವ್ಯವಸ್ಥಿತವಾಗಿ ಸಾಂಗವಾಗುವದು. ಫೆಬ್ರುಅರಿ ೨೪ ರ ನಂತರ ಮಾತ್ರ ಆ ಪ್ರಯತ್ನದಲ್ಲಿ ಬೀಳದಿರುವದೇ ಹಿತಕರವೆನಿಸುವದು. ಏಕೆಂದರೆ ಅನೇಕರಿಗೆ ಪ್ರತಿಪಕ್ಷಿಗಳು ವಚನ ಭಂಗ ಮಾಡಿದ ಅನುಭವ ಬರುವದು. ವಧೂ ಮತ್ತು ವರ ಮಾತ್ರ ಪರಸ್ಪರ ಪೂರ್ಣ ಪ್ರೀತಿಯವರು ಮತ್ತು ಅನುರೂಪ ದೊರೆಯುವರು.

ಅದರಂತೆಯೇ ನಿಮ್ಮ ಮಕ್ಕಳ ಮದುವೆಯನ್ನು ಮಾಡುವದಿದ್ದರೆ ಅದು ಫೆಬ್ರುಅರಿ ೨೪ ರೊಳಗಾಗಿ ಬಹಳಷ್ಟು ಅಲ್ಪಾಯಾಸದಿಂದ ಮತ್ತು ಮನಸ್ಸಿಗೆ ಒಗ್ಗುವಂತೆ ಕೂಡಿ ಬರುವದು. ಅಷ್ಟು ಪ್ರಬಲ ಯೋಗ ಮುಂದೆ ಇರುವದಿಲ್ಲ. ಒಂದು ವೇಳೆ ಕೂಡಿ ಬಂದರೂ ಪ್ರತ್ಯಕ್ಷ ಕಾರ್ಯ ಸಾಂಗವಾಗಬೇಕಾದರೆ ಪರೇಚ್ಛೆಯಿಂದ ಅಥವಾ ಯದೃಚ್ಛೆಯಿಂದ ಅಪರಿಹಾರ್ಯ ಅಡಚಣಿಗಳು ಬಂದು ಕೊನೆಗೆ ಈ ವರ್ಷ ಗತಿಸುವವರೆಗೆ ಹವ್ಯಾಸವನ್ನೇ ಬಿಟ್ಟು ಬಿಡಬೇಕಾಗುವದು. ಸೊಸೆ ಇಲ್ಲವೆ ಅಳಿಯ ಜನರಿಗೆ ಎಷ್ಟೊಂದು ಒಳ್ಳೆಯವರೆಂದೆನಿಸುವರೊ ಅಷ್ಟು ನಿಮಗೆ ಮಾತ್ರ ಅನಿಸುವದಿಲ್ಲ. ಮಕ್ಕಳ ಉನ್ನತಿಗೆ ಈ ವರ್ಷ ಬಹಳ ಉತ್ತಮವದೆ. ಮತ್ತು ಅವರ ನಡತೆ ಬಹಳ ಹಟವಾದಿಯೆನಿಸುವದು. ಮತ್ತು ಮನಸ್ಸಿನ ವಿರುದ್ಧ ಕೆಲ ಮಾತುಗಳಿಗೆ ಒಪ್ಪಿಗೆ ಕೊಡಬೇಕಾಗುವದು.

೧೧ನೇ ಶನಿಯ ಮೂಲಕ ಧಂದೆ ಕೂಲಿಯವರಿಗೆ ಈ ವರ್ಷ ಬಹಳ ಅನುಕೂಲ ಯಶಸ್ಸು ಸಿಕ್ಕುವದು. ಫೆಬ್ರುಅರಿ ೨೪ ರ ವರೆಗೆ ಗುರು ಸಹ ೧೧ನೆಯವನಿರುವದರಿಂದ ಅಶಕ್ಯ ಮತ್ತು ದುರ್ಲಭ ಎನಿಸಿದ ಕೆಲಸಗಳೂ ಅಲ್ಪಾಯಾಸದಿಂದ ಮತ್ತು ಅಪೇಕ್ಷೆಗಿಂತ ಹೆಚ್ಚು ಯಶಸ್ವಿಯಾಗಿ ಪರಿಣಮಿಸುವವು. ಧಂದೆಯವರಿಗೆ ಮಾರ್ಚ ೩ ರ ವರೆಗೆ ಬಹಳಷ್ಟು ಲಾಭದ ಯೋಗಗಳಿವೆ. ಮತ್ತು ಸ್ಥಾವರ ಜಂಗಮ ಸಂಗ್ರಹ ಬಹಳಷ್ಟು ಆಗುವದು. ಬುದ್ಧಿ ಜೀವಿಗಳಿಗಿಂತ ಶ್ರಮಜೀವಿಗಳಿಗೆ ಈ ವರ್ಷ ಹೆಚ್ಚು ಲಾಭದ್ದೆನಿಸುವದು. ಅನೇಕರ ಭಾಗ್ಯೋದಯವಾಗುವ ಯೋಗವು ಜನೆವರಿ ೨೪ ರೊಳಗಾಗಿ ಬರುವದು. ಗುಪ್ತ ಇಲ್ಲವೆ ಆಕಸ್ಮಿಕ ಲಾಭವೂ ಅನೇಕರಿಗೆ ಆಗುವದು. ವಿಶೇಷವಾಗಿ ಯಾರ ಜನ್ಮಕುಂಡಲಿಯಲ್ಲಿ ಜನ್ಮ ಲಗ್ನವೂ ಮೀನರಾಶಿಯೆ ಆಗಿರುವದೊ ಮತ್ತು ಅಷ್ಟಮದಲ್ಲಿ ಶುಕ್ರ ಇಲ್ಲವೆ ಶನಿ ಅರ್ಥಾತ್ ತುಲಾ ರಾಶಿಯವರು ಯಾರೋ ಅವರಿಗೆ ನಿಶ್ಚಿತವಾಗಿ ಇಂಥ ಲಾಭವಾಗುವದು. ನೋಕರರಿಗೆ ಮೇಲಿನ ಗ್ರೇಡು ಸಿಕ್ಕುವ ಹಕ್ಕು ಇದ್ದರೆ ಖಾತ್ರಿಯಿಂದ ಸಿಕ್ಕುವದು. ಆದರೂ ನೂರಕ್ಕೆ ೭೫ ರಷ್ಟು ಜನರಿಗೆ ಹಕ್ಕು ಇಲ್ಲದಿದ್ದರೂ ಮೇಲಿನ ಗ್ರೇಡು ಸಿಕ್ಕ ಪ್ರತ್ಯಯ ಬರುವದು. ವರಿಷ್ಠರು ಮತ್ತು ಅದರಂತೆ ಕೆಳಗಿನವರು ನಿಮ್ಮ ಬಗ್ಗೆ ಬಹಳ ಸಂತುಷ್ಟರಿರುವರು. ನಿಮ್ಮ ಬದಲಿಯಾದರೆ ಸ್ವಲ್ಪ ದೂರ ಸ್ಥಳಕ್ಕಾದರೂ ಸುಖ ಸೌಕರ್ಯಗಳ ಸ್ಥಳಕ್ಕಾಗುವದು. ಆದರೆ ದ್ವಾದಶ ಗುರು ಬಂದ ಬಳಿಕ ಕೆಲಸದ ಜವಾಬ್ದಾರಿ ಬಹಳ ಹೆಚ್ಚುವದು. ನಿಮ್ಮ ಬಗ್ಗೆ ಲೋಕಮತ ಬಹಳ ಅನುಕೂಲ, ಅನೇಕ ಸಲ ಸಾರ್ವಜನಿಕರು ಜಾಹೀರ ರೀತಿಯಿಂದಲೂ ನಿಮ್ಮನ್ನು ಗೌರವಿಸುವರು. ೧೧ನೇ ಗುರುವಿದ್ದಾಗ ವಿವಾಹಾದಿ ಮಂಗಲ ಕಾರ್ಯ ೧೨ ನೇ ಗುರು ಬಂದಾಗ ಯಜ್ಞ, ಯಾಗ ಇಲ್ಲವೆ ಯಾತ್ರಾದಿ ಧಾರ್ಮಿಕ ಕೃತ್ಯಗಳಂಥವು ನಿಶ್ಚಯವಾಗಿ ಘಟಿಸುವವು. ಆದರೆ ಪಂಚಮ ರಾಹುವಿನಿಂದಾಗಿ ಪೂಜೆ, ಅರ್ಚನ, ಜಪತಪಾದಿ ಉಪಾಸನೆಗಳ ಬಗ್ಗೆ ಶ್ರದ್ಧೆ ಬಹಳಷ್ಟು ಹೆಚ್ಚುವದು. ಮೇಲಿಂದ ಮೇಲೆ ವಾಹನ ಸುಖ ದೊರೆಯುವದು. ಸ್ವಜಾತಿಯ ಮಿತ್ರರಿಗಿಂತ ಪರಜಾತಿಯವರಿಂದ ಹೆಚ್ಚು ಸುಖ ಸಿಕ್ಕುವದು. ದ್ರವ್ಯ ಸಂಗ್ರಹವನ್ನು ಕೆಲ ಮಟ್ಟಿಗೆ ಮಾಡುವಿರಿ. ಕೈಯಲ್ಲಿ ಬೇಕಾದಷ್ಟು ದುಡ್ಡು ಓಡಾಡುವದು.

ದಾವೆ, ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಯು ಕೆಲಸಗಳಲ್ಲಿ ಪೂರ್ಣ ಅನುಕೂಲತೆ. ಆದರೆ ಯಾವುದರಲ್ಲಿಯೂ ಪೂರ್ಣವಾಗಿ ನಿರ್ಣಯ ವಾಗುವದಿಲ್ಲ. ಆದರಲ್ಲಿಯೂ ಡಿಶೆಂಬರ ೧೫ ರಿಂದ ಜನೇವರಿ ೧೪, ಮೇ ೧೪ ರಿಂದ ಜೂನ ೧೫, ಮತ್ತು ಅಗಷ್ಟ ೧೬ ರಿಂದ ಸಪ್ಟಂಬರ ೧೬ ಈ ಅವಧಿಯಲ್ಲಿ ಹೊರಬೀಳುವ ನಿರ್ಣಯ ಗಳು ಬಹಳಷ್ಟು ಯಶಸ್ವಿಯಾಗುವವು.

ಈ ರಾಶಿಯ ಸ್ತ್ರೀಯರಲ್ಲಿ ಫೆಬ್ರುಆರಿ ೨೪ ಕ್ಕಿಂತ ಮೊದಲು ಹಡೆಯುವವರಿಗೆ ಸ್ವಲ್ಪೂ ಕಷ್ಟವಾಗುವದಿಲ್ಲ. ಆದರೆ ಬಹುತರ ಸ್ತ್ರೀಯರಿಗೆ ಕನ್ಯಾರತ್ನ ಹುಟ್ಟುವದು. ಅನಂತರ ಹಡೆಯುವವರಿಗೆ ಪ್ರಸೂತಿ ಕಷ್ಟ ಕೆಲ ಮಟ್ಟಿಗೆ ಬಾಧಿಸುವದು. ಆದರೆ ಬಹುತರ ಸ್ತ್ರೀಯರಿಗೆ ಪುತ್ರಪ್ರಾಪ್ತಿಯಾಗುವದರಿಂದ ಸಂತೋಷ ಹೆಚ್ಚುವದು. ಆದರೆ ಪಂಚಮರಾಹು ಇರುವವರೆಗೆ ಮಗು ಬಹಳ ಅಶಕ್ತ ಉಳಿಯುವದು.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಫೆಬ್ರುಆರಿ ೨೪ ಕ್ಕಿಂತ ಮೊದಲು ಆಗುವದೋ ಇಲ್ಲವೆ ಎಪ್ರಿಲ ೧೦ ರಿಂದ ಜೂನ ೨೯ ಇಲ್ಲವೆ ಸಪ್ಟೆಂಬರ ೨೯ ರ ನಂತರದ ಅವಧಿಯಲ್ಲಿ ಆಗುವದೊ ಅವರು ನಿಶ್ಚಯವಾಗಿ ಪಾಸಾಗುವರು. ಇಷ್ಟೇ ಅಲ್ಲ ನೂರಕ್ಕೆ ೫೦ ರಷ್ಟು ಜನರಾದರೂ ವರ್ಗದಲ್ಲಿ ಬರುವರು.

ಅಷ್ಟಗ್ರಹ ಏಕಾದಶ ಉರ್ಫ ಲಾಭಸ್ಥಾನದಲ್ಲಿ ಆಗುವದರಿಂದ ಬಗೆಬಗೆಯಿಂದ ದ್ರವ್ಯ ಮತ್ತು ವಸ್ತುಲಾಭವಾಗುವದು ಬಹಳ ಉತ್ಕರ್ಷವಾಗುವದು. ಉತ್ತಮ ಮಿತ್ರ ಸುಖ ಸಿಕ್ಕುವದು. ವಿಶೇಷವಾಗಿ ಗೂಢ ಚಿಂತೆ ಇದ್ದರೆ ಅದು ಪೂರ್ಣವಾಗಿ ಇಲ್ಲದಂತಾಗುವದು ಮತ್ತು ಒಳ್ಳೆ ಮನಃಶಾಂತಿ ಯೆನಿಸುವದು.

॥ ಸರ್ವೇಜನಾಃ ಸುಖಿನೋಭವಂತು ॥

ನಮ್ಮ ವಾಚಕ ವರ್ಗಕ್ಕೆಲ್ಲ ಆತ್ಯಂತಿಕ ಸುಖ ಲಭಿಸಲಿ

ಅವಳು ಮೂಕಿಯಾದಳು

—ಲೇಖಕರು: ಶ್ರೀ ಕೃಷ್ಣಮೂರ್ತಿ ಪುರಾಣಿಕ
ಗೋಕಾಕ

ಮನುಷ್ಯನ ಆಶೆ-ಆಕಾಂಕ್ಷೆಗಳಿಗೆ ಇತಿ-ಮಿತಿ ಇಲ್ಲ. ಅವು ಈಡೇರಿದಷ್ಟೂ ಬೆಳೆಯುವವು. ಆದರೆ ಯಾವುದಕ್ಕಾದರೂ ಒಂದು ತಡೆ ಬೇಕಲ್ಲವೆ? ಚಂದಣ್ಣ ಚಂದ್ರಶೇಖರ ತಾಯವ್ವರ ಪ್ರೀತಿಯ ಕಂದನಾಗಿ ಬೆಳೆದ. ಅವನ ಭವಿಷ್ಯಜೀವನದ ಉಜ್ವಲತೆಯ ಕನಸನ್ನು ಕಂಡು ಅವರು ಪುಣೆಗೆ ಬಂದರು. ಆದರೆ ದುರ್ದೈವ ಅವರನ್ನು ಮುಂದೆ ಬಿಡಲಿಲ್ಲ. ತಮ್ಮ ಆಶೆ ಈಡೇರುವ ಕಾಲ ಸನ್ನಿಹಿತವಾಗಿದೆಯೆಂದಾಗ ದೈವ ಅದಕ್ಕೆ ಅಡ್ಡ ಬಂತು. ಅದೊಂದು ಮಹಾ ದುರಂತ ಪ್ರಸಂಗೆ.



ಚಂದೂ! ಚಂದಣ್ಣ !! ಚಂದಪ್ಪ !!!

ಈ ಹನ್ನೊಂದು ವರುಷಗಳಿಂದ ತಾಯವ್ವ ಬಾಯಿತುಂಬ ಹೇಳುವ ಹೆಸರು. ಕರುಳಿನ ಕೂಗು. ಅವಳ ಜೀವನದ ತಂಬೂರಿಯ ತಂತಿಗೆ ದನಿಯನ್ನು ಮೂಡಿಸಿದ ಕಂದಮ್ಮನ ಹೆಸರು ಇದು. ತಾಯವ್ವನ ಜೀವನದಲ್ಲಿ ಅರಳಿದ ಪುಷ್ಪ. ಜೀವನದ ಸುಗಂಧ. ಈ ಚಂದಣ್ಣನ ಹೆಸರು.

ಈ ಚಂದಪ್ಪ ತಾಯವ್ವನ ಬಾಳಿನಾಗಸದಲ್ಲಿ ಮೂಡಿದ ತಿಂಗಳಾಗಿ ಅವಳ ಜೀವನದಲ್ಲಿ ಬೆಳುದಿಂಗಳನ್ನು ಬೆಳಗುತ್ತಿದ್ದ. ಅವಳು ಚಂದೂ ಹಾಲುಗಲ್ಲದ ಹಸುಳೆಯಾಗಿರುವಾಗ ಅವನ ಸುಂದರ ಮುಖವನ್ನು ಕಣ್ಣುತುಂಬಾ ನೋಡಿ ಆಕಾಶದ ಕಡೆಗೆ ಹೊರಳಿ ಪತಿಗೆ ಹೇಳುತ್ತಿದ್ದಳು. “ ಈ ಚಂದಪ್ಪನ ಮುಂದೆ ಆ ಚಂದಪ್ಪನನ್ನು ನಿವಾಳಿಸಿ ಚೆಲ್ಲಬೇಕು.”

ಹೆಂಡತಿಯ ಈ ಮಾತುಗಳನ್ನು ಕೇಳಿ ಚಂದ್ರಶೇಖರನಿಗೆ ತುಂಬಾ ಅಭಿಮಾನವಾಗುತ್ತಿತ್ತು. ಅವನು ಹೆಂಡತಿಯ ಮುಖಚಂದಿರನನ್ನು ದಿಟ್ಟಿಸಿ ನೋಡುತ್ತ ಹೇಳಿದನು.

“ ನಿನ್ನ ಈ ಚಂದಿರ ಮೂಡಲು ಹನ್ನೊಂದು ವರುಷ ನಾನು ತಪಸ್ಸು ಮಾಡಬೇಕಾಯಿತು. ತಾಯಾ! ಅಂತೆಯೋ ಈ ಅಪ್ಪನಿಗೆ ನನ್ನ ರೂಪವೇ ಮೆತ್ತಿ ಬಿಟ್ಟದೆ.”

“ ಅಂದ ಹಾಗೆ ಮುಖ ಮಾತ್ರ ನಿಮ್ಮ ಹಾಗಿದೆ. ಬಣ್ಣವೂ ನಿಮ್ಮ ಹಾಗಿದ್ದರೆ ಇವನು ನಿಜವಾಗಿಯೂ ಚಂದ್ರ . . .ಶೇಖರ . . . .ರ ಮಗನಾಗುತ್ತಿದ್ದ. ನನ್ನ ತಪಸ್ಸು ಫಲಿಸಿತು. ಬಣ್ಣ ನನ್ನದಾಯಿತು. ನನ್ನ ಪುಣ್ಯ.”

ತಾಯವ್ವ ಮಗುವಿಗೆ ಮುದ್ದು ಕೊಡುತ್ತ ಗಂಡನನ್ನು ಓರೆ ನೋಟದಿಂದ ನೋಡುತ್ತ ಹೇಳಿದಳು.

“ ನನ್ನ ಮುಖ; ನಿನ್ನ ಬಣ್ಣ, ನಿನ್ನ ಬಣ್ಣಕ್ಕೆ ನನ್ನ ಮುಖ . . .”

“ ಬಾನಚಂದ್ರನಾಗಿ ಹಸುಳೆಯಾಗಿ ತುಂಬಿ . . . .”

“ ಚಂದಣ್ಣನಾಗಿ ಬಂತು ಅಲ್ಲವೆ ? ”

“ ಈ ಮುಖವನ್ನಾದರೂ ನೋಡಿರಿ. ”

“ ದಿನ ದಿನವೂ ನೋಡಿ ನೋಡಿ. . .”

“ ನನ್ನದಲ್ಲ ಸ್ವಾಮಿ ! ”

“ ಓ. ಆ ಮುಖ . . . ಈ ಮುಖ . . . ಒಂದೇ ಮುಖ . . .”

“ ನಿಮ್ಮದೇ . . .”

“ನನ್ನದೆಂದರೂ ಒಂದೇ . . .ನಿನ್ನದೆಂದರೂ ಒಂದೇ. . .ಚಂದ್ರಮುಖ. ಚಂದ್ರಮುಖಿಯ ಮಗ . . .”

ಇಬ್ಬರೂ ಮಗುವನ್ನು ತೋಳ ತೊಟ್ಟಿಲಲ್ಲಿಟ್ಟು ಪ್ರತಿದಿನ ತೂಗುತ್ತ ಜೀವನದ ಹಾಡಿನ ಜೋಗುಳವನ್ನು ಹಾಡುತ್ತ ಈ ಹನ್ನೊಂದು ವರುಷವೂ ಚಂದಣ್ಣನನ್ನು ಮುದ್ದಿನ ಮುದ್ದಿಯಂತೆ, ಕರುಳಿನ ಸುರುಳಿಯಂತೆ, ಕಣ್ಣ ಗೊಂಬೆಯಂತೆ ಬೆಳೆಯಿಸುತ್ತ ಸಂತಾನ ಭಾಗ್ಯದ ಸುಖವನ್ನು ಅನುಭವಿಸುತ್ತಿದ್ದರು.

ಚಂದಣ್ಣ ಮುದ್ದುಮಗು. ಪ್ರೀತಿಯ ಎರಕದಿಂದ ಹೊಯ್ದು ಮಾಡಿದ ಗೊಂಬೆ ಹೇಗಿರಬೇಡ? ಈ ದಂಪತಿಗಳು ಮಗುವನ್ನು ಜೀವಪ್ರಾಣವಾಗಿ ನೋಡಲು ಇನ್ನೂ ಒಂದು ಕಾರಣವಿತ್ತು. ತಾಯಮ್ಮ ದೊಡ್ಡವಳಾಗಿ ಗಂಡನೊಡನೆ ಸಂಸಾರ ಹೂಡಿ ಹತ್ತು ವರುಷಗಳಾದರೂ ಅವಳ ಭಾಗ್ಯಕ್ಕೆ ಸಂತಾನಪ್ರಾಪ್ತಿಯಾಗಲಿಲ್ಲ. ಗಂಡನೊಡನೆ ಅವಳು ಹತ್ತು ಊರು ತಿರುಗುತ್ತಿದ್ದಳು. ಅಲ್ಲಿಯ ದೇವರಿಗೆಲ್ಲ ಹರಕೆ ಸಲ್ಲಿಸುತ್ತಿದ್ದಳು. ಯಾವ ದೇವರೂ ಅವಳನ್ನು ಅರ್ಥಮಾಡಿಕೊಳ್ಳಲಿಲ್ಲ.

ಈ ಕೊರಗು ಅವಳ ಸೌಂದರ್ಯವನ್ನು ಕೊರೆಯತೊಡಗಿತು. ಮೊದಲಿನ ಮೂರು ನಾಲ್ಕು ವರುಷಗಳನ್ನು ಅವಳು ಚಲ್ಲಾಟದಲ್ಲಿಯೇ ಕಳೆದಳು. ಆದರೆ ಈ ಚಲ್ಲಾಟ ಅವಳಲ್ಲಿ ಬೇಸರವನ್ನೇ ತರಹತ್ತಿತು. ತಾನು ಬಂಜೆಯೇನೊ ಎಂಬ ಭಾವ ಬಂದಾಗ ಅವಳ ಅಂತರಂಗಕ್ಕೆ ಚುಚ್ಚಿದಂತಾಗುತ್ತಿತ್ತು.

ಚಂದ್ರಶೇಖರನಿಗೆ ದೊಡ್ಡ ಸಂಬಳ ಬರುತ್ತಿತ್ತು. ಬೇಕಾದಂತಹ ಸುಖ ಸೌಕರ್ಯಗಳ ನೆಮ್ಮದಿಯ ಜೀವನವನ್ನು ಅವನು ಹೆಂಡತಿಗೆ ಒದಗಿಸುತ್ತಿದ್ದನು.

ಆದರೂ ಅವಳ ಕೊರಗು ನಿಲ್ಲಲಿಲ್ಲ.

ಇದರ ಕಾರಣ ಪತಿಗೆ ತಿಳಿದ ವಿಷಯವಾಗಿತ್ತು. ಆದರೆ ಅವನೇನು ಮಾಡಬಲ್ಲ? ವಿಶ್ವ ಸೃಷ್ಟಿ ವಿಶ್ವಕರ್ತೃವಿಗೆ ಸೇರಿದ ವಿಷಯ.

"ನಾನು ಯಾವುದಕ್ಕೆ ಕಡಿಮೆ ಮಾಡಿದ್ದೇನೆಂದು ನೀನು ಹೀಗೆ ಕಡ್ಡಿಯ ಹಾಗೆ ಆಗತೊಡಗಿದ್ದೀ ತಾಯಾ? ನಿನ್ನ ಈ ಸೊರಗಿದ ದೇಹವನ್ನು ನೋಡಿ ನನ್ನ ಎದೆ ಒಡೆದು ಹೋಗಿದೆ."

ಗಂಡನ ಈ ಮಾತುಗಳನ್ನು ಕೇಳಿ ತಾಯಾನ ಕಣ್ಣೊಳಗಿಂದ ನೀರು ಸುರಿಯತೊಡಗಿದವು.

"ನಿನ್ನ ಮನಸ್ಸನ್ನು ನಾನು ಅರಿಯಬಲ್ಲೆ ತಾಯಾ! ಆದರೆ ಅದು ದೇವರ ಅನುಗ್ರಹಕ್ಕೆ ಸೇರಿದ ವಿಷಯ. ಅನನ್ಯ ಭಕ್ತಿಯಿಂದ ದೇವರ ಸೇವೆ ಮಾಡೋಣ, ಪ್ರಾರ್ಥಿಸೋಣ. ಪಾರ್ಥನೆ ಎಂದಿಗೂ ಹುಸಿ ಹೋಗುವದಿಲ್ಲ. ಸುಮ್ಮನೆ ಕೊರಗಬೇಡ."

"ಈ ಎಂಟು ವರುಷಗಳಿಂದಲೂ ದೇವರಿಗೆ ಹಣೆ ಹಚ್ಚಿ ಹಚ್ಚಿ ಹಣೆ ಹಸಿರುಗಟ್ಟಿ ಹೋಗಿದೆ. ದೇವರು ಕಲ್ಲುಗೊಂಬೆ."

"ದೇವರೆಂದರೆ ನಿನ್ನ ಮಾತು ಕೇಳುವ ಸೇವಕನೆಂದು ತಿಳಿದಿರುವೆಯೇನು? ನಿನ್ನ ಬೇಸರವೇ ಅಸಹ್ಯವಾಗಿದೆ. ದೇವರ ಸೇವೆಯನ್ನು ಬೇಸರದಿಂದ ಮಾಡಬಾರದು. ದೇವರನ್ನು ಚೈತನ್ಯಸ್ವರೂಪನೆಂದು ತಿಳಿದುಕೊಳ್ಳಬೇಕು. ಕಲ್ಲುಗೊಂಬೆಯೆಂದು ತಿಳಿದುಕೊಂಡರೆ ನಿನ್ನ ಪಾಲಿಗೆ ದೇವರು ಕಲ್ಲೇ ಆದಾನು."

ತಾಯವ್ವನಿಗೆ ಗಂಡನ ಮಾತಿನಲ್ಲಿ ಹೊಸ ಬೆಳಕೊಂದು ಕಂಡಂತಾಯಿತು. ಅವಳು ಗಂಡನ ಪಾದಗಳ ಮೇಲೆ ಹಣೆಯಿಟ್ಟು,

"ನನ್ನ ದೇವರೆ!" ಎಂದು ಆ ಪಾದಗಳಿಗೆ ಕಣ್ಣೀರಿನ ಅಭಿಷೇಕ ಮಾಡಿದಳು.

ಎರಡು ವರುಷ ತಾಯವ್ವ ಚಿತ್ತದಲ್ಲಿ ಶಿವನ ಬಿಂಬವನ್ನು ಮೂಡಿಸಿಕೊಂಡು ಆರಾಧನೆ ಮಾಡಿದಳು. ಹದಿನಾರು ಸೋಮವಾರಗಳನ್ನು ಮಾಡಿ ವ್ರತ ಪೂರೈಸಿದಳು.

ಅವಳಿಗೆ ಎಲ್ಲಿಲ್ಲದ ಶಾಂತಿ ಲಭಿಸಹತ್ತಿತು. ಮೊದಲಿನ ಕೊರಗು ಮರೆಯಾಗಹತ್ತಿತು.

ಶಿವನ ಸೇವೆ ಅವಳ ಜೀವದ ಉಸಿರಾಗಿ ಬಿಟ್ಟಿತು.

ಅಂದು ಮುಂಜಾವು ತಾಯವ್ವ ತುಸು ಗಡಿಬಿಡಿಯಿಂದಲೇ ಎದ್ದು ಗಂಡನನ್ನು ಎಬ್ಬಿಸುತ್ತ ಹೇಳಿದಳು.

"ಸ್ವಲ್ಪ ಬೇಗನೇ ಏಳುತ್ತೀರಾ?

ಸತಿಯೊಡನೆ ಸಂತಸದಿಂದ ಕಳೆದ ರಾತ್ರಿಯ ಮಧುರ ಸ್ಮೃತಿಯಿಂದ ಪುಳುಕಿತನಾದ ಚಂದ್ರಶೇಖರನು ಅವಳನ್ನು ಬರಸೆಳೆದು ಹೇಳಿದನು.

"ಬೆಳದಿಂಗಳ ರಾತ್ರಿ ಮುಗಿಯಬಾರದಾಗಿತ್ತು" ಎಂದನು.

"ಒಂದು ವಿಚಿತ್ರ ತಾಯಿ!"

"ಏನು, ವಿಚಿತ್ರವೆ?"

"ಚಂದ್ರಶೇಖರನು . . . ."

"ನಾನೇ?"

"ಹೂಂ . . ಹೂಂ . . . ಶಿವನನ್ನು ಕಂಡಂತಾಯಿತು ಕನಸಿನಲ್ಲಿ. ಏನು ಬೆಳದಿಂಗಳದು. ಆ ಕೂಡಲೇ ಆ ಬೆಳದಿಂಗಳ ಹೊಳೆಯಲ್ಲಿ ತೇಲಿಬರುವ ಮಲ್ಲಿಗೆಯ ನೌಕೆಯಲ್ಲಿ ನಿಮ್ಮನ್ನು ಕಂಡೆ. ಆದರೆ ನೀವು ಕಿರೀಟ ಧರಿಸಿದ್ದಿರಿ, ನಿಮ್ಮ ಕಿರೀಟದ ಮೇಲೆ ಚಂದಿರ ಲಕಲಕ ಹೊಳೆಯುತ್ತಿದ್ದ."

"ನಾನು ಕಾಲೇಜಿನಲ್ಲಿ ಶಿವನ 'ಪಾರ್ಟ' ಮಾಡಿದ್ದು ಉಂಟುಬಿಡು."

"ವಿನೋದವಲ್ಲ, ಕೇಳಿರಿ. ಬಹುದೂರದಿಂದ ನಿಮಗಾಗಿ ಓಡಿಬಂದ ನನ್ನನ್ನು ನೀವು ನೌಕೆಯಲ್ಲಿ ಎಳೆದುಕೊಂಡಿರಿ. ಆದರೇನು? ನೀವು ನನ್ನಲ್ಲಿ ಕರಗಿಯೇ ಹೋದಿರಿ. ಆಗ ನನಗೆ ಕಂಡದ್ದು ಒಂದು ಬಿಂಬ, ಚಂದ್ರಬಿಂಬ . . . ."

ಹೆಂಡತಿಯ ಸುಹಾಸವದನವನ್ನು ನೋಡಿದ ಚಂದ್ರಶೇಖರನು ಅವಳ ಮುಖಾರವಿಂದವನ್ನು ಕೈಯಲ್ಲಿ ತೆಗೆದುಕೊಂಡು ಹೇಳಿದನು.

"ನಿನ್ನ ಪುಣ್ಯ ಫಲಿಸಿತು ತಾಯಾ! ಈ ಸ್ವಪ್ನ ಸಾಂಕೇತಿಕವಾಗಿದೆ."

ಪತಿಯ ಮಾತನ್ನು ಕೇಳಿ ಸತಿಯ ತನುವಲ್ಲರಿ ಬಳುಕಿತು. ತನ್ನ ಜೀವ ಸಾರ್ಥಕವಾಗಲಿ ದೇವರೆ! ಎಂದು ತಾಯಾ ಬೇಡಿಕೊಂಡಳು.

೨

ಇದು ತಾಯವ್ವನ ಪ್ರೀತಿಯ ಇತಿಹಾಸವಾಗಿತ್ತು. ಚಂದ್ರಬಿಂಬವನ್ನು ಕನಸಿನಲ್ಲಿ ಕಂಡ ದಿವ್ಯಸ್ಮೃತಿಗಾಗಿ ತಾಯವ್ವ ಹುಟ್ಟಿದ ಮಗುವಿಗೆ ಚಂದಣ್ಣನೆಂದು ನಾಮಕರಣ ಮಾಡಿದ ರಹಸ್ಯವೇ ಇದಾಗಿತ್ತು.

ಚಂದಣ್ಣ ಅಕ್ಕರೆಯ ಗೊಂಬೆಯಾಗಿ ಬೆಳೆಯತೊಡಗಿದ. ಅವನ ಭಾಗ್ಯಕ್ಕೆ ಕಡಮೆ ಇರಲಿಲ್ಲ; ಪ್ರೀತಿಗೆ ಕೊರತೆ ಇರಲಿಲ್ಲ. ದಂಪತಿಗಳ ತಪಸ್ಸಿನ ಫಲವಾಗಿ ಮೂಡಿಬಂದ 'ದೇವರ



ಕೂಸು' ಚಂದಣ್ಣಿ, ಬೇಡಿ ಬಯಸಿ ಪಡೆದ ಫಲ. ಜೀವನದಲ್ಲಿ ಬಂಜೆತನದ ಮರುಭೂಮಿಯ ಅಂಜಿಕೆಯಿಂದ ಕೊರಗುತ್ತಿದ್ದ ತಾಯಿಗೆ ಸೆಲೆಯುದಿಸಿ ಬಂದಂತೆ ಬಂದಕೂಸು ತಾಯವ್ವನ ಅಕ್ಕರೆಯ ಸಕ್ಕರೆಯ ಗೊಂಬೆಯಾಗುವದರಲ್ಲಿ ಯಾವ ಅಚ್ಚರಿ!

ದಂಪತಿಗಳ ಜೀವದ ಉಸಿರಿನ ಉಸಿರಾಗಿ ಮಗು ಬೆಳೆಯತೊಡಗಿತು. ಸುಂದರ ಮುಖ, ಸುಂದರ ಆಕೃತಿ, ಹಿತವಾದ ಆರೋಗ್ಯ. ಮಗು ಹೇಗಿರಬೇಡ?

ತಾಯಮ್ಮನ ಕಣ್ಣಿನ ಒಳಗೆ ಮೂಡಿದ ಕಣ್ಣಾಗಿ ಚಂದಣ್ಣ ಅವಳ ಆತ್ಮಸಂಗೀತದ ಸವಿದನಿಯಾಗಿ ಅವಳ ದೇಹದಲ್ಲಿ ದನಿಯ ತೆರೆಗಳನ್ನು ಎಬ್ಬಿಸತೊಡಗಿದ.

ತಾಯವ್ವ ಈ ಮಗನ ಜನನದಿಂದ ಸುಖಿಯಾದರೆ ಚಂದ್ರಶೇಖರ ಪೂರ್ಣಸುಖಿ.

ತಾಯವ್ವನ ಕೈತುತ್ತಿನಿಂದ ಬೆಳೆಯತೊಡಗಿದ ಚಂದಣ್ಣ ಪೂರ್ಣಿಮೆಯ ಚಂದ್ರನಂತೆ ಪೂರ್ಣ ಕಳಾಬಿಂಬನಾಗಿ ಕಂಡವರಿಗೆ ಕಣ್ಣ ಹಬ್ಬವಾಗಿ ಬೆಳೆಯತೊಡಗಿರುವದನ್ನು ನೋಡಿದ ಈ ದಂಪತಿಗಳಿಗೆ ಜೀವನವು ಜೇನಿನ ಕೊಡವೇ ಅನ್ನಿಸತೊಡಗಿತು.

ಕುಳಿತಾಗ, ನಿಂತಾಗ, ಮಲಗಿದಾಗ ಕೂಡ ಕನಸಿನಲ್ಲಿ ಮಗನ ಧ್ಯಾಸವೇ ಧ್ಯಾಸ, ಅವನ ಬಣ್ಣನೆಯೇ ಬಣ್ಣನೆ.

ಈಗಂತೂ ಅವನು ಏಳು ವರುಷದವನಾಗಿ ಸಾಲೆಗೆ ಹೋಗತೊಡಗಿದ್ದರಿಂದ ತಾಯವ್ವನ ಜವಾಬುದಾರಿ ಇನ್ನೂ ಹೆಚ್ಚಿದಂತಾಯಿತು.

ಅವಳು ಮಗನ ಬಗ್ಗೆ ಅನೇಕ ಭವಿಷ್ಯದ ಭವ್ಯ ಚಿತ್ರವನ್ನು ಕಲ್ಪಿಸತೊಡಗಿದಳು. ಅವನ ಚುರುಕುಬುದ್ಧಿಯ ಬಗ್ಗೆ ಮನೆಗೆ ಕಲಿಸಲು ಬರುವ ಶಿಕ್ಷಕರು ವರ್ಣನೆ ಮಾಡುವಾಗ ಅವಳು ಮಗನ ಬಗ್ಗೆ ಹೆಚ್ಚಿನ ಆಶೆ ಆಕಾಂಕ್ಷೆಗಳನ್ನು ರೂಪಿಸಿಕೊಳ್ಳತೊಡಗಿದಳು. ಆಗಲೇ ಅವಳ ಕಲ್ಪನೆಯ ಮುಂದೆ ಮಗನು ಹಡಗ ಹತ್ತಿದಂತೆ, ವಿಮಾನದಲ್ಲಿ ಪರದೇಶಕ್ಕೆ ಹೊರಟಂತೆ ಏನೇನೋ ಅಪೂರ್ವ ಚಿತ್ರಗಳು ಮೂಡಹತ್ತಿದವು.

ಮಗನ ಶ್ರೇಯಸ್ಸಿಗಾಗಿ ಅವಳು ಹಗಲಿರುಳೂ ದೇವರನ್ನು ಪ್ರಾರ್ಥಿಸತೊಡಗಿದಳು. ಅವನಿಗಾಗಿ ಯಾವ ಬೇಕಾದ ತ್ಯಾಗವನ್ನು ಮಾಡಲು ಕೂಡ ಅವಳು ಸಿದ್ಧಳಾದಳು.

ತಾಯವ್ವ ದೈನಂದಿನ ವೆಚ್ಚವನ್ನು ಕಡಿಮೆ ಮಾಡಿ ಆ ಹಣವನ್ನು ಮಗನಿಗಾಗಿ ಶೇಖರಿಸಿ ಇಡತೊಡಗಿದಳು. ಸಿನೇಮಾ, ನಾಟಕ, ಮನೋರಂಜನೆ ಇವುಗಳಿಗಾಗಿ ಆಗುತ್ತಿದ್ದ ವೆಚ್ಚವನ್ನು ಬಂದುಮಾಡಿ ಆ ಹಣವನ್ನು ಮಗನ ಭವಿಷ್ಯಕ್ಕಾಗಿ ಮುಡುಪಿಡತೊಡಗಿದಳು.

"ಈ ಜಿಪುಣತನಕ್ಕೆ ಏನೆನ್ನಬೇಕು ತಾಯಾ? ದೇವರು ಕೊಟ್ಟಾಗ ಉಂಡುಟ್ಟು ಸುಖದಿಂದ ಇರಬಾರದೆ?"

ಎಂದು ಪತಿ ಕೇಳಿದಾಗ ಅವಳ ಕೊಡುವ ಉತ್ತರ ಇದು.

"ನಮ್ಮ ಸುಖಕ್ಕಾಗಿಯೇ ಅಲ್ಲವೇನು ನಾನು ಮಾಡುತ್ತಿರುವದು. ಈ ಸರದಾರನನ್ನು ನೆಹರೂ ಮಾಡಬೇಡವೆ? ಅವನು ಪರದೇಶಕ್ಕೆ ಹೋಗಿಬರಲು ಹಣ ಬೇಡವೆ? ಈ ದೇಶದಲ್ಲಿ ಕಲಿಯುವ ಬುದ್ಧಿಯೇನು ಈ ಅಪ್ಪನದು?"

ಹೆಂಡತಿಯ ಮಾತುಗಳಿಂದ ಅವನಿಗೂ ತೃಪ್ತಿಯಾಗುತ್ತಿತ್ತು. ಚಂದಣ್ಣನ ರೂಪ, ಬುದ್ಧಿಯ ಹರಿತ, ಇವನನ್ನು ಕೂಡ ಬೆರಗು ಮಾಡಿದ್ದವು. ಮಗನ ಬಗ್ಗೆ ಅವನೂ ಅನೇಕ ಕನಸುಗಳನ್ನು ಕಟ್ಟತೊಡಗಿದನು. ತನ್ನ ಮಗನ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಅವನು ದೊಡ್ಡ ಪಟ್ಟಣಕ್ಕೆ ವರ್ಗ ಮಾಡಿಸಿಕೊಳ್ಳಲು ಹಾತೊರೆಯತೊಡಗಿದನು. "ಈ ಧಾರವಾಡ, ಹುಬ್ಬಳ್ಳಿ, ಬೇಡ ತಾಯಿ, ದರಿದ್ರ ಕನ್ನಡ ಊರುಗಳು. ಬೇಕಾದರೆ ಮುಂಬಯಿಗೆ ವರ್ಗ ಮಾಡಿಸಿಕೊಳ್ಳಿರಿ. ಇಲ್ಲದಿದ್ದರ ಪುಣೆಕ್ಕೆ ಮಾಡಿಸಿಕೊಳ್ಳರಿ ಅಂದರ ಇವನ ವಿದ್ಯಾಭ್ಯಾಸ ಛಲೋ ಆಗತದ."

ಚಂದಣ್ಣನ ಗಲ್ಲ ಸವರುತ್ತ ಹೇಳಿದಳು ತಾಯವ್ವ. "ನಿನ್ನ ಮಾತು ನಿಜ ತಾಯಾ! ಅವನನ್ನು ಈಗಿನಿಂದಲೇ ಇಂಗ್ಲಿಷ ಮಾಧ್ಯಮವಾಗಿರುವ ಸ್ಕೂಲುಗಳಿಗೆ ಸೇರಿಸಬೇಕು. ಅಂದರೆ ಅವನು 'ರಾಯಭಾರಿ'ಯಾದರೂ ಆದಾನು. ಮಾತೃಭಾಷೆ ಕಲಿತು ಶಾಲಾ ಮಾಸ್ತರ ಆಗುವ ಹುಡುಗನಲ್ಲ ಚಂದಣ್ಣ!"

"ಈ ಅಪ್ಪ ಬರಸೂ ಯಾಕ ಆಗ್ತಾನ. ಸಾವಿರ ಮಂದಿನ್ನ ಆಳೂ ಸರದಾರ ನನ್ನ ಮಗ. ಪುಣೆಕ್ಕೆ ವರ್ಗ ಮಾಡಿಸಿಕೊಳ್ಳರಿ. 'ಡೆಕ್ಕನ ಜಮುಖಾನಾ' ದಾಗ ಬಂಗಲೇ ಹಿಡಿದು ಚಂದಣ್ಣನ್ನ 'ಕನ್ವೆಂಟ' ಸ್ಕೂಲಿಗೆ ಕಳಿಸೂಣು."

"'ನವೀ ಪೇಟ'ದಾಗ ನಮ್ಮ ಆಪ್ತರಿದ್ದಾರ, 'ನಾರಾಯಣ ಪೇಟ'ದಾಗ ನಿನ್ನ ಅಕ್ಕನ ಗಂಡ ಇದ್ದಾನ, ಬೇಕಾರ 'ಶನಿವಾರ ಪೇಟ'ದಾಗ ನನ್ನ ಗೆಳೆಯ ಇದ್ದಾನ. ಅದು ಬ್ಯಾಡಾ ಅಂದರ 'ಕಸಬಾ ಪೇಟ'ದಾಗ ನಮ್ಮೂರಿನವಾ ಇದ್ದಾನ. . ."

"ಥೂ! ಥೂ! ಇವೆಲ್ಲಾ ದರಿದ್ರರು ಇರೂ ಜಾಗಾ! ನಾ ಮರ್ರ್ಯೋ ಒಲ್ಲೆ ನಮ್ಮವ್ವಾ! ನಾನು ಇದ್ದರ 'ಡೆಕ್ಕನ್ ಜಮುಖಾನಾ'ದಾಗ ಇರುವಾಕೆ! ಸುಡುಗಾಡ ಆ 'ಮುಳಾ-ಮುಠಾ' ನದೀ ದಂಡ್ಯಾಗ ಇರೂ ಅಂತೀರೇನ ನನ್ನ?"

"ಹಾಲಿಲ್ಲ ಬಟ್ಟಲಿಲ್ಲ, ಗುಟಕ್ ಅಂದರಂತ. ಮೊದಲ ವರ್ಗ ಅನಕಾ ಆಗಲಿ ನಿಂದ್ರು."

"ಅದಕ್ಕೇನ ತಡಾ ಆಗ್ತದ, ಹೆಡ್ ಆಫೀಸಿನ ಜನಕ್ಕ ಒಂದಿಷ್ಟು ಕೈ ಬೆಚ್ಚಗ ಮಾಡಿರಲಾ! ಬೇಕಾದರ ಲಂಡನ್ನಕ್ಕೆ ಕೂಡ ಹೊತ್ತ ಹಾಕತಾರ."

ಈ ಮಾತನ್ನು ಕೇಳಿ ಚಂದ್ರಶೇಖರ ನಕ್ಕುಬಿಟ್ಟ.

೩

ಚಂದಣ್ಣನಿಗೀಗ ಹನ್ನೊಂದು ವರುಷ.

ಈಗ ನಾಲ್ಕು ವರುಷಗಳಿಂದ ತಾಯವ್ವ ತನ್ನ ಇಚ್ಛೆಯಂತೆ 'ಡೆಕ್ಕನ ಜಮುಖಾನಾ'ದಲ್ಲಿ ಒಂದು ಚಿಕ್ಕದಾದರೂ ಚೊಕ್ಕವಾದ ಸುಂದರ ಕಟ್ಟಡದ ಮೂರನೆಯ ಮಜಲಿನ ಮೇಲೆ ವಾಸವಾಗಿದ್ದಾಳೆ. ಚಂದಣ್ಣನೀಗ ಸರ್ವ ವಿಧದಿಂದಲೂ ಜಾಣನಾಗಿರುವದರಿಂದ ಅವಳಲ್ಲಿ ಆತನ ಅಭಿಲಾಷೆ ತುಂಬಾ ಉಂಟಾಗಿದೆ. ಅವನ ಪರದೇಶ ವಿದ್ಯಾಭ್ಯಾಸದ ಬಗ್ಗೆ ಆಗಲೇ ತಾಯವ್ವ 'ಓವ್ಹರಸೀ ಬ್ಯಾಂಕ'ದಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ಠೇವು ಇಟ್ಟಿದ್ದಾಳೆ. ಇನ್ನೂ ನಾಲ್ಕು ವರುಷಗಳಲ್ಲಿ ಇನ್ನೂ ಐದಾರು ಸಾವಿರ ಕೂಡಿಸಿ ಮಗನನ್ನು ಮುಂದು ಮಾಡಬೇಕೆಂದು ನಿಶ್ಚಯಿಸಿದ್ದಾಳೆ.

ಚಂದ್ರಶೇಖರನಿಗೂ ಈಗ ಮಗನೆಂದರೆ ಪ್ರಾಣಪದಕಕ್ಕಿಂತಲೂ ಹೆಚ್ಚಾಗಿದ್ದಾನೆ. ಗೆಳೆಯರ ಮುಂದೆ ಮಗನ ಬಗ್ಗೆ ಹೇಳಿಯೇ ಹೇಳುತ್ತಾನೆ. ಅವರಿಂದ ಅನೇಕ ಯೋಜನೆಗಳನ್ನು ಪಡೆದುಕೊಳ್ಳುತ್ತಾನೆ.

"ಇವನಿಗೆ ಪುಣೆಯಲ್ಲಿ ಯೋಗ್ಯ ಶಿಕ್ಷಣ ಸಿಗುವದಿಲ್ಲ ತಾಯಾ! ನಾವು ಮುಂಬಯಿಗೆ ಹೋಗಿ ಬಿಡಬೇಕು."

ಗೆಳೆಯನೊಬ್ಬನ ಸಲಹೆಯನ್ನು ಪತಿ ತಾಯವ್ವನ ಮುಂದೆ ಆ ದಿನ ಮಂಡಿಸಿದನು.

"ಬೇಕಾದಲ್ಲಿ ನಡೀರಿ ನಂದೇನು? ಮುಖ್ಯ ಚಂದಣ್ಣನ ವಿದ್ಯಾ ಛಲೋ ಆಗಬೇಕು. ದಿಲ್ಲಿಗೆ ನಡೀ ಅಂದರೂ ನಾ ಸಿದ್ಧ."

"ಜುಲೈ ತಿಂಗಳಲ್ಲಿ ವರ್ಗಾವರ್ಗಿ ಆಗುವುದು ಇರತಾವ. ಆಗ ಪ್ರಯತ್ನ ಮಾಡಿದರಾಯ್ತು."

"ಅವಶ್ಯ ಮಾಡಿರಿ. ಜುಲೈ ಹನ್ನೆರಡನೇ ತಾರೀಖು, ಯಾದಿನಾ ಅನ್ನೂದು ನೆನಪು ಅದ ಹೌದಲ್ಲೊ?

ತಾಯವ್ವ ನಗುತ್ತ ಕೇಳಿದಳು.

"ಚಂದಣ್ಣ ಹುಟ್ಟಿದ ದಿನಾ ಅದು. ನಾ ಹ್ಯಾಂಗ ಮರತೇನು? ಜುಲೈ ಹನ್ನೆರಡನೆಯ ತಾರೀಖು ಹಗಲು ಹತ್ತೂವರೆ ಗಂಟೆ ಹೌದಲ್ಲೊ?

'ಒಳ್ಳೇ ನೆನಪ ಇಟ್ಟೀರಿ ನೀವು. ನನಗಂತೂ ಈ ತಾರೀಖು, ವ್ಯಾಳ್ಯಾ ಸಾಯೂತನಕಾ ಮರಿಯೂ ಹಂಗಿಲ್ಲ."

ಅಂದಿನಿಂದ ಚಂದಣ್ಣನನ್ನು ಮುಂಬಯಿಯಲ್ಲಿ ಓದಿಸುವ ಸಿದ್ಧತೆಗಾಗಿ ಸರ್ವ ಪ್ರಯತ್ನಗಳು ನಡೆಯತೊಡಗಿದವು. ಚಂದ್ರಶೇಖರನು ತನ್ನ ಇದ್ದಬಿದ್ದ ವರ್ಚಸ್ಸನ್ನೆಲ್ಲ ವೆಚ್ಚಮಾಡಿ ಮುಂಬಯಿಗೆ ವರ್ಗವಾಗುವ ಹಾಗೆ ಏರ್ಪಾಡು ಮಾಡಿಕೊಂಡನು. ಜುಲೈ ತಿಂಗಳ ಹದಿಮೂರನೆಯ ತಾರೀಖು ಆರ್ಡರು ಕೂಡ ಬರಬಹುದೆಂದು ಅನ್ನಿಸತೊಡಗಿತು.

ವರ್ಗವಾಗುವದು ನಿಶ್ಚಯವಾದ ಕೂಡಲೆ ದಂಪತಿಗಳು ಮುಂಬಯಿಯಲ್ಲಿ ಚಂದಣ್ಣನ

ಅನುಕೂಲಕ್ಕಾಗಿ ಯೋಗ್ಯ ವಸತಿಯನ್ನು ಪಡೆದುಕೊಳ್ಳಲು ಪ್ರಯತ್ನ ಮಾಡತೊಡಗಿದರು.

"'ಮಲಬಾರ ಹಿಲ್' ನಾಗ ನೋಡರಿ ಸುಮ್ಮ."

"ಗಿರಗಾವದಾಗ . . . ."

"ಥೂ! . . . ಥೂ! . . . ನಾವೇನ ಕೂಲಿಯವರೇನು?"

"ನೋಡೂಣು! ನೋಡೂಣು!"

ಚಂದ್ರಶೇಖರ ಹೆಂಡತಿಯೊಡನೆ ವಾದ ಮಾಡಲು ಮನಸ್ಸಿಲ್ಲದೆ ಹೇಳತೊಡಗಿದನು.

ಚಂದಣ್ಣ ಹನ್ನೊಂದು ವರುಷದ ಮಗುವಾದರೂ ಇಪ್ಪತ್ತರ ತರುಣನ ದೇಹ ಸೌಭಾಗ್ಯವನ್ನು ಪಡೆದಿದ್ದನು. ಅವನ ಆಕೃತಿ ಭವ್ಯವಾಗಿತ್ತು, ರೂಪ ಕಣ್ಣು ಕೋರೈಸುವಂತಿತ್ತು, ಬುದ್ಧಿಯಂತೂ ಆ ವಯಸ್ಸಿನ ಎಲ್ಲರನ್ನೂ ಮೀರಿಸಿತ್ತು.

'ಡೆಕ್ಕನ ಜಮಖಾನಾ'ದ ಅಟ್ಟದ ಮೇಲೆ ನಿಂತು ಮಗನು ಶಾಲೆಯಿಂದ ಬರುವದನ್ನು ನೋಡುವ ಅಭ್ಯಾಸವನ್ನು ರೂಢಿಸಿಕೊಂಡಿದ್ದಳು ತಾಯವ್ವ! ದೂರಿನಿಂದ ಬರುವ ಮಗನನ್ನು ಕಣ್ಣುತುಂಬಾ ನೋಡಿ ಅವನು ಬಾಗಿಲಿಗೆ ಬರುತ್ತಲೆ 'ದೃಷ್ಟಿ'ಯನ್ನು ತೆಗೆಯುತ್ತಿದ್ದಳು; 'ಲಟಕು ಮುರಿದು' ಈ ತಾಯಿ.

ಆ ದಿನ 'ಬಾಲ್ಕನಿ'ಯ ಮೇಲೆ ಈ ದಂಪತಿಗಳು ಮಗನು ಬರುವ ದಾರಿ ಕಾಯುತ್ತಿದ್ದರು. ಅವನು ದೂರದಲ್ಲಿ ಬರುವದನ್ನು ನೋಡಿದ ತಾಯವ್ವ ಗಂಡನಿಗೆ ಹೇಳಿದಳು.

"ಈ ಭೂಪನ ಕೈಹಿಡಿಯುವ ಮಹಾರಾಣಿ . . . ."

"ಮೊದಲು ಇಂಗ್ಲಂಡಿಗಂತೂ ಹೋಗಿ ಬರಲಿ. ಈಗಲೇ ಮದುವೆಯ ಮಾತನ್ನು ಆಡಬೇಡ. ಇನ್ನೂ ಮೀಸೆ ಬಾರದವನಿಗಾಗಿ ಮದುವೆಯ ವಿಚಾರ . . . ."

"ವಿಚಾರ ಮಾಡದಿದ್ದರೆ ಹೇಗೆ? ನಾಳೆ ಅವನು ಇಂಗ್ಲಂಡಿನಿಂದ 'ಮಡ್ಡಮ್ಮ' ನನ್ನು ಕರೆದುಕೊಂಡು ಬಂದರೆ . . ."

"ನೀನೂ 'ಗಗ್ರ' ಉಟ್ಟುಕೊಂಡರಾಯಿತು."

ಇಬ್ಬರೂ ಪುಷ್ಕಳವಾಗಿ ನಕ್ಕರು. ಆ ನಗೆಯ ಮಲ್ಲಿಗೆಗಳನ್ನು ಹೃದಯದ ತಟ್ಟೆಯಲ್ಲಿಟ್ಟು ಮಗನ 'ದೃಷ್ಟಿ' ತೆಗೆದಳು ಆ ದಿನ ತಾಯಮ್ಮ.

೪

ಜುಲೈ ಒಂಭತ್ತನೇ ತಾರೀಖು.

ಒಂದೇ ಸವನೆ ಮಳೆ ಬೀಳತೊಡಗಿದೆ. ಪುಣೆಯ ಪಟ್ಟಣದಲ್ಲಿ ಎಲ್ಲ ಕಡೆಗೂ ನೀರೇ ನೀರಾಗತೊಡಗಿದೆ. ಆದರೂ ಇದು ವರುಷದ ಮಾಮೂಲಿನ ಮಳೆಯಾಗಿದ್ದರಿಂದ ದೈನಂದಿನ ಜೀವನ ಯಾವ ಆತಂಕವಿಲ್ಲದೆ ನಡೆಯುತೊಡಗಿದೆ.

"ಈ ಮಳೆಯಲ್ಲಿ ಇಪ್ಪತ್ತು ಮೂವತ್ತು ಜನರಿಗೆ ಮೇಜವಾನಿಯ ಅಡಿಗೆಯನ್ನು ಹೇಗೆ ಮಾಡಬೇಕೋ ತಿಳಿಯದು."

ತಾಯವ್ವ ಗಂಡನಿಗೆ ಸ್ವಾರ್ಫನ್ನು ಹೊದಿಸುತ್ತ ಕೇಳಿದಳು.

"ಹನ್ನೆರಡನೆಯ ತಾರೀಖು ಇನ್ನೂ ಮೂರುದಿನ ಇದೆ. ಚಂದಣ್ಣನ ಜನ್ಮದಿನ ಈ ಸಲ 'ಬಾದಶಾಹಿ' ಯಲ್ಲಿ ಆದರೂ ಏನು ತಪ್ಪು?"

"ಇದ್ದೊಬ್ಬ ಮಗನ ಜನ್ಮದಿನೋತ್ಸವ ಖಾನಾವಳಿಯಲ್ಲಿ ಆಗಬೇಕೆ?"

"ಆಗಬಾರದು. ಆದರೆ ಈ ಮಳೆಬಿಡುವಂತೆ ಕಾಣುವದಿಲ್ಲ."

"ಪುಣೆಯ ಪ್ರಾಣವನ್ನೇ ತೆಗೆದುಕೊಳ್ಳುವಂತೆ ಕಾಣುತ್ತದೆ ಈ ದರಿದ್ರ ಮಳೆ."

ಮೂರು ದಿನಗಳಿಂದಲೂ ಮಳೆ ಸುರಿಯುತ್ತಲೇ ಇದೆ, ನದಿಯ ನೀರು ದಂಡೆಗಳನ್ನು ಅಪ್ಪಳಿಸಿ ಅಬ್ಬರಿಸತೊಡಗಿದೆ.

"ಈ ಸಲ ಏನೋ ಅವಲಕ್ಷಣ ಕಾಣುತ್ತದೆ ತಾಯಾ! ಇಂಥ ಮಳೆ, ನದಿಯ ನೊರೆತಗಳನ್ನು ನಾನು ನೋಡಿಯೇ ಇಲ್ಲ."

"ನಮಗೇನಾಗುತ್ತದೆ ಬಿಡಿರಿ. ನಾವು ಎಷ್ಟಂದರೂ 'ಡೆಕ್ಕನ್ ಜಮಖಾನಾ'ದ ಮಹಡಿಯ ಮೇಲೆ ಇರುವವರು."

"ನಮ್ಮ ಮಾತು ಬೇರೆ . . ."

"ಮತ್ತೆ ಯಾವ ಹೆದರಿಕೆ ನಿಮಗೆ?"

"ಹೆದರಿಕೆ ಎಲ್ಲಿ ಬಂತು. ಊರಲ್ಲಿ ಏನೋ ಪಿಸುಮಾತು ನಡೆಯುತ್ತಿದೆ."

"ಯಾವ ಮಾತು?"

"ಅಣೆಕಟ್ಟು ಸೀಳಿದೆಯಂತೆ!"

"'ಖಡಕವಾಸಲಾ' ದ್ದೆ."

"ಹೂಂ!"

"ಸುಳ್ಳು ಮಾತು. ಯಾರ ಅಪ್ಪನಿಗೂ ಅದು ಒಡೆಯುವದಿಲ್ಲ. ಹತ್ತು ಇಂಜನೀಯರ ತಲೆ ಅದನ್ನು ರೂಪಿಸಿದೆ."

"ಒಡೆದುಹಾಕು ಈ ತಲೆಗಳನ್ನು."

ಚಂದ್ರಶೇಖರ ತುಸು ವ್ಯಗ್ರವಾಗಿಯೇ ನುಡಿದನು.

ಮರುದಿನ ಮುಂಜಾನೆ ಚಂದಣ್ಣ ಮನೆಯಲ್ಲಿರಲಿಲ್ಲ.

ಆಗಲೇ ಅವನು 'ಶಿಕವಣಿ' ಗಾಗಿ ಹೋಗಿಬಿಟ್ಟಿದ್ದ.

"ಚಂದೂ ಎಲ್ಲಿ ತಾಯಾ?"

"ಶಿಕವಣಿಗೆ ಹೋಗಿದ್ದಾನೆ.

"ಈ ಮಳೆಯಲ್ಲಿ?"

"ಕಾಲಲ್ಲಿ ರಬ್ಬರು ಬೂಟ್ಸು ಹಾಕಿಕೊಂಡು ಓವ್ಹರಕೋಟ ಹೊದ್ದುಕೊಂಡು, ಚತ್ತರಿಗೆಯನ್ನು ಹಿಡಿದುಕೊಂಡು ಹೋಗಿದ್ದಾನೆ....."

"ನಿನಗೆ ಬುದ್ಧಿಯೇ ಇಲ್ಲ.... ಪಾನಸೇಟ್ ... ಪಾನಸೇಟ್ ಡ್ಯಾಮ್..."

"ಏನಾಗುತ್ತದೆ?"

ಚಂದ್ರಶೇಖರ ಸರ್ರನೇ ಕೆಳಗಿಳಿದು ಬೀದಿಗುಂಟ ಓಡುವ ವೇಗದಲ್ಲಿ ನಡೆಯತೊಡಗಿದ. ಸಾಧ್ಯವಿದ್ದಷ್ಟು ಬೇಗನೆ ಮಗನನ್ನು ಮನೆಗೆ ಕರೆದುಕೊಂಡು ಬರಬೇಕೆಂಬುದೇ ಅವನ ಈ ಅವಸರಕ್ಕೆ ಕಾರಣವಾಗಿತ್ತು.

ಮಳೆ ಬೀಳುತ್ತಲೇ ಇತ್ತು. ಜುಲೈ ಹನ್ನೆರಡನೆಯ ತಾರೀಖು; ಚಂದಣ್ಣನ ಜನ್ಮದಿನ. ಎಲ್ಲರೂ 'ಬಾದಶಾಹಿ'ಗೆ ಹೋಗಿ ಮೇಜವಾನಿ .... ಹತ್ತೂವರೆ ಗಂಟೆಗೆ..... ಚಂದೂ ಜನಿಸಿದ ವೇಳೆ ಅದು.

ತಾಯವ್ವ ಬಾಲ್ಕನಿಯಲ್ಲಿಯೇ ನಿಂತುಕೊಂಡಿದ್ದಳು. ಗಂಡನು ಬರುವ ದಿಕ್ಕಿನ ಕಡೆಗೆ ಅವಳ ದೃಷ್ಟಿಯಿತ್ತು. ಮಗನ ಬರುವಿನ ಕಡೆಗೆ ಅವಳ ಲಕ್ಷ್ಯವಿತ್ತು.

ಸುಮಾರು ಹತ್ತು ಗಂಟೆಗೆ ಬೀದಿಯಲ್ಲಿ ಜನ ಕೂಗಾಡತೊಡಗಿತು....

"ಎಚ್ಚರ....ಎಚ್ಚರ.... ಪಾನಸೇಟ್ ಒಡೆಯಿತು.. ..ಪಾನಸೇಟ್.. ... ಒಡೆಯಿತು...."

ತಾಯವ್ವ ಚಿಟ್ಟನೇ ಚೀರಿ ಕೂಗಿದಳು. ಚಂದೂ! ಚಂದಣ್ಣ!! ಚಂದಪ್ಪ!!

"ಮಾತಾಡು ತಾಯಾ! ಮಾತಾಡು!

'ಲಕಡೀ ಪೂಲಿ'ನ ಹತ್ತರ ಮೂರು ದಿನಗಳಿಂದಲೂ ನಿಂತ ಮೂಕಿಯಾದ ಹೆಂಡತಿಯನ್ನು ಒಂದೇ ಸವನೆ ಚಂದ್ರಶೇಖರ ಕೇಳತೊಡಗಿದನು.

ಅವನ ಮುಖ ಹೀರಿಹೋಗಿತ್ತು! ಕೂದಲು ಕೆದರಿದ್ದವು! ವಸ್ತ್ರಗಳೆಲ್ಲ ನವಛಿದ್ರವಾಗಿದ್ದವು.

"ಮಾತಾಡುವದಿಲ್ಲವೆ?"

ತಾಯವ್ವನು ದವಡಿ ಬಿಗಿದವಳಂತೆ ಮುಖವನ್ನು ಮುದುಡಿಸಿಕೊಂಡು ಕೈಮಾಡಿದಳು.

ಮಗುವೆಲ್ಲಿ? ಎಂದು ಕೇಳುವ ಸಂಕೇತವೇ ಅದಾಗಿತ್ತು?

"ಎಲ್ಲಿಂದ ತರಲಿ ತಾಯಾ? ನಿನ್ನ ಮಗನು ಈ...... ಅಯ್ಯೋ! ಅಲ್ಲಿ ನೋಡು..... ನಿನ್ನಂಥ ನೂರಾರು ತಾಯಂದಿರು.. ಬಾ ..ಬಾ.... ತಾಯಾ!"

ತಾಯಾ ಕೈ ಕೊಸರಿಕೊಂಡಳು. ಹತ್ತರವಿದ್ದ ಬಡಿಗೆಯನ್ನು ತೆಗೆದುಕೊಂಡು ಅಲ್ಲಿ ನಿಂತ ನೀರನ್ನು ರಪ ರಪ ಹೊಡೆಯತೊಡಗಿದಳು.

ದಣಿವಾಗಿ ಬಿದ್ದುಕೊಂಡಳು ತಾಯಾ! ಆದರೆ ಮಾತಿಲ್ಲ....ದನಿಯಿಲ್ಲ....

ಚಂದ್ರಶೇಖರನಿಗೆ ದಿಕ್ಕೇ ತೋಚದಂತಾಯಿತು. ಅವಳನ್ನು ಹಿಂಬಾಲಿಸುತ್ತ ಹೋಗುವದೇ ಅವನ ಕೆಲಸವಾಗಿ ಬಿಟ್ಟಿತು. ತಾಯವ್ವ ಓಡುತ್ತ ನಾರಾಯಣಪೇಟೆಗೆ ಬರುವಳು. ಅಲ್ಲಿ ಬಿದ್ದ ಮನೆಗಳನ್ನು ನೋಡಿ ಬಾಯಿ ಬಾಯಿ ಬಡೆದುಕೊಳ್ಳುವಳು. ಶನಿವಾರ-

ಪೇಟೆಯ ಸುತ್ತಿನಲ್ಲಿ ಕಸಬಾಪೇಟೆಯ ಕಂದೀಲುಕಟ್ಟೆಯ ಮೇಲೆ ತಾಯಾ ತಾಸು ತಾಸು ಕೂಡುತ್ತಿದ್ದಳು....

ಚಂದ್ರಶೇಖರನಿಗೆ ಆದ ದುಃಖಕ್ಕೆ ಲೆಕ್ಕ ವಿರಲಿಲ್ಲ. ಆದರೆ ಹೆಂಡತಿಯ ಅಳಲನ್ನು ನೋಡುವದು ಮಾತ್ರ.... ಅವನಿಂದ ಸಾಧ್ಯ ವಾಗದಾಯಿತು.

"ಈ ಜಲದೇವಿಗೆ ನಿನ್ನ ಮಗನ ಅರ್ಪಣೆ ಯಾಗಿದೆ ತಾಯಾ? .... ನನ್ನ ಮಾತು ಕೇಳು. ಊಟ ಮಾಡು ... ಒಂದು ತುತ್ತು ನುಂಗಿ, ಒಂದು ಮುಕ್ಕು ನೀರು ಕುಡಿ."

ಹಕ್ಕಿ ಬಾಯಿ ಬಿಡುವಂತೆ ಚಂದ್ರಶೇಖರ ಕೇಳಿದನು.

ತಾಯುವ್ವ ಆ ಕೂಳಿನ ತಟ್ಟೆಯನ್ನು ಭರ‍್ರನೇ ಕಸಿದುಕೊಂಡು ಸರ‍್ರನೆ ತೂರಿ ಒಗೆದು ಬಿಟ್ಟಳು....

"ತಾಯಾ! ತಾಯಾ! ಏನು ಮಾಡಲಿ ದೇವರೆ!!"

ಚಂದ್ರಶೇಖರ ಕೂಸಿನಂತೆ ಅತ್ತುಬಿಟ್ಟನು.

ದೂರದಲ್ಲಿ ತದ್ರೂಪ ಚಂದಣ್ಣನನ್ನು ಹೋಲುವ ಬಾಲಕನೊಬ್ಬನು ಬರುತ್ತಿರುವದನ್ನು ತಾಯಾ ನೋಡಿ ಕಣ್ಣು ಹಿಗ್ಗಿಸಿದಳು. ಬರುತ್ತಿರುವ ಆ ಮಗುವನ್ನು ಅವಳು ಒಂದೇ ಸವನೆ ಕಣ್ಣು ರೆಪ್ಪೆ ಬಡೆಯದೆ ನೋಡತೊಡಗಿದಳು.

ಕುಳಿತ ಸ್ಥಳದಿಂದ ತಾಯುವ್ವ ಮೇಲೆದ್ದಳು.

ನಿಟ್ಟಿಸಿ ನಿಟ್ಟಿಸಿ ಆ ಹುಡುಗನನ್ನು ಕಣ್ಣು ಅಗಲ ಮಾಡಿ ನೋಡತೊಡಗಿದಳು.

ಕಣ್ಣೊಳಗಿಂದ ಬಳ ಬಳ ನೀರು ಸುರಿಯ ತೊಡಗಿತು.

ಈ ಮೂರು ದಿನಗಳಿಂದಲೂ ತಾಯುವ್ವ ಅತ್ತಿರಲಿಲ್ಲ. ಈಗ ಅಳಹತ್ತಿದಳು. ಇದು ಶುಭಸೂಚಕವೆಂದು ಚಂದ್ರಶೇಖರನಿಗೆ ಅನ್ನಿಸಿತು.

ಅವನು ಅವಳನ್ನು ಸಮಾಧಾನ ಮಾಡುವ ಗೊಡವೆಗೆ ಹೋಗಲಿಲ್ಲ.

ತಾಯುವ್ವ ಒಂದು ಹೆಜ್ಜೆ ಮುಂದಿಟ್ಟಳು.

ಅವಳ ಮುಖ ಇಷ್ಟಗಲವಾಯಿತು.

"ಚಂದೂ! ಚಂದಣ್ಣ!! ಚಂದಪ್ಪ!!!"

ಎಂದು ಕೂಗುತ್ತ ಓಡತೊಡಗಿದಳು. ಆದರೆ ಐದು ದಿನಗಳ ಉಪವಾಸದಲ್ಲಿ ಈ ತಾಯಿ ಓಡಬಹುದೆ?

ದೊಪ್ಪನೆ ಬಿದ್ದುಬಿಟ್ಟಳು.

ಚಂದ್ರಶೇಖರನು ಹೆಂಡತಿಯನ್ನು ತೊಡೆಯ ಮೇಲೆ ಹಾಕಿಕೊಂಡು ಮೃದುವಾಗಿ ಅವಳ ಕಣ್ಣುರೆಪ್ಪೆಯ ಮೇಲೆ ಕೈಯಾಡಿಸುತ್ತ ಹೇಳಿದನು.

"ಇನ್ನೊಮ್ಮೆ ಚಂದಣ್ಣನ ಹೆಸರು ಹಿಡಿದು ಕೂಗು ತಾಯಾ!"

ಆದರೆ ಅವಳು ಕೂಗಲಿಲ್ಲ.

ಈಗಲೂ ಒಬ್ಬ ಹೆಂಗಸು 'ಲಕಡೀಫೂಲಿ'ನ ಕೆಳಗೆ ಒಂದು ದಿನ, ಶನಿವಾರಪೇಟೆಯ ತಿರುವಿನ ಹತ್ತರ ಒಂದು ದಿನ, ನದಿಯ ದಂಡೆಯ ಮೇಲೆ ಒಂದು ದಿನ ಕಾಣಸಿಗುತ್ತಾಳೆ.

ಆದರೆ ಅವಳು ಯಾರೊಡನೆಯೂ ಮಾತಾಡುವದಿಲ್ಲ.

ಒಂದೊಂದು ದಿನ ಅವಳು ಒಂದು ಉದ್ದವಾದ ಕೋಲಿನಿಂದ 'ಮುಳಾ-ಮುಠಾ' ನದಿಯ ನೀರನ್ನು ರಪರಪ ಹೊಡೆಯುವದೂ ಉಂಟು.

ವರದಕ್ಷಿಣಾಪ್ರತಿಬಂಧಕ ಕಾಯ್ದೆಯ ಪರಿಣಾಮಗಳು

ಬರೆದವರು :
ಶ್ರೀಮತಿ ಸರೋಜಿನಿ ಮಹಿಷಿ,
ಎಂ. ಎ., ಎಲ್‌ಎಲ್. ಬಿ.
ಧಾರವಾಡ

ವರದಕ್ಷಿಣಾಪ್ರತಿಬಂಧಕ ವಿಧೇಯಕವನ್ನು ಪಾಸು ಮಾಡಲು ಭಾರತೀಯ ಸಂಸತ್ತಿನ ಸಂಯುಕ್ತಾಧಿವೇಶನವನ್ನು ಪ್ರಥಮಸಲ ಕರೆಯಬೇಕಾಯಿತೆಂಬ ದೃಷ್ಟಿಯಿಂದ ಈ ಕಾನೂನು ಸಾಮಾಜಿಕ ಕಾನೂನುಗಳಲ್ಲಿಯೇ ಮಹತ್ವದ್ದೇನೋ ಎನ್ನಬಹುದಾಗಿದೆ. ವಿಕೃತವಾದ ವಿರಾಟ ಸ್ವರೂಪವನ್ನು ತಾಳಿರುವ ವರದಕ್ಷಿಣೆಯ ಸಮಸ್ಯೆಯನ್ನು ನಿಯಂತ್ರಣದಲ್ಲಿ ಇಡಲು ಇದೊಂದು ಪ್ರಯತ್ನ ಅಷ್ಟೆ! ಆದರೆ ಬಹುದಿನಗಳಿಂದ ವರದಕ್ಷಿಣೆಯ ಪರಂಪರೆಯನ್ನು ಅಚ್ಚಳಿಯದೆ ಕಾಯ್ದುಕೊಂಡು ಬಂದವರ ಮನಸ್ಸಿನ ಮೇಲೆ ಇದರಿಂದ ಯಾವ ಪ್ರತಿಕ್ರಿಯೆಯಾಯಿತು ಎಂಬುದು ಮಾತ್ರ ಗಮನಿಸಬೇಕಾದ ವಿಷಯ. ಸಂಸತ್ತಿನ ಅಧಿವೇಶನದ ಸಮಯದಲ್ಲಿಯೂ ಈ ವಿಧೇಯಕದ ಬಗ್ಗೆ ತುರುಸಿನ ಭಿನ್ನಾಭಿಪ್ರಾಯ ಕಂಡುಬಂತು. ತೀವ್ರ ಸಾಮಾಜಿಕ ಬದಲಾವಣೆಯನ್ನು ಬಾಯಿ ಮಾತಿನಿಂದ ಒಪ್ಪಿಕೊಳ್ಳುವವರೂ ಅದನ್ನು ಕೃತಿಯಲ್ಲಿ ತರಬೇಕಾದ ಪ್ರಸಂಗ ಬಂದಾಗ ಹಿಂಜರಿದರು. ರೂಢಿಗತ ಅಂಧಶ್ರದ್ಧೆಗಳು ಬಹುಕಾಲದಿಂದ ಬೆಳೆದು ಪರಂಪರೆಯಾಗಿ ಪ್ರಿಯವಾಗಿವೆ ಎಂಬುದು ಇದರಿಂದ ಸ್ಪಷ್ಟವಾಯಿತು. ೧೯೫೫ರಲ್ಲಿ ಹಿಂದೂ ಕಾಯಿದೆಯ ಕ್ರೋಢೀಕರಣ ವಿಧೇಯಕವು ಪಾರ್ಲಿಮೆಂಟಿನ ಎದುರು ಇದ್ದಾಗಲೂ ಪರಂಪರಾಪ್ರಿಯರನೇಕರು ವಿರೋಧವನ್ನು ವ್ಯಕ್ತಗೊಳಿಸಿದ್ದರು. ಅದು ಸ್ವಾರ್ಥದಿಂದಲೂ ಇದ್ದಿರಬಹುದು. ಪರಿಶೀಲನೆಯ ಮನೋವೃತ್ತಿ, ಪರೀಕ್ಷಿಸಿ ಒಪ್ಪಿಕೊಳ್ಳುವ ಧೈರ್ಯಸಾಹಸಗಳು ಬಹುಸಂಖ್ಯಾಕ ಭಾರತೀಯರಲ್ಲಿ ಇಲ್ಲವೇ ಇಲ್ಲ. ಇಂದು ಈ ಬಹುಸಂಖ್ಯಾಕರ ಹಿತವನ್ನೇ ದೂರದೃಷ್ಟಿಯಿಂದ ಯೋಚಿಸಬೇಕಾದುದು ಅಗತ್ಯವಾಗಿದೆ.

ಹಿಂದೂ ಕೋಡ ಬಿಲ್ಲು ವಿವಾಹವಿಚ್ಛೇದ, ವಾರಸಾ, ದತ್ತಕ ವಿಭಾಗಗಳೆಂದು ಭಾಗಭಾಗವಾಗಿ ಪಾಸಾದ ಮೇಲೆ, ತಂದೆಯ ಆಸ್ತಿಯಲ್ಲಿ ಕನ್ಯೆಯೂ ಹಕ್ಕಿನಿಂದಲೇ ಪಾಲುಗಾರ್ತಿಯಾಗಬಲ್ಲಳೆಂಬುದನ್ನು ಒಪ್ಪಿದ ಮೇಲೆ ವರದಕ್ಷಿಣೆಯ ಸಂಪ್ರದಾಯವು ಅಳಿದುಹೋಗಬೇಕೆಂಬುದು ತರ್ಕಬದ್ಧವಾದುದೇ; ಅವಳಿಗೆ ಯಾವುದೇ ತರದ ಆಸ್ತಿ ಒಟ್ಟು ಕುಟುಂಬದಲ್ಲಿ ದೊರೆಯದೆಯಿದ್ದಾಗ ವರದಕ್ಷಿಣೆಯ ರೂಪದಲ್ಲಿ ಆಕೆ ಉತ್ಪನ್ನದ ಕೆಲವಂಶವನ್ನು ಒಂದು ಸಲ ಒಯ್ಯುತ್ತಿದ್ದಳು. ಈಗ ಆಸ್ತಿಯಲ್ಲಿಯೇ ಪಾಲು ದೊರೆತ ಮೇಲೆ ಪುನಃ ವರದಕ್ಷಿಣೆ ಯಾಕೆ? ಆದರೆ ಈ ತರ್ಕ ಅನೇಕರಿಗೆ ಹಿಡಿಸದು!

ವರದಕ್ಷಿಣೆ–ಕನ್ಯಾಶುಲ್ಕ

ಸಾಮಾಜಿಕ ಇತಿಹಾಸದ ಪುಟಗಳನ್ನು ಮಗುಚಿ ಹಾಕಿದಾಗ ವರದಕ್ಷಿಣೆ-ಕನ್ಯಾಶುಲ್ಕಗಳೆರಡೂ ವಿವಾಹಸಂಸ್ಥೆಯ ಇತಿಹಾಸದಲ್ಲಿ ಜೊತೆ ಜೊತೆಯಾಗಿಯೇ ಇದ್ದುದು ಕಂಡುಬರುತ್ತದೆ. ಕನ್ಯೆಯನ್ನು ದಾನವಾಗಿ ಕೊಡುವದು ಬಳಕೆಯಲ್ಲಿ ಬಂದಾಗಿನಿಂದ ವರನಿಗೆ ದಕ್ಷಿಣೆ ಸಹಿತ ದಾನವನ್ನು ಕೊಡುವದು ಪ್ರಚಾರದಲ್ಲಿ ಬಂತು. ಆರ್ಯರ ಪಿತೃಪ್ರಧಾನ ಕುಟುಂಬ ಪದ್ಧತಿಯಲ್ಲಿಯೇ ಇದಕ್ಕೆ ಮನ್ನಣೆ ದೊರೆತದ್ದು. ಮಾತೃಪ್ರಧಾನ ಕುಟುಂಬ ಪದ್ಧತಿಯಲ್ಲಿ ವರದಕ್ಷಿಣೆಗೆ ಅಸ್ತಿತ್ವವೇ ಇಲ್ಲ.

> ಹಿಂದು ಸಮಾಜಕ್ಕೆ ವರದಕ್ಷಿಣೆ ಒಂದು ಕಲಂಕದ ರೂಪದಲ್ಲಿದ್ದರೂ ಅದನ್ನು ನಿವಾರಿಸಲು ಭಾರತ ಸರಕಾರ ಶಾಸನವನ್ನೇ ಮಾಡಬೇಕಾಯಿತು. ಸಂಸತ್ತಿನ ಸಂಯುಕ್ತ ಅಧಿವೇಶನದಲ್ಲಿ ಈ ಶಾಸನದ ಅಂಗೀಕಾರವಾಗಿ ಈಗ ಜಾರಿಗೆ ಬಂದಿದೆ. ಆದರೆ ಈ ಶಾಸನವಾದ ಮಾತ್ರಕ್ಕೆ ಈ ಪದ್ಧತಿ ಪೂರ್ಣ ಅಳಿದುಹೋಗಬಹುದೆಂದು ಹೇಳಲಾಗುವುದಿಲ್ಲ. ಆ ದಿಸೆಯಲ್ಲಿ ಇದೊಂದು ಮಹತ್ವದ ಹೆಜ್ಜೆ. ಸಾಮಾಜಿಕ ಕಾರ್ಯಕರ್ತರು ಮಹಿಳೆಯರು ಈಗ ತಕ್ಕ ವಾತಾವರಣ ನಿರ್ಮಿಸಬೇಕಾಗಿರುವುದು.

ದಾನ-ದಕ್ಷಿಣೆಗಳನ್ನು ಕೊಡುವವರು ಸ್ವಸಂತೋಷದಿಂದ ಕೊಡುತ್ತಾರೆ ಹೊರತು ಒತ್ತಾಯಕ್ಕೆ ಒಳಗಾಗಿ ಕೊಡುವದಿಲ್ಲ. ಜನಕ ರಾಜನು ಸೀತೆಯೊಡನೆ ಪತಿಗೃಹಕ್ಕೆ ದಾಸದಾಸಿಯರನ್ನು ಕಳಿಸಿದ ಉದಾಹರಣೆ ವಾಲ್ಮೀಕಿರಾಮಾಯಣದಲ್ಲಿದೆ. ರಾಮನು ವನಕ್ಕೆ ಹೊರಟಾಗ ಕೌಸಲ್ಯೆಯ ಗತಿಯೇನು ಎಂದು ಯೋಚಿಸಿದಾಗ ತನ್ನ ತಂದೆಯ ಮನೆಯಿಂದ ತಂದ ಆಸ್ತಿಯನ್ನೇ ಅವಳು ಉಪಯೋಗಿಸಿಕೊಳ್ಳಲೆಂದು ಲಕ್ಷ್ಮಣನು ಸೂಚಿಸುತ್ತಾನೆ.

ಭಾರತದ ಮೇಲಾದ ಪರಕೀಯರ ದಾಳಿಯಿಂದ ರಾಜಕೀಯ ಕ್ಷೇತ್ರದಲ್ಲಾದ ಪರಿಣಾಮದ ಪ್ರಭಾವವು ಸಾಂಸ್ಕೃತಿಕ ಧಾರ್ಮಿಕ ಕ್ಷೇತ್ರಕ್ಕೂ ಕ್ರಮೇಣ ಹಬ್ಬಿಕೊಂಡಿತು. ಕನ್ಯೆಯ ವಿವಾಹವನ್ನು ಬೇಗನೆ ಮಾಡಿ ಹೊಣೆಯಿಂದ ಪಾರಾಗಬೇಕೆಂಬ ತಾಯಿತಂದೆಗಳಿಗೆ ಸ್ಮೃತಿಕಾರರ ಪ್ರೋತ್ಸಾಹವು ದೊರೆಯಿತು. ಎಂಟು ವರ್ಷದ ಮಗಳನ್ನು ಬ್ರಾಹ್ಮವಿಧಿಯ ಮೇರೆಗೆ ವೇದವಿದನಿಗೆ ದಾನವಾಗಿ ಕೊಟ್ಟರೆ ಅನೇಕ ತಲೆಮಾರಿನ ಪಿತೃಗಳೆಲ್ಲ ನರಕದಿಂದ ಸ್ವರ್ಗಕ್ಕೆ ವರ್ಗಾಯಿಸಲ್ಪಡುತ್ತಾರೆ ಎಂಬ ಆಶ್ವಾಸನೆ ದೊರೆತಿತು. ಇಷ್ಟು ಸಹಜವಾಗಿ ಪಿತೃಗಳನ್ನು ನರಕದಿಂದ ಸ್ವರ್ಗಕ್ಕೆ ಕಳಿಸಲು ಯಾವ ಪುತ್ರನು ಅಪೇಕ್ಷಿಸಲಿಕ್ಕಿಲ್ಲ?

ಕನ್ಯಾ–ದಾನ

ಕನ್ಯೆಯನ್ನು ದಾನವಾಗಿ ಆದಷ್ಟು ಬೇಗನೆ ಕೊಡಲು 'ಸತಿ' ಪದ್ಧತಿಯೂ ಪ್ರಚೋದನೆಯನ್ನಿತ್ತಿತು. ತಾಯಿ ತಂದೆಗಳಿಲ್ಲದ ಮಗು ಅತ್ತೆ ಮಾವಂದಿರ ಆಶ್ರಯವನ್ನಾದರೂ ಪಡೆಯಲಿ ಎಂಬ ಉದ್ದೇಶವೇ ಈ ಅಲ್ಪ ವಯಸ್ಸಿನ ಬಾಲಕಿಯ ಕನ್ಯಾದಾನದಲ್ಲಿತ್ತು. ಬ್ರಾಹ್ಮವಿವಾಹದಲ್ಲಿ ಬಳಕೆಗೆ ಬಂದ 'ದಾನ'ದ ವಿಚಾರವು ಅಸುರ, ಗಾಂಧರ್ವ, ರಾಕ್ಷಸ ಪೈಶಾಚ ವಿವಾಹಗಳಲ್ಲಿ ಸುಳಿಯಲೇ ಇಲ್ಲ. ತನ್ನ ಪರಾಕ್ರಮದಿಂದ ವಧುವನ್ನು ಗೆದ್ದು ತರುವದೇ ಇಲ್ಲಿ ವರನ ಶೌರ್ಯದ ಕುರುಹಾ-

ಗಿತ್ತು. ತೆರವು ತೆತ್ತು ಕನ್ನೆಯನ್ನು ಕೊಳ್ಳುವದೂ ಕೆಲವು ಜನಾಂಗಗಳಲ್ಲಿ ಬೆಳೆದುಬಂತು. ಆದರಲ್ಲಿಯೇ ಮತ್ತೆ ತೆರವು ತೆತ್ತು ಕನ್ನೆಯನ್ನು ಕೊಳ್ಳುವದು ಅಗೌರವವೆನಿಸಿದರೆ, ದಕ್ಷಿಣೆ ಕೊಟ್ಟು ವರನನ್ನು ಕೊಳ್ಳುವದು ಗೌರವವೆಂದು ತಿಳಿಯಲಾಯ್ತು. ಹೆಚ್ಚುವರ-ದಕ್ಷಿಣೆ ಕೊಟ್ಟಷ್ಟೂ ಹೆಚ್ಚು ಗೌರವ! ಕನ್ಯಾಪಿತೃಗಳೂ ಹಾಗೇ ತಿಳಿಯುತ್ತಾರೆ. ವರನ ಪಿತೃಗಳೂ ಹಾಗೇ ತಿಳಿಯುತ್ತಾರೆ. ದಕ್ಷಿಣೆಯ ಮೊತ್ತವನ್ನು ಕೊಡುವದು ಕನ್ಯಾಪಿತೃಗಳಿಗೆ ಕಷ್ಟವಾದರೂ ಮಗಳಿಗೆ ಒಳ್ಳೇ ಮನೆ ಸಿಗಬೇಕಾದರೆ ಕೊಡದೇ ವಿಧಿಯಿಲ್ಲ ಎಂಬ ನಿರ್ಣಯಕ್ಕೆ ಬಂದು ಅಸಹಾಯರಾಗಿ ಕೊಡುತ್ತಾರೆ. ತಾವು ಅಸಮರ್ಥರು ಎಂದು ಹೇಳುವದು ಕನ್ಯಾಪಿತೃಗಳಿಗೆ ಚಟವೇ ಆಗಿದ್ದರೆ ಅದಷ್ಟು ಹೆಚ್ಚು ಹಣವನ್ನು ಅವರಿಂದ ಗಿಟ್ಟಿಸುವದೇ ತಮ್ಮ ಜಾಣತನವೆಂದು ವರನ ಪಿತೃಗಳ ತಿಳುವಳಿಕೆ. ವರದಕ್ಷಿಣೆಯನ್ನು ಕೊಡಲು ಅಸಮರ್ಥರಾದ ತಾಯಿತಂದೆಗಳು ಕನ್ಯೆಯ ವಿವಾಹವನ್ನೇ ಮಾಡದೆ ಉಳಿದಿರುವ ಸಂದರ್ಭಗಳೂ ಇವೆ. ಇಲ್ಲವೆ ಮನೆ ಹೊಲಗಳನ್ನೆಲ್ಲ ಮಾರಿಕೊಂಡು ಮತ್ತೆ ಸಾಲಮಾಡಿ ದಕ್ಷಿಣೆ ತೆತ್ತ ಉದಾಹರಣೆಗಳೂ ಇವೆ. ವರದಕ್ಷಿಣೆಯ 'ವಿಕೃತ ಸ್ವರೂಪ' ವನ್ನು ಕೈಲಾಸಂ 'ತಾಳೀ ಕಟ್ಟೋಕ್ಕೂಲೀನೇ?' ನಾಟಕದಲ್ಲಿ ಚಿತ್ರಿಸಿದರು. ಆದರೆ ದುರ್ದೈವದಿಂದ, ಮುಂದುವರಿದದ್ದೆಂದು ತಿಳಿಯಲಾದ ಸಮಾಜದಲ್ಲಿಯೂ ವರದಕ್ಷಿಣೆಯ ಹಾವಳಿ ಬೆಳೆಯುತ್ತಲೇ ಇದೆ. ಈ ವರದಕ್ಷಿಣೆಯ ಪರಿಪಾಠವಿದ್ದ ವರ್ಗವು ಮುಂದುವರಿದದ್ದೆಂದು ತಿಳಿದವರು, ತಾವೂ ಇದನ್ನು ಅನುಸರಿಸಲೆತ್ನಿಸುತ್ತಿದ್ದಾರೆ.

ಕನ್ಯಾಪಿತೃಗಳ ಸಾಮರ್ಥ್ಯ

ವರಶೋಧನೆಗೆ ಹೊರಡುವ ಮೊದಲೇ ವರದಕ್ಷಿಣೆ ತೆರಲು ಕನ್ಯಾಪಿತೃಗಳಿಗಿದ್ದ ಸಾಮರ್ಥ್ಯದ ವಿಚಾರವಾಗಿ ಗುಜು ಗುಜು ಮಾತು ಪ್ರಾರಂಭವಾಗುತ್ತದೆ. ವರನ ತಂದೆ, ವರದಕ್ಷಿಣೆ ತೆರಲು ಅಸಮರ್ಥರಾದವರೊಡನೆ ಮಾತನಾಡಲೂ ಇಷ್ಟಪಡುವದಿಲ್ಲ. ವರು ವರುಷವೂ ಪರೀಕ್ಷೆಯನ್ನು ಪಾಸಾಗುವ ಮಗನಿದ್ದರಂತೂ ಕೇಳುವದೇನು? ಅವನು ಹುಟ್ಟಿದಾಗಿನಿಂದ ಆದ ವೆಚ್ಚವನ್ನೆಲ್ಲ ವಧುವಿನ ತಂದೆಯಿಂದ "ನಿಮ್ಮ ಮಗಳಿಗೋಸ್ಕರ ಇವನನ್ನು ಬೆಳೆಸಿದ್ದೇನೆ" ಅನ್ನುವ ರೀತಿಯಲ್ಲಿ ವರನ ತಂದೆ ವಸೂಲ ಮಾಡಲು ಇಷ್ಟಪಡುತ್ತಾನೆ. ಸಾಮಾನ್ಯವಾಗಿ ಇಂತಹ ಸಂದರ್ಭದಲ್ಲಿ ವರನದು ಅಸಹಾಯಪಾತ್ರ! ಇವೆಲ್ಲವುಗಳನ್ನೂ ನಿರ್ಮೂಲಗೊಳಿಸಲು ವರದಕ್ಷಿಣಾವಿಧೇಯಕವು ಯತ್ನಿಸಿದೆ:

ವರದಕ್ಷಿಣಾಪ್ರತಿಬಂಧಕ ವಿಧೇಯಕವು, " ವರದಕ್ಷಿಣೆಯನ್ನು ಕೊಡುವದು ತೆಗೆದುಕೊಳ್ಳುವದು, ಕೊಡಲು ಅಥವಾ ತೆಗೆದುಕೊಳ್ಳಲು ಪ್ರಚೋದನೆಯನ್ನು ಕೊಡುವದು ದಂಡನೀಯವಾಗಿದೆ," ಎಂಬುದನ್ನು ಸ್ಪಷ್ಟಪಡಿಸಿದೆ. 'ವರದಕ್ಷಿಣೆ'ಯೆಂದರೇನೆಂಬುದನ್ನು ವಿವರಿಸಿದೆ.

In this Act, "dowry" means any property or valuable security given or agreed to be given either directly or indirectly.

(*a*) by one party to the marriage to the other party to the marriage.

(*b*) by the parents of either party to the marriage or by any other person to either party to the marriage of to any other person,

at or before or after the marriage **as consideration for the marriage** of the said parties. but does not include dower or 'mahar' in the case of persons to whom the Muslim personal law (Shariat) applies.

(ಈ ಕಾಯ್ದೆಯಲ್ಲಿ 'ವರದಕ್ಷಿಣೆ' ಅಂದರೆ ಪ್ರತ್ಯಕ್ಷವಾಗಿ ಯಾವದೇ ಆಸ್ತಿ ಇಲ್ಲವೆ ಬೆಲೆಯುಳ್ಳ ಭದ್ರತೆಯನ್ನು

(ಅ) ವಿವಾಹದಲ್ಲಿಯ ಒಂದು ಪಕ್ಷದವರು ಇನ್ನೊಂದು ಪಕ್ಷದವರಿಗೆ

(ಬ) ವಿವಾಹದಲ್ಲಿಯ ವಧು-ವರರ ತಂದೆ ತಾಯಿಗಳು ಇಲ್ಲವೆ ಬೇರೆ ಯಾರಾದರೂ ವಿವಾಹದಲ್ಲಿಯ ಯಾವದಾದರೂ ಪಕ್ಷದವರಿಗೆ ಇಲ್ಲವೆ ಇತರರಿಗೆ

ವಿವಾಹಕಾಲದಲ್ಲಿ ಇಲ್ಲವೆ ವಿವಾಹಾನಂತರ ಮೇಲೆ ಹೇಳಲಾದವರ ವಿವಾಹಕ್ಕೆ ಪ್ರತಿಯಾಗಿ ಕೊಟ್ಟಿರುವುದು ಇಲ್ಲವೆ ಕೊಡಲು ಒಪ್ಪಿಕೊಂಡಿರುವುದು, ಡೋವರ ಇಲ್ಲವೆ ಮಹಾರರು ಮುಸ್ಲಿಂ ಕಾಯ್ದೆಯ (ಶರೀಯತ್) ಕಕ್ಷೆಯಲ್ಲಿ ಬರುವುದರಿಂದ ಅವರನ್ನು ಇದು ಒಳಗೊಳ್ಳುವದಿಲ್ಲ.)

"ಹಣ, ಆಭರಣ ಬಟ್ಟೆಬರೆ ಇತ್ಯಾದಿಗಳನ್ನು ವಿವಾಹಸಮಯದಲ್ಲಿ ಇತ್ತಂಡದವರು ಕೊಡಬಹುದಾದರೂ ಅದು ವಿವಾಹವಾಗಲು ಒಪ್ಪಿದ್ದಾರೆಂಬ ಕಾರಣಕ್ಕಾಗಿ ಇರಕೂಡದು" ಎಂಬ ವಿವರಣೆಯನ್ನು ವಿಧೇಯಕವು ಕೊಟ್ಟಿದೆ. ಆದರೆ ವಿವಾಹವಾಗಲು ಒಪ್ಪಿದ್ದಾರೆಂಬ ಕಾರಣಕ್ಕಾಗಿ ಬಟ್ಟೆ ಬರೆ ಆಭರಣಗಳನ್ನು ಕೊಟ್ಟಿದ್ದಾರೋ, ಅಥವಾ ಸ್ವಸಂತೋಷದಿಂದ ಕೊಟ್ಟಿದ್ದಾರೋ ಎಂಬುದನ್ನು ನಿರ್ಣಯಿಸುವದು ಬಹುಕಷ್ಟ! ಅತ್ಯಂತ ಒತ್ತಾಯದಿಂದ ಒಂದು ಕಾಗದವನ್ನು ಬರೆಸಿಕೊಂಡಿದ್ದರೂ "ಸ್ವಸಂತೋಷದಿಂದ ಬರೆದುಕೊಟ್ಟಿದ್ದೇನೆ" ಎಂದು ಬರೆಯಿಸಿಕೊಳ್ಳುವ ಕ್ರಮವೇ ರೂಢಿಯಲ್ಲಿಲ್ಲವೆ? ಇಷ್ಟೊಂದು ಹಣವನ್ನೂ ಆಭರಣಗಳನ್ನೂ ಕೊಡದೇ ಹೋದರೆ, ವರನನ್ನು ಅಕ್ಷತೆಗೆ ವೇದಿಕೆಯ ಮೇಲೆ ಕರೆತರುವದೇಯಿಲ್ಲ ಎಂದು ಕನ್ಯೆಯ ಪಿತೃಗಳಿಗೆ ಬೆದರಿಕೆ ಹಾಕುವ ವರಪಕ್ಷದವರೂ ಇಲ್ಲದೆಯಿಲ್ಲ.

ಜಟಿಲ ಪ್ರಶ್ನೆ

ವರದಕ್ಷಿಣೆಯನ್ನು ಕೇಳುವದು, ಕೊಡುವದು ತೆಗೆದುಕೊಳ್ಳುವದು ಎಲ್ಲವೂ ಅಪರಾಧ ನಿಜ. ಆದರೆ ತಮ್ಮ ಮಗಳು ಸುಖದಿಂದಿರಲಿ ಎಂದು ಅಪೇಕ್ಷಿಸುವ ಯಾವ ಕನ್ಯಾಪಿತೃಗಳು ವರದಕ್ಷಿಣೆಯನ್ನು ವರಪಕ್ಷದವರು ಕೇಳಿದರೆಂದು ನ್ಯಾಯಾಲಯಕ್ಕೆ ಹೋಗಲಿಚ್ಛಿಸುತ್ತಾರೆ? ಹೇಗಾದರೂ ಮಗಳ ಮದುವೆಯಾಗಲಿ ಎಂದು ಇಚ್ಛಿಸುವವರು ವರದಕ್ಷಿಣೆಯನ್ನು ಕೊಡುವ ಮೊದಲು ಹೋಗುವದಿಲ್ಲ, ಕೊಟ್ಟ ಮೇಲಂತೂ ಸರಿಯೇ ಸರಿ. ಯಾರು ಕಾನೂನಿನ ರಕ್ಷಣೆಯಿಲ್ಲದೆ ತೊಂದರೆಯನ್ನನುಭವಿಸುತ್ತಾರೋ, ಹಾಗೂ ಯಾರ ತೊಂದರೆಯನ್ನು ಕಾನೂನು ಮಾನ್ಯಮಾಡಿದೆಯೋ ಅಂಥ ಕನ್ಯಾಪಿತೃಗಳೇ ನ್ಯಾಯಾಲಯಕ್ಕೆ ಹೋಗುವ ಇಚ್ಛೆಯನ್ನು ಪ್ರಕಟಗೊಳಿಸದಿದ್ದಲ್ಲಿ ಆ ಕಾನೂನಿನ ಲಾಭ ಯಾರಿಗೆ ಮುಟ್ಟಬಹುದಾಗಿದೆ?

ಅಲ್ಲದೆ ವರದಕ್ಷಿಣೆಯನ್ನು ತೆಗೆದುಕೊಂಡ ಅಪರಾಧವನ್ನು, ರಾಜ್ಯಸರಕಾರದ ಇಲ್ಲವೆ ರಾಜ್ಯಸರಕಾರದಿಂದ ಈ ಕಾರ್ಯಕ್ಕಾಗಿ ನಿಯುಕ್ತರಾದ ಅಧಿಕಾರಿಗಳ ಪೂರ್ವ ಸಮ್ಮತಿಯಿದ್ದರೆ ಮಾತ್ರ, ನ್ಯಾಯಾಲಯವು ವಿಚಾರಣೆಗೀಡು ಮಾಡುತ್ತದೆ. ಕಾನೂನಿನ ಮಹತ್ವವನ್ನೂ ಪಾವಿತ್ರ್ಯವನ್ನೂ ತಿಳಿದುಕೊಳ್ಳುವಂಥವರೇ ನ್ಯಾಯಾಲಯಕ್ಕೆ ಹೋಗಲು ಹಿಂದೆಗೆಯುತ್ತಾರೆ. ಇನ್ನು ಸಾಮಾನ್ಯರು ಹೋಗುವ ಸಾಹಸವನ್ನು ಮಾಡುವದಾದರೂ ಹೇಗೆ? ಭಾರತವು ಹಳ್ಳಿಗಳ ದೇಶ. ಹಳ್ಳಿಗನೊಬ್ಬನು ಈ ವರದಕ್ಷಿಣಾ ನಿರೋಧಕ ಕಾಯ್ದೆಯಿಂದ ತನ್ನ ರಕ್ಷಣೆಯನ್ನು ಮಾಡಿಕೊಳ್ಳಲು ಯತ್ನಿಸಬಹುದೇ? ಪ್ರಯತ್ನಿಸಿದ್ದೇ ಆದರೆ ಅವನು ಮೊದಲು ರಾಜ್ಯ ಸರಕಾರದ (ಅಥವಾ ನಿಯುಕ್ತ ಅಧಿಕಾರಿಗಳ) ಸಮ್ಮತಿಪಡೆಯಬೇಕು. ಆ ಬಳಿಕ ನ್ಯಾಯಾಲಯಕ್ಕೆ ವಿಚಾರಣೆಗೆ ಬರಬೇಕು. ಮಹಾರಾಷ್ಟ್ರ ಸರಕಾರವು ತನ್ನ ೧೯೬೧ ಜೂನ ೩೦ ರ ಆದೇಶದ ಮೇರೆಗೆ ರಾಜ್ಯ ಸರಕಾರದ ಪರವಾಗಿ ಸಮ್ಮತಿಯನ್ನು ಕೊಡಲು ಜಿಲ್ಹಾ ಮ್ಯಾಜಿಸ್ಟ್ರೇಟರಿಗೆ ಹಾಗೂ ಜಿಲ್ಹಾ ಪೋಲೀಸ ಅಧಿಕಾರಿಗೆ ಅಧಿಕಾರವನ್ನಿತ್ತಿದೆ. ಇನ್ನುಳಿದ ರಾಜ್ಯಗಳಲ್ಲಿಯೂ ಇದೇ ಕ್ರಮವನ್ನು ಅನುಸರಿಸುವ ಸಂಭವವಿದೆ.

ಕಾನೂನಿನ ಸಹಾಯ—ರಕ್ಷಣೆ

ಕಾನೂನಿನ ಸಹಾಯ ಹಾಗೂ ರಕ್ಷಣೆಗಳು ಸುಲಭವಾಗಿ ದೊರೆಯುವಂತಿರಬೇಕೇ ಹೊರತು ರಕ್ಷಣೆಯನ್ನು ಪಡೆಯುವ ಕ್ರಮವೇ ಜಟಿಲವಾದಲ್ಲಿ, ಎಂಥವರಾದರೂ ಹಿಂದೆಗೆಯುತ್ತಾರೆ. ಸಮ್ಮತಿಯನ್ನು ಪಡೆಯುವ ಹಾಗೂ ನ್ಯಾಯಾಲಯಕ್ಕೆ ಹೋಗುವ ಕಾರ್ಯವು ಅಪರಾಧ ಸಂಭವಿಸಿದ ದಿನದಿಂದ ಒಂದು ವರ್ಷದ ಅವಧಿಯಲ್ಲೇ ಆಗಬೇಕು—

'No Court shall take cognizance of any offence except on a complaint made within one year from the date of the offence." (ಯಾವ ನ್ಯಾಯಾಲಯವೂ ಅಪರಾಧ ಸಂಭವಿಸಿದ ದಿನಾಂಕದಿಂದ ಒಂದು ವರುಷದೊಳಗಾಗಿ ದೂರು ಕೊಡದಿರುವ ಅಪರಾಧವನ್ನು ಗಣನೆಗೆ ತೆಗೆದುಕೊಳ್ಳುವದಿಲ್ಲ.) ಇವೆಲ್ಲ ತೊಂದರೆಗಳನ್ನು ದಾಟಿ ಈ ಕಾನೂನಿನ ಲಾಭ ಪಡೆಯುವವರು ಕ್ವಚಿತ್ತಾಗಿಯೇ ದೊರೆಯುವರೆನ್ನಬೇಕು. ಅಪರಾಧವು ಸಿದ್ಧವಾದಲ್ಲಿ ಮಾತ್ರ ವರದಕ್ಷಿಣೆಯನ್ನು ಕೊಡ ತೆಗೆದುಕೊಳ್ಳುವವರಿಗೆ ಅಥವಾ ಅಂಥವರಿಗೆ ಈ ಕಾರ್ಯದಲ್ಲಿ ಸಹಾಯಕರಾಗಿರುವವರಿಗೆ ಆರು ತಿಂಗಳ ಕಾರಾಗೃಹವಾಸ ಅಥವಾ ಐದು ಸಾವಿರ ರೂಪಾಯಿ ದಂಡ ಇಲ್ಲವೆ ಎರಡನ್ನೂ ವಿಧಿಸಬಹುದಾಗಿದೆ. ವರದಕ್ಷಿಣೆಯನ್ನು ಪ್ರತ್ಯಕ್ಷವಾಗಿಯಾಗಲಿ ಅಥವಾ ಅಪ್ರತ್ಯಕ್ಷವಾಗಲಿ ಬೇಡಿದರೂ ಇದೇ ದಂಡವಿದೆ! ಆದರೆ ಇದಕ್ಕೂ ರಾಜ್ಯಸರಕಾರನಿಯುಕ್ತ ಅಧಿಕಾರಿಗಳ ಪೂರ್ವಸಮ್ಮತಿಬೇಕು. ಈ ಅಪರಾಧಕ್ಕಾಗಿ ಬರೀ ಶಿಕ್ಷೆಯನ್ನು ಅನುಭವಿಸಿದರೆ ಆಯಿತು ಎನ್ನುವ ಹಾಗೂ ಇಲ್ಲ. ವಿವಾಹದ ಸಂಬಂಧದಲ್ಲಿ ವಿವಾಹದ ದಿನ, ಅಥವಾ ವಿವಾಹಕ್ಕೆ ಮೊದಲು ಅಥವಾ ತರುವಾಯ ಒಂದು ವರ್ಷದಲ್ಲಿ ಹಣವನ್ನು ಯಾವದೇ ರೂಪದಲ್ಲಾಗಲಿ ಅಥವಾ ಹಣವನ್ನಾಗಲಿ ಸ್ವೀಕರಿಸಿದವರು ಅದನ್ನು ಆ ವಧುವಿಗೇ ಕೊಡಬೇಕಾಗುವದು. ಆಕೆ ಅಪ್ರಬುದ್ಧಳಿದ್ದರೆ ಹದಿನೆಂಟು ವರುಷದವಳಾದ ತರುವಾಯ ಒಂದು ವರ್ಷದೊಳಗಾಗಿ ಆಕೆಗೆ ಹಿಂದಿರುಗಿಸಬೇಕಾಗುತ್ತದೆ. ಈ ಅವಧಿಯಲ್ಲಿ ಆಕೆಯ ಸಂಪತ್ತಿನ 'ವಿಶ್ವಸ್ತ' (ಟ್ರಸ್ಟಿ) ಎಂದು ಹಣ ಸ್ವೀಕರಿಸಿದವರು ಮೇಲ್ವಿಚಾರಣೆ ಮಾಡುತ್ತಾರೆ. ವಿಶ್ವಸ್ತರು ತಮ್ಮ ಕರ್ತವ್ಯವನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸದಿದ್ದರೆ ಅವರಿಗೂ ದಂಡವನ್ನು ವಿಧಿಸಲಾಗುವದು.

ಸಾಮಾಜಿಕ ಕ್ರಾಂತಿ

ವರದಕ್ಷಿಣಾ ಪ್ರತಿಬಂಧಕ ವಿಧೇಯಕವು ಸಾಮಾಜಿಕ ಕ್ರಾಂತಿಯನ್ನೇ ಉಂಟುಮಾಡುತ್ತಿದೆ ನಿಜ. ಆದರೆ ಈ ಕ್ರಾಂತಿಗೆ ಜನತೆಯ ಸಹಕಾರ ದೊರೆತರೆ ಮಾತ್ರ ಅದು ಯಶಸ್ವಿಯಾಗಬಲ್ಲದು. ವರದಕ್ಷಿಣೆಯನ್ನು ಕೊಟ್ಟ ಮೇಲಾದರೂ ಸರಿಯೆ, ಕನ್ಯೆಯನ್ನು ಒಳ್ಳೇ ರೀತಿಯಿಂದ ನಡೆಸಿಕೊಂಡರೆ ಸಾಕೆಂದು ಇಚ್ಛಿಸುವ ಪಿತೃಗಳು ವರದಕ್ಷಿಣೆ ತೆಗೆದುಕೊಳ್ಳುವದರ ವಿರುದ್ಧ ಕ್ರಮ ಕೈಕೊಳ್ಳಬಹುದೆ? ಹದಿನಾಲ್ಕು ವರುಷಕ್ಕೆ ಮೊದಲು ಕನ್ಯೆಯ ವಿವಾಹವನ್ನು ಮಾಡಕೂಡದೆಂಬ ನಿರ್ಬಂಧ ಶಾರದಾ ಕಾಯಿದೆಯಿಂದಿದ್ದರೂ ಎಷ್ಟು ಬಾಲವಿವಾಹಗಳು ನಡೆಯುತ್ತಿಲ್ಲ? ಬಾಲವಿವಾಹವು ನಡೆದುದರ ವಿರುದ್ಧ ಪ್ರತಿಭಟಿಸುವಂತಹ ಸಮಾಜದ ಹಿತಚಿಂತಕರಾದರೂ ಯಾರು? ಅದರಂತೆ ವರದಕ್ಷಿಣೆಯ ನಿರ್ಬಂಧದ ಕಾನೂನಿನ ಗತಿಯಾದರೂ ಆಶ್ಚರ್ಯವೇನು?

ಹೆಚ್ಚು ವರದಕ್ಷಿಣೆಯನ್ನು ಕೊಡುವದು, ಹಾಗೂ ಬೇಡುವದು ವ್ಯಕ್ತಿಗಳ ಸಾಮಾಜಿಕ ಅಂತಸ್ತಿನ ಗುರುತುಗಳಾಗಿವೆ. ಸಾಮಾಜಿಕ ಅಂತಸ್ತನ್ನು ಗುರುತಿಸುವ ಈ ಮೂಲ್ಯದಲ್ಲಿಯೇ ವ್ಯತ್ಯಾಸ ಬೇಕು. ಏನೂ ವರದಕ್ಷಿಣೆ ತೆಗೆದುಕೊಳ್ಳದೆ ಯಾರೊಬ್ಬರು ವಿವಾಹವಾದರೆ, ವರನಲ್ಲಿ ಏನೋ ದೋಷವಿದ್ದಿರಬೇಕು. ಅದಕ್ಕೇ ವರದಕ್ಷಿಣೆಯನ್ನು ಕೇಳಿಲ್ಲ ಎನ್ನುತ್ತಾರೆ. ಈ ತಿಳುವಳಿಕೆಯಲ್ಲಿಯೇ ಮಾರ್ಪಾಟಾಗಬೇಕಾದರೆ, ಧೈರ್ಯ ಹಾಗೂ ಆತ್ಮವಿಶ್ವಾಸವುಳ್ಳ ಹಲವು ಜನರಾದರೂ ತ್ಯಾಗ ಮಾಡಿ ಬಲಿಯಾಗಬೇಕಾಗುತ್ತದೆ. ಆಗಲೇ ಹೊಸ ಪರಂಪರೆ ನಿರ್ಮಾಣವಾಗಲು ಸಾಧ್ಯ; ಮತ್ತೆ ಅದರಲ್ಲಿಯೂ ವರದಕ್ಷಿಣೆಯನ್ನು ಪಡೆಯಬಲ್ಲ ಯೋಗ್ಯತೆಯುಳ್ಳವರು ತ್ಯಾಗ ಮಾಡಿದರೆ ಮಾತ್ರ ಪರಂಪರೆಯ ನಿರ್ಮಾಣಕ್ಕೆ ಬೆಂಬಲ ದೊರೆತೀತು; ಎಂದಿಗೂ ವರದಕ್ಷಿಣೆಯನ್ನು ಪಡೆಯುವ ಯೋಗ್ಯತೆಯಿಲ್ಲದ ದುರ್ಬಲರು, 'ವರದಕ್ಷಿಣೆಯನ್ನು ಬಿಟ್ಟಿದ್ದೇವೆ,' ಎಂಬ ಮಾತಿಗೆ ಯಾವ ಅರ್ಥವಿದೆ? ದುರ್ಬಲರ ತ್ಯಾಗಕ್ಕೆ ಬೆಲೆ ಎಲ್ಲಿ?

ವಧು—ವರರ ಹೊಣೆ

ವರದಕ್ಷಿಣೆಯನ್ನು ಪಡೆಯುವದು ಅಗೌರವವೆಂದು ವರನು ತಿಳಿದರೆ, ವರದಕ್ಷಿಣೆಯನ್ನು ಪಡೆವ ಗಂಡಿನೊಡನೆ ಬಾಳುವದು ತನಗೆ ಅಗೌರವವೆಂದು ವಧುವು ತಿಳಿದರೆ, ಆಗ ವಿವಾಹಸಂಸ್ಥೆಯ ಈ ಅಂಧಪರಂಪರೆಯಲ್ಲಿ ಹೊಸ ಮೂಲ್ಯಗಳನ್ನು ಕಾಣಬಹುದು! ಹಿಂದೂ ಕಾಯಿದೆಯು ಮಗಳಿಗೂ ತಂದೆಯ ಆಸ್ತಿಯಲ್ಲಿ ಪಾಲನ್ನು ಪಡೆಯುವ ಅಧಿಕಾರವನ್ನಿತ್ತು ಆಕೆಯನ್ನು ಗೌರವಿಸಿದೆ. ವರದಕ್ಷಿಣಾ ಪ್ರತಿಬಂಧಕ ವಿಧೇಯಕವು, ವರದಕ್ಷಿಣೆಯ ಅಭಾವದ ಮೂಲಕ ಆಕೆಯ ಜೀವನದಲ್ಲಾಗಬಹುದಾದ ನಷ್ಟವನ್ನು ದೂರ ಮಾಡಲು ಯತ್ನಿಸಿದೆ: ಸಿರಿವಂತ ತಂದೆಯ ಮಗಳು ಹಾಗು ಬಡತಂದೆಯ ಮಗಳಲ್ಲಿಯ ವ್ಯತ್ಯಾಸವನ್ನು ವರದಕ್ಷಿಣೆಯ ಮಟ್ಟಿಗೆ ನಿವಾರಿಸಲು ಇಚ್ಛಿಸಿದೆ! ಆದರೆ ಈ ಕಾನೂನುಗಳಿಗೆ ಅಧೀನರಾಗಿನಡೆಯುವ ಮನೋವೃತ್ತಿ ಜನತೆಯಲ್ಲಿ ಮೂಡಬೇಕು! ಜನತೆಯ ಮನಸ್ಸು ಕಾನೂನನ್ನು ಬರಮಾಡಿಕೊಳ್ಳಲು ಸಿದ್ಧವಾದಾಗಲೇ ಇಂತಹ ಕಾನೂನನ್ನು ರಚಿಸಬಹುದೆಂಬುದು ಒಂದುದೃಷ್ಟಿ; ಕಾನೂನಿನಿಂದಾದರೂ ಜನತೆಯ ಮನಸ್ಸನ್ನು ಹದಕ್ಕೆ ತರಬೇಕೆಂದು ಇನ್ನೊಂದು ದೃಷ್ಟಿ! ಇನ್ನೂ ಶೈಶವಾವಸ್ಥೆಯಲ್ಲಿಯೇ ಇರುವ ಭಾರತೀಯ ಪ್ರಜಾಪ್ರಭುತ್ವದಲ್ಲಿ ಈ ಎರಡನೆಯ ದೃಷ್ಟಿಯನ್ನು ಅನುಸರಿಸಲಾಗುತ್ತಿದೆ! ಜನತೆಯ ಮನಸ್ಸನ್ನು ಸುಸಂಸ್ಕೃತಗೊಳಿಸಲು ಕಾನೂನು ಒಂದು ಪ್ರಭಾವಿ ಸಾಧನವಾಗಿದೆ!!

* * *

ಪ್ರಾಚೀನ ಕನ್ನಡಸಮಾಜ ಮತ್ತು ಮಹಿಳೆಯರು

ಲೇಖಕರು: ಶ್ರೀಹರಿ
ಉದಕಮಂಡಲ

ಸ್ತ್ರೀಯರ ಉನ್ನತಿಯನ್ನು ಲಕ್ಷಿಸಿ ಆಯಾ ಸಮಾಜದ ಪ್ರಗತಿಯನ್ನು ಲಕ್ಷಿಸುವದುಂಟು. ಭಾರತದಲ್ಲಿ ಇಂದು ಸ್ತ್ರೀಯರು ದಿನ ದಿನವೂ ಉನ್ನತಿ ಸಾಧಿಸುತ್ತಿದ್ದರೂ ಪ್ರಾಚೀನ ಕಾಲದಿಂದಲೂ ಅವರಿಗೆ ವಿಶಿಷ್ಟ ಸ್ಥಾನವನ್ನು ಭಾರತೀಯ ಸಮಾಜದಲ್ಲಿ ಕಲ್ಪಿಸಲಾಗಿದೆ. ಭಾರತಾಂತರ್ಗತ ಕರ್ನಾಟಕ ಅದಕ್ಕೆ ಹೊರತಾಗಿಲ್ಲ. ರಾಜಕಾರಣಿಗಳೂ ಧಾರ್ಮಿಕ ಕಾರ್ಯಗಳಲ್ಲಿ ಹಿರಿಮೆ ತೋರಿದವರೂ ವಿದ್ಯಾಪಾರಂಗತರೂ ವೀರೆಯರೂ ಇಲ್ಲಿ ಬಹಳಷ್ಟು ಜನರಿದ್ದರೆಂಬುದನ್ನು ಕಾಣಬಹುದು.

ಸಮಾಜದಲ್ಲಿ ಸ್ತ್ರೀಯರ ಸ್ಥಾನ ಆ ಸಮಾಜದ ಸಂಸ್ಕೃತಿಯ ಮಟ್ಟವನ್ನು ಸೂಚಿಸುತ್ತದೆ ಎಂಬ ಹೇಳಿಕೆ ಅರ್ಥವತ್ತಾದುದು. ಏಕೆಂದರೆ ಸಮಾಜದ ಸ್ವಾಸ್ಥ್ಯ ಪುರುಷರ ಚಟುವಟಿಕೆಗಳನ್ನು ಅವಲಂಬಿಸಿದಂತೆ ವಿವಿಧ ಕ್ಷೇತ್ರಗಳಲ್ಲಿ ಸ್ತ್ರೀಯರ ಪ್ರಗತಿಯನ್ನೂ ಅವಲಂಬಿಸಿದೆ. ಪುರುಷನೆಷ್ಟೇ ಮುಂದುವರೆದಿದ್ದರೂ ಸ್ತ್ರೀ ನಿರಕ್ಷರಿಯಾಗಿ ಕಲೆ, ಸಾಹಿತ್ಯಗಳ ಗಂಧವನ್ನರಿಯದೆ ನಿತ್ಯ ಕರ್ಮಗಳಲ್ಲಿಯೇ ಜೀವನವನ್ನು ಸವೆಸುತ್ತಿದ್ದಾಗ ಆ ಸಮಾಜ ಮುಂದುವರಿದ ಸಮಾಜ ಎಂದು ಹೇಳಲು ಬಾರದು. ಪರಿಪೂರ್ಣ ಸಮಾಜದಲ್ಲಿ ಸ್ತ್ರೀಯರ ಪ್ರಗತಿಯೂ ಅಗತ್ಯವೇ. ಹೀಗೆ ಪ್ರಗತಿಹೊಂದಲು ತಕ್ಕುದಾದ ಸ್ವಾತಂತ್ರ್ಯ, ಅವಕಾಶ, ಉತ್ತೇಜನಗಳನ್ನೊದಗಿಸುವ ಸಮಾಜವೇ ಆದರ್ಶ ಸಮಾಜ ಎಂದು ಹೇಳಬಹುದು. ಸಮಾಜದ ಅವಿಭಾಜ್ಯ ಘಟಕಗಳಾದ ಪುರುಷ ಮತ್ತು ಸ್ತ್ರೀ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಮಾನತೆಯಿಂದ ಮುಂದುವರಿದಾಗಲೇ ಅದು ಮುಂದುವರಿದ ಸಮಾಜ ಎಂದೆನಿಸಿಕೊಳ್ಳಲು ಅರ್ಹವಾಗುತ್ತದೆ.

ಸ್ತ್ರೀಗೆ ಸ್ವಾತಂತ್ರ್ಯ ಬೇಡ ಎಂದು ಪ್ರಾಚೀನ ಧರ್ಮಶಾಸ್ತ್ರಜ್ಞರು ಹೇಳಿದಾಗ, ಅವಳು ಗುಲಾಮಳಾಗಿರಬೇಕು ಎಂದೇನೂ ಅವರು ವಿಧಿಸಲಿಲ್ಲ. ಸ್ವಚ್ಛಂದತೆ ಸಲ್ಲದು, ಎಂದರು, ಅಷ್ಟೇ! ದೈಹಿಕ, ಮಾನಸಿಕ ವೈಲಕ್ಷಣ್ಯಗಳಿಂದಾಗಿ ಸ್ತ್ರೀಗೆ ಪುರುಷನ ರಕ್ಷಣೆ ಅವಶ್ಯ ಎಂದವರು ಭಾವಿಸಿದರು; ಮತ್ತು ಈ ದೃಷ್ಟಿಯಿಂದ ಅವಳ ಚಟುವಟಿಕೆಗಳ ಮೇಲೆ ಕೆಲವು ನಿರ್ಬಂಧಗಳನ್ನು ಹಾಕಿದರು. ಆದರೆ ಈ ನಿರ್ಬಂಧಗಳೇನೂ ಅವಳಿಗೆ ಕಾಲ್ತೊಡಕಾಗಲಿಲ್ಲ. ಪುರುಷನ ರಕ್ಷಣೆಯಲ್ಲಿಯೇ ಧರ್ಮ, ರಾಜಕೀಯ, ಸಾಹಿತ್ಯ, ಕಲೆ, ಮುಂತಾದ ಕ್ಷೇತ್ರಗಳಲ್ಲಿ ಅವಳು ಪುರುಷನಂತೆಯೇ, ಆದರೂ ತನ್ನ ವೈಶಿಷ್ಟ್ಯವನ್ನುಳಿಸಿಕೊಂಡು, ಆಸ್ಥೆಯಿಂದ ಭಾಗವಹಿಸಿ ತನ್ನ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳಲು ಶಕ್ತಳಾದಳು. ಹೀಗೆ ತಾವು ವಿಕಾಸಹೊಂದಿ, ನಾಡಿನ ಸಂಸ್ಕೃತಿಯ ಪ್ರಗತಿಗೆ ಕಾರಣರಾದ ಕೆಲವು ಸ್ತ್ರೀಯರನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ಧರ್ಮಕಾರ್ಯಗಳು—ಧಾರ್ಮಿಕ ಸ್ವಾತಂತ್ರ್ಯ

ಧಾರ್ಮಿಕ ಕಾರ್ಯಗಳಲ್ಲಿ ಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯವಿದ್ದಿತು. ಪ್ರಾಚೀನ ಕಾಲದಲ್ಲಿ ಯಜ್ಞಯಾಗಾದಿ ಕರ್ಮಗಳಲ್ಲಿ ಅವಳಿಗೆ ಪುರುಷನಿಗೆ ಸಮಾನವಾದ ಸ್ಥಾನವಿದ್ದಿತು. ಮುಂದೆ ಕರ್ಮಮಾರ್ಗ ಇಳಿಮುಖವಾಗಿ ಭಕ್ತಿಮಾರ್ಗ ಹೆಚ್ಚು ಪ್ರಚಲಿತವಾದಾಗ, ಅವಳಿಗೆ, ಪೂಜೆ-ಪುನಸ್ಕಾರ, ದಾನ ಮೊದಲಾದ ಧರ್ಮಕಾರ್ಯಗಳಲ್ಲಿ ತೊಡಗಿ ಆತ್ಮೋನ್ನತಿಯನ್ನು ಮಾಡಿಕೊಳ್ಳಲು ಇನ್ನಷ್ಟು ಅನುವು ದೊರೆಯಿತು. ಈ ದಿಶೆಯಲ್ಲಿ ಅವಳು ತನ್ನ ಪತಿಯನ್ನು, ರಕ್ಷಕನನ್ನು, ಅವಲಂಬಿಸುವ ಅಗತ್ಯವೂ ಇರಲಿಲ್ಲ. ತನಗಿಷ್ಟ ಬಂದ ಪಂಥವನ್ನು ಅವಳು ಅನುಸರಿಸಿ ಅದರ ಬೆಳವಣಿಗೆಯ ಮತ್ತು ತನ್ನ ಉದ್ಧಾರದ ಮಾರ್ಗದಲ್ಲಿ ಪ್ರವರ್ತಿಸುವ ಸಂಪೂರ್ಣ ಸ್ವಾತಂತ್ರ್ಯವನ್ನವಳು ಪಡೆದಿದ್ದಳು.

ಕರ್ನಾಟಕದ ಇತಿಹಾಸದ ಪ್ರಾರಂಭದ ಕಾಲದಲ್ಲಿಯೇ ಇಂಥ ಒಬ್ಬ ಮಹಿಳೆಯ ದರ್ಶನ ನಮಗಾಗುತ್ತಿದೆ. ಅವಳು ಶಿವಸ್ಕಂದ ನಾಗಶ್ರೀ—ಚುಟುಕುಲದ ವಿಷ್ಣು ಕಡಚುಟು ಕುಲಾನಂದನ ಮಗಳು. ಬನವಾಸಿಯಲ್ಲಿ ಬೌದ್ಧ ವಿಹಾರವನ್ನೂ ಕೆರೆಯನ್ನೂ ಕಟ್ಟಿಸುವ ಧರ್ಮಕಾರ್ಯವನ್ನೆಸಗಿದಳು. ಚಾಲುಕ್ಯ ಮನೆತನದ ಅರಸರು ಹಿಂದೂ ಧರ್ಮಿಗಳು. ಆದರೆ ಅವರೇನು ಇತರ ಧರ್ಮಗಳನ್ನು ಕಡೆಗಣಿಸಲಿಲ್ಲವಷ್ಟೇ ಅಲ್ಲ, ಪ್ರೋತ್ಸಾಹಿಸಿದರು. ಈ ಮನೆತನದ ವಿಜಯಾದಿತ್ಯನ ತಂಗಿಯೂ ಆಳುಪ ವಂಶದ ಚಿತ್ರವಾಹನನ ಹೆಂಡತಿಯೂ ಆದ ಕುಂಕುಮ ಮಹಾದೇವಿ, ಲಕ್ಷ್ಮೇಶ್ವರದಲ್ಲಿ ಜೈನ ಬಸದಿಯೊಂದನ್ನು ನಿರ್ಮಿಸಿದಳು. ಭಾವ ಚಿತ್ರವಾಹನನ ವಿಜ್ಞಾಪನೆಯ ಮೇರೆಗೆ ವಿಜಯಾದಿತ್ಯನು ಕೆಲವು ದತ್ತಿಗಳನ್ನು ಬಿಟ್ಟನು; ಅಲ್ಲದೆ ತಂಗಿಯ ಅಪೇಕ್ಷೆಯಂತೆ ಬ್ರಾಹ್ಮಣನಾದ ಸೋಮಶರ್ಮನೆಂಬವನಿಗೂ ಗ್ರಾಮವೊಂದನ್ನು ಕೊಟ್ಟನು. ವಿಜಯಾದಿತ್ಯನ ಪ್ರೇಯಸಿ ವಿನಾಪೋಟ, ತಾನೇ ದೇವರಿಗೆ ರತ್ನಪೀಠ ರಜತಚ್ಛತ್ರಗಳನ್ನೂ ಮಾಡಿಸಿದಳು.

ಎರಡನೇ ವಿಕ್ರಮಾದಿತ್ಯನ ಅರಸಿಯರೂ ಧರ್ಮಿಷ್ಠರು. ಹೈಹಯ ಮನೆತನದ ಲೋಕಮಹಾದೇವಿ, ತ್ರೈಲೋಕ್ಯಮಹಾದೇವಿ ಎಂಬ ಅಕ್ಕತಂಗಿಯರು ತಮ್ಮ ಜೋಡಿಯ ನೆನಪು ಚಿರಕಾಲ ಬಾಳಲೆಂಬಂತೆ ಜೋಡಿಯಾಗಿಯೇ, ತಮ್ಮ ಹೆಸರಿನಲ್ಲಿ ಲೋಕೇಶ್ವರ, ತ್ರೈಲೋಕ್ಯೇಶ್ವರ ಎಂಬ ದೇವಾಲಯಗಳನ್ನು ಕಟ್ಟಿಸಿದರು. ರಾಷ್ಟ್ರಕೂಟ ಧ್ರುವನ ಅರಸಿಯೂ ವೆಂಗಿಯ ವಿಷ್ಣುವರ್ಧನನ ಮಗಳೂ ಆದ ಶೀಲ ಮಹಾದೇವಿ ಮಾರಚ್ಛ ಮತ್ತು ದುರ್ಗಾದಿತ್ಯ ಎಂಬ ಬ್ರಾಹ್ಮಣರಿಗೆ ನಾಂದೀಪುರದ್ವಾರಿ ಎಂಬ ವಿಷಯದಲ್ಲಿಯ ಕೋಲೇಪದ್ರವೆಂಬ ಗ್ರಾಮವನ್ನು ದಾನಮಾಡಿ ಆ ಬಗ್ಗೆ ತಾನೇ ಒಂದು ಶಾಸನವನ್ನು ಬರೆಯಿಸಿದಳು. ಈ ಶಾಸನದಲ್ಲಿ ಅವಳು 'ಪರಮೇಶ್ವರಿ', ಪರಮಭಟ್ಟಾರಿಕೆ ಎಂದು ಕರೆಯಲ್ಪಟ್ಟುದನ್ನು ಗಮನಿಸಿದರೆ, ಇಂಥ ಕಾರ್ಯಗಳಲ್ಲಿ ಅವಳಿಗಿದ್ದ ಸ್ವಾತಂತ್ರ್ಯದ ಕಲ್ಪನೆ ಬರುವದು. ಚಾಲುಕ್ಯ ೨ ನೇ ತೈಲಪನ ಸೇನಾನಿಯಾದ ಮಲ್ಲಪನ ಮಗಳೂ ನಾಗದೇವನ ಪತ್ನಿಯೂ ಆದ ಅತ್ತಿ

ಮುಚ್ಚೆಯ ಔದಾರ್ಯ ಅವಳಿಗೆ 'ದಾನ ಚಿಂತಾಮಣಿ' ಎಂಬ ಬಿರುದನ್ನು ತಂದಿತು. ಲಕ್ಕುಂಡಿಯಲ್ಲವಳು 'ಬ್ರಹ್ಮಜಿನಾಲಯ' ವನ್ನು ಕಟ್ಟಿಸಿದಳು. ಜಗದೇಕಮಲ್ಲ ೨ನೇ ಜಯಸಿಂಹನ ಸೋದರಿ ಅಕ್ಕಾದೇವಿ 'ಜಿನ, ಬುದ್ಧ, ಅನಂತ, ರುದ್ರ, ಆಗಮ ನಿಗದಿತ' ಧರ್ಮಕಾರ್ಯಗಳಲ್ಲಿ ತೊಡಗಿರುತ್ತಿದ್ದಳು. ೧ ನೇ ಸೋಮೇಶ್ವರನ ರಾಣಿ ಕೇತಲದೇವಿ ಚೈತ್ಯಾಲಯಕ್ಕೆ, ಈಶ್ವರ ದೇವಾಲಯಕ್ಕೆ ದಾನಗಳನ್ನು ಕೊಟ್ಟು ತನ್ನ ಧರ್ಮಪ್ರವೃತ್ತಿಯನ್ನು ಪ್ರಕಟಿಸಿದಳು. ಆರ್ಮಡಿ ವಿಕ್ರಮಾದಿತ್ಯನ ಅರಸಿ ಪದ್ಮಲದೇವಿ ಇಂಥ ಕಾರ್ಯಗಳಿಂದ 'ದಾನವಿನೋದೆ' ಎಂದು ಹೆಸರಾಂತಳು.

ಸೇವುಣ ಮನೆತನದ ಭಿಲ್ಲಮನ ಕಾಲದಲ್ಲಿ ಬೌದ್ಧವಾಡಿಗೆಯಲ್ಲಿಯ ಮಾಳಿಯಕ್ಕನೆಂಬ ಮುದುಮಗಳೊಬ್ಬಳು ತನಗೆ 'ಬಳುವಳಿ'ಯಾಗಿ ಬಂದ ಭೂಮಿಯಲ್ಲಿ ಕೆಲವೊಂದನ್ನು ದೇವಕಾರ್ಯಕ್ಕಾಗಿ ಬಿಟ್ಟಳು. ಹೊಯ್ಸಳ ವಿಷ್ಣುವರ್ಧನನ ಅರಸಿ ಶಾಂತಲದೇವಿ, ಪತಿ ವೈಷ್ಣವಧರ್ಮವನ್ನು ಸ್ವೀಕರಿಸಿದ್ದರೂ ತಾನು ಜೈನಳಾಗಿಯೇ ಉಳಿದು ಆ ಧರ್ಮದ ಉತ್ಕರ್ಷಕ್ಕೆ ಕಾರಣಳಾದುದು ಅಂದಿನ ಸ್ತ್ರೀಯರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಉತ್ತಮ ನಿದರ್ಶನವಾಗಿದೆ.

ದಾನ-ಧರ್ಮಾದಿಗಳಷ್ಟೇ ಅಲ್ಲ, ಕೆಲವು ಸ್ತ್ರೀಯರು ಧರ್ಮ-ದೀಕ್ಷೆಯನ್ನು ಹೊಂದಿ ದೇವಾಲಯಗಳ ಮುಖ್ಯಸ್ಥರೂ ಆಗಿರುತ್ತಿದ್ದರು. ಚಾಲುಕ್ಯ ಇರಿವ ಬೆಂಡಗ ಸತ್ಯಾಶ್ರಯನ ಶಾಸನವೊಂದು ರೇವಕಟ್ಟೆ ಗೊರವಿಯೆಂದೊಬ್ಬಳನ್ನು ಹೆಸರಿಸುತ್ತದೆ. ಇದೇ ರೀತಿ, ಸೇವುಣ ೨ನೇ ಸಿಂಘಣನ ಶಾಸನವೊಂದರಲ್ಲಿ ದೇಕಲಬ್ಬೆಗೊರತಿಯೆಂಬವಳ ಉಲ್ಲೇಖವಿದೆ. ಕೆಲವು ಅಧಿಕಾರಿಗಳು ವ್ಯಾಸೇಶ್ವರ ಎಂಬ ದೇವಾಲಯಕ್ಕೆ ಮಾಡಿದ ಈ ದತ್ತಿಗಳನ್ನು ಇವಳಿಗೆ ಒಪ್ಪಿಸುವ ವಿಷಯ ಈ ಶಾಸನದಲ್ಲಿದೆ. ಈ ಮಹಿಳೆಯರ 'ಗೊರವಿ' ಎಂಬ ಉಪಾಧಿಯನ್ನೂ ದತ್ತಿಗಳು ಅವರಿಗೆ ಒಪ್ಪಿಸಲ್ಪಟ್ಟುದನ್ನೂ ಗಮನಿಸಿದರೆ, ಇವರು ಧರ್ಮಾಧಿಕಾರಿಗಳಾಗಿದ್ದರು ಎಂಬುದು ಸೂಚಿತವಾಗುತ್ತದೆ. ಸಿಂಘಣನದೇ ಇನ್ನೊಂದು ಶಾಸನದಲ್ಲಿ ಬಿಲವ್ವೆ ಎಂಬವಳೊಬ್ಬಳು ಕಾಣಸಿಗುತ್ತಾಳೆ. ಇವಳು ಇಲ್ಲಿ 'ಮೂಲಸ್ಥಾನದೇವರ ಪಾದಾರಾಧಕಿ', 'ಕ್ಷೇತ್ರ ಸಂನ್ಯಾಸಿ', 'ಮಹಾನುಭಾವೆ' ಎಂದು ಕರೆಯಲ್ಪಟ್ಟಿದ್ದಾಳೆ. ಇಲ್ಲಿಯೂ ದೇವಾಲಯಕ್ಕೆ ಮಾಡಿದ ಕೆಲವು ದಾನಗಳನ್ನು ಅವಳು ಸ್ವೀಕರಿಸುವ ವಿಷಯವಿದೆ. ಹೊಯ್ಸಳ ಸೋಮೆಶ್ವರನ ಕಾಲದಲ್ಲಿ 'ಗಣಕುಮಾರಿ' ಚಂದವ್ವೆ ಕುಂಜೇಶ್ವರ ದೇವಾಲಯದ 'ಒಡತಿ'ಯಾಗಿದ್ದಳು. ಅವಳ ತಂದೆ ಕಂಡನಂಬಿಸೆಟ್ಟಿಯು ಆ ದೇವಾಲಯಕ್ಕಿತ್ತ ಭೂದಾನವನ್ನು ಅವಳಿಗೆ ಒಪ್ಪಿಸಿದನು. ಚಂದವ್ವೆಯ 'ಗಣಕುಮಾರಿ' ಎಂಬ ಅಭಿಧಾನ ಅರ್ಥವತ್ತಾಗಿದೆ.

ರಾಜಕಾರಣದಲ್ಲಿ

ಧರ್ಮವಷ್ಟೇ ಅಲ್ಲ; ರಾಜಕೀಯದಲ್ಲಿ ಪ್ರವೇಶಿಸುವ ಸೌಲಭ್ಯವೂ ಸ್ತ್ರೀಗೆ ಇದ್ದಿತು. ಅರಸಿಯರು, ಅಧಿಕಾರಿಗಳ ಪತ್ನಿಯರು, ರಾಜಕುವರಿಯರು, ಚಿಕ್ಕ ದೊಡ್ಡ ಪ್ರಾಂತಗಳ ಮೇಲೆ ಅಧಿಕಾರವನ್ನು ಹೊಂದಿ, ಚತುರ ಆಡಳಿತಗಾರರಾಗಿರುತ್ತಿದ್ದರು.

ಈ ಮೊದಲು ಉಲ್ಲೇಖಿಸಲಾದ ಅಕ್ಕಾದೇವಿ ಬಹುಕಾಲ ಆಡಳಿತಗಾರಳಾಗಿದ್ದಳು. ಕ್ರಿ. ಶ. ೧೦೧೦ ರಲ್ಲಿ ಕಿಸುಕಾಡು, ೭೦ ನ್ನಾಳುತ್ತಿದ್ದ ಅವಳು ಮುಂದೆ ಕ್ರಿ. ಶ. ೧೦೫೦ ರ ವೇಳೆಗೆ ಕಿಸುಕಾಡು, ತೊರಗಲೆ, ಮಾಸವಾಡಿ, ಬಾಗಡಗೆಗಳ ಅಧಿಕಾರಿಯಾಗಿದ್ದಳು. ೧ ನೇ ಸೋಮೇಶ್ವರನ 'ಪಿರಿಯರಸಿ' ಮೈಳಲದೇವಿ ಬನವಾಸಿ ಪನ್ನಿಚ್ಛಾಸಿರ ಪ್ರಾಂತವನ್ನಾಳುತ್ತಿದ್ದಳು. ಅವನ ಮಗ ಭುವನೈಕಮಲ್ಲ ೨ನೇ ಸೋಮೇಶ್ವರನ ಪತ್ನಿ ಕಂಚಲದೇವಿಯೂ ಆಡಳಿತಕಾರ್ಯವನ್ನು ನೋಡಿಕೊಳ್ಳುತ್ತಿದ್ದಳು. ಮುಳುಗುಂದ ಅವಳ ರಾಜಧಾನಿಯಾಗಿದ್ದಿತು. ಆರ್ಮ್ಮಡಿ ವಿಕ್ರಮಾದಿತ್ಯನ ಅರಸಿಯರನೇಕರು ಆಡಳಿತದಲ್ಲಿ ಭಾಗವಹಿಸಿದ್ದರು. ಲಕ್ಷ್ಮೀದೇವಿ, ಬೇರೆ ಬೇರೆ ವರುಷಗಳಲ್ಲಿ, ದೋಣಿ, ಡಂಬಳ, ನಿಟ್ಟಸಂಗಿ ಮೊದಲಾದವುಗಳ ಮೇಲೆ ಅಧಿಕಾರ ನಡೆಸುತ್ತಿದ್ದಳು. ಕೊರ್ಗಟನೂರು (ಬೆಳಗಾವ ಜಿಲ್ಲೆಯಲ್ಲಿಯ ಕೊಕಟನೂರು) ಎಲೆಯಪುರ ಇವು ಮಲಯಮತಿ ದೇವಿಯ ಅಧಿಕಾರದಲ್ಲಿದ್ದವು. ಹೊಯ್ಸಳ ೨ನೇ ಬಲ್ಲಾಳನ ಅರಸಿ ಉಮಾದೇವಿ ರಾಜ್ಯಭಾರವನ್ನು ನೋಡಿಕೊಳ್ಳುತ್ತಿದ್ದಳಲ್ಲದೆ, ವೈರಿಗಳ ಮೇಲೆ ದಂಡೆತ್ತಿ ಹೋಗಿ ಅವರನ್ನು ಸದೆಬಡೆದಳು. ಅವನ ಇನ್ನೊಬ್ಬ ಅರಸಿ ಪದ್ಮಲದೇವಿ 'ಹೊಸವಡಂಗಿಲೆ' ಯನ್ನಾಳುತಿದ್ದಳು. ಮೂರನೇ ಬಲ್ಲಾಳನ ರಾಣಿ ವೀರಚಿಕ್ಕಾಯಿ ತಾಯಿ 'ಪಾಂಡ್ಯ ಚಕ್ರವರ್ತಿ' 'ಅರಿರಾಯ ಬಸವ ಶಂಕರ', 'ರಾಯಗಜಾಂಕುಶ' ಎಂಬ ಬಿರುದುಗಳನ್ನು ಧರಿಸಿದ್ದಳು.

ದಕ್ಷಿಣ ಕನ್ನಡದ ಆಳುಪವಂಶದ ಭುಜಬಳ ಕವಿ ಆಳುಪೇಂದ್ರನ ಪತ್ನಿ ಪಾಂಡ್ಯಮಹಾದೇವಿ, ಪನ್ನಿರ್ಪಳ್ಳಿಯೆಂಬ ಗ್ರಾಮಕ್ಕೆ ಅಧಿಪತಿಯಾಗಿದ್ದಳು. ಇದೇ ಮನೆತನಕ್ಕೆ ಸೇರಿದ ಬಲ್ಲಮಹಾದೇವಿ ಸುಮಾರು ೧೫ ವರುಷಗಳ ಕಾಲ ತುಳುನಾಡನ್ನಾಳುತ್ತಿದ್ದಳು. 'ಪಶ್ಚಿಮ ಸಮುದ್ರಾಧಿಪತಿ' ಎಂಬ ಬಿರುದನ್ನು ಇವಳು ತಳೆದಿದ್ದಳು. ಕದಂಬಸಾಮಂತನಾದ ಹರಿಕೇಸರಿ ದೇವನು ಬನವಾಸಿಯನ್ನಾಳುತ್ತಿದ್ದಾಗ, ಅವನ ಹೆಂಡತಿ ಲಚ್ಚಲದೇವಿ, 'ಊರ'ನ್ನಾಳುತ್ತಿದ್ದಳು. ಜಗದೇಕಮಲ್ಲ ೨ನೇ ಜಯಸಿಂಹನ ಅಧಿಕಾರಿಯಾದ ವಾವಣರಸನ ಹೆಂಡತಿ ರೇವಕಬ್ಬರಸಿ ಹೊಸಪೂರನ್ನಾಳುತ್ತಿದ್ದು, 'ಮಹಾಪಸಾಯಿತೆ' ಎಂಬ ಅಧಿಕಾರಸೂಚಕ ಉಪಾಧಿಯನ್ನು ಹೊಂದಿದ್ದಳು. ಪಾಂಡ್ಯವಣದ ಸೋಮಲದೇವಿ ಮಂತ್ರಿ ಪದವಿಯನ್ನು ಪಡೆದಿದ್ದಳು. ನಾಗರಖಂಡದ 'ನಾಳ್ಗಾವುಂಡಿ' ಜಕ್ಕಿಯಬ್ಬೆ 'ಉತ್ತಮ ಪ್ರಭುಶಕ್ತಿಯುಕ್ತೆ' ಎಂದೆನಿಸಿದ್ದಳು.

ವಿಜಯಪುರದ (ಈಗಿನ ವಿಜಾಪುರ) ಭಾಗುಬಾಯಿ ಸೇವುಣ ಸಿಂಘಣನ ಕಾಲದಲ್ಲಿ ಹೆಸರಾಂತ ಅಧಿಕಾರಿಯಾಗಿದ್ದಳು. ಹೆಡ, ಕಣಂಬಡೆ ಮತ್ತು ತರ್ದವಾಡಿನಾಡುಗಳ ಆಡಳಿತಗಾರಳಾಗಿದ್ದ ಇವಳು 'ಸರ್ವಾಧಿಕಾರಿ' ಎಂಬ ಪದವಿಯನ್ನು ಹೊಂದಿ, ದಕ್ಷ ಆಡಳಿತೆಯಿಂದ ಅರಸನ 'ಪರಮ ವಿಶ್ವಾಸಿ' ಎಂದೆನಿಸಿದ್ದಳು. ಇವಳ ಮಂತ್ರಿಯ ಹೆಸರು ಕನ್ನುವ ಪಂಡಿತ; ಮಗ ವೇಸುಗಿ. ಸರ್ವಾಧಿಕಾರಿ ಭಾಗುಬಾಯಿ ಮೃತಳಾದಾಗ, ಮಗ ಮತ್ತು ಮಂತ್ರಿ, ಅವಳ ಸ್ಮಾರಕಾರ್ಥವಾಗಿ ಭಾಗಲೇಶ್ವರ ದೇವರನ್ನು ಪ್ರತಿಷ್ಠಾಪಿಸಿದರು.

ಧೀರೆಯರು

ಕನ್ನಡ ಮಹಿಳೆಯರು ಶೌರ್ಯದಲ್ಲೇನು ಕಡಿಮೆಯಿರಲಿಲ್ಲ. ಹೊಯ್ಸಳ ೨ನೇ ಬಲ್ಲಾ

ಳನ ಶಾಸನವೊಂದು ಕೋಣವತ್ತಿಯ ಅಧಿಪತಿಯಾದ ವೆಣ್ಣಲಶೆಟ್ಟಿಕವ್ವೆಯೆಂಬವಳ ಶೌರ್ಯವನ್ನು ಹೀಗೆ ಬಣ್ಣಿಸುತ್ತದೆ:

ಖಳರಳವಂ ಕಳಲ್ಚಿ ನೆರೆಳಳ್ಳರಕೊಳ್ಳೆಯ
ಬಾಧೆಯಂ ಬೇಗ—
......ತೆರಳ್ಚಿ ತೂಳ್ದಿ ನೆಱೆ ಮನ್ನೆಯರಂ
ನ್ನಯವಂ ನಿರಾಕುಳಂ।
ಕಳೆದು ಬಣಂಜು ಧರ್ಮವನೆ ಪಾಳಿಸಿ
ಚಿತ್ತರನೆಯ್ದೆ ಕಾದು ನಿ—
ರ್ಮ್ಮಳತರ ಕೀರ್ತಿಯಂ ಪಡೆದಳಾಪ್ಸರಿ
ವೆಣ್ಣಿಲಸೆಟ್ಟಿಕವ್ವೆಯೊಳ್॥

ಧರೆಗೆಸೆವೀ ಬಣಂಜುಸಮಯ ಪ್ರತಿಪಾಳನ
ವರ್ತ್ತಿಯಿಂದೆ ದು—
ರ್ಧರತರಮಪ್ಪ ಚೆಂಡಿಕೆಯೆ ವೆಣ್ಣಲೆ
ನಾರಿಯೆನಿಪ್ಪ ನಾಮವಂ।
ಧರಿಯಿಸಿ ಕೋಣವರ್ತ್ತಿಗಧಿಪೋತ್ತಮೆ-
ಯಾಗಿಯೇ ಪುಟ್ಟಿವೈರಿ ಸಂ—
ಹರಣಮನೆಯ್ದೆ ಮಾಡಿದಳೆನುತ್ತಮೆ ಬಣ್ಣಿ-
ಸುಗುಂ ಜಗಜ್ಜನಂ॥

ಖಳರನೆ ಕೊಂದು ಮೀಱುವರ ಬಲ್ಗರುಳಂ
ಪಿಡಿದುಚ್ಚಿ ಕೀಱಿ ಮಾ—
ರ್ಬ್ಬಲಿವರ ಮೂಳೆಯಂ ಮುರಿದು ಮೆಚ್ಚದರಂ
ಕಡಿದಿಕ್ಕಿ ಕೋಪದಿಂ।
ಹಳಿವರಸಾವಗಂ ತಱಿದು ದುಷ್ಟರ ನಿಟ್ಟೆಲುವಂ
ನಿಮಿರ್ಚ್ಚಿದಳ್
ಬಲಯುತೆ ದುರ್ಗ್ಗಿಯೋಲ್ ಪ್ರಿಥುವಿ
ಸೆಟ್ಟಿಯೆ ವೆಣ್ಣಲ ನಾರಿ ನಾಮದಿಂ॥

ಸೇವುಣ ರಾಮಚಂದ್ರನಕಾಲದಲ್ಲಿ ಮಹಾದೇವಿಯೆಂಬವಳೊಬ್ಬಳು ದುರ್ಗಾಧಿಪತಿಯಾಗಿದ್ದಳು.

ವಿದ್ಯಾಪಾರಂಗತರು

ಮಹಿಳೆಯರ ಶಿಕ್ಷಣ ವಿಷಯವಾಗಿ ಮಾತ್ರ ನಮಗೆ ಖಚಿತವಾದ ಮಾಹಿತಿ ದೊರೆಯದಿದ್ದರೂ ಶಿಕ್ಷಣ ಸಂಸ್ಥೆಗಳಲ್ಲಿ ಆವರಿಗೆ ಪ್ರವೇಶವಿದ್ದಿತೆಂದು ಊಹಿಸಲವಕಾಶವಿದೆ. ಮೇಲೆ ನೋಡಿದಂತೆ, ಅವರು ಹೊಣೆಗಾರಿಕೆಯ ಸ್ಥಾನಗಳಲ್ಲಿದ್ದುಕೊಂಡು ದಕ್ಷತೆಯಿಂದ ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದುದನ್ನು ಕಂಡಾಗ ಅವರಿಗೆ ತಕ್ಕದಾದ ಶಿಕ್ಷಣ ದೊರೆಯುತ್ತಿದ್ದಿತೆಂಬುದು ಸೂಚಿತವಾಗುತ್ತದೆ. ಅಲ್ಲದೆ, 'ಸರಸ್ವತೀ ಕರ್ಣಾವತಂಸೆ', 'ಅಭಿನವ ಸರಸ್ವತಿ' 'ಸಾಹಿತ್ಯ ವಿದ್ಯಾಧರಿ' ಎಂದು ಮುಂತಾದ ಬಿರುದುಗಳು ಅಂದಿನ ಮಹಿಳೆಯರ ವಿದ್ವತ್ತೆಯ ಕುರುಹುಗಳಾಗಿವೆ.

ಸಾಹಿತ್ಯ ಕ್ಷೇತ್ರದಲ್ಲಿ ಬಹಳಷ್ಟು ಮಹಿಳೆಯರ ಹೆಸರುಗಳು ಕಂಡು ಬರದಿದ್ದರೂ ಕೆಲವರಾದರೂ ಸಾಹಿತ್ಯ ಪ್ರಗತಿಗೆ ಕಾರಣರಾದರು. 'ಕರ್ನಾಟ ಸರಸ್ವತಿ' ವಿಜಯಾಂಬಿಕೆ ಸಂಸ್ಕೃತ ಸಾಹಿತ್ಯಕ್ಕೆ ಕಾಣಿಕೆಯನ್ನಿತ್ತರೆ, ಕಂತಿ, ಅಕ್ಕಮಹಾದೇವಿಯರು ಕನ್ನಡವನ್ನು ಬೆಳೆಯಿಸಿದರು. ರನ್ನನಿಂದ ಅಜಿತ ಪುರಾಣವನ್ನು ಬರೆಯಿಸಿ, ಪೊನ್ನನ ಶಾಂತಿ ಪುರಾಣದ ಪ್ರತಿಗಳನ್ನು ಮಾಡಿಸಿ ಅತ್ತಿಮಬ್ಬೆ ಕನ್ನಡ ಸಾಹಿತ್ಯದ ಪೋಷಕಳಾದಳು.

ಇನ್ನನೇಕ ಅರಸಿಯರು ಇತರರು ಕಲಾವಿದರೂ ಕಲೆಯ ಪೋಷಕರೂ ಆಗಿದ್ದರು. ಮೇಲೆ ಉಲ್ಲಿಖಿತಳಾದ ಲೋಕಮಹಾದೇವಿ 'ಗಂಧರ್ವ'ರಿಗೆ ದಾನಗಳನ್ನಿತ್ತಳು. ತಾನು ಕಟ್ಟಿಸಿದ ದೇವಾಲಯದ ಶಿಲ್ಪಿಗುಂಡನಿಗೆ 'ತ್ರಿಭುವನಾಚಾರಿ' ಎಂಬ ಬಿರುದನ್ನಿತ್ತು ಸತ್ಕರಿಸಿದಳು. 'ಗೀತ, ವಾದ್ಯ, ನೃತ್ಯ'ಗಳ ಪ್ರೋತ್ಸಾಹಕ್ಕೆ, ದಾನಗಳನ್ನಿತ್ತ ಮಹಿಳೆಯರು ಇನ್ನೂ ಎಷ್ಟೋ.'ರೂಪಲಾವಣ್ಯ ವಿಳಾಸ ವಿಭ್ರಮಾಭಾಸಿ'ಯಾದ ಚಾಲುಕ್ಯರಾಣಿ ಕಂಚಲದೇವಿ 'ಸಕಳ ಕಳಾಧರೆ'ಯೆನಿಸಿದ್ದಳು. ಆರ್ಮಡಿ ವಿಕ್ರಮಾದಿತ್ಯನ ಅರಸಿ ಪಿರಿಯ ಕೇತಲದೇವಿ 'ಸಂಗೀತ ವಿದ್ಯಾಧರೆ' ಎಂದು ಹೆಸರಾಂತವಳಾಗಿದ್ದಳು. ನುರಿತ ಕಲಾವಿದೆ ಶಾಂತಲದೇವಿಯಂತೂ ಕನ್ನಡ ಸಂಸ್ಕೃತಿಯ ಸುಮಧುರ ಪುಷ್ಪವೆಂದು ಬಣ್ಣಿಸಲ್ಪಟ್ಟದ್ದಾಳೆ. ಸಕಲ ಧರ್ಮಗಳನ್ನು ಪೋಷಿಸಿ ಧರ್ಮಮೂರ್ತಿಯೆನಿಸಿದ ಇವಳು ಸಂಗೀತ-ನರ್ತನ ವಿಶಾರದೆಯಾಗಿದ್ದಳು. 'ಗೀತವಾದ್ಯ ಸೂತ್ರಧಾರೆ', 'ವಿಚಿತ್ರ ನರ್ತನ .... ಶಿಖಾಮಣಿ' 'ಸಂಗೀತ ಸಂಗತ ಸರಸ್ವತಿ' ಎಂದೂ 'ಭರತಾಗಮ' ಪ್ರವೀಣೆಯೆಂದೂ ಹೊಗಳಲ್ಪಟ್ಟದ್ದಾಳೆ.

ದೇವಾಲಯಗಳಲ್ಲಿ ನೃತ್ಯ, ಸಂಗೀತಗಳ ಸೇವೆಗೆ ಪ್ರಾಮುಖ್ಯವಿದ್ದಿತು. ಅದಕ್ಕಾಗಿ ಕಲಾವಿದೆಯರನ್ನು ಮೀಸಲಾಗಿಡುವ ಪದ್ಧತಿಯೂ ಇದ್ದಿತು. ಅವರ ಪೋಷಣೆಗೆ ದತ್ತಿಗಳನ್ನೂ ಕೊಡಲಾಗುತ್ತಿದ್ದಿತು. ಕಲಚುರ್ಯ ಸಂಕಮನ ಶಾಸನವೊಂದು, ಮಸಯಿಯ ಸಾಹಣಿಯೆಂಬವನು ಮಾಣಿಕೇಶ್ವರ ದೇವಾಲಯದಲ್ಲಿ 'ನೃತ್ಯ ವಿಸ್ತಾರ ಸನ್ಮಂಡಪ'ವನ್ನು ನಿರ್ಮಿಸಿ ಅಲ್ಲಿ ಸೇವೆ ಸಲ್ಲಿಸುವ 'ವಾರಾಂಗನೆ'ಯರಿಗೆ ಮನೆಗಳನ್ನು ಕಟ್ಟಿಸಿಕೊಟ್ಟನೆಂದು ಹೇಳುತ್ತದೆ.

ಈ ರೀತಿಯಾಗಿ, ಕನ್ನಡ ಮಹಿಳೆಗೆ ಸಾಮಾಜಿಕ ಜೀವನದ ಎಲ್ಲ ಅಂಗಗಳಲ್ಲಿಯೂ ಭಾಗವಹಿಸಿ ತನ್ನ ಕರ್ತವ್ಯವನ್ನು ನಿರ್ವಹಿಸಲು ಆಸ್ಪದವಿದ್ದಿತೆಂದೂ ಆ ಆಸ್ಪದವನ್ನವಳು ತನ್ನ ಮತ್ತು ತನ್ನ ನಾಡಿನ ಪ್ರಗತಿಗೆ ಸದುಪಯೋಗಪಡಿಸಿಕೊಳ್ಳುತ್ತಿದ್ದಳೆಂದೂ ಮನದಟ್ಟಾಗುತ್ತದೆ. ಅವಳ ವೈವಿಧ್ಯಮಯ ಜೀವನವನ್ನು ಚಿತ್ರಿಸುವಲ್ಲಿ ಈ ಉದಾಹರಣೆಗಳು ಕೆಲವು ಮಾತ್ರ !*

ಆಧಾರಗಳು:

Epigraphia Indica, vols. XV, XXII, XXXII.

Indian Antiquery, vols. X, XIV.

South Indian Inscriptions, vols. IX, pt. i; vol. XI, pt. i.

Annual Reports on South Indian Epigraphy, 1929-30, 30-31, '33-34 and '40-41.

Annual Reports on Indian Epigraphy, 1949-50, '50-51, '57-58 and '59-60

Epigraphia-Carnatica, vols. II and V.

Journal of the Mythic Society, vol. XLV; Karnataka Number.

* ಈ ಲೇಖನ ಬರೆಯುವುದರಲ್ಲಿ ಸಹಾಯ ಮಾಡಿದ ನನ್ನ ಮಿತ್ರರೂ ಸಹೋದ್ಯೋಗಿಗಳೂ ಆದ ಶ್ರೀ ಕೊಳುವೈಯಲ್ ರಮೇಶ ಇವರಿಗೆ ನನ್ನ ಕೃತಜ್ಞತೆಗಳು. ಇದರಲ್ಲಿ ಕೆಲವು ಅಪ್ರಕಟಿತ ಶಾಸನಗಳನ್ನು ಬಳಸಿಕೊಳ್ಳಲು ಶಾಸನ ಶಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಎಚ್. ಕೆ. ನರಸಿಂಹಸ್ವಾಮಿಯವರು ಅನುಮತಿ ನೀಡಿ ಉಪಕರಿಸಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು ಸಲ್ಲುತ್ತವೆ.

ನಮ್ಮ ಯೋಜನೆಗಳು:

ಸಮೀಕ್ಷೆ ಹಾಗೂ ಪ್ರತೀಕ್ಷೆ

ಲೇಖಕರು:
ಡಾ. ಎನ್. ಎ.
ಮುಜುಮದಾರ
ಎಂ. ಎ. ಪಿ. ಎಚ್. ಡಿ.
ಮುಂಬಯಿ

ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಪಂಚವಾರ್ಷಿಕ ಯೋಜನೆಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿರುವ ಸಂಗತಿ ಸರ್ವವಿದಿತವಾಗಿದೆ. ಈಗಾಗಲೇ ಎರಡನೆ ಯೋಜನೆ ಮುಗಿದು ಮೂರನೆ ಯೋಜನೆಯಲ್ಲಿ ನಾವು ಕಾಲಿರಿಸಿದ್ದೇವೆ. ಈ ಸಂದರ್ಭದಲ್ಲಿ ಯೋಜನೆಗಳಿಂದಾದ ಪ್ರಯೋಜನವನ್ನು ಅರಿತುಕೊಂಡು ಮುನ್ನಡೆಯಬೇಕಾಗಿದೆ. ಇಂತಹ ಒಂದು ಸಮೀಕ್ಷೆ ಮತ್ತು ಪ್ರತೀಕ್ಷೆಯ ನೋಟವನ್ನು ಲೇಖಕರು ಇಲ್ಲಿ ಒದಗಿಸಿದ್ದಾರೆ.

ಪ್ರತಿ ಸಾಮೀಪ್ಯದಿಂದ ವ್ಯಕ್ತಿಗಳ ಅಥವಾ ಸಂಗತಿಗಳ ಮಹತಿಯನ್ನು ನಾವು ಅರಿಯದೆ ಹೋಗುವ ಸಂಭವವಿದೆ ಎಂದು ಹೇಳುವದು ಸುಳ್ಳಲ್ಲ. ಭಾರತವು ತನ್ನ ಆರ್ಥಿಕ ವ್ಯವಸ್ಥೆಯನ್ನು ಸುಯೋಜಿತ ರೀತಿಯಲ್ಲಿ ರೂಪಿಸಹತ್ತಿ ೧೦ ವರ್ಷಗಳು ಕೊನೆಗಂಡವು; ಎರಡು ಪಂಚವಾರ್ಷಿಕ ಯೋಜನೆಗಳಿಂದ ಬಲಗೊಂಡು, ನಮ್ಮ ಅರ್ಥವ್ಯವಸ್ಥೆಯು ಮೈ-ತುಂಬಿಕೊಂಡು, ೩ ನೆಯ ಯೋಜನೆಯ ಪ್ರೌಢಾವಸ್ಥೆಯಲ್ಲಿ ಇದೀಗ ತಾನೇ ಕಾಲಿಟ್ಟಿದೆ. ದೇಶದ ಸರ್ವಾಂಗೀಣ ಆರ್ಥಿಕ ಅಭಿವೃದ್ಧಿಯನ್ನು ಈ ರೀತಿ ಯೋಜನೆಗಳಿಂದ ಸಾಧಿಸಬಲ್ಲ ಪ್ರಯೋಗವು ಭಾರತದಲ್ಲಷ್ಟೇ ಅಲ್ಲ, ಇಡಿಯ ವಿಶ್ವದಲ್ಲೇ ಒಂದು ವಿಶಿಷ್ಟ ಮಹತ್ವವನ್ನು ತಾಳಿದೆ. ಈ ವೈಶಿಷ್ಟ್ಯವನ್ನು ಸುಶಿಕ್ಷಿತರಾದ ನಾವೂ ಎಷ್ಟೋ ಸಲ ತಿಳಿಯದೆ ಹೋ-ಗುವೆವು. "ಯೋಜನೆ ಬೇಕೋ? ಬೇಡ-ವೋ?" ಎಂಬ ತಾತ್ವಿಕ ಚರ್ಚೆಗೆ ಈಗ ಅವಕಾಶವೇ ಉಳಿದಿಲ್ಲ. ಪ್ರಜಾಪ್ರಭುತ್ವದ ರಾಜ್ಯ ವ್ಯವಸ್ಥೆಯಲ್ಲಿಯೇ ಆರ್ಥಿಕ ಅಭಿವೃದ್ಧಿಯ ವ್ಯಾಪಕವಾದ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವದು ಸಾಧ್ಯವಿದೆ ಎಂಬದನ್ನು ಪ್ರತ್ಯಕ್ಷ ಪ್ರದರ್ಶಿಸಿದ ಅಪೂರ್ಣ ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿ ಭಾರತವೆ ಅಗ್ರಗಣ್ಯವಾಗಿದೆ. ಅಂತೆಯೆ ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ದೇಶಗಳೂ ನಮ್ಮ ಯೋಜನೆಯಲ್ಲಿ ಪಾಲುಗಾರರಾಗಿ, ಅಭಿವೃದ್ಧಿಯ ನೊಗಕ್ಕೆ ಹೆಗಲು ಕೊಡುತ್ತಿದ್ದಾರೆ.

ಇಂಥ ಅಪೂರ್ವ ಪ್ರಯೋಗದ ಯಶಸ್ಸಿಗಾಗಿ ಅವಶ್ಯವಿದ್ದ ಕೆಲ ಸಂಗತಿಗಳೂ ಭಾರತದಲ್ಲಿವೆ ಎಂಬ ಮಾತನ್ನು ನಾವು ಮರೆಯಬಾರದು. ಮುಖ್ಯವಾಗಿ ದೀರ್ಘಕಾಲೀನ ಅಭಿವೃದ್ಧಿಯೋಜನೆಗಳನ್ನು ದೇಶವು ಅನುಸರಿಸಬೇಕಾದರೆ ರಾಜಕೀಯ ಸ್ತಿಮಿತ ಅತ್ಯವಶ್ಯ. ಸುದೈವದಿಂದ ಸ್ವಾತಂತ್ರ್ಯದ ನಂತರದಿಂದ ಈ ವರೆಗೂ ಇಂಥ ರಾಜಕೀಯ ವಾತಾವರಣವು ಉಂಟು.

ಯೋಜನೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಸಲು ಬೇಕಾದುದು ಸುವ್ಯವಸ್ಥಿತ ಆಡಳಿತ ವರ್ಗ. ಬ್ರಿಟಿಶರ ಕಾಲದಲ್ಲಿಯೇ ಈ ಆಡಳಿತವರ್ಗವು ನಿರ್ಮಾಣವಾಗಿದ್ದರೂ ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಅವಶ್ಯವಿದ್ದ ಹೊಸ ವಾತಾವರಣಕ್ಕೆ ತೀವ್ರವೇ ಅದು ಹೊಂದಿಕೊಂಡಿದೆ. ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಣಕ್ಕೂ ಬಹಳ ಮಹತ್ವದ ಸ್ಥಾನವಿದೆ. ಶಿಕ್ಷಣವೆಂದರೆ ಬರಿ ಔಪಚಾರಿಕ ಶಿಕ್ಷಣವಲ್ಲ; ಸಾಮಾಜಿಕ ಪ್ರಜ್ಞೆ, ಪರಂಪರಾಗತವಾದ ನಮ್ಮ ಸಂಸ್ಕೃತಿಯಿಂದ ಇಂಥ ಸಾಮಾಜಿಕ ಶಿಕ್ಷಣವು ಪ್ರತಿ ಹಳ್ಳಿಹಳ್ಳಿಯಲ್ಲೂ ಬೇರೂರಿದೆ. ಈ ಸಂಸ್ಕೃತಿಯ ಹಿನ್ನೆಲೆಯಿರದಿದ್ದರೆ, ಹಳ್ಳಿಗಳ ನಾಡಾದ ಭಾರತದಲ್ಲಿ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವದು ಅಸಾಧ್ಯದ ಮಾತೇ ಆಗುತ್ತಿತ್ತು.

೧೦ ವರ್ಷಗಳ ಪ್ರಗತಿ

ಈ ಯೋಜನೆಯ ದಶಕದಲ್ಲಿ ನಾವು ಏನನ್ನು ಸಾಧಿಸಿದ್ದೇವೆ? ಎರಡೂ ಯೋಜನೆಗಳಲ್ಲಿ ಒಟ್ಟು ನಾವು ೧೦ ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ವಿನಿಯೋಗಿಸಿದೆವು. ತನ್ಮೂಲಕ ೧೯೫೧—೬೧ ಈ ಅವಧಿಯಲ್ಲಿ ನಮ್ಮ ರಾಷ್ಟ್ರೀಯ ಆದಾಯವು ನೂರಕ್ಕೆ ೪೨ ರಷ್ಟು ಹೆಚ್ಚಿತು; ತಲಾ ಆದಾಯವು ನೂರಕ್ಕೆ ೨೦ ರಷ್ಟು, ತಲಾ ಉಪಭೋಗವು ನೂರಕ್ಕೆ ೧೬ ರಷ್ಟೂ ಹೆಚ್ಚಾದವು.

ತಲಾ ಆದಾಯ, ತಲಾ ಉಪಭೋಗ ಇವೆಲ್ಲ ಬರಿ ಅರ್ಥಶಾಸ್ತ್ರಜ್ಞರು ವಿವೇಚಿಸಬೇಕಾದ ವಿಚಾರಗಳಲ್ಲ. ಇವನ್ನೇ ಹೆಚ್ಚು ಅರ್ಥವತ್ತಾಗಿಯೂ ನಿರೂಪಿಸಬಹುದು. ಮೊದಲಯೋಜನೆಯನ್ನು ಆರಂಭಿಸುವಾಗ ನಮ್ಮ ದೇಶವು ಬರಿ ೫೨ ದಶಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳನ್ನು ಉತ್ಪಾದಿಸುತ್ತಿತ್ತು; ಆದರೆ ಇಂದು ಆ ಉತ್ಪಾದನೆ ೭೯ ದಶಲಕ್ಷ ಟನ್ನುಗಳಿಗಿಂತ ಹೆಚ್ಚೇ ಆಗಿದೆ. ಅದರಂತೆ ಇನ್ನುಳಿದ ಒಕ್ಕಲತನದ ಹುಟ್ಟುವಳಿಗಳ ಉತ್ಪಾದನೆಯೂ ಹೆಚ್ಚಾಗಿದೆ. ಇದಲ್ಲದೆ ಈ ೧೦ ವರ್ಷಗಳಲ್ಲಿ ಸಮಾಜವಿಕಾಸ ಯೋಜನೆ ಹಾಗೂ ರಾಷ್ಟ್ರೀಯ ವಿಸ್ತರಣೆ ಕಾರ್ಯಕ್ರಮ ಇವು ದೇಶದಾದ್ಯಂತ ವಿಸ್ತರಿಸಿವೆ. ೫ ಲಕ್ಷ ಹಳ್ಳಿಗಳಲ್ಲಿ ವಾಸಿಸುವ ೨೦ ಕೋಟಿ ಜನರು ಈ ಯೋಜನೆಗಳ ಲಾಭ ಪಡೆಯುತ್ತಿದ್ದಾರೆ. ೧೯೬೩ ರಲ್ಲಿ ಇಡಿಯ ಗ್ರಾಮೀಣ ಭಾರತವು ಇದರ ಕಕ್ಷೆಯಲ್ಲಿ ಬರುವುದು. ಈಗಾಗಲೇ ೩೧ ಸಾವಿರ ಗ್ರಾಮಸೇವಕರು ಹಾಗೂ ೨೮ ಸಾವಿರ ವಿಸ್ತರಣಾ ಅಧಿಕಾರಿಗಳು ಈ ಕಾರ್ಯಕ್ರಮಗಳಲ್ಲಿ ಕೆಲಸಮಾಡುತ್ತಿದ್ದಾರೆಂಬುದನ್ನು ನೆನೆದರೆ, ಈ ಯೋಜನೆಗಳ ಗಾತ್ರದ ಕಲ್ಪನೆ ಬರಲು ಸಾಕು. ನೀರಾವರಿಯ ಕ್ಷೇತ್ರವು ೫೧ ದಶಲಕ್ಷ ಎಕರೆಯಷ್ಟಿದ್ದುದು, ಈಗ ೬೦ ದಶಲಕ್ಷ ಎಕರೆಯಾಗಿದೆ. ೧೯೫೧ ರಲ್ಲಿ ೧೦೫,೦೦೦ ಹಳ್ಳಿಯ ಸಹಕಾರಿ ಸಂಸ್ಥೆಗಳಿದ್ದುದಾದರೆ, ಈಗ ಆ ಸಂಖ್ಯೆ ೧೮೩,೦೦೦ ಕ್ಕೆ ಏರಿದೆ; ಅವುಗಳ ಸದಸ್ಯತ್ವ ೪.೪ ದಶಲಕ್ಷದಿಂದ ೧೨ ದಶಲಕ್ಷಕ್ಕೆ ಏರಿದೆ. ಹೀಗೆ ಒಕ್ಕಲತನದ ತೀವ್ರ ಪ್ರಗತಿಗೆ ಇವೆಲ್ಲ ಯೋಜನೆಗಳು ಭದ್ರವಾದ ಅಸ್ತಿವಾರವನ್ನು ಹಾಕಿಕೊಟ್ಟಿವೆ.

ಔದ್ಯೋಗೀಕರಣದಲ್ಲೂ ದೇಶವು ಭರದಿಂದ ಪ್ರಗತಿಹೊಂದುತ್ತಿದೆ. ಹಾಗೆ ನೋಡಿದರೆ ಈ

ವಿಭಾಗದಲ್ಲಿಯ ಪ್ರಗತಿಯ ವೇಗವು ಒಕ್ಕಲತನದ ಪ್ರಗತಿಗಿಂತಲೂ ಅಧಿಕವಾಗಿದೆ. ಏಕೆಂದರೆ ಔದ್ಯೋಗಿಕ ಉತ್ಪಾದನೆ ಈ ಅವಧಿಯಲ್ಲಿ ನೂರಕ್ಕೆ ೬೦ ರಷ್ಟು ಹೆಚ್ಚಾಗಿದೆ. ಮುಖ್ಯವಾಗಿ ಎರಡನೆಯ ಯೋಜನೆಯು ಮೂಲ ಉದ್ದಿಮೆಗಳ ಅಭಿವೃದ್ಧಿಗೆ ಇಂಬು ಮಾಡಿಕೊಟ್ಟಿದೆ. ಬರಿಯ ೧ ದಶಲಕ್ಷ ಟನ್ನುಗಳಷ್ಟು ಉಕ್ಕು ಉತ್ಪಾದಿಸುತ್ತಿದ್ದ ಭಾರತವು, ಇಂದು ೪.೫ ಲಕ್ಷ ಟನ್ನುಗಳಷ್ಟು ಉತ್ಪಾದಿಸಬಲ್ಲದಾಗಿದೆ. ಅದರಂತೆ ಔದ್ಯೋಗಿಕ ಅಭಿವೃದ್ಧಿಗೆ ಅತ್ಯಾವಶ್ಯಕವಾದ ಸಿಮೆಂಟು, ಕಲ್ಲಿದ್ದಲಿ, ಅಲ್ಯೂಮಿನಿಯಮ್, ಇವೆಲ್ಲವುಗಳ ಉತ್ಪಾದನೆಯೂ ಹೆಚ್ಚುತ್ತ ನಡೆದಿದೆ.

ಔದ್ಯೋಗೀಕರಣಕ್ಕೆ ಈ ಮೂಲ ಉದ್ದಿಮೆಗಳಷ್ಟೇ ಅವಶ್ಯವಾದ ವಿಷಯಗಳೆಂದರೆ ವಿದ್ಯುಚ್ಛಕ್ತಿ ಮತ್ತು ಸಾರಿಗೆ ಸೌಕರ್ಯಗಳು. ೧೯೫೦-೫೧ ರಲ್ಲಿ ದೇಶದಲ್ಲಿ ಉತ್ಪಾದಿಸಲ್ಪಡುತ್ತಿದ್ದ ವಿದ್ಯುಚ್ಛಕ್ತಿ ೨.೩ ಲಕ್ಷ ಕಿಲೋವ್ಯಾಟ್ಸದಷ್ಟಿತ್ತು; ಇಂದು ಅದು ೫.೮ ಲಕ್ಷಕ್ಕೆ ಏರಿದೆ. ಹಾಗೆಯೇ ರೇಲ್ವೆ ಹಾಗೂ ರಸ್ತೆಗಳ ಬೆಳವಣಿಗೆಯೂ ಸಾಗಿದೆ.

ಈ ರೀತಿ ಕೆಲ ನಿರ್ದಿಷ್ಟ ವಿಷಯಗಳನ್ನು ನೋಡಿದೆವೆಂದರೆ ದೇಶದ ಪ್ರಗತಿಯ ಸ್ಥೂಲ ಕಲ್ಪನೆ ಬರದಿರದು. ದೇಶವು ಆಹಾರ ವಿಷಯದಲ್ಲಿ ಬರಗಾಲ ಪರಿಸ್ಥಿತಿಯನ್ನು ಎದುರಿಸಬೇಕಾದೀತು, ಎಂಬ ಅಭಿಪ್ರಾಯವನ್ನು ಅಮೇರಿಕನ್ ತಜ್ಞರ ಸಮಿತಿಯೊಂದು ವ್ಯಕ್ತಪಡಿಸಿದ ಎರಡು ವರ್ಷಗಳಲ್ಲೇ, ದೇಶಕ್ಕೆ ಅವಶ್ಯವಿದ್ದ ಆಹಾರವನ್ನು ಉತ್ಪಾದಿಸಿ ನಮ್ಮ ಅರ್ಥವ್ಯವಸ್ಥೆಯ ಅಭಿವೃದ್ಧಿಯನ್ನು ಪ್ರದರ್ಶಿಸಿದಂತಾಗಿದೆ. ಹಾಗೆಯೇ ನಮ್ಮ ದೇಶದಲ್ಲಿ ಉತ್ಪಾದಿಸಲ್ಪಟ್ಟ ಇಂಜಿನಿಯರಿಂಗ ಹಾಗೂ ಇಲೆಕ್ಟ್ರಿಕ್ ಸರಕುಗಳು ನಿರ್ಯಾತವಾಗುತ್ತಿರುವದೂ ಒಂದು ಅಭಿಮಾನದ ಸಂಗತಿಯೇ ಸರಿ. ಭವಿಷ್ಯತ್ತಿನಲ್ಲಿ ಎದುರಿಸಬೇಕಾದ ಸಮಸ್ಯೆಗಳು ಕಠಿಣತರವಿರಬಹುದೆಂಬದನ್ನು ಇಲ್ಲಿ ಅಲ್ಲಗಳೆಯಲೆತ್ನಿಸಿಲ್ಲ; ಆದರೆ ಭೂತಕಾಲದಲ್ಲಿ ನಾವು ಸಾಧಿಸಿದ ಪ್ರಗತಿಯಿಂದ ಒಂದು ದೃಢವಾದ ಆತ್ಮವಿಶ್ವಾಸವು ನಮ್ಮಲ್ಲಿ ಬೆಳೆದಿದೆ ಎಂದು ಮಾತ್ರ ಹೇಳಿದೆ, ಅಷ್ಟೆ.

ಮೂರನೆಯ ಯೋಜನೆ

ಈ ಆತ್ಮವಿಶ್ವಾಸವೇ ಎರಡೂ ಯೋಜನೆಗಳಿಗಿಂತ ದೊಡ್ಡದಾದ ಮೂರನೆಯ ಯೋಜನೆಯನ್ನು ಕೈಕೊಳ್ಳಲು ನಮ್ಮನ್ನು ಪ್ರಚೋದಿಸಿದೆ. ಈ ಹತ್ತು ವರುಷಗಳಲ್ಲಿ ಸಾಧಿಸಿದ್ದನ್ನು ಐದೇ ವರುಷಗಳಲ್ಲಿ ಸಾಧಿಸುವ ಹೆಗ್ಗುರಿ ಮೂರನೆಯ ಯೋಜನೆಯದಾಗಿದೆ. ೧೯೬೦-೬೧ ರಿಂದ ೧೯೬೫-೬೬ ರ ಅವಧಿಯಲ್ಲಿ ೧೦೪೦೦ ಕೋಟಿ ರೂಪಾಯಿಗಳಷ್ಟು ಹಣವನ್ನು ವಿನಿಯೋಗಿಸಲಾಗುವುದು. ಈ ಹಣವನ್ನು ವಿವಿಧ ಕಾರ್ಯಕ್ರಮಗಳಲ್ಲಿ ಹೇಗೆ ವಿಭಜಿಸಲಾಗಿದೆಯೆಂಬದನ್ನು ಲೇಖನದ ಕೊನೆಗೆ ಕೊಟ್ಟ ಅಂಕಿ-ಸಂಖ್ಯೆಗಳಲ್ಲಿ ಕಾಣಬಹುದು. ಮೂರನೆಯ ಯೋಜನೆಯ ಕೊನೆಗೆ ನಮ್ಮ ರಾಷ್ಟ್ರೀಯ ಆದಾಯವು ನೂರಕ್ಕೆ ೩೦ ರಷ್ಟು ಹೆಚ್ಚಾಗುವದು; ತತ್ಪರಿಣಾಮವಾಗಿ ಈಗ ೩೩೦ ರೂಪಾಯಿಯಷ್ಟಿದ್ದ ನಮ್ಮ ತಲಾ ಆದಾಯವು ೩೮೫ ಕ್ಕೆ ಏರುವುದು.

ಆಹಾರ ವಿಷಯದಲ್ಲಿ ಸಂಪೂರ್ಣ ಸ್ವಾವಲಂಬಿಯಾಗುವದೂ ಯೋಜನೆಯ ಮುಖ್ಯ ಉದ್ದೇಶಗಳಲ್ಲೊಂದು. ಅಂತೆಯೇ ೧೯೬೫-೬೬ ರಲ್ಲಿ ೧೦ ಕೋಟಿ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸುವ ಗುರಿಯಿಟ್ಟುಕೊಳ್ಳಲಾಗಿದೆ. ಇದಕ್ಕಾಗಿಯೇ ಕೃಷಿ ಅಭಿವೃದ್ಧಿಗಾಗಿ ಎರಡನೆಯ ಯೋಜನೆಗಿಂತ ಈ ಸಲ ಹೆಚ್ಚು ಹಣ ಕಾಯ್ದಿರಿಸಲಾಗಿದೆ. ಹಾಗೆಯೇ ಉಕ್ಕು, ರಾಸಾಯನಿಕ ಉದ್ದಿಮೆ ವಿದ್ಯುಚ್ಛಕ್ತಿ ಮುಂತಾದ ಮೂಲ ಉದ್ದಿಮೆಗಳಿಗೂ ಹೆಚ್ಚು ಪ್ರಾಶಸ್ತ್ಯವೀಯಲಾಗಿದೆ. ಅಲ್ಲದೆ, ಹೆಚ್ಚು ಹೆಚ್ಚು ಜನರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಟ್ಟು ದೇಶದ ಅಪಾರವಾದ ಮಾನವ ಸಂಪತನ್ನೂ ಉಪಯೋಗಿಸಿಕೊಳ್ಳುವ ಯೋಜನೆಮಾಡಲಾಗಿದೆ. ಔದ್ಯೋಗಿಕ ಉತ್ಪಾದನೆ ನೂರಕ್ಕೆ ೭೦ ರಷ್ಟು ಹೆಚ್ಚಬೇಕೆಂದು ಗುರಿಯಿಟ್ಟುಕೊಳ್ಳಲಾಗಿದೆ.

ಸಾಮಾನ್ಯ ಮನುಷ್ಯನ ದೃಷ್ಟಿಯಿಂದ ಹೇಳಬೇಕಾದರೆ, ಮೂರನೆಯ ಯೋಜನೆಯು ಮುಗಿದಾಗ, ನಮಗೆ ಈಗ ಲಭ್ಯವಿರುವ ದೈನಂದಿನ ೨೧೦೦ ಕ್ಯಾಲರಿಗಳಷ್ಟು ಆಹಾರವು ೨೩೦೦ ಕ್ಯಾಲರಿಗಳಿಗೆ ಹೆಚ್ಚಾಗುವದು. ಹಾಗೆಯೇ ಈಗ ತಲಾ ೧೫.೫ ಯಾರ್ಡುಗಳಷ್ಟು ಬಟ್ಟೆ ಲಭ್ಯವಿದ್ದರೆ, ಮೂರನೆಯ ಯೋಜನೆಯ ನಂತರ ನಮಗೆ ೧೭.೩ ಯಾರ್ಡುಸಿಕ್ಕುವದು.

ಪ್ರತೀಕ್ಷೆ

ನಮ್ಮ ಪಂಚವಾರ್ಷಿಕ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಸಲು ಪರದೇಶಗಳ ಸಹಾಯವನ್ನು ನಾವು ಪಡೆಯುತ್ತಿದ್ದೇವೆ. ಈ ಹತ್ತು ವರುಷಗಳಲ್ಲಿ ಸುಮಾರು ೨೯೯೦ ಕೋಟಿ ರೂಪಾಯಿಗಳಷ್ಟು ಧನ ಸಹಾಯ ನಮಗೆ ಸಿಗಲು ಸಾಧ್ಯವಾಗಿದೆ. ದೇಶವು ಈ ಬಾಹ್ಯ ಸಹಾಯವನ್ನು ಅವಲಂಬಿಸದೇ, "ಆತ್ಮಾನಂ ಆತ್ಮನೇವ ಉದ-ರೇತ್" ಸ್ಥಿತಿಗೆ ಬರಬೇಕಾದರೆ ಇನ್ನೂ ಹತ್ತು ವರುಷಗಳು ಬೇಕೆಂದು ಅಂದಾಜು ಮಾಡಲಾಗಿದೆ. ನಮ್ಮ ಐದನೆಯ ಯೋಜನೆಯ ಹೊತ್ತಿಗೆ, ಅಂದರೆ ೧೯೭೦-೭೫ ರಲ್ಲಿ ಈ ಸ್ವಾವಲಂಬನ ಪ್ರಾಪ್ತವಾಗಬಹುದು. ಈ ದೃಷ್ಟಿಯಿಂದ ಮೂರನೆಯ ಯೋಜನೆಯು ಆ ಗುರಿಯ ದಾರಿಯಲ್ಲಿ ಒಂದು ಮಹತ್ವದ ಮೈಲುಗಲ್ಲಾಗಿದೆಯೆಂದು ಹೇಳಬಹುದು.

ನಮ್ಮ ಬೆಳೆಯುತ್ತಿರುವ ಜನಸಂಖ್ಯೆಯು ತ್ವರಿತ ಗತಿಗೆ ಒಂದು ತೊಡಕೇ ಆಗಿ ಪರಿಣಮಿಸಿದೆ. ೧೯೬೧ ರ ಜನಗಣತಿಯ ಅಂಕಿಸಂಖ್ಯೆಗಳನ್ನು ಬೇರೆ ಬೇರೆ ಸಂಖ್ಯಾಶಾಸ್ತ್ರಜ್ಞರು ಅಂದಾಜು ಮಾಡಿದ್ದ ಎಲ್ಲ ಸಂಖ್ಯೆಗಳನ್ನೂ ಮೀರಿ ನಿಂತವು! ಬಹುಳವಾದರೆ ನಮ್ಮ ಜನಸಂಖ್ಯೆ ನೂರಕ್ಕೆ ವರುಷಕ್ಕೆ ೧.೫ ರಷ್ಟು ಹೆಚ್ಚಾಗುತ್ತ ಹೋಗಬಹುದೆಂದು

ಮೊದಲು ಅಂದಾಜು ಮಾಡಲಾಗಿತ್ತು. ಈಗ ಅದು ನೂರಕ್ಕೆ ವರುಷಕ್ಕೆ ೨ ರಷ್ಟು ಹೆಚ್ಚುತ್ತ ನಡೆದಿದೆ ಎಂದು ಕಂಡುಬಂದಿತು. ಅಂತೆಯೇ ಅಭಿವೃದ್ಧಿಯ ಗತಿಯನ್ನು ಹೆಚ್ಚಿಸಬೇಕಾದರೆ ನಮ್ಮ ಕುಟುಂಬ ಯೋಜನೆಯ ಕಾರ್ಯಕ್ರಮಗಳು ಹೆಚ್ಚು ಪ್ರಚಾರದಲ್ಲಿ ಬರಬೇಕಾಗಿದೆ. ಜನಸಂಖ್ಯೆಯನ್ನು ನಿಯಂತ್ರಣದಲ್ಲಿಡದೆ ಹೋದರೆ, ನಮ್ಮ ಅಭಿವೃದ್ಧಿ ಯೋಜನೆಯ ಶಕ್ತಿಯೆಲ್ಲ ಈಗಿದ್ದ ಜೀವನ ಮಟ್ಟವು ಕಡಿಮೆಯಾಗದಂತೆ ನೋಡಿಕೊಳ್ಳುವದರಲ್ಲೇ ವ್ಯಯಿಸಿಹೋಗಬಹುದು!

ಕೊನೆಯದಾಗಿ, ಅಭಿವೃದ್ಧಿ ಯೋಜನೆಗಳು ಬರಿಯ ಹಣದ ವಿನಿಯೋಗ, ಉತ್ಪಾದನೆಯ ಗುರಿ ಇವುಗಳ ಗಂಟಲ್ಲ; ಅವು ದೇಶದ ಜನರ ಮೂಲಭೂತ ಮೌಲ್ಯ, ಆಶೆ ಆಕಾಂಕ್ಷೆಗಳ ಪ್ರತಿಬಿಂಬ. ಅಂತೆಯೇ ಮೊದಲನೆಯ ಯೋಜನೆಯ ಮೊದಲನೆಯ ಪುಟದಲ್ಲಿಯೇ ಅಭಿವೃದ್ಧಿ ಯೋಜನೆಯ ಅಂತಿಮ ಗುರಿ "ತುಂಬುಜೀವನ"ವನ್ನು ಜನರಿಗೆ ಲಭ್ಯಮಾಡಿಕೊಡುವದೆಂದು ಸಾರಿದೆ. ಅದಕ್ಕಾಗಿಯೆ ನಮ್ಮ ಸಮಾಜವಾದೀ ಸಮಾಜ ವ್ಯವಸ್ಥೆಯೂ ಯೋಜನೆಯೊಂದಿಗೆ ಹಾಸುಹೊಕ್ಕಾಗಿ ಹೆಣೆಯಲ್ಪಟ್ಟಿದೆ. ಅಷ್ಟೇ ಅಲ್ಲ. ಸ್ವಲ್ಪ ದೂರ ದೃಷ್ಟಿಯಿಂದ ನೋಡುವದಾದರೆ, ಈಗ ಅಭಿವೃದ್ಧಿ ಹೊಂದಿದ ಸಮಾಜಗಳಲ್ಲಿ ಕಂಡುಬರುತ್ತಿರುವ ಔದ್ಯೋಗೀಕರಣದ ಪರಿಣಾಮವಾಗಿ ಅನೇಕ ಕುಂದು ಕೊರತೆಗಳು ನಮ್ಮ ದೇಶದಲ್ಲಿ ಉದ್ಭವಿಸದಂತೆ ನೋಡಿಕೊಳ್ಳಲು ಬರಬಹುದು. ಇದು ಸಾಧ್ಯವಾದಲ್ಲಿ ನಮ್ಮ ಅಭಿವೃದ್ಧಿ ಯೋಜನೆಗೆ ಇನ್ನೊಂದು ವೈಶಿಷ್ಟ್ಯವನ್ನು ತಂದುಕೊಟ್ಟಂತಾದೀತು.

ತೀರ ಮುಂದುವರೆದ ದೇಶಗಳೂ ಆರ್ಥಿಕ ಅಭಿವೃದ್ಧಿಯ ಅಂತಿಮ ಗುರಿಯೇನು? ಎಂಬ ಪ್ರಶ್ನೆಯನ್ನು ಇತ್ತೀಚೆಗೆ ವಿವೇಚಿಸುತ್ತಿವೆ. ಮಾನವನಿಗೆ ಅನೇಕ ಉಪಭೋಗವಸ್ತುಗಳನ್ನೂ ವಿರಾಮಕಾಲವನ್ನೂ ಒದಗಿಸಿದ ಮಾತ್ರಕ್ಕೆ, ಅವನು ಸುಖಿಯಾಗುವನೇ? ಎಂಬ ಪ್ರಶ್ನೆಯನ್ನು ಅರ್ಥಶಾಸ್ತ್ರಜ್ಞರು ಸಹ ವಿಚಾರಿಸಬೇಕಾಗಿದೆ. ತತ್ತ್ವಜ್ಞಾನದ ನಾಡಾದ ಭಾರತವು ತನ್ನ ದೃಷ್ಟಾಂತದಿಂದ ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನೊದಗಿಸಬಹುದೆಂದು ಆಶಿಸಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಪರಿಶಿಷ್ಟ

೨ ನೆಯ ಹಾಗೂ ೩ ನೆಯ ಯೋಜನೆಯಲ್ಲಿ ಹಣದ ವಿನಿಯೋಗ

ಕಾರ್ಯಕ್ರಮ	ಎರಡನೆಯ ಯೋಜನೆಯಲ್ಲಿ (ಕೋಟಿ ರೂ.)	ನೂರಕ್ಕೆ	ಮೂರನೆಯ ಯೋಜನೆಯಲ್ಲಿ (ಕೋಟಿ ರೂ.)	ನೂರಕ್ಕೆ
ಒಕ್ಕಲತನ ಹಾಗೂ ಸಮಾಜ ವಿಕಾಸ	೮೩೫	೧೨	೧೪೬೦	೧೪
ದೊಡ್ಡ ಹಾಗೂ ಮಧ್ಯಮ ನೀರಾವರಿ	೪೨೦	೬	೬೫೦	೬
ವಿದ್ಯುಚ್ಛಕ್ತಿ	೪೮೫	೭	೧೦೬೨	೧೦
ಗ್ರಾಮೀಣ ಉದ್ಯೋಗಗಳು	೨೬೫	೪	೪೨೫	೪
ದೊಡ್ಡ ಉದ್ದಿಮೆ ಹಾಗೂ ಖನಿಜ	೧೫೪೫	೨೩	೨೫೭೦	೨೫
ಸಾರಿಗೆ	೧೪೧೦	೨೧	೧೭೩೬	೧೭
ಸಮಾಜಸೇವೆಗಳು	೧೨೯೦	೧೯	೧೬೯೭	೧೬
ಸಂಗ್ರಹಗಳು (Inventries)	೫೦೦	೮	೮೦೦	೮
ಒಟ್ಟು	೬೭೫೦	೧೦೦	೧೦,೪೦೦	೧೦೦

ಮುಂಬಯಿ ಜೀವನದ ಅನುಭವಗಳು



ಮುಂಬಯಿ ಜೀವನದ ಬಗ್ಗೆ ವಿಚಿತ್ರ ಕಲ್ಪನೆಗಳು ಸ್ವಾಭಾವಿಕವಾಗಿಯೇ ನಮ್ಮಲ್ಲಿ ಮೂಡಿರುತ್ತವೆ. ಆದರೆ ಲೇಖಕರು ಇಲ್ಲಿ ಅವನ್ನೆಲ್ಲ ನಿವಾರಿಸಲು ಸ್ವಾನುಭವದ ವಿವರಣೆಯಿಂದ ಪ್ರಯತ್ನಿಸಿದ್ದಾರೆ. ಮುಂಬಯಿಯಲ್ಲಿ ಏನನ್ನೂ ಕಲಿಯಬಹುದು, ಯಾವುದನ್ನೂ ಸಾಧಿಸಬಹುದು; ಇಲ್ಲಿ ಎಲ್ಲವೂ ಸಮುದ್ರದಷ್ಟೇ ಸಮೀಪ, ಸಮುದ್ರಷ್ಟೇ ಆಳ, ಸಮುದ್ರದಷ್ಟೇ ಗಂಭೀರ. ಅರಿವ ಕುತೂಹಲ, ಪ್ರಾಮಾಣಿಕತೆ, ಶ್ರದ್ಧೆ–ಧೈರ್ಯ ಇದ್ದರೆ ಒಳ್ಳೆ ಫಲ ದೊರೆಯುವಲ್ಲಿ ಸಂದೇಹ ಇಲ್ಲವೆಂದು ಮುಂಬಯಿ ಜೀವನದ ಬಗ್ಗೆ ನಿಮ್ಮಲ್ಲಿ ಆಶೆಯುಂಟುಮಾಡುತ್ತಾರೆ.

ಲೇಖಕರು :

ಪ್ರೊ. ಜಿ. ವ್ಹಿ. ಕುಲಕರ್ಣಿ

ಎಂ. ಎ., ಎಲ್‌ಎಲ್ ಬಿ.,

ಮುಂಬಯಿ

ಮುಂಬಯಿ ಜೀವನದ ಅನುಭವಗಳು ಎಂಬ ವಿಷಯದ ಬಗ್ಗೆ ಲೇಖನವೊಂದನ್ನು ಬರೆಯಬೇಕೆಂದಾಗ ಸುಲಭವೆಂದು ಒಪ್ಪಿಕೊಂಡುಬಿಟ್ಟೆ. ಆದರೆ ಈಗ ಅನೇಕ ದಿನಗಳಿಂದ ಒದ್ದಾಡಿದರೂ ಲೆಕ್ಕಣಿಕೆ ಮುಂದೋಡಲೊಲ್ಲದು. ಒಂದು ಚಿಕ್ಕ ಲೇಖನದಲ್ಲಿ ನನ್ನ ವಿವಿಧ ಹಾಗು ವಿಚಿತ್ರ ಅನುಭವಗಳನ್ನು ಅಭಿವ್ಯಕ್ತಗೊಳಿಸುವ ಬಗೆ ಎಂತು? ಎಂಬುದೇ ಪ್ರಶ್ನೆ. ನೂರಾರು ಪುಟಗಳಾದರೂ ಸಾಲಬಹುದೇ ಎಂದೂ ಕೆಲಸಲ ಅನ್ನಿಸುವದು. ಕನ್ನಡಿಯಲ್ಲಿ ಆನೆಯನ್ನು ಪ್ರತಿಬಿಂಬಿಸಲು ಹೊರಟಿದ್ದೇನೆ. ಬಾಲ ಮೂಡೀತೋ ಸೊಂಡೆ ಮೂಡೀತೋ ಹೇಳಲಾರೆ.

ನಾಲ್ಕೈದು ಲಕ್ಷ ಕನ್ನಡಿಗರಿರುವ ಮುಂಬಯಿ ನಗರ ವಿಶ್ವಪ್ರಜ್ಞೆಯ ಊರಾಗಿದ್ದು (cosmopolitan city) ಎಲ್ಲ ಭಾಗದ ಜನರನ್ನು ಆಕರ್ಷಿಸುತ್ತಿದೆ. ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳು— ಪದವೀಧರರು ತಮ್ಮ ದೈವ ತೆರೆದುಕೊಳ್ಳಲು ಕರ್ನಾಟಕದ ಮೂಲೆಮೂಲೆಯಿಂದ ಬರುತ್ತಾರೆ. ಹಾಗೆ ಬಂದ ತರುಣರಲ್ಲಿ ನಾನೊಬ್ಬ. ಒಂದು ಒಂದು ವರ್ಷ ನಾಲ್ಕು ತಿಂಗಳಾಗಿರಬೇಕು— ಮುಂಬೈ ಜೀವನದಲ್ಲಿ ಬೆರೆತುಬಿಟ್ಟಿದ್ದೇನೆ. ಒಂದು ಬಗೆಯ ಸಮಾಧಾನದ ಉಸಿರನ್ನು ಬಿಡುತ್ತಿದ್ದೇನೆ.

ನೆಲ್ಲಿಯಕಾಯಿಯನ್ನು ತಿಂದ ಮೇಲೆ ಎಂಥ ನೀರು ಕುಡಿದರೂ ಸವಿಹತ್ತುವದು. ಅದರಂತೆ ನೌಕರಿಯು! ವಿಶೇಷ ಸವಿ ಹತ್ತುವದು ನಿರುದ್ಯೋಗದ ಕಹಿಫಲವುಂಡವರಿಗೆ ಮಾತ್ರ ಎಂದು ಹೇಳಬಹುದು. ಕರ್ನಾಟಕ ವಿಶ್ವವಿದ್ಯಾಲಯ ಎಂ. ಎ. ಪದವೀಧರನಾದ ಮೇಲೆ ಎರಡು ವರುಷ 'ನಿರುದ್ಯೋಗಿ' ಎಂದು ಕರೆಸಿಕೊಳ್ಳಬಾರದೆಂದು ಹಟ ತೊಟ್ಟು ಕಾಯದೆಯ ಅಭ್ಯಾಸ ಮುಂದುವರಿಸಿದೆ. ಇದೇ ಸಮಯಕ್ಕೆ ಪತ್ರಿಕೋದ್ಯಮವೂ ಒಂದು ಬಗೆಯ ಶಿಕ್ಷಣವನ್ನು ನನಗೆ ಕೊಡುತ್ತಿತ್ತು. ವಯಸ್ಸಾದರೂ ಯೋಗ್ಯ ಗಂಡ ದೊರೆಯದಿರುವ ಕನ್ಯೆ, ಪದವೀಧರನಾಗಿಯೂ ಯೋಗ್ಯ ಕೆಲಸ ಪಡೆಯದೇ ಇರುವ ಪುರುಷ— ಇವರಿಬ್ಬರ ವ್ಯಥೆ ಬಹುಶಃ ಒಂದೇ ತರ. ಇಂಥ ಸಮಯದಲ್ಲಿ "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬ ಭಗವದ್ಗೀತೆಯ ಸಾಲನ್ನು ನೂರುಸಲ ಅಂದುಕೊಂಡರೂ ಸಮಾಧಾನವಿಲ್ಲ. ನೂರು ಜನ ದೈವಜ್ಞರೆಡೆಗೆ ಹೋಗಿ ತನ್ನ ಗ್ರಹಗತಿಗಳ ಬಗ್ಗೆ ಕೇಳಿದರೂ ನೆಮ್ಮದಿಯಿಲ್ಲ. ಇಂತಹ ರಾಹುಗ್ರಸ್ತ ಸಂಧಿಕಾಲವನ್ನು ದಾಟಲು ಮುಂಬಯಿಗೆ ಬಂದವನು ನಾನು.

ಮುಂಬಯಿಗೆ ಬಂದಾಗ ಕೆಲಸ ದೊರೆಯಿತೆಂಬ ಸಮಾಧಾನದೊಂದಿಗೆ - ಇಲ್ಲಿಯ ಜೀವನದ ಯಾಂತ್ರಿಕ ಓಟ, ಇಲ್ಲಿಯ ಹವೆಯನ್ನು ಮೈಗೂಡಿಸಿಕೊಳ್ಳಲು ನಾನು ಪಟ್ಟ ಪ್ರಾರಂಭದ ಕಷ್ಟದ ದಿನಗಳು ನನ್ನನ್ನು ಮೊದಮೊದಲು ಉದಾಸೀನನನ್ನಾಗಿ ಮಾಡಿದ್ದವು. ಆಗ 'ಮುಂಬೈಯಲ್ಲಿ ಕೋಗಿಲೆ' ಎಂಬ ಪದ್ಯವನ್ನು ಬರೆದು ನನ್ನ ಗೋಳನ್ನು ತೋಡಿಕೊಂಡೆ.

ಸುದೈವದಿಂದ ಒಳ್ಳೆಯ ಸ್ನೇಹಿತರು, ಹಿತೈಷಿಗಳು ದೊರೆತರು. ಕಾಲೇಜಿನ ಅಧಿಕಾರಿಗಳು ಛಾತ್ರಾಲಯದಲ್ಲಿ ಇಳಿದುಕೊಳ್ಳಲು ನನಗೆ ಪ್ರತ್ಯೇಕವಾದ ಕೋಣೆಯೊಂದನ್ನು ಕೊಟ್ಟು ನಿತ್ಯದ ಪ್ರವಾಸವನ್ನು ನಿಲ್ಲಿಸಿ ಸಹಕರಿಸಿದರು. ನಾನಿರುವ 'ಮಾತುಂಗಾ'ದಲ್ಲಿ ಎಲ್ಲ ಕಡೆಗೂ ಕನ್ನಡ ಜನರನ್ನು ಕಂಡು ಕರ್ನಾಟಕ ಬಿಟ್ಟು ಬಂದಿರುವೆನೆಂಬುದನ್ನು ಮರೆಯುವಂತೆ ಮಾಡಿತು. ನನ್ನೊಡನೆ ಕಲಿತ ನೂರಾರು ಮಿತ್ರರು ಇಲ್ಲಿರುವದನ್ನು ಕಂಡಾಗ ದೂರ ಬಂದೆನೆಂಬ ಅಳಲೂ ಉಳಿಯಲಿಲ್ಲ. ಬಹುಶಃ ನಮ್ಮಂತಹರನ್ನು ಕಂಡೇ ಕವಿ ಕುವೆಂಪು ಅವರು-! "ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗು ನೀ ಕನ್ನಡವಾಗಿರು'— ಎಂಬ ಪದ್ಯ ಬರೆದಿರಬೇಕೆಂದೆನಿಸಿತು. ಎರಡು ಮೂರು ತಿಂಗಳಲ್ಲೇ ನಾನು ಮುಂಬೈ ಜೀವನದಲ್ಲಿ ಒಂದಾಗಿ ಹೋದಾಗ - ನನಗೆ ಕರ್ನಾಟಕದ ಒಂದು ಭಾಗದಿಂದ ಕೆಲಸಕ್ಕಾಗಿ ಕರೆ

ಬಂತು. ಸ್ನೇಹಿತರ ಸಲಹೆ ಕೇಳಿದೆ. ಅವರಾರೂ ನನ್ನನ್ನು ಬಿಡಲು ಸಿದ್ಧರಿರಲಿಲ್ಲ. ಅವರು ಹೋಗೆಂದಿದ್ದರೂ ನಾನು ಅವರನ್ನು ಬಿಡಲು ಸಿದ್ಧನಿರಲಿಲ್ಲ.

ಧಾರವಾಡದಂತಹ ರಮಣೀಯವಾದ ವಿದ್ಯಾಕೇಂದ್ರದಲ್ಲಿ ಎಂಟು ವರುಷ ವಿದ್ಯಾಭ್ಯಾಸ ಮಾಡಿ, ಹಿರಿಯ ಲೇಖಕರ ವಿಶೇಷವಾಗಿ ಕವಿಗಳ ಬಳಗದಲ್ಲಿದ್ದುಕೊಂಡು ಕಲ್ಪನಾಪ್ರಪಂಚದಲ್ಲಿ ವಿಹರಿಸುತ್ತ ಕಾವ್ಯಾನಂದವನ್ನು ಪಡೆಯುತ್ತ, ಜೀವನದ ವಾಸ್ತವಿಕ ಸಮಸ್ಯೆಗಳಿಂದ ದೂರ ಇದ್ದ - ಕಾಲ ಬಂದಿತ್ತು. ಅಲ್ಲಿಯ ಶಾಂತ ವಾತಾವರಣದಲ್ಲಿ ಬೆಳೆದ ಜೀವಕ್ಕೆ ಮುಂಬಯಿ ಪಟ್ಟಣದ ವಾಸ ಬಗೆಹರಿದೀತೇ? ಮನಕ್ಕೆ ನೆಮ್ಮದಿ ದೊರೆ-ಕೀತೇ- ತನ್ನ ಸಾಹಿತ್ಯ ಮೆಚ್ಚಬಲ್ಲ ರಸಿಕರು ಸಹೃದಯರು ದೊರೆಯಬಹುದೇ ಎಂಬ ನೂರಾರು ಸಮಸ್ಯೆಗಳು ನೋಡದಂತೆ ಮುಸುಕಿದ್ದವು. ಆದರೆ ಇವೇ ಮೋಡಗಳೇ ಮಳೆಗರೆದು ನನ್ನ ಮನದೊಳಿದ್ದ ತೃಷೆಯನ್ನು ತೀರಿಸುತ್ತವೆ ಎಂದೂ- ನನ್ನನ್ನು ಸುಡುತ್ತಿದ್ದ ಚಿಂತೆಯನ್ನು ತಣ್ಣಗಿರಿಸುವವೆಂದೂ ನಾನು ಊಹಿಸಿರಲಿಲ್ಲ.

ಮುಂಬಯಿಯ ಸುದ್ದಿಯನ್ನು ಹೇಳುವಾಗ ನಮ್ಮೂರ ಜನ ಇಲ್ಲಿಯ ಕೆಟ್ಟ ಸಂಗತಿಗಳನ್ನೇ ವಿಶೇಷವಾಗಿ ಹೇಳುತ್ತಾರೆ. ವ್ಯಕ್ತಿಯ ಬಗ್ಗೆ ಆಗಲಿ ಒಂದು ಪಟ್ಟಣದ ಬಗ್ಗೆ ಆಗಲಿ ಕೆಟ್ಟದನ್ನು ಹೇಳುವದು- ಹೇಳಿದ್ದರಲ್ಲಿ ಕೆಟ್ಟದನ್ನು ಮಾತ್ರ ನಂಬುವದು ಮನುಷ್ಯಸ್ವಭಾವ. ಮುಂಬಯಿಯ ಬಗ್ಗೆ ಕೆಲವರಿಗೆ ಬಹಳ ವಿಚಿತ್ರಕಲ್ಪನೆಗಳಿರುತ್ತವೆ. ಭಾರತದ ಬಗ್ಗೆ ಪರದೇಶದವರ ಕಲ್ಪನೆಯೆಂದರೆ— ಈ ದೇಶದಲ್ಲಿ ಎಲ್ಲಿ ನೋಡಿದಲ್ಲೆಲ್ಲ ಹಾವುಗಳು (ವಿಶೇಷವಾಗಿ ನಾಗರಹಾವುಗಳು) ಹುಲಿಗಳು ಕಾಣುತ್ತವೆ. ಎಲ್ಲೆಡೆ ಮಂತ್ರವಾದಿಗಳೂ ಇರುತ್ತಾರೆ ಎಂದು. ಇದರಂತೆಯೇ ವಿಚಿತ್ರವಾದ ಕಲ್ಪನೆ ಮುಂಬಯಿಯ ಬಗ್ಗೆ ನಮ್ಮ ಊರಲ್ಲಿಯ ಸಾಮಾನ್ಯ ಜನರಿಗೆ ಇರುತ್ತದೆ. ಇಲ್ಲಿ ಕೇವಲ ಜೂಜಾಟ, ಮೋಸ, ಕಳ್ಳತನ ಇರುತ್ತದೆ. ಪಾಶ್ಚಾತ್ಯ ಪ್ರಭಾವದಿಂದ ಭಾರತೀಯತೆಯೇ ಕಾಣುವದಿಲ್ಲ. ಎಲ್ಲೆಡೆ ಯಾಂತ್ರಿಕ ಜೀವನ— ಮುಂತಾದ ಭಯ ನೋಡದವರಿಗಿರುತ್ತದೆ. ಇವು ಮುಂಬಯಿಯಲ್ಲಿ ಇಲ್ಲವೆನ್ನಲಾಗುವದಿಲ್ಲವಾದರೂ— ಮುಂಬಯಿಯಲ್ಲಿ ಇವಷ್ಟೇ ಇಲ್ಲ.

ಮಾತುಂಗಾ ಭಾಗದಲ್ಲಿ ಮೂರೂ ಹೊತ್ತು ಸಂಧ್ಯಾವಂದನೆ ಮಾಡಿ ಯಾವಾಗಲೂ ಮಂತ್ರಪಠಣ ಮಾಡುತ್ತ ಒಂದೇ ಪಂಜೆಯನ್ನು-ಟ್ಟು ಗಂಧಾಕ್ಷತೆ-ವಿಭೂತಿಗಳಿಂದ ಅಲಂಕೃತರಾದ ವೈದಿಕಬ್ರಾಹ್ಮಣರ ತಂಡವನ್ನು ಕಂಡಾಗ, ಇಲ್ಲಿಯ ಸಾವಿರಾರು ಗುಡಿಗಳಲ್ಲಿ ನಡೆಯುತ್ತಿರುವ ನಿತ್ಯಭಜನೆ, ಹರಿಕೀರ್ತನೆ, ಪ್ರವಚನಗಳನ್ನು ನೋಡಿದಾಗ, ರಾತ್ರಿ ತಮ್ಮ ಹಾಲಿನ ಅಂಗಡಿಗಳನ್ನು ಮುಚ್ಚಿ ಫುಟಪಾಥಿನ ಮೇಲೆ ಹಾಕಿದ ಹೊರಸುಗಳ ಮೇಲೆ ಕುಳಿತು ರಸ್ತೆಯ ಲೈಟಿನ ಬೆಳಕಿನಲ್ಲಿ ತುಲಸೀದಾಸರ ರಾಮಾಯಣವನ್ನು ಓದುವ ಭಯ್ಯಾ ಜನರನ್ನು ಕಂಡಾಗ, ಶ್ರಮಿಕಜೀವಿಗಳು ತಮ್ಮ ಗುಡಿಸಲಿನಲ್ಲಿ ಕುಳಿತು ಕಂದೀಲುಗಳ ಬೆಳಕಿನಲ್ಲಿ ಜ್ಞಾನೇಶ್ವರಿ, ಮನಾಚೆಶ್ಲೋಕ, ಭಾಗವತಗಳನ್ನು ಓದುವದನ್ನು ನೋಡಿದಾಗ, ಮನೆಯಿಂದ ವಾಹನವನ್ನು ಹೊರಬಿಡುವ ಮೊದಲು ಪ್ರಾತಃಕಾಲ .ಟ್ಯಾಕ್ಸಿಡ್ರೈವರನ ಹೆಂಡತಿ ವಾಹನಕ್ಕೆ ಅರಿಷಿಣ ಕುಂಕುಮ ಹಚ್ಚಿ— ಗಂಡನಿಗೆ ನಮಸ್ಕರಿಸಿ— ದಿನವೆಲ್ಲ ಶುಭವಾಗಲಿ ಎಂದು ಹೇಳಿ ಬೀಳ್ಕೊಡುವ ದೃಶ್ಯ ಕಂಡಾಗ, ಕೆಲ ಮನೆತನಸ್ಥ ಹೆಂಗಳೆಯರು ತಮ್ಮ ಮನೆಯ ಮುಂದಿರುವ ತುಳಸೀಗಿಡಕ್ಕೆ ನೀರು ಹಾಕುವ ದೃಶ್ಯವನ್ನು ನೋಡಿದಾಗ—' ಇದೂ ಮುಂಬಯಿಯಲ್ಲಿ ಉಂಟೇ' ಎಂಬ ಉದ್ಗಾರ ನಿಮ್ಮ ಬಾಯಿಂದ ಹೊರಡಲೇಬೇಕು.

ಕರ್ನಾಟಕದ ಎಲ್ಲ ಭಾಗಗಳಿಂದ ಜನ ಬಂದು ಮುಂಬೈಯನ್ನು ತಮ್ಮ ಮನೆಯನ್ನಾಗಿರಿಸಿಕೊಂಡಿದ್ದರೂ ನನಗೆ ಆದರ್ಶಪ್ರಾಯರಾದವರೆಂದರೆ ದಕ್ಷಿಣ ಕನ್ನಡ ಜಿಲ್ಹೆಯಿಂದ ಬಂದ ಬಾಂಧವರು. ಪ್ರತಿಯೊಂದು ರಸ್ತೆಯಲ್ಲೂ ಅವರದೊಂದು ಭೋಜನಾಲಯವಾಗಲಿ ಅಲ್ಪೋಪಹಾರ ಮಂದಿರವಾಗಲಿ ಇರಲೇಬೇಕು. ಹತ್ತು ಹನ್ನೆರಡು ವರುಷದ ಮಕ್ಕಳು ತಂದೆ ತಾಯಿಗಳನ್ನು ಬಿಟ್ಟು ಬಂದು ಮುಂಬಯಿಯಲ್ಲಿ ಧೈರ್ಯದಿಂದ ಜೀವನ ಪ್ರಾರಂಭಿಸುತ್ತಾರೆ. ಇಲ್ಲಿ ಒಂಬತ್ತು ರಾತ್ರಿ ಶಾಲೆಗಳಿವೆ. ಒಂದೊಂದರಲ್ಲಿ ಆರುನೂರರ ವರೆಗೆ ವಿದ್ಯಾರ್ಥಿಗಳು. ದಿನವೆಲ್ಲ ದುಡಿದು ರಾತ್ರಿ ಓದುತ್ತಾರೆ. ಹೋಟೆಲಿನಲ್ಲಿಯೋ, ಊರಿನವರ ಮನೆಯಲ್ಲಿಯೋ ಕೆಲಸಕ್ಕಿದ್ದು ಎಸ್. ಎಸ್. ಸಿ. ಪಾಸಾಗುತ್ತಾರೆ. ಮುಂದೆ ಕಾಲೇಜು ಸೇರಿ ಪದವೀಧರರಾಗುತ್ತಾರೆ. ಹೀಗೆ ರಾತ್ರಿಶಾಲೆಗಳಿಂದ ಮುಂದೆ ಬಂದು ಪದವೀಧರರಾದವರು ಸಹಸ್ರಾರು ಜನ. ಇವರಲ್ಲಿ ಅಡ್ವೋಕೇಟ್, ಡಾಕ್ಟರ, ಇಂಜಿನಿಯರರಾದವರೂ ಇದ್ದಾರೆ. ವ್ಯಾಪಾರ—ಉದ್ಯಮದಲ್ಲಿಯೂ ಸಾಕಷ್ಟು ಮುಂದುವರಿದಿದ್ದಾರೆ. ಅವರ ಸಾಹಸ ನೋಡಿ ಬಹಳ ಸಲ ಮುಗ್ಧನಾಗಿದ್ದೇನೆ. ನಾನೆಂತಹ ಅಲಸಿಯೆಂದು ಬೈದು. ಕೊಂಡಿದ್ದೇನೆ. ಧೈರ್ಯದಿಂದ ಕಷ್ಟಗಳನ್ನೆದುರಿಸಿ ಮುಂದುವರಿದವನಿಗೆ ಇಲ್ಲಿ ನೂರು ದಾರಿಗಳಿವೆ; ಸಾವಿರ ಪ್ರತಿಫಲಗಳಿವೆ.

ಯಾವ ಆಫೀಸಿಗೆ ಹೋದರೂ ಕನ್ನಡ ಜನ ಇದ್ದಾರೆ. ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದಾರೆ- ಪ್ರತಿಷ್ಠಿತರಾಗಿದ್ದಾರೆ. ತಮ್ಮ ಪ್ರಾಮಾಣಿಕತೆ, ಸ್ನೇಹ ಸೌಹಾರ್ದಗಳಿಂದ ಎಲ್ಲರಿಗೂ ಬೇಕಾದವರಾಗಿದ್ದಾರೆ. ಇಲ್ಲಿಯ ಕನ್ನಡ ಜನರಲ್ಲಿ ಒಂದು ವಿಶಾಲ ಮನೋಭಾವ ಬಂದುಬಿಡುತ್ತದೆ. ಪ್ರಾದೇಶಿಕ ಭಾವ, ಮತೀಯ ಸಂಕು

ಚಿತ ಮನೋವೃತ್ತಿಯಾಗಲಿ ಇರದೆ-ಗುಣವನ್ನು ಕಂಡಲ್ಲಿ ಮೆಚ್ಚುವ ಗುಣವಿದ್ದುದನ್ನು ಕಂಡು ಬಹಳ ಸಂತೋಷಗೊಂಡಿರುವೆ.

ಈ ಊರಲ್ಲಿ ತನ್ನ ಜೀವನವನ್ನು ಸುಧಾರಿಸಿಕೊಂಡು ಪ್ರಗತಿಯ ಪಥದಲ್ಲಿ ಸಾಗಲು ಇರುವಷ್ಟೇ ಅವಕಾಶಗಳು ಅಡ್ಡದಾರಿಗೆ ಬೀಳಲು, ಹಾಳಾಗಲೂ ಇವೆ. ನನ್ನ ಮಿತ್ರರೊಬ್ಬರು ಆಂಗ್ಲ ವಿಷಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸಾಕಷ್ಟು ರಸಿಕರು ಈ ಊರಿಗೆ ಬಂದು ಹತ್ತು ವರುಷಗಳಾದರೂ ಒಂದೂ ಸಿನೇಮಾ ನೋಡಿಲ್ಲ. ನೀವು ಬಹುಶಃ ನಂಬಲಿಕ್ಕಿಲ್ಲ. ಕನ್ನಡ, ಹಿಂದೀ ಹಾಗೂ ಆಂಗ್ಲ ಭಾಷೆಯಲ್ಲಿ ಸುಂದರವಾಗಿ ಲೇಖನ ಬರೆಯಬಲ್ಲರು, ಭಾಷಣ ಮಾಡಬಲ್ಲರು. ಆವರು ತಮ್ಮ ಬಿಡುವಿನ ವೇಳೆಯಲ್ಲಿ ಸಂಗೀತದ ಪಾಠ ಹೇಳುವರು; ಇಲ್ಲವೆ ಅಭಿನಯದಲ್ಲಿ ಕಾಲ ಕಳೆಯುವರು. ಇನ್ನೊಬ್ಬ ಮಿತ್ರರು ಆಫೀಸಿನಲ್ಲಿ ಮೈ ಮುರಿದು ದುಡಿದು - ಬಿಡುವು ಸಿಕ್ಕಾಗೊಮ್ಮೆ ಚಿತ್ರ ತೆಗೆಯುವರು - ಇಲ್ಲವೆ ಪದ್ಯ ಬರೆಯುವರು, ಇತಿಹಾಸದ ಪ್ರಾಧ್ಯಾಪಕರಾದ ಹಿರಿಯರೊಬ್ಬರು ಕವಿವರ್ಯ ಬೇಂದ್ರೆಯವರ ಕಾವ್ಯದ ಒಂದು ಉದ್ಗ್ರಂಥ ಬರೆಯಲು ಪ್ರಾರಂಭಿಸಿರುವರು. ಇಂಥ ಅನೇಕ ಮಿತ್ರರ ಹಿರಿಯ ಸಹವಾಸದಲ್ಲಿ ನನಗೆ ಮುಂಬಯಿ ಯಾಂತ್ರಿಕವಾಗಿಲ್ಲ, ಚೈತನ್ಯಮಯವಾಗಿದೆ ಎಂದೇ ಅನಿಸುತ್ತದೆ.

ಮುಂಬಯಿ ಜೀವನದಲ್ಲಿ ನನಗೆ ನಿಕಟವರ್ತಿಗಳಾದ ಅನೇಕ ಮಿತ್ರರಲ್ಲಿ ಒಂದಿಬ್ಬರ ವಿಷಯ ಬರೆಯುವದು ಇಲ್ಲಿ ಅವಶ್ಯವೆನಿಸುತ್ತದೆ. ಇಂಥ ಘಟನೆಗಳೂ ಮುಂಬಯಿ ಜೀವನದಲ್ಲಿ ನಡೆಯುತ್ತವೆ - ಎಂಬುದನ್ನು ನಮ್ರಭಾವದಿಂದ ತಿಳಿಸುವದು ನನ್ನ ಉದ್ದೇಶವಾಗಿದೆ.

ಇದು ಬಹುಶಃ ಒಂದು ವರ್ಷ ಹಿಂದಿನ ಮಾತು. ನಮ್ಮ ಕಾಲೇಜಿನಲ್ಲಿ ಗಣಿತದ ಪ್ರಾಧ್ಯಾಪಕರೊಬ್ಬರು ನನಗೆಂದರು— 'ಜೀವಿಯವರೇ, ನಮ್ಮ ಮಿತ್ರರೊಬ್ಬರು ಡಾಕ್ಟರರಿದ್ದಾರೆ. ಬಹಳ ದೊಡ್ಡ ಹುದ್ದೆಯಲ್ಲಿದ್ದಾರೆ. ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ಪಕ್ಕಾ ವಿಜ್ಞಾನಿ. ತಮ್ಮ ಮಗಳ ನೃತ್ಯಕ್ಕೆ ಕೂಡಿಸಲು ಒಂದೆರಡು ಪದ್ಯ ಬರೆದಿದ್ದಾರಂತೆ. ಅವನ್ನು ಯಾರಿಂದಾದರೂ ತಿದ್ದಿಸಬೇಕಾಗಿದೆ ಎಂದಿದ್ದರು. ನಾನು ನಿಮ್ಮ ಹೆಸರನ್ನು ಸೂಚಿಸಿರುವೆ' —ಈ ಮಾತು ಕೇಳಿ ನನಗೆ ಡಾಕ್ಟರರ ಬಗ್ಗೆ ಕುತೂಹಲ. ನಮ್ಮ ಪರಿಚಯವಾಯಿತು. ತಮ್ಮ ಪದ್ಯ ತೋರಿಸಿದರು. ಬಹಳ ತಿದ್ದುವ ಕಾರಣವಿರಲಿಲ್ಲ. ಕೆಲ ಛಂದೋದೋಷಗಳಿದ್ದವು. ನಾನು ಕೆಲಸೂಚನೆಕೊಟ್ಟೆ. ಕನ್ನಡ ಸಾಹಿತ್ಯದಲ್ಲಿ ಅವರಿಗೆ ಅಪಾರವಾದ ಪ್ರೀತಿ. ಅವರು ನನಗಿಂತ ವಯಸ್ಸು, ಅನುಭವ, ಬುದ್ಧಿಯ ಗರಿಮೆ ಎಲ್ಲದರಿಂದಲೂ ದೊಡ್ಡವರು. ಅವರ ಆತ್ಮೀಯತೆ ಕೆಲವೇ ತಿಂಗಳಲ್ಲಿ ನಮ್ಮ ಮಿತ್ರತ್ವವನ್ನು ಬಾಂಧವ್ಯವಾಗಿ ಪರಿಣಮಿಸಿತು. ಶನಿವಾರ ಬಂದೊಡನೆಯೆ ಇಪ್ಪತ್ತು ಮೈಲು ದೂರವಿರುವ ತಮ್ಮ ಮನೆಗೆ ಎಳೆದುಕೊಂಡು ಹೋಗುತ್ತಿದ್ದರು. ಅವರ ಮನೆಗೆ ಹೋದೊಡನೆಯೇ ನನಗೆ 'ಸಾಧನಕೆರೆಯು' ನೆನಪಾಗುತ್ತದೆ. ಮಾವಿನ ತೋಪಿನ ಮಧ್ಯೆ ಅವರ ಬಂಗ್ಲೆ. ಎದುರಿಗೇ ಸಮೀಪದಲ್ಲಿ ಸಮುದ್ರ, ಮನೆಯ ಸುತ್ತೆಲ್ಲ ಹೂವಿನ ಬನ. ಮನೆಯಲ್ಲಿ ಮಡದಿ, ಮಕ್ಕಳು ತಮ್ಮ, ಎಲ್ಲರೂ ಕಲಾವಿದರು; ಒಬ್ಬರು ಚಿತ್ರ ಬರೆದರೆ, ಇನ್ನೊಬ್ಬರು ಹಾಡುವರು, ಚಿಕ್ಕ ಮಗು ನೃತ್ಯ ಪ್ರಾರಂಭಿಸುವದು. ಆಶು ಕವಿತೆ ಬರೆವ ಸ್ಪರ್ಧೆಯಲ್ಲಿ ಎಲ್ಲರೂ ಭಾಗವಹಿಸುವರು. ಸಾಮೂಹಿಕವಾಗಿ ಶ್ರೀ ಬೇಂದ್ರೆಯವರ ಪದ್ಯ ಓದುತ್ತಿದ್ದೆವು. ಶ್ರೀ ಬೇಂದ್ರೆಯವರ ಬಗ್ಗೆ ಎಷ್ಟು ಕೇಳಿದರೂ ಡಾಕ್ಟರರಿಗೆ ತೃಪ್ತಿಯಿಲ್ಲ. ಜಾನಪದ ಶಬ್ದಪ್ರಯೋಗ ಕೆಲವೆಡೆ ಅರ್ಥವಾಗದೆ ಇದ್ದಾಗ ನಾನು ಅರ್ಥ ವಿವರಿಸುತ್ತಿದ್ದೆ-ಆಗ-! "ಧಾರವಾಡದ ಭಾಷೆ ಒರಟು ಎಂದು ನಾವು ಮೈಸೂರಿನವರು



ಹೇಳುತ್ತಿರುತ್ತೇವೆ. ಇದು ಎಂತಹ ಮೃದು ಭಾಷೆಯೆಂಬುವುದು ಇಂದು ತಿಳಿಯಿತು. ಇದು ಬಂಗಾರ ಇದ್ದಂತೆ ಎಳೆದತ್ತ ಮಣಿಯುತ್ತದೆ' ಎಂಬ ಉದ್ಗಾರ ತೆಗೆದಿದ್ದರು. ನನ್ನ ಸಹವಾಸದ ದೋಷದಿಂದ ಒಂದು ಕಾದಂಬರಿ, ಒಂದು ನಾಟಕ, ಹತ್ತಿಪ್ಪತ್ತು ಪದ್ಯ ಬರೆದರು-ಒಂದು ವರ್ಷದಲ್ಲಿ. ಮಾನಸಶಾಸ್ತ್ರ- ಹಾಗೂ ಆರೋಗ್ಯ ಶಾಸ್ತ್ರಗಳಲ್ಲಿರುವ ಅವರ ಆಳವಾದ ಅಭ್ಯಾಸ ಕಂಡು, ಸಂಭಾಷಣೆ ಕೇಳಿ ಕನ್ನಡದಲ್ಲಿ ಕೆಲ ಲೇಖನ ಬರೆಯಲು ಒತ್ತಾಯಪಡಿಸಿದೆ. ಅವರು ನಾಲ್ಕಾರು ಲೇಖನ ಬರೆದರು. ಪ್ರಕಟಿಸಲು ಸಹಕರಿಸಿದೆ.

ಶ್ರೀ ಬೇಂದ್ರೆಯವರನ್ನು ಕಾಣಬೇಕೆಂಬ ಆಸೆ ಡಾಕ್ಟರರಿಗೆ ಪ್ರಬಲವಾಯಿತು. ಅಷ್ಟರಲ್ಲಿ ಬೇಂದ್ರೆಯವರು ದಿಲ್ಲಿಗೆ ಹೊರಟಿರುವರೆಂದೂ ವ್ಹಿಕ್ಟೋರಿಯಾ ಟರ್ಮಿನಸ್‌ದಿಂದ ಬಾಂಬೆ ಸೆಂಟ್ರಲ್ ಸ್ಟೇಶನ್ನಿಗೆಹೊರಟಿದ್ದಾರೆಂದೂ ನನ್ನ ಮಿತ್ರರೊಬ್ಬರ ಫೋನಬಂತು. ನಾನು ಡಾಕ್ಟರರಿಗೆ ಫೋನ್ ಮಾಡಿದೆ. ನಾಲ್ಕಾರು ತಾಸು ಕವಿಗಳ- ಡಾಕ್ಟರರ ಚರ್ಚೆ ಆಯ್ತು. ಕವಿಗಳಿಗೆ ವಿಜ್ಞಾನದಲ್ಲೂ ಸಾಕಷ್ಟು ಗತಿ ಇದ್ದುದನ್ನು ಕಂಡು ಅವರು ಸಂತೋಷಗೊಂಡರು. ತಮ್ಮ ಪದ್ಯ ಓದಿ ತೋರಿಸಿದರು. ಮುಂದೆ ಇವರಿಗೆ ಒಂದು ಕವಿ ಸಮ್ಮೇಲನದಲ್ಲಿ ಭಾಗವಹಿಸುವ ಭಾಗ್ಯವೂ ಲಭಿಸಿತು.

ಇಂದು ವಿಜ್ಞಾನಿ ಸಾಹಿತಿಯಾಗಿಬಿಟ್ಟಿದ್ದಾರೆ. ಅಡ್ಡದಾರಿಗೆ ಎಳೆದುದಕ್ಕೆ ಕೆಲಸಲ ಪ್ರೀತಿಯಿಂದ ನನ್ನನ್ನು ಬಯ್ಯುತ್ತಾರೆ. ನನಗಿಲ್ಲಿ ಕೆಮ್ಮು ಬಂದರೆ ಟೆಲಿಪಥಿಯ (Telepathy) ಮೂಲಕ ಅವರಿಗೆ ತಿಳಿದಿರುತ್ತದೆ. ಎದುರಿಗೆ ಪ್ರತ್ಯಕ್ಷರಾಗಿಬಿಡುತ್ತಾರೆ. ನಮ್ಮ ಧರ್ಮದಲ್ಲಿರುವ ಕುಂದುಕೊರತೆ ಅಂಧಾನುಕರಣೆ, ನಮ್ಮಲ್ಲಿ ಶೀಲದ ಬಗ್ಗೆ ಇರುವ ಮಡಿವಂತಿಕೆ, ಆಲಸ್ಯ ಇವುಗಳನ್ನು ಚೆನ್ನಾಗಿ ತೆಗಳಿ ಪಾಶ್ಚಿಮಾತ್ಯ ರಾಷ್ಟ್ರಗಳು ಸಾಧಿಸುತ್ತಿರುವ ಪ್ರಗತಿಯನ್ನು ಮೆಚ್ಚಿ ಮಾತನಾಡುವಾಗ, ಸನಾತನಿಯಾದ ನನಗೂ ಅವ

ರಿಗೂ ವಾಗ್ಯುದ್ಧ ಆಗುವದುಂಟು. ಒಬ್ಬರನ್ನೊಬ್ಬರು ರೇಗಿಸುವದರಲ್ಲೇ ಸಂತೋಷ ಕಾಣುತ್ತೇವೆ. ಇಂಥ ಒಂದು ಸಂದರ್ಭದಲ್ಲಿ ಡಾಕ್ಟರರು ಒಮ್ಮೆ ಉದ್ಗಾರ ತೆಗೆದಿದ್ದರು— 'ಸಾಕಷ್ಟು ಜಗಳವಾಡಿ ಮತ್ತೆ ಪ್ರೀತಿಸುವ ವ್ಯಕ್ತಿಗಳು ನನ್ನ ಜೀವನದಲ್ಲಿ ಇಬ್ಬರಿದ್ದಾರೆ. ಒಂದು ನನ್ನ ಹೆಂಡತಿ, ಇನ್ನೊಂದು ನೀವು" ಎಂದು.

ಇನ್ನೊಬ್ಬ ಮಿತ್ರರ ಪರಿಚಯವಾದ ಒಂದು ಮೋಜಿನ ಘಟನೆಯ ಬಗ್ಗೆ ಬರೆಯದಿದ್ದರೆ ಈ ಲೇಖನ ಅಪೂರ್ಣವಾದೀತೆಂದೆನಿಸುತ್ತದೆ. ಆ ವಿಷಯ ಸ್ವಲ್ಪದರಲ್ಲಿ ಬರೆಯುವೆ. ಕನ್ನಡ ಸಂಘದಲ್ಲಿ ನಾನು ಮಾಡಿದ ಒಂದು ಚಿಕ್ಕ ಭಾಷಣ ಕೇಳಿದ ಸಭಿಕರೊಬ್ಬರು ನನಗೊಂದು ಪತ್ರ ಬರೆದರು. ಅದರಲ್ಲಿ ತಾವು ಅನೇಕ ಕತೆ ಬರೆದಿರುವದಾಗಿಯೂ ಬಿಡುವಿದ್ದರೆ ಅವನ್ನು ತೋರಿಸಿ ಅಭಿಪ್ರಾಯ ಪಡೆವ ಅಭಿಲಾಷೆ ಇದೆ ಎಂದೂ ತಿಳಿಸಿದ್ದರು. ನಾನು ಉತ್ತರದಲ್ಲಿ ನನಗೆ ಬಿಡುವಿದ್ದ ಸಮಯದ ಬಗ್ಗೆ ಸೂಚಿಸಿ ಸ್ವಾಗತ ಬಯಸಿದೆ. ಒಂದು ರವಿವಾರ ನನ್ನೆಡೆ ಬಂದು ತಮ್ಮ ಕತೆಗಳ ಹಸ್ತಪ್ರತಿ ಕೊಟ್ಟರು. ಅವರು ಬಂದಾಗ ನಾನು ಹೊರಗೆ ಹೊರಟಿದ್ದೆ ಮಾತನಾಡಲು ಬಿಡುವಿರಲಿಲ್ಲ. ನನ್ನನ್ನು ಕಾಣಲು ಬಂದ ವ್ಯಕ್ತಿ ೨೪—೨೫ ವರುಷ ಪ್ರಾಯದ ತರುಣರು. ಮುಖದ ಮೇಲೆ ಎಳೆಯ ಕಳೆ. ಯಾವುದೋ ಕಾಲೇಜಿನ ವಿದ್ಯಾರ್ಥಿ ಇರಬೇಕೆಂದು ತಿಳಿದೆ. 'ಎಲ್ಲಿ ಕೆಲಸ' ಎಂದು ಕೇಳಿದಾಗ ಒಂದು ಕಂಪನಿಯ ಹೆಸರು ಹೇಳಿದರು. ಅಲ್ಲಿ ಗುಮಾಸ್ತರಾಗಿರಬೇಕು ಎಂದುಕೊಂಡೆ. ನಿಮ್ಮ ಕತೆ ಯಾವ ಪತ್ರಿಕೆಯಲ್ಲಿ ಪ್ರಕಟವಾಗಿವೆ ಎಂದೆ. ಅವರು ಹೇಳಿದ ಪತ್ರಿಕೆಗಳು ಅಷ್ಟೊಂದು ಪ್ರಸಿದ್ಧವಿರಲಿಲ್ಲ. ನಾನು ಸಾಮಾನ್ಯವಾದ ಅಭಿಪ್ರಾಯ ತಳೆದೆ. ಒಂದು ವಾರದ ನಂತರ ಬರಲು ಹೇಳಿದೆ. ಇದಾದಮೇಲೆ ಮೂರು ತಿಂಗಳಲ್ಲಿ ಹತ್ತಾರು ಸಲ ಬಂದು ಹೋದರು. ಏಳೆಂಟು ಸಲ ಫೋನ ಮಾಡಿದರು. ನಾನಿರಲೇ ಇಲ್ಲವಂತೆ. ಕೊನೆಗೆ ಒಂದು ಪತ್ರ ಬರೆದರು: "ಪ್ರಿಯ 'ಜೀವಿ' ಯವರೆ— ನಮಸ್ಕಾರ. ನಿಮ್ಮ ರೂಮಿಗೆ ಹತ್ತಾರು ಸಲ ಬಂದು ತಾಸೆರಡು ತಾಸು ದಾರಿ ನೋಡಿ ಹೋದೆ. ಏಳೆಂಟು ಸಲ ಫೋನ ಮಾಡಿದೆ. ತಮ್ಮ ಭೆಟ್ಟಿ ಆಗಲಿಲ್ಲ. ತಾವು ನನ್ನ ಕತೆ ಓದದೇ ಇದ್ದರೆ ಚಿಂತೆ ಇಲ್ಲ. ಆದರೆ ಒಂದು 'ಇರುವೆಯೂ ಮಿಡಿತೆಯೂ, ಎಂದಿದೆ. ಅದನ್ನೋದಿ ತಮ್ಮ ಅಭಿಪ್ರಾಯ ಕೊಡಬೇಕು. ಅದನ್ನು ಬಂಗಾಲಿ ಭಾಷೆಗೆ ಅನುವಾದಿಸಬೇಕೆಂದಿದ್ದೇನೆ. ತಮ್ಮ ಅಭಿಪ್ರಾಯ ಅವಶ್ಯವಾಗಿ ಬೇಕಾಗಿದೆ. ಇತಿ ತಮ್ಮ ...." ವಿ. ಸೂ. ನನ್ನ ಫೋನ ನಂಬರು....ಇಂತಿದೆ."

ಇದನ್ನೋದಿ ನನ್ನ ಕಣ್ಣರಳಿದವು. ಇವರಿಗೆ ಬಂಗಾಲಿ ಬರುತ್ತದೆಂದ ಮೇಲೆ ಇವರಲ್ಲೇ-



ನೋ ವೈಶಿಷ್ಟ್ಯವಿರಬೇಕೆಂದೆನಿಸಿತು. ಅವರ ಕತೆಗಳನ್ನು ಓದಲು ಪ್ರಾರಂಭಿಸಿದೆ. ನನಗೆ ಬಹಳ ಹಿಡಿಸಿದವು. ಇಷ್ಟು ದಿನ ಅವರಿಗೆ ತೊಂದರೆ ಕೊಟ್ಟದ್ದಕ್ಕಾಗಿ ಬಹಳ ಕೆಡಕೆನಿಸಿತು. ಅಂದೇ ಫೋನ ಮಾಡಿದೆ.

ಸಂಜೆ ಎಂಟು ಗಂಟೆಗೆ ಬಂದರು. ನಾನು ದಾರಿ ನೋಡುತ್ತ ಕುಳಿತಿದ್ದೆ. ಮದ್ರಾಸ ವಿಶ್ವವಿದ್ಯಾಲಯದ ಎಂ. ಎ. ಪದವೀಧರರೆಂಬುದನ್ನು ತಿಳಿದು ಬೆರಗಾದೆ. (ಮೊದಲು ಅವರೊಬ್ಬ ವಿದ್ಯಾರ್ಥಿಯೆಂದು ಭಾವಿಸಿದ್ದ. ರಿಂದ) ಅರ್ಥಶಾಸ್ತ್ರ ಹಾಗೂ ಸಂಖ್ಯಾಶಾಸ್ತ್ರ ವಿಷಯ ತೆಗೆದುಕೊಂಡು ದ್ವಿತೀಯ ಶ್ರೇಣಿ ಸಂಪಾದಿಸಿ ಈಗ ಒಂದು ಕಂಪನಿಯಲ್ಲಿ ಒಳ್ಳೆಯ ಜವಾಬ್ದಾರಿಯ ಹುದ್ದೆಯಲ್ಲಿದ್ದರು. ಅವರು, ಇಂಗ್ಲೀಷಿನಲ್ಲಿ ಬೇಕಾದಷ್ಟು ಲೇಖನ ಬರೆದಿರುವ ವಿಷಯ 'ಹಿಂದೂ', 'ಡೆಕ್ಕನ್ ಹೆರಾಲ್ಡ' ಮುಂತಾದ ಪತ್ರಿಕೆಗಳಲ್ಲಿ ಕತೆ ಲೇಖನ ಪ್ರಕಟವಾದ ವಿಷಯ ತಿಳಿಯಿತು. ಕನ್ನಡದಲ್ಲಿ ತುಂಬಾ ಬರೆದಿದ್ದರು. ಆದರೆ ಪ್ರಕಟಿಸಿರಲಿಲ್ಲ. 'ಬಂಗಾಲಿ' ಎಲ್ಲಿ ಕಲಿತಿರಿ ಎಂದು ಕೇಳಿದಾಗ ಮುಂಬಯಿಯಲ್ಲೇ ಅಂದರು. ಒಂದೇ ವರ್ಷದಲ್ಲಿ ಚೆನ್ನಾಗಿ ಓದಲು ಬರೆಯಲು ಬರುತ್ತಿದೆ- ಎಂದು ಹೇಳಿದರು. ರವೀಂದ್ರರ ಕಾವ್ಯದ ನಿಜವಾದ ಸವಿ ಬಂಗಾಲಿಯಲ್ಲೇ ದೊರೆಯುತ್ತದೆ ಎಂದರು. ನನಗೂ ಕಲಿವ ಆಸೆಯಾಯ್ತು. ಎಲ್ಲಿ ಕಲಿಸುತ್ತಾರೆ,ಫೀ ಎಷ್ಟುಎಂದು ಕೇಳಿದೆ. ಸಮೀಪದಲ್ಲೇ ಇದ್ದ ಬಂಗಾಲೀ ಶಾಲೆಯ ಪ್ರಿನ್ಸಿಪಾಲರು ವಾರಕ್ಕೊಂದು ತಾಸು ಇಂಗ್ಲೀಷ ಮಾಧ್ಯಮದಲ್ಲಿ ಕಲಿಸುವರೆಂಬ ವಿಷಯ ಗೊತ್ತಾಯಿತು. 'ಫೀ' ಏನನ್ನೂ ತೆಗೆದುಕೊಳ್ಳದೆ ವಿದ್ಯೆಯ ಪ್ರಸಾರ ಮಾಡುತ್ತಾರೆಂಬ ವಿಷಯ ತಿಳಿಯಿತು. ಮರುದಿನ ನನ್ನನ್ನು ಕ್ಲಾಸಿಗೆ ಕರೆದುಕೊಂಡು ಹೋದರು. ವಾರದಲ್ಲಿ ಒಮ್ಮೆಯಾದರೂ ಬಿಡುವು ಮಾಡಿಕೊಂಡು ತಾಸೆರಡು ತಾಸು ಕೂಡಿ ಕಳೆಯುತ್ತೇವೆ.

ಮುಂಬಯಿ ಜೀವನದಲ್ಲಿ ನನಗೆ ದೊರೆತ ಇಂತಹ ಹಲವಾರು ಮಿತ್ರರನ್ನು ಬಿಟ್ಟರೆ- ಮುಂಬಯಿ ಜೀವನ ನನಗೆ ರಸಹೀನವಾಗಿ ತೋರಬಹುದು. ಅಂತಾರಾಷ್ಟ್ರೀಯ ಕೀರ್ತಿ ಪೆತ್ತ ಅನೇಕ ಪಂಡಿತರು, ಕಲಾವಿದರು ಇಲ್ಲಿದ್ದಾರೆ. ಅವರೊಡನೆ ನಿಕಟವಾದ ಸಂಬಂಧ ಬಂದಿದೆ. ಇದರಲ್ಲಿ ನನ್ನದೇನೂ ವೈಶಿಷ್ಟ್ಯವಿಲ್ಲ. ಅವರ ದೊಡ್ಡ ಗುಣ ಹಾಗೂ ಸೌಜನ್ಯ ಅವರ ಸರಳತೆ ಹಾಗೂ ಸಹಾಯ ಸಹಾನುಭೂತಿಗಳ ಬಗ್ಗೆ ಬೇಕಾದಷ್ಟು ಬರೆಯಬಹುದು ಆದರೆ ವಸ್ತುಸ್ಥಿತಿಯ ವಿವರಣೆಯನ್ನು ಉತ್ಪ್ರೇಕ್ಷೆ ಎಂದು ಓದುಗರು ಭಾವಿಸಬಹುದೆಂಬ ಭಯ ನನಗಿದೆ.

ಮುಂಬಯಿಯಲ್ಲಿ ಏನನ್ನೂ ಕಲಿಯಬಹುದು. ಯಾವುದನ್ನೂ ಸಾಧಿಸಬಹುದು. ಇಲ್ಲಿ ಎಲ್ಲವೂ ಸಮುದ್ರದಷ್ಟೇ ಸಮೀಪ, ಸಮುದ್ರದಷ್ಟೇ ಆಳ, ಸಮುದ್ರದಷ್ಟೇ ಗಂಭೀರ, ಅರಿವ ಕುತೂಹಲ, ಪ್ರಾಮಾಣಿಕತೆ, ಶ್ರದ್ಧೆ ಹಾಗೂ ಧೈರ್ಯಗಳಿದ್ದರೆ ಒಳ್ಳೆಯ ಫಲ ದೊರೆಯುವದರಲ್ಲಿ ಸಂದೇಹವಿಲ್ಲ. ಆಶಾವಾದಿಯಾದ ಪ್ರತಿಯೊಬ್ಬನೂ ಮುಂಬೈ ಜೀವನವನ್ನು ಯಾಂತ್ರಿಕವೆಂದು, ಮೂದಲಿಸಲಾರ, ಚೈತನ್ಯಮಯವೆಂದು ಆದರೊಡನೆ ಒಂದಾಗುವನು.

ಕನ್ನಡದಲ್ಲಿ ಚಂಪೂ

ಹಳಗನ್ನಡದ ಕವಿಗಳ[illegible]ಕರು ಗದ್ಯಪದ್ಯ ಮಿಶ್ರಿತವಾದ ಚಂಪೂವಿನಲ್ಲಿ ತಮ್ಮ ಕಾವ್ಯಗಳನ್ನು ರಚಿಸಿರುವರು. ಅವರ ಈ ಕಾವ್ಯಗಳು ಪಂಡಿತರಿಗೂ ಪಾಮರರಿಗೂ ರಂಜಕವಾಗಿವೆ. ಒಂದು ಬಗೆಯ ಸೊಗಸನ್ನು ನಾವು ಇಲ್ಲಿ ಕಾಣುತ್ತೇವೆ. ಈ ಸಾಹಿತ್ಯರೂಪ ಸಂಸ್ಕೃತ ಮೂಲದ್ದೊ ದ್ರಾವಿಡ ಮೂಲದ್ದೊ ಎಂದು ವಾದಿಸುವವರಿಗೆ ದ್ರಾವಿಡ ಭಾಷೆಯಿಂದ ಎರವಲು ತೆಗೆದುಕೊಂಡಿರಬೇಕೆಂದು ಡಾಕ್ಟರ ಮುಗಳಿ ಅವರು ಉತ್ತರಿಸಿದ್ದಾರೆ. ನಮಗೆ ಅದು ಮುಖ್ಯವಲ್ಲ. ಈ ಕಾವ್ಯಗಳಲ್ಲಿಯ ಸೊಗಸೆಂಥದೆಂಬುದನ್ನು ಅರಿಯಬೇಕು, ಈ ಲೇಖನದಲ್ಲಿ ಲೇಖಕರು ಅಂತಹ ಒಂದು ಪ್ರಯತ್ನವನ್ನು ಮಾಡಿರುವರು.

ಲೇಖಕರು:
ಪ್ರೊ. ಜಿ. ಡಿ. ನಾಡಕರ್ಣಿ, ಎಂ. ಎ.,
ಜನತಾ ಕಾಲೇಜ, ಧಾರವಾಡ

ಕನ್ನಡ ಭಾಷೆಗೆ ಗೌರವವನ್ನು ತಂದು ಕೊಟ್ಟು ಅದಕ್ಕೆ ರಾಜಮನ್ನಣೆಯನ್ನೂ, ಪಂಡಿತ ಮನ್ನಣೆಯನ್ನೂ ಒದಗಿಸಿಕೊಟ್ಟ ಸಾಹಿತ್ಯದ ರೂಪವೆಂದರೆ 'ಚಂಪೂ' ಎಂದು ಹೇಳಬಹುದು. ಕನ್ನಡ ಕಾವ್ಯಪರಂಪರೆ ಪ್ರಾರಂಭವಾದದ್ದೇ ಚಂಪೂ ಕಾವ್ಯಗಳಿಂದ. ಕನ್ನಡಕ್ಕೆ ಆದಿಕವಿಗಳಾದ ಜೈನ ಕವಿಗಳು ಚಂಪೂ ಕಾವ್ಯಗಳನ್ನು ರಚಿಸದೆ ಹೋಗಿದ್ದರೆ ಕನ್ನಡ ಸಾಹಿತ್ಯಕ್ಕೆ ಗಾಂಭೀರ್ಯ - ಉನ್ನತಿಗಳು ದೊರೆಯುತ್ತಿರಲಿಲ್ಲ. ಜೈನರ ನಂತರ ವೀರಶೈವ ಮತ್ತು ಬ್ರಾಹ್ಮಣ ಕವಿಗಳು ಕೂಡ ಚಂಪೂ ರೂಪವನ್ನು ಉಪಯೋಗಿಸಿದ್ದಾರೆ. ನಮ್ಮ ನಾಡಿನ ಸಹಸ್ರ ಕಂಬದ ಬಸದಿಗಳಂತೆ, ವಿರೂಪಾಕ್ಷನ ದೇವಾಲಯದಂತೆ, ಹಳೇಬೀಡಿನ ಭವ್ಯ ದೇವಾಲಯಗಳಂತೆ ಕನ್ನಡ ಜೈನ, ವೀರಶೈವ ಮತ್ತು ವೈಷ್ಣವ ಚಂಪೂಕಾವ್ಯಗಳು ನಮ್ಮ ಹೆಮ್ಮೆಯ ಸಂಪತ್ತಾಗಿವೆ.

ಗದ್ಯಪದ್ಯಮಯೀ

ದಂಡಿಯು ತನ್ನ "ಕಾವ್ಯಾದರ್ಶ"ದಲ್ಲಿ ಚಂಪುವಿನ ವ್ಯಾಖ್ಯೆಯನ್ನು ಕೊಡುತ್ತ— "ಗದ್ಯಪದ್ಯಮಯೀ ಕಾಚಿಚ್ಚಂಪೂರಿತ್ಯಭಿಧೀಯತೇ" ಎಂದು ಹೇಳಿದ್ದಾನೆ. ಪದ್ಯದಲ್ಲಿ ಪ್ರಸಿದ್ಧವಾದದ್ದು ಮಹಾಕಾವ್ಯ; ಬಾಣ-ಸುಬಂಧು ಮೊದಲಾದವರ ಕೃತಿಗಳು ಗದ್ಯ ರೂಪದಲ್ಲಿವೆ. ಆದರೆ ಗದ್ಯ-ಪದ್ಯಗಳೆರಡರ ಮಿಶ್ರಣವಾದ ರೂಪ ಚಂಪುವಿನದು. ಸಂಸ್ಕೃತ ಸಾಹಿತ್ಯದಲ್ಲಿ ನಾಟಕಗಳು, ಮಹಾಕಾವ್ಯಗಳು ಬಹಳ ಪ್ರಾಚೀನ ಕಾಲದಿಂದಲೂ ದೊರೆಯುತ್ತವೆ. ಆದರೆ ಚಂಪೂಕಾವ್ಯಗಳು ೯ - ೧೦ ನೆಯ ಶತಮಾನಗಳಿಂದ ಈಚೆಗೆ ಸಂಸ್ಕೃತದಲ್ಲಿವೆ. ಕನ್ನಡ ಸಾಹಿತ್ಯದಲ್ಲಿಯೂ ಸುಮಾರು ಇದೇ ಕಾಲದಿಂದ ಅಥವಾ ಇದಕ್ಕೂ ಸ್ವಲ್ಪ ಹಿಂದಿನಿಂದಲೇ ಚಂಪೂಕಾವ್ಯಗಳ ರಚನೆಯಾಗಿದೆ. 'ಚಂಪೂ' ರೂಪವು ಮೂಲತಃ ಸಂಸ್ಕೃತದ್ದಾಗಿರದೆ ದ್ರಾವಿಡ ಭಾಷೆಗಳಿಂದ ಎರವಲಾಗಿ ತೆಗೆದುಕೊಂಡದ್ದಾಗಿರಬೇಕೆಂದು ಡಾ॥ ರಂ. ಶ್ರೀ. ಮುಗಳಿಯವರು ಅಭಿಪ್ರಾಯಪಟ್ಟಿದ್ದಾರೆ. * ಅವರ ಅಭಿಪ್ರಾಯಕ್ಕೆ ಸಬಲವಾದ ಕಾರಣಗಳಿದ್ದು ಅವುಗಳನ್ನು ಹೀಗೆ ಸಂಗ್ರಹಿಸಿ ಹೇಳಬಹುದು:- "ಚಂಪು" ಎಂಬ ಶಬ್ದಕ್ಕೆ ಸಂಸ್ಕೃತ ಭಾಷೆಯಲ್ಲಿ ಉಚಿತವಾದ ವ್ಯುತ್ಪತ್ತಿ ಇಲ್ಲ. "ಚಮತ್ಕೃತ್ಯ ಪುನಾತಿ ಸಹೃದಯಾನ್ ವಿಸ್ಮಯೀ ಕೃತ್ಯ ಪ್ರಸಾದಯತೀತಿ ಚಂಪೂಃ" ಎಂಬುದು ಕೇವಲ ಒಂದು ಚಮತ್ಕಾರದ ವ್ಯುತ್ಪತ್ತಿ. 'ಚಂಪೂ' ಶಬ್ದಕ್ಕೆ ಸಂಸ್ಕೃತದಲ್ಲಿ ಸರಿಯಾದ ವ್ಯುತ್ಪತ್ತಿ ಇಲ್ಲ ಎಂದು ಡಾ॥ ಕೀತ್ ಅವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ದ್ರಾವಿಡ ಭಾಷೆಗಳಲ್ಲಿ 'ಚಂಪೂ' ಶಬ್ದಕ್ಕೆ ಅರ್ಥವಿದೆ. ಕನ್ನಡದ 'ಸಂಪು' ಎಂಬ ಶಬ್ದವನ್ನು ಹೋಲಿಸಿ ನೋಡಬಹುದು. ತುಳು ಭಾಷೆಯಲ್ಲಿಯೂ ಇದನ್ನು ಹೋಲುವ ಶಬ್ದಗಳಿವೆ. ಎರಡನೆಯದಾಗಿ ಸಂಸ್ಕೃತದ ಮೊಟ್ಟಮೊದಲಿನ ಚಂಪೂ ಕಾವ್ಯಗಳು ಕನ್ನಡ ಅರಸರ ಆಶ್ರಯದಲ್ಲಿ ರಚಿತವಾದುವು. ಉದಾಹರಣೆಗೆ ರಾಷ್ಟ್ರಕೂಟ ೩ ನೆಯ ಇಂದ್ರನ (ಕ್ರಿ. ಶ. ೯೧೪-೯೧೬) ಆಶ್ರಯದಲ್ಲಿ ತ್ರಿವಿಕ್ರಮಭಟ್ಟನು "ನಲಚಂಪೂ" ಅಥವಾ "ದಮಯಂತೀ ಕಥಾ" ಎಂಬ ಸಂಸ್ಕೃತ ಚಂಪೂಗ್ರಂಥವನ್ನು ರಚಿಸಿದನು. ಪಂಪನಿಗೆ ಆಶ್ರಯ ಕೊಟ್ಟ ಅರಿಕೇಸರಿಯ ಆಶ್ರಯದಲ್ಲಿ ಸೋಮದೇವನು 'ಯಶಸ್ತಿಲಕ-ಚಂಪೂ' ಎಂಬ ಜೈನ ಗ್ರಂಥವನ್ನು ರಚಿಸಿದನು. ಇವೆಲ್ಲ ಕಾರಣಗಳಿಂದ ಚಂಪೂರೂಪವು ಮೂಲತಃ ಸಂಸ್ಕೃತದ್ದಾಗಿ ತೋರುವುದಿಲ್ಲ; ಅದು ದ್ರಾವಿಡ ರೂಪವಾಗಿದ್ದು ನಂತರ ಸಂಸ್ಕೃತ ಸಾಹಿತ್ಯದಲ್ಲಿ ಸಮಾವೇಶಗೊಂಡಂತೆ ತೋರುತ್ತದೆ.

ಸಂಸ್ಕೃತ ಚಂಪೂಕಾರರ ದೃಷ್ಟಿ ಹೆಚ್ಚಾಗಿ ಪಾಂಡಿತ್ಯದ ಕಡೆಗೆ, ಚಮತ್ಕಾರದ ಕಡೆಗೆ; ಆದರೆ ಕನ್ನಡ ಚಂಪೂಕಾರರ ದೃಷ್ಟಿ ಪಾತ್ರ ಸೃಷ್ಟಿ, ರಸ ನಿರ್ಮಾಣದ ಕಡೆಗೆ ಇದೆ ಎಂದು ಹೇಳಬಹುದು. ಈ ದೃಷ್ಟಿಭೇದದಲ್ಲಿ ಕನ್ನಡ ಕವಿಗಳ ಹಿರಿಮೆ ಕಂಡುಬರುತ್ತದೆ. ಪಂಪನು ಹೇಳುವಂತೆ ಚಂಪೂ ಕಾವ್ಯವು "ಸಂಸಾರ ಸಾರೋದಯ"-ಮಾನವ - ಪ್ರಪಂಚದ ಅನುಭವದ ಸಾರಸರ್ವಸ್ವ. ಪಂಪನ ಮಾರ್ಗದರ್ಶನದಲ್ಲಿ ಮುನ್ನಡೆದ ಕನ್ನಡ ಕವಿಗಳು ಚಂಪೂ ಕಾವ್ಯಗಳಲ್ಲಿ ಭಾಷೆ, ಅಲಂಕಾರ, ಕವಿಸಮಯಗಳ ಪ್ರದರ್ಶನಕ್ಕಿಂತ ತಮ್ಮ ಜೀವನಾನುಭವವನ್ನು ಎರಕ ಹೊಯ್ದಿದ್ದಾರೆ, ತಮ್ಮ ಸಂದೇಶವನ್ನು ಬೀರಿದ್ದಾರೆ.

ಎರಡು ಪ್ರಕಾರದ ಕಾವ್ಯಗಳು

ಚಂಪೂ ಕಾವ್ಯಗಳಲ್ಲಿ 'ಲೌಕಿಕ' ಮತ್ತು 'ಆಗಮಿಕ' ಎಂಬ ಎರಡು ಕಾವ್ಯಗಳನ್ನು ರಚಿಸುವ ಸಂಪ್ರದಾಯವು ಪಂಪನಿಂದ ಮೊದಲ್ಗೊಂಡಿತು. ಹಾಗೆ ನೋಡಿದರೆ ಪಂಪನಿಗಿಂತ ಹಿಂದಿನ ಕವಿಯಾದ ೧ ನೆಯ ಗುಣವರ್ಮನು 'ಹರಿವಂಶ' ಮತ್ತು 'ಶೂದ್ರಕ' ಎಂಬ ಎರಡು ಕಾವ್ಯಗಳನ್ನು- ಎಂದರೆ ಲೌಕಿಕ ಮತ್ತು ಆಗಮಿಕ ಕಾವ್ಯಗಳನ್ನು- ರಚಿಸಿರುವನೆಂದು ತಿಳಿಯುತ್ತದೆ. ಆದರೆ ಆ ಕಾವ್ಯಗಳು ದೊರೆಯದೆ ಇರುವುದರಿಂದಲೂ ಆದಿಪಂಪನು ಸಾಹಿತ್ಯದ ಯುಗಪುರುಷನಾದ ಮಹಾಕವಿಯಾದ್ದರಿಂದಲೂ ಕನ್ನಡ ಚಂಪುವಿನ ಇತಿಹಾಸವನ್ನು ಪಂಪನಿಂದ ಪ್ರಾರಂಭಿಸುವುದು ವಾಡಿಕೆಯಾಗಿದೆ.

'ಕನ್ನಡಕ್ಕೊಡೆಯ'ನಾದ ಪಂಪನು (ಕ್ರಿ.ಶ. ೯೪೧) "ವಿಕ್ರಮಾರ್ಜುನ ವಿಜಯ"ವೆಂಬ ಲೌಕಿಕಕಾವ್ಯವನ್ನೂ "ಆದಿಪುರಾಣ"ವೆಂಬ ಆಗಮಿಕಕಾವ್ಯವನ್ನೂ ರಚಿಸಿದನು. ತನ್ನ ಮೊದಲನೆಯ ಕಾವ್ಯದಲ್ಲಿ ಅವನು "ಬೆಳಗುವೆನಿಲ್ಲಿ ಲೌಕಿಕಮಂ; ಅಲ್ಲಿ ಜಿನಾಗಮಮಂ" ಎಂದು ತಾನೇ ಹೇಳಿದ್ದಾನೆ. ಇಹ-ಪರ ಎಂಬ ಎರಡೂ ದೃಷ್ಟಿಗಳು ಆತನ ಎರಡೂ ಕಾವ್ಯಗಳಲ್ಲಿ ಕಂಡುಬರುತ್ತವೆ. ಜೈನನಾದ ಪಂಪನಿಗೆ ಭಾರತದ ಕಥೆಯು ಧಾರ್ಮಿಕವೆಂದೆನಿಸಲಿಲ್ಲ; ಅದು ಅವನಿಗೆ ವೀರರ ಹಾಗು

* "ತವನಿಧಿ" ಎಂಬ ಗ್ರಂಥದಲ್ಲಿಯ ಡಾ॥ ಮುಗಳಿಯವರ "ಚಂಪುವಿನ ಮೂಲ" ಎಂಬ ಲೇಖನ ನೋಡಬಹುದು.

ಸಾಹಸಿಗಳ ವೀರರ ಸಂಪೂರ್ಣ ಕಥೆಯಾಗಿದೆ. ಕುಮಾರವ್ಯಾಸನಿಗೆ ಕಂಡಂತೆ ಪಂಪನಿಗೆ ಅದು "ಕೃಷ್ಣಚರಿತಾಮೃತ"ವಲ್ಲ; ಅದು "ವಿಕ್ರಮಾರ್ಜುನವಿಜಯ"ವಾಯಿತು. ೧೦ ನೆಯ ಶತಮಾನದಂಥ ಒಂದು ವೀರಯುಗದಲ್ಲಿ ಹುಟ್ಟಿದ ಕವಿಯೂ ಕಲಿಯೂ ಆದ ಪಂಪನು ಭಾರತದ ಕಥೆಯು 'ಲೋಕಪೂಜ್ಯ'ವಾದುದಕ್ಕೆ ಅದರಲ್ಲಿ ಸಾಹಸಿಗಳು ಇದ್ದುದೇ ಕಾರಣವೆಂದು ಹೇಳುತ್ತಾನೆ. "ಚಲದೊಳ್ ದುರ್ಯೋಧನಂ, ನನ್ನಿಯೊಳ್ ಇನತನಯಂ, ಗಂಡಿನೊಳ್ ಭೀಮಸೇನಂ" ಎಂಬ ಪದ್ಯವನ್ನು ನೋಡಬಹುದು. ಇಲ್ಲಿ ಶ್ರೀಕೃಷ್ಣನ ಹೆಸರೇ ಇಲ್ಲ! ಪಂಪನು ಚಾಲುಕ್ಯವಂಶದ ದೊರೆ ಅರಿಕೇಸರಿಯ ಆಶ್ರಯದಲ್ಲಿ ಇದ್ದವನು. ಸಾಹಸಿಯಾದ ತನ್ನ ಆಶ್ರಯದಾತನ ಋಣವನ್ನು ತೀರಿಸಲು ಪಂಪನು ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ "ವಿಕ್ರಮಾರ್ಜುನವಿಜಯ"ವೆಂಬ ಚಂಪೂಕಾವ್ಯ ರಚಿಸಿದನು. ಇದು ರನ್ನನೇ ಮೊದಲಾದ ಅನೇಕ ಕವಿಗಳಿಗೆ ಮಾರ್ಗದರ್ಶಕವಾಯಿತು. ಇದನ್ನು ಅನುಸರಿಸಿಯೇ ರನ್ನನು ತನ್ನ "ಗದಾಯುದ್ಧ"ದಲ್ಲಿ ತನ್ನ ಆಶ್ರಯದಾತನಾದ ಸತ್ಯಾಶ್ರಯನನ್ನು ಭೀಮಸೇನನಿಗೆ ಹೋಲಿಸಿದ್ದಾನೆ.

ಪಂಪ ಭಾರತ

"ಕತೆ ಪಿರಿದಾದೊಡಂ ಕತೆಯ ಮೆಯ್ಗೆಡಲೀಯದೆ" ಸಮಸ್ತ ಭಾರತವನ್ನು ಪಂಪನು ಅಪೂರ್ವವಾಗಿ ಸಂಗ್ರಹಿಸಿ ಹೇಳಿದ್ದಾನೆ. ವ್ಯಾಸಭಾರತದ ವಿಸ್ತಾರವಾದ ಕಥೆಯನ್ನು ಸಂಗ್ರಹಿಸಿಯೂ ರಸವತ್ತಾಗಿ ಹೇಳಿದ್ದಾನೆ. ಪಂಪನ 'ಸಂಗ್ರಹಕಲೆ' ಅದ್ಭುತವಾದುದು. ಪ್ರೊ. ಮುಗಳಿಯವರು ಹೇಳಿದಂತೆ — "ಸಂಗ್ರಹವೆಂದು ಸಾರಾಂಶವಾಗಿಲ್ಲ; ಸಂಕ್ಷೇಪವೆಂದು ವಿಕ್ಷೇಪಕ್ಕೆ ಎಡೆಮಾಡಿಲ್ಲ. ಸವೇಗವಾದಲ್ಲಿಯೂ ಸಜೀವವಾದ ಚಿತ್ರಗಳು ಕಣ್ಣೆದುರು ನಿಲ್ಲುತ್ತವೆ."

ಪಂಪನು ಕೌರವ-ಪಾಂಡವರ ಯಾದವೀ ಕಲಹವನ್ನು ಒಂದು ಮಾನವೀಯದೃಷ್ಟಿಯಿಂದ ಚಿತ್ರಿಸಿದ್ದಾನೆ. ಮಾನವಲೋಭ-ಅಸೂಯೆಗಳು ಭ್ರಾತೃ-ಕಲಹದ ದುರಂತದಲ್ಲಿ ಪರಿಣಮಿಸಿದ್ದನ್ನು ಪಂಪನು ಅದ್ಭುತವಾದ ರೀತಿಯಲ್ಲಿ ಬಣ್ಣಿಸಿದ್ದಾನೆ. ಕೆಲವು ಸನ್ನಿವೇಶಗಳಲ್ಲಿ "ಮುಗಿಲು ಮುಟ್ಟಿದ ಪೆಂಪು" ಎದ್ದು ಕಾಣುತ್ತದೆ. ದ್ಯೂತಪ್ರಸಂಗ, ದ್ರೌಪದೀ ಮಾನಭಂಗ-ಭೀಮಪ್ರತಿಜ್ಞೆ, ಪಾಂಡವರ ವನವಾಸ, ಕೃಷ್ಣಸಂಧಾನ, ದುರ್ಯೋಧನನ ಛಲಪ್ರಸಂಗ — ಮೊದಲಾದ ಸನ್ನಿವೇಶಗಳಲ್ಲಿ ಪಂಪನ ಸನ್ನಿವೇಶನಿರ್ಮಾಣಶಕ್ತಿ ಎದ್ದು ಕಾಣುತ್ತದೆ. ಇವನ್ನು ನೋಡಿದರೆ, "ವಿಕ್ರಮಾರ್ಜುನವಿಜಯವು ಕನ್ನಡದ ಕನ್ನಡಿಯಲ್ಲಿ ಚಿಕ್ಕದಾಗಿ ಬಿದ್ದ ವ್ಯಾಸಭಾರತದ ನೆರಳಲ್ಲ; ಅಲ್ಲಿಯ ಚಿನ್ನವನ್ನು ಶೋಧಿಸಿ ತಂದು ಹೊಸದಾಗಿ ಎರಕಹೊಯ್ದು ಒಪ್ಪವಿಟ್ಟು ನಿಲ್ಲಿಸಿದ ನೂತನ ಪುತ್ತಳಿ ಅದು" ಎಂಬ ಶ್ರೀ ತೀ.ನಂ. ಶ್ರೀಕಂಠಯ್ಯನವರ ಅಭಿಪ್ರಾಯವು ಸರಿಹೋದುದು ಎಂದು ಅನಿಸುತ್ತದೆ.

ಪಂಪನ ಸಜೀವ ಪಾತ್ರಸೃಷ್ಟಿಯ ಕಲೆಯು ಅದ್ಭುತವಾದುದು. ಪಂಪನು ಭಾರತದ ಅನೇಕ ಪಾತ್ರಗಳಿಗೆ ಹೊಸ ಜೀವಕಳೆಯನ್ನು ತುಂಬಿದ್ದಾನೆ. ದುರಂತಕರ್ಣ, ಅಭಿಮಾನಿ ದುರ್ಯೋಧನ, ಕಾರಸ್ಥಾನಿಯಾದ ಶಕುನಿ, ಸಾಹಸಿಗಳಾದ ಅರ್ಜುನ-ಭೀಮಸೇನರು ಮೊದಲಾದ ಪಾತ್ರಗಳನ್ನು ಪರೀಕ್ಷಿಸಬಹುದು. ಸಂಸ್ಕೃತದ ಮಾರ್ಗ, ಕನ್ನಡದ ದೇಸಿ-ಇವುಗಳ ಸಮನ್ವಯವುಳ್ಳ ಒಂದು ಶೈಲಿಯನ್ನು ಪಂಪನು ನಿರ್ಮಿಸಿ ಮುಂದಿನ ಚಂಪೂಕವಿಗಳಿಗೆ ಮಾರ್ಗದರ್ಶಕನಾದನು. ಛಂದಸ್ಸಿನ ದೃಷ್ಟಿಯಿಂದಲೂ ಪಂಪನು ಕನ್ನಡವನ್ನು ಮರೆಯಲಿಲ್ಲ. ಕಂದಪದ್ಯ, ಸಂಸ್ಕೃತವೃತ್ತಗಳ ಜೊತೆಗೆ ಪಂಪನು ತನ್ನ ಕಾವ್ಯಗಳಲ್ಲಿ ರಗಳೆ, ತ್ರಿಪದಿ ಮೊದಲಾದ ಅಚ್ಚಗನ್ನಡ ಛಂದಸ್ಸನ್ನೂ ಬಳಸಿದ್ದಾನೆ.

ಆದಿ ಪುರಾಣ

ಪಂಪನ ಇನ್ನೊಂದು ಕೃತಿ "ಆದಿಪುರಾಣ." ಜೈನರ ಪ್ರಥಮ ತೀರ್ಥಂಕರನಾದ ಆದಿದೇವನ ಚರಿತ್ರೆಯನ್ನು ಇಲ್ಲಿ ರಸಮಯವಾಗಿ ಬಣ್ಣಿಸಲಾಗಿದೆ. ಹತ್ತು ಜನ್ಮಗಳಲ್ಲಿ ಅವನ ಆತ್ಮವು ಹೇಗೆ ವಿಕಾಸಗೊಳ್ಳುತ್ತ ಬಂದಿತು, ಎಂಬುದರ ಕಲಾಮಯ ನಿರೂಪಣೆಯು "ಆದಿಪುರಾಣ"ದಲ್ಲಿ ಬಂದಿದೆ. ಇಲ್ಲಿ ಜೈನಧರ್ಮದ ತತ್ತ್ವಗಳು ಕಾವ್ಯಮಯವಾಗಿ ನಿರೂಪಿಸಲ್ಪಟ್ಟಿವೆ. ಪಂಪನೇ ಹೇಳಿದಂತೆ—"ಆದಿಪುರಾಣದೊಳರಿವುದು ಧರ್ಮಮುಂ ಕಾವ್ಯಧರ್ಮಮುಮಂ." ಮುಂದಿನ ಜೈನಕವಿಗಳಿಗೆ "ಚರಿತಪುರಾಣ"ಗಳನ್ನು ಬರೆಯಲು ಪಂಪನು ಹೀಗೆ ಹಾದಿಯನ್ನು ಹಾಕಿಕೊಟ್ಟನು. ಆದಿದೇವನ ವೈರಾಗ್ಯವನ್ನು ಜಾಗೃತಗೊಳಿಸಿದ ನೀಲಾಂಜನೆಯ ನೃತ್ಯ, ಲಲಿತಾಂಗ — ಸ್ವಯಂಪ್ರಭೆಯರ ಪ್ರಣಯ, ಭರತ— ಬಾಹುಬಲಿಯರ ಕಥೆ, —ಇವು "ಆದಿಪುರಾಣ"ದ ಕೆಲವು ರಸಸ್ಥಾನಗಳು.

ಹೀಗೆ ಪಂಪನ ಕಾವ್ಯಶಕ್ತಿಯು ಲೌಕಿಕ ಮತ್ತು ಆಗಮಿಕ ಎಂದು ಇಬ್ಭಾಗವಾಗಿ ಪ್ರವಹಿಸಿದ್ದರೂ ಆತನ ಎರಡೂ ಕಾವ್ಯಗಳು ಕನ್ನಡ ಸಾಹಿತ್ಯದ ಎರಡು ಮೇರುಕೃತಿಗಳಾಗಿವೆ. ಶ್ರೀ. ತೀ. ನಂ. ಶ್ರೀ ಯವರು ಹೇಳಿದಂತೆ— "ಪಂಪನು ಕನ್ನಡದ ಕಾಳಿದಾಸ" ಕನ್ನಡ ಚಂಪೂಕಾರರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಮಹಾಕವಿ ಪಂಪ.

ಅವನ ಮಾರ್ಗದಲ್ಲಿಯೇ ಸ್ವತಂತ್ರ ಪ್ರತಿಭೆಯಿಂದ ಮುಂದುವರಿದ ಇನ್ನೊಬ್ಬ ಚಂಪೂಕವಿಯೆಂದರೆ ರನ್ನ. ಪಂಪನ ಪ್ರಭಾವಕ್ಕೆ ಒಳಗಾಗಿದ್ದರೂ ರನ್ನನು ತನ್ನದೇ ಆದ ಒಂದು ವಿಶಿಷ್ಟ ರೀತಿಯಿಂದ ನಾಲ್ಕು ಕೃತಿಗಳನ್ನು ರಚಿಸಿದ್ದಾನೆ. ಆದರೆ ಅವನ ಉಪಲಬ್ಧ ಕೃತಿಗಳು ಎರಡೇ— "ಗದಾಯುದ್ಧ" ಮತ್ತು "ಅಜಿತ ಪುರಾಣ". ಒಂದು ಲೌಕಿಕ ಹಾಗೂ ಇನ್ನೊಂದು ಆಗಮಿಕ ಕಾವ್ಯ.

ರನ್ನನ ಗದಾಯುದ್ಧ

ಪಂಪಭಾರತದ ಹದಿಮೂರನೆಯ ಆಶ್ವಾಸದಲ್ಲಿಯ ಕಥೆಯೇ ರನ್ನನನ್ನು "ಗದಾಯುದ್ಧ" ರಚಿಸಲು ಪ್ರೇರಿಸಿತು ಎನ್ನಬಹುದು. ವ್ಯಾಸಭಾರತದ ಗದಾ ಸೌಪ್ತಿಕ ಪರ್ವಗಳಲ್ಲಿಯ ಕಥೆಯನ್ನೇ ಸ್ವತಂತ್ರವಾಗಿ, ನಾಟಕೀಯವಾಗಿ ರನ್ನನು "ಗದಾಯುದ್ಧ" ವಾಗಿ ರಚಿಸಿದ್ದಾನೆ. ಭಾಸನ "ಊರುಭಂಗ" ಭಟ್ಟನಾರಾಯಣನ "ವೇಣೀಸಂಹಾರ" ಮೊದಲಾದ ಕೃತಿಗಳಿಂದ ಪ್ರಭಾವವನ್ನು ಹೊಂದಿಯೂ ರನ್ನನು ಸ್ವತಂತ್ರ, ಉಜ್ವಲ ಕೃತಿಯನ್ನು ರಚಿಸಿದ್ದಾನೆ. "ಕೇವಲ ಸ್ವತಂತ್ರ ನಿರ್ಮಾಣಕ್ಕಿಂತ ಪೂರ್ವಕಥೆಯ ಪುನರ್ನಿರ್ಮಾಣ"ವು ರನ್ನನ ಕೌಶಲ್ಯವಾಗಿದೆ.

ಪಂಪನು ತನ್ನ ಭಾರತದಲ್ಲಿ ಅರಿಕೇಸರಿಯನ್ನು ಅರ್ಜುನನೊಡನೆ ಅಭಿನ್ನನಾಗಿ ವರ್ಣಿಸಿದಂತೆ ರನ್ನನು ಸತ್ಯಾಶ್ರಯನನ್ನು "ಗದಾಯುದ್ಧದ" ದ ನಾಯಕನನ್ನಾಗಿ ಮಾಡಿ ಭೀಮನೊಡನೆ ಒಂದು ಮಾಡಿ ಹೊಗಳಿದ್ದಾನೆ. ಈ ಕಾವ್ಯದ ಇನ್ನೊಂದು ವೈಶಿಷ್ಟ್ಯವೆಂದರೆ ಇಲ್ಲಿ ಹಿನ್ನೋಟದಿಂದ ಪೂರ್ವ ಕಥೆಯ ಮುಖ್ಯ ಘಟನೆಗಳ ವಿವೇಚನೆಯಿದೆ. ರನ್ನನೇ ಹೇಳಿದಂತೆ— "ಭಾರತದೊಳಗಣ ಕಥೆಯೆಲ್ಲಮೀ ಗದಾಯುದ್ಧದೊಳಂತೊಳಕೊಂಡಿತ್ತೆನೆ ಸಿಂಹಾವಲೋಕನಕ್ರಮದಿನರಿಪಿದಂ ಕವಿರತ್ನಂ".

ನಾಟಕೀಯತೆಯು "ಗದಾಯುದ್ಧ" ದ ಸೊಗಸನ್ನೂ ರಸೋತ್ಕಟತೆಯನ್ನೂ ಹೆಚ್ಚಿಸಿದೆ. ಸಂಭಾಷಣೆಯಲ್ಲಿ, ಪಾತ್ರಪೋಷಣೆಯಲ್ಲಿ, ದೃಶ್ಯ ನಿರ್ಮಾಣದಲ್ಲಿ— ಎಲ್ಲೆಡೆಗೆ ರನ್ನನ ಸಹಜವಾದ ನಾಟ್ಯಗುಣವು ಕಲಾತ್ಮಕವಾಗಿ ವ್ಯಕ್ತವಾಗಿದೆ. ದುರ್ಯೋಧನನ ಪಾತ್ರ ಸೃಷ್ಟಿಯಲ್ಲಿ ರನ್ನನು ತೋರಿರುವ ಅದ್ಭುತ ಕೌಶಲ್ಯವು ಇಂದಿನ ವಿಮರ್ಶಕರನ್ನು ಆಚ್ಚರಿಗೊಳಿಸಿದೆ. "ದುಷ್ಟ ದುರ್ಯೋಧನನು ಭೂಮಿಗೆ ಭಾರನು" ಎಂಬ ಸಾಂಪ್ರದಾಯಿಕ ಕಲ್ಪನೆಯನ್ನು ಬುಡಮೇಲು ಮಾಡಿ ರನ್ನನು, ದುರ್ಯೋಧನನ್ನು ಸ್ವಾಭಿಮಾನಿ, ಚಲದಂಕಮಲ್ಲ, ಸೆರಗಿಲ್ಲದ ಸಾಹಸಿ, ಉದಾತ್ತವೀರ,—ಎಂಬುದಾಗಿ ಅವನ ಸ್ವಭಾವವನ್ನು ಉನ್ನತಗೊಳಿಸಿದ್ದಾನೆ. ಶ್ರೀ. ಬಿ. ಎಂ. ಶ್ರೀಕಂಠಯ್ಯನವರು ಮಾರ್ಮಿಕವಾಗಿ ಹೇಳಿದಂತೆ— "ರನ್ನನು ಭೀಮನನ್ನು ಇಳಿಸಿಲ್ಲ, ಆದರೆ ದುರ್ಯೋಧನನನ್ನು ಏರಿಸಿರುವನು, ಘನತೆಗೊಯ್ದಿರುವನು." ಪಂಪನದು ಸಮನ್ವಯದ ರೀತಿಯಾದರೆ ರನ್ನನದು ಆವೇಶದ ರೀತಿ, ರನ್ನನ ಶೈಲಿಯಲ್ಲಿಯೂ ಇದೇ ವೀರಾವೇಶ, ಉತ್ಸಾಹಗಳು ಕಂಡು ಬರುತ್ತವೆ.

ರನ್ನನ "ಅಜಿತ ಪುರಾಣ"ವು ಎರಡನೆಯ ತೀರ್ಥಂಕರನಾದ ಅಜಿತನಾಥನ ಚರಿತ್ರೆಯಾಗಿದೆ. ಇಂಥ ಜೈನ ಪುರಾಣಗಳಿಂದ ಕನ್ನಡ ಚಂಪೂಕಾವ್ಯಗಳ ವೈವಿಧ್ಯವು ಹೆಚ್ಚಾಗಿದೆ ಎನ್ನಬಹುದು. ಚಾವುಂಡರಾಯನ "ತ್ರಿಷಷ್ಠಿಶಲಾಕಾಪುರುಷಪುರಾಣ," ಪೊನ್ನನ "ಶಾಂತಿಪುರಾಣ", ಮುಂದೆ ೧೩ನೆಯ ಶತಮಾನದಲ್ಲಿ ೨ನೆಯ ಗುಣವರ್ಮ, ಕಮಲಭವ, ಮಹಾಬಲಕವಿ, ಮಧುರಕವಿ ಮೊದಲಾದ ಅನೇಕ ಚಂಪೂರೂಪದಲ್ಲಿಯ ಜೈನ ಪುರಾಣಗಳು ಕನ್ನಡ ಸಾಹಿತ್ಯದ ವೈಶಿಷ್ಟ್ಯವಾಗಿವೆ. ಇವುಗಳಲ್ಲಿ ಉತ್ತಮವಾದ ಪುರಾಣಗಳು ರಸವತ್ತಾದ ಕಾವ್ಯಗಳೂ ಆಗಿವೆ; ವಿಶೇಷವಾಗಿ ಶಾಂತರಸಕ್ಕೆ ಪ್ರಾಧಾನ್ಯವನ್ನು ಕೊಟ್ಟ ಮಹಾಚಂಪೂ ಕೃತಿಗಳೂ ಆಗಿವೆ.

ಪಂಪರಾಮಾಯಣ

೧೧ನೆಯ ಶತಮಾನದ ಕೊನೆಯಲ್ಲಿ ಉದಯಿಸಿದ ನಾಗಚಂದ್ರನು "ಮಲ್ಲಿನಾಥಪುರಾಣ" ಮತ್ತು "ರಾಮಚಂದ್ರಚರಿತ ಪುರಾಣ" (ಅಥವಾ ಪಂಪರಾಮಾಯಣ) ಎಂಬ ಎರಡು ಚಂಪೂಕಾವ್ಯಗಳನ್ನು ಹೊಸ ರೀತಿಯಲ್ಲಿ ರಚಿಸಿದ್ದಾನೆ. ಮೊದಲನೆಯದು ಮಲ್ಲಿನಾಥ ಜಿನೇಂದ್ರನ ಚರಿತ್ರೆಯಾದರೆ, ಎರಡನೆಯ ಕಾವ್ಯವು ಜೈನ ಸಂಪ್ರದಾಯದ ರಾಮಾಯಣವಾಗಿದೆ. ಆದಿಪಂಪನು ಭಾರತವನ್ನು ಬರೆದು ಹೆಸರಾದಂತೆ ತಾನು ರಾಮಾಯಣವನ್ನು ರಚಿಸಬೇಕೆಂದು ನಾಗಚಂದ್ರನು "ಅಭಿನವಪಂಪ"ನೆಂಬ ಬಿರುದನ್ನು ತಾಳಿದನು. "ಪಂಪರಾಮಾಯಣ"ದಲ್ಲಿ ಬರುವ ರಾವಣನ ಉದಾತ್ತ ಸ್ವಭಾವವು ರನ್ನನ "ಗದಾಯುದ್ಧ" ದ ದುರ್ಯೋಧನನನ್ನು ನೆನಪಿಗೆ ತರುತ್ತದೆ. ನಾಗಚಂದ್ರನ ರಾವಣನು ಕಾಮುಕನಾದ ರಾಕ್ಷಸನಲ್ಲ, "ಪರಾಂಗನಾವಿರತಿ" ಎಂಬ ವ್ರತವನ್ನು ಕೈಕೊಂಡ ಚಕ್ರವರ್ತಿ, ಸೀತೆಯ ರೂಪಕ್ಕೆ ಅವನು ಮರುಳಾದದ್ದು ಅವನ ಆಯುಷ್ಯದಲ್ಲಿಯ ಮೊದಲನೆಯ ಮತ್ತು ಕೊನೆಯ ಅಪರಾಧ. "ಕಾಲವಶದಿಂ ಅಬ್ಧಿಯುಂ ಮರ್ವ ಮೇರೆಯುಂ ದಾಂಟದೇ ?" ಎಂಬಂತೆ ರಾವಣನೂ ವಿಧಿವಶದಿಂದ ಅನ್ಯಾಯಗೈದನು. ಕೊನೆಗೆ ಅವನಿಗೆ ಪಶ್ಚಾತ್ತಾಪವಾಗಿ "ರಾಮ-ಸೀತೆಯನ್ನು ಅಗಲಿಸಿದ ಪಾಪಿ ತಾನು" ಎಂದು ತನ್ನನ್ನೇ ನಿಂದಿಸಿಕೊಂಡು ಯುದ್ಧದಲ್ಲಿ ರಾಮನನ್ನು ಸೋಲಿಸಿ ಆಮೇಲೆ ಸೀತೆಯನ್ನು ರಾಮನಿಗೆ ಒಪ್ಪಿಸಬೇಕೆಂದು ನಿಶ್ಚಯಿಸುತ್ತಾನೆ. ರಾವಣನ ಈ ಬಗೆಯ ಪಾತ್ರಕಲ್ಪನೆಯಲ್ಲಿಯ ದುರಂತ ಅಂಶಗಳು ನಾಗಚಂದ್ರನ ಹಿರಿಮೆಯನ್ನು ಸಾರುತ್ತವೆ.

ಚಂಪೂರೂಪವನ್ನು ಉಪಯೋಗಿಸಿದ ಬ್ರಾಹ್ಮಣ ಕವಿಗಳಲ್ಲಿ ರುದ್ರಭಟ್ಟ (ಕಾಲ ಸು. ೧೨೦೦) ಮೊದಲಿಗನು. ಈತನ "ಜಗನ್ನಾಥವಿಜಯ"ವು ಶ್ರೀ ಕೃಷ್ಣನ ಲೀಲೆಗಳನ್ನು ಬಣ್ಣಿಸುವ ಪ್ರೌಢ ಕಾವ್ಯವಾಗಿದೆ. ಚೌಂಡರಸನು (ಕಾಲ ಸು. ೧೩೦೦) "ಅಭಿನವ ದಶಕುಮಾರ ಚರಿತೆ"ಯನ್ನು ರಚಿಸಿದ ಇನ್ನೊಬ್ಬ ಬ್ರಾಹ್ಮಣ ಕವಿಯು. ೧೭ನೆಯ ಶತಮಾನದಲ್ಲಿ ಚಿಕ್ಕದೇವರಾಯನ ಆಸ್ಥಾನದಲ್ಲಿ ತಿರುಮಲಾರ್ಯ, ಚಿಕ್ಕುಪಾಧ್ಯಾಯ ಮೊದಲಾದ ಬ್ರಾಹ್ಮಣ ಚಂಪೂ ಕವಿಗಳು ಮತ್ತೊಮ್ಮೆ ತಲೆದೋರಿದರು.

ವಿಸ್ತಾರವಾದ ಒಂದೇ ಕಥೆಯನ್ನು ಪ್ರೌಢವಾಗಿ ಹೇಳುವ "ಮಾರ್ಗಕಾವ್ಯ"ದ ಚಂಪೂ

ಕೃತಿಗಳಿಗಿಂತ ಸಣ್ಣ ಸಣ್ಣ ಕಥೆಗಳನ್ನು ಹೇಳಿ ಜನಸಾಮಾನ್ಯವನ್ನು ರಂಜಿಸುವ ಮತ್ತು ಜೈನ ತತ್ವಬೋಧೆ ಮಾಡುವ ರೀತಿಯು ನಯಸೇನ, ಬ್ರಹ್ಮಶಿವ ಮೊದಲಾದ ೧೨ನೆಯ ಶತಮಾನದ ಜೈನಕವಿಗಳಲ್ಲಿ ಕಂಡುಬರುತ್ತದೆ. ನಯಸೇನನ "ಧರ್ಮಾಮೃತ"ವು ಅಂಥ ಜೈನ ತತ್ವಬೋಧಕ ಕಥಾಸಂಗ್ರಹವಾಗಿದೆ. ಬ್ರಹ್ಮಶಿವನ "ಸಮಯ ಪರೀಕ್ಷೆ"ಯು ವೈದಿಕ ಮತದ ದೇವತೆಗಳನ್ನೂ ಸಂಪ್ರದಾಯಗಳನ್ನೂ ಟೀಕಿಸುವ ವಿಡಂಬಕ ಕಾವ್ಯವಾಗಿದೆ. ಇದೇ ರೀತಿಯು ವೃತ್ತವಿಲಾಸನ "ಧರ್ಮಪರೀಕ್ಷೆ" ಯಲ್ಲಿಯೂ ಮುಂದುವರಿದಿದೆ.

ವೈವಿಧ್ಯಪೂರ್ಣವಾದುದು

ಕನ್ನಡ ಚಂಪೂ ಕಾವ್ಯಗಳಲ್ಲಿ ಬೇಕಾದಷ್ಟು ವೈವಿಧ್ಯವಿದೆ: ಸಣ್ಣ ಕತೆಗಳ ಸಂಗ್ರಹ, ಸಂಸ್ಕೃತದಿಂದ ಅನುವಾದಿತ ಕಾವ್ಯಗಳು, ಕಲ್ಪಿತ ಕಥೆಗಳು, ಶಾಸ್ತ್ರ ಗ್ರಂಥಗಳು, ಇತ್ಯಾದಿ. ನಾಗವರ್ಮನ "ಕರ್ಣಾಟಕ ಕಾದಂಬರಿ", ದುರ್ಗಸಿಂಹನ "ಪಂಚತಂತ್ರ"ಗಳು ಸಂಸ್ಕೃತದಿಂದ ಅನುವಾದಿತ ಕೃತಿಗಳಾದರೆ, ನೇಮಿಚಂದ್ರನ "ಲೀಲಾವತಿ" ಆಂಡಯ್ಯನ "ಕಬ್ಬಿಗರ ಕಾವ" ಇವು ಕಲ್ಪಿತ ಕಥೆಗಳಾಗಿವೆ. ಚಂಪೂರೂಪವನ್ನು ಶಾಸ್ತ್ರಗಳ ರಚನೆಗೂ ಉಪಯೋಗಿಸಲಾಗಿದೆ. ಕನ್ನಡ ಚಂಪೂ ಗ್ರಂಥಗಳಲ್ಲಿ ಪಾಕಶಾಸ್ತ್ರ, ಕಾಮಶಾಸ್ತ್ರ, ಛಂದಶ್ಶಾಸ್ತ್ರ, ವಿಷವೈದ್ಯಶಾಸ್ತ್ರ, ಜ್ಯೋತಿಷಶಾಸ್ತ್ರ ಮೊದಲಾದ ಲೋಕೋಪಕಾರಕ ಗ್ರಂಥಗಳು ಕಂಡುಬರುತ್ತವೆ.

ಹರಿಹರನ "ಗಿರಿಜಾಕಲ್ಯಾಣ"ವು ವೀರಶೈವ ಚಂಪೂ ಕೃತಿಗಳಲ್ಲಿ ಆದ್ಯಕೃತಿ "ಶಿವಕವೀಂದ್ರ"ನಾದ ಹರಿಹರನು ಶಿವಶರಣರ ಚರಿತ್ರೆಗಳನ್ನು ರಗಳೆಗಳಲ್ಲಿ ಭಕ್ತಿರಸಪೂರ್ಣವಾಗಿ ನಿರೂಪಿಸಿದಂತೆ, "ಗಿರಿಜಾಕಲ್ಯಾಣ"ದಲ್ಲಿ ಶಿವಪಾರ್ವತಿಯರ ಕಲ್ಯಾಣದ ಕಥೆಯನ್ನು ರಸೋತ್ಕಟವಾಗಿ ಬಣ್ಣಿಸಿದ್ದಾನೆ. ಈ ಚಂಪೂ ಕೃತಿಯಲ್ಲಿ ಕೆಲವು ಜೈನ ಚಂಪೂ ಕೃತಿಗಳಲ್ಲಿರುವ ಕ್ಲಿಷ್ಟತೆ ಪಾಂಡಿತ್ಯಪ್ರದರ್ಶನಗಳಿಲ್ಲ. ಅಚ್ಚಗನ್ನಡದತ್ತ ಒಲಿದಿರುವ ಭಾಷೆ, ಪ್ರಸಾದಗುಣ, ಸೊಗಸಾದ ವರ್ಣನೆಗಳು, ಭಕ್ತಿನಿರ್ಭರತೆ,— ಈ ಮೊದಲಾದ ವೈಶಿಷ್ಟ್ಯಗಳಿಂದ 'ಗಿರಿಜಾಕಲ್ಯಾಣ' ಕನ್ನಡ ಚಂಪೂ ಕಾವ್ಯಗಳಲ್ಲಿ ಗೌರವದ ಸ್ಥಾನವನ್ನು ಪಡೆದಿದೆ.

ಹಿಂದೆ ಹೇಳಿದಂತೆ ಮೈಸೂರು ಒಡೆಯನಾದ ಚಿಕ್ಕದೇವರಾಯನ ಆಶ್ರಯದಲ್ಲಿ (ಕ್ರಿ. ಶ. ೧೭ನೆಯ ಶತಮಾನದಲ್ಲಿ) ಮತ್ತೊಮ್ಮೆ ಚಂಪೂ ಕಾವ್ಯಗಳು ಕಾಣಿಸಿಕೊಂಡುವು. ಚಿಕ್ಕದೇವರಾಯನು ಸ್ವತಃ ಕವಿಯಾಗಿದ್ದುದಲ್ಲದೆ ಅನೇಕ ಕವಿಗಳಿಗೆ ಆಶ್ರಯವಿತ್ತಿದ್ದನು. ಅವನ ಮಂತ್ರಿ ಮತ್ತು ಸ್ನೇಹಿತನಾದ ತಿರುಮಲಾರ್ಯನು ಗದ್ಯ, ಅಲಂಕಾರ-ಗ್ರಂಥಗಳನ್ನು ರಚಿಸಿದಂತೆ "ಚಿಕ್ಕದೇವರಾಯ ವಿಜಯ"ವೆಂಬ ಪ್ರೌಢವಾದ ಚಂಪೂ ಕಾವ್ಯ ಬರೆದಿದ್ದಾನೆ. ಇಲ್ಲಿ ಪುನರುಜ್ಜೀವನ ಹೊಂದಿದ ಚಂಪೂ—ಶೈಲಿಯು ಬಿಗುವಿದೆ, ಕನ್ನಡ-ಸಂಸ್ಕೃತಗಳ ಸಮನ್ವಯವೂ ಇದೆ. ಚಿಕ್ಕದೇವರಾಯನ ಇನ್ನೊಬ್ಬ ಮಂತ್ರಿಯೂ ಪಂಡಿತನೂ ಆದ ಚಿಕ್ಕುಪಾಧ್ಯಾಯನು ಗದ್ಯ, ಸಾಂಗತ್ಯ, ಟೀಕಾಗ್ರಂಥಗಳನ್ನು ಬರೆದಂತೆ ಕಮಲಾಚಲ ಮಾಹಾತ್ಮ್ಯ, ರುಕ್ಮಾಂಗದ ಚರಿತ, ದಿವ್ಯಸೂರಿ ಚರಿತೆ, ಸಾತ್ವಿಕಬ್ರಹ್ಮವಿದ್ಯಾವಿಲಾಸ—ಮೊದಲಾದ ಚಂಪೂ ಗ್ರಂಥಗಳನ್ನು ರಚಿಸಿದ್ದಾನೆ. 'ದಿವ್ಯಸೂರಿಚರಿತೆ' ಯಲ್ಲಿ ಹನ್ನೆರಡು ಆಳ್ವಾರುಗಳ ಚರಿತ್ರೆ ಬಂದಿದೆ, ರಾಮಾನುಜಾಚಾರ್ಯರ ಚರಿತ್ರೆಯೂ ಅದರಲ್ಲಿ ಸೇರಿದೆ. "ಸಾತ್ವಿಕ ಬ್ರಹ್ಮವಿದ್ಯಾವಿಲಾಸ" ದಲ್ಲಿ ವಿಶಿಷ್ಟಾದ್ವೈತ ಮತವನ್ನು ಸಪ್ರಮಾಣವಾಗಿ ನಿರೂಪಿಸಲಾಗಿದೆ. ಹಿಂದೆ ಚಂಪುವನ್ನು ಜೈನಕವಿಗಳು ಜೈನ ತತ್ವಗಳನ್ನು ವಿವರಿಸುವುದಕ್ಕೆ ಉಪಯೋಗಿಸಿದಂತೆ ಚಿಕುಪಾಧ್ಯಾಯನು ಇಲ್ಲಿ ಶ್ರೀವೈಷ್ಣವ ಮತತತ್ವಗಳನ್ನು ಪ್ರತಿಪಾದಿಸಲು ಚಂಪೂ ರೂಪವನ್ನು ಬಳಸಿದ್ದಾನೆ.

ಶಿವಭಕ್ತರ ಚರಿತ್ರೆಗಳು

ಹದಿನೇಳನೆಯ ಶತಮಾನದಲ್ಲಿ ಅನೇಕ ವೀರಶೈವ ಚಂಪೂಕವಿಗಳು ಉದಯಿಸಿದರು. ಅವರಲ್ಲಿ ಚಂದ್ರಕವಿ, ಸುರಂಗಕವಿ, ವೀರಭದ್ರರಾಜ, ಸದಾಶಿವಯೋಗಿ, ಶಾಂತವೀರದೇಶಿಕ, ಕವಿ ಮಾದಣ್ಣ, ಇವರ ಹೆಸರನ್ನು ಉಲ್ಲೇಖಿಸಬಹುದು. ಇವರೆಲ್ಲರೂ ಶಿವಭಕ್ತಿಯ ದೃಷ್ಟಿಯಿಂದ ಹರಿಹರ ಕವಿಯನ್ನು ಅನುಸರಿಸಿದರು; ವರ್ಣನೆ, ಅಲಂಕಾರ ಕವಿಸಮಯಗಳ ದೃಷ್ಟಿಯಿಂದ ಸಂಸ್ಕೃತ ಮಹಾಕಾವ್ಯದ ದಾರಿಯಲ್ಲಿ ಹೆಜ್ಜೆಯಿಟ್ಟರು. ಸುರಂಗಕವಿಯ "ತ್ರಿಷಷ್ಟಿ ಪುರಾತನರ ಚರಿತ್ರೆ" ೬೩ ಆಶ್ವಾಸಗಳಲ್ಲಿ ತಮಿಳು ನಾಡಿನ ೬೩ ಶಿವಭಕ್ತರ ಚರಿತ್ರೆಯನ್ನು ನಿರೂಪಿಸುವ ದೊಡ್ಡ ಚಂಪೂ ಗ್ರಂಥ. ಸದಾಶಿವಯೋಗಿಯ "ರಾಮನಾಥ ವಿಲಾಸ"ದಲ್ಲಿ ವೀರಶೈವ ಮತದ ಶ್ರೇಷ್ಠತೆಯನ್ನು ಸಿದ್ಧಮಾಡಿದ ರಾಮನಾಥ ಗುರುವಿನ ಚರಿತ್ರೆಯಿದೆ. ಚಂಪೂ ರೂಪದಲ್ಲಿಯೂ ಅಲ್ಲಲ್ಲಿ ಷಟ್ಪದಿಗಳನ್ನು ಸೇರಿಸಿದ್ದು ಇದರ ವಿಶೇಷವಾಗಿದೆ. ಉಳಿದ ಚಂಪೂಕಾರರೆಲ್ಲ ಶಿವಭಕ್ತರ ಚರಿತ್ರೆಗಳನ್ನು ಚಂಪೂ ರೂಪದಲ್ಲಿ ರಚಿಸಿದ್ದಾರೆ.

ಷಡಕ್ಷರದೇವನು ಕನ್ನಡ ಚಂಪುವಿನ ಇತಿಹಾಸದಲ್ಲಿ ಕೊನೆಯ ಶ್ರೇಷ್ಠ ಕವಿಯು. ಕನ್ನಡ ಮತ್ತು ಸಂಸ್ಕೃತ-ಎರಡೂ ಭಾಷೆಗಳಲ್ಲಿ ಅವನು ಕಾವ್ಯಗಳನ್ನು ರಚಿಸಿದ್ದಾನೆ. ಕನ್ನಡದಲ್ಲಿ ಅವನು "ರಾಜಶೇಖರ ವಿಳಾಸ, ಶಬರಶಂಕರ ವಿಳಾಸ ಮತ್ತು ವೃಷಭೇಂದ್ರ ವಿಜಯ"ಗಳೆಂಬ ಮೂರು ಚಂಪೂ ಕಾವ್ಯಗಳನ್ನು ರಚಿಸಿದ್ದಾನೆ. "ಹರಿಹರನ ಉದಿತಮಾರ್ಗದಿಂದ" ಬರೆಯುವೆನೆಂದು ಹೇಳಿ ಶಿವಭಕ್ತಿಯ ವಿಷಯವಾಗಿ ಹರಿಹರ ಕವಿಯನ್ನು ತನ್ನ ಆದರ್ಶವಾಗಿ ಇಟ್ಟುಕೊಂಡಿದ್ದಾನೆ. ಪಂಚಾಕ್ಷರೀ ಮಂತ್ರದ ಮಹಿಮೆಯನ್ನು ತಿಳಿಸುವ ಶಿವಭಕ್ತನ ಕಥೆ "ರಾಜಶೇಖರ ವಿಳಾಸ"ದ ಕಥಾವಸ್ತು; "ಶಬರಶಂಕರ ವಿಳಾಸ"ವು ಶಿವಲೀಲೆಯನ್ನು ಬಣ್ಣಿಸುವ ಐದು ಆಶ್ವಾಸಗಳ ಚಿಕ್ಕ ಕಾವ್ಯ; "ವೃಷಭೇಂದ್ರ ವಿಜಯ"ದಲ್ಲಿ ಬಸವೇಶ್ವರರ ಚರಿತ್ರೆಯನ್ನು ೪೨ ಆಶ್ವಾಸಗಳಲ್ಲಿ ಕವಿಯು ವಿಸ್ತರಿಸಿ ಹೇಳಿದ್ದಾನೆ. ಸಹಜಕವಿತಾಶಕ್ತಿಯಲ್ಲಿ ಷಡಕ್ಷರದೇವನು ಹರಿಹರನನ್ನು ಹೋಲುತ್ತಾನೆ. ಭಾಷಾಪ್ರಭುತ್ವ, ಕಲ್ಪನಾಸಂಪತ್ತಿ, ರಚನಾಶಕ್ತಿ ಮತ್ತು ಉತ್ಕಟವಾದ ಶಿವಭಕ್ತಿ ಮೊದಲಾದ ವೈಶಿಷ್ಟ್ಯಗಳನೊಳಗೊಂಡ ಷಡಕ್ಷರದೇವನ ಚಂಪೂ ಕಾವ್ಯಗಳು ಕನ್ನಡಿಗರ ಹಿರಿಯ ಸಂಪತ್ತಾಗಿವೆ.

ಹೀಗೆ ಕನ್ನಡದಲ್ಲಿ ಚಂಪೂರೂಪವು ಅನೇಕ ವಿಧವಾಗಿ ಬೆಳೆದುಬಂದು ಕನ್ನಡ ಸಾಹಿತ್ಯದ ವೈವಿಧ್ಯ, ಶಕ್ತಿ ಹಾಗೂ ಸೌಂದರ್ಯಗಳನ್ನು ಹೆಚ್ಚಿಸಿ ಕನ್ನಡಿಗರ ಹೆಮ್ಮೆಯ ಸಾಹಿತ್ಯದ ಪ್ರಕಾರವಾಗಿದೆ.

ಹೆಂಡತಿ ಸೋತಾಗ

'ಗಂಡಹೆಂಡಿರ ಜಗಳ ಉಂಡು ಮಲಗುವತನಕ' ಎಂದು ಹಿರಿಯರು ಗಾದೆಯ ಮಾತನ್ನು ಮಾಡಿದ್ದಾರೆ. ಅಭಿಮಾನಿಯಾದ ಗಂಡ ಹೆಂಡತಿ ಶರಣು ಬಂದಾಗ ತಾನು ಅವಳನ್ನು ಸೋಲಿಸಿದೆನಲ್ಲ ಎಂದು ಕೊಳ್ಳುತ್ತಾನೆ; ಹಿಗ್ಗುತ್ತಾನೆ. ಆದರೆ ನಿಜವಾಗಿ ಸೋಲುವವರು ಯಾರು? ಈ ಪ್ರಶ್ನೆಗೆ ಉತ್ತರ ಈ ನಾಟಕದಲ್ಲಿ ನಿಮಗೆ ದೊರೆಯುವುದು.

★ *ಲೇಖಕರು: ಶ್ರೀ ಜಿ. ಜಿ. ಹೆಗಡೆ, ಹುಬ್ಬಳ್ಳಿ ★

[ಮಧ್ಯಮವರ್ಗದ ಮಾಧವರಾಯರ ಮನೆ. ಮುಂಜಾನೆ ಸುಮಾರು ಹತ್ತುಗಂಟೆಯ ಸಮಯ. ಮಾಧವರಾಯರು ಹೊರಗಿನ ಕೋಣೆಯಲ್ಲಿ ಏನನ್ನೊ ಓದುತ್ತ ಕುಳಿತಿದ್ದಾರೆ. ಅವರ ಇಬ್ಬರು ಮಕ್ಕಳು ಕೃಷ್ಣ ಮತ್ತು ಸುಧಾ ಶಾಲೆಗೆ ಹೊರಡುವ ಸಿದ್ಧತೆಯಿಂದ ಒಳಗಿನಿಂದ ಬರುತ್ತಾರೆ. ಅವರ ಹೆಜ್ಜೆ ಸಪ್ಪಳ ಕೇಳಿದ ಮಾಧವರಾಯರು ಮುಖ ಮೇಲಕ್ಕೆತ್ತುವರು.]

ಮಾಧವ: ಶಾಲೆಗೆ ಹೋಗೂ ಹೋತ್ತಾತೇನು? ಹೌದಲ್ಲ, ಹತ್ತು ಗಂಟೆ ಆಗಿ ಹೋತು?

ಸುಧಾ: ಅಪ್ಪಾ, ಈ ಸಲ ಹೋದ ಸಲದ ಹಾಂಗ ಮಾಡಬೇಡಪಾ.

ಮಾಧವ: ಅಂ! ಅಂದ್ರೆ?

ಸುಧಾ: ಹೋದ ಸಲ ದೀಪಾವಳಿ ಹಬ್ಬಕ್ಕೆ ಕೊಡಸ್ತೇನೆ ಕೊಡಸ್ತೇನೆ ಅಂತ ಅಂದ್ಕೋತ ನೀ ನನಗೆ ಕಡೆಗೂ ಜಾರ್ಜೆಟ ಪತ್ತಲಾ ಕೊಡಸಲೇ ಇಲ್ಲ. ಈ ಸಲ ತಪ್ಪಿಸಿದ್ರೆ ನಾ ಹಬ್ಬದ ದಿನಾ ಉಪವಾಸ ಮಾಡವಾಕಿ ನೋಡು.

ಮಾಧವ: ಕೊಡಸ್ತೇನೆ, ಕೊಡಸ್ತೇನೆ.

ಕೃಷ್ಣ: ಅಪ್ಪಾ, ಮತ್ತೆ ನನ್ನ ಕ್ರಿಕೆಟ ಬ್ಯಾಟು.

ಮಾಧವ: ನಿಂದು ಅದೊಂದು ಬಾಕಿ ಉಳಿದದಲ್ಲ! ದೊಡ್ಡ ಬ್ರಾಡಮನ್ ಆಗವನ್ಹಾಂಗ ಬ್ಯಾಟು ಕೇಳ್ತಾನ. ಆಗ್ಲಿ. ಆವರೆ ಕ್ರಿಕೆಟ ಬ್ಯಾಟ ಬೇಕೂ ಅಂದ್ರೆ ಹೊಸ ಪ್ಯಾಂಟು, ಬುಶ್‌ಕೋಟಿನ ಸುದ್ದಿ ಎತ್ತ ಬಾರ್ದು, ತಿಳೀತೇನು! ಎರಡರಲ್ಲಿ ಯಾವದು ಬೇಕೊ ವಿಚಾರ ಮಾಡಿ ಹೇಳು.

ಕೃಷ್ಣ: ನನಗೆ ಬ್ಯಾಟೇ ಇರ್ಲಿ. ನಡಿ ಸುಧಾ. (ಹೋಗುವರು.)

ಮಾಧವ: ಏನೇ ತಾಟು . . .

ಭಾಗೀರಥಿ: (ಒಳಗಿನಿಂದಲೇ) ಹೂಂ.

(ಅಷ್ಟರಲ್ಲಿ ಪೋಸ್ಟಮನ್ ಮಾಧವರಾವ ಜೋಶಿ ಎನ್ನುತ್ತ ಕಾರ್ಡು ಒಗೆದು ಹೋಗುವನು.)

ಮಾಧವ: ಏನು ಜನರು ಅಂತೇನಿ. ಅಲ್ಲಾ, ಬಾಗಿಲವರೇಗೆ ಬಂದ ಈ ಪೋಸ್ಟಮನ್ನಗೆ ಕೈಲಿ ಪತ್ರ ಕೊಡೂದು ಆಗೂದಿಲ್ಲ. ಭರಕ್ ಅಂತ ಎಸದು ಹೋಗ್ತಾರ. ಕೈಲಿ ಪತ್ರ ಕೊಟ್ಟರೆ ಅಷ್ಟೇ ಕಿಮ್ಮತ್ತು ಕಡಿಮೆ ಆಗ್ತದ ಏನೋ ಈ ಮಕ್ಕಳದ್ದು.

ಭಾಗೀರಥಿ: ಬಡಿಸೇನಿ, ಬರ್ರಿ.

ಮಾಧವ: ಬಂದೆ. (ಒಳಗೆ ಹೋಗುವನು.)

ಭಾಗೀರಥಿ: ಯಾರ ಪತ್ರ?

ಮಾಧವ: ಇನ್ನೂ ಓದೇ ಇಲ್ಲ. (ಓದತೊಡಗುವನು. ಬಾಯಲ್ಲಿ ತುತ್ತು ಇದ್ದಂತೆಯೆ) ಇದು ನಮ್ಮ ಬಾಬೂರಾಯುಂದು. ಈ ಸಲ ದೀಪಾವಳೀಗೆ ಅಂವಾ, ಅವನ ಹೆಂಡತಿ ಮತ್ತೆ ಅವರ ನೆರೆಮನೆಯು ಒಬ್ಬರು ವಿಜಾಪುರಕ್ಕೆ ಗೋಲಗುಮಟಾ ನೋಡ್ಲಿಕ್ಕೆ ಹೋಗ್ತಾರಂತ. ಭಾಳ ದಿವಸ ಆತೂ ನಿನ್ನ ಭೆಟ್ಟಿಯಾಗದೆ, ಬೆಳಗಿನ ಗಾಡೀಗೆ ಬಂದು ನಿನ್ನಲ್ಲಿ ಇಳದು ಸಂಜೆ ಗಾಡೀಗೆ ಮುಂದೆ ಹೋಗ್ತೇನೆ ಅಂತ ಬರದಾನ.

ಭಾಗೀ: ಹೂ. ಯಾವಾಗ ಬರ್ತಾರಂತ? ಹಬ್ಬದ ದಿನಾನೇ.

ಮಾಧವ: ವ್ಹಾ! ಹೆಂಗಸರ ಬುದ್ಧಿ ಗಂಡಸರ ಬುದ್ಧೀಗಿಂತ ಹರತ ಇರ್ತದ ಅನ್ನೂದು ಖರೇ ನೋಡು. ಹಬ್ಬದ ದಿನಾನೇ ಬರ್ತಾರ ಅವರು. ಅದೂ ಛಲೋದೇ ಆತನ್ನು. ಬಾಬುರಾಯ ನನ್ನ ಲಂಗೋಟಿ ಗೆಳೆಯ. ಭಾಳ ದಿನದ ವ್ಯಾಲೆ ಬರ್ತಾನ. ಮತ್ತೆ ಅಂವಾ ಈಗ ದೊಡ್ಡ ಮುಖಂಡ ಆಗ್ಯಾನ. ಅಂವ ಬಂದಾಗ ಏನಾದ್ರೂ ವಿಶೇಷ ಮಾಡ್ಲೇಬೇಕಾಗ್ತದ. ಹಬ್ಬದ ದಿನ ಬಂದ್ರೆ ಹಬ್ಬದ ಖರ್ಚಿನಲ್ಲೇ.

ಭಾಗೀ: ಹೂ.

ಮಾಧವ: ಯಾಕೆ? ಏನೋ ಮಹಾ ಕಷ್ಟಬಂದವರ ಹಾಂಗ ಹೂಂ ಅಂತೀಯಲ್ಲ? ಹಬ್ಬದ ದಿನ ಹ್ಯಾಂಗೂ ಏನಾದ್ರೂ ವಿಶೇಷ ಮಾಡೇ ಮಾಡ್ತಿ. ಅದರೊಳಗೇ ಒಂದು ಇಬ್ಬರ ಮೂವರದು ಹೆಚ್ಚು ಮಾಡಿವರಾತು.

ಭಾಗೀ: ಅದು ಹೌದು. ಆದರೆ ಯಾರಾದ್ರೂ ಮನೇಗೆ ಬಂದ್ರು ಅಂದ್ರೆ–ಅದರಲ್ಲೂ ನಿಮ್ಮವ್ರು ಬಂದ್ರೂ ಅಂದ್ರೆ ನಿಮಗೆ ಸಿಟ್ಟು ಮೂಗಿನ ಮೇಲೇ ಬಂದು ಕೂತಿರ್ತದ. ಹ್ಯಾಗೆ ಮಾಡಿದ್ರೂ ಸರೀಯಾಗೂದಿಲ್ಲ. ಮಂದೀ ಮುಂದೆ......

ಮಾಧವ: ಸಾಕು ಸಾಕು. ಮಂದೀ ಮುಂದೆ ನಿನ್ನ ಅವಮಾನ ಮಾಡ್ಬೇಕು ಅಂತ ನಾನು ಕಾದು ಕೂತಿರ್ತೇನೆ ಅನ್ನವ್ರ ಹಾಗೆ ಮಾತಾಡ್ತಿ ತೀರ್ತು. ಹೆಂಗಸರ ಬುದ್ಧಿ ಅಂದ್ರ ಎರಡೂ ಕಡೆ ಹರತ ಇರೂ ಚಾಕೂ, ಯಾವ ಕಡೆ ತಿರುಗಿದರೂ ಕೊಯ್ದೇ ಬಿಡ್ತದ. ಅದು ಹೋಗಲಿ ಬಿಡು. ಬಾಬೂರಾಯ ಬಂದಾಗ ಅಡಗೀ ಉಪಚಾರ ಮಾತ್ರ ವನ್ ನಂಬರ್ ಆಗ್ಬೇಕು ನೋಡು. ಈಗಿನ ದಿವಸದೊಳಗೆ ಒಬ್ಬ ಮುಖಂಡನ ಮರ್ಜಿ ಅದೆ ಅಂತ ಅಂದ್ರೆ ನಮ್ಮಂಥ ಸರಕಾರೀ ನೌಕರರೀಗೆ...

ಭಾಗೀ: ಆಗುವ್ಹಾಂಗ ಮಾಡ್ತೇನೆ.

* ವಿ. ಸೂ. ಇದನ್ನು ಅಭಿನಯಿಸಬಯಸುವವರು ಹತ್ತು ರೂಪಾಯಿ ಗೌರವಧನದೊಂದಿಗೆ ಜಿ. ಜಿ. ಹೆಗಡೆ C/o ಸಂಯುಕ್ತ ಕರ್ನಾಟಕ ಆಫೀಸ್, ಹುಬ್ಬಳ್ಳಿ ಇವರಿಗೆ ಬರೆದುಕೊಳ್ಳಬೇಕು.

ಮಾಧವ: ಆಗುವ್ಹಾಂಗೆ ಅಂದ್ರೆ? ವನ್ ನಂಬರ್ ಆಗ್ಲಿಕ್ಕೇ ಬೇಕು. ಒಂದು ಸೀ ಅಂದ್ರೆ ಮೋತೀಚೂರೇ ಇರಲಿ, ಮತ್ತೆ ಹಬ್ಬದ ಶಾಸ್ತ್ರಕ್ಕೆ ಪಾಯಸ, ಕಡಬು, ಒಂದು ತೊವೆ, ಹುಳಿ, ಸಾರು, ಕೋಸಂಬರಿ, ಚಟ್ನಿ, ಪಲ್ಯ, ಮೊದಲಾದ್ದೆಲ್ಲ-ಕಂಡರೆ ಬಾಯಿ ನೀರು ನೀರು ಬಿಡುವ್ಹಾಂಗ ಆಗ್ಬೇಕು, ಅನ್ನ ಮೂಸಿ ನೋಡಿ ತಾಟು ಬಿಟ್ಟು ಏಳೂ ಪ್ರಾಣೀಗೆ ಕೂಡ.



ಭಾಗೀ: ಹೂಂ. ಅಷ್ಟೆಲ್ಲ ಆಗ್ಬೇಕು ಅಂತಿದ್ರೆ ಒಬ್ಬ ಭಲೋ ಅಡಗಿ ಭಟ್ಟನ್ನ ಕರೆಸಿಬಿಡ್ರಿ. ಒವ್ದಾಡಿ ಸ್ತಕೋತ ಮಾಡೂದು ಮಾಡಿ ಆಮ್ಯಾಲೆ ನಿಮ್ಮಿಂದ ಅನ ಸಿಗೊಳ್ಳೂದು ನನ್ನಿಂದಾಗದು.

ಮಾಧವ: ನಾ ಹೇಳಿದ್ದು ನಿನ್ನಿಂದ ಯಾವಾಗ ಆಗ್ತದ, ಆದನ್ನಾರೂಹೇಳು. ಭಟ್ಟನ್ನ ಕರಸ ಬೇಕಂತ! ಫುಕಟ ಬರ್‍ತಾನೇನು ಅಂವಾ! ಇಷ್ಟೆಲ್ಲ ಆಗಬೇಕು ಅಂದ್ರೆ ಅಂವ ಹಬ್ಬದ ನೆವಾ ಹೇಳಿ ಒಂದು ಹತ್ತು ಹದಿನೈದಾದರೂ ಕೇಳೇ ಕೇಳ್ತಾನೆ. ಮೊದಲೇ ಹಬ್ಬದ ಖರ್ಚಿನಲ್ಲಿ ಮತ್ತೆ...

ಭಾಗೀ: ಅದಕೇ ನಾನನ್ನೂದು. ಮನೀ ಒಳಗೆ ಸ್ವಲ್ಪ ಗೈರಸೋಯಿ ಅದ, ಆಕೀ ಇದೇ ಹೊತ್ತೀಗೆ ರಜಾ ತಗೊಂಡುಬಿಟ್ವಾಳ, ಅಂತ ಹೇಳಿ ಆ ನಿಮ್ಮ ಮಿತ್ರರನ್ನು ಸುಸೂತ್ರ ಹೊಟೆಲ್ಲಿಗೆ ಕರಕೊಂಡು ಹೋಗಿಬಿಡ್ರಿ. ಹಬ್ಬದ ದಿನಾ ಖಾನಾವಳಿಯೊಳಗೂ ಏನಾದ್ರೂ ಮಾಡಿರ್‍ತಾರ. ಒಬ್ಬೊಬ್ಬರಿಗೆ ಎರಡೆರಡು ರೂಪಾಯಿ ಅಂತ ಹಿಡಿದ್ರೂ ಮೂವರಿಗೆ ಆರು ರೂಪಾಯಿ ಸಾಕಾಗ್ತದ, ಖರ್ಚೂ ಉಳಿತದ. ಮರ್ಜಿನೂ ಕಾಯ್ದ ಹಾಂಗ ಆಗ್ತ. ಮತ್ತೆ...

ಮಾಧವ: ಭಾಳ ಶಾಣ್ಯಾಕಿ ಇದ್ದಿ ಬಿಡು. ಬಾಬೂರಾಯಾ ಏನ ಗತಿ ಇಲ್ದೆ ನನ್ನ ಮನೀಗೆ ಬರ್‍ತಾನೇನು? ಸಾಕು ಸಾಕು, ಅನ್ನ ಬ್ಯಾಡ ನನಗೆ. ನಿನ್ನ ಮಾತ ಕೇಳಿ ಹೊಟ್ಟೆ ತುಂಬಿದ ಹಾಂಗಾತು. ವ್ಹಾ! ಹೆಂಡತಿ ಇದ್ದರೆ ನಿನ್ನಂಥಾಕಿ ಇರಬೇಕು ನೋಡು. ನೋಡು, ಒಂದು ಕಡೀ ಮಾತು ಹೇಳ್ತೇನೆ. ಬಾಬೂರಾಯನ ಊಟ ನನ್ನ ಮನೆಯಲ್ಲೇ ಆಗ್ಬೇಕು. ನಾ ಹೇಳಿದ ಹಾಂಗ ವನ್ ನಂಬರ್ ಅಡಗಿ ಆಗ್ಬೇಕು. ನೀನೇ ಎಲ್ಲಾ ಮಾಡ್ಬೇಕು. ಇಲ್ಲಾಂತಂದ್ರ...

ಭಾಗೀ: ಆತು. ಆದ ಹಾಂಗ ಮಾಡ್ತೇನಿ ಅಪ್ಪಿದ್ರೆ. ಆದ್ರೆ ಯಾವ ದಕ್ಕೂ ಏನೂ ಅನ್ನೂದಿಲ್ಲ, ಹೆಸರಿಡೂದಿಲ್ಲ, ಅಷ್ಟ ಖರ್ಚಾತು ಇಷ್ಟ ಖರ್ಚಾತು ನಿನ್ನಿಂದ ಅಂತ...

ಮಾಧವ: ಖರ್ಚಾಗಲಿ. ಬಾಬೂರಾಯನ ದಸಿಂದ ಬೇಕಾದಷ್ಟು ಖರ್ಚಾಗ್ಲಿ. ಆದರೆ ನೀನು ಇಲ್ಲದ ಕರಾರು ಗಿರಾರು ಹಾಕ್ಬೇಡ. ಭಲೋ ಆಗ್ಲಿಲ್ಲ ಅಂದ್ರೆ ನಾ ಅನ್ನವನೆ; ಹದಿನೈದು ವರ್ಷಾತು ನೀ ಅಡಗೀ ಮಾಡ್ಲಿಕ್ಕೆ ಹತ್ತಿ. ಸರಿಯಾಗಿ ಮಾಡ್ಲಿಕ್ಕೆ ಬರೂದಿಲ್ಲ ಅಂದ್ರೇನು? ನಿನ್ನ ಅಣ್ಣ-ಅತ್ತಿಗೆ ಬಂದಾಗ ಜಿಲೇಬಿ ಮಾಡ್ಲಿಕ್ಕೆ ಬರೂದಿಲ್ಲಾಂತ ನನ್ನ ಮುಂದೆ ಹೇಳ್ತಿದ್ದವಳು ಹ್ಯಾಂಗೆ ಮಾಡಿದಿ? ನನಗೆಲ್ಲಾ ಗೊತ್ತದ. ನಾನು, ನನ್ನ ಕಡೆಯವರು ಅಂದ್ರೆ ನಿನಗೆ-

ಭಾಗೀ: ಮಾತು ಎತ್ತೆತ್ತಾರ ಹೊರಳಿಸಬ್ಯಾಡ್ರಿ.

ಮಾಧವ: ಹಾಗಾದ್ರೆ ನಾ ಹೇಳಿದ್ದಕ್ಕೆ ಹೂಂ ಅನ್ನು. ಇಲ್ಲಾಂತಂದ್ರ-

ಭಾಗೀ: ನೀವೂ ಕರಾರು ಗಿರಾರು ಹಾಕಬೇಡ್ರಿ. ಕರಾರು ಹಾಕಿದೆ ನನ್ನಿಂದ ಆಗೂದಿಲ್ಲ.

ಮಾಧವ: ಆಗೂದಿಲ್ಲ, ಆಗೂದಿಲ್ಲ. ನೀನೇನಾದ್ರೂ ಆಗೂದಿಲ್ಲ ಅಂತ ಹಟ ಹಿಡದ್ರೆ ನಾನು ಹಬ್ಬದ ದಿನಾ ಉಪವಾಸ ಮಾಡ್ತೇನಿ

ಭಾಗೀ: ಇದೇ ಈಗ ಮಗಳು ಅಂದ ಮಾತು ನೆನಪೀಗೆ ಬಂತೇನು?

ಮಾಧವ: ಹುಡಗಾಟಕೀ ಅಂತ ತಿಳೀಬ್ಯಾಡ. ಖಂಡಿತ ಉಪವಾಸ ಮಾಡ್ತೇನೆ. ಅಂಥಿಂಥಾ ಉಪವಾಸ ಅಲ್ಲ. ಆಮರಣ ಉಪವಾಸ ಮಾಡ್ತೇನೆ. ನಾ ಹಟ ಹಿಡದ್ರೆ ಎಂಥಾಂವ ಅನ್ನೂದು ನಿನಗೆ ಗೊತ್ತದ. ನನ್ನ ಮಿತ್ರರ ಮುಂದೆ ಮರ್‍ಯಾದೆ ಹೋದ ಮೇಲೆ ಇದ್ದರೇನು ಬಿಟ್ಟರೇನು? ಮನೀ ಒಳಗೆ ಜಗಳ ಬ್ಯಾಡ ಅಂತ ಹಗಲೆಲ್ಲ ನೀ ಅಂದದ್ದಕ್ಕೆ ಹೂಂ ಅಂತೇನಿ ಅಂತ ನೀ ತಲೀಗೇರಿ ಕೂತುಬಿಟ್ಟೇದಿ. ಹೆಂಡತೀಗೆ ಹೆದರಿ ನಡಿಯೂ ಗಂಡ ನಾನು ಅಂತ ನಿನ್ನ ತಲೀ ಒಳಗೆ ಇರ್ಬೇಕು. ಇದ್ದರೆ ಅದನ್ನ ತೆಗದು ಹಾಕು. ಕೇಳಿಲ್ಲಿ. ಇದೇ ಕೊನೆ ಮಾತು, ಗಂಡ ಇನ್ನೊಂದು ನಾಕೊಪ್ಪತ್ತು ಬದಕಿರಲಿ ಅಂತ...

ಭಾಗೀ: ಛಿ! ಛಿ! ತಗೀರಿ. ಒಳಿತನ್ರಿ. ಊಟಕ್ಕೆ ಕೂತಾಗ ಇಂಥ ಅಭದ್ರ ಮಾತಾಡ್ತಾರ್ಮ. ಆಗ್ಲಿ, ನಾನೇ ಸೋತೆ. ನಿಮ್ಮ ಹಾಂಗೇ

ಆಗ್ಲಿ. ಆಗದೀ ನೀವು ಹೇಳಿದ ಹಾಂಗೇ ಮಾಡ್ತೇನೆ. ಅನ್ನಿಸಿಕೊಳ್ಳೊ ಪ್ರಸಂಗ ಬಂದ್ರೆ ಅನಿಸಿಕೊಳ್ತೇನೆ. ಗಂಡನ ಮಾತು ಕೇಳೂದು, ಅವನಿಂದ ಬೈಸಿಗೊಳ್ಳೂದೂ ಎಲ್ಲಾ ಹೆಂಡತಿ ಹಣೇಲಿ ಬರೆದದ್ದೇ. ಬರೀರಿ, ನಿಮ್ಮ ಬಾಬೂರಾಯ್ರಿಗೆ, ಸುಸ್ವಾಗತ ಅಂತ.

ಮಾಧವ : ಸರಿ. (ಎದ್ದು ಕೈತೊಳೆದುಕೊಂಡು ಅಂಗಿ ತೊಟ್ಟುಕೊಂಡು ಹೊರಡುವ ಸಿದ್ಧತೆಯಲ್ಲಿ) ಏನೇ, ಹಬ್ಬಕ್ಕೆ ಹೆಚ್ಚು ದಿನಾ ಉಳದಿಲ್ಲ. ಯಾವ ಸಾಮಾನು ಬೇಕೋ ಅದು ಅಪ್ಪು- ಅಥವಾ ನೀನೇಹೋಗಿ ಲೆಕ್ಕಕ್ಕೆ ಹಚ್ಚಿಸಿ ತಂದ್ಬಿಡು ತಿಳೀತ. (ಹೋಗುತ್ತ ಸ್ವಗತ) ಸ್ವಲ್ಪ ಸಡಿಲು ಬಿಟ್ಟರೆ ಹೆಂಡತಿ ಕೈಲಿ ಗಂಡ ಉಳಕೊಳ್ಳು ಹಾಂಗಿಲ್ಲ. ಉಪವಾಸ ಬಿದ್ದು ಸಾಯ್ತೇನೆ ಅಂದಕೂಡ್ಲೆ ಹೆದರಿ ಬಿಟ್ಟಳು. ನಮ್ಮಂಥವ್ರೀಗೆಲ್ಲಾ ಸಾಯು ಧೈರ್ಯ ಇದ್ದಿದ್ರೆ ಇಷ್ಟೊತ್ತಿಗೆ ಜಗತ್ತು ನಿರ್ಜನ ಆಗಿಹೋಗಿಬಿಡ್ತಿತ್ತು. ಹೀಗಿದ್ರೂ ನಮ್ಮಂಥವ್ರು ಒಳಗಿಂದೊಳಗೇ ಹೆಂಡತೀಗೆ ಅಂಜಿ ಯಾಕೆ ನಡಕೋತಾರೋ ತಿಳೀವಲ್ದು. ಏನೇ ಆಗ್ಲಿ, ನನಗೊಂದು ಅಸ್ತ್ರ ಸಿಕ್ಕಹಾಂಗ ಆತು. ಇನ್ನು ಏನಾದ್ರೂ ಇವಳು 'ಗುರ್' ಅಂದಳೊ ಉಪವಾಸಾಸ್ತ್ರ ತೆಗೆದು ಬಿಡ್ತೇನೆ. ವ್ಹಾ! (ಹೋಗುವನು)

ಭಾಗೀ: (ಗಂಡ ಹೋದಮೇಲೆ) ಉಪವಾಸ ಮಾಡ್ತಾರಂತೆ! ಆಗ್ಲಿ ನಾ ಸೋತೆ ಅಂತ ತಿಳಕೊಂಡು ಎದೆ ಸೆಟೆಸಿಕೊಂಡು ಹೋದ್ರಲ್ಲ. ಹೋಗ್ಲಿ. ಸಂಸಾರದೊಳಗೆ ಗಂಡಹೆಂಡರ ಜಗಳದಲ್ಲಿ ಯಾವಾಗಲೂ ಗಂಡನೇ ಸೋಲ್ತಾನೆ ಅನ್ನೂದೂ ಎಷ್ಟು ಖರೇನೊ ಅಷ್ಟೇ ಹೆಂಡ್ತಿ ಸೋತಾಗ್ಲೂ ಗಂಡನೇ ಸೋಲ್ತಾನೆ ಅನ್ನೂದೂ ಅಷ್ಟೇ ಖರೆ. ಬಾಬೂರಾಯ್ರು ಬರ್‍ಲಿ. ಮೇಜವಾನಿ ಆಗ್ಲಿ. ನಮ್ಮ ರಾಯ್ರಿಗೆ ಹೆಂಡ್ತಿ ಸೋತರೂ ತಾನೇ ಸೋಲ್ತೇನೆ ಅನ್ನೂದು ತಿಳೀಲಿ. ಅಂದ್ರೆ ಮುಂದೆ ಆಗೊಮ್ಮೆ ಈಗೊಮ್ಮೆ ಹಾರಾಡೂದೂ ನಿಂತು ಹೋದೀತು. ಹುಂ! ನನ್ನ ಸೋಲಸ್ತಾರಂತೆ! ಈ ಜೀತಣ ಸಾಯುವ ತನಕಾ ಇವರಿಗೆ ಮರೀದಾಂಗ ಮಾಡದಿದ್ರೆ ನಾ ಭಾಗೀ-ರಥೀನೇ ಅಲ್ಲ.

೨

(ಅದೇ ಮನೆ. ಬೆಳಿಗ್ಗೆ ೯ ಗಂಟೆ ಸಮಯ. ಮಾಧವರಾವ್ ಹೊರಗೆ ಹೋಗುವ ಸಿದ್ಧತೆಯಲ್ಲಿದ್ದಾರೆ.)

ಮಾಧವ: ಏನೇ, ನಾ ಅಪ್ಪು ಸ್ಟೇಶನ್ನಿಗೆ ಹೋಗಿಬರ್ತೇನೆ. ನಿನ್ನ ತಯಾರಿ ಎಲ್ಲಾ ನಡದದೊ ಇಲ್ಲೊ. ಗಾಡೀ ೧೦ಕ್ಕೆ ಬರ್ತದ. ಬಂದವರ ಸ್ನಾನಾಗೀನಾ ಅಂತ ೧೨ ಹೊಡೀತದೆ. ೧೨॥ ಅಥವಾ ಬಹಳ ಅಂದ್ರೆ ೧ಕ್ಕಾದರೂ ಊಟಾತು ಅಂದ್ರೆ ಅವರು ಒಂದರ್ಧ ತಾಸು ಅಡ್ಡಾಗಿ ನಾಲ್ಕು ಗಂಟೆಕ್ಕ ಹೊರಡಲಿಕ್ಕೆ ಅನುಕೂಲ ಆಗ್ತದ. ಈ ಸುಧಾ ಮತ್ತೆ ಕೃಷ್ಣ ಎಲ್ಲಿ ಹೋದ್ರು? ನಿನ್ನ ಸಹಾಯಕ್ಕೆ ಅವರನ್ನ,

ಭಾಗೀ: (ಒಳಗಿಂದ) ನೀವು ಹೋಗಿ ಬರ್‍ರಿ. ನನ್ನ ಕಾಳಜೀ ಮಾಡಬ್ಯಾಡ್ರಿ. ನನ್ನ ಸಹಾಯಕ್ಕೆ ಎಲ್ಲಾ ಅನುಕೂಲ ಮಾಡಿಕೊಂಡೇನಿ. ಈವತ್ತಿನ ಪ್ರೋಗ್ರಾಂ ಅಂದ್ರೆ ನೀವೂ ನಿಮ್ಮ ಮಿತ್ರರೂ ಎಂದೂ ಮರೆಯದ್ಹಾಂಗ ಮಾಡ್ತೇನೆ. ಕಾಳಜೀ ಮಾಡಬ್ಯಾಡ್ರಿ.

ಮಾಧವ: ಬೇಷ್! ಹೀಗೆ ಗಂಡನಿಗೆ ಅನುಕೂಲ ಆಗೂ ಹೆಂಡತಿ ಇರಬೇಕು ನೋಡು. ಬೇಷ್. ಹೋಗಿ ಬರಲ್ಯಾ.

ಭಾಗೀ: ಹೂಂ. (ಮಾಧವರಾವ್ ಹೋಗುವರು.)

(ಶೇಷಮ್ಮ ಬರುವರು. ಬರುತ್ತಲೇ "ಏನ್ನಡಸೀರಿ?" ಅನ್ನುತ್ತ ಒಳಗೇ ಹೋಗುವರು.)

ಭಾಗೀ: ಬಂದಿರಾ! ಬರ್‍ರಿ. ಒಬ್ರೇ ಬಂದ್ರಲ್ಲ?

ಶೇಷ: ಹೌದು. ಹನ್ನೆರಡಕ್ಕೆ ಅವ್ರು ಮಕ್ಕಳ್ನ ಕರಕೊಂಡು ಬಂದು ಬಿಡ್ತಾರ. ಅಡಗೀ ಗದ್ದಲದೊಳಗೆ ಮಕ್ಕಳ ಕಾಟ ಬ್ಯಾಡ ಅಂತ...

ಭಾಗೀ: ಬೇಷಾತು. ಯಾರದು? ("ನಾನು ಅವ್ವಾ" ಒಳಗೆ ಬಂದ ಸುಧಾ ಅನ್ನುವಳು.) ಸುಧಾ, ಕೃಷ್ಣ ಬರಲಿಲ್ಲೇನು? ನೀನು ನಿನ್ನ ಗೆಳತೀರಿಗೆಲ್ಲಾ ಮತ್ತೊಮ್ಮೆ ಹೇಳಿ ಬಂದಿಯೊ ಇಲ್ಲೊ?

ಸುಧಾ: ಹೇಳಿ ಬಂದೆ. ಊಟ ಆದ ಮ್ಯಾಲಿ ಸಿನೇಮಾ ಪ್ರೋಗ್ರಾಂ ಅಂತ ಹೇಳಿದ ಮ್ಯಾಲೆ ಒಬ್ಬರೂ ತಪ್ಪಸೂದಿಲ್ಲ ಬಿಡು. ಕೃಷ್ಣನೂ ತನ್ನ ಗೆಳೆಯರಿಗೆಲ್ಲಾ ಹೇಳಿಟ್ಟಾನ. ಅಂವ—

ಭಾಗೀ: ಹುಂ. ನೀ ಇನ್ನು ಎಲ್ಲಿಗೂ ಹೋಗಬ್ಯಾಡ. ಈಗ ೧೦-೧೦॥ ಗೆ ಇವರು ಎಲ್ಲಾರ್‍ನೂ ಕರಕೊಂಡು ಬರ್ತಾರ. ಅವರು ಬರೂದರೊಳಗೆ ಶಿರಾ, ಉಪ್ಪಿಟ್ಟು ತಯಾರ್‍ಮಾಡಿ ಇಡು. ಅವರಿಗಷ್ಟು ಚಹಾ ಕಾಫಿ ಮಾಡಿಕೊಡು. ಅಡಗೀ ಗದ್ದಲದೊಳಗೆ ನನ್ನಿಂದಾಗಲಿಕ್ಕಿಲ್ಲ. ಸ್ನಾನದ ವ್ಯವಸ್ಥಾನೂ ನೀನೇ ಮಾಡಿಬಿಡವ್ವ. ಊಟಕ್ಕೆ ಬಡಸಲಿಕ್ಕೂ......

ಸುಧಾ: ವ್ಹಾ! ಅವ್ವಾ, ಬಲು ಜಾಣೆ ನೋಡು ನೀನು. "ಭಾಳ ದಿವಸದಿಂದ ಹೇಳ್ತಿದ್ರಿ, ಈವತ್ತು ಕರದಬಿಡ್ರಿ ನಿಮಗೆ ಬೇಕಾದವ

ರನ್ನ ಊಟಕ್ಕೆ, ಮತ್ತೆ ಮಧ್ಯಾಹ್ನ ಸಿನೇಮಾಕ್ಕೂ ಹೋಗ್ರಿ, ಎಲ್ಲರ ಟಿಕೇಟಿಂದೂ ರೊಕ್ಕಾ ಕೊಡ್ತೇನಿ" ಅಂದಿ. ಅವ್ನ ಬಹಳ ಉದಾರ ಆಗ್ಯಾಳ ಅಂತ ತಿಳಕೊಂಡಿದ್ದೆ. ಈಗ ಗೊತ್ತಾತು, ಈವತ್ತು ಇಷ್ಟು ಕೆಲಸ ಮಾಡ್ಸಿ ಕೂಲಿಕೊಟ್ಟಾಂಗ...

ಭಾಗೀ: ನೋಡಿದಿರಾ ಶೇಷಕ್ಕಾ, ಈಗಿನ ಕಾಲದ ಹುಡುಗರನ್ನ!

ಸುಧಾ: ಸಿಟ್ಟಿಗೇಳಬೇಡವ್ವಾ, ಸುಮ್ಮನೆ ಚ್ಯಾಷ್ಟಿಮಾಡಿದೆ.

ಭಾಗೀ: ಆತು. ಆತು. ನೀ ಇನ್ನ ಶಿರಾ ಉಪ್ಪಿಟ್ಟಿನ ತಯಾರೀಗೆ ತೊಡಗು. ಶೇಷಕ್ಕಾ, ನೀವು ಒಂದಿಷ್ಟು ಕಾಯಿ ರುಬ್ಬಿಕೊಡ್ರಿ.

೩

(೧೧ ಹೊಡೆದಿದೆ. ಮಾಧವರಾಯರ ಮನೆ ಮುಂದೆ ಟ್ಯಾಕ್ಸಿ ಬಂದು ನಿಲ್ಲುತ್ತದೆ. ಬರ್ರಿ, ಬರ್ರಿ ಅನ್ನುತ್ತ ಮಾಧವರಾವ ಬರುವನು. ಅವನ ಹಿಂದೆ ನಾಲ್ಕು ಜನ ಗಂಡಸರು, ಇಬ್ಬರು ಹೆಂಗಸರು ಬರುವರು.)

ಮಾಧವ: ಸುಧಾ, ಇವರಿಗೆಲ್ಲಾ ಬಚ್ಚಲ ಮನೆ ತೋರಿಸವ್ವಾ. ಕೈಕಾಲು ತೊಳಕೊಳ್ಳಲಿ. ಮತ್ತೆ ಬಾಬೂ, ನಿಮಗೇನು ಚಾನೋ ಕಾಫೀನೋ . . .

ಸುಧಾ: ಅವರು ಕಾಲುತೊಳಕೊಳಲಿ ಅಪ್ಪಾ, ಎಲ್ಲಾ ತಯಾರದ. (ಅತಿಥಿಗಳಿಗೆ) ಬರ್ರಿ.

(ಅವರೆಲ್ಲ ಕಾಲುತೊಳೆದುಕೊಂಡು ಬರುವಷ್ಟರಲ್ಲಿ ಅವಳೂ ಮತ್ತೆ ಅಷ್ಟರಲ್ಲಿ ಮನೆಗೆ ಬಂದಿದ್ದ ಕೃಷ್ಣ ಶಿರಾ, ಉಪ್ಪಿಟ್ಟು ತಂದಿಡುವರು.)

ಬಾಬೂ: ವ್ಹಾ! ಮಾಧವಾ, ಏನ ವ್ಯವಸ್ಥಾನಪಾ ನಿಂದು. ದಿನಕ್ಕೆ ೧೦ ರೂಪಾಯಿ ಚಾರ್ಜ ಮಾಡೂ ಡಿಲಕ್ಸ್ ಹೊಟೆಲ್ಲನೊಳಗೂ ಇಷ್ಟು ಪ್ರಾಂಪ್ಟ್ ಸರ್ವೀಸ್ ಇರೂದಿಲ್ಲ. ಎಲಾ! ಇದೇನು? ಶಿರಾ, ಉಪ್ಪಿಟ್ಟು ಒಬ್ಬೊಬ್ಬರಿಗೆ ನಾಲ್ಕು ನಾಲ್ಕು ಪ್ಲೇಟಿನಷ್ಟು. ಇಂದೇನು? ಊಟ ಅದನೊ ಇಲ್ಲೊ?

ಮಾಧವ: ಹೊಗಳೂದು ಬಿಡಪ್ಪ. ನಿನ್ನ ಸ್ವಭಾವ ಇನ್ನೂ ಬಿಟ್ಟಿಲ್ಲ ಅಂತ ಕಾಣಸ್ತದ. ದಣದು ಬಂದೀರಿ. ಒಂದಿಷ್ಟು ಹೊಟ್ಟೇಗೆ ಹಾಕಿಕೊಂಡು ಆ ಮ್ಯಾಲೆ ಸ್ನಾನಾಗೀನಾ ಮಾಡ್ರಿ. ಊಟಾ ಮಾಡಿ ಒಂದರ್ಧ ತಾಸು ಮಲಕ್ಕೊಳ್ರಿ. ಆ ಮ್ಯಾಲೆ ...ಯಾರು? ಓಹೋ ಹೋ! ಶ್ಯಾಮು ಭಟ್ರೇನು? ಬರ್ರಿ, ಬರ್ರಿ. ಏನಪರೂಪ ಬಂದ್ರಿ? ಹುಡುಗರನ್ನೆಲ್ಲಾ ಕರಕೊಂಡೇ ಬಂದೀರಿ? ಸುಧಾ, ಇವರಿಗೂ ಒಂದಿಷ್ಟು-

ಶ್ಯಾಮು: ಅಪರೂಪ ಏನು? ಈವತ್ತು ಹಬ್ಬ. ಇಬ್ಬರೂ ದಂಪತಿಗಳು, ಮಕ್ಕಳ ಸಮೇತ ಊಟಕ್ಕೆ ಬರ್ಲಿ ಹೇಳಿಬಿಡು ಅಂತ ನಿಮ್ಮ ಮನಿಯವರಿಗೆ ಹೇಳಿದ್ರಂತೆ. ನಾ ಬರ್ಲಿಕ್ಕೆ ಏನು ತಡಾ ಆಗ್ಲಿಲ್ಲವಲ್ಲ. ಮನೇಗೆ ಯಾರೊ ಅತಿಥಿಗಳು ಬಂದ್ಹಾಂಗ ಅದೆ. ಆಗ್ಲಿ. ಎಲ್ಲಾರ್ದೂ ಸ್ನಾನ ಆಗೇದೊ ಇಲ್ಲೊ! ಇಲ್ಲಾಂತಂದ್ರ ಮಾಡಿಕೊಳ್ಳಲಿ. ಅಷ್ಟರೊಳಗೆ ನಾನು ದೇವರ ತಲೀಮ್ಯಾಲ ಒಂದಿಷ್ಟು ಹೂವು ಏರ್ಸಿ ಪೂಜಾ ಮುಗಿಸಿ ಬಿಡ್ತೇನಿ. ಹಬ್ಬದ ದಿವಸ. ಶಾಸ್ತ್ರೋಕ್ತ ಪೂಜಾ ನನ್ನ ಕೈಯಿಂದ ಆಗಲಿ. (ತನ್ನ ಮಕ್ಕಳಿಗೆ) ಏ, ಸೂಫಕಾರ ತಿನ್ರಿ. ಆ ಮ್ಯಾಲೆ ಕೈ ತೊಳಕೊಂಡು ದೇವರ ಮೂರ್ತಿ ಕೂತ ಹಾಂಗೆ ಕೂತಕೊಳ್ರಿ. ಕೃಷ್ಣಾ, ನನಗೆ ಚಾ ಬ್ಯಾಡ. ಊಟದ ಹೊತ್ತಿಗೆ ಕುಡದ್ರೆ ಅನ್ನಾನೇ ಸೇರೂದಿಲ್ಲ.

(ಅಷ್ಟರಲ್ಲಿ ನಾಲ್ಕು ಹುಡುಗರು—ಕೃಷ್ಣನ ಗೆಳೆಯರು, ಐದು ಹುಡುಗಿಯರು—ಸುಧಾಳ ಗೆಳತಿಯರು ಬರುವರು. ಕೃಷ್ಣ ಮತ್ತು ಸುಧಾ ಬರ್ರಿ, ಬರ್ರಿ ಅನ್ನುವರು.)

ಸುಧಾ: ಬರ್ರಿ. ಊಟಕ್ಕೆ ಇನ್ನೂ ಒಂದಿಷ್ಟು ಹೊತ್ತ ಅದ. ಈ ಕಪ್ಪು-ಬಶಿ ಅಷ್ಟು ತೊಳಕೊಂಡು ಬಂದು ನಿಮಗೆಲ್ಲಾ ಒಂದಿಷ್ಟು ಕಾಫಿಗೀಫೀ ಕೊಡ್ತೇನೆ. ಅಪ್ಪಾ, ನೀರು ಕಾದಾವ. ಕೃಷ್ಣ, ಟಾವೆಲ್ಲು-ಸೋಪು ತಂದ ಕೊಡತಾನ. ಅವರಿಗೆಲ್ಲಾ ಸ್ನಾನಾ ಮಾಡಿಕೊಳ್ಳಕ್ಕೆ ಹೇಳಪ್ಪಾ.

ಮಾಧವ: (ಬೇಸ್ತು ಬಿದ್ದವನಂತೆ) ಹೂಂ.

ಬಾಬು: ವ್ಹಾ! ವ್ಹಾ! ವ್ಹಾ! ಭಾರೀ ಮನಶಾನಪ್ಪಾ ನೀ ಮಾಧವಾ. ಅಲ್ಲಾ, ಏನು ದೊಡ್ಡ ಸಮಾರಂಭಾನೇ ಹೂಡೀದಿಯಲ್ಲಾ (ತನ್ನ ಸಂಗಡ ಬಂದಿರುವವರಿಗೆ) ಶಂಕರರಾವ್, ಈ ಮಾಧವ ಮತ್ತು ನಾನು ಲಂಗೋಟಿ ಗೆಳೆಯರು. ಇಂವ ಯಾವಾಗಲೂ ಹೀಗೆಯೇ. ಬಹಳ ಉತ್ಸಾಹದ ಪ್ರಾಣಿ. ಯಾವದನ್ನು ಮಾಡಿದರೂ ಡೌಲಾಗಿ ಛಂದಾಗಿ ಮಾಡತಾನ. ನೋಡಿದ್ರಿಲ್ಲೊ, ಬ್ಯಾರೆಯವರಾಗಿದ್ರೆ "ಹಬ್ಬದ ದಿವಸ ಇವರೆಲ್ಲಿ ವಕ್ರಿಸಿದರಪ್ಪಾ" ಅಂತ ಅಂದಕೋತ ಏನೇನಾರ ನೆವ ಹೇಳಿ ಒಂದನ್ನ ಸಾರು ಪಾಯಸದೊಳಗೆ ಮುಗಿಸಿ ನಮ್ಮನ್ನ ದಾಟ್ಸಿ ಹಾಕತಿದ್ದರು. ಆದರೆ ನೋಡ್ರಿ, ಇಂವಾ, ಮನೇಗೆ ಸಾಕ್ಷಾತ್ ಪರಮೇಶ್ವರನೇ ಬಂದಾನೇನೋ ಅನ್ನೂಹಾಂಗ ವ್ಯವಸ್ಥಾ ಮಾಡ್ಯಾನೆ. ಏಳ್ರಿನ್ನು. ನೀವು ಮೊದಲು ಸ್ನಾನಾ ಮಾಡ್ತೀರೊ ಅಥವಾ—

ಶಂಕರ: ನಾನೇ ಮಾಡ್ತೇನೆ.

ಬಾಬು: ಆಗ್ಲಿ. ನಿಮ್ಮದಾಗೂದರೊಳಗೆ ನಾನೂ ಒಂದು ಸಿಗರೇಟು ಎಳೆದು— ಎಲಾ! ಪಾಕೀಟು ಮುಗದು ಹೋಗ್ಯದಂತ ಕಾಣಸ್ತದ. ಮಾಧೂ, ನಿನ್ನ ಮಗನೀಗಷ್ಟು ಹೇಳಿ—



ಮಾಧವ: ಕೃಷ್ಣಾ; ಹೋಗಿ ಒಂದು ಸಿಗರೇಟು ಪ್ಯಾಕ್...

ಕೃಷ್ಣ: ಬರ್ಕಲೇ ಪಾಕೀಟು ತಂದಿಟ್ಟೇನೆ ಅಪ್ಪಾ. ಎಲೆ ಅಡಿಕೆ ಶಾಟಿನೊಳಗೆ ಅದೆ. ತಂದುಕೊಡಲೇನು?

ಮಾಧವ: ಅಂ!

ಕೃಷ್ಣ: ಅವ್ವ ಹೇಳಿದ್ಳು, ತರೂದು ತಂದಿಡು. ಯಾರೂ ಸೇದಲಿಲ್ಲ ಅಂತಂದ್ರೆ ತಿರುಗಿ ಕೊಡ್ಲಿಕ್ಕೆ ಬಂದೀತು. ಸೇದತಾರೆ ಅಂತ ಅಂದ್ರೆ ಆಯತಾ ಹೊತ್ತೀಗೆ...

ಬಾಬು: ವ್ಹಾ! ವ್ಹಾ! ವ್ಹಾ! ಸಂಸಾರದೊಳಗೆ ಹೆಂಡತೀ ಅಂದ್ರೆ ರಾಜಗೆ ಮಂತ್ರಿ ಇದ್ಹಾಂಗೆ ಅಂತ ಅನ್ನೂದು ಎಷ್ಟು ಖರೇನೋಡು ಮಾಧು. ನಿನ್ನ ಲಕ್ಷಕ್ಕೆ ಬಾರದ್ದು ನಿನ್ನ ಮನೆಯವರ ಲಕ್ಷ್ಯಕ್ಕೆ ಬಂತು. ಬೇಷ್! ನಿನ್ನ ಮನೆಯವರು ಇಷ್ಟು ಜಾಣರು ಅಂತಲೇ ನಿನ್ನ ಈ ವ್ಯವಸ್ಥಾ, ಈ–ಎಲ್ಲಾ ನಡದಿರಬೇಕು. (ಸಿಗರೇಟು ಹಚ್ಚಿ) ನೀನೂ ತಗೊ. ಯಾಕೆ? ಸೇದೂದಿಲ್ಲೇನು? ಅಲ್ಲೊ, ನೋಡು, ದೇಶಭಕ್ತ ಆದ್ರೂ ನಾ ಸಿಗರೇಟು ಸೇದ್ತೇನೆ. ಯಾಕೆ? ಹಗಲೆಲ್ಲ ನನ್ನ ಕೆಲಸ, ಮಂದೀ ಕೆಲಸ, ದೇಶದ ಕೆಲಸ ಅಂತ ಸೋತು ಹೋಗ್ತಿರ್ತೇವೆ. ಒಂದಿಷ್ಟು ಆರಾಮಾಗ್ಲಿ ಅಂತ ಸಿಗರೇಟು ಜಾ ಬೇಕಾಗ್ತದ, ಬಹುಶಃ ನಿನ್ನ ಮಂತ್ರಿಗಳ ಅಪ್ಪಣೆ ಇಲ್ಲೇನೊ ಇವಕ್ಕೆ. ಆತೇನು ಸ್ನಾನ ಶಂಕರರಾವ್, ಇನ್ನು ಉಳಿದವ್ರೂ ಏಳ್ರಿ. ಅಗೂ ಲಗೂ ಸ್ನಾನದ ಶಾಸ್ತ್ರ ಮುಗಿಸಿಬಿಡೋಣ.

ಶ್ಯಾಮು: (ಮಾಧವರಾಯರಿಗೆ) ರಾಯ್ರೆ, ಪೂಜಾಕ್ಕೆ ಕೂಡ್ರತಿರೇನು? ಅಥವಾ ನಾನೇ...

ಮಾಧವ: ಬರ್ತೇನೆ, ಬರ್ತೇನೆ. ಇವರದೆಲ್ಲ ಸ್ನಾನ ಆಗೂತನಕಾ ನನಗೆ ಕೆಲಸಾದ್ರೂ ಮತ್ತೇನದ? ನಡೀರಿ. (ಸ್ವಗತ) ಇದೆಲ್ಲ ಏನು ಅಂತ ತಿಳೀದಹಾಂಗ ಆತಲ್ಲ? ಆಗ್ಲಿ. ಎಲ್ಲಾರೂ ಹೋದಮ್ಯಾಲೆ ನೋಡೋಣಂತ. ಈಗ ಬಾಯ್ಬಿಟ್ರೆ ನಂದೇ ಬಣ್ಣಗೇಡು ಆದೀತು.

(ಪೂಜೆಯ ಮಂತ್ರ, ಗಂಟೆ ಸಪ್ಪಳ ಇತ್ಯಾದಿ ಕೇಳಿಸುವುದು....)

೪

(ಮಧ್ಯಾಹ್ನ ೩॥ ಗಂಟೆಯ ಸಮಯ. ಅದೇ ಮನೆ. ಎಲ್ಲ ಶಾಂತವಿದೆ.)

ಭಾಗೀ: ಕೃಷ್ಣಾ, ಅವರನ್ನ ಎಬ್ಬಿಸಪಾ. ನಾಲ್ಕು ಗಂಟೇಗೆ ಸ್ಟೇಶನ್ನೀಗೆ ಹೋಗ್ಬೇಕು ಅಂತಿದ್ರು. ಎಲ್ಲಾರಿಗೂ ಮುಖಾ ತೊಳಕೊಳ್ಳಲಿಕ್ಕೆ ಒಂದಿಷ್ಟು ನೀರು ತಂದ್ಕೊಡು.

ಕೃಷ್ಣ: ಹೂ. ಅಪ್ಪಾ, ಅಪ್ಪಾ,

ಮಾಧವ: ನನಗೆ ನಿದ್ದಿ ಬಂದಿಲ್ಲ ಎಲ್ಲಾ ಕೇಳಸ್ತು. ಬಾಬೂರಾವ್, ಬಾಬೂರಾವ್ ೩॥ ಆತು.

ಬಾಬು: (ಎದ್ದು) ಹಾಂ! ಹೌದೇನು? ಶಂಕರರಾವ್, ವಾಮನರಾವ್, ಲಕ್ಷ್ಮಿಬಾಯಿ, ಎಲ್ಲಾ ಏಳ್ರಿ. ೩॥ ಆಗಿಬಿಟ್ಟದ. ಛೆ! ಛೆ! ಮಾಧೂ, ಏನ ವ್ಯವಸ್ಥಾನಪಾ ನಿಂದು. ಕಣ್ತೆರೆಯೊದರೊಳಗೆ ಮುಖ ತೊಳಕೊಳ್ಳಿಕ್ಕೆ ನೀರು ಹಾಜರ್. ಆಗ್ಲೇ ಹೇಳ್ದೆ, ಡಿಲಕ್ಸ್ ಹೊಟೆಲ್ಲಿನೊಳಗೂ ಇಂಥ ವ್ಯವಸ್ಥಾ ಇರೂದಿಲ್ಲ ಅಂತ. ಆಗದೀ, ಅಗದೀ ನೂರಕ್ಕೆ ನೂರು ನಯೆಪೈಸೆ ಖರೇ ಅದ ನನ್ನ ಮಾತು; (ಎಲ್ಲರೂ ಮುಖ ತೊಳೆದುಕೊಳ್ಳುವಷ್ಟರಲ್ಲಿ ಚಹ ಬರುವುದು.) ಛೆ! ಛೆ! ಛೆ! ವ್ಹಾ! ವ್ಹಾ! ಚಹಾ! ಮುಗಿದೇ ಹೋತಪಾ. ಮಾಧೂ, ನಿನ್ನ ಉಪಚಾರ, ವ್ಯವಸ್ಥಾ ಸಾಯೂತನಕಾ ಮರೀದ್ಹಾಂಗ ಆತಪ, ನೋಡಿದ್ರೇನು ಶಂಕರರಾವ್.

ಶಂಕ: ನೋಡಿದ್ದೇನು ಬಂತು? ಅನುಭವವಾನೇ ಆತಲ್ಲ! ಈವತ್ತಿನ ಪ್ರಯಾಣಾನೇ ಮುಂದೆ ಹಾಕೋಣೇನು ಅಂತ ಅನಿಸ್ತದ. ಆದರೆ ತಿಕೀಟು ತಗೊಂಡು ಬಿಟ್ಟೇವಿ. ಉಪಾಯ ಇಲ್ಲ. ಟ್ರೇನಿನಾಗ ಯಾರ ಏನೇ ಅನ್ನಿ, ನಾನಂತೂ ಮಂದೀ ಕೂಡ ಗುದ್ದಾಡಿಯಾದ್ರೂ ಮಲಗಿಕೊಳ್ಳುವನೇ. ಛೆ! ಛೆ! ಛೆ! ಇಂಥಾ ಊಟ ಬಿದ್ದಮ್ಯಾಲೆ ನಿದ್ದೀ ಸಂಪಾಗಿ ಆಗದಿದ್ರೆ ಹ್ಯಾಂಗ ನಡದೀತು?

ವಾಮನ: ಹೌದ್ರಪಾ. ಅಲ್ಲಾ, ಊಟ ಅಂದ್ರೆ ಏಳೇಳು ಜನ್ಮದ ತನಕಾ ನೆನಸಿಕೊಳ್ಳಬೇಕು. ಏನು ಸಾಮಾನು! ಎಷ್ಟು ಥರದ ಅಡಗಿ!! ಎಂಥಾ ರುಚಿ!!! ಮೋತೀಚೂರು, ಶ್ರೀಖಂಡ, ಪುರಿ, ಪಲ್ಯ, ಬೊಂಡಾ, ಕೋಸಂಬ್ರಿ, ಸಾರು, ಪಲ್ಯ, ಚಟ್ನಿ, ಒಂದೇ ಎರಡೆ!!! ಎಲೀ ತುಂಬಿ ಹೋಗಿತ್ತು. ಖರೇ ಅಂತಂದ್ರ, ಮಾಧವರಾವ ಏನ ತಿಳಕೊಂಡ್ರೊ, ನಾ ಅಂತೂ ಎಂದೂ ಕಾಣದವನ್ಹಾಂಗೆ ತಿಂದಬಿಟ್ಟೆ ನೋಡ್ರಿ.

ಮಾಧವ: ಛೆ! ಛೆ! ಸುಳ್ಳೇ....

ಬಾಬು: ಸುಳ್ಳೇ ಅಲ್ಲೊ. ನಮ್ಮ ಪ್ರೇಜ್ ಖರೇ ಅದ. ನನಗೆ ನಿನ್ನಲ್ಲಿ ಬರೂ ಬುದ್ಧಿ ಪರಮಾತ್ಮನೇ ಕೊಟ್ಟು ಅನುಗ್ರಹ ಮಾಡಿದಾ ಅನ್ನಬೇಕು. ಇಲ್ಲಾಂತಂದ್ರ—ನಿನಗೆ ಗೊತ್ತದ, ನಾ ಒಬ್ಬ ಮುಖಂಡ ಅನ್ನೂದು. ನನಗೆ ಒಂದಿಷ್ಟು ಉಪಚಾರಾ ಮಾಡಿದ ಹಾಗೆ ಮಾಡಿ ಕೆಲಸಮಾಡ್ಸಿಕೊಳ್ಳಬೇಕನ್ನವ್ರು ರಗಡ ಮಂದಿ ಇದ್ದಾರ ಈ ಊರೊಳಗೂ. ಆದರೆ ಮಾಧೂ, ನೀ ಮೊದಲಿಂದಲೂ ನಿಃಸ್ಪೃಹ ಮನಶಾ, ಗೆಳೆಯಾ ಅನ್ನೂ ಪ್ರೀತಿ ಇಂದ್ಲೇ ಊಟ–ಉಪಚಾರಾ ಮಾಡಸ್ತೀಯೆ ಹೊರ್ತು ಸ್ವಾರ್ಥ ಸಾಧಿಸಿಕೊಳ್ಳಲಿಕ್ಕೆ ಅಲ್ಲ ಅಂತ ನನಗೆ ಗೊತ್ತು. (ಟ್ಯಾಕ್ಸಿ ಬಂದ ಸದ್ದು ಕೇಳಿಸುವುದು.) ವ್ಹಾ! ಬಂತಲ್ಲ ಟ್ಯಾಕ್ಸಿ. ನಾಲ್ಕು ಗಂಟೆ. ಈ ಟ್ಯಾಕ್ಸಿಯವಗ ಟಾಯಿಮ್ಮಿನ ಮಹತ್ವ ಗೊತ್ತಿದ್ಹಾಂಗ ಅದ. ಏಳ್ರಪಾ ಇನ್ನು ಎಲ್ಲಾರು. ಬರ್ತೇವೆ ಮಾಧು. ಭಾಳ ಥ್ಯಾಂಕ್ಸ್. ವೈನೀ, ಅಳಿಯಾಗೂ ಮಾಡದಂಥಾ ಉಪಚಾರಾ ಮಾಡಿದ್ರಿ. ನಮಸ್ಕಾರ. ಮಾಧೂ, ಯಾವಾಗಲಾದರೂ ಒಮ್ಮೆ ನನ್ನ ಮನೀಗೆ ಬಂದು ಹೋಗಪಾ. ನಡೀರಿನ್ನು.

(ಎಲ್ಲಾರೂ ಮಾಧವರಾವ ಥ್ಯಾಂಕ್ಸ್ ಗುಡಬಾಯ್ ಅನ್ನುತ್ತ ಹೋಗುವರು. ಅವರು ಹೋದಮೇಲೆ ಮಾಧವರಾವ ಹುಶ್ ಅನ್ನುತ್ತ ಕೂಡ್ರುವನು.)

ಕೃಷ್ಣ: } ಅವ್ವಾ, ಹೋಗಿ ಬರ್ತೇವೆ. ನಮಗೇನೂ ರಾತ್ರಿ ಊಟಾ
ಸುಧಾ: } ಮಾಡು ಇಚ್ಛಾ ಇಲ್ಲ.

ಮಾಧವಾ: ಎಲ್ಲಿಗೆ ಹೊಂಟರೊ?

ಸುಧಾ: ಸಿನೇಮಾಕ್ಕೆ. ನಾವೆಲ್ಲಾ...

ಮಾಧವಾ: ನಾವೆಲ್ಲಾ ಅಂದ್ರೆ?

ಸುಧಾ: ಅಂದ್ರೆ ಇಂದು ಊಟಕ್ಕೆ ಬಂದಿದ್ರಲ್ಲ, ನನ್ನ ಗೆಳತಿಯರು, ಕೃಷ್ಣನ ಗೆಳೆಯರು, ನಾವೆಲ್ಲಾ ಸಿನೇಮಾಕ್ಕೆ ಹೋಗ್ತೇವೆ. ಅವ್ವ ಎಲ್ಲಾರ ತಿಕೀಟೀಗೂ ರೊಕ್ಕ ಕೊಟ್ಟಾಳ. ಬರ್ತೇವಪಾ. (ಹೋಗುವರು.)

ಮಾಧವಾ: ಅಂ!

(ಒಳಗಿಂದ ಶೇಷಮ್ಮನ ಧ್ವನಿ ಕೇಳಿಸುವುದು.)

ಶೇಷ : ಬರ್ತೇನಿ ಭಾಗೀರಥಿಬಾಯಿ. ಇಂದು ಬಾಯಿ ಧನ್ಯ ಆಗಿ ಹೋತು ನಿಮ್ಮ ಪುಣ್ಯಾದಿಂದ. ಛೆ! ಛೆ! ಬ್ಯಾಡ್ರಿ.

ಭಾಗೀ : ಇರ್ಲಿ ತಗೋರಿ. ಬೆಳಗಿಂದ ಇಲ್ಲಿ ಹೂಂ ಅಂತ ದುಡದೀರಿ. ಇನ್ನು ಮನೀಗೆಹೋಗಿ ಏನು ಕೆಲಸ ಮಾಡ್ತೀರಿ? ನಿಮ್ಮ ಮಕ್ಕಳು ಸಣ್ಣವು. ಅವಕೇನು? ಮಕ್ಕಳ ಜಾತಿ. ರಾತ್ರಿ ಹಸಿವಾತು ಅಂತ ಅಂದ್ರೆ ಮತ್ತೇನು ಮಾಡ್ಕೋತ ಕೂಡತೀರಿ? ಮತ್ತೆ ಕೃಷ್ಣಾ-ಸುಧಾ ರಾತ್ರಿ ಊಟ ಬ್ಯಾಡ ಅಂದಾರ. ನನಗೂ ಬ್ಯಾಡ. ಇಷ್ಟೆಲ್ಲಾ ನಾಳೆ ಬೆಳತನಕ ಇಟ್ಟರೆ ಹಾಳಾಗಿ ಹೋದೀತು. ಒಂದಿಷ್ಟು ಒಯ್ಯಿರಿ.

ಶೇಷ : ನೀವು ಭಾಳ ದೊಡ್ಡ ಮನಸಿನವರು ಭಾಗೀರಥಿಬಾಯಿ. ದೇವರು ನಿಮಗೆ ಯಾವಾಗ್ಲೂ ಹೀಗೇ ನಡಸಲಿ. ಬರ್ತೇನಿ. ಯಾವಾಗಾದ್ರು ಕೆಲಸ ಬಿದ್ರೆ ಹೇಳಿಕಳಿಸ್ರಿ ನಾ ಮನೆಯವಳೇ ಅಂತ ತಿಳ್ಕೊಂಡು ಬರ್ತೇನಿ. (ಹೋಗುವಳು)

(ಮಾಧವರಾಯ ತಲೆಯ ಮೇಲೆ ಕೈಹೊತ್ತು ಕೂಡ್ರುವನು, ತುಸುತಡದು)

ಮಾಧವ : (ತುಸು ಸಿಟ್ಟಿನ ಸ್ವರದಲ್ಲಿ) ಏನೇ ?

ಭಾಗೀ : (ಒಳಗಿನಿಂದಲೇ) ಏನು ? ಒಂದಿಷ್ಟು ಅಡ್ಡಾಗ್ತೀರೇನು ? ಅಥವಾ ಬೇಕಾದ್ರೆ ನೀವೂ ಸಿನೇಮಾಕ್ಕೆ ಹೋಗಿಬರ್ರಿ. ನನಗಂತೂ ಸಾಕಾಗಿ ಹೋಗ್ಯೇದ. ಒಂದಿಷ್ಟು ಅಡ್ಡಾಗ್ತೇನೆ.

ಮಾಧವ : ನಾ ಸಿನೇಮಾಕ್ಕೆ ಹೋಗಲ್ಯಾ ? ಅಂದ್ರೆ ನಿನಗೆ ಮನೇಲಿ ಉಳಿದದ್ದನ್ನೂ ಮಂದಿಗೆ ದಾನ ಮಾಡ್ಲಿಕ್ಕೆ ಛಲೋ ಆದೀತು ಹೌದೊ ಅಲ್ಲೊ.

ಭಾಗೀ : (ಹೊರಗೆ ಬಂದು) ಯಾಕೆ? ಸಿಟ್ಟಿನಿಂದ ಮುಖ ಕೆಂಪಾಗ್ಯದೊ ಅಥವಾ...

ಮಾಧವ : ನೀ ಹೆಚ್ಚು ಮಾತಾಡಬ್ಯಾಡ. ನನ್ನ ...

ಭಾಗೀ : ನಿಮ್ದು ಒಳ್ಳೇ ಮಾತು. ಎಲ್ಲಾ ವನ್ ನಂಬರ್ ಆಗ್ಬೇಕು ಅಂತ ಅಂದ್ರಿ, ಆಗಿದ್ದಿಲ್ಲೇನು? ನಿಮ್ಮ ಗೆಳೆಯರೆಲ್ಲಾ ವ್ಹಾ! ವ್ಹಾ! ಅಂತ ಬಂಡಿಗಟ್ಲಲೆ ಥ್ಯಾಂಕ್ಸ್ ಕೊಟ್ಟು ಹೋದ್ರು. ಪುಣ್ಯಕ್ಕೆ ಏನೊ ದೇವರ ಪ್ರೇರಣಾ ಆಗಿ ನಾ ಒಂದಿಷ್ಟು ಜಾಸ್ತಿನೇ ಮಾಡಿರದಿದ್ದರೆ ಮರ್‍ಯಾದೆ ಹೋಗ್ತಿತ್ತು, ತಿಳೀತೇನು? ಮೂರಂದಿದ್ರಿ ಆರು ಜನ ಬಂದ್ರು. ಲೆಕ್ಕಕ್ಕೆ ಆರು ಜನಾ ಅನ್ರೂ ಅವರು ತಿಂದದ್ದು ೧೦–೧೨ ಮಂದೀಗಾದ್ರೂ ಸಾಕಾದೀತು. ನಾ ನಮ್ಮ ಶ್ಯಾಮಭಟ್ಟರ ಮುಂದೆ ಊಟದಲ್ಲಿ ಯಾರೂ ಇಲ್ಲ ಅಂತಮಾಡಿದ್ದೆ. ನಿಮ್ಮ ಬಾಬೂರಾಯ್ರು ನಾಲ್ಕು ಶಾಮಭಟ್ಟರಿಗೆ ಸರಿ.

ಮಾಧವ : ಮೊದಲೇ ನನ್ನ ತಲಿಕೆಟ್ಟದ. ನೀ ಮತ್ತಿಷ್ಟು ಕೆಡಸಬ್ಯಾಡ. ಅಲ್ಲಾ, ಆ ಭಟ್ಟಗ, ಅವನ ಹೆಂಡತೀಗೆ, ಅವನ ಹಿಂಡಮಕ್ಕಳಿಗೆ ಊಟಕ್ಕೆ ಆಮಂತ್ರಣ ಕೊಡೂ ಅಂತ ನಾ ಹೇಳಿದ್ನೇನು ? ಮತ್ತೆ ಎಂದೂ ಇಲ್ಲದೆ ಇಂದೇ ಸುಧಾ ಮತ್ತು ಕೃಷ್ಣನ ಮಿತ್ರಮಂಡಳಿ ಊಟಕ್ಕೆ ಹ್ಯಾಂಗ ವಕ್ರಿಸ್ತು? ಎಲ್ಲಾ ನನಗೆ ತಿಳೀತದs ಅಂದೆ. ಮತ್ತೆ ಮ್ಯಾಲೆ ಅವರೆಲ್ಲಾರಿಗೆ ಸಿನೇಮಾಕ್ಕೆ ರೊಕ್ಕಾ ಕೊಟ್ಟಿಯಂ-ತಲ್ಲ ! ಆಂ ! ನನ್ನ ಏನು ಮಾರಗಿರ್ಬೇಕು ಅಂತ ಮಾಡಿಯೋ ಅಥವಾ ಸಾಲದವರ ಕೈಗೆ ಸಿಗಸಿ ಜೇಲು ಕಾಣಸಬೇಕು ಅಂತಿಯೊ !



ಭಾಗೀ : ನೋಡ್ರಿ ಹಬ್ಬದ ದಿವಸಾದ್ರೂ ತುಸಾ ಶಾಂತ ಇರ್ರಿ. ಏನ ನೀವು ಮಾರಿ ಹೋಗುವಷ್ಟು ಅಥವಾ ದಿವಾಳಿ ಏಳುವಷ್ಟು ಖರ್ಚಾಗಿಲ್ಲ ಈವತ್ತು. ಮಿತ್ರರು ಬರ್ತಾರ, ವನ್ ನಂಬರ್ ಆಗ್ಬೇಕು, ಹತ್ತಾರು ಸಾಮಾನು ಆಗ್ಬೇಕು ಅಂದ್ರಿ. ನನಗೇನು ಹತ್ತು ಕೈ ಅವs ಏನು? ಅಡಗೀ ಸಹಾಯಕ್ಕೆ ಇರ್ಲಿ ಅಂತ ಶೇಷಮ್ಮಗೆ ಬಾ ಅಂದೆ. ಪಾಪ! ಹಬ್ಬದ ದಿವಸ ಮನಿಯೊಳಗೆ ಗಂಡನ್ನ ಮಕ್ಕಳನ್ನ ಉಪವಾಸ ಇಟ್ಟು ಅವಳು ಬರಬೇಕೇನು? ಅಡಗೀ ಮಾಡಿಟ್ಟು ಬರ್ಲಿ ಅಂದ್ರೆ, ನೀವು ಕೂತರೆ ಎದ್ದರೆ ಗಡಿಯಾರ ನೋಡವ್ರು. ತಡಾ ಆಗಿದ್ರೆ ನನ್ನ ಜೀವಾನೇ ತಗೋತಿದ್ರಿ. ಅದಕ್ಕೆ ಶೇಷಮ್ಮಗೆ ಎಲ್ಲಾರ್ನೂ ಕರಕೊಂಡೇ ಬಂದಬಿಡ್ರಿ ಅಂದೆ.

ಮಾಧವ : ಹೂಂ.

ಭಾಗೀ : ಮತ್ತೆ ಸುಧಾ ಮತ್ತು ಕೃಷ್ಣ ಇಂದಿ ಬಂದ ಅವರ ಜೋಡಿ ಹುಡುಗರೆಲ್ಲಾರ ಮನೇಗೂ ಒಮ್ಮೆಲ್ಲೊಮ್ಮೆ ಊಟಕ್ಕೆ ಹೋಗಿ ಬಂದಾರೆ. ನಾವೂ ಕರೀತೇವಿ ಅವ್ರನ್ನ ಅಂತ ಹೇಳ್ತಾನೇ ಇದ್ರು. ಅವರ ಕಾಟಾನೂ ಇಂದೇ ತೀರಿಸಿಕೊಂಡುಬಿಡೋಣ, ಹತ್ತರ ಸಂಗಡ ಹನ್ನೊಂದು ಅಂತ ಅವರನ್ನೂ ಕರದೆ. ಏನು ತಪ್ಪಾತು?

ಮಾಧವ : ತಪ್ಪಾಗಲಿಲ್ಲ ಮಾರಾಯುಳೇ. ನಿಂದು ತಪ್ಪಾಗಲಿಲ್ಲ. ನಂದೇ ತಪ್ಪಾತು! ಗಲ್ಲ ಗಲ್ಲಾ ಬಡಕೊಂಡು ಅನ್ನಲ್ಯಾ ಬೇಕಾದ್ರೆ. ನಿನಗೇನು? ಕಿರಾಣೀ ಅಂಗಡೀ ಉದ್ದರಿ–

ಭಾಗೀ : ಭಾಳ ಏನು ಆಗಿಲ್ಲ. ಕಿರಾಣಿ ಸಾಮಾನು, ಹಾಲು, ಬೆಣ್ಣಿ, ಕಾಯಿಪಲ್ಲೆ ಅಂತ (ಒಳಗೆ ಹೋಗಿಬಂದು) ತಗೋಳ್ರಿ ಲಿಸ್ಟು. ಬರೇ ೫೬ ರೂಪಾಯಿ ಆಗ್ಯೇದ. ಮತ್ತೆ ಭಟ್ಟರ ದಕ್ಷಿಣೆ, ಹುಡುಗರ ಸಿನೇಮಾ ಅಂತ ೧೪ ರೂಪಾಯಿ. ಒಟ್ಟು ನಿಮ್ಮ ಮುಖಂಡ ಮಿತ್ರರ ಸ್ವಾಗತಸಮಾರಂಭಕ್ಕೆ ಬರೀ ೭೦ ರೂಪಾಯಿ ಖರ್ಚಾದ್ಹಾಂಗಾತು. ನೀವೇ ಹೇಳಿದ್ರಿ, ಅವರಿಂದೇನಾದ್ರೂ ಲಾಭ ಆಗ್ತದ ಅಂತ. ಅದಕ್ಕೇ ನಾನೂ ತುಸಾ ಕೈಸಡಲು ಬಿಟ್ಟು ಅವರಿಗೆ ಸಂತೋಷ ಆಗೂ ಹಾಂಗ ಮಾಡಿದೆ. ಹ್ಯಾಂಗೂ ಬಾ ಅಂದಾರ, ಹೋಗಿಬರ್ರಿ. ಏನಾದ್ರೂ ಮೇಲಿನ ಛಾನ್ಸು...

ಮಾಧವ : ನಿನ್ನ ತಲೀ? ನಾ ಅಂಥಾ ಮಾತು ಎತ್ತಾರ್ದ್ಲ ಅಂತ ಆ ಬಾಬೂರಾಯು ನಾ ನಿಃಸ್ಪೃಹ ಅಂತ ಹೇಳಿ ಜಾರಿಕೊಂಡನಲ್ಲ. ಯಾರಿಗ್ಗೊತ್ತಿತ್ತು, ಇಂವಾ ಇಂಥಾ

ಭಾಗೀ : ಹಾಂಗಿಲ್ಲದಿದ್ರೆ ಮುಖಂಡರು ಹ್ಯಾಂಗಆದಾರು? ತಗೊಳ್ಳೂ ಜೊತೆಗೆ ಕೊಡೂದು ಕಲಿತರೆ ಶಿಲ್ಕು ಹ್ಯಾಂಗ ಉಳದೀತು.

ಮಾಧವ : ಏ ಏ ! ಭಾಳ ಶಾಣ್ಯಾರ ಹಾಂಗ ಮಾತಾಡಬ್ಯಾಡ. ಅಂವಾ ಬಿಡು. ಏನ ಅಣ್ಣ ಅಲ್ಲ, ತಮ್ಮ ಅಲ್ಲ, ಆದರೆ ನೀನು-ನೀನು...

ಭಾಗೀ : ಹೌದು, ನಾ ನಿಮ್ಮ ಹೆಂಡತಿ...

ಮಾಧವ : ನನ್ನ ಹೆಂಡತಿಯಾಗಿ, ನನಗೆ ತಿಂಗಳಿಗೆ ಬರೂದು ಬರೇ ನೂರಾಐವತ್ತು ರೂಪಾಯಿ ಅಂತ ಗೊತ್ತಿದ್ದು, ನಾ ಹೇಳದ ಸೇವಾ ಮಾಡಿ ಒಂದೇ ದಿನದೊಳಗೆ ೭೦ ರೂಪಾಯಿ ಕರಗಿಸಿಬಿಟ್ಟೆಯಲ್ಲ.

ಭಾಗೀ : ನೀವು ಉಪವಾಸಾ ಮಾಡೂದು ತಪ್ಪಲಿ ಅಂತ. ಇಲ್ಲಾಂತಂದ್ರೆ ನಾ ಆ ದಿವಸ ಹೇಳಿದ ಮಾತು ಕೇಳಿದ್ರೇನು ! ರುದ್ರಾವತಾರ ತಾಳಿಬಿಟ್ರಿ; ಖಾನಾವಳಿಯೊಳಗೆ ಊಟ ಹಾಕಿಸಿ ಕಳಿಸಿಬಿಟ್ಟಿದ್ರೆ...

ಮಾಧವ : ಆತು ಮಾರಾಯುಳೇ ಆತು. ಗಾಯದಮ್ಯಾಲೆ ಬರೆ ಕೊಡಬ್ಯಾಡ, ಏನೋ ಒಮ್ಮೆಯಾದರೂ ನನ್ನ ಮಾತು ನಡೀತು ಅಂತ ಸಮಾಧಾನ...

ಭಾಗೀ : ಗಂಡಸರೀಗೆ ಸಂಸಾರದ ಸರೀ ಕಲ್ಪನೆ ಇರೂದಿಲ್ಲ ಅನ್ನೂದು ಇದಕ್ಕೇ. ಹ್ಯಾಂಗ ಮಾಡಿದ್ರೂ ಅನ್ನೂದೊಂದೇ ನಿಮಗೆ ಗೊತ್ತು. ತಪ್ಪು ಹುಡುಕೂದೊಂದೇ ಗೊತ್ತು, ಈಗಾದ್ರೂ

ಮಾಧವ : ತಿಳೀತು, ತಿಳೀತು. ಸಂಸಾರದಲ್ಲಿ ಗಂಡ ಸೋತಾಗೂ ಸೋಲ್ತಾನೆ, ಗೆದ್ದಾಗಲೂ ಸೋಲ್ತಾನೆ ಅಂತ ತಿಳೀತು.

ಭಾಗೀ : ಅಷ್ಟು ಹಚ್ಚಿಕೋಬ್ಯಾಡ್ರಿ ಮನಸಿಗೆ. ಭಾಳಖರ್ಚಾತು ಅಂತ ಹಳಹಳಿಸಬ್ಯಾಡ್ರಿ. ಈ ಖರ್ಚು ತುಂಬಿಕೊಡೂ ಭಾರ ನಂದು. ನಾಳಿಂದ ಕೆಲಸದಾಕೀನ ಬಿಡಿಸಿಬಿಡ್ತೇನೆ, ಮತ್ತೆ...

ಮಾಧವ : ಅದನ್ನಷ್ಟು ಮಾಡಿ ನನ್ನ ಇನ್ನಿಷ್ಟು ಗೋಳಿಗೆ ಹಾಕಬ್ಯಾಡ. ನೀ ಎಲ್ಲಿಯಾದ್ರೂ ಕೆಲಸದ ನೆವಾಮಾಡಿ ಮಲಗಿಕೊಂಡಿ ಅಂದ್ರ ಡಾಕ್ಟರರ ಬಿಲ್ ನಾ ಬಡೀಲಾರೆ. ಅಡಗೀಮಾಡಿ ಕೈ ಸುಟ್ಟಕೊಳ್ಳಲಾರೆ. ಆದದ್ದಾತು ಒಂದು ಪಾಠ ಕಲಿತಾಂಗ ಆತು.

ಭಾಗೀ : ಒಂದಿಷ್ಟು ಅಡ್ತಾಗ್ರಿ. ಏನೋ ನೀವು ಅಂದು ಹಟಮಾರಿ ಹುಡುಗರ ಹಾಂಗ ಮಾಡಿದ್ರಿ ಅಂತ ಛಲಕ್ಕಬಿದ್ದು ನಾನೂ ಇಷ್ಟೆಲ್ಲ ಮಾಡ್ಯಾರದಾಗಿತ್ತು.


ಮಾಧವ : ಸಾಕು, ಇಷ್ಟು ಮಾತು ನಿನ್ನ ಬಾಯಿಂದ ಬಂತಲ್ಲ. ಸಾಕು. ನೀ ಅಂದ ಹಾಂಗ ನಾನೂ ಸಿನೇಮಾಕ್ಕೆ ಹೋಗಿ ಬರ್ತೇನೆ. ಅಥವಾ ನೀನೂ ಬಂದ್ಬಿಡು. ಹೂಂ, ತಯಾರಾಗು ಬೇಗ.

ಭಾಗೀ : (ಅವನ ಕಾಲು ಮುಟ್ಟಿ) ಎಲ್ಲಿ ನೀವು ಅಕ್ಕಸಪಟ್ಟುಕೊಂಡು ಹುಚ್ಚುಚ್ಚಾರ ಮಾಡ್ತೀರೋ ಅಂತಿದ್ದೆ. ದೇವರು ದೊಡ್ಡಂವ. ನಿಮ್ಮಂಥ...

ಮಾಧವ : ಇರ್ಲಿ, ಇರ್ಲಿಬಿಡು ಗಂಡನ ಹಾದೀಗೆ ತರುವಂಥ ನಿನ್ನಂಥ ಹೆಂಡತಿ ಇದ್ದರೇನೆ ಸಂಸಾರ ಸುರಳೀತ ನಡೀತದ. ಬೇಗ ತಯಾರಾಗು.

ಭಾಗೀ : ಹೂಂ. ಐದೇ ಮಿನಿಟಿನೊಳಗೆ ತಯಾರಾಗ್ತೇನೆ.

(ಅವರು ಒಳಗೆ ಹೋಗುವಾಗ ಪಡದೆ ಬೀಳುವದು)



ಒಂದು ಹಿಡಿ ಮಣ್ಣಿನಲ್ಲಿಯೇ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳ ಒಂದು ಅಪಾರ ಜಗತ್ತು!

ಲೇಖಕರು :
ಶ್ರೀ ಎಂ.ಎಸ್.ಎಸ್. ರಾವ ಎಂ.ಎಸ್ಸಿ
ಬಾಗಲಕೋಟಿ

ಒಂದು ಹಿಡಿಯಷ್ಟು ಮಣ್ಣನ್ನು ಕೈಯಲ್ಲಿ ತೆಗೆದುಕೊಂಡು ಅದರಲ್ಲಿ ಒಂದೆರಡು ಕಣಗಳನ್ನು ಸೂಕ್ಷ್ಮದರ್ಶಕದ ಕೆಳಗಿಟ್ಟು ಪರೀಕ್ಷಿಸಿ, ಲೆಕ್ಕ ಹಾಕಿದುದೇ ಆದರೆ ಅಷ್ಟು ಮಣ್ಣಿನಲ್ಲೇ ಇರುವ ಸೂಕ್ಷ್ಮಜೀವಿಗಳ (Soil microbes) ಸಂಖ್ಯೆಯು, ಒಂದು ದೊಡ್ಡ ದೇಶದ ಜನಸಂಖ್ಯೆಯನ್ನೂ ಮೀರಿಸಬಲ್ಲದು. ಇದನ್ನು ನಂಬುವುದು ಕಠಿಣವೇನೋ ಹೌದು! ಆದರೆ ಈ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳು, ಸಸ್ಯ-ಪ್ರಾಣಿ ಮಾನವರಂತಹ ಜೀವಿಗಳ ಮೇಲೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅಪಾರ ಪ್ರಭಾವವನ್ನು ಬೀರುತ್ತವೆ. ಈಗೀಗ ಆ ಸೂಕ್ಷ್ಮ ಜಗತ್ತಿನ ಜೀವಿಗಳ ಅಗಾಧ ಸಂಖ್ಯೆ, ಅಪಾರ ಮಹತ್ವ ಹಾಗೂ ಅವುಗಳ ವಿಶಿಷ್ಟ ಪಾತ್ರಗಳ ಬಗ್ಗೆ ಹೆಚ್ಚೆಚ್ಚು ವಿವರಗಳನ್ನು ಸಂಗ್ರಹಿಸಲಾಗುತ್ತಿದೆ.

ಅಮೇರಿಕ ದೇಶದ 'ರಟ್ಜರ್ಸ್', ವಿಶ್ವವಿದ್ಯಾಲಯದ ಡಾ. ಸೆಲ್ಮನ್, ಎ. ವಾಕ್ಸ್‌ಮನ್ (Dr. Selmon A walksman) ಎಂಬ ವಿಜ್ಞಾನಿ ಭೂಮಿಯಲ್ಲಿರುವ (ಮಣ್ಣು, ನೀರು ವಾಯು ಇತ್ಯಾದಿ) ಅಸಂಖ್ಯಾಕ ಸೂಕ್ಷ್ಮ ಜೀವಿಗಳ ಒಬ್ಬ ಗಣ್ಯ ಪರಿಣತನೆಂದು ಜಗತ್ತಿನಾದ್ಯಂತ ಖ್ಯಾತಿ ಪಡೆದವರಾಗಿದ್ದಾರೆ. ಅಷ್ಟೇ ಅಲ್ಲ! 'ಸ್ಟ್ರೆಪ್ಟೊಮೈಸಿನ್' ಎಂಬ ರೋಗ ನಿವಾರಕ ಅಥವಾ ರೋಗಪ್ರತಿಬಂಧಕ ವಸ್ತುವೊಂದನ್ನು ಕಂಡುಹಿಡಿದವರೂ ಆಗಿದ್ದಾರೆ. ಈ 'ಸ್ಟ್ರೆಪ್ಟೊಮೈಸಿನ್' ಎಂಬುದು ಮಾನವನ ಅನೇಕ ರೋಗಗಳಿಗೆ ರಾಮಬಾಣದಂತಹ ಔಷಧವಾಗಿದೆ. ಇದು ಈಗೀಗ ಹೊಸದಾಗಿ ಹಾಗೂ ಅತ್ಯಂತ ಆಶ್ಚರ್ಯಕರವಾದ ರೀತಿಯಲ್ಲಿ ಅನೇಕ ರೋಗಗಳನ್ನು ಗುಣಪಡಿಸುತ್ತಿರುವ ಪೆನಿಸಿಲಿನ್, ಕ್ಲೋರೋ ಮೈಸಿಟನ್, ಆರಿಯೊ ಮೈಸಿನ್, ಟೆರಮೈಸಿನ್, ನಿಯೋ ಮೈಸಿನ್ ಇತ್ಯಾದಿ ರೋಗನಿವಾರಕ ವಸ್ತುಗಳ ಗುಂಪಿಗೇ ಸೇರಿದುದಾಗಿದೆ. ಈ ವಿವಿಧ ಬಗೆಯ ರೋಗನಿವಾರಕ ವಸ್ತುಗಳು ಮಣ್ಣಿನಲ್ಲಿ ಜೀವಿಸುವ ಅಸಂಖ್ಯಾಕ ಸೂಕ್ಷ್ಮಾತಿ ಸೂಕ್ಷ್ಮ ಜೀವಿಗಳಿಂದಲೇ ಉತ್ಪಾದನೆಗೊಂಡಿವೆಯೆಂಬುದನ್ನು ನಂಬುವುದು ನಮಗೆ ಕಠಿಣವೇನೋ ಹೌದು. ಮೇಲಾಗಿ ಒಂದು ಹಿಡಿ ಮಣ್ಣಿನಲ್ಲಿ ಎಷ್ಟು ಮತ್ತು ಎಂತೆಂತಹ ಸೂಕ್ಷ್ಮ ಜೀವಿಗಳಿವೆಯೆಂದು ಕೇಳಿದರೆ ಯಾರಿಗಾದರೂ ಒಮ್ಮೆಲೆ ಹೇಳುವುದು ಸುಲಭವಲ್ಲ. ಕನಿಷ್ಟ ಕೆಲವು ಸಾವಿರಾರುಬಗೆಯ ಸೂಕ್ಷ್ಮ ಜೀವಿಗಳು ಅಥವಾ ದಂಡಾಣುಗಳು ಇರಬೇಕು. ಒಂದೊಂದು ಗುಂಪಿನ ಸೂಕ್ಷ್ಮ ಜೀವಿಗಳಲ್ಲಿಯೇ (ದಂಡಾಣು) ಅನೇಕ ಭಿನ್ನ ಭಿನ್ನ ರೂಪ, ಜಾತಿಯ ಜೀವಿಗಳೂ ಇರುತ್ತವೆ. ಈ ದಂಡಾಣುಗಳ ಜತೆಗೆ 'ವೈರಸ್' (virus) ಎಂಬ ಕಣ್ಮೈಕ ರೋಗಾಣು ಜೀವಿಗಳೂ ಅಣಬೆ (Fungi) ಪಾಚಿ (Algac) ಇತ್ಯಾದಿ ಇನ್ನೂ ಅನೇಕಾನೇಕ ಅತ್ಯಂತ ಸೂಕ್ಷ್ಮಜೀವಿಗಳೂ ಇಲ್ಲದೇ ಇಲ್ಲ.

ಮನುಷ್ಯರು ದಂಡಾಣುಗಳಷ್ಟು ಸೂಕ್ಷ್ಮವಿದ್ದರೆ

ಈ ಸಂದರ್ಭದಲ್ಲಿ ಒಂದು ಮಾತು. ಗಾತ್ರವೆಂಬುದರ ಬಗ್ಗೆ ನಮ್ಮಲ್ಲಿರುವ ಮಾನವನ ಪೂರ್ವಕಲ್ಪಿತ ದೋಷವನ್ನು ನಾವು ಮೊದಲು ತೊಡೆದು ಹಾಕಬೇಕು; ಏಕೆಂದರೆ ಮನುಷ್ಯರೇ ಒಂದು ವೇಳೆ ದಂಡಾಣುಗಳಷ್ಟು ಅತ್ಯಂತ ಸೂಕ್ಷ್ಮವಾಗಿದ್ದಿದ್ದರೆ ಆಗ ಅದೇ ದಂಡಾಣುವಿನ ಗಾತ್ರದ ಮನುಷ್ಯರು ತಮ್ಮ ದೃಷ್ಟಿಯಲ್ಲಿ, ಪ್ರಾಣಿವರ್ಗದಲ್ಲಿಯೇ ಅತ್ಯಂತ ಸರಳ ಹಾಗೂ ಕೆಳಮಟ್ಟದ 'ಅಮೀಬಾ',— 'ಪ್ರೋಟೋಸೋವಾ' (protozoa) ಎಂಬ ಏಕಕಣ ಜೀವಿಗಳೇ ಬೃಹದಾಕಾರವಾಗಿರುತ್ತವೆಯೆಂತಲೂ ರಾಕ್ಷಸಶಕ್ತಿಯುಳ್ಳವಾಗಿರುತ್ತವೆಂತಲೂ ಬಹು ಗಂಡಾಂತರಕಾರಿಯಾಗಿರುತ್ತವೆಯೆಂತಲೂ ಪ್ರಾಯಶಃ ಭಾವಿಸುತ್ತಿದ್ದರೋ ಏನೋ!

ಒಂದು ಸಾವಿರ ದಂಡಾಣುಗಳನ್ನು ಒಂದರ ಮಗ್ಗುಲಲ್ಲಿ ಒಂದರಂತೆ ಜೋಡಿಸುವುದಾದರೆ ಅದರ ಉದ್ದ ಒಂದು ಸಣ್ಣ ನಾಣ್ಯದ (ನಯೆ ಪೈಸೆ ಅನ್ನಿ) ವ್ಯಾಸದಷ್ಟಾಗುತ್ತದೆ. ಒಂದು ಘನಸೆಂಟಿಮೀಟರಿನಷ್ಟು ಜಾಗದಲ್ಲಿ ಹತ್ತು ಕೋಟಿ ದಂಡಾಣುಗಳಿಗೆ (Bacteria) ಸಾಕಷ್ಟು ಸ್ಥಳಾವಕಾಶ ಇರಬಲ್ಲದು; ಅಂದ ಮೇಲೆ ಒಂದು ಮುಂಬೈ ಅಥವಾ ನ್ಯೂಯಾರ್ಕ್‌ನಂತಹ ದೊಡ್ಡ ನಗರದಲ್ಲಿ ಒಬ್ಬೊಬ್ಬ ವ್ಯಕ್ತಿಗೆ ಇರುವಷ್ಟು ಸ್ಥಳಾವಕಾಶ ದೊರೆಯುತ್ತದೆಯೆಂದೂ ಹೇಳಿದ ಹಾಗಾಯಿತು.

ಮಣ್ಣಿನಲ್ಲಿಯಾದರೂ ಸೂಕ್ಷ್ಮ ಜೀವಿಗಳು ಸಾಕಷ್ಟು ನಿಬಿಡವಾಗಿಯೇ ಇವೆ. ಅವುಗಳಲ್ಲಿ ದಟ್ಟಣೆಯಿಲ್ಲ ಎಂದೇನೂ ಹೇಳಲಾಗದು. ಮಣ್ಣನ್ನು ಸೂಕ್ಷ್ಮ ರೀತಿ ಹಾಗೂ ಜಾಣ್ಮೆ ಮತ್ತು ತಾಳ್ಮೆಯಿಂದ ದೀರ್ಘಕಾಲ ಪರಿಶೀಲಿಸಬೇಕಾದರೆ ಮೊಟ್ಟ ಮೊದಲು ಮಣ್ಣು ಜೀವಂತವೇ ಇದೆಯೆಂದು ಭಾವಿಸುವುದು ಯೋಗ್ಯ ಹಾಗೂ ಶ್ರೇಷ್ಠ ವಿಧಾನ. ಪ್ರಾಯಶಃ ಭೂಮಿಯಮೇಲೆ ಇರುವ ಸಸ್ಯ-ಪ್ರಾಣಿ-ಮಾನವರಂತಹ ಜೀವಿಗಳ ಸಂಖ್ಯೆಗಿಂತ ಹೆಚ್ಚಿಗೆ ವೈವಿಧ್ಯಪೂರ್ಣವಾದ ಹಾಗೂ ಭಿನ್ನ ಭಿನ್ನ ಜಾತಿಯ ಆದಿ ಸಸ್ಯ ಮತ್ತು ಪ್ರಾಣಿಗಳು ಭೂಮಿಯ ಕೆಳಗೇ ಅಂದರೆ ಮಣ್ಣಿನಲ್ಲಿಯೇ ಹುದುಗಿರುತ್ತವೆಯೆಂಬುದನ್ನು ನಾವು ಸುಲಭವಾಗಿ ಕಲ್ಪನೆ ಮಾಡಿಕೊಳ್ಳಲಾರೆವು. ಮೇಲಾಗಿ ಅವುಗಳ ಜೀವನದ ವೈವಿಧ್ಯಗಳು ಕೂಡ ಎಷ್ಟೋ ಭಿನ್ನ ಭಿನ್ನ ರೀತಿಯದಾಗಿರುತ್ತವೆ.

ಒಂದು ಹಿಡಿ ಮಣ್ಣಿನಲ್ಲಿ ಸೂಕ್ಷ್ಮ ಜೀವಿಗಳು ಅಪಾರ ಜಗತ್ತನ್ನು ನಿರ್ಮಿಸಿಕೊಂಡಿವೆ. ಒಂದು ಘನ ಸೆಂಟಿಮೀಟರಿನಷ್ಟು ಸ್ಥಳದಲ್ಲಿ ಹತ್ತು ಕೋಟಿ ದಂಡಾಣುಗಳು ಜೀವಿಸಬಲ್ಲವಾಗಿವೆ. ಇವು ಪರಸ್ಪರ ಅವಲಂಬಿಸಿರುತ್ತವೆ. ಅಲ್ಲದೆ ಇವಿಲ್ಲದೆ ಮಾನವನ ಬದುಕೇ ಅಸಾಧ್ಯವೆಂಬಂತಾಗಿದೆ. ಇದೊಂದು ಸೃಷ್ಟಿಯ ವೈಚಿತ್ರ್ಯವಲ್ಲದೇ ಇನ್ನೇನು? ಈ ಸೂಕ್ಷ್ಮಜೀವಿಗಳ ಜಗತ್ತಿನ ಪರಿಚಯವನ್ನು ಲೇಖಕರು ಇಲ್ಲ ಮಾಡಿ ಕೊಟ್ಟಿರುವರು.

ಜೈವಿಕ ಕ್ರಿಯೆಗಳು

ಜಗತ್ತಿನಲ್ಲಿ ಎಲ್ಲ ಜೀವಿಗಳಿಗೆ ಅತ್ಯಂತ ಅವಶ್ಯವಾದ ಹಾಗೂ ಮೂಲಾಧಾರವಾದ

ಕೆಲವು ಜೈವಿಕಕ್ರಿಯೆಗಳಿವೆ. ಅವು ಸೂಕ್ಷ್ಮ ಜೀವಿಗಳು, ಎಂತೆಂತಹ ಆಹಾರವನ್ನು ಸೇವಿಸಿ ಜೀವಿಸಬಲ್ಲವು. ಆ ವಿವಿಧ ಆಹಾರಗಳು ಅವುಗಳ ದೇಹದಲ್ಲಿ ದೇಹ ಸಂವರ್ಧನೆ ಕಾರ್ಯಗಳ ಪರಿಣಾಮವಾಗಿ ಹೇಗೆ ಹೇಗೆ ರೂಪಾಂತರ ಹೊಂದುವುವು ಇವೇ ಮೊದಲಾದವು. ಕೆಲವು ಜೀವಿಗಳು ತಮ್ಮ ಆಹಾರದ ಬಗ್ಗೆ ವಿಶೇಷ ಒಲವು, ಸೂಕ್ಷ್ಮತೆ ಹಾಗೂ ನಾಜೂಕುತನವನ್ನು ತೋರುತ್ತವೆಯೆಂದರೆ ನಮಗೆ ಆಶ್ಚರ್ಯವಾದೀತು! ಕೆಲವು ಸೂಕ್ಷ್ಮಾಣುಜೀವಿಗಳು ಕೊಳೆತ ಹಾಗೂ ಹೊಲಸು ನಾರುವ ತತ್ತಿಯ ವಾಸನೆಯುಳ್ಳ ಹೈಡ್ರೋಜನ್ ಸಲ್ಫೈಡ್ (Hydrogen Sulphide or H_2S) ಎಂಬ ಅನಿಲದ ಮೇಲೆ ಜೀವಿಸಬಲ್ಲವು. ಇನ್ನೂ ಕೆಲವು ಜೀವಿಗಳು ಮೋಟಾರು ವಾಹನಗಳಿಂದ ಹೊರಬರುವ ವಿಷಪೂರಿತ ಹೊಗೆಯಂತಿರುವ ಕಾರ್ಬನ್ ಮೊನಾಕ್ಸೈಡ್ (Carbon monoxide) ಎಂಬ ಅನಿಲದ ಮೇಲೆ ಜೀವಿಸಬಲ್ಲವು. ಇನ್ನೂ ಕೆಲವು ಜೀವಿಗಳು ಕಾರ್ಬಾಲಿಕ್ ದ್ರಾವಕದಂತಹ (Carbolic acid) ವಸ್ತುವಿನ ಮೇಲೆ ಜೀವಿಸಬಲ್ಲವು. ಆದರೆ ನಮಗೆ ಅಂತಹ ಸೂಕ್ಷ್ಮಜೀವಿಗಳು ಏನು ಸೇವಿಸುವುವು ಅಥವಾ ನುಂಗುವುವು ಎನ್ನುವುದು ಅಷ್ಟು ಮುಖ್ಯವಲ್ಲ. ಅದಕ್ಕಿಂತಲೂ ಹೆಚ್ಚಾಗಿ ಅವು ಯಾವ ಯಾವ ಮತ್ತು ಎಂತೆಂತಹ ವಸ್ತುಗಳನ್ನು ವಿಸರ್ಜಿಸುವುವು ಎನ್ನುವುದು ಮುಖ್ಯ. ಇದು ಎಷ್ಟು ಅಸಂಬದ್ಧ! ಎಂದು ತೋರುವುದಿಲ್ಲವೇ? ಆ ಜೀವಿಗಳ ದೃಷ್ಟಿಯಿಂದ ಅವು ವಿಸರ್ಜಿತ ವಸ್ತುಗಳಾಗಿರಬಹುದು. ಆದರೆ ನಮ್ಮ ದೃಷ್ಟಿಯಿಂದ ಆ ವಿಸರ್ಜಿತ ವಸ್ತುಗಳೇ ಒಮ್ಮೊಮ್ಮೆ ನಮಗೆ ಬಹಳ ಉಪಯುಕ್ತವಾಗಿರುತ್ತವೆ. ಅಂತಹ ಸಂದರ್ಭಗಳಲ್ಲಿ ಆ ಜೀವಿಗಳು ಮನುಷ್ಯನ ವಿಶೇಷ ಉಪಯೋಗಕ್ಕಾಗಿಯೇ ಅಂತಹ ವಸ್ತುಗಳನ್ನು ಉತ್ಪಾದಿಸುತ್ತಿರಬೇಕೆಂದು ನಮಗೆ ಭಾಸವಾಗುವುದು ಆಶ್ಚರ್ಯವೇನಲ್ಲ! ಉದಾಹರಣೆಗೆ—ಮಣ್ಣಿನಲ್ಲಿಯೂ ಜೀವಿಸಬಲ್ಲ ಅನೇಕ ಜೀವಿಗಳಲ್ಲಿ 'ಯೀಸ್ಟ್' (Yeast) ಎಂಬ ಏಕಕಣ ಜೀವಿಯನ್ನೇ ತೆಗೆದುಕೊಳ್ಳಿ. ಆ ಜೀವಿಗೆ ಬಕಾಸುರನಂತಹ ಆಹಾರಸೇವನೆಯ ಶಕ್ತತೆ ಅಥವಾ ಹಸಿವು ಇರುವುದರಿಂದಲೇ ನಮಗೆ ಸಾಕಷ್ಟು 'ವೈನ್' ಎಂಬ ದ್ರಾಕ್ಷಾರಸ ಉಂಟಾಗುತ್ತದೆ. 'ಯೀಸ್ಟ್' (Yeast) ಎಂಬ ಸೂಕ್ಷ್ಮಜೀವಿಗಳ ದೃಷ್ಟಿಯಿಂದ ನೋಡಿದರೆ, ಅವಕ್ಕೆ ಒಂದು ವಿಶೇಷ ಹಬ್ಬವೇ ಇರಬೇಕೆಂದು ತೋರುತ್ತದೆ! ಆದರೆ ಅದರ ಪರಿಣಾಮವಾಗಿ ಹಾಗೂ ಅನಿವಾರ್ಯ ಮತ್ತು ಅನಿರೀಕ್ಷಿತ ಕಾರಣಗಳಿಂದಾಗಿ 'ಅಲ್ಕೊಹಾಲ್' (ಮದ್ಯ) ಮತ್ತು ಇಂಗಾರಾಮ್ಲವಾಯು ವಿಸರ್ಜಿತ ವಸ್ತುಗಳಾಗಿ ಉತ್ಪಾದನಗೊಳ್ಳುವುವು. ನಮ್ಮ ದೃಷ್ಟಿಯಿಂದ ಅದು ದ್ರಾಕ್ಷಿಯನ್ನು ಕೇವಲ ಮದ್ಯ ಅಥವಾ 'ವೈನ್' ಆಗಿ ತಯಾರಿಸುವ ಸರಳ ಕಾರ್ಯವಷ್ಟೇ!

ಇಂತಹವೇ ಇನ್ನೂ ಅನೇಕ ಬಗೆಬಗೆಯ ಕಾರ್ಯವಿಧಾನಗಳು ಮಣ್ಣಿನಲ್ಲಿರುವ ಅಸಂಖ್ಯಾತ ಸೂಕ್ಷ್ಮಜೀವಿಗಳಲ್ಲಿ ಸದಾಕಾಲ ಮತ್ತು ಹಗಲಿರುಳೂ ನಡೆಯುತ್ತಲೇ ಇರುತ್ತವೆಯೆಂಬುದನ್ನು ನಾವು ಗಮನಿಸಬೇಕು. ಇಷ್ಟೇ ಅಲ್ಲ; ಭೂಮಿಯಲ್ಲಿರುವ ಅನೇಕಾನೇಕ ಸೂಕ್ಷ್ಮಜೀವಿಗಳನ್ನು ಗುರುತಿಸುವುದು ಮತ್ತು ವರ್ಗೀಕರಿಸುವುದು. ಅವುಗಳಿಂದ ಉಂಟಾಗುವ ವಿವಿಧ ರಾಸಾಯನಿಕ ಕ್ರಿಯೆಗಳು ಆ ಬಗೆಯ ಕ್ರಿಯೆಗಳಿಂದ ಯಾವ ಯಾವ ರೀತಿಯ ಲಾಭ ಅಥವಾ ಉಪಯುಕ್ತತೆಗಳನ್ನು ಪಡೆಯಬಹುದು ಎಂಬ ಪರಿಶೀಲನೆಗಳು ಈಗಾಗಲೇ ಎಷ್ಟೋ ನಡೆದಿವೆ; ಇನ್ನೂ ನಡೆಯುತ್ತಲೂ ಇವೆ. ಈ ಬಗ್ಗೆ ಎಲ್ಲ ವಿಷಯಗಳೂ ಬೆಳಕಿಗೆ ಬರಬೇಕಾದರೆ ಮತ್ತು ಅವು ಎಲ್ಲ ಕಾರ್ಯಗತವಾಗಬೇಕಾದರೆ ಇನ್ನೂ ಎಷ್ಟೋ ದಶಕಗಳಾದರೂ ಪ್ರಾಯಶಃ ಅವಶ್ಯವೆನಿಸಬಹುದು. ಆದರೆ ಒಂದೊಂದು ಪೀಳಿಗೆಯಲ್ಲಿಯೂ (ತಲೆಮಾರಿನಲ್ಲಿ) ಮನುಷ್ಯನ ಆಯುಷ್ಯ ಮತ್ತು ಕಾರ್ಯಶಕ್ತಿಯ ಅವಧಿಯಾದರೂ ಎಷ್ಟಿರುತ್ತದೆ? ಒಂದು ೨೫ ವರ್ಷಗಳು ಅತಿ ಹೆಚ್ಚೆಂದರೆ ೫೦ ವರ್ಷಗಳು. ಆದರೆ ಅದಕ್ಕಿಂತಲೂ ಒಂದು ದೊಡ್ಡ ಸಮಸ್ಯೆ ಇದೆ. ಸೂಕ್ಷ್ಮಜೀವಿಗಳು ಕೆಲವು ವಿಶಿಷ್ಟ ಸನ್ನಿವೇಶಗಳಲ್ಲಿ ಕ್ಷಣಕ್ಷಣಕ್ಕೂ ನಿರಂತರವಾಗಿ ಒಂದೊಂದು ಗುಂಪಿನ ಜೀವಿಯಲ್ಲಿಯೇ ಹೊಸ ಹೊಸ ಜಾತಿ ನಮೂನೆಗಳಾಗಿ ಉತ್ಪಾದನೆಗೊಳ್ಳುತ್ತಿರುತ್ತವೆ.

ಹೊಸ ಔಷಧದ ಶೋಧ

ಒಮ್ಮೆ ರಟ್ಜರ್ಸ್ (Rutgers) ವಿಶ್ವವಿದ್ಯಾಲಯದ ಆವರಣದಲ್ಲಿದ್ದ ಸ್ವಲ್ಪ ಮಣ್ಣನ್ನೇ ಅಗೆದು ತಂದು ಪ್ರಯೋಗಮಂದಿರದಲ್ಲಿ ಪರೀಕ್ಷಿಸುತ್ತಿದ್ದಾಗಲೇ ೧೯೪೩ ರಲ್ಲಿ 'ಸ್ಟ್ರೆಪ್ಟೋಮೈಸಿನ್'ಗೆ ಕಾರಣವಾದ ಒಂದು ಜೀವಿಯನ್ನು ಹೊರತೆಗೆದು ಬೇರ್ಪಡಿಸುವುದು 'ಡಾ. ವಾಕ್ಸ್‌ಮನ್'ಗೆ ಸಾಧ್ಯವಾಯಿತು. ಅನಂತರ ೧೯೪೪ ರ ವೇಳೆಗೆ ಈ ಕಾರ್ಯ ಫಲಿಸಿತು. ಈ ಔಷಧವನ್ನು ಕಂಡುಹಿಡಿದು ಈಗ್ಗೆ ಸುಮಾರು ೨೬-೨೮ ವರ್ಷಗಳಾಗಿ ಹೋದವು.

'ಈ ಸೂಕ್ಷ್ಮಜೀವಿಗಳ ಆಹಾರವಾದರೂ ಅನೇಕಾನೇಕ ಬಗೆಯ ಸಸ್ಯ ಮತ್ತು ಪ್ರಾಣಿಗಳ ಸತ್ವ ಹಾಗೂ ಕೊಳೆತ ವಸ್ತುಗಳು. ಪ್ರಯೋಗಮಂದಿರಗಳಲ್ಲಿ ಕೆಲವು ವಿಶಿಷ್ಟ ಜೀವಿಗಳಿಗಾಗಿ ದನಗಳ ಮಾಂಸದ ಗಂಜಿಯಿಂದ (Beaf vorth) ಈ ಸೂಕ್ಷ್ಮಜೀವಿಗಳಿಗೆ ಆಹಾರವನ್ನು ಒದಗಿಸಿ ಪೋಷಿಸಲಾಗುತ್ತದೆ. ಆದರೆ ಅವು ಆಹಾರವನ್ನು 'ಸೇವಿಸುತ್ತವೆ' ಎಂದಾಗ ನಾವು ಸ್ವಲ್ಪ ಬೇರೆ ಅರ್ಥದಲ್ಲಿ ಅದನ್ನು ತಿಳಿದುಕೊಳ್ಳುವುದು ಅವಶ್ಯ.

ಈ ಸೂಕ್ಷ್ಮಜೀವಿಗಳು ಸತ್ತ ಅಥವಾ ಕೊಳೆತ ಎಲೆ, ಪ್ರಾಣಿದೇಹಗಳು, ಮಲಮೂತ್ರಾದಿ ವಿಸರ್ಜನಾವಸ್ತುಗಳು ಇತ್ಯಾದಿಗಳನ್ನು ಸಮೀಪಿಸಿ, ಒಂದು ಮೊಲ ಅಥವಾ ಇಲಿಯಂತೆ ಕಡಿದು ಕಡಿದು ತಿನ್ನುವುದಿಲ್ಲ. ಆ ಸೂಕ್ಷ್ಮಜೀವಿಗಳಿಗೆ ಬಾಯಿ ಇಲ್ಲ. ಆಹಾರನಾಳವಿಲ್ಲ. ಪಚನಾಂಗಗಳೂ ಇಲ್ಲ. ಪ್ರಾಣಿವರ್ಗದಲ್ಲಿಯೇ ಅತ್ಯಂತ ಕೆಳಮಟ್ಟದ ಹಾಗೂ ಸರಳ ಜೀವಿಗಳೆನಿಸಿಕೊಂಡ 'ಪ್ರೋಟೋಜೋವಾ' (Protozoa) ಎಂಬ ಏಕಕಣ ಜೀವಿಗಳು ಮಾತ್ರ ಇದಕ್ಕೆ ಸ್ವಲ್ಪ ಅಪವಾದ. ಕಣೈಕ ಜೀವಿಗಳಲ್ಲಿ ಒಂದೊಂದೇ ಕೋಶವಿರುತ್ತದೆ. ಕಾಲಕಾಲಕ್ಕೆ ದೊರೆತ ಯಾವುದೇ ಬಗೆಯ ಆಹಾರವಸ್ತುಗಳನ್ನು ಅಥವಾ ಅವುಗಳ ಸಾರವನ್ನು ತಮ್ಮ ಇಡೀ ದೇಹದಿಂದ ಹೀರಿಕೊಂಡು ನಂತರ ನಿರುಪಯುಕ್ತವಾದ ವಸ್ತುಗಳನ್ನು ವಿಸರ್ಜಿಸುತ್ತವೆ. ಆದರಿಂದಲೇ ಈ ಕಣೈಕಜೀವಿಗಳು ಆಹಾರವನ್ನು ಅತಿ ಶೀಘ್ರದಲ್ಲಿ ಸೇವಿಸಬಲ್ಲವು. ಹಾಲನ್ನು ಹುಳಿಯಾಗಿಸಬಲ್ಲ ಒಂದು ದಂಡಾಣು (Bacteria) ಪ್ರತಿತಾಸಿಗೂ ತನ್ನ ತೂಕದ ಎರಡರಷ್ಟು ಸಕ್ಕರೆಯ ಅಂಶವನ್ನು 'ಲ್ಯಾಕ್ಟಿಕ್ ದ್ರಾವಕ'ಕ್ಕೆ ಪರಿವರ್ತಿಸಬಲ್ಲದು. ಅದಕ್ಕೆ ಎಷ್ಟು ಆಹಾರ ಸೇವಿಸಿದರೂ ತೃಪ್ತಿಯೆಂಬುದೇ ಇಲ್ಲ. ಒಂದೊಂದು ಪ್ರಸಂಗದಲ್ಲಿ ಅಂತಹ ದಂಡಾಣುಗಳು, ಒಂದು

ಇದ್ದದ್ದು ಎರಡು, ಎರಡಿದ್ದದ್ದು ನಾಲ್ಕಾಗಿ, ಈ ಹೊಸ ಜೀವಿಗಳು ಮುಂದೆ ಆ ಆಹಾರವನ್ನು ಸೇವಿಸುತ್ತ ಹೋಗುತ್ತವೆ.

ಪರಸ್ಪರ ಅವಲಂಬನ

ಅಂದ ಮೇಲೆ ಪ್ರತಿ ಘಳಿಗೆ ಘಳಿಗೆಗೂ ಒಂದು ಹಿಡಿ ಮಣ್ಣಿನಲ್ಲಿರುವ ಅಸಂಖ್ಯಾತ ಜೀವಿಗಳು ಆಹಾರ ಸೇವನೆಯ ಕಾರ್ಯವನ್ನು ಬಿಡುವಿಲ್ಲದೆ ನಿರಂತರವಾಗಿ ನಡೆಸಿಕೊಂಡು ಹೋಗುತ್ತಲೇ ಇರುತ್ತವೆ. ಅವು ಹಾಗೆ ಮಾಡದೇ ಹೋಗದಿದ್ದರೆ ನಾವೂ ನೀವೂ ಈ ಭೂಮಿಯ ಮೇಲೆ ಇರಲು ಸಾಧ್ಯವೇ ಇರುತ್ತಿರಲಿಲ್ಲ, ಅಷ್ಟೇ ಏಕೆ? ಈ ಭೂಮಿಯ ಮೇಲೆ ಯಾವುದೇ ಬಗೆಯ ಸಸ್ಯ-ಪ್ರಾಣಿ-ಮಾನವನಂತಹ ಜೀವಿಗಳೂ ಇರುವುದೇ ಸಾಧ್ಯವಿರುತ್ತಿರಲಿಲ್ಲ. ನಮಗೆಲ್ಲ ಗೊತ್ತಿದ್ದಂತೆ ಎಲ್ಲ ಪ್ರಾಣಿಗಳೂ ಸಸ್ಯಗಳ ಮೇಲೆಯೇ ಅವಲಂಬಿಸಿ ಜೀವಿಸುತ್ತವೆ. ಮಾಂಸಾಹಾರಿ ಪ್ರಾಣಿಗಳಾದರೂ ಅಷ್ಟೇ! ಏಕೆಂದರೆ ಅವು ಸಸ್ಯಾಹಾರವನ್ನೇ ಸೇವಿಸಿ ಬದುಕುವ ಪ್ರಾಣಿಗಳ ಮೇಲೇ ಜೀವಿಸುವುವಲ್ಲವೇ? ಆದರೆ ಸಸ್ಯಗಳಿಗೆ ಮಾತ್ರ ಆಹಾರನೇರವಾಗಿ ಇತರ ಪ್ರಾಣಿಗಳಿಂದಾಗಲಿ ಅಥವಾ ಸಸ್ಯಗಳಿಂದಾಗಲಿ ದೊರೆಯುವದಿಲ್ಲ. ಸತ್ತ ಹಾಗೂ ಕೊಳೆತ ಸಸ್ಯಭಾಗಗಳು ಜೀವಂತ ಸಸ್ಯಗಳಿಗೆ ಆಹಾರ ರೂಪದಲ್ಲಿ ನೇರವಾಗಿ ಸೇವಿಸಲು ಯೋಗ್ಯವಿರುವುದಿಲ್ಲ. ಆ ಸತ್ತ ಹಾಗೂ ಕೊಳೆತ ವಸ್ತುಗಳನ್ನು ಸೂಕ್ಷ್ಮಾಣುಗಳು ಮೊದಲು ಸೇವಿಸಿ ನಂತರ ವಿವಿಧ ಸರಳ ರಾಸಾಯನಿಕ ವಸ್ತುಗಳನ್ನಾಗಿ ಪರಿವರ್ತಿಸಿದಾಗಲೇ, ಮುಂದೆ ಸಸ್ಯಗಳಿಗೆ ಅವು ಯೋಗ್ಯ ಆಹಾರವಾಗಿ ಪರಿಣಮಿಸುವುವು. ಈ ಸೂಕ್ಷ್ಮಾಣು-ಗಳಾದರೂ ಆ ಸತ್ತ ಹಾಗೂ ಕೊಳೆತ ಸಸ್ಯ-ಪ್ರಾಣಿ-ಮಾನವರಂತಹ ಜೀವಿಗಳಲ್ಲಿರುವ ಕ್ಲಿಷ್ಟ ಸೇಂದ್ರಿಯ ಘಟಕಗಳನ್ನು ಮೊದಲು ವಿಭಜಿಸಿ ನಂತರ ಕ್ರಮೇಣ ಬಗೆಬಗೆಯ ಸರಳ ರಾಸಾಯನಿಕ ವಸ್ತುಗಳನ್ನಾಗಿ ಮಾರ್ಪಡಿಸುವುವು. ಹೀಗಾದ ಮೇಲೆ ಇತರ ಜೀವಂತ ಸಸ್ಯಗಳು ಆ ಸರಳ ವಸ್ತುಗಳನ್ನು ಆಹಾರರೂಪದಲ್ಲಿ ಸೇವಿಸಬಲ್ಲವು.

ಇನ್ನೂ ಒಂದು ಸಂಗತಿ. ಅನೇಕ ಜನರು ಈ ಸೂಕ್ಷ್ಮಾಣು ಜೀವಿಗಳನ್ನು 'ಮಾನವನ ವೈರಿ' ಗಳೆಂದು ಅನೇಕ ಸಲ ಭಾವಿಸುವುದೂ ಉಂಟು; ಮತ್ತು ಕೆಲ ವಿಷವಸ್ತುಗಳನ್ನು ಉಪಯೋಗಿಸಿ ಆ ಸೂಕ್ಷ್ಮಾಣುಗಳನ್ನು ಕಂಡಲ್ಲೇ ನಾಶಪಡಿಸಬೇಕೆಂತಲೂ ಹೇಳುವುದುಂಟು.

ಅದರ ಕಾರಣ ಇಷ್ಟೆ! ಕೆಲವು ಬಗೆಯ ಸೂಕ್ಷ್ಮಾಣು ಜೀವಿಗಳು ಸಾಂಸರ್ಗಿಕ ರೋಗಗಳನ್ನು ಉಂಟು ಮಾಡುವುವು, ಎಂಬುದರಿಂದ. ಆದರೆ ಅಂತಹ ರೋಗಕಾರಕ ಜೀವಾಣುಗಳು ಮಣ್ಣಿನಲ್ಲಿ ಅತಿ ಅಲ್ಪ ಪ್ರಮಾಣದಲ್ಲಿಯೇ ಇರುತ್ತವೆಯೆಂದು ಹೇಳಬಹುದು.

ಸೂಕ್ಷ್ಮಾಣು ಜೀವಿಗಳಿಗೆ ಆಹಾರ

ಉಪಯುಕ್ತ ಹಾಗೂ ನಿರೋಗಕಾರಕ ಸೂಕ್ಷ್ಮಾಣು ಜೀವಿಗಳಿಗೆ ಎಲ್ಲ ವಿಧದಿಂದಲೂ ಸಾಕಷ್ಟು ಆಹಾರವೊದಗಿಸಿ ಪೋಷಿಸುವುದು ನಮಗೆ ಹೆಚ್ಚು ಲಾಭವೇ ಆದೀತು! ಇದರ ಅರ್ಥ- ಭೂಮಿಯ ಸಾರವನ್ನು ಹೆಚ್ಚಿಸುವುದು ಅಥವಾ ಭೂಮಿಗೆ ಸಾಕಷ್ಟು ಗೊಬ್ಬರ ಒದಗಿಸುವುದು. ನಮ್ಮ ಇಂದಿನ ಹೊಲ, ಗದ್ದೆ, ತೋಟಗಳಲ್ಲಿ ಒಂದೊಂದು ಹಿಡಿಮಣ್ಣಿನಲ್ಲಿಯೂ ಸಾಕಷ್ಟು ಸತ್ತ ಹಾಗೂ ಕೊಳೆಯುವ ಸೇಂದ್ರಿಯ ವಸ್ತುಗಳು ಇರುವಂತೆ ನೋಡಿಕೊಳ್ಳುವುದು ಅವಶ್ಯ. ಆದರಿಂದ ಮಣ್ಣಿನಲ್ಲಿರುವ ಸಾಮಾನ್ಯವಾಗಿ ಇರುವ ೨ ರಿಂದ ೧ ಕೋಟಿ ದಂಡಾಣುಗಳು ಸುಖ ಸಮೃದ್ಧಿಯಿಂದ ಇದ್ದು, ಆ ಸತ್ತ ಹಾಗೂ ಕೊಳೆಯುವ ಸೇಂದ್ರಿಯ ವಸ್ತುಗಳನ್ನು ಇತರ ಸಸ್ಯಗಳಿಗೆ ನಿರಂತರವಾಗಿ ಒಳ್ಳೆಯ ಆಹಾರವಾಗುವಂತೆ ಪರಿವರ್ತಿಸುವುದರಲ್ಲಿ ಕಾರ್ಯತತ್ಪರವಾಗುವ ಹಾಗೆ ಮಾಡುವುದು ಸಾಧ್ಯವೂ ಇದೆ. ಅವಶ್ಯವೂ ಇರುತ್ತದೆ. ಇದನ್ನೇ ನಾವು ಭೂಮಿಯನ್ನು ಫಲವತ್ತಾಗಿ ಮಾಡುವುದು ಅಥವಾ ಭೂಮಿಯ ಸಾರವನ್ನು ಹೆಚ್ಚಿಸುವುದು ಎಂದು ಹೇಳುತ್ತೇವೆ. ಇದನ್ನು ನಮ್ಮ ಜನರು ಕಾಲಾನುಕಾಲದಿಂದಲೂ ಮಾಡಿಕೊಂಡು ಬರುತ್ತಿದ್ದಾರೆ. ಕೆಲಮಟ್ಟಿಗೆ ಇಂದಿನ ರಾಸಾಯನಿಕ ಗೊಬ್ಬರದಂತಹ ವಸ್ತುಗಳೂ ಭೂಮಿಯಲ್ಲಿರುವ ಸೂಕ್ಷ್ಮಾಣು ಜೀವಿಗಳು ಮಾಡುವ ಕೆಲಸವನ್ನೇ ಮಾಡಬಲ್ಲವು.

ಈಗೀಗ ರಾಸಾಯನಿಕ ಗೊಬ್ಬರಗಳ ಮಿತಿಮೀರಿದ ಬಳಕೆಯ ಬಗ್ಗೆ ಅಲ್ಲಲ್ಲಿ ವಿರೋಧ ಕಂಡುಬಂದು ಜನತೆ ಇನ್ನು ಮೇಲೆ ಪುನಃ ಮೊದಲಿನಂತೆಯೇ 'ಕಂಪೋಸ್ಟ' ಮತ್ತು ಹಸಿರೆಲೆಗಳ ಗೊಬ್ಬರವನ್ನೇ ಹೆಚ್ಚೆಚ್ಚು ಬಳಸಬೇಕೆಂದು ಒತ್ತಿ ಹೇಳುವ ಪ್ರಯತ್ನಗಳು ನಡೆಯುತ್ತಿವೆ. ಇದರ ಉದ್ದೇಶವಾದರೂ ಇಷ್ಟೇ. ನೈಸರ್ಗಿಕ ಗೊಬ್ಬರ ಇಲ್ಲವೆ ಹಸಿರೆಲೆಗಳಂತಹ ವಸ್ತುಗಳನ್ನು ಬಳಸದೆ ಅನೇಕ ವರ್ಷಗಳ ವರೆಗೆ ಬರೀ ರಾಸಾಯನಿಕ ಗೊಬ್ಬರವನ್ನೇ ಉಪಯೋಗಿಸುತ್ತ ಹೋದರೆ ಭೂಮಿಯ ಸಾರ ಕುಗ್ಗುವುದು ಎಂಬುದೇನೋ ನಿಜ. ಆದರೆ ಈ ರಾಸಾಯನಿಕ ಗೊಬ್ಬರವನ್ನು ಹಿತಮಿತವಾಗಿ ಹಾಗೂ ಯೋಗ್ಯ ರೀತಿಯಲ್ಲಿ ಕಾಲಮಾನಗಳಿಗನುಸರಿಸಿ ಉಪಯೋಗಿಸಿದ್ದೇ ಆದರೆ ಭೂಮಿಯ ಸಾರಕ್ಕೆ ಅಥವಾ ಫಲವತ್ತೆಗೆ ಏನೂ ಪ್ರತಿಕೂಲವಾಗುವುದಿಲ್ಲ. ಭೂಮಿಯಲ್ಲಿ ಅಡಗಿರುವ ಸೂಕ್ಷ್ಮಾಣುಗಳ ಜೀವವನ್ನು ಸಂಪೂರ್ಣ ನಿರ್ನಾಮಮಾಡಬೇಕಾದರೆ ಸಾಕಷ್ಟು ಆಳದ ವರೆಗೆ ಇಡೀ ಮಣ್ಣನ್ನು ಶುದ್ಧಗೊಳಿಸಬೇಕಾಗುತ್ತದೆ. ಅಂದರೆ ನಿಷ್ಕ್ರಿಯಗೊಳಿಸ (Sterlise) ಬೇಕಾಗುತ್ತದೆ. ಸ್ವಲ್ಪ ಪ್ರಮಾಣದಲ್ಲಿ ಕೂಡ ಇದನ್ನು ಪ್ರಯೋಗ ಮಂದಿರಗಳಲ್ಲಿ ಪೂರ್ಣ ಕಾರ್ಯಗತಗೊಳಿಸುವುದು

ಕಠಿಣ. ಅಂದ ಮೇಲೆ ನಿಸರ್ಗದಲ್ಲಿ ಬಹು ವ್ಯಾಪಕವಾಗಿರುವ ಈ ಭೂಮಿ ಅಥವಾ ಮಣ್ಣನ್ನೆಲ್ಲ ಪರಿಶುದ್ಧಿಗೊಳಿಸುವುದು (ನಿಷ್ಕ್ರಿಯಗೊಳಿಸು) ಹೇಗೆ ಸಾಧ್ಯ? ಸೇಂದ್ರಿಯ ರಾಸಾಯನಿಕ ಗೊಬ್ಬರದ (ಕೃತಕಗೊಬ್ಬರ) ಬಳಕೆಯನ್ನು ಪ್ರೋತ್ಸಾಹಿಸುವ ತಜ್ಞರ ಅಭಿಪ್ರಾಯದಲ್ಲಿ—ಸೂಕ್ಷ್ಮಾಣು ಜೀವಿಗಳು ಸಹಜವಾಗಿಯೇ ಇರುವ ಭೂಮಿಯಲ್ಲಿ ಆ ಸೂಕ್ಷ್ಮಾಣುಗಳಿಗೆ ಕೃತಕ ಇಲ್ಲವೆ ನೈಸರ್ಗಿಕ ಗೊಬ್ಬರದ ರೂಪದಲ್ಲಿ ಆಹಾರವನ್ನು ಒದಗಿಸುವುದಷ್ಟೇ ನಮ್ಮ ಕೆಲಸ. ಮುಂದೆ ಅವು ತಾವಾಗಿಯೇ ವೃದ್ಧಿಯಾಗುತ್ತ ಹೋಗುತ್ತವೆ. ಮೇಲಾಗಿ ಅತಿ ಶೀಘ್ರಗತಿಯಲ್ಲಿಯೂ ವೃದ್ಧಿಹೊಂದುತ್ತವೆ. ಒಂದು ಸೂಕ್ಷ್ಮಾಣುಸೂಕ್ಷ್ಮ ಆಹಾರ, ಉಷ್ಣತೆ, ವಾಯು, ನೀರು ಇತ್ಯಾದಿ ಯೋಗ್ಯ ಸನ್ನಿವೇಶ ದೊರೆತಾಗ ಕೇವಲ ಆರೆಂಟು ತಾಸುಗಳಲ್ಲಿ ೧.೬ ಕೋಟಿಗಳಷ್ಟು ವೃದ್ಧಿಯಾಗುತ್ತವೆಯೆಂದು ಲೆಕ್ಕ ಹಾಕಿದರೆ ಅದೇನೂ ಅತಿಶಯೋಕ್ತಿಯಲ್ಲ.

ಕೃತಕ ಗೊಬ್ಬರಗಳ ಅವಶ್ಯಕತೆ

ಈ ಸೇಂದ್ರಿಯ ಅಥವಾ ಕೃತಕ ಗೊಬ್ಬರಗಳ (ಭೂಸಾರವರ್ಧಿನಿ) ಬಳಕೆಯ ಹಾಗೂ ಅವಶ್ಯಕತೆಯ ಬಗ್ಗೆ ಇಂದು ಇಷ್ಟೊಂದು ಒತ್ತಿ ಹೇಳುವ ಕಾರಣ ಇಷ್ಟೇ. ಕೆಲವು ದೇಶಗಳಲ್ಲಿ ಅಥವಾ ರಾಜ್ಯಗಳಲ್ಲಿ, ವಾಹನಗಳೂ ಟ್ರ್ಯಾಕ್ಟರ್ ಮುಂತಾದ ಯಾಂತ್ರಿಕ ಸಾಧನ ಸಲಕರಣೆಗಳೂ ವಿಶೇಷವಾಗಿ ಒಕ್ಕಲತನದ ಬಳಕೆಗೆ ಬಂದಮೇಲೆ ದನಕರುಗಳಂತಹ ಪ್ರಾಣಿಗಳ ಬಳಕೆ ಕುಗ್ಗುತ್ತ ಬರುತ್ತದೆ. ಅದೂ ಅಲ್ಲದೆ ಆ ಪ್ರಾಣಿಗಳ ಮೂತ್ರ ಸಗಣಿ ಇತ್ಯಾದಿಗಳು ಉರುವಲು (ಕುಳ್ಳು, ಬೆರಣಿ ಇತ್ಯಾದಿ) ಗಳಿಗಾಗಿ ಉಪಯೋಗಿಸಲ್ಪಟ್ಟು ಅವುಗಳಿಂದ ಉತ್ಪಾದಿತವಾಗುತ್ತಿದ್ದ ಅಪಾರ ಗೊಬ್ಬರದ ಪೂರೈಕೆ ಕಡಿಮೆಯಾಗುತ್ತ ಬರುತ್ತಿದೆ. ಅದರ ಪರಿಣಾಮವೇನಾಗುತ್ತದೆ? ಈ ಅಪಾರ ಪ್ರಾಣಿಜನ್ಯ ಗೊಬ್ಬರಕ್ಕೆ ಬದಲಾಗಿ ಮತ್ತೊಂದು ಸೂಕ್ತ ಗೊಬ್ಬರವನ್ನು ಪೂರೈಸುವ ಒಂದು ಪ್ರಾಯೋಗಿಕ ಸಮಸ್ಯೆ ಎದ್ದು ನಿಲ್ಲುತ್ತದೆ. ಇದರಿಂದ ಇಂದು ಮತ್ತೊಮ್ಮೆ 'ಕಂಪೋಸ್ಟ್' ಗೊಬ್ಬರಗಳಿಗೆ ಎಂದೂ ಇಲ್ಲದ ಅವಶ್ಯಕತೆ ಹಾಗೂ ವಿಶೇಷ ಮಹತ್ವ ಬಂದಿದೆ.

ಒಕ್ಕಲುತನಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳಲ್ಲಿ 'ರೋಗಪೀಡಿತವಾದ ಮಣ್ಣು' (Sick Soil) ಒಂದು ಅಂಶ. ಇಂತಹ ಸಮಸ್ಯೆಯು ಕೂಡ ಭೂಮಿಯಲ್ಲಿರುವ ಸೂಕ್ಷ್ಮಾಣುಜೀವಿಗಳ ಪರಿಶೀಲನೆ' ಯೆಂಬ (microbe analysis) ಹೊಸ ವಿಜ್ಞಾನ ಶಾಖೆಯಿಂದ ಕ್ರಮೇಣ ಯೋಗ್ಯ ಪರಿಹಾರ ಪಡೆಯಬಹುದು. ಕಾಲಕ್ರಮದಲ್ಲಿ ಈ ಇಡೀ ಭೂಮಿಯ ಸಾರ ಅಥವಾ ಫಲವತ್ತೆಯನ್ನು ಬಹುಮಟ್ಟಿಗೆ ಮತ್ತು ಬಹುವ್ಯಾಪಕವಾಗಿ ವೃದ್ಧಿಗೊಳಿಸುವ ಯೋಜನೆಗಳನ್ನು ವಿಧಿವಿಧಾನಗಳನ್ನು ಗುರುತಿಸಿಕೊಳ್ಳಲಾಗುತ್ತಿದೆ. ಆಗ ಈ ಭೂಮಿಯ ಮೇಲಿರುವ ಮಾನವ ಜನಾಂಗಕ್ಕೆಲ್ಲ ಸಾಕಷ್ಟು ಯೋಗ್ಯ ಹಾಗೂ ಇಚ್ಛಿತ ಪ್ರಮಾಣದಲ್ಲಿ ಆಹಾರವನ್ನು ಒದಗಿಸುವ ಕಾರ್ಯವನ್ನೇ ಸುಗಮಗೊಳಿಸುವಂತಹ ದಿನವೊಂದು ಬಂದೀತೆಂದು ಹಲವು ಪರಿಣತರು ಆಶಾವಾದಿಗಳಾಗಿದ್ದಾರೆ.

ಸೂಕ್ಷ್ಮಾಣು ಜೀವಿಗಳನ್ನು ಪರಿಶೀಲಿಸುವ ಇಂದಿನ ಪ್ರಯತ್ನಗಳಲ್ಲಿ ಒಂದು ಹೊಸ ವಿಜ್ಞಾನ ಶಾಖೆಯೇ ಹುಟ್ಟಿ ಬರುತ್ತಿದೆ. ವಿಜ್ಞಾನದ ಯಾವ ಒಂದು ಹೊಸ ಶಾಖೆ ಜನ್ಮ ತಾಳಬೇಕಾದರೂ ಸಾಕಷ್ಟು ಪರಿಶ್ರಮ ಹಾಗು ಕಾಲಾವಕಾಶಬೇಕು. ಇದೀಗ ಕೇವಲ ಹತ್ತಿಪ್ಪತ್ತು ವರ್ಷಗಳಿಂದೀಚೆಗೆ ಮಣ್ಣಿನಲ್ಲಿ ರೋಗ ಪ್ರತಿಬಂಧಕ ಶಕ್ತಿಯುಳ್ಳ ಸೂಕ್ಷ್ಮಾತಿ ಸೂಕ್ಷ್ಮ ಜೀವಿಗಳ ಬಗ್ಗೆ ಒಂದು ಆಳವಾದ ಹಾಗೂ ವಿಶೇಷವಾದ ಶೋಧ ನಡೆಯುತ್ತ ಬಂದಿದೆ.

ಉಪದ್ರವಕಾರಿ ದಂಡಾಣುಗಳ ವಿನಾಶ

ಕೆಲವೊಂದು ಜೀವಿ ಅಥವಾ ಅದರ ವಸ್ತು ಇನ್ನೊಂದು ಜೀವಿಗೆ ವಿಷರೂಪದಲ್ಲಿರುವುದು ಕಂಡುಬಂದಿದೆ; ಅಂದರೆ ಕೆಲವು ರೋಗಕಾರಕ ಅಥವಾ ಉಪದ್ರವಕಾರಿಯಾದ ದಂಡಾಣುಗಳನ್ನು ನಾಶಪಡಿಸುವ, ಇಲ್ಲವೆ ಅವುಗಳ ಬೆಳವಣಿಗೆಯನ್ನು ಕುಂಠಿತಗೊಳಿಸುವ ಕೆಲವು ಜೀವಿಗಳೂ ಉಂಟು. ಇಂತಹ ಜೀವಿಗಳಲ್ಲಿ ಹಲವು ನಿರ್ದಿಷ್ಟ ಬಗೆಯ ಪ್ರತಿವಿಷವಸ್ತುಗಳನ್ನು ಉತ್ಪಾದಿಸುವ ಸಾಮರ್ಥ್ಯವೂ ಇದೆ. ಅಂತಹ ಸೂಕ್ಷ್ಮಜೀವಿಗಳಿಂದ ಕೆಲವು ವಿಶಿಷ್ಟ ಬಗೆಯ ಪ್ರತಿವಿಷವಸ್ತುಗಳನ್ನು ತಯಾರಿಸುವುದೂ ಒಂದು ಮುಖ್ಯ ಹಾಗೂ ಉಪಯುಕ್ತ ಕಾರ್ಯವಾಗಿರುತ್ತದೆ. ಇದುವರೆಗೆ ಮಣ್ಣಿನಲ್ಲಿರುವ ಅನೇಕಾನೇಕ ಸೂಕ್ಷ್ಮ ಜೀವಿಗಳಿಂದ ಸುಮಾರು ೨೦೦ ಬಗೆಯ ರೋಗನಿವಾರಕ ಶಕ್ತಿಯುಳ್ಳ ಪ್ರತಿವಿಷವಸ್ತುಗಳನ್ನು ಉತ್ಪಾದಿಸಲಾಗಿದೆ. ಇದರಿಂದ ನಿಸರ್ಗಜೀವಿಗಳನ್ನು ನಮಗೆ ಬೇಕು ಬೇಕಾದಂತೆ ಪಳಗಿಸಿ ಉಪಯೋಗಿಸಿಕೊಳ್ಳುವುದೇ ಆಗಿದೆ. ಅದರ ಪರಿಣಾಮ ಅಥವಾ ಫಲಿತಾಂಶಗಳು ಒಕ್ಕಲುತನಕ್ಕೆ ಎಷ್ಟು ಮಹತ್ವ ಹಾಗೂ ಉಪಯುಕ್ತವೋ, ವೈದ್ಯಕೀಯ ರಂಗಕ್ಕೂ ಅಷ್ಟೇ ಉಪಯುಕ್ತವಾಗಿವೆ. ಇದು ವರೆಗೆ ಕಂಡುಹಿಡಿಯಲಾಗಿರುವ ರೋಗನಿವಾರಕ ಅಥವಾ ರೋಗ ಪ್ರತಿಬಂಧಕ ವಸ್ತುಗಳು (Antibodies) ಈಗಾಗಲೇ ಎಷ್ಟೋ ಮನುಷ್ಯರು ಪ್ರಾಣಿಗಳು ಮತ್ತು ಸಸ್ಯಗಳ ಮೇಲೂ ಬಹಳ ಫಲಕಾರಿಯಾದ ಪರಿಣಾಮವನ್ನುಂಟು ಮಾಡಿವೆ.

ಒಟ್ಟಿನಲ್ಲಿ ಮನುಷ್ಯರಾದ ನಾವು ಇಂದಿನ ಜಗತ್ತಿನಲ್ಲಿ ಯಾವುದೇ ವಸ್ತುವಿನ ಗಾತ್ರ, ಹಿರಿಮೆ,ಸಾಮರ್ಥ್ಯ, ಉಪಯುಕ್ತತೆ, ಇತ್ಯಾದಿಗಳ ಬಗ್ಗೆ ಇರುವ ಕೆಲವು ಪೂರ್ವಗ್ರಹ ಹಾಗೂ ಸಂದೇಹಗಳನ್ನು ದೂರ ಸರಿಸುವ ಇಲ್ಲವೆ ಸಂಪೂರ್ಣ ತೊಡೆದುಹಾಕುವ ಮನಃಸ್ಥೈರ್ಯ ಪಡೆಯಲೆತ್ನಿಸಬೇಕು.

ಇಂದಿನ ಸೂಕ್ಷ್ಮದರ್ಶಕವು ಒಂದು 'ರಂಧ್ರ' ಅಥವಾ 'ಕಿಟಕಿ' ಯಂತೆ ಇದೆಯೆಂದು ಭಾವಿಸಬಹುದು. ಅದರಲ್ಲಿ ಕಣ್ಣಿಟ್ಟು ನೋಡಿದರೆ— ನಾವು ದೂರದರ್ಶಕದಲ್ಲಿ ನೋಡಿದಾಗ ಕಾಣುವ ಒಂದು ಅಪಾರ ಹಾಗೂ ವಿಶಾಲ ಜಗತ್ತಿನಷ್ಟೇ— ಬಹು ವ್ಯಾಪಕವಾಗಿಯೂ ವೈವಿಧ್ಯಪೂರ್ಣವಾಗಿಯೂ ಇರುವ ಸೂಕ್ಷ್ಮಜೀವಿಗಳ ಒಂದು ಅಪಾರ ಜಗತ್ತೇ ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತದೆ.

ಹೀಗೆ ನಾವು ತಿರುಗಾಡುವಾಗ ಅಡಿಗಡಿಗೂ ಹೆಜ್ಜೆಯಿಡುವ ಪಾದದಡಿಯೇ ಇರುವ ಮಣ್ಣಿನಲ್ಲಿ (ಭೂಮಿಯಲ್ಲಿ) ಈ ಸೂಕ್ಷ್ಮಾತಿ ಸೂಕ್ಷ್ಮ ಜೀವಿಗಳ ಜಗತ್ತು ಹಾಗೂ ಅವುಗಳ ನಿರಂತರ ಕ್ರಿಯೆಗಳಿಲ್ಲದೆ ನಾವು ಸ್ವಲ್ಪಕಾಲವಾದರೂ ಉಳಿಯುವುದೇ ಸಾಧ್ಯವಿಲ್ಲ. ಆ ಸೂಕ್ಷ್ಮ ಜೀವಿಗಳ ಜಗತ್ತನ್ನು ಈಗೀಗ ಅತಿಕ್ರಮಿಸಿ, ಪೃಥಕ್ಕರಿಸಿ ಪರಿಶೀಲಿಸುವುದಕ್ಕೆ ಆರಂಭ ಮಾಡಲಾಗಿದೆ. ಆ ಸೂಕ್ಷ್ಮಾತಿಸೂಕ್ಷ್ಮ ಜೀವಿಗಳ ಅಪಾರ ಜಗತ್ತಿನಲ್ಲಿ ನಮಗಾಗಿ ಇನ್ನೂ ಏನೇನು ವೈವಿಧ್ಯ-ವೈಚಿತ್ರ್ಯಗಳು ಕಾದಿವೆಯೋ ಯಾರು ಬಲ್ಲರು?

ಭಾರತೀಯ ವಾಙ್ಮಯದಲ್ಲಿ ರಾಧೆ

ಲೇಖಿಕೆ:
ಶ್ರೀಮತಿ ಜೆ. ಜಿ. ಎಸ್. ದೇವಿ
ಗೃಹವಿಜ್ಞಾನ ಕಾಲೇಜ ಕೊಲ್ಹಾಪೂರ

ಭಕ್ತಿಕಾವ್ಯದೊಡನೆ ಶೃಂಗಾರಸಮ್ಮಿಲಿತವಾದುದನ್ನು ನಾವು ಅತಿ ಪ್ರಾಚೀನ ಕಾಲದಿಂದಲೂ ಕಾಣುತ್ತೇವೆ. ಋಗ್ವೇದದ ೧೦-೧೨೬—೨೫ ನೆಯದರಲ್ಲಿ ಪರಕೀಯಾ ಪ್ರೇಮದ ಸಮರ್ಥನೆಯಿದೆ. ಅಥರ್ವವೇದದ ೯-೫-೨೭-೨೪ ರಲ್ಲಿ ಅದರ ಸ್ಪಷ್ಟ ವಿವರಣೆ ಇದೆ. ಬೌದ್ಧ ಧರ್ಮದ ಅಂತಿಮಕಾಲದಲ್ಲಿ ವಜ್ರಯಾನ ಸಂಪ್ರದಾಯದ ಪ್ರಭಾವ ಹೆಚ್ಚಾಗಿ 'ಪಂಚಮಕಾರ ಸೇವನೆ'ಯ ಪ್ರಚಾರ ಹೆಚ್ಚಾಗಿತ್ತು. ವೈಷ್ಣವ ಧರ್ಮದಲ್ಲಿ ಸ್ತ್ರೀ ಪುರುಷನ ಅರ್ಧಾಂಗಿನಿ ದಿವ್ಯಶಕ್ತಿಯ ರೂಪದಲ್ಲಿ ಕಾಣಿಸಿಕೊಂಡಳು. ಭಕ್ತಿಯ ಪರಾಕಾಷ್ಠೆಯನ್ನು ತಲುಪಲು ಅನೇಕ ಸೋಪಾನಗಳೇರಬೇಕಾಗುವದು. ಭಾಗವತದ ಶ್ಲೋಕ ಒಂದರಲ್ಲಿ ಶ್ರದ್ಧೆ ಹಾಗು ರತಿಯನ್ನು ಭಕ್ತಿಯ ಕ್ರಮೇಣ ಸೋಪಾನ ಎಂಬರ್ಥದ ಶ್ಲೋಕ ಒಂದಿದೆ.

ಸತಾಂ ಪ್ರಸಂಗಾನ್ಮಮ ವೀರ್ಯಸಂವಿದೊ
 ಭವಂತಿ ಹೃತ್ಕರ್ಣ ರಸಾಯನಾಃ ಕಥಾಃ ।
ತಜ್ಜೋಷಣಾದಶ್ವಪವರ್ಗವರ್ತ್ಮನಿ ಶ್ರದ್ಧಾರತಿ
 ಭಕ್ತಿರನುಕ್ರಮಿಷ್ಯತಿ ॥

ಅದೇ ರೀತಿ ಕವಿಕಾಲಿದಾಸನ ಜಗತಃ ಪಿತರೌ ವಂದೇ ಪಾರ್ವತಿ ಪರಮೇಶ್ವರೌ ಎಂಬುದು ಕೂಡ ಅದೇ ತಾದಾತ್ಮ್ಯವನ್ನು ಎತ್ತಿ ತೋರಿಸುತ್ತದೆ. ಕನ್ನಡದ ವಚನಸಾಹಿತ್ಯದಲ್ಲಿ ಶಿವಶರಣ-ಶರಣೆಯರ, ಸತಿ-ಪತಿ ಭಾವದ, ದಾಸರ ಅದೇ ಧಾಟಿಯ ಸಾಹಿತ್ಯಕ್ಕೇನೂ ಕೊರತೆಯಿಲ್ಲ. ಅದ್ದರಿಂದ ರಾಧೆ ಈ ಭಕ್ತಿಕಾವ್ಯದ ಸಾಹಿತ್ಯದ ತತ್ವಪ್ರಣಾಲಿಯ ಧ್ರುವತಾರೆಯನ್ನಲಡ್ಡಿಯಿಲ್ಲ.

ಮಧ್ಯಕಾಲೀನ ಸಾಹಿತ್ಯವನ್ನು ಒಂದೇ ಶಬ್ದದಲ್ಲಿ ವರ್ಣಿಸಬೇಕೆಂದಿದ್ದರೆ ಅದು ನಿಸ್ಸಂಶಯವಾಗಿ 'ರಾಧಾ' ಶಬ್ದವೇ ಆಗಿದೆಯೆಂದು ಹೇಳಬಹುದು. ರಾಧೆ ಎಂಬ ಶಬ್ದ ಮಧ್ಯಕಾಲೀನ ಸಾಹಿತ್ಯಕ್ಕೆ ಪ್ರೇರಣಾಶಕ್ತಿಯಾಗಿದೆ, ಪ್ರಾಣಪದಕದಂತಿದೆ, ಹಾಗೆಯೇ ಜೀವಂತ ರಕ್ತಮಾಂಸಯುಕ್ತವಾದ ನಾರೀ ಪ್ರತಿಮೂರ್ತಿಯಾಗಿದೆ, ಆ ಶರೀರದಲ್ಲಿ ಅಪೂರ್ವ ಗಂಧವಿದೆ, ಆ ದೇಹದ ಆತ್ಮದಲ್ಲಿ ದಿವ್ಯ ಪ್ರೇಮದ ಅಪ್ರತಿಮ ಕಾಂತಿಯಿದೆ. ಆರನೆಯ ಶತಮಾನದಿಂದ ೧೦ ನೆಯ ಶತಮಾನದ ಭಾರತೀಯ ವಾಙ್ಮಯದಲ್ಲಿ ಈ ಅನುಪಮವಾದ ನಾರೀರತ್ನದ ನೆರಳು ಬೆಳಕಿನ ಅಪೂರ್ವ ಸೃಷ್ಟಿಯ ಅನರ್ಘ್ಯ ಭಾಂಡಾರವಿದೆ.

ಶಬ್ದದ ಉತ್ಪತ್ತಿ

'ರಾಧೆ' ಈ ಶಬ್ದದ ಉತ್ಪತ್ತಿ ಎಂತಾಯಿತು, ಎಂಬುದು ಸಾಹಿತ್ಯಾಚಾರ್ಯರಿಗೆ, ಜಿಜ್ಞಾಸುಗಳಿಗೆ ಅಭ್ಯಾಸದ ಒಂದು ವಸ್ತುವಾಗಿದೆ. ರಾಧೆ ಎಂಬುದು ಯಾವದೇ ವಿಶಿಷ್ಟ ನಾರೀಮಣಿಯ ಹೆಸರಲ್ಲ, ಅದು ನಾರೀಜೀವನದ ಶ್ರೇಷ್ಠತ್ವ, ತೇಜಸ್ಸು, ಸಮರ್ಪಣಾಭಾವ, ಪ್ರೇಮದ ಅನನ್ಯ ಭಾವನೆ, ಅಕಳಂಕ ಸಂಪೂರ್ಣ ಸೌಂದರ್ಯ, ನಿರ್ಮಲಶೀಲ ಹಾಗೂ ಅರಿವುಗಳ ಪ್ರತಿಮೂರ್ತಿಯಾಗಿದೆ. ರಾಧೆ ಎಂಬ ಶಬ್ದ ಭಾರತೀಯ ಪ್ರೇಮಸಾಧನೆಯ ಪ್ರತಿಫಲದ ದ್ಯೋತಕವಾಗಿದೆ. ಈ ಸಾಧನೆಯ ಉಷಃಕಾಲ ನಮಗೆ ವೈದಿಕ ಸಾಹಿತ್ಯದಲ್ಲಿಯೇ, ಋಷಿಗಳು ಪ್ರಕೃತಿಯ ಆದಿಶಕ್ತಿಗೆ ತಮ್ಮ ಶ್ರದ್ಧಾಂಜಲಿ ಅರ್ಪಿಸಿದಾಗಿನಿಂದಲೇ ಕಂಡುಬರುತ್ತದೆ. ಅಥರ್ವವೇದದಲ್ಲಿ ಪೃಥ್ವಿ ಸೂಕ್ತಿಯಲ್ಲಿ ಶಕ್ತಿಯ ಪೃಥ್ವಿರೂಪಕ್ಕೆ ವಂದನಾರ್ಪಣೆಮಾಡುವದು ವಿಶ್ವಜನನಿಗೆ ಸಲ್ಲಿಸುವ ಮೊದಲ ಪೂಜೆಯಾಗಿದೆ. ಡಾ॥ ಶಶಿಭೂಷಣ ದಾಸಗುಪ್ತರು ರಾಧಾ ಶಬ್ದದ ಉತ್ಪತ್ತಿವಿಕಾಸದ ಬಗ್ಗೆ ಹೇಳುತ್ತ "ವೇದದಲ್ಲಿ ವರ್ಣಿತವಾದ ಪೃಥ್ವಿಯ ಈ ದೇವೀಮೂರ್ತಿಯ ಸಂಗಡವೇ ವಿಷ್ಣುವಿನ ಭೂಶಕ್ತಿಯ ಸ್ಮರಣೆಯನ್ನು ಮಾಡಲಾಗುತ್ತದೆ. ಶ್ರುತಿಗಳಲ್ಲಿ ನಮಗೆ ಶಕ್ತಿಯ ಪೂರ್ಣ ವಿವರಣೆ ಸಿಗುತ್ತದೆ. ಕೇನೋಪನಿಷತ್‌ದಲ್ಲಿಯ ಅಗ್ನಿ, ವಾಯು, ಇಂದ್ರ ಇತ್ಯಾದಿಗಳನ್ನು ಒಳಗೊಂಡ ಬ್ರಹ್ಮಶಕ್ತಿಯು ಹೈಮವತಿ ಉಮೆಯ ರೂಪದಲ್ಲಿ ಆಕಾಶದಲ್ಲಿ ಉದ್ಭೂತವಾದುದರ ಉಲ್ಲೇಖವಿದೆ" ಎನ್ನುತ್ತಾರೆ.

ಶಕ್ತಿಯ ರೂಪದಲ್ಲಿ

ಉಪನಿಷತ್ತುಗಳಲ್ಲಿ ಶಕ್ತಿಯ ರೂಪ ಹಾಗೂ ಸೌಂದರ್ಯಗಳನ್ನು ಸ್ಪಷ್ಟಪಡಿಸುವ ಶುಭ್ರ, ಕೃಷ್ಣವರ್ಣೀಯ, ಆತ್ಮಾನುರೂಪ, ಬಹುಪ್ರಜಾ ಇತ್ಯಾದಿ ರೂಪಗಳಲ್ಲಿ ಆಕೆ ವರ್ಣಿಸಲ್ಪಟ್ಟಿದ್ದಾಳೆ. ದೇವಿಯ ಅಥವಾ ಆದಿಶಕ್ತಿಯ ಎಲ್ಲಕ್ಕಿಂತ ಪೂರ್ಣ ಹಾಗೂ ಮಹಿಮಾಪೂರ್ಣವಾದ ರೂಪ ಮಾರ್ಕಂಡೇಯ ಪುರಾಣದಲ್ಲಿ ಕಂಡು ಬರುತ್ತದೆ. ಅಲ್ಲಿ ಸೌಂದರ್ಯ ಶೀಲ ಹಾಗೂ ಶಕ್ತಿತ್ರಯಗಳು ತಮ್ಮ ಪರಾಕಾಷ್ಠತೆಯನ್ನು ಮುಟ್ಟಿವೆ. ಅಲ್ಲಿ ದೇವಿ ಕೇವಲ ಶುಭ್ರ, ಜ್ಞಾನದಾಯಿನಿ, ದಿವ್ಯವಷ್ಟೇ ಅಲ್ಲ ಮಂಗಳಕರವಾದ ಸೌಂದರ್ಯ ಹಾಗೂ ರಾಜಸೀವೃತ್ತಿಯಿಂದ ಕೂಡಿದವಳಾಗಿದ್ದಾಳೆ. ಹಾವ-ಭಾವ ಹಾಗೂ ಇನ್ನಿತರ ನಾರೀಸುಲಭವಾದ ವಿಲಾಸಗಳಿಂದ ಯುಕ್ತಳಾಗಿದ್ದಾಳೆ. ಆಕೆ ಪರಾಶಕ್ತಿಯ ರೂಪದಲ್ಲಿ ಸಹಸ್ರ ಸೂರ್ಯರ ಕಾಂತಿಯಿಂದೊಡಗೂಡಿ, ಕೆಂಪು ರೇಶ್ಮೆ ವಸ್ತ್ರಗಳಿಂದ ಆವೃತ್ತಗೊಳಿಸಲ್ಪಟ್ಟು ಕೆಂಪು ಗಂಧಲಿಪ್ತಳಾದ ಪಯೋಧರಗಳಿಂದ ಕಮಲ ನೇತ್ರೆಯಾಗಿ ಶೋಭಿಸುತ್ತಾಳೆ—


ರಾಧೆ ಎಂಬ ಕೂಡಲೇ ಪುರಾಣಗಳಲ್ಲಿ ವರ್ಣಿತವಾದ ರಾಧೆ ನಮ್ಮೆದುರು ಸುಳಿಯುವಳು. ಆದರೆ ಅದು ಯಾವದೇ ನಾರೀಮಣಿಯ ಹೆಸರಾಗಿರದೇ ನಾರೀಜೀವನದ ಶ್ರೇಷ್ಠತ್ವ, ತೇಜಸ್ಸು, ಸಮರ್ಪಣಾಭಾವ, ಪ್ರೇಮದ ಅನನ್ಯ ಭಾವನೆ ಅಕಳಂಕ ಸಂಪೂರ್ಣ ಸೌಂದರ್ಯ, ನಿರ್ಮಲ ಶೀಲ ಹಾಗೂ ಅರಿವುಗಳ ಪ್ರತಿಮೂರ್ತಿಯಾಗಿದೆ. ಭಾರತೀಯ ಪ್ರೇಮಸಾಧನೆಯ ಪ್ರತಿಫಲದ್ಯೋತಕವಾಗಿದೆ. ನಮ್ಮ ಸಾಹಿತ್ಯದಲ್ಲಿ ಕಂಡು ಬರುವ ಈ ವರ್ಣನೆಯನ್ನು ಕುರಿತು ಇಲ್ಲಿ ಲೇಖಿಕೆ ನಿರೂಪಿಸಿದ್ದಾರೆ.

ಓಂ ಉದ್ಯದ್‌ಭಾನು ಸಹಸ್ರ ಕಾಂತಿಮರುಣ-
ಕ್ಷೌಮಾಂ ಶಿರೋಮಾಲಿಕಾಂ
ರಕ್ತಾಲಿಪ್ತ ಪಯೋಧರಾಂ ಜಪವಟೀಂ
ವಿದ್ಯಾಮಭೀತಿಂ ವರಂ ॥
ಹಸ್ತಾಬ್ಜೈರ್ದಧತಿ ತ್ರಿನೇತ್ರ ವಿಲಸದ್ವಕ್ತ್ರಾರ
ವಿಂದಾಶ್ರಿಯಂ
ದೇವೀಂ ಬದ್ಧ ಹಿಮಾಂಶು ರತ್ನ ಮುಕುಟಾಂ
ವಂದೇಽರವಿಂದ ಸ್ಥಿತಂ ॥

ಅದರೊಡನೆಯೇ ಮಾತಂಗಿಯ ರೂಪದಲ್ಲಿ ಅದೇ ದೇವಿ ತನ್ನ ಶ್ಯಾಮಲವಾದ ಮೈ ಮೇಲೆ ಕೆಂಪು ವಸ್ತ್ರಗಳನ್ನುಟ್ಟು ಅರುಣರಾಗದಿಂದೊಪ್ಪುವ ಕಂಚುಕಿಯನ್ನು ಧರಿಸಿ, ಅದೇ ಅರಳಿದ ಕಮಲಮಾಲೆಯನ್ನು ಧರಿಸಿ ಪಂಜರದಲ್ಲಿ ರತ್ನಪೀಠದಲ್ಲಿ ಕುಳಿತ ಗಿಳಿಯ ಸವಿನುಡಿಗಳನ್ನು ಆಲಿಸುತ್ತ ವೀಣೆಯನ್ನು ನುಡಿಸುತ್ತ ಶಂಖಪಾತ್ರೆಯಲ್ಲಿಯ ಆಸವ ಸೇವಿಸಿ ತಂದ್ರಾಪೀಡಿತ ನೇತ್ರವುಳ್ಳ ಮನೋಹರಿಯಾಗಿ ಕಾಣುವಳು.

ಓಂ ಧ್ಯಾಯೇಯಂ ರತ್ನಪೀಠೆ ಶುಕಕಲಪಠಿತಂ
ಶೃಣ್ವತಿ ಶ್ಯಾಮಲಾಂಗೀಂ ॥
ನ್ಯಸ್ತೈಕಾಂಘ್ರಿ ಸರೋಜೇ ಶಶಿಕಲ ಧರಾಂ
ವಲ್ಲಕೀಂ ವಾದಯಂತೀಮ್ ॥
ಕಲ್ಹಾರ ಬದ್ಧ ಮಾಲಾಂ ನಿಯಮಿತ ವಿಲಸ-
ಚ್ಚೋಲಿಕಾಂ ರಕ್ತವಸ್ತ್ರಾಂ ॥
ಮಾತಂಗೀ ಶಂಖ ಪಾತ್ರಾಂ ಮಧುರಮಧುಮದಾಂ
ಚಿತ್ರಕೋದ್ಭಾಸಿ ಭಾಲಾಮ್ ॥

ಈ ರೀತಿ ಶಕ್ತಿದೇವಿಯ ಈ ವರ್ಣನೆಗಳಿಂದ ಅತಿ ಪ್ರಾಚೀನ ಕಾಲದಿಂದಲೂ ಸೌಂದರ್ಯಕ್ಕೂ ಪ್ರಾಧಾನ್ಯ ಕೊಡಲಾಗಿದೆ ಎಂಬುದು ಸ್ಪಷ್ಟ. ಆದ್ದರಿಂದಲೇ ಡಾ॥ ದಾಸಗುಪ್ತರ "ತಂತ್ರ-



ಪುರಾಣಾದಿ ಶೈವಗ್ರಂಥಗಳಲ್ಲಿ ಈ ಶಕ್ತಿತತ್ವದ ವಿವೇಚನೆ ಸಾಕಷ್ಟಾಯಿತು, ಅದು ವೈಷ್ಣವ ಧರ್ಮಗ್ರಂಥಗಳಲ್ಲಿಯೂ ಪ್ರವೇಶಿಸಿತು. ಇದೇ ಶಕ್ತಿವಾದವು ಮುಂದೆ ರಾಧಾವಾದದಲ್ಲಿ ಪರಿವರ್ತನೆಗೊಂಡಿತು" ಎಂಬ ಮಾತು ಯಥಾರ್ಥವಾಗಿದೆ.

'ಆರಾಧನಾ' ಶಬ್ದದಿಂದ ರಾಧಾ ಶಬ್ದದ ಉತ್ಪತ್ತಿ?

ಶ್ರೀಮದ್ಭಾಗವತವು ಕೃಷ್ಣಚರಿತ್ರೆಯ ಕೋಶಗ್ರಂಥವಿದ್ದಂತೆ. ಅಲ್ಲಿ ಗೋಪಿಯರ ವರ್ಣನೆಯಿದೆ. ರಾಸ ಕ್ರೀಡೆಯ ಅತ್ಯಂತ ಮಾದಕ ಸೂಕ್ಷ್ಮ ಚಿತ್ರಣವಿದೆ. ಆದರೆ ಅಲ್ಲಿ ಕೃಷ್ಣನ ಅನನ್ಯ ಪ್ರಿಯೆಯ ರೂಪದಲ್ಲಿ ಆ ರಾಧೆ ಮಾತ್ರ ಕಂಡು ಬರುವದಿಲ್ಲ. ಆದರೆ ಅದೇ ಭಾಗವತದಲ್ಲಿ ರಾಸಕ್ರೀಡೆಯ ಒಂದು ಸನ್ನಿವೇಶದ ವರ್ಣನೆ ಬರುತ್ತದೆ. ಅಲ್ಲಿ ಕೃಷ್ಣ ತನ್ನ ಒಬ್ಬಳೇ ಪ್ರಿಯತಮ ಗೋಪಿಕೆಯನ್ನು ಕರೆದುಕೊಂಡು ಮಾಯವಾಗಿ ಬಿಡುತ್ತಾನೆ. ಆತನ ವಿಯೋಗದಲ್ಲಿ ಉಳಿದ ಗೋಪಿಕೆಯರು ವ್ಯಾಕುಲಿತರಾಗಿ ಆ ಸೌಭಾಗ್ಯವತಿ ಗೋಪಿಯನ್ನು ನಿರ್ದೇಶಿಸಿ ಸ್ವಲ್ಪ ಮುನಿಸಿನಿಂದಲೇ-

ಅನಯಾರಾಧಿತೋ ನೂನಂ ಭಗವಾನ್
ಹರಿರೀಶ್ವರಃ ।
ಯನ್ನೋ ವಿಹಾಯ ಗೋವಿಂದಃ ಭೀತೋ
ಯಾಮನಯದ್ರಹಃ ॥

ಎಂದರೆ ಇವಳೇ ಹರಿಯ ಒಳ್ಳೆಯ ಸೇವೆ ಮಾಡಿದ್ದಾಳೆ. ಯಾಕೆಂದರೆ ನಮ್ಮನ್ನು ಬಿಟ್ಟು ಗೋವಿಂದ ಈಕೆಯಲ್ಲಿಯೇ ಪ್ರೇಮವಿಟ್ಟಿರುವನು.

ಈ "ಅನಯಾರಾಧಿತಃ" ಎಂಬ ಶಬ್ದದ ಜಾಡನ್ನೇ ಹಿಡಿದು ವಿದ್ವಾಂಸರು ರಾಧಾ ಶಬ್ದಕ್ಕಾಗಿ ಬಡಿದಾಡಿದರು. ಹಾಗೂ 'ಆರಾಧನಾ' ಶಬ್ದದಿಂದಲೇ ರಾಧಾ ಶಬ್ದದ ಉತ್ಪತ್ತಿಯಾಯಿತೆಂದು ಅಭಿಪ್ರಾಯ ಪಟ್ಟರು. ಪದ್ಮ ಪುರಾಣ ಮತ್ಸ್ಯಪುರಾಣ, ಬ್ರಹ್ಮವೈವರ್ತ ಪುರಾಣಗಳಲ್ಲಿ ರಾಧೆಯ ಬಗ್ಗೆ ಉಲ್ಲೇಖಗಳಿವೆ. ಗೌಡ ವೈಷ್ಣವರಾದ ಆಚಾರ್ಯ ರೂಪಗೋಸ್ವಾಮಿಗಳು ತಮ್ಮ 'ಉಜ್ವಲ ನೀಲಮಣಿ'ಯಲ್ಲಿ ರಾಧಾಪ್ರಕರಣದಲ್ಲಿ ಗೋಪಾಲೋಕೌಪಿನಿಯಲ್ಲಿ ರಾಧೆ ಗಾಂಧರ್ವಿ ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ, ಎಂದೆನ್ನುತ್ತಾರೆ. ದಕ್ಷಿಣದ ಶ್ರೇಷ್ಠ ವೈಷ್ಣವ ಭಕ್ತರಾದ ಆಳ್ವಾರರ ಭಜನೆಯಲ್ಲಿ ಬರುವ 'ನಾಪಿನ್ನಾಯಿ'ಯ ಉಲ್ಲೇಖ ಮಾಡಿ "ನಾಪಿನ್ನಾಯಿ ರಾಧೆಯಂತೆ ಗಜಗಾಮಿನಿಯಾಗಿದ್ದಾಳೆ. ಸೌಂದರ್ಯ ಪ್ರತಿಮೆಯಾಗಿದ್ದಾಳೆ. ಆಕೆಯೇ ಗೋಪಿಕಾ ಸ್ತ್ರೀಯರಲ್ಲಿ ಅಗ್ರಗಣ್ಯಳೂ ಕೃಷ್ಣನಿಗೆ ಪ್ರಿಯತಮೆಯೂ ಆಗಿದ್ದಾಳೆ" ಎಂದು ಡಾ॥ ಶಶಿಭೂಷಣ ಅಭಿಪ್ರಾಯ ಪಡುತ್ತಾರೆ.

ಗಾಥಾ-ಸಪ್ತ ಶತಿಯಲ್ಲಿ

"ಗಾಥಾ-ಸಪ್ತಶತಿ" ಎಂಬುದೊಂದು ಮಧ್ಯಕಾಲೀನ ಪ್ರೇಮವಿಷಯಕವಾದ ಸ್ವಚ್ಛಂದ ಕೃತಿ. ಒಂದು ಸಾರೆ ಸರಸ್ವತಿಯ ಕೃಪೆಯಿಂದ ರಾಜಾ ಹಾಲನ ರಾಜ್ಯದಲ್ಲಿ ಒಂದು ದಿನದ ಮಟ್ಟಿಗೆ ಎಲ್ಲರೂ ಕವಿಗಳಾಗಿ ಪರಿವರ್ತನೆಗೊಂಡರು. ಎಲ್ಲರೂ ಸ್ವಚ್ಛಂದರಾಗಿ ಕವಿತೆಗಳನ್ನು ಕಟ್ಟಿದರು. ಅದರ ಸಂಗ್ರಹವೇ ಸಪ್ತಶತಿ. ಅದರಲ್ಲಿ ಶೃಂಗಾರ, ರತಿ, ಪ್ರಕೃತಿಯ ಅನುಪಮ ಚಿತ್ರಣಗಳಿವೆ. ಅಲ್ಲಿಯೂ ಮಾರ್ಮಿಕವಾಗಿ ರಾಧೆಯ, ಗೋಪಿಕೆಯರ ಪ್ರಸ್ತಾಪಬಾರದೇ ಇಲ್ಲ.

ರಾಧೆಯ ವಿಷಯವಾಗಿ ಭಟ್ಟನಾರಾಯಣನ ವೇಣಿಸಂಹಾರ, ತ್ರಿವಿಕ್ರಮಭಟ್ಟನ ನಲಚಂಪೂ, ಮಾಘಕೃತ ಶಿಶುಪಾಲವಧೆ, ಸೋಮದೇವನ ಯಶಸ್ತಿಲಕಚಂಪೂ ಇತ್ಯಾದಿಗಳಲ್ಲಿ ಪ್ರಸಂಗೋಚಿತವಾಗಿ ಪ್ರಸ್ತಾಪ ಬಾರದೇ ಇಲ್ಲ.

ಜಯದೇವನ 'ರಾಧೆ'

ರಾಧೆಯ ಬಗ್ಗೆ ಮೊಟ್ಟ ಮೊದಲು ಜಾರಿನ್ನುದು ಮಾದಕವರ್ಣನೆ ನಮಗೆ ಸಾಹಿತ್ಯದಲ್ಲಿ ಲಭ್ಯವಾಗುವದು ಜಯದೇವ ಕವಿಯ ಗೀತಗೋವಿಂದದಲ್ಲಿ. ಅಲ್ಲಿ ಸಾಮಾನ್ಯ ಮಾನವೀ ಸ್ವರೂಪಳಾದ ಸುಂದರಿಯೋರ್ವಳು ತನ್ನ ಮಾಂಸಲ ಪಾರ್ಥಿವ ಶರೀರ ಸೌಂದರ್ಯಗಳಿಂದ ಪರಮಾತ್ಮನ ಪ್ರಿಯತಮೆಯ ರೂಪದಲ್ಲಿ ದೈವೀಶಕ್ತಿಯ ಆಧಾರಸ್ತಂಭಳಾಗಿ ಪ್ರಕಟವಾಗುತ್ತಾಳೆ. ಜಯದೇವ ಕವಿ ಸ್ಪಷ್ಟವಾಗಿ ಹೇಳುತ್ತಾನೆ. "ಒಂದು ವೇಳೆ ಹರಿಸ್ಮರಣದಲ್ಲಿ ನಿಮ್ಮ ಮನಸ್ಸು ಸರಸವಾಗಿರಬೇಕಿದ್ದರೆ, ನಿಮಗೆ ವಿಲಾಸಕಲೆಯಲ್ಲಿ ಅಭಿರುಚಿ ಕುತೂಹಲವಿದ್ದರೆ ಜಯದೇವನ ವಾಣಿಯನು ಲಾಲಿಸಿರಿ"

ಯದಿ ಹರಿಸ್ಮರಣೆ ಸರಸಂ ಮನೋ ಯದಿ
ವಿಲಾಸಕಲಾಸುಕುತೂಹಲಮ್
ಮಧುರ ಕೋಮಲಕಾಂತಪದಾವಲೀಂ ಶೃಣು
ತಥಾ ಜಯದೇವ ಸರಸ್ವತೀಂ ॥

ಪ್ರಾಚೀನ ಕವಿಗಳು ಜಡವಾದ ಪ್ರೇಮವನ್ನು ಶ್ರೇಷ್ಠಭಕ್ತಿಯ ಸತ್-ಚಿತ್ ಹರಿಸಬೇಕಾಗಿತ್ತು. ಅವರಿಗೆ ಚೇತನಮಯಿಯಾದದ್ದಕ್ಕೆ ಚೇತೋಹಾರಿಣಿಯಾದ ಪ್ರತೀಕ ಬೇಕಾಗಿತ್ತು. ಅದೇ ರಾಧೆಯ ರೂಪದಲ್ಲಿ ಪ್ರಕಟಗೊಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಜಯದೇವ ಕವಿಯ ರಾಧೆ ಸಂಸಾರಿಗರಂತೆ, ಉಳಿದ ಮಾನವೀಯರಂತೆ ಪ್ರೇಮವಿಪ್ವಲೆಯಾಗಿಯೂ ಮಾನಿನಿಯಾಗಿಯೂ ಪ್ರಿಯತಮೆಯಾಗಿಯೂ ಕೇಳಿಯಲ್ಲಿ, ರತಿಸುಖದಲ್ಲಿ ಕಾತರಗೊಂಡವಳಾಗಿಯೂ ತನ್ನ ಪ್ರಿಯತಮನ ಕೊರಳ ಹಾರವಾಗಿಯೂ ನಿರಂತರ ಆಲಿಂಗನ ಸುಖ

ಬಯಸುವ ಚಲುವೆಯಾಗಿದ್ದಾಳೆ. ಕಾಮ ಜ್ವರದಿಂದ ಪೀಡಿತಳಾದ ರಾಧೆ ಕ್ಷಣಿಕ ವಿರಹ ದಲ್ಲಿಯೂ ನೀರಿನಿಂದೀಚೆಗೆಸೆದ ಮೀನಿನಂತೆ ಚಡಪಡಿಸುತ್ತಾಳೆ. ತನ್ನ ಸಖಿಯರಿಂದ ಕೃಷ್ಣನ ಉಳಿದ ಗೋಪಿಯರೊಡನೆ ರತಿ ಕ್ರೀಡೆಯನ್ನು ಕೇಳಿ ಉರಿದೇಳುತ್ತಾಳೆ. ಅದೇ ಅಸೂಯೆಯಲ್ಲಿ, ಆ ಮಾದಕ ಬೇನೆಯಲ್ಲಿ ರಾಧೆ ಚಂಚಲೆಯಾಗುತ್ತಾಳೆ. ತನ್ನ ಅಭಿ ಸಾರದ ವಿಫಲತೆಯಿಂದ ಕಡುಕೋಪದಿಂದ ಭಾರವಾದ ಹೆಜ್ಜೆಯಿಂದ ಮರಳಿ ಹೊರಟರೂ ಶ್ರೀ ಕೃಷ್ಣನ ಈ ಭುವನ ಮೋಹಿನಿ ಆತನ ಚಂದ್ರಾಕಾರ ಮಯೂರ ವಕ್ಷವನ್ನು, ಚಂಚಲ ನೇತ್ರಗಳನ್ನು, ಗಲ್ಲದ ಮೇಲಿನ ಆ ಮುಂಗು ರುಳುಗಳ ಛವಿಯನ್ನು, ಇಂದ್ರಧನುಷ್ಯದ ರಾಗರಂಜಿತವಾದ ಮೇಘಪೂರ್ಣ ಬಣ್ಣದಿಂ- ದೊಡಗೂಡಿದ ಆ ರೂಪವನ್ನು ತನ್ನ ಮನ ದಿಂದ ದೂರಿರಿಸಲು ಶಕ್ಯವೇ? ಆಗ ಆಕೆ ತನ್ನ ಮನಸ್ಸನ್ನೇ ಸಮಾಧಾನಪಡಿಸುತ್ತಾಳೆ. ಹೃದ ಯಕ್ಕೆ ತಿಳಿಹೇಳುತ್ತಾಳೆ, ಆತನಿಗಾಗಿ ಕಾಯು ತ್ತಾಳೆ. ಈ ಸಮಾಚಾರವನ್ನು ಗೋಪಿಕೆ ಯರು ಕೃಷ್ಣನಿಗೆ ನಿವೇದಿಸುತ್ತಾರೆ. 'ಕೃಷ್ಣನೇ ನಿನ್ನ ಮಿಲನ ಆಕೆಗೆ ಪ್ರಾಪ್ತವಾಗದಿದ್ದರೂ ನಿನ್ನ ಬರವನ್ನೇ ಹಾರಯಿಸಿ ಆಕೆ ವಿಲಪಿಸು ತ್ತಾಳೆ, ನಗುತ್ತಾಳೆ, ನೀನೆದುರಿಗೆ ಇರುವಿ ಯೇನೋ ಎಂಬಂತೆ ಮಾತನಾಡುತ್ತಾಳೆ. ನಿನ್ನ ಧ್ಯಾನದಲ್ಲಿಯೇ ಆಕೆ ಮುಳುಗಿದ್ದಾಳೆ. ನಿನ್ನ ಚರಣಾರವಿಂದಗಳಲ್ಲಿ ಬಿದ್ದು ಆಕೆ ನಿನ್ನ ಹೊರತಾಗಿ. ಅ: ಹಿಮಾಂಶು!' ಚಂದ್ರನೂ ತನ್ನಲ್ಲಿ ದಾಹ ತಂದೊಡ್ಡುತ್ತಾನೆ ಎನ್ನುತ್ತಾಳೆ.'

ಧ್ಯಾನಲಯೇನ ಪುರ ಪರಿಕಲ್ಪ್ಯ ಭವಂತ
ಮತೀವ ದುರಾಪಮ್।
ವಿಲಪತಿ ಹಸತಿ ವಿಷೀದತಿ ರೋದತಿ ಚಂಚತಿ
ಮೋಚತಿ ತಾಪಮ್॥
ಪ್ರತಿಪದಮಿದಮಪಿ ನಿಗದತಿ ಮಾಧವ ತವ
ಚರಣೇ ಪತಿತಾಹಮ್।
ತ್ವಯಿ ವಿಮುಖೆ ಮಯಿ ಸಪದಿ ಸುಧಾನಿಧಿರಪಿ
ತನುತೇ ತನುದಾಹಮ್॥

ಜಯದೇವ ಕವಿ ರಾಧೆಯ ವಿರಹವ್ಯಥೆ ಯನ್ನು ವ್ಯಾಪಕವಾಗಿ ಚಿತ್ರಿಸಿದ್ದಾನೆ. ಅಲ್ಲಿ ರಾಧೆ ಸಾಮಾನ್ಯ ಸ್ತ್ರೀಯಂತೆ ತನ್ನ ಕ್ರೀಡಾ- ಸಕ್ತಿಯನ್ನು ತಡೆಯಲಾರದೆ ಸಂಕಟಪಡುವ ದನ್ನು ಕಾಣುತ್ತೇವೆ. ಆಕೆ ತನ್ನ ಪೂರ್ವದ ಭೆಟ್ಟಿಯನ್ನು ಚಿಂತಿಸಿ ಚಿಂತಿಸಿ ಕಣ್ಣೀರ್ಗರೆ ಯುತ್ತಾಳೆ.

ವಿದ್ಯಾಪತಿಯ ಬಣ್ಣನೆ

ಜಯದೇವ ಕವಿ ರಾಧೆ ಯೌವ್ವನವತಿ ಯಾದಾಗ ಕೃಷ್ಣನ ಪ್ರೇಯಸಿಯ ರೂಪದಲ್ಲಿ, ಆತನ ಅಭಿಸಾರಿಕೆಯ ರೂಪದಲ್ಲಿ ಚಿತ್ರಿಸಿ ದ್ದಾನೆ. ಆದರೆ ಹಿಂದೀ ಸಾಹಿತ್ಯವನದ ಕೋಗಿಲೆ ಎನಿಸಿದ ವಿದ್ಯಾಪತಿ ರಾಧೆ ಯೌವ್ವನ ದಲ್ಲಿ ಕಾಲಿಡುತ್ತಿದ್ದಂತೆಯೇ ಆಕೆಯಲ್ಲಿ ಆದ ಬದಲಾವಣೆಗಳಿಂದ ಪ್ರಾರಂಭಿಸಿ ಆಕೆಯ ವರ್ಣನೆ ಮಾಡುತ್ತಾನೆ.

ಒಬ್ಬ ಅನುಪಮ, ಅಪರೂಪ ಸುಂದರಿ ಯಾದ ಬಾಲಿಕೆ ತನ್ನಲ್ಲಿ ಯೌವನದ ಆಕಸ್ಮಿಕ ಆಗಮನದಿಂದ ಕೂತೂಹಲಗೊಂಡು ಚಕಿತ ಳಾಗಿ ತನ್ನಲ್ಲಿಯ ಬದಲಾವಣೆಗಳ ಬಗ್ಗೆ ರೋಮಾಂಚಿತಳಾಗುತ್ತಿರುವಾಗ' ಕೃಷ್ಣ ಅವ ಳನ್ನು ಕಾಣುತ್ತಾನೆ. ಈ ಕುಮಾರಿ ಯೌವ ನದ ಪ್ರಥಮಚರಣದಲ್ಲಿ ಭಾವಭಂಗಿಯಲ್ಲಿ ವಿಭಿನ್ನತೆ ಅನುಭವಿಸುತ್ತಾಳೆ. ಕೆಲ ಕ್ಷಣ ನೇತ್ರ ಗಳು ಅಪಾಂಗದೃಷ್ಟಿಬೀರುತ್ತವೆ. ಕ್ಷಣದಲ್ಲಿ ತನ್ನಷ್ಟಕ್ಕೆ ತಾನೇ ಧೂಲಿಧೂಸರಿತ ಮಾಡಿ ಕೊಳ್ಳುತ್ತಾಳೆ. ಕ್ಷಣದಲ್ಲಿ ಆಕೆ ಮುಗುಳ್ನಗೆ ನಕ್ಕಾಗ ಆಕೆಯ ದಂತಪಂಕ್ತಿಯ ಧವಲಕಾಂತಿ ಸುತ್ತಲಿನ ಪರಿಸರವನ್ನು ಬೆಳಗುತ್ತದೆ. ಕ್ಷಣ ದಲ್ಲಿ ಆಕೆ ಲಜ್ಜೆಗೊಂಡು ತುಟಿಗಳ ಮೇಲೆ ತನ್ನ ಉತ್ತರೀಯ ಎಳೆದುಕೊಳ್ಳುತ್ತಾಳೆ. ಆಗ ತನ್ನ ಹೃದಯದ ಮುಕುಲಗಳಂತಿರುವ ಪಯೋ ಧರಗಳನ್ನು ಲಜ್ಜೆಯಿಂದ ಮುಚ್ಚಿಕೊಳ್ಳು ತ್ತಾಳೆ, ಕೆಲವೊಮ್ಮೆ ಮರೆತುಬಿಡುತ್ತಾಳೆ. ಈ ಯೌವನ ಹಾಗೂ ಕೌಮಾರ್ಯದ ಸಂಧಿ ಕಾಲದ ನಿರ್ಣಯವನ್ನು ಆ ತುಂಟ ಕೃಷ್ಣನಿಗೆ ಬಿಡುವದೊಳಿತು.

ಕನ್ನಡ ಸಾಹಿತ್ಯದಲ್ಲಿ

ಇನ್ನು ಕನ್ನಡ ಸಾಹಿತ್ಯದಲ್ಲಿ ನಾವು ರಾಧೆಯ ಬಗ್ಗೆ ಸಾಹಿತ್ಯಸೃಷ್ಟಿಯನ್ನು ಪಡೆಯಲಾರೆವು. ಕೃಷ್ಣರಾಸಕ್ರೀಡೆ,: ಆತನೊಡನೆ ಗೋಪಿಕೆ ಯರ ಕೇಳಿಯ ಬಗ್ಗೆ ದಾಸ ಸಾಹಿತ್ಯದಲ್ಲಿ ನಮಗೆ ಸಾಕಷ್ಟು ಸಾಹಿತ್ಯ ಸಿಕ್ಕುತ್ತಿದ್ದರೂ ರಾಧೆಯ ಬಗ್ಗೆ ಕೇವಲವಾಗಿ ಅಲ್ಲಿ ರಚನೆ ಸಿಕ್ಕುವದಿಲ್ಲವೆಂದೇ ಹೇಳಬಹುದು. ದಾಸ ಸಾಹಿತ್ಯ ಶ್ರೀ ದಿವಾಕರರು ಅಭಿಪ್ರಾಯ ಪಡು ವಂತೆ, "ಭ್ರಮರವು ಅತ್ತಿತ್ತ ಸುತ್ತಿ ಹಲವು ಪುಷ್ಪಗಳ ಪರಿಮಳವ ಸೆಳೆದು ಮಧುವ ಮೆದ್ದು, ಹೆಚ್ಚಾದುದನ್ನು ಹಾಡುತ್ತ ತಂದು ಹುಟ್ಟಿಗೆ ಹಾಕುವಂತೆ ಭಕ್ತಿಪರವಶರಾದ ದಾಸರು ಭಾವರಾಜ್ಯದಲ್ಲಿ ವಿಹರಿಸಿ ನಲಿನಲಿ- ದಾಡಿ ಮಧುರ ಪ್ರೇಮದ ತನಿರಸವನುಂಡು ಉಳಿದುದನ್ನು ನಮಗಾಗಿ ತುಂಬಿ ಇಟ್ಟ ಇಂಚರದ ನುಡಿಗಳು," ಆ ದಾಸರು "ದೇವ ರನ್ನು ಒಮ್ಮೆ ಮೊಲೆಗೂಸಿನಂತೆ, ಒಮ್ಮೆ ಹರಿ ದಾಡುವ ಹಸುಳೆಯಂತೆ, ಒಮ್ಮೆ ಹರಿ ದಾಡುವ ಹುಡುಗನಂತೆ ಇನ್ನೊಮ್ಮೆ ಕೊಳಲ- ನೂದುವ ಗೋಪಾಲಕೃಷ್ಣನಂತೆ ಕಲ್ಪಿಸಿ ಕೊಂಡಾಡಿ ಆ ಸವಿಸುಧೆಯ ಪ್ರವಾಹದಲ್ಲಿ ಮಗ್ನರಾಗಿರುವರು.' ಇದು ಶುದ್ಧ ನಿರ್ದೋಷ ನಿರ್ಹೇತುಕ ಪ್ರೇಮನಿರ್ಝರ."

ಈ ಮೊದಲೇ ಹೇಳಿದಂತೆ ನೇರವಾಗಿ ರಾಧಾ ಸಾಹಿತ್ಯವಿರದಿದ್ದರೂ ಆ ಭಾವ ತುಂಬಿದ ಗೋಪಿಕಾ ಸಾಹಿತ್ಯಕ್ಕೆ ಕನ್ನಡದಲ್ಲೇನು ಕೊರತೆಯಿಲ್ಲ. ಅಲ್ಲಿ "ತಾನು ಸತಿ ಪರಮಾತ್ಮನು ಪತಿ ಎಂಬ ಮಧುರಭಕ್ತಿಯಿದೆ. ಈ ಮಧುರಭಕ್ತಿಯಲ್ಲಿ ಪರಮಾತ್ಮನು ಪುರುಷನು ಹಾಗೂ ಪ್ರಕೃತಿಯು ಸ್ತ್ರೀಯು."

ಒಬ್ಬ ಗೋಪಿಕಾಸ್ತ್ರೀ ಆ ಪರಮಾತ್ಮನನ್ನೇ ಕುರಿತು ಕರೆಯುತ್ತಾಳೆ—

ಬಾರೋ ನೀ ಎನ್ನ ಮನಮಂದಿರಕೆ
ತಡಮಾಡುವದ್ಯಾಕೆ
ಮಾರಜನಕ ಹರಿ ನಿನ್ನಗ್ಗಳಿಕೆ ಸ್ಮರಿಸುವೆ
ಕ್ಷಣ ಕ್ಷಣಕೆ

ಕೃಷ್ಣ ಬಿಟ್ಟು ಹೋಗಿದ್ದಾನೆ ಆಗ ಒಬ್ಬ ಗೋಪಿಕೆ ವಿಲಪಿಸುವದನ್ನು ನೋಡಿ—

ಕೊಂಬು ಕೊಳಲನೂದುತ ನಂಬಿಸಿ
ಪೋದನೆಯವ್ವಾ
ಅಂಬುಜನಾಭಗೆ ಮನ ಹಂಬಲಿಸುತಿದೆಯವ್ವಾ
ಮನೆ ಮನೆವಾರತೆಗೆ ಮನವೆಳೆದೆಯವ್ವಾ
ಮನಸಿಜಪಿತನೊಡನೆ ಮನ ತೆರಳಿತೆಯವ್ವಾ

ಮತ್ತೆ—

ನಡೆಯಲಾರಿವೆ ನಾವು ಒಂದಡಿಯಿಡೆ
ವಶವಿಲ್ಲ ಇಂದೆ
ಬೆಡಗುಗಾರನ ಕೂಡ ಮುಡಿ ತೆರಳಿತೆಯವ್ವಾ
ನಿನ್ನೆ ಮೊದಲಾಗಿ ಎನ್ನ ಕಣ್ಣಿಗೆ ನಿದ್ರೆಬಾರದು
ಬನ್ನಣೆಗಾರನ ಕೂಡೆ ಹೆಣ್ಣು ಜನ್ಮ ಸಾಕೆಯವ್ವಾ

ಹಾಗೂ—

ವಿಧಿಗೆ ದಯೆವಿಲ್ಲವಕ್ಕ ಎನ್ನವ್ಯಾಲೆ
ಯದುಪತಿಯನಗಲಿಸಿದನೊಮ್ಮೆಲೆ

ಜಗನ್ನಾಥ, ಕನಕ, ಪುರಂದರಾದಿಯಾಗಿ ಎಲ್ಲರೂ ಕೃಷ್ಣನ ತುಂಟತನದ ಬಗ್ಗೆ ಬರೆದಿದ್ದರೂ ; ಈ ಕೆಳಗಿನ ಪುರಂದರದಾಸರ ಕಿಡಿಗೇಡಿ ಕೃಷ್ಣನ ತುಂಟತನ ಶಬ್ದಜಾಲಗಳಲ್ಲಿ ಸುಂದರವಾಗಿ ರಚಿಸಿದ ಶಬ್ದಚಿತ್ರ ಯಾರ ಕಣ್ಣೆದುರಿಗೂ ಕಟ್ಟುವಂತಿದೆ. ರಾಧೆ ಅನ್ನುತ್ತಾಳೆ—

ಸದ್ದು ಮಾಡಲು ಬ್ಯಾಡವೊ, ನಿನ್ನ ಕಾಲಿಗೆ
ಬಿದ್ದು ನಾ ಬೇಡಿಕೊಂಬೆ
ನಿದ್ರೆ ಗೈಯುವರೆಲ್ಲ ಎದ್ದರೆ ನೀನು ಬಂ
ದಿದ್ದದ್ದು ಕಂಡು ಏನೆಂಬುವರೋ ರಂಗಾ
ಬಳೆ ಘಲುಕಕೆನ್ನದೇನೊ, ಕೈಯು ಪಿಡಿದು
ಎಳೆಯದಿರೋ ಸುಮ್ಮನೆ
ಮೊಲೆಗಳ ಮೇಲಿನ ಸೆರಗ ಸೆಳೆಯಲು ಕೊ
ರಳ ಪದಕಗಳು ಧ್ವನಿಯ ಗೈಯುವವೋ
ರಂಗಾ
ನೆರಿಗೆಗೆ ಕೈ ಕೊಡವೀರೋ, ಕಾಂಚಿಯ ದಾಮ
ಉಡಿಗಂಟು ಧ್ವನಿಗೈಯದೆ
ಕರದುಟಿಯನು ನೀನು ಸವಿದು ಚಪ್ಪರಿಸಲು
ಥರವಲ್ಲ ಗಂಡ ಮತ್ಸರವ ತಾಳುವನಲ್ಲಾ

ಶ್ರೀ ಕೃಷ್ಣನ ಗೋಪಿಕೆಯರ, ಆ ರಾಧೆಯ ಬಗ್ಗೆ ಬರೆದರೆ ಉದ್ಗ್ರಂಥವಾದೀತು.

ಕಡೆಯದಾಗಿ ರಾಧೆಯ ಈ ಮೂರ್ತಿ ವೇದಕಾಲದಿಂದ ಪೃಥ್ವಿರೂಪದಲ್ಲಿ ಪ್ರಕಟಗೊಂಡು ಅನೇಕ ಪುರಾಣದೇವಿಯರ ರೂಪದಲ್ಲಿ ಪಾಲುಗೊಂಡು, ಲಕ್ಷ್ಮೀ ಶ್ರೀ ರೂಪ ಇತ್ಯಾದಿಗಳಲ್ಲಿ ಆವಿರ್ಭವಿಸಿ, ಮಧ್ಯಕಾಲೀನ ಪ್ರೇಮಪ್ರಾಧಾನ್ಯವಾದ ಕಾವ್ಯಗಳಲ್ಲಿ ರಾಧೆಯೆಂಬ ಮಾನವೀ ರೂಪದಲ್ಲಿ ಪ್ರಾಣ ಪ್ರತಿಷ್ಠಾಪನಗೊಂಡಳು ಎಂದಿಷ್ಟೇ ಹೇಳಿದರೆ ಸಾಕು.

(ವಿವಿಧ ಆಧಾರಗಳಿಂದ)

ಮೂರನೆಯ ಪಂಚವಾರ್ಷಿಕ ಯೋಜನೆಯ— ಅಡಿಪಾಯ ಭದ್ರವಿದೆಯೆ ?

ಲೇಖಕರು :
ಮಾಧವ ನಾ. ಮಹಿಷಿ ★
ಬಿ.ಎ., ಎಲ್ ಎಲ್.ಬಿ.
ಹುಬ್ಬಳ್ಳಿ.

"......the shortfalls have unfortunately occurred in some of the very industries which were of crucial importance and have deprived the economy of benefits reckoned on for the start of the Thrid Plan."

("......ದುರ್ದೈವದಿಂದಾಗಿ, ಅತ್ಯಂತ ಮಹತ್ವದವೆನಿಸಿದ ಹಲವು ಉದ್ದಿಮೆಗಳು ಅಪೇಕ್ಷಿಸಿದ ಗುರಿ ಸಾಧಿಸುವಲ್ಲಿ- ವಿಫಲವಾಗಿವೆ. ಹಾಗು ಮೂರನೆಯ ಯೋಜನೆಯನ್ನು ಪ್ರಾರಂಭಿಸುವುದಕ್ಕೆ ಅವುಗಳಿಂದ ದೊರೆಯುವುದೆಂದು ಗಣಿಸಲಾಗಿದ್ದ ಪ್ರಯೋಜನ ದೊರೆಯದೇ ಹೋಗಿದೆ.")

ಇದು ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದ ನಮ್ಮ ಯೋಜನಾ ಆಯೋಗ ಎರಡನೆಯ ಪಂಚವಾರ್ಷಿಕ ಯೋಜನೆಯ ಸಾಧನೆಯ ಬಗ್ಗೆ ವ್ಯಕ್ತಪಡಿಸಿದ ಮಾತು. ಮೂರನೆಯ ಯೋಜನೆಯ ಕುರಿತು ಬರೆಯಬೇಕಾದಾಗ ಪ್ರಾರಂಭಕ್ಕೆಯೆ ಎತ್ತಿಕೊಳ್ಳಲು ಅಷ್ಟೊಂದು ಪ್ರಶಸ್ತವಾದ ಮಾತಿದಲ್ಲವೆಂದು ಅನಿಸಬಹುದಾದರೂ ಅದರ ಹಿಂದೆ ಅಡಗಿರುವ ಕಟುಸತ್ಯದಿಂದಾಗಿ ಅದಕ್ಕೆ ಆ ಮಹತ್ವವನ್ನು ಕೊಡಲೇಬೇಕಿದೆ. ಮೊದಲಿನ ಎರಡು ಯೋಜನೆಗಳು ಹಾಕಿದ ತಳಪಾಯದ ಮೇಲೆಯೆ ಮೂರನೆಯ ಯೋಜನೆಯ ಕಟ್ಟಡ ನಿಲ್ಲಬೇಕಿದೆ. ಅಂತೆಯೇ ಮೂರನೆಯ ಯೋಜನೆಯ ಯಶಸ್ಸು ಎರಡನೆಯ ಯೋಜನೆಯ ಸಾಧನೆಯನ್ನು ಬಹಳ ಮಟ್ಟಿಗೆ ಅವಲಂಬಿಸಿದೆ ಎನ್ನುವ ಮಾತನ್ನು ಅಲ್ಲಗಳೆಯಲಿಕ್ಕಾಗದು. ಮೊದಲಿನ ಎರಡು ಯೋಜನೆಗಳಲ್ಲಿ ತೊಡಗಿಸಿದ ಒಟ್ಟು ಬಂಡವಾಳ ರೂ. ೧೦,೧೧೦ ಕೋಟಿಯಾಗಿದ್ದರೆ ಮೂರನೆಯ ಯೋಜನೆಯ ಐದು ವರುಷಗಳಲ್ಲಿಯೆ ರೂ. ೧೦,೪೦೦ ಕೋಟಿ ಬಂಡವಾಳ ತೊಡಗಿಸುವ ಗುರಿಯನ್ನಿಟ್ಟುಕೊಳ್ಳಲಾಗಿದೆ ಎಂದಾಗ ಮೂರನೆಯ ಯೋಜನೆ ಮೊದಲಿನೆರಡಕ್ಕಿಂತ ಗಾತ್ರದಲ್ಲಿ ಎಷ್ಟು ಹಿರಿದಾಗಿದೆಂಬುದರ ಕಲ್ಪನೆ ಬರುವುದು.

ಹೆಚ್ಚುತ್ತಿರುವ ನಿರುದ್ಯೋಗದ ಹೊರೆ

ಆದರೆ ನಿರುದ್ಯೋಗದ ಹೊರೆ ಮೂರನೆಯ ಯೋಜನೆಯ ಕೊನೆಗೆ ಈಗಿರುವುದಕ್ಕಿಂತಲೂ ಹೆಚ್ಚಾಗಲಿದೆ ಎಂದು ಯೋಜನಾ ಆಯೋಗದ ಅಂದಾಜಿರುವುದನ್ನು ಗಮನಿಸಿದಾಗ ಈ ಬೃಹದ್ಗಾತ್ರವು ಕೂಡ ತೀರ ಚಿಕ್ಕದೆಂದು ಅನಿಸದಿರದು. ಎರಡನೆಯ ಯೋಜನೆಯ ಪ್ರಾರಂಭಕ್ಕೆ ನಮ್ಮ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ೫೩ ಲಕ್ಷವೆಂದು ಅಂದಾಜು ಮಾಡಲಾಗಿತ್ತು. ಹಾಗು ಎರಡನೆಯ ಯೋಜನೆ ೫ ವರುಷಗಳಲ್ಲಿ ೮೦ ಲಕ್ಷ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸಿ ಕೊಟ್ಟಿತು. ಆದರೂ ಆ ಯೋಜನೆಯ ಕೊನೆಗೆ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ೯೦ ಲಕ್ಷಗಳಿಗೇರಿದೆ! ಮೂರನೆಯ ಪಂಚವಾರ್ಷಿಕ ಯೋಜನೆ ೧ ಕೋಟಿ ೪ ಲಕ್ಷ ಉದ್ಯೋಗಾವಕಾಶಗಳನ್ನು ಒದಗಿಸುವ ಭರವಸೆ ತೋರುತ್ತಿದ್ದರೂ ಅದರ ಕೊನೆಯಲ್ಲಿಯ ನಿರುದ್ಯೋಗಿಗಳ ಸಂಖ್ಯೆ ೩೦ ಲಕ್ಷದಿಂದ ಹೆಚ್ಚಲಿದೆ. ಇಷ್ಟಲ್ಲದೆ ೧೫೦-ರಿಂದ ೧೮೦ ಲಕ್ಷ ಜನ ಅರೆ-ನಿರುದ್ಯೋಗಿಗಳಾಗಿರುವುದನ್ನೂ ಮೂರನೆಯ ಯೋಜನೆ ಗಮನಿಸಬೇಕಿದೆ.

ಇಂಥ ವೈಪರೀತ್ಯಕ್ಕೆ ಜನನ ಪ್ರಮಾಣ ಅದೇ ಉಳಿದು ಮರಣ ಪ್ರಮಾಣ ಇಳಿಮುಖವಾದುದೇ ಮುಖ್ಯ ಕಾರಣವೆಂಬುದು ನಿಜ. ಆದರೆ ನಮ್ಮ ಮೂರನೆಯ ಯೋಜನೆ ಸಮಾಧಾನಕರವಾಗಿ ಪೂರ್ತಿಗೊಂಡಾಗಲು ಸಹ ನಮ್ಮ ಪರಿಸ್ಥಿತಿ ವಿಶೇಷವೇನೂ ಸುಧಾರಿಸಿರುವುದಿಲ್ಲ. ಅದರಲ್ಲಿಯೂ ಮೂರನೆಯ ಯೋಜನೆಗೆ ಭದ್ರ ತಳಪಾಯವನ್ನೊದಗಿಸಲಿದ್ದ ಎರಡನೆಯ ಯೋಜನೆ ನಿರೀಕ್ಷಿಸಿದ ಮಟ್ಟವನ್ನು ಕೆಲವು ಅತಿ ಮಹತ್ವದ ರಂಗಗಳಲ್ಲಿಯೇ ಮುಟ್ಟಲಿಲ್ಲವೆಂಬುದೊಂದು ತೊಡಕೇ ಸರಿ.

ಮುಖ್ಯ ಉದ್ದೇಶ

ಕೆಲವೊಂದು ನಿಶ್ಚಿತ ಗುರಿಗಳನ್ನು ನಿಶ್ಚಿತ ಅವಧಿಯಲ್ಲಿ ಸಾಧಿಸುವದೇ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಇಂಥ ಯೋಜನೆಗಳು ಸಕಲ ವಿವರಗಳಲ್ಲಿಯೂ ಸರಿಯಾಗಿ ರೂಪಿಸಲ್ಪಟ್ಟು ದಕ್ಷ ರೀತಿಯಲ್ಲಿ ಕಾರ್ಯಾಚರಣೆಯಲ್ಲಿ ತರಲ್ಪಟ್ಟರೆ ಅವು ನೀಡಬಹುದಾದ ಫಲ, ಅವುಗಳಿಂದ ವಿವಿಧ ಕ್ಷೇತ್ರಗಳಲ್ಲಾಗುವ ಪರಿಣಾಮ ಇವುಗಳನ್ನು ತಕ್ಕ ಮಟ್ಟಿಗೆ ಸರಿಯಾಗಿಯೇ ಊಹಿಸಬಹುದಾಗಿದೆ. ಯೋಜನೆಗಳನ್ನು ಸಿದ್ಧಪಡಿಸುವಿಕೆ ಹಾಗೂ ಅವುಗಳನ್ನು ಕಾರ್ಯರೂಪಕ್ಕಿಳಿಸುವಿಕೆ ಇವುಗಳ ನಡುವಿನ ಅವಧಿಯಲ್ಲಿ ಉಂಟಾಗುವ ಹಲವು ಸ್ಥಿತ್ಯಂತರಗಳಿಂದಾಗಿ ಯೋಜನೆಗಳ ವೆಚ್ಚ ಇಲ್ಲವೆ ಅವಧಿ ಮುಂತಾದವುಗಳಲ್ಲಿ ಹೆಚ್ಚುಕಡಿಮೆಗಳು ಆಗುವುದು ಸ್ವಾಭಾವಿಕ. ಆದರೆ ಈ ಹೆಚ್ಚುಕಡಿಮೆ ಸಾಮಾನ್ಯವಾಗಿ ನೂರಕ್ಕೆ ೧೦-೧೫ ರ ಮಿತಿಯನ್ನು ಮೀರಬಾರದು. ಈ ಮಿತಿಯನ್ನು ಬಹುವಾಗಿ ಮೀರಿದರೆ ಯೋಜನೆಯನ್ನು ರೂಪಿಸುವಲ್ಲಿಯೋ ಇಲ್ಲವೆ ಅದನ್ನು ಕಾರ್ಯರೂಪಕ್ಕಿಳಿಸುವಲ್ಲಿಯೋ ದೋಷ ಅಡಗಿದೆ ಎನ್ನಲೇಬೇಕು.

ಈ ಅಂಶವನ್ನು ಗಮನದಲ್ಲಿರಿಸಿಕೊಂಡು ನಮ್ಮ ೩ ನೆಯ ಪಂ. ವಾ. ಯೋಜನೆಗೆ ಅಡಿಪಾಯವೆಂದೆನಿಸಿರುವ ೨ ನೆಯ ಪಂ. ವಾ. ಯೋಜನೆಯಲ್ಲಿ ನಾವು ಸಾಧಿಸಿದ್ದು ಏನು

ತೃತೀಯ ಯೋಜನೆಯ ರೂಪರೇಷೆಗಳನ್ನು ಯೋಜನಾಆಯೋಗವೀಗ ಪೂರ್ಣಗೊಳಿಸಿದ್ದು ಸಂಸತ್ತಿನಲ್ಲಿಯೂ ಅದರ ಚರ್ಚೆ ನಡೆದು ಬರುವ ವರುಷದಿಂದ ಕಾರ್ಯಗತವಾಗಲಿದೆ. ಈ ಹಿಂದಿನ ಎರಡು ಯೋಜನೆಗಳಿಗಿಂತಲೂ ಇದು ಭಾರಿ ಮೊತ್ತದ್ದಾಗಿದ್ದುದರಿಂದ ಮಹತ್ವಾಕಾಂಕ್ಷೆಯದೆಂದು ಹೇಳಲಾಗುತ್ತಿದೆ. ದ್ವಿತೀಯ ಯೋಜನೆಯಲ್ಲಿ ವಿದೇಶ ವಿನಿಮಯದ ಕೊರತೆಯಿಂದಾದ ಪರಿಣಾಮಗಳನ್ನು ಯೋಜಕರು ಲಕ್ಷಿಸಿಲ್ಲವೆಂದೆನ್ನಲಾಗುತ್ತಿದೆ. ಯಾವುದು ಸರಿ ಎಂಬುದನ್ನು ನಮ್ಮ ಯೋಜನೆಯ ಈ ವಿಮರ್ಶಾತ್ಮಕ ಬರೆಹದಲ್ಲಿ ಚರ್ಚಿಸಲಾಗಿರುವುದು.

ಎಂಬುದನ್ನು ನಿರೀಕ್ಷಿಸಿದಾಗ ಅದರಅಂಗವಾಗಿ ಕೈಕೊಂಡ ಕೆಲವು ಮಹತ್ವದ ಯೋಜನೆಗಳ (Projects) ನ್ನು ರೂಪಿಸುವಲ್ಲಿಯೋ ಇಲ್ಲವೆ ಅವುಗಳನ್ನು ಕೃತಿಗಿಳಿಸುವಲ್ಲಿಯೋ ಅಥವಾ ಕೆಲಸಲ ಎರಡರಲ್ಲೂ ದೋಷಗಳಿದ್ದಿರುವುದು ಖಚಿತವಾಗದಿರದು.

ವಿದೇಶ ವಿನಿಮಯ ಬಿಕ್ಕಟ್ಟು

೨ ನೆಯ ಪಂ. ವಾ. ಯೋಜನೆಗಾಗಿ ಹಣ ಕಾಸಿನ ಲಭ್ಯಾಲಭ್ಯತೆಯ ವಿಷಯವನ್ನೆ ಮೊದ-ಲೆತ್ತಿಕೊಳ್ಳೋಣ. ಈ ಯೋಜನೆಯ ಪ್ರಾರಂಭದ ಕೆಲತಿಂಗಳುಗಳಲ್ಲಿಯೆ ನಮ್ಮ ವಿದೇಶ ವಿನಿಮಯ ಬಿಕ್ಕಟ್ಟು ಗಂಭೀರ ರೂಪವನ್ನೇ ತಳೆಯಿತು. ನಂತರ ಕೆಲವು ಮಿತ್ರರಾಷ್ಟ್ರಗಳು ಮುಂದೆ ಬಂದು ನೆರವಾದರು ಕೂಡ ಈ ಯೋಜನೆಯ ಅವಧಿಯುಲ್ಲೆಲ್ಲ ವಿದೇಶ ವಿನಿಮಯ ಪರಿಸ್ಥಿತಿ ಅಸಮಾಧಾನಕರವಾಗಿಯೇ ಉಳಿಯಿತು. ೫ ವರ್ಷಗಳ ಯೋಜನೆಯನ್ನು ರೂಪಿಸಿದ ನಮ್ಮ ಯೋಜಕರು ಆ ಯೋಜನೆಯ ಪ್ರಾರಂಭದಲ್ಲಿಯೆ ಇಷ್ಟೊಂದು ಗಂಭೀರ ಸ್ವರೂಪದ ವಿದೇಶ ವಿನಿಮಯ ಬಿಕ್ಕಟ್ಟು ತಲೆದೋರಬಹುದೆಂಬುದನ್ನು ಮೊದಲಿಗೆಯೆ ಊಹಿಸದೆ ಹೋದುದೆಂತು ? ಮೊದಲನೆಯ ಪಂ. ವಾ. ಯೋಜನೆಯಲ್ಲಿ ಯುದ್ಧಕಾಲದಲ್ಲಿ ಬ್ರಿಟನ್ನಿನಲ್ಲಿ ಸಂಗ್ರಹವಾಗಿದ್ದ ಸ್ಟರ್ಲಿಂಗ್ ಬಂಡವಾಳವನ್ನೆಲ್ಲ ಬಳಸಿಕೊಂಡುಬಿಟ್ಟದ್ದರಿಂದ ಹಾಗು ಮೊದಲನೆಯ ಯೋಜನೆಯ ಫಲವೆಂದು ನಮ್ಮ ನಿರ್ಯಾತ ವ್ಯಾಪಾರದಲ್ಲೇನೂ ಅಂಥ ಹೇಳಿಕೊಳ್ಳುವಂಥ ಹೆಚ್ಚಳವಾಗುವುದು ಸಾಧ್ಯವಿಲ್ಲದ್ದರಿಂದ ವಿದೇಶ ವಿನಿಮಯಕ್ಕಾಗಿ ನಾವು ೨ ನೆಯ ಯೋಜನಾವಧಿಯಲ್ಲಿ ಮಿತ್ರರಾಷ್ಟ್ರಗಳು ಸದಿಚ್ಛೆಯಿಂದ ಕೊಡಮಾಡಬಹುದಾದ ಸಾಲ, ಸಹಾಯಗಳನ್ನೇ ಅವಲಂಬಿಸಬೇಕಾಯಿತು. ಈ ರೀತಿ ವಿದೇಶಿ ಸಾಲ-ಸಹಾಯಗಳನ್ನು ಪಡೆಯುವಲ್ಲಿ ಯಾವ ತಪ್ಪೂ ಇಲ್ಲ. ಆದರೆ ಇಂಥ ನೆರವಿನ ಗಾತ್ರದ ನಿರೀಕ್ಷೆಯಲ್ಲಿ ವಾಸ್ತವಾಂಶವಿರಬೇಕಷ್ಟೆ ?

ಯೋಜಕರ ತಪ್ಪಾದ ಎಣಿಕೆಗಳು

ಇನ್ನೂ ಹಲವಾರು ಯೋಜನೆ (Projects) ಗಳಿಗಾಗಿ ತಗಲುವ ವೆಚ್ಚದ ಬಗ್ಗೆ ನಮ್ಮ ಯೋಜಕರ ಎಣಿಕೆಗಳೆಲ್ಲ ತಪ್ಪಾಗಿ ಪರಿಣಮಿಸಿದುವು. ಮೊದಲು ನಿಯೋಜಿಸಿದ ವೆಚ್ಚಕ್ಕೂ ನಂತರ ನಿಜವಾಗಿಯೂ ಮಾಡಿದ ವೆಚ್ಚಕ್ಕೂ ಅಂತರ ವಿಪರೀತವಾಗಿರುವುದು ಕಂಡುಬಂದಿದೆ. ಬಹುಶಃ ಎಲ್ಲ ಸಂದರ್ಭಗಳಲ್ಲೂ ಇದು ಕೊನೆಯಲ್ಲಿ ಹೆಚ್ಚೇ ಅಗಿ ಪರಿಣಮಿಸಿದೆ— ಕೆಲವೊಮ್ಮೆ ಮೂಲ ಯೋಜನೆಗಿಂತ ನೂರಕ್ಕೆ ೧೦೦ ರಿಂದ ೨೦೦ ರ ವರೆಗೆ ಹೆಚ್ಚಾ-ಗಿರುವುದೂ ಇದೆ.

ಈ ಮಾತಿಗೆ ಸಾಕ್ಷಿಯಾಗಿ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಬಹುದು :

ಭಾಕ್ರಾ ಯೋಜನೆಗಾಗಿ ಮೊದಲು ನಿರ್ಧರಿಸಿದ ವೆಚ್ಚ ರೂ. ೧೧ ಕೋಟಿಯಾದರೆ ೧೯೫೯ ರ ಹೊತ್ತಿಗೆ ಇದು ರೂ. ೩೭ ಕೋಟಿಯನ್ನು ಮಿಕ್ಕಿದ್ದಿತು. ದಾಮೋದರ ಕಣಿವೆ ಯೋಜ-ನೆಯ ವೆಚ್ಚ ರೂ. ೭೪ ಕೋಟಿಯಿಂದ ರೂ. ೧೬೯ ಕೋಟಿಗಳಿಗೆ ಬಂತು, ಹಿರಾಕುಡ ರೂ. ೪೮ ಕೋಟಿಯಿಂದ ರೂ. ೭೪ ಕೋಟಿಗಳಿಗೇ-ರಿತು, ರಿಹಾಂಡ ರೂ. ೧೬ ಕೋಟಿಯಿಂದ ರೂ. ೪೬ ಕೋಟಿಗಳನ್ನು ಮುಟ್ಟಿತು. ಸರ-ಕಾರಿರಂಗದಲ್ಲಿಯ ೩ ಉಕ್ಕಿನ ಕಾರಖಾನೆಗಳು ರೂ. ೪೨೫ ಕೋಟಿಗಳಲ್ಲಿ ಮುಗಿಯಲಿದ್ದ ದ ಈಗ ಅವುಗಳಿಗೆ ತಗಲುವ ವೆಚ್ಚ ರೂ. ೭೦ ಕೋಟಿ ಎಂದಾಗಿದೆ. ಇದು ನಮ್ಮ ಬೃಹದ್ಯೋ ಜನೆಗಳಲ್ಲಿ ಮಹತ್ವದ ಕೆಲವುಗಳ ವೆಚ್ಚದ ಚಿತ್ರವಾದರೆ ಈ ಯೋಜನೆಗಳತ್ತ ಇನ್ನೊಂದು ದೃಷ್ಟಿಯಿಂದಲೂ ನೋಡಬಹುದಾಗಿದೆ. ಅದೆಂ ದರೆ ಅವುಗಳು ಇಟ್ಟುಕೊಂಡಿದ್ದ ಗುರಿ ಹಾಗು ಸಾಧನೆ.


ಯೋಜನೆಗಳ ಗುರಿ ಹಾಗು ನಿಶ್ಚಿತ ಅವ- ಧಿಯ ನಂತರ ಅವುಗಳ ಸಾಧನೆ ಇವುಗಳಲ್ಲಿ ಕೆಲಮಟ್ಟಿಗೆ ಅಂತರವುಂಟಾಗಬಹುದಾದದ್ದು ಸ್ವಾಭಾವಿಕವೆಂದು ಗ್ರಹಿಸಿದರೂ ಈ ಯೋಜ ನೆಗಳನ್ನು ಕೈಕೊಳ್ಳದಿದ್ದರೆಯೆ ಚನ್ನಾಗಿ-ತ್ತೇನೊ ಎನ್ನುವಷ್ಟರಮಟ್ಟಿಗೆ ನಿರಾಶಾದಾ ಯಕ ಅಂತರವುಳಿವುದು ಅಕ್ಷಮ್ಯ. ಎರಡ ನೆಯ ಯೋಜನೆಯಲ್ಲಿ ಕೆಲವು ಆಯ್ದ ಯೋಜನೆ (Projects) ಗಳ ಪ್ರಗತಿಯನ್ನು ನಿರೂಪಿಸುವ ಕೈಪಿಡಿ ('The Progress of Selected Projects During the Second Five Year Plan') ಯನ್ನು ನಮ ಯೋಜನಾ ಆಯೋಗ ಪ್ರಸಿದ್ಧಿಸಿದೆ. ಅದ ರಲ್ಲಿಯ ಕೆಲವು ಅಂಶಗಳು ಗಮನೀಯ ವಾಗಿವೆ.

ಉಕ್ಕಿನ ಕಾರಖಾನೆಗಳು

ಸರಕಾರಿ ರಂಗದಲ್ಲಿ ಈ ಯೋಜನಾವಧಿ ಯಲ್ಲಿ ಸ್ಥಾಪಿತವಾದ ಮೂರು ಉಕ್ಕಿನ ಕಾರ ಖಾನೆಗಳು ಯೋಜನೆಯ ಕೊನೆಯ ವರುಷ ದಲ್ಲಿ ಒಂದೊಂದೂ ಹತ್ತು ಲಕ್ಷ ಟನ್ ಉಕ್ಕನ್ನು ಉತ್ಪಾದನೆ ಮಾಡುವದೆಂದು ಮೂಲತ ಯೋಜಕರು ಎಣಿಕೆ ಹಾಕಿದ್ದರು. ಆದ ೧೯೫೯-೬೦ ರ ಕೊನೆಗೆ ರೂರ್ಕೇಲಾ ೬೨೦೦ ಟನ್ನುಗಳನ್ನು ಮಾತ್ರ ಉತ್ಪಾದಿಸಿದರೆ ಭಿಲ ಯಿಯ ಉತ್ಪಾದನೆ ೧.೫ ಲಕ್ಷವನ್ನು ಮೀ ಲಿಲ್ಲ, ಹಾಗು ದುರ್ಗಾಪುರ ೮೦೦ ಟನ್ ಗಳನ್ನು ಮಾತ್ರ ಉತ್ಪಾದಿಸಿತು !

ಎರಡನೆಯ ಯೋಜನಾವಧಿಯಲ್ಲಿ ೧೪೪ ಮೈಲುಗಳಷ್ಟು ರೇಲ್ವೆ ವಿದ್ಯುದ್ದೀಕರಣವಾಗ ಬೇಕಿತ್ತು. ಆದರೆ ಸಾಧ್ಯವಾದುದು ೮ ಮೈಲುಗಳು ಮಾತ್ರ. ಆದರೆ ಈ ಕಾರ್ಯಕ್ರಮ ಕ್ಕಾಗಿ ತೆಗೆದಿರಿಸಿದ ಒಟ್ಟು ರೂ. ೭೯ ಕೋಟಿ ಗಳಲ್ಲಿ ರೂ. ೪೮ ಕೋಟಿ ಆಗಲೇ ವೆಚ್ಚವಾ ಹೋಗಿದೆ.

ನಮ್ಮ ರಾಜ್ಯದಲ್ಲಿಯ ತುಂಗಭದ್ರಾ ಯೋ ಜನೆ ಎರಡನೆಯ ಯೋಜನಾವಧಿಯ ಕೊನೆ ೬.೨ ಲಕ್ಷ ಎಕರೆ ಭೂಮಿಗೆ ನೀರುಣ್ಣ ಬೇಕಿತ್ತು. ಆದರೆ ೧೯೫೯-೬೦ ರ ಕೊನೆಗೆ ಅ ರಿಂದ ೧.೨ ಲಕ್ಷ ಎಕರೆಗೆ ಮಾತ್ರ ನೀರ ದೊರೆಯುತ್ತಿತ್ತು. ಆದರೆ ಯೋಜಿತ ವೆ ವಾದ ರೂ. ೭೪ ಕೋಟಿಯಲ್ಲಿ ರೂ. ೬೫ ಕೋಟಿ ಆಗಲೇ ವೆಚ್ಚವಾಗಿದೆ.



ಏಶಿಯದಲ್ಲಿ ಅತಿದೊಡ್ಡದೆಂದು ನಾವು ಹೇಳಿಕೊಳ್ಳುವ ಸಿಂದ್ರಿ ಗೊಬ್ಬರ ಕಾರಖಾನೆಗಾಗಿ ಮಾಡಬೇಕೆಂದಿದ್ದ ಒಂದನಾಳ ಹೆಚ್ಚುವನ್ನೆಲ್ಲ ಅಗಲೆ ಮಾಡಿಮುಗಿಸಲಾಗಿದ್ದರೂ ೧೯೬೦-೬೧ರಲ್ಲಿ ಅದು ೧೨,೫೦೦ ಟನ್ನು ಮಾತ್ರ ಯೂರಿಯಾ ಹಾಗು ೫೪೦೦೦ ಟನ್ನು ಮಾತ್ರ ಡಬಲ್ ಸಾಲ್ಟ್ ಉತ್ಪಾದಿಸುವುದೆಂದು ಈ ಕೈಪಿಡಿ ಸೂಚಿಸುತ್ತದೆ. ಆದರೆ ಈ ವಸ್ತುಗಳ ಉತ್ಪಾದನೆಯ ಬಗ್ಗೆ ಇರಿಸಿಕೊಂಡ ಗುರಿ ಅನುಕ್ರಮವಾಗಿ ೨೪,೫೦೦ ಟನ್ನು ಹಾಗು ೧,೪೦,೨೦೦ ಟನ್ನು ಇದೆ !

ಇವಲ್ಲದೆ ತಮ್ಮ ಗುರಿಗಳತ್ತ ಅತ್ಯಂತ ನಿರಾಶಾದಾಯಕ ಪ್ರಗತಿಯನ್ನು ಎರಡನೆಯ ಯೋಜನೆಯ ಅವಧಿಯಲ್ಲಿ ತೋರಿಸಿರುವ ಇನ್ನೂ ಕೆಲವು ಉದ್ದಿಮೆಗಳಲ್ಲಿ ಅಲ್ಯೂಮಿನಿಯಮ್, ವೃತ್ತಪತ್ರಿಕಾ ಕಾಗದ, ರಸಾಯನಗಳು, ಪಲ್ಪ್, ಸಿಮೆಂಟ್, ಸೋಡಾ ಆ್ಯಶ್ ಮೊದಲಾದವು ಮುಖ್ಯವಾದವುಗಳು.

ನಮ್ಮ ಈ ಹಲವಾರು ಯೋಜನೆಗಳು, ಅದರಲ್ಲೂ ಕಾರಖಾನೆಗಳು, ತಮ್ಮ ಉತ್ಪಾದನೆಯ ಗುರಿಗಳನ್ನು ಮುಟ್ಟುವಲ್ಲಿ ಅಯಶಸ್ವಿಯಾದುದಕ್ಕೆ ಅತಿ ಮಹತ್ವದ ಕಾರಣಗಳಲ್ಲಿ ಒಂದೆಂದರೆ ಉತ್ಪಾದನಾ ಘಟಕಗಳ ಉತ್ಪಾದನಾಶಕ್ತಿಯ ಉಪಯೋಗವನ್ನು ಪೂರ್ಣ ಮಾಡಿಕೊಳ್ಳದೆ ಇರುವುದು. ಕೆಲವೆಡೆಗಳಲ್ಲಿಯಂತೂ ಒಂದೇ ಪಾಳಿ (single shift) ಯಂತೆ ಲೆಕ್ಕ ಹಾಕಿದರೂ ಆ ಒಂದು ಪಾಳಿಯಿಂದಲೇ ಆಗಬೇಕಾದಷ್ಟು ಉತ್ಪಾದನೆ ಆಗದಿರುವುದು ಯೋಜನಾಆಯೋಗದ ಲಕ್ಷ್ಯಕ್ಕೆ ಬಂದಿದೆ.

ಆಡಳಿತ ಯಂತ್ರದ ಅಸಾಮರ್ಥ್ಯ

ನಮ್ಮ ಎರಡನೆಯ ಯೋಜನೆ ನಿರೀಕ್ಷಿಸಿದ ಯಶಸ್ಸನ್ನು ಪಡೆಯದೆ ಹೋದುದಕ್ಕೆ ಯೋಜನೆಯು ತನ್ನ ಮೇಲೆ ಹೊರಿಸಿದ ಭಾರವನ್ನು ಹೊರಲು ನಮ್ಮ ಆಡಳಿತ ಯಂತ್ರ ಅಸಮರ್ಥವಾದುದು ಒಂದು ದೊಡ್ಡ ಕಾರಣವಾಗಿದೆಯೆಂಬುದನ್ನೂ ಅದರಲ್ಲಿಯ ದೋಷಗಳನ್ನು ಸರಿಪಡಿಸುವ ಅವಶ್ಯಕತೆಯನ್ನೂ ಯೋಜನಾ ಆಯೋಗ ಮನಗಂಡಿದೆ. ಆ ಬಗ್ಗೆ ಯೋಜನಾಆಯೋಗ ತನ್ನ ವರದಿಯಲ್ಲಿ "There is need for far-reaching changes in procedure and approach and for re-examining prevelent methods and attitudes." ಎಂದು ಹೇಳಿದ್ದು ಗಮನಾರ್ಹವಾಗಿದೆ. ಆಡಳಿತದಲ್ಲಿ ಈ ದೋಷಕ್ಕೆ ಎರಡು ಕಾರಣಗಳನ್ನು ಹೇಳಬಹುದು. ಮೊದಲನೆಯದಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳಲ್ಲಿ ಅಧಿಕಾರವೆಲ್ಲ ಆಡಳಿತದ ರಾಜಕೀಯ ಅಂಗದಲ್ಲಿಯೇ (ಮಂತ್ರಿಗಳು ಹಾಗು ಮಂತ್ರಿಮಂಡಳ) ಕೇಂದ್ರೀಕೃತವಾಗಿ ಶಾಶ್ವತ ಕಾರ್ಯಾಂಗದ ಬಲ ಕುಗ್ಗಿ ಹೋಗಿದೆ. ಮತ್ತು ಎರಡನೆಯದಾಗಿ ಔದ್ಯಮಿಕ ರಂಗವನ್ನು ಸರಕಾರ ತೀರ ಇತ್ತೀಚೆಗೆ ಪ್ರವೇಶಿಸಿರುವುದರಿಂದ ಔದ್ಯಮಿಕ ಆಡಳಿತ ಅದರ ಅಧಿಕಾರಿವರ್ಗಕ್ಕೆ ತೀರ ಹೊಸದು. ಅದಕ್ಕೆ ತಕ್ಕ ತರಬೇತು ಹೊಂದಿದ ತಜ್ಞ ಆಡಳಿತವರ್ಗದ ಅಭಾವವಿದೆ.

ಕಡಿಮೆಯಾಗುತ್ತಿರುವ ಕಾರ್ಯಾಂಗದ ಹೊಣೆ

ಬ್ರಿಟಿಶ್ ಪಾರ್ಲಿಮೆಂಟರಿ ಪದ್ಧತಿಯನ್ನೇ ಹೆಚ್ಚಾಗಿ ಅನುಕರಿಸಿರುವ ನಮ್ಮಲ್ಲಿ ಆ ಪದ್ಧತಿಯಲ್ಲಿ ಪರಂಪರೆಯಾಗಿ ರೂಢವಾಗಿರುವ ಒಂದು ಅಂಶ ಮಾತ್ರ ಬೆಳೆದುಲಿರಲಿಲ್ಲ. ಅದೆಂದರೆ ಮಂತ್ರಿಮಂಡಳ ಹಾಗು ಮಂತ್ರಿಗಳು ಮುಖ್ಯವಾಗಿ ಸರಕಾರದ ಧೋರಣೆಯನ್ನು ನಿರೂಪಿಸುವವರು. ಆ ಧೋರಣೆಯ ವಿಶಾಲ ಚೌಕಟ್ಟಿನೊಳಗೆ ನಿತ್ಯ ಆಡಳಿತವ್ಯವಹಾರಗಳನ್ನು ನಿರ್ವಹಿಸುವ ಹೊಣೆ ಶಾಶ್ವತ ಕಾರ್ಯಾಂಗದ್ದು. ಆದರೆ ಇಂದು ನಮ್ಮಲ್ಲಿ ನಿತ್ಯ ಆಡಳಿತ ವ್ಯವಹಾರಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ರಾಜಕೀಯ ಮಟ್ಟದಲ್ಲಿ ಕೈಕೊಳ್ಳುವತ್ತ ಒಲವು ಹೆಚ್ಚಾಗುತ್ತ ನಡೆದಂತೆ ಶಾಶ್ವತ ಕಾರ್ಯಾಂಗ ತನ್ನ ಹೊಣೆಯನ್ನು ರಾಜಕೀಯ ಅಂಗಕ್ಕೆ ಬಿಟ್ಟುಕೊಡುತ್ತ ನಡೆದಿದೆ. ಅದರಲ್ಲೂ ಮುಂಧ್ರಾ ಪ್ರಕರಣದಲ್ಲಿ ಛಗಲಾ ಸಮಿತಿಯು ನಡೆಯಿಸಿದ ವಿಚಾರಣೆಯಿಂದಾಗಿ ಶಾಶ್ವತ ಕಾರ್ಯಾಂಗಕ್ಕೆ ಬಲವಾದ ಪೆಟ್ಟು ಬಿದ್ದಿದೆ. ಬ್ರಿಟನ್ನಿನಲ್ಲಿ ಸರಕಾರದ ಈ ಶಾಶ್ವತ ಕಾರ್ಯಾಂಗಕ್ಕೆ ಬಲವಾದ ರಕ್ಷಣೆಯನ್ನು ಮಂತ್ರಿಮಂಡಳ ನೀಡುತ್ತದೆ. ಸರಕಾರದ ಕಾರ್ಯದರ್ಶಿಯ ಮೂಲಕ ಉಚ್ಚಮಟ್ಟದಲ್ಲಿ ಪ್ರತಿನಿಧಿಸಲ್ಪಟ್ಟಿರುವ ಈ ಶಾಶ್ವತ ಕಾರ್ಯಾಂಗಕ್ಕೆ ಸಾಕಷ್ಟು ಸ್ವಾತಂತ್ರ್ಯವಿದ್ದರೂ ಅದರ ಪ್ರತಿಯೊಂದು ಕೃತಿಗೂ ಮಂತ್ರಿ ಹಾಗು ಮಂತ್ರಿಮಂಡಳ ಹೊಣೆಯೆಂದು ಗ್ರಹಿಸಲಾಗುತ್ತದೆ. ಆದರೆ ನಮ್ಮಲ್ಲಿಯ ಗ್ರಹಿಕೆಯು ಅದೇ ಮಾದರಿಯದಾಗಿದ್ದರೂ ಮುಂಧ್ರಾ ಪ್ರಕರಣದಲ್ಲಿಯ ವಿಚಾರಣೆಗಳಿಂದಾಗಿ ಆಡಳಿತಾಧಿಕಾರಿಯು ಉಚ್ಚಮಟ್ಟದಲ್ಲಿ ನಿರ್ಣಯ ಕೈಕೊಳ್ಳುವಾಗ ತನ್ನ ರಾಜಕೀಯ ಮುಖ್ಯಸ್ಥನ ಒಲುವು ನಿಲುವುಗಳಿಗೆಯೆ ಹೆಚ್ಚಿನ ಮಹತ್ವವನ್ನಿತ್ತು ತಾನು ತನ್ನ ಬುದ್ಧಿಶಕ್ತಿ, ಅನುಭವಗಳನ್ನುಪಯೋಗಿಸುವುದನ್ನು ಬಿಟ್ಟುಕೊಡುತ್ತಿದ್ದಾನೆ. ಇದರಿಂದಾಗಿ ಯಾವ ವಿಷಯಕ್ಕೂ ನಿರ್ಣಯ ಅಲ್ಪ ಸಮಯದಲ್ಲಿ ಸಿಗದೆ ಹೋಗಿ ಆಡಳಿತದಲ್ಲಿ ಶೈಥಿಲ್ಯ ಅನಿವಾರ್ಯವಾಗಿ ತಲೆದೋರಿದೆ. ಫೈಲುಗಳು ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಾಡುತ್ತಿವೆಯೆ ಹೊರತು ಕಾರ್ಯ ಬೇಗನೆ ಕೊನೆಗೊಳ್ಳುವುದಿಲ್ಲ. ಯೋಜನೆಯ ಗಾತ್ರ ಹಿರಿದಾದಂತೆಯೆ ಆಡ-

ಳಿತ ಯಂತ್ರದ ಗಾತ್ರವೂ ಹೆಚ್ಚುತ್ತ ಹೊರಟಿದೆ. ಆದರೊಂದಿಗೆಯೆ ಕಾರ್ಯಕ್ಷಮತೆ ಕಡಿಮೆಯಾಗುತ್ತ ನಡೆದಿದೆ. ಕಾರ್ಯಕ್ಷಮತೆಯ ಅಭಾವದೊಂದಿಗೆಯೆ ಲಂಚಗುಳಿತನ ಮಿತಿ ಮೀರಿದೆ.

ಔದ್ಯಮಿಕ ಆಡಳಿತ ವರ್ಗ ಇರಬೇಕಾದ ಮಟ್ಟದ್ದಿಲ್ಲವೆಂಬುದಕ್ಕೆ ಸರಕಾರಿ ರಂಗದಲ್ಲಿಯ ಅನೇಕ ಉದ್ದಿಮೆಗಳು ತೋರಿದ ಪ್ರಗತಿಯ ಚಿತ್ರವೇ ಸಾಕ್ಷಿ.

ಅತಿಪ್ರಸರಣದ ಪರಿಣಾಮ

ಇದಲ್ಲದೆ ಅತಿಪ್ರಸರಣವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದೂ ಸಾಧ್ಯವಾಗಿಲ್ಲ. ಬೆಲೆಗಳ ಏರುವಿಕೆಯಿಂದ ಬಳಕೆಗಾರರಿಗೆ ಯೋಜನೆಗಳ ಫಲವು ಮುಟ್ಟದೆ ಹೋಗುತ್ತದೆ. ಆದರೆ ಈ ಅತಿಪ್ರಸರಣಕ್ಕೆ ಕಾರಣ ಕೊರತೆಯ ಧನವಿನಿಯೋಗದ ಮೂಲಕ ಪ್ರಸಾರದಲ್ಲಿ ಬಂದಿರುವ ಹೆಚ್ಚಿನ ಹಣದ ಪ್ರಸಾರವೇ ಎಂಬ ಕಲ್ಪನೆಯಿಂದ ನಮ್ಮ ಅರ್ಥಮಂತ್ರಿಗಳು ಮೂರನೆಯ ಯೋಜನೆಯ ಬಂಡವಾಳ ಆವಶ್ಯಕತೆಗಳನ್ನು ಪೂರಯಿಸಿಕೊಳ್ಳಲು ಇನ್ನೂ ಹೆಚ್ಚಿನ ಕರಭಾರಕ್ಕೆಳಸುವ ಚಿನ್ಹಗಳಿವೆ. ಆದರೆ ಸಾಮಾನ್ಯ ಬೆಲೆ ಸೂಚಿಯು (General price index) ಅತಿಪ್ರಸರಣದ ಸರಿಯಾದ ಚಿತ್ರವನ್ನೀಯುವುದಿಲ್ಲ. ಯಾಕಂದರೆ ಸಾಮಾನ್ಯ ಬೆಲೆ ಸೂಚಿಯಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆಗಳು ಸೇರಿರುವಂತೆಯೆ ಭೋಗ-ವಸ್ತು (luxuries) ಗಳ ಬೆಲೆಗಳೂ ಕೂಡಿರುತ್ತವೆ. ಭೋಗ-ವಸ್ತುಗಳ ಬೆಲೆ ಬಹುವಾಗಿ ಏರಿ ಜೀವನಾವಶ್ಯಕ ವಸ್ತುಗಳ ಬೆಲೆಗಳಲ್ಲಿ ಏರಿಕೆ ಕಡಿಮೆ ಪ್ರಮಾಣದಲ್ಲಿಯಾಗಿದ್ದರೂ ಒಟ್ಟಿನಲ್ಲಿ ಏರಿಕೆಯ ಮಟ್ಟ ಬಹಳವಾಗಿದ್ದುದೇ ಕಂಡುಬರಬಹುದು. ಇಂದಿನ ಸಾಮಾನ್ಯ ಬೆಲೆಸೂಚಿಯನ್ನು ವಿಶ್ಲೇಷಿಸಿ ನೋಡಿದಾಗ ಇಂಥ ಪರಿಸ್ಥಿತಿಯೆ ಕಂಡುಬರುವುದು. ಹೀಗಿರುವಾಗ ಕರಭಾರವನ್ನು ಹೆಚ್ಚಿಸಿ ಜನತೆಯಿಂದ ಒತ್ತಾಯದ 'ತ್ಯಾಗ'ವನ್ನು ಅಪೇಕ್ಷಿಸುವುದಕ್ಕಿಂತ ಕೊರತೆಯ ಧನವಿನಿಯೋಗಪದ್ಧತಿಯನ್ನೆ ತುಸು ಹೆಚ್ಚಾಗಿ ಉಪಯೋಗಿಕೊಳ್ಳುವುದು ಸಾಧ್ಯವಿದೆ.

ವಿದ್ಯುಚ್ಛಕ್ತಿ—ಸಾರಿಗೆ ಸಂಪರ್ಕ


ಆರ್ಥಿಕ ಅಭ್ಯುದಯಕ್ಕಾಗಿ ಯೋಜನೆಗಳನ್ನು ಮಾಡಿದಾಗ ಎರಡು ವಿಷಯಗಳಲ್ಲಿ ನಮ್ಮ ದೃಷ್ಟಿ ಐದು ವರುಷಗಳಿಗಿಂತ ಮುಂದೋಡುವುದು ಅವಶ್ಯವಿದೆ. ಅವೆಂದರೆ ವಿದ್ಯುಚ್ಛಕ್ತಿ ಹಾಗೂ ಸಾರಿಗೆ ಸಂಪರ್ಕ.

ಔದ್ಯಮಿಕ ಉತ್ಪಾದನೆಗೂ ವಿದ್ಯುತ್ಪೂರಯಿಕೆಗೂ ನೇರವಾದ ಸಂಬಂಧವಿದೆ. ಕಳೆದ ೧೨ ವರುಷಗಳ ಅಂಕಿ ಸಂಖ್ಯೆಗಳನ್ನು ನೋಡಿದಾಗ ಪ್ರತಿ ವರುಷ ಔದ್ಯಮಿಕ ಉತ್ಪಾದನಾ ಸೂಚಿಯು (Industrial output index) ನೂರಕ್ಕೆ ೧೫ ರಂತೆ ಏರಿದರೆ ವಿದ್ಯುಚ್ಛಕ್ತಿಗಾಗಿ ಬೇಡಿಕೆಯು ನೂರಕ್ಕೆ ೨೦ ರಂತೆ ಏರುತ್ತಿದ್ದುದು ಕಂಡುಬಂದಿದೆ. ಹೀಗೆ ಲೆಕ್ಕ ಹಾಕುವಾಗ ೧೯೪೮ ರಲ್ಲಿ ಔದ್ಯಮಿಕ ಉತ್ಪಾದನಾ ಸೂಚಿ ಹಾಗು ವಿದ್ಯುಚ್ಛಕ್ತಿಗಾಗಿ ಬೇಡಿಕೆ ಎರಡೂ ೧೦೦ ಇದ್ದುವೆಂದು ಗ್ರಹಿಸಲಾಗಿದೆ. ಇಂಥ ಪರಿಸ್ಥಿತಿಯಲ್ಲಿಯೂ ಎರಡನೆಯ ಯೋಜನೆಯು ವಿದ್ಯುದುತ್ಪಾದನೆಯಲ್ಲಿ ತಾನಿಟ್ಟುಕೊಂಡ ಗುರಿಯಾದ ೬೯ಲಕ್ಷ ಕಿ. ವ್ಯಾಟುಗಳನ್ನು ಮುಟ್ಟಲಿಕ್ಕಾಗದೆ ಬರಿಯ ೫೭ ಲಕ್ಷ ಕಿಲೋವ್ಯಾಟುಗಳನ್ನು ಮಾತ್ರ (೧೯೬೦-೬೧ ರಲ್ಲಿ) ಉತ್ಪಾದಿಸಿತು. ಔದ್ಯೋಗೀಕರಣದ ಜೀವನಾಡಿಯೆ ವಿದ್ಯುಚ್ಛಕ್ತಿ. ಇಂತಿರುವಾಗ ಈ ವಿಷಯದಲ್ಲಿ ಹಿಂದುಳಿದಾಗ ಪ್ರಗತಿ ಅಸಾಧ್ಯವಾಗುವುದು ಸ್ವಾಭಾವಿಕ. ಅಂತೆಯೆ ವಿದ್ಯುದುತ್ಪಾದನೆ ಔದ್ಯಮಿಕ ಉತ್ಪಾದನೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿಯೇ ಆಗುವುದು ಹಿತಕರ.

ಅಲ್ಲದೆ ವಿದ್ಯುದುತ್ಪಾದನೆಗಾಗಿ ನಾವು ಈಗಲಷ್ಟೇ ಅಲ್ಲ ೩ ನೆಯ ಯೋಜನೆಯ ಕೊನೆಯಲ್ಲಿ ಕೂಡ ಕಲ್ಲಿದ್ದಲಿಯನ್ನೇ ಹೆಚ್ಚಾಗಿ ಅವಲಂಬಿಸಬೇಕಾಗುವದು ಎಂದು ಯೋಜನಾ ಆಯೋಗದ ಅಂದಾಜಿದೆ. ಇದೂ ಅಷ್ಟೊಂದು ಹಿತಕರ ಬೆಳವಣಿಗೆಯಲ್ಲ. ಯಾಕಂದರೆ ಇದರಿಂದ ನಮ್ಮ ವಿದ್ಯುದುತ್ಪಾದನೆ ಹೆಚ್ಚಾಗಿ ಕಲ್ಲಿದ್ದಲುಗಳ ಗಣಿ ಉದ್ದಿಮೆ ತನ್ನ ಉತ್ಪಾದನಾ ಗುರಿಯನ್ನು ಮುಟ್ಟುವುದನ್ನೇ ಅವಲಂಬಿಸುತ್ತದೆ.

ಸಾರಿಗೆ ಇನ್ನೊಂದು ಅತಿ ಮಹತ್ವದ ವಿಷಯ. ಸರಕಾರದ ಒಡೆತನದಲ್ಲಿರುವ ರೇಲ್ವೆಗಳು ಇಂದು ಶಕ್ತಿಮೀರಿ ಕಾರ್ಯನಿರ್ವಹಣೆ ಮಾಡುತ್ತಿವೆಂಬುದು ಸ್ಪಷ್ಟವಿದೆ. ಈ ಕಾರಣಕ್ಕಾಗಿಯೆ ಏನೊ ಅವುಗಳ ಕಾರ್ಯಕ್ಷಮತೆಗೂ ಕುಂದುಬಂದಂತಿದೆ. ಆದರೆ ಔದ್ಯಮೀಕರಣದ ಭಾರವನ್ನು ಪರಿಣಾಮಕಾರಿಯಾಗಿ ಹೊರಲು ರಸ್ತೆ ಸಾರಿಗೆ ರೇಲ್ವೆಗೆ ಪೂರಕವಾಗಿ ಮಾತ್ರವಲ್ಲ ಪ್ರತ್ಯೇಕ ಸಾಧನವಾಗಿಯೆ ಬೆಳೆಯುತ್ತಿದೆ. ೧೯೫೦-೫೧ ರಲ್ಲಿ ರಸ್ತೆ ಸಾರಿಗೆ ೩೩,೫೮೦ ಲಕ್ಷ ಟನ್ ಮೈಲುಗಳನ್ನು ನಿರ್ವಹಿಸಿದರೆ ೧೯೫೫-೫೬ ರಲ್ಲಿ ಅದು ೫೪,೭೦೦ ಲಕ್ಷಕ್ಕೇರಿತು ಹಾಗೂ ೧೯೬೦-೬೧ ರಲ್ಲಿ ೧೦,೬೦,೦೦ ಲಕ್ಷಕ್ಕೆ ಬಂದಿದೆ. ಇದರಿಂದ ಎರಡು ಯೋಜನೆಗಳ ಹತ್ತು ವರ್ಷ ಅವಧಿಯಲ್ಲಿ ರಸ್ತೆ ಸಾರಿಗೆ ಸಾಗಾಟದ ವಿಷಯದಲ್ಲಿ ನೂರಕ್ಕೆ ೨೦೦ರಷ್ಟು ಪ್ರಗತಿ ಸಾಧಿಸಿದೆಯೆಂದಾಯಿತು. ಅದರಂತೆ ಇಂತಹ ವಾಹನಗಳ ಸಂಖ್ಯೆಯಲ್ಲಿ ಕೂಡ ನೂರಕ್ಕೆ ೧೦೦ ರಷ್ಟು ಹೆಚ್ಚಳವಿದೆ. ೧೯೫೦-೫೧ ರಲ್ಲಿ ಭಾರತದಲ್ಲಿ ಒಟ್ಟು ೮೧,೦೦೦ ಸಾರಿಗೆ ವಾಹನಗಳಿದ್ದರೆ ೧೯೬೦-೬೧ ರಲ್ಲಿ ಆ ಸಂಖ್ಯೆ ೧೬೦,೦೦೦ ಕ್ಕೆ ಏರಿದೆ. ಆದರೆ ನಮ್ಮ ಮೂರನೆಯ ಯೋಜನೆಯಲ್ಲಿ ರೇಲ್ವೆ ಅಭಿವೃದ್ಧಿಗಾಗಿ ತೆಗೆದಿರಿಸಿದ ಮೊತ್ತವನ್ನು ನೋಡಿದಾಗ ರಸ್ತೆ ಅಭಿವೃದ್ಧಿಗಾಗಿ ನೀಡಿರುವ ರೂ. ೨೯೭ಕೋಟಿ ಅತ್ಯಲ್ಪವೆನಿಸುವಂತಿದೆ.

ಇಷ್ಟೆಲ್ಲ ಸಂಗತಿಗಳನ್ನು ಗಮನಿಸಿದಾಗ ಮೊದಲಿನ ಎರಡೂ ಯೋಜನೆಗಳಿಗಿಂತ ಗಾತ್ರದಲ್ಲಿ ತೀರ ಹಿರಿದಾದ ಯೋಜನೆಯ ಅಡಿಪಾಯ ಭದ್ರವಾಗಿದೆಯೆ ಎನ್ನುವುದು ಸಂದೇಹಾಸ್ಪದವಾಗಿ ಕಾಣುತ್ತದೆ. ಆದರೆ ಈ ಸಂದೇಹ ಪರಿಹಾರಕ್ಕೆ ಸುಲಭೋಪಾಯವಿರದಿದ್ದರೂ ಯೋಜನೆ ನಮ್ಮದು, ಯೋಜನೆ ನಮಗಾಗಿ ಎಂಬ ಕಲ್ಪನೆ ಜನಸಾಮಾನ್ಯದಲ್ಲಿ ಮೂಡಿ ಸಹಕಾರದ ಸೆಲೆ ಅಲ್ಲಿಯೇ ಒಡೆದರೆ ಎಂಥ ಕೊರತೆಗಳನ್ನೂ ತುಂಬಿಕೊಳ್ಳಬಲ್ಲ ಮನುಷ್ಯಬಲ ನಮ್ಮಲ್ಲಿದೆ. ಯೋಜನೆಯ ಯಶಸ್ಸಿನ ಗುಟ್ಟು ಸಾಮಾನ್ಯಜನತೆಯಲ್ಲಿಯೇ ಇದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಹಾಗಾದಾಗಲೆ ಜನತೆಯ 'ತ್ಯಾಗ'ಕ್ಕೆ ಒಂದು ಅರ್ಥ ಬರುತ್ತದೆ.



ಮಹಿಳೆಯರ ಇಂದಿನ ಸಮಸ್ಯೆಗಳು

ಲೇಖಿಕೆ:
ಶ್ರೀಮತಿ ಗೀತಾ ದೇಸಾಯಿ
ಬಿ.ಎ.(ಆನರ್ಸ್) ನಿಪ್ಪಾಣಿ

ಮಹಿಳೆಯರು ನಮ್ಮ ರಾಜ್ಯಘಟನೆಯ ಮೇರೆಗೆ ಪುರುಷರ ಸರಿಸಮಾನರಾಗಿದ್ದು ಎಲ್ಲ ಹಕ್ಕುಬಾಧ್ಯತೆಗಳನ್ನು ಪಡೆದಿರುವರು. ಆದರೂ ವಿಶಿಷ್ಟ ರೀತಿಯಲ್ಲಿ ರೂಪಿತವಾಗಿರುವ ಭಾರತೀಯ ಸಮಾಜದಲ್ಲಿ ಅವಳು ಈ ಹಕ್ಕುಬಾಧ್ಯತೆಗಳನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳಬಲ್ಲಳು ಎಂಬುದೊಂದು ವಿಚಾರಣೀಯ ಅಂಶವಾಗಿದೆ. ಹೀಗಾಗಿ ಈಗಲೂ ಅವಳು ಕೆಲವೊಂದು ಹೊಸಬಗೆಯ ಸಮಸ್ಯೆಗಳನ್ನು ಎದುರಿಸಬೇಕಾಗಿದ್ದು ಅವಾವೆಂಬುದನ್ನು ಲೇಖಿಕೆ ಇಲ್ಲಿ ಚರ್ಚಿಸಿದ್ದಾರೆ.

ಸ್ವಾಮಿ ವಿವೇಕಾನಂದರು ಭಾರತದ ಬಗೆಗೆ ಮಾತನಾಡುವಾಗ ಒಂದು ಸಲ ಹೀಗೆ ಅಂದಿದ್ದರು, "ನಮ್ಮ ದೇಶದ ಮುಂದೆ ಎರಡೇ ಎರಡು ಸಮಸ್ಯೆಗಳಿವೆ: ಸ್ತ್ರೀಯರು ಹಾಗು ಸಾಮಾನ್ಯ ಜನತೆ." ೬೦-೭೦ ವರ್ಷಗಳ ಪೂರ್ವದಲ್ಲಿ ದುಷ್ಟಸಂಪ್ರದಾಯಗಳ ಸಂಕೋಲೆಯಿಂದ ಬಂಧಿಸಲ್ಪಟ್ಟು ಜೀವನ್ಮೃತಾವಸ್ಥೆಯಲ್ಲಿದ್ದಂತಹ ಭಾರತೀಯ ಮಹಿಳೆಯ ದುಃಸ್ಥಿತಿಯನ್ನು ನೆನೆದರೆ, ಅದೇ ತಾನೇ ನವವಿಚಾರಗಳಿಂದ ಜಾಗ್ರತರಾದ ನಮ್ಮ ದೇಶದ ಸಮಾಜಸುಧಾರಕರಿಗೆ ಸ್ತ್ರೀಯೋ ಒಂದು ಸಮಸ್ಯೆಯಾಗಿ ಕಂಡುಬಂದುದು ಅಚ್ಚರಿಯ ಮಾತೇನಲ್ಲ. ಆದರೆ ವಿವೇಕಾನಂದರ ಕಾಲಕಳೆದು, ಸ್ತ್ರೀ ಜೀವನದಲ್ಲಿ ಸಾಕಷ್ಟು ಸ್ಥಿತ್ಯಂತರಗಳಾಗಿ ೩ ತಲೆಮಾರುಗಳು ಕಳೆದರೂ ಇನ್ನೂ ಮಹಿಳೆಯರ ತೊಂದರೆಗಳು ಸಂಪೂರ್ಣವಾಗಿ ನಿವಾರಣೆಯಾಗಿಲ್ಲೆಂಬುದು ನಿಜಕ್ಕೂ ಸೋಜಿಗದ ಸಂಗತಿ.

ಬ್ರಿಟಿಶರ ಕಾಲದಲ್ಲಿದ್ದ ಮಹಿಳೆಗೆ ಬಾಲವಿವಾಹ ಹಾಗು ಶಿಕ್ಷಣದ ಅಭಾವದಿಂದಾಗಿ ವ್ಯಕ್ತಿತ್ವವಿಕಾಸಕ್ಕೆ ಅವಕಾಶವೇ ಇರಲಿಲ್ಲ. ಅವಳಿಗೆ ಆರ್ಥಿಕ, ಸಾಮಾಜಿಕ ಮುಂತಾದ ಯಾವದೇ ರೀತಿಯ ಸ್ವಾತಂತ್ರ್ಯಗಳಿಲ್ಲದ ಮೂಲಕ ಅವಳು ಪುರುಷನ ತೊತ್ತು ಹಾಗು ಸೊತ್ತು ಎಂದು ಪರಿಗಣಿಸಲ್ಪಡುತ್ತಿದ್ದಳು. ಸುದೈವದಿಂದ ಸುಮಾರು ಅರ್ಧಶತಮಾನಗಳವರೆಗೆ ಭಾರತದಲ್ಲಿ ಜರುಗಿದ ರಾಜಕೀಯ ಆಂದೋಲನಗಳ ಪ್ರಭಾವ ಹಾಗು ಸಮಾಜಸುಧಾರಕರ ಸತತ ಪರಿಶ್ರಮಗಳ ಫಲವಾಗಿ ಮಹಿಳೆಯ ಇಂಥ ಹೀನಪರಿಸ್ಥಿತಿಯಲ್ಲಿ ಮಾರ್ಪಾಟಾಯಿತು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಸ್ತ್ರೀಯೂ ರಾಷ್ಟ್ರದ ಒಂದು ಮಹತ್ವದ ಘಟಕವೆಂಬುದನ್ನು ಪರಿಗಣಿಸಿ ಅವಳಿಗೆ ಪುರುಷನ ಸರಿಸಮಾನ ನಾಗರಿಕ ಹಕ್ಕುಗಳು ಕಾನೂನಿನಿಂದ ಕೊಡಮಾಡಲ್ಪಟ್ಟವು. ಅವಳಿಗೆ ಇಂದು ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಪ್ರವೇಶಿಸಲು ಅವಕಾಶವಿದೆ. ಹಾಗಿದ್ದರೂ ಇಂದಿನ ಸ್ತ್ರೀಯರು ಸಂಪೂರ್ಣ ಸುಖಿಗಳಾಗಿದ್ದಾರೆಯೋ ಎಂಬ ಪ್ರಶ್ನೆಯನ್ನು ನಾವು ವಿಚಾರಮಾಡಬೇಕಾಗಿದೆ. ಸ್ತ್ರೀ ಶಿಕ್ಷಣ ಬೆಳೆಯಿತೇನೋ ನಿಜ. ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ ಮತ್ತು ಬಾಲವಿವಾಹದ ಪ್ರತಿರೋಧದಿಂದ ಮಹಿಳೆಯರ ಎಲ್ಲ ಸಮಸ್ಯೆಗಳೂ ಪರಿಹಾರವಾಗಬಲ್ಲವು ಎಂದು ಅಂದಿನ ಸಮಾಜಸುಧಾರಕರು ಭಾವಿಸಿದ್ದರು. ಆದರೆ ೨ ಜಾಗತಿಕ ಮಹಾಯುದ್ಧಗಳಿಂದುಂಟಾದ ಆರ್ಥಿಕ ಮುಗ್ಗಟ್ಟನ್ನೆದುರಿಸಲು ಮಧ್ಯಮವರ್ಗದ ಶಿಕ್ಷಿತ ಮಹಿಳೆ ನೌಕರಿ ಮಾಡಬೇಕಾದ ಪ್ರಸಂಗ ಬಂದು, ಅದರಿಂದ ಅವಳ ಗೃಹಶಾಂತಿ ಕದಡಿ ನೂರೆಂಟು ಸಮಸ್ಯೆಗಳಿಗೆ ಅವಕಾಶನೀಡುವದೆಂಬುದರ ಕಲ್ಪನೆ ಅವರಿಗೆ ಹೇಗೆ ಬರಬೇಕು ? ಬಾಲವಿವಾಹದ ಪ್ರತಿಬಂಧದಿಂದ ಹುಡುಗಿಗೆ ತನ್ನ ಮನಸ್ಸಿಗೆ ವಿಚಾರಸರಣಿಗೆ ಅನುರೂಪನಾಗುವಂತಹ ಪತಿಯ ಆಯ್ಕೆ ಮಾಡಲು ಸಂಧಿ ಸಿಕ್ಕಿತು. ಆದರೆ ಇದರಿಂದ ಪ್ರೌಢಕುಮಾರಿಕೆಯರ ವಿವಾಹದ ಪ್ರಶ್ನೆ ಸಮಾಜದ ಮುಂದೆ ನಿಂತಿತು! ಹೀಗೆ ಒಂದು ಪ್ರಶ್ನೆ ಬಗೆಹರಿಯಿತೆನ್ನುವಷ್ಟರಲ್ಲಿ ಎರಡು ಹೊಸ ಸಮಸ್ಯೆಗಳು ಉದ್ಭವಿಸಿ, ಸ್ತ್ರೀಯರ ಸರ್ವತೋಮುಖ ಬೆಳವಣಿಗೆಗೆ ಆತಂಕವೊಡ್ಡಿದುದರಿಂದ ಅವರಿನ್ನೂ ಹಿಂದುಳಿದ ವರ್ಗದಲ್ಲಿಯೇ ಎಣಿಸಲ್ಪಡುತ್ತಾರೆ.

ಮಹಿಳೆಯರ ಇಂದಿನ ಸಮಸ್ಯೆಗಳನ್ನು ನಾಲ್ಕು ದೃಷ್ಟಿಯಿಂದ ಪರಿಶೀಲಿಸಬಹುದು: ಸರ್ವ ಸಾಮಾನ್ಯ ಮಹಿಳೆಯರ ಕುಂದುಕೊರತೆಗಳು, ಸುಶಿಕ್ಷಿತ ಗೃಹಿಣಿಯರ ಸಮಸ್ಯೆಗಳು, ಉದ್ಯೋಗಸ್ಥ ಮಹಿಳೆಯರ ತೊಂದರೆಗಳು ಹಾಗು ಪ್ರೌಢ ಕುಮಾರಿಕೆಯರ ಪ್ರಶ್ನೆಗಳು.

೧. ಸಾಮಾನ್ಯ ಸ್ತ್ರೀಯರ ಸಮಸ್ಯೆಗಳು

ಬೆರಳ ಮೇಲೆಣಿಸುವಷ್ಟು ಇರುವ ಕೆಲವು ವಿಚಾರವಂತ, ಸುಶಿಕ್ಷಿತ ಸ್ತ್ರೀಯರ ಮಾತನ್ನು ಬಿಟ್ಟರೆ ನಮ್ಮ ದೇಶದ ಬಹುಸಂಖ್ಯ ಸಾಮಾನ್ಯ ಸ್ತ್ರೀಯರಲ್ಲಿ ನಾವು ತಿಳಿದುಕೊಂಡಷ್ಟು ಜಾಗೃತಿಯಾಗಿಲ್ಲ. ಅವಳಿಗೆ ತಾನು ಸ್ವತಂತ್ರ ಹಾಗು ವಿಶಾಲರಾಷ್ಟ್ರದ ನಾಗರೀಕಳಿದ್ದೇನೆ ಎಂಬುದರ ಕಲ್ಪನೆಯಿಲ್ಲ. ಅಂತೆಯೇ ಅವಳಿಗೆ ತನ್ನ ಹಕ್ಕು ಮತ್ತು ಕರ್ತವ್ಯಗಳರಿವಿಲ್ಲ. ತನ್ನ ದೇಶದ ಆಗು-ಹೋಗುಗಳ ಬಗೆಗೆ ಅವಳಿಗೇನೂ ತಿಳಿದಿರುವದಿಲ್ಲ. ತಿಳಿದುಕೊಳ್ಳುವಷ್ಟು ಸಮಯವೂ ಅವಳಿಗಿರುವದಿಲ್ಲ. ಏರಿಕೆ ಬೆಲೆಗಳ ಇಂದಿನ ಕಾಲದಲ್ಲಿ ತನ್ನ ಪತಿಯ ಸಂಬಳದಲ್ಲಿ ಬೆಳೆಯುತ್ತಿರುವ ಸಂಸಾರವನ್ನು ಹೇಗೆ ಸಾಗಿಸಬೇಕೆಂಬುದನ್ನೇ ಯೋಚಿಸುತ್ತಿರುವ ಅವಳಿಗೆ ಚೀನವು ಭಾರತದ ಮೇಲೆ ದಂಡೆತ್ತಿ

ಬಂದರೂ ಅಷ್ಟೇ, ರಶಿಯದ ಅಂತರಿಕ್ಷ ಮಾನವ ಸುರಕ್ಷಿತವಾಗಿ ಭೂಮಿಗೆ ಮರಳಿ ಬಂದರೂ ಅಷ್ಟೆ - ತಾನಾಯಿತು, ತನ್ನ ಮನೆಯಾಯಿತು. ಮನೆಯ ಹೊರಗಿನ ವಿಷಯಗಳ ಬಗ್ಗೆ ಏನೋ ಒಂದು ತರದ ಔದಾಸೀನ್ಯ ಅವಳಲ್ಲಿ ನೆಲೆಯೂರಿದೆ. ಇದಕ್ಕೆ ಬಹಳ ಮಟ್ಟಿಗೆ ಅವಳಲ್ಲಿಯ ಶಿಕ್ಷಣದ ಅಭಾವವೇ ಕಾರಣವಾಗಿದೆ.

ಸಾಮಾನ್ಯ ಸ್ತ್ರೀಯಲ್ಲಿಯ ಇನ್ನೊಂದು ದೋಷವೆಂದರೆ ಅವಳಲ್ಲಿ ಆಳವಾಗಿ ಬೇರೂರಿದ ಅಂಧಃಶ್ರದ್ಧೆಗಳು. ಶತಮಾನಗಳಿಂದಲೂ ನಡೆದುಬಂದ ಸಮಾಜದ ಸತ್ಸಂಪ್ರದಾಯಗಳನ್ನು ಪಾಲಿಸುವದರಲ್ಲಿ ಯಾವ ಹಾನಿಯೂ ಇಲ್ಲ; ಆದರೆ ಬದಲಾಗುತ್ತಿರುವ ಆಧುನಿಕ ಯುಗದಲ್ಲಿ ಕುಟುಂಬ ಯೋಜನೆಯಂಥ ಶಾಸ್ತ್ರೀಯ ವಿಷಯದಲ್ಲಾಗಲಿ, ಮಡಿ-ಮೈಲಿಗೆಗಳಂತಹ ಧಾರ್ಮಿಕ ವಿಷಯದಲ್ಲಾಗಲಿ ಅಡ್ಡ ಬರುವ ಮೂಢ ನಂಬಿಕೆಗಳು ಮಹಿಳೆಗೆ ಬಂಧನಗಳಾಗುತ್ತವೆಯಲ್ಲದೆ, ದೇಶದ ಪ್ರಗತಿಗೂ ಮಾರಕವಾಗುತ್ತವೆ. ಸಮಾಜಸೇವಿಕೆಯರ ಸತತ ಪ್ರಯತ್ನದಿಂದ ಅವರ ಹೃದಯ ಪರಿವರ್ತನೆಯಾದಾಗಲೇ ಮಹಿಳೆಯರಲ್ಲಿದ್ದ ಇಂಥ ಮೂಢನಂಬಿಕೆಗಳು ಅಳಿಯಬಹುದು.

ಆರ್ಥಿಕವಾಗಿ ಮಧ್ಯಮ ವರ್ಗದ ಸ್ತ್ರೀ ಸಂಪೂರ್ಣ ಪುರುಷನ ಮೇಲೆಯೇ ಅವಲಂಬಿಸಿರಬೇಕಾಗುತ್ತದೆ. ಹೀಗಾಗಿ ಹಣ ಗಳಿಸುವ ಪತಿ ಅಕಸ್ಮಾತ್ತಾಗಿ ಅಂಗ ವಿಕಲನಾದರೆ ಅಥವಾ ನಿಧನಹೊಂದಿದರೆ ಅವಳು ತನ್ನ ಉದರ ನಿರ್ವಹಣೆಗಾಗಿ ಅಡಿಗೆಯವಳಾಗುವದೊಂದೇ ದಾರಿಯಾಗುತ್ತಿದೆ. ಒಂದುವೇಳೆ ಯಾವುದಾದರೂ ಕಾರಣದಿಂದ ಅವಳು ಪತಿಯಿಂದ ಪರಿತ್ಯಕ್ತಳಾದರೆ ಅವಳ ಬಾಳು ಯಾವ ರೀತಿಯದಾಗುತ್ತದೆಂಬುದನ್ನು ವರ್ಣಿಸುವದಸಾಧ್ಯ. ಅನೇಕ ಸಲ ಹಣದಾಸೆಯಿಂದ ಪರಿತ್ಯಕ್ತೆ ಪತಿತೆಯಾಗುವ ಪ್ರಸಂಗವೂ ಬರುತ್ತದೆ. ಪುನರ್ವಿವಾಹ ಹಾಗು ಘಟಸ್ಫೋಟಗಳಿಗೆ ಸಾಮಾಜಿಕ ಮನ್ನಣೆ ದೊರೆಯುವ ತನಕ ವಿಧವೆಯರ ಮತ್ತು ಪರಿತ್ಯಕ್ತೆಯರ ಸಮಸ್ಯೆಗಳು ಬಗೆಹರಿಯಲಾರವು.



ಒಟ್ಟಿನಮೇಲೆ ಇಂದಿನ ಭಾರತೀಯ ಪತಿ-ಪತ್ನಿಯರ ಸಹಯೋಗ ಕುರುಡ-ಕುಂಟರ ಸಹಯೋಗದಂತಿದೆ. ಏಕೆಂದರೆ ಇಬ್ಬರೂ ಅಷ್ಟೇ ಅಕ್ಷಮ್ಯರಾಗಿದ್ದಾರೆ. ಸ್ವತಂತ್ರವೃತ್ತಿಯ ಅಭಾವದಿಂದ ಹಾಗು ಜ್ಞಾನದ ಜ್ಯೋತಿಯಿಲ್ಲದೆ ಮಹಿಳೆ ಕುರುಡಳಂತಾಗಿದ್ದರೆ, ಅವಳ ಹೆಗಲಮೇಲೆ ಕುಳಿತು ಸಂಸಾರಸಾಗರವನ್ನು ದಾಟುತ್ತಿರುವ ಕುಂಟನಂತಿದ್ದ ಪುರುಷ ತನ್ನ ಬಟ್ಟೆಯನ್ನು ತಾನೇ ಒಗೆಯಲಾರದಷ್ಟು, ತನ್ನ ಅನ್ನವನ್ನು ತಾನೇ ಬೇಯಿಸಿಕೊಳ್ಳಲಾರದಷ್ಟು ಅಸಮರ್ಥನಾಗಿದ್ದಾನೆ. ಈ ರೀತಿ ಇಂದು ಸಾಮಾನ್ಯರ ಗೃಹಸ್ಥಾಶ್ರಮ ಕೈಲಾಗ-ದವರ ಕೂಟವಾಗಿದೆ.

ಇನ್ನು ಶ್ರಮಜೀವಿವರ್ಗದ ಗ್ರಾಮೀಣ ಮಹಿಳೆಯ ಬಗೆಗೆ ವಿಚಾರ ಮಾಡಿದರೆ ಅವಳ ಪರಿಸ್ಥಿತಿ ಸಾಮಾನ್ಯ ಸ್ತ್ರೀಯಳಿಗಿಂತಲೂ ಶೋಚನೀಯವಾಗಿದೆಯೆಂಬುದು ನಿದರ್ಶನಕ್ಕೆ ಬರುತ್ತದೆ. ಕೂಲಿಯನ್ನು ಮಾಡಿ ಆರ್ಥಿಕ ದೃಷ್ಟಿಯಿಂದ ಅವಳು ಸ್ವಾವಲಂಬಿಯಾಗಿದ್ದರೂ ಅವಳ ಜೀವನವೆಲ್ಲ ನಿರಕ್ಷರತೆ, ಅಸ್ವಚ್ಛತೆ, ದಾರಿದ್ರ್ಯ ಹಾಗು ಪತಿಯ ವ್ಯಸನಗಳೊಡನೆ ಹೋರಾಡುವದರಲ್ಲಿಯೇ ಕಳೆಯುತ್ತದೆ. ಯಾವುದೇ ದೇಶದ ಪ್ರಗತಿಯು ಅದರಲ್ಲಿರುವ ಮಹಿಳೆಯರ ಮೇಲೆಯೇ ಅವಲಂಬಿಸಿರುವದನ್ನು ಗಮನಿಸಿ ಭಾರತ ಸರಕಾರವು ಗ್ರಾಮೀಣ ಮಹಿಳೆಯ ಏಳ್ಗೆಗಾಗಿ ಸಮಾಜ ಕಲ್ಯಾಣ ಯೋಜನೆಯಂಥ ಹಲವಾರು ಯೋಜನೆಗಳನ್ನು ಮಾಡುತ್ತಲಿದೆ. ಆದರೆ ಭಾರತದ ವೈಶಾಲ್ಯ ಹಾಗು ನಿಷ್ಠಾವಂತ ಕಾರ್ಯಕರ್ತರ ಅಭಾವದಿಂದ ಆ ಯೋಜನೆಗಳು ಸಾಧಿಸಬೇಕಾದಷ್ಟು ಯಶಸ್ಸನ್ನು ಇನ್ನೂ ಸಾಧಿಸಿಲ್ಲ.

೨. ಸುಶಿಕ್ಷಿತ ಗೃಹಿಣಿಯರ ಸಮಸ್ಯೆಗಳು

ಅನಕ್ಷರಸ್ಥ ಮಹಿಳೆ ತನ್ನಲ್ಲಿರುವ ಕುಂದುಕೊರತೆಗಳ ಫಲವಾಗಿ ಸಮಾಜದಲ್ಲಿ ಗೌಣ ವ್ಯಕ್ತಿಯೆನಿಸುತ್ತಾಳೆ. ಶಿಕ್ಷಣದ ಬೆಂಬಲವಿರುವ ಸ್ತ್ರೀಗೆ ಆ ತೊಂದರೆಯಿಲ್ಲವಾದರೂ ಅವಳಿಗೆ ತನ್ನವೇ ಆದ ವಿಶಿಷ್ಟ ಸಮಸ್ಯೆಗಳಿವೆ.

ಭರದಿಂದ ಬೆಳೆಯುತ್ತಿರುವ ಸ್ತ್ರೀ-ಶಿಕ್ಷಣದ ಪರಿಣಾಮವಾಗಿ ಇಂದು ಬಹುಸಂಖ್ಯ ಕುಟುಂಬಗಳು ಸುಶಿಕ್ಷಿತ ಗೃಹಿಣಿಯರಿಂದ ಸುಶೋಭಿತವಾಗಿರುವದನ್ನು ಕಾಣುತ್ತೇವೆ. ಆಧುನಿಕ ಸ್ತ್ರೀ ಎಂದೊಡನೆ ನಮ್ಮ ಕಣ್ಮುಂದೆ ಬರುವವಳು ಸುಶಿಕ್ಷಿತ ಮಹಿಳೆಯೇ. ಅವಳಿಗೆ ಸಮಾಜದಲ್ಲಿ ಗೌರವಯುತವಾದ ಸ್ಥಾನವಿದೆ. ನಮ್ಮ ಮುಂದಾಳುಗಳು ಸಹ ಭಾರತದ ಭವಿತವ್ಯ ಅವಳಮೇಲೆಯೇ ಅವಲಂಬಿಸಿದೆ, ಎಂದು ಅವಳನ್ನು ಆಸೆಯ ಕಂಗಳಿಂದ ನೋಡುತ್ತಲಿದ್ದಾರೆ. ಒಟ್ಟನ ಮೇಲೆ ಮುಕ್ಕಾಲು ಶತಮಾನದ ಪೂರ್ವದಲ್ಲಿಯ ನಮ್ಮ ದೇಶದ ಸಮಾಜಸುಧಾರಕರು, ಪ್ರಗತಿಶೀಲ ವಿಚಾರವಾದಿಗಳು ಸ್ತ್ರೀಯಬಗೆಗೆ ಯಾವ ಕನಸನ್ನು ಕಟ್ಟಿಕೊಂಡಿದ್ದರೋ ಆ ಸ್ವಪ್ನದ ಸಾಕಾರಮೂರ್ತಿಯೇ ಆಧುನಿಕ ಸುಶಿಕ್ಷಿತ ಗೃಹಿಣಿಯಾಗಿದ್ದಾಳೆಂದರೆ ಅತಿಶ-ಯೋಕ್ತಿಯಾಗಲಿಕ್ಕಿಲ್ಲ.

“ಇಂದಿನ ಶಿಕ್ಷಿತ ಮಹಿಳೆಗೆ ‘ಸ್ತ್ರೀ’ ಎಂಬ ಕಾರಣದಿಂದ ಇದ್ದ ಯಾವ ದುಃಖಗಳೂ ಉಳಿದಿಲ್ಲ. ಹಾಗೆ ನೋಡಿದರೆ ಪುರುಷನಿಗಿಂತಲೂ ಅವಳು ಸುಖಿಯಾಗಿದ್ದಾಳೆ” ಎಂದು ಕೆಲವರು ವಾದಿಸುತ್ತಾರೆ. ಇನ್ನೂ ಮುಂದೆ ಹೋಗಿ ಅವರು, “ಮಹಿಳಾಮಂಡಳದ ಸಭೆಗಳಲ್ಲಿ ಕಾರ್ಯಕರ್ತೆಯರು ಸ್ತ್ರೀಯರ ದಾಸ್ಯದ ಬಗ್ಗೆ ಅಥವಾ ಆರ್ಥಿಕ ಪರಾವಲಂಬನೆಯ ಬಗ್ಗೆ ಉದ್ದುದ್ದ ಭಾಷಣಗಳನ್ನು

ಬಿಗಿಯುವದು, ಪತ್ರಿಕೆಗಳಲ್ಲಿ ಸ್ತ್ರೀಯರ ಸಮಸ್ಯೆಗಳ ಅತಿರಂಜಿತ ವರ್ಣನೆ ಮಾಡುವದು ಹಾಸ್ಯಾಸ್ಪದವಾಗಿದೆ" ಎಂದು ಹೇಳುತ್ತಾರೆ. ಹೀಗೆ ವಾದಿಸುವವರು ಆಧುನಿಕ ಗೃಹಿಣಿಯ ಬಾಹ್ಯಸ್ವರೂಪವನ್ನೇ ಅವಳ ಸಂತೃಪ್ತ ಜೀವನದ ಅಳತೆಗೋಲಾಗಿ ಮಾಡುತ್ತಾರೆಯೇ ಹೊರತು ಅವಳ ಅಂತರಂಗದ ಹೋರಾಟವನ್ನು ಗಮನಿಸುವದಿಲ್ಲ.

ಇಂದಿನ ಗೃಹಿಣಿಯರು ಸುಶಿಕ್ಷಿತರಾಗಿದ್ದರೂ ಹಿಂದಿನ ಕಾಲದ ಅಶಿಕ್ಷಿತ ಸ್ತ್ರೀಯರಷ್ಟು ಸುಖ ಸಮಾಧಾನಗಳಿಂದ ಸಂಸಾರವನ್ನು ಸಾಗಿಸುವದಿಲ್ಲೆಂಬ ಆರೋಪ ಆಗಾಗ ಕೇಳಿಬರುತ್ತಿರುತ್ತದೆ. ಆದರೆ ನಮ್ಮ ಅಜ್ಜಿಯರ ಕಾಲಕ್ಕಿದ್ದ ಪರಿಸ್ಥಿತಿಗೂ ಈಗಿನದಕ್ಕೂ ಮಹದಂತರವಿದೆ. ಎಳೆ ವಯಸ್ಸಿನಲ್ಲೇ ಅತ್ತೆಮನೆಗೆ ಬರುತ್ತಿದ್ದ ನಮ್ಮ ಅಜ್ಜಿ ಅಲ್ಲಿಯ ವಾತಾವರಣಕ್ಕೆ, ವ್ಯಕ್ತಿಗಳೊಂದಿಗೆ ಬೇಗ ಹೊಂದಿಕೊಂಡು ಬಿಡುತ್ತಿದ್ದಳು. ತನಗೆ ಸರಿಯೆಂದು ಕಾಣದ ಮಾತುಗಳನ್ನು ಮೌನವಾಗಿ ಒಪ್ಪಿಕೊಂಡು, ಹಿರಿಯರ ಅಪ್ಪಣೆಯನ್ನವಳು ಪಾಲಿಸಬೇಕಾಗುತ್ತಿತ್ತು. ಒಂದು ದೃಷ್ಟಿಯಿಂದ ನೋಡಿದರೆ ಕರ್ಫ್ಯೂ ಆರ್ಡರು ಜಾರಿಯಲ್ಲಿರುವಾಗ ನೆಲೆಸುವ ನಿಃಶಬ್ದತೆಯಂತೆ ಅವಳ ಜೀವನವಾಗಿತ್ತು. ಆ ಭಯಂಕರ ನಿಶ್ಚಲತೆಗೇ, ಆ ಮಹಾ ಮೌನಕ್ಕೇ ನಾವು ಸ್ವಾಸ್ಥ್ಯದ ಲಕ್ಷಣವೆಂದೆನ್ನಬಹುದಾದರೆ ಅವರ ಜೀವನ ಸುಖಮಯವಾಗಿತ್ತೆಂದೇ ಹೇಳಬೇಕು. ಆದರೆ ವ್ಯಕ್ತಿಸ್ವಾತಂತ್ರ್ಯದ ಇಂದಿನ ಯುಗದಲ್ಲಿ ಈ ಮಾತು ಹಾಸ್ಯಾಸ್ಪದವೆನಿಸಲಾರದೇ ? ತನ್ನದೇ ಆದ ಒಂದು ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡು, ಸಾಕಷ್ಟು ಪ್ರಬುದ್ಧಳಾಗಿ ಅತ್ತೆಯ



ಮನೆಗೆ ಕಾಲಿರಿಸುವ ಆಧುನಿಕ ಸೊಸೆ ತನ್ನ ಮನಸ್ಸಿಗೆ ಬಾರದ ವಿಷಯಗಳ ಬಗ್ಗೆ ವಾದಿಸಬಹುದು. ಈ ರೀತಿ ಹಳೆ-ಹೊಸ ವಿಚಾರಗಳ ತಾಕಲಾಟದಿಂದ ಗೃಹಶಾಂತಿ ನಷ್ಟವಾಗುವದೆಂದು ಒಂದು ಕ್ಷಣ ಅನಿಸಿದರೂ ಆ ತುಮುಲದಲ್ಲಿ ಸುಶಿಕ್ಷಿತ ಮಹಿಳೆಯೇ ಸೋಲನ್ನಪ್ಪಿ ಮನೆಯಲ್ಲಿ ಸೌಹಾರ್ದದ ವಾತಾವರಣವುಂಟಾಗುವಂತೆ ನೋಡಿಕೊಳ್ಳುತ್ತಾಳೆ.

ಆಧುನಿಕ ಗೃಹಿಣಿಯನ್ನು ಕುಟುಂಬದಲ್ಲಿಯ ಜನರು ವಿಮರ್ಶಕದೃಷ್ಟಿಯಿಂದ ನೋಡುವಂತೆ ಸಮಾಜವೂ ಅವಳಿಂದ ಬಹಳಷ್ಟು ಅಪೇಕ್ಷಿಸುತ್ತದೆ. ಆದರೆ ಅವಳಿಗೆ ಅನುಕೂಲ ವಾತಾವರಣ ಹಾಗು ಪ್ರೋತ್ಸಾಹಗಳ ಅಭಾವವಿರುವದರಿಂದ ಸಮಾಜಕ್ಕೆ ಅವಳಿಂದ ಆಗಬೇಕಾದಷ್ಟು ಉಪಯೋಗ ಆಗುತ್ತಿಲ್ಲ. Emancipation of woman is re-education of men (ಸ್ತ್ರೀಯರ ವಿಮೋಚನೆಯೆಂದರೆ ಪುರುಷರಿಗೆ ಪುನಃ ಶಿಕ್ಷಣ) ಎಂಬ ಮಾತನ್ನು ಸಮಾಜ ಲಕ್ಷ್ಯದಲ್ಲಿ ಇರಿಸಬೇಕು. ಇಂದಿನ ಯುವಕನು ಪತ್ನಿಯ ಆಯ್ಕೆ ಮಾಡುವಾಗ ಕಲಿತ ಹುಡುಗಿಯನ್ನೇ ಆರಿಸಿಕೊಂಡರೂ ಅವಳ ಯಾವ ಹವ್ಯಾಸಗಳಿಗೂ ಆಸ್ಪದ ದೊರೆಯದಂತೆ, ಪೇಟೆಯಿಂದ ಸಾಮಾನು ತರುವದರಿಂದ ಹಿಡಿದು ಮಕ್ಕಳ ಶಿಕ್ಷಣದ ವರೆಗಿನ ಎಲ್ಲ ಜವಾಬ್ದಾರಿಗಳನ್ನು ಅವಳ ಮೇಲೆ ಹೊರೆಸುತ್ತಾನೆ. ಹಣಗಳಿಸಿದರೆ ತನ್ನ ಕರ್ತವ್ಯ ಮುಗಿಯಿತು ಎಂದವನಭಾವನೆ. ಆದರೆ ಇದರಿಂದ ಸುಶಿಕ್ಷಿತ ಮಹಿಳೆ ಯಾವ ತರದ ಮಾನಸಿಕ ಹಾಗು ಬೌದ್ಧಿಕ ಹೋರಾಟವನ್ನನುಭವಿಸಬೇಕಾಗುತ್ತದೆಯೆಂಬ ಕಲ್ಪನೆ ಅವನಿಗೆ ಹೇಗೆ ಬರಬೇಕು ? ಈ ರೀತಿ ಹತ್ತಿಕ್ಕಿದ ಆಸೆ ಆಕಾಂಕ್ಷೆಗಳೇ ಇಂದಿನ ಅಯಶಸ್ವಿ ವಿವಾಹಗಳಿಗೂ, ಕೌಟುಂಬಿಕ ಅಸ್ವಾಸ್ಥ್ಯಗಳಿಗೂ ಕಾರಣಗಳಾಗಿವೆ. ಹಾಗಿದ್ದರೂ ಆಧುನಿಕ ಗೃಹಿಣಿಯರು ಸಹನೆಯಿಂದ ವರ್ತಿಸಿ ಮನೆಯನ್ನು ನಂದನವನವನ್ನಾಗಿ ಮಾಡಲು ಶಕ್ತಿಮೀರಿ ಪ್ರಯತ್ನಿಸಿ ಯಶಸ್ವಿಯಾಗುತ್ತಿರುವದನ್ನು ನಾವು ನೋಡಬಹುದು.

೩. ಉದ್ಯೋಗಸ್ಥ ಮಹಿಳೆಯರ ತೊಂದರೆಗಳು

ಎರಡು ಜಾಗತಿಕ ಮಹಾಯುದ್ಧಗಳ ಪರಿಣಾಮದಿಂದ ಭಾರತವು ಆರ್ಥಿಕ ಮುಗ್ಗಟ್ಟನ್ನೆದುರಿಸಬೇಕಾಯಿತು. ಹಿಟ್ಲರನು ಕೇವಲ ಇಂಗ್ಲಂಡದ ಮೇಲಷ್ಟೇ ದಾಳಿ ಮಾಡಿದರೂ ಆದರಿಂದ ನಮ್ಮ ಮಧ್ಯಮ ವರ್ಗದ ಪ್ರತಿ ಮನೆಯೂ ಆರ್ಥಿಕ ದೃಷ್ಟಿಯಿಂದ ಉಧ್ವಸ್ತವಾಯಿತು! ಕೇವಲ ತಂದೆಯ ಅಥವಾ ಪತಿಯ ಗಳಿಕೆಯಿಂದ ಮನೆ ನಡೆಯದಂತಾಗಲು ಸ್ತ್ರೀಯರೂ ನೌಕರಿ ಮಾಡಲು ಪ್ರಾರಂಭಿಸಿದರು. ಮೊದ-ಮೊದಲು ಶಿಕ್ಷಿಕೆಯರಾಗಿಯೋ, ಪರಿಚಾರಿಕೆಯರಾಗಿಯೋ ಕೆಲಸ ಮಾಡುತ್ತಿದ್ದ ಸ್ತ್ರೀಯರು ಕಳೆದ ೨೫ ವರ್ಷಗಳ ಅವಧಿಯಲ್ಲಿ ಎಲ್ಲ ವ್ಯವಸಾಯಗಳಲ್ಲಿಯೂ ಕಾಲಿರಿಸಿದ್ದಾರೆ.

ನೌಕರಿ ಮಾಡಿ ತಮ್ಮ ಸಂಸಾರಕ್ಕೆ ನೆರವಾಗುತ್ತಿರುವ ಮಹಿಳೆಯರ ಕಾರ್ಯಶಕ್ತಿ ಮೆಚ್ಚುವಂತಹದಾಗಿದೆಯೆಂಬುದು ಅವರ ಮುಂದಿರುವ ಸಮಸ್ಯೆಗಳನ್ನು ನೋಡಿದಾಗ ಅನಿಸುತ್ತದೆ. ಕುಟುಂಬದ ಜನರಿಂದ ಸಾಕಷ್ಟು ಸಹಕಾರದ ಅಭಾವ, ಸಮಾಜದ ಸಹಾನುಭೂತಿ ಇಲ್ಲದಿರುವದು ಹಾಗು ನೌಕರಿಯ ಸ್ಥಳದಲ್ಲಿ ಇರುವ ಪ್ರತಿಕೂಲ ಪರಿಸ್ಥಿತಿ ಇವುಗಳ ಮೂಲಕ ಉದ್ಯೋಗಸ್ಥ ಮಹಿಳೆಗೆ ಅನೇಕ ಕೌಟುಂಬಿಕ, ಸಾಮಾಜಿಕ ಮತ್ತು ವ್ಯಾವಸಾಯಿಕ ತೊಂದರೆಗಳನ್ನೆದುರಿಸಬೇಕಾಗುತ್ತದೆ.

ಇಂಗ್ಲಂಡ, ಅಮೇರಿಕೆಯಂಥ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಗೃಹಕೃತ್ಯಕ್ಕಾಗಿ ಯಾಂತ್ರಿಕ ಉಪಕರಣಗಳಿರುವದರಿಂದ ಅಲ್ಲಿನ ಉದ್ಯೋಗಸ್ಥ ಹೆಣ್ಣುಮಕ್ಕಳಿಗೆ ಮನೆಗೆಲಸದ ಶ್ರಮ ಬೀಳುವದಿಲ್ಲ. ಆದರೆ ಭಾರತದಂಥ ಬಡದೇಶಗಳಲ್ಲಿ ಆ ಸೌಲಭ್ಯಗಳು ಎಲ್ಲಿಂದ ಬರಬೇಕು ? ಅಲ್ಲದೆ ಮನೆಗೆಲಸ ಮಾಡುವದೆಂದರೆ ತಮ್ಮ ಪ್ರತಿಷ್ಠೆಗೆ ಕುಂದು ಎಂಬ ಭಾವನೆ ಇನ್ನೂ ನಮ್ಮ ಗಂಡಸರಲ್ಲಿರುವಾಗ ಅವರಿಂದ ಅವಳು ಸಹಾಯದ ಅಪೇಕ್ಷೆಯನ್ನಾದರೂ ಹೇಗೆ ಮಾಡಬೇಕು ? ಸಾಯಂಕಾಲ ಆಫೀಸಿನಿಂದ ಗಂಡ-ಹೆಂಡತಿಯರಿಬ್ಬರೂ ದಣಿದು ಬಂದರೂ ಗಂಡ 'ಹುಶ್' ಎನ್ನುತ್ತ ಆರಾಮ ಕುರ್ಚಿಯ ಮೇಲೆ ಉರುಳುತ್ತಾನೆ. ಹೆಂಡತಿ ಮಾತ್ರ ಲಗುಬಗೆಯಿಂದ ಚಹಕ್ಕಾಗಿ ಸ್ಟವ್ಹ್ ಹೊತ್ತಿಸಿ ಸಂಜೆಯ ಅಡಿಗೆಯ ತಯಾರಿಯಲ್ಲಿ ತೊಡಗಬೇಕಾಗುತ್ತದೆ! ಅತಿಥಿ, ಮಕ್ಕಳ ಯೋಗಕ್ಷೇಮವಂತೂ ಅವಳ ಪಾಲಿಗಿದ್ದದ್ದೇ. ಹೀಗೆ ಎರಡೆರಡು ಹೊಣೆಗಳನ್ನು ಅವಳು ಹೊರಬೇಕಾಗುವದರಿಂದ ಅವಳಲ್ಲಿ ಶಾರೀರಕ ಹಾಗು ಮಾನಸಿಕ ದುರ್ಬಲತೆಗಳುಂಟಾಗುತ್ತವೆ.

ನಿಜವಾಗಿಯೂ ಇಂಥ ಕಷ್ಟಮಯ ಜೀವನವನ್ನು ಸಾಗಿಸುತ್ತಿರುವ ಉದ್ಯೋಗಸ್ಥ ಮಹಿಳೆಯ ಬಗ್ಗೆ ಸಮಾಜದಲ್ಲಿಯ ಪ್ರತಿಯೋರ್ವ ವ್ಯಕ್ತಿಗೂ ಸಹಾನುಭೂತಿಯೆನಿಸಬೇಕು. ಆದರೆ ನಾವು ನೋಡುವದೇನು? ಪಾಶ್ಚಾತ್ಯ ರಾಷ್ಟ್ರಗಳಲ್ಲಿಯಂತೆ ನೌಕರಿ ಮಾಡುತ್ತಿರುವ ಮಹಿಳೆಗೆ ಸಾಮಾಜಿಕ ಪ್ರತಿಷ್ಠೆ ನಮ್ಮ ದೇಶದಲ್ಲಿನ್ನೂ ಪ್ರಾಪ್ತವಾಗಿಲ್ಲ. ಪ್ರಗತಿಶೀಲ ವಿಚಾರವಾದಿಗಳು ಸಹ ಗೃಹಸೌಖ್ಯ ನಷ್ಟವಾಗುವದೆಂಬ ಕಾರಣದಿಂದ ಸ್ತ್ರೀಯರು ನೌಕರೀಮಾಡಬಾರದೆನ್ನುವ ಸನಾತನಿಗಳ ಅಭಿಪ್ರಾಯವನ್ನೇ ಸಮರ್ಥಿಸುತ್ತಾರೆ. ಆದರೆ ಕೆಲವು ಶ್ರೀಮಂತ ಸ್ತ್ರೀಯರನ್ನು ಬಿಟ್ಟರೆ, ಅನಿವಾರ್ಯವೆಂದೆನಿಸಿದ ಹೊರತು ಯಾವ ಹೆಣ್ಣೂ ಮೋಜಿಗಾಗಿ ನೌಕರಿಮಾಡಲು ಬಯಸುವದಿಲ್ಲ ಎಂಬ ಮಾತನ್ನು ಸಂಪ್ರದಾಯವಾದಿಗಳು ಗಮನದಲ್ಲಿಟ್ಟರೆ ಉದ್ಯೋಗಸ್ಥ ಮಹಿಳೆಯನ್ನು ನೋಡುವ ಅವರ ದೃಷ್ಟಿ ವಿಶಾಲವಾದೀತು.

ಕೌಟುಂಬಿಕ ಜೀವನದಲ್ಲಿ ಸಹಕಾರ ಹಾಗು ಸಮಾಜದ ಸಹಾನುಭೂತಿಗಳು ದೊರೆತರೂ ಶ್ರಮಿಕಮಹಿಳೆಗೆ ಅವಳು ದುಡಿಯುತ್ತಿರುವ ವ್ಯವಸಾಯಕ್ಷೇತ್ರದಲ್ಲಿ ಅವಳ ಕಾರ್ಯಕ್ಷಮತೆಯನ್ನು ಕಡಿಮೆ ಮಾಡುವಂತಹ ಸಮಸ್ಯೆಗಳು ಉದ್ಭವಿಸುತ್ತವೆ. ಸಾಮಾನ್ಯವಾಗಿ ನೌಕರಿ ಮಾಡುವ ಹುಡುಗಿಯನ್ನು ಅವಳ ಸಹಕಾರಿಗಳು ಒಂದು ಪ್ರದರ್ಶನಕ್ಕಿಟ್ಟ ವಸ್ತುವಿನಂತೆ ನೋಡುತ್ತಾರೆ. ವರಿಷ್ಠ ಅಧಿಕಾರಿಗಳು ಸಹ ಅವಳ ಜೊತೆಗೆ ಎಷ್ಟೋ ಅಸಭ್ಯತನದಿಂದ ವರ್ತಿಸುತ್ತಾರೆ. ವಿಶೇಷತಃ ಹಳ್ಳಿಗಳಲ್ಲಿ ಕೆಲಸ ಮಾಡುತ್ತಿರುವ ಸ್ತ್ರೀಯರಿಗೆ ಇಂಥ ಅನುಭವಗಳು ಮೇಲಿಂದ ಮೇಲೆ ಬರುತ್ತವೆ. ತನ್ನ ನೌಕರಿಗೆಲ್ಲಿ ಧಕ್ಕೆ ಬರುವದೋ ಎಂದು ಅವಳು ಎಲ್ಲವನ್ನೂ ಮೌನವಾಗಿ ಸಹಿಸುತ್ತಾಳೆ. ತೀರ ಅಸಹ್ಯವಾದಾಗ ಮಾತ್ರ ಅನಿವಾರ್ಯವಾಗಿ ಅವಳು ಕೆಲಸಕ್ಕೆ ರಾಜೀನಾಮೆ ಕೊಡಬೇಕಾಗುತ್ತದೆ. ಇದರಿಂದ ಕೇವಲ ಓರ್ವ ಸ್ತ್ರೀಯ ಜೀವನವಷ್ಟೇ ಅಲ್ಲ, ಅವಳನ್ನವಲಂಬಿಸಿದ ಅವಳ ಸಂಸಾರದ ನೆಮ್ಮದಿಯೂ ಹಾಳಾಗುವದೆಂಬುದನ್ನು ಸುಸಂಸ್ಕೃತರೆನ್ನಿಸಿಕೊಳ್ಳುವ ವರಿಷ್ಠಾಧಿಕಾರಿಗಳು ತಿಳಿಯಬೇಡವೆ?

ಉದ್ಯೋಗಸ್ಥ ಮಹಿಳೆಯ ಮತ್ತೊಂದು ತಾಪತ್ರಯವೆಂದರೆ ಮಕ್ಕಳು. ಇತರ ಮುಂದುವರಿದ ರಾಷ್ಟ್ರಗಳಲ್ಲಿಯ ಶ್ರಮಿಕ ಮಹಿಳೆ ತನ್ನ ಚಿಕ್ಕ ಮಗುವನ್ನು ಸಹ ತಾನು ಕೆಲಸ ಮಾಡುತ್ತಿರುವಸ್ಥಳಕ್ಕೆ ಒಯ್ಯಬಲ್ಲಳು. ಅಲ್ಲಿರುವ ದಾದಿಯರು ಅವಳ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವದರಿಂದ ಅವಳು ನಿಶ್ಚಿಂತೆಯಿಂದ ಕೆಲಸ ಮಾಡಬಹುದಾಗಿದೆ. ಭಾರತದಲ್ಲಿಯೂ ಕೆಲವು ದೊಡ್ಡ ದೊಡ್ಡ ಪಟ್ಟಣಗಳಲ್ಲಿಯ ಕಾರಖಾನೆಗಳಲ್ಲಿ ಇಂಥ ಶಿಶು-ಸಂಗೋಪನ ಕೇಂದ್ರಗಳಿವೆ.



ಆದರೆ ಬೇರೆ ಬೇರೆ ಆಫೀಸುಗಳಲ್ಲಿ, ಶಾಲೆಗಳಲ್ಲಿ ದುಡಿಯುತ್ತಿರುವ ಸ್ತ್ರೀಯರಿಗೆ ಇಂಥ ಅನುಕೂಲತೆಗಳಿಲ್ಲದುದರಿಂದ ಅವರು ಪೂರ್ತಿ ಮನಸ್ಸುಗೊಟ್ಟು ಕೆಲಸಮಾಡಲು ಸಾಧ್ಯವಾಗುವದಿಲ್ಲ. ಹೀಗಾಗಿ ಅವಳ ಜೊತೆಗೆ ಕೆಲಸ ಮಾಡುತ್ತಿರುವ, ಅಷ್ಟೇ ಬುದ್ಧಿಶಕ್ತಿಯುಳ್ಳ ಪುರುಷನಿಗಿಂತ ಅವಳ ಕಾರ್ಯ ಕಡಿಮೆ ದರ್ಜೆಯದೆನಿಸಿ ಅವಳ ವೇತನದಮೇಲೆ ಪರಿಣಾಮ ಬೀರುತ್ತದೆ. ಒಂದೇ ಬಗೆಯ ಕೆಲಸವಿದ್ದರೂ ಸ್ತ್ರೀ-ಪುರುಷರು ಕೂಡಿ ಮಾಡಿದಾಗ ಹೆಣ್ಣಾಳಿಗೆ ಗಂಡಾಳಿಗಿಂತ ಕಡಿಮೆ ವೇತನವೆಂಬುದು ಅಲಿಖಿತ ನಿಯಮವಾಗಿಬಿಟ್ಟದೆ. ಸರಕಾರೀ ಕೆಲಸಗಳಲ್ಲಿ ಈಗ ಈ ಧೋರಣೆ ಬದಲಾಗಿದ್ದರೂ ಖಾಸಗಿ ಉದ್ದಿಮೆಗಳಲ್ಲಿ ಇನ್ನೂ ಸಂಬಳದಲ್ಲಿ ವ್ಯತ್ಯಾಸ ಇದ್ದೇ ಇದೆ.

ಪುರುಷ ನೌಕರಿ ಮಾಡುವಾಗ ಯಾವ ಸಮಸ್ಯೆಗಳು ಉದ್ಭವಿಸದಿದ್ದಾಗ ಸ್ತ್ರೀಯರಿಗೇ ಇಷ್ಟೆಲ್ಲ ಅಡೆ-ತಡೆಗಳೇಕೆ ಬರುತ್ತವೆಯೆಂಬುದಕ್ಕೆ ಬಲವಾದ ಕಾರಣವಿದೆ. ಅಸ್ವಾಲ್ಡ ಸ್ಕ್ವಾರ್ಝ (Oswald Schwrz) ಎಂಬ ಶಾಸ್ತ್ರಜ್ಞ ತನ್ನದೊಂದು ಪುಸ್ತಕದಲ್ಲಿ, "There is an essential conflict in womans' existence. She has a brain as well as a womb"—ಎಂದು ಹೇಳಿದ್ದಾನೆ. ಪುರುಷನಂತೆ ಸ್ತ್ರೀಯ ಜೀವನ ಏಕಾಂಗಿಯಾಗಿಲ್ಲ. ನಿಸರ್ಗವು ಅವಳಿಗೆ ಪುರುಷನಷ್ಟೇ ಬುದ್ಧಿಮತ್ತೆಯನ್ನು ಕೊಟ್ಟದ್ದರೂ ಅದರ ಜೊತೆಗೆ ತಾಯ್ತನದ ಹೊಣೆಯನ್ನೂ ಹೊರಿಸಿದೆ. ಈ ಎರಡನ್ನೂ ಹೇಗೆ ಹೊಂದಿಸಿಕೊಂಡು ಹೋಗುವದೆಂಬುದೇ ಅವಳ ಮುಂದಿರುವ ಸಮಸ್ಯೆಯಾಗಿದೆ. ಪರಿಸ್ಥಿತಿಯ ಮೂಲಕ ಹಾಗೂ ರಾಷ್ಟ್ರನಿರ್ಮಾಣಕಾರ್ಯದ ಈ ಮಹತ್ವದ ಸಮಯದಲ್ಲಿ ಇದುವರೆಗೂ ಸುಪ್ತವಾಗಿದ್ದ ಅವಳ ಕಾರ್ಯಕುಶಲತೆಯ ಅವಶ್ಯಕತೆ ಹೆಚ್ಚಾಗಿದೆ. ಅದಕ್ಕಾಗಿ ಕುಟುಂಬದ ಜನರ ಸಹಾಯ ಸಹಕಾರಗಳು ಹಾಗು ಸರಕಾರದಿಂದ ಇನ್ನೂ ಹೆಚ್ಚಿಗೆ ಸೌಲಭ್ಯಗಳು ಉದ್ಯೋಗಸ್ಥ ಮಹಿಳೆಗೆ ದೊರೆತರೆ ಅವಳು ತನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿ ತನ್ನ ಹಿತಸಾಧನೆಯ ಜೊತೆಗೆ ದೇಶದ ಹಿತವನ್ನೂ ಸಾಧಿಸಬಹುದು.

೪. ಪ್ರೌಢ ಕುಮಾರಿಯರ ಪ್ರಶ್ನೆಗಳು

ಅನೇಕ ಕಾರಣಗಳ ಮೂಲಕ ಇಂದು ಹುಡುಗಿಯರ ವಿವಾಹದ ವಯಸ್ಸು ದಿನ ದಿನಕ್ಕೂ ಬೆಳೆಯಹತ್ತಿದೆ. ಪ್ರೌಢ ಕುಮಾರಿಕೆಯ ಮದುವೆಗೆ ಬರುವ ಆತಂಕಗಳನ್ನು ನೋಡಿದರೆ ಮೊದಲು ಭಾರತದಲ್ಲಿ ರೂಢಿಯಲ್ಲಿದ್ದ ಬಾಲವಿವಾಹಗಳನ್ನೇ ಮತ್ತೆ ಆಚರಣೆಯಲ್ಲಿ ತರಬೇಕೇನೋ ಎಂದೆನಿಸುತ್ತದೆ! ಹೆಣ್ಣಿನ ಮದುವೆಗೆ ವರದಕ್ಷಿಣೆ, ಜಾತಕಗಳ ಆತಂಕವಂತೂ ಎಂದಿನಿಂದಲೂ ಇದ್ದೇ ಇದೆ. ಆದರ ಜೊತೆಗೆ ಇಂದಿನ ಪರಿಸ್ಥಿತಿಯ ಮೂಲಕ ಉದ್ಭವಿಸಿದ ಕೆಲವು ವಿಶಿಷ್ಟ ಸಮಸ್ಯೆಗಳೂ ಅವಳ ಮದುವೆಗೆ ಅಡ್ಡಿಯಾಗುತ್ತವೆ.

ಆಧುನಿಕ ತರುಣರು ತಮ್ಮ ಸಂಸಾರ ಸಾಗುವಷ್ಟು ಆರ್ಥಿಕಸ್ಥೈರ್ಯ ಬಂದ ಹೊರತು ಮದುವೆಯಾಗಲು ಒಪ್ಪುವದಿಲ್ಲ. ಹೀಗಾಗಿ ವರನ ವಯಸ್ಸು ೨೮-೨೯ರ ವರೆಗೂ ಹೋಗುತ್ತದೆ. ಅಂಥವನಿಗೆ ೧೫ ವರ್ಷದ ಕನ್ಯೆಯನ್ನು ಹೇಗೆ ಕೊಡುವದು? ಆದುದರಿಂದ ಕನ್ಯಾಪಿತೃಗಳು ೨೦ ವರ್ಷದವಳಾಗುವ ವರೆಗೂ



ಅವಳ ವಿವಾಹದ ಯೋಜನೆಯನ್ನೇ ಮಾಡುವದಿಲ್ಲ. ಮದುವೆಯಾಗುವ ವರೆಗೂ ಅವಳಿಗೆ ಶಿಕ್ಷಣ ಕೊಡಲ್ಪಡುತ್ತದೆ. ಶಿಕ್ಷಣದಿಂದ ಅವಳ ವಿಚಾರಗಳು ಪಕ್ವವಾಗಿ ತನ್ನ ಜೀವನಸಂಗಾತಿಯ ಬಗೆಗಿನ ಅಪೇಕ್ಷೆಗಳೂ ಬೆಳೆಯುತ್ತವೆ. ಆ ಅಪೇಕ್ಷೆಗಳನ್ನೆಲ್ಲ ಪೂರ್ಣಗೊಳಿಸುವಂಥ ತರುಣ ಸಿಗುವ ವರೆಗೂ ಕೆಲವು ಹುಡುಗಿಯರು ತಮ್ಮ ಮದುವೆಯನ್ನು ಮುಂದೂಡುತ್ತಾರೆ.

ರೂಪವೂ ಹುಡುಗಿಯ ಮದುವೆಗೆ ಅಡ್ಡಿಯಾಗುತ್ತದೆ. ಸೌಂದರ್ಯಕ್ಕೆ ಇಂದಿನ ಯುವಕಯುವತಿಯರು ಹಿಂದೆಂದೂ ಕೊಡದಷ್ಟು ಮಹತ್ವ ಕೊಡಹತ್ತಿದ್ದಾರೆ. ನಮ್ಮ ಅಜ್ಜ-ಅಜ್ಜಿಯರ ಕಾಲಕ್ಕೆ ಅವರ ಹಿರಿಯರು ಮನೆತನಕ್ಕೇ ಹೆಚ್ಚು ಪ್ರಾಧಾನ್ಯವಿತ್ತು ವಿವಾಹಗಳನ್ನು ಹೊಂದಿಸುತ್ತಿದ್ದರು. ಆದರೆ ಇತ್ತೀಚೆಗೆ ರಜತಪರದೆಯ ಮೇಲಿನ ನಟ-ನಟಿಯರ ಕೃತ್ರಿಮ ಸೌಂದರ್ಯ ಹಾಗು ಕಥೆ-ಕಾದಂಬರಿಗಳಲ್ಲಿ ಬರುವ ನಾಯಕ-ನಾಯಕಿಯರ ಅವಾಸ್ತವ ವರ್ಣನೆಯಿಂದಾಗಿ ಆಧುನಿಕ ಯುವಕರು ಅಂಥ ರೂಪಸಿಯನ್ನೇ ಬಯಸುತ್ತಾರೆ. ವಿವಾಹಪೂರ್ವದಲ್ಲಿ ಹುಡುಗ-ಹುಡುಗಿಯರ ಪರಸ್ಪರ ಪರಿಚಯಕ್ಕೆ ಅವಕಾಶವಿರದ ನಮ್ಮ ದೇಶದಲ್ಲಿ ಒಳ್ಳೇ ಗುಣಗಳಿದ್ದರೂ ಸಾಮಾನ್ಯ ರೂಪಿನ ಕನ್ಯೆಗೆ ಮದುವೆಯ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆ ಬರುವದಿಲ್ಲ.

ಉಚ್ಚ ಶಿಕ್ಷಣವು ಸಹ ಒಂದೊಂದು ಸಲ ಹೆಣ್ಣಿನ ಮದುವೆಗೆ ಅಡ್ಡಿಯಾಗುತ್ತದೆ. "ನಮಗೆ ಎಸ್. ಎಸ್. ಸಿ. ವರೆಗೆ ಕಲಿತ ಹುಡುಗಿ ಸಾಕು. ಪದವೀಧರ ಕನ್ಯೆಬೇಡ" ಎಂದು ಅನೇಕ ವರಪಕ್ಷದವರು ಹೇಳುತ್ತಾರೆ. ಯಾವ ಶಿಕ್ಷಣದಿಂದ ವೈವಾಹಿಕ ಜೀವನಕ್ಕೆ ಅತ್ಯಗತ್ಯವಾಗಿರುವ ಪರಸ್ಪರ ತಿಳಿವಳಿಕೆ ಬೆಳೆಯುತ್ತದೆಯೋ ಅದೇ ಶಿಕ್ಷಣ ಇಂದು ಹುಡುಗಿಯ ಮದುವೆಗೆ ಆತಂಕವಾಗುತ್ತಿರುವದು ನಿಜಕ್ಕೂ ಶೋಚನೀಯ ಸಂಗತಿ! ಕಲಿತ ಹುಡುಗಿಯರ ಸಲುವಾಗಿ ಇದ್ದ ತಪ್ಪು ತಿಳಿವಳಿಕೆಯೇ ಇದಕ್ಕೆ ಕಾರಣವಾಗಿದೆ.

ನೌಕರಿ, ಶಿಕ್ಷಣ, ಬಡತನ, ಸಾಮಾನ್ಯರೂಪ ಮುಂತಾದ ಯಾವುದೇ ಕಾರಣದಿಂದ ಅವಿವಾಹಿತೆಯಾಗಿ ಉಳಿಯಬೇಕಾದ ಪ್ರೌಢ ಕುಮಾರಿಕೆ 'ಮದುವೆಯಾಗದಿದ್ದರೇನೂ ದೊಡ್ಡ ಅನಾಹುತವಾಗಲಿಲ್ಲ' ಎಂದುಕೊಂಡು ತನ್ನ ಪಾಡಿಗೆ ತಾನು ಸಮಾಧಾನದಿಂದಿದ್ದರೂ ಸಮಾಜ ಅವಳನ್ನು ಸಂಶಯಿತ ದೃಷ್ಟಿಯಿಂದ ನೋಡುತ್ತದೆ. ಕುಟುಂಬದಲ್ಲಿಯ ಹಿರಿಯ ಮಹಿಳೆಯರು ಸಹ ಮದುವೆಯಾಗದಿದ್ದುದು ಅವಳ ಅಪರಾಧವೆಂಬಂತೆ ಅವಳೊಡನೆ ವರ್ತಿಸುತ್ತಾರೆ. ಹೀಗಾಗಿ ಅವಳ ಮನಃಸ್ವಾಸ್ಥ್ಯ ಕೆಟ್ಟು ಎಷ್ಟೋ ಸಲ ಅವಳು ಕೆರೆ-ಬಾವಿಗಳ ಆಶ್ರಯ ಪಡೆಯುವಂತಾಗುತ್ತದೆ. ಕಲಿತ ಹುಡುಗಿಯಾಗಿದ್ದರೆ ನೌಕರಿ ಮಾಡಿಯಾದರೂ ಜೀವನದಲ್ಲಿ ತೃಪ್ತಿಯನ್ನು ಪಡೆಯುತ್ತಾಳೆ. ಆದರೆ ವಿಶೇಷ ಶಿಕ್ಷಣವಿಲ್ಲದ ಪ್ರೌಢಕನ್ಯೆಗೆ ಜೀವನದುದ್ದಕ್ಕೂ ನಿರಾಶೆ-ನಿರುತ್ಸಾಹಗಳೇ ಜೊತೆಯಾಗುತ್ತವೆ. ಬರಬರುತ್ತ ಜಟಿಲವಾಗುತ್ತಿರುವ ಹೆಣ್ಣಿನ ಮದುವೆಯ ಸಮಸ್ಯೆ ನೋಡಿದರೆ 'ದಾರಿಕಾ ಹೃದಯ ದಾರಿಕಾ ಪಿತು:' ಎಂಬ ಮಾತು ತ್ರಿಕಾಲ ಸತ್ಯವೆಂದೆನಿಸುತ್ತದೆ. ಹುಡುಗ-ಹುಡುಗಿಯರ ಪರಸ್ಪರ ಪರಿಚಯಕ್ಕೆ ಹೆಚ್ಚು ಅವಕಾಶ ದೊರೆತು, ಅಂತರ್ಜಾತೀಯ ವಿವಾಹಗಳು ಹೆಚ್ಚಾಗಿ ಬಳಕೆಯಲ್ಲಿ ಬಂದಾಗಲೇ ಪ್ರೌಢಕುಮಾರಿಕೆಯರ ವಿವಾಹದ ಪ್ರಶ್ನೆ ಬಗೆಹರಿಯಬಹುದೇನೊ? ಇತ್ತೀಚೆಗೆ ಜಾರಿಯಲ್ಲಿ ಬಂದ ವರದಕ್ಷಿಣೆ ಪ್ರತಿಬಂಧಕ ವಿಧೇಯಕದಿಂದ ಸಹಾಯವಾಗಬಹುದೆಂದೂ ಆಶಿಸಲಾಗಿದೆ.

ಅರ್ಧಶತಮಾನದಲ್ಲಾದ ವ್ಯತ್ಯಾಸಗಳು

ಮಹಿಳೆಯರ ಇಂದಿನ ಸಮಸ್ಯೆಗಳ ವಿವೇಚನೆಯಿಂದ ಅರ್ಧಶತಮಾನದ ಪೂರ್ವದಲ್ಲಿದ್ದ ಸ್ತ್ರೀ-ಜೀವನಕ್ಕೂ ಇಂದಿನದಕ್ಕೂ ಸಾಕಷ್ಟು ವ್ಯತ್ಯಾಸಗಳನ್ನು ಕಾಣಬಹುದು. ಪರಿಸ್ಥಿತಿ ಒಂದೇ ಸಮನೆ ಬದಲಾಗುತ್ತಿರುವದರಿಂದ ಸಮಾಜದ ಮುಂದಿರುವ ಪ್ರಶ್ನೆಗಳೂ ಹೊಸ ಸ್ವರೂಪ ತಳೆಯುತ್ತಿರುವದು ಸಹಜ. ಮಹಿಳೆಯರ ತೊಂದರೆಗಳನ್ನು ನಿವಾರಿಸುವದಕ್ಕಾಗಿ ೧೯೨೭ ರಲ್ಲಿ ಸ್ಥಾಪಿತವಾದ ಅಖಿಲ ಭಾರತ ಮಹಿಳಾ ಪರಿಷತ್ತು ಪ್ರತಿಯೊಂದು ವಿಷಯದಲ್ಲಿಯೂ ಪುರುಷನ ಸರಿಸಮಾನವಾದ ಹಕ್ಕುಗಳು ಸ್ತ್ರೀಯರಿಗೆ ದೊರೆಯಬೇಕೆಂದು Charter of Rights ಪ್ರಸಿದ್ಧಿಸಿತು. ಆದರೆ ಇಂದು ಹೊಸ ರಾಜ್ಯಘಟನೆಯಿಂದ ಅವಳಿಗೆ ಸಮಾನ ಹಕ್ಕುಗಳು ತಾವಾಗಿಯೇದೊರೆತಿವೆ. ಈ ರೀತಿ ಯಾವಸ್ವಾತಂತ್ರ್ಯಗಳಿಗಾಗಿಆಗಿನ ಕಾಲದ ಸ್ತ್ರೀಯರು, ಸಮಾಜ ಸುಧಾರಕರು ಹೋರಡಬೇಕಾಯಿತೋ ಆ ಸೌಲಭ್ಯಗಳು ಇಂದು ಮಹಿಳೆಯರಿಗೆ ಕಾನೂನಿನಿಂದ ಹಾಗು ಕಾಲದ ಗತಿಯಿಂದ ತಾವಾಗಿಯೇ ದೊರೆತಿವೆ.

ಸಾಮಾನ್ಯ ಸ್ತ್ರೀಗೆ ಸ್ವಾತಂತ್ರ್ಯದ ಬಾಗಿಲು ತೆರೆದಿದ್ದರೂ ಆ ಸ್ವಾತಂತ್ರ್ಯವನ್ನನುಭವಿಸುವ ಯೋಗ್ಯತೆ ಅವಳಲ್ಲಿಲ್ಲದಾಗಿದೆಯೆಂಬುದನ್ನು ನಾವು ವಿಷಾದದಿಂದ ಒಪ್ಪಬೇಕಾಗುತ್ತದೆ. ಶತಮಾನಗಳಿಂದಲೂ ದಾಸ್ಯದಲ್ಲಿದ್ದ ಅವಳ ಸ್ಥಿತಿ ಪಂಜರದ ಹಕ್ಕಿಯಂತಾಗಿದೆ. ಪಂಜರದ ಹಕ್ಕಿಯನ್ನು ಮುಕ್ತಮಾಡಿದರೂ ಹಾರುವದನ್ನೇ ಮರೆತ ಅದರ ರೆಕ್ಕೆಗಳು ಒಮ್ಮೆಲೆ ಹಾರಲು ಸಮರ್ಥವಾಗುವದಿಲ್ಲ. ಭಾರತೀಯ ಮಹಿಳೆಗೂ ಹೆಚ್ಚುಕಡಿಮೆ ಇದೇ ಅನುಭವ ಬರುತ್ತಿದೆ. ಅವಳ ಹಿತಕ್ಕಾಗಿಯೇ ಜಾರಿಗೆ ತರಲಾಗುತ್ತಿರುವ ಕಾನೂನುಗಳ ಅರಿವು ಅವಳಿಗೆಲ್ಲಿದೆ? ಅಲ್ಲದೆ ಕೇವಲ ಕಾಯದೆಯಿಂದ ಯಾವ ದೇಶವೂ !ಪ್ರಗತಿಯನ್ನು ಸಾಧಿಸಲಾರದು. ಸರಕಾರ ಹಾಗು ಜನತೆಯಲ್ಲಿ ಸಹಕಾರವುಂಟಾದಾಗಲೇ ಕಾಯದೆ ಹಾಗು ಯೋಜನೆಗಳು ಯಶಸ್ವಿಯಾಗಿ ಆಚರಣೆಯಲ್ಲಿ ಬರಬಲ್ಲವು. ಆದುದರಿಂದ ಸಾಮಾನ್ಯ ಸ್ತ್ರೀಯಲ್ಲಿ ಜಾಗೃತಿಯುಂಟಾದ ಹೊರತು ಸರಕಾರವು ಎಷ್ಟೇ ಪ್ರಯತ್ನಿಸಿದರೂ ಅವಳ ಸಮಸ್ಯೆಗಳು ಬಗೆಹರಿಯಲಾರವು. ಸ್ತ್ರೀಯರಲ್ಲಿ ನವಚೈತನ್ಯವನ್ನು ತುಂಬುವ ಕಾರ್ಯವನ್ನು ಮಹಿಳಾಸಂಸ್ಥೆಗಳೇ ಮಾಡಬಲ್ಲವು. ಇದಕ್ಕಾಗಿ ಅವುಗಳು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಅಸ್ತಿತ್ವದಲ್ಲಿ ಬರಬೇಕು. ಕೇವಲ 'ಫ್ಯಾಶನ್' ಎಂದು ಮಹಿಳಾಮಂಡಳದ ಸದಸ್ಯೆಯರಾಗುವವರಿಗಿಂತಲೂ ನಿಷ್ಠೆಯಿಂದ ಕೆಲಸ ಮಾಡುವ ಪ್ರಾಮಾಣಿಕ ಕಾರ್ಯಕರ್ತ್ರಿಯರ ಬಳಗ ಹೆಚ್ಚಬೇಕು. ಇಂದು ಅನೇಕ ಮಹಿಳಾ ಮಂಡಳಗಳು ಸುಖವಸ್ತ್ರ ಸ್ತ್ರೀಯರ ಹೊತ್ತುಗಳೆಯುವ ಸಾಧನಗಳಾಗಿ ಪರಿಣಮಿಸಿವೆ. ಹಾಗಾಗದೆ ಮಹಿಳಾ ಮಂಡಳದ ಕಾರ್ಯಕರ್ತ್ರಿಯೆಂದು ಸರ್ವಸಾಮಾನ್ಯ ಸ್ತ್ರೀಯೊಡನೆ ಸಂಪರ್ಕವಿರಿಸಿಕೊಂಡಲ್ಲಿ, ಯಾವ ಉದ್ದೇಶಕ್ಕಾಗಿ ಅ. ಭಾ. ಮಹಿಳಾ ಪರಿಷತ್ತು ಸ್ಥಾಪಿತವಾಯಿತೋ ಅದು ಸಫಲವಾದೀತು.

ಕಾಂಗ್ರೆಸ್ಸಿನ ಮಹಿಳಾ ವಿಭಾಗ

ನಮ್ಮ ದೇಶದ ಮಹತ್ವದ ರಾಜಕೀಯ ಪಕ್ಷವಾದ ಅ. ಭಾ. ಕಾಂಗ್ರೆಸ್ಸು ಸಹ ಹೆಣ್ಣು ಮಕ್ಕಳ ಉನ್ನತಿಗಾಗಿ ೧೯೫೩ ರಲ್ಲಿ ಪ್ರತ್ಯೇಕ ಮಹಿಳಾ ವಿಭಾಗವನ್ನು ಸ್ಥಾಪಿಸಿತು. ಇಂದು ಎಲ್ಲ ಪ್ರದೇಶ ಹಾಗು ಜಿಲ್ಹಾ ಕಾಂಗ್ರೆಸ ಕಮಿಟಿಗಳಲ್ಲಿ ಮಹಿಳಾವಿಭಾಗಗಳು ಕೆಲಸಮಾಡುತ್ತಿವೆ. ಅದು ತನ್ನ ಕಣ್ಮುಂದೆ ಈ ನಾಲ್ಕು ಉದ್ದೇಶಗಳನ್ನು ಇಟ್ಟುಕೊಂಡಿದೆ:

೧. ಒಂದು ಸ್ವತಂತ್ರರಾಷ್ಟ್ರದ ನಾಗರಿಕರಾದ ಭಾರತೀಯ ಹೆಣ್ಣು ಮಕ್ಕಳಿಗೆ ಅವರ ಹಕ್ಕು ಹಾಗು ಕರ್ತವ್ಯಗಳ ಅರಿವು ಮಾಡಿಕೊಟ್ಟು ಅವರಲ್ಲಿ ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡುವದು.

೨. ಪಂಚವಾರ್ಷಿಕ ಯೋಜನೆ ಹಾಗು ಸಮಾಜವಿಕಾಸ ಯೋಜನೆಗಳ ಕಾರ್ಯದಲ್ಲಿ ಅವರು ಉತ್ಸಾಹದಿಂದ ಭಾಗವಹಿಸುವಂತೆ ಪ್ರೋತ್ಸಾಹಿಸುವದು.

೩. ಚಿಕ್ಕ ಉಳಿತಾಯ ಯೋಜನೆ ಹಾಗು ಆಹಾರ ಮಿತವ್ಯಯದ ಕ್ಷೇತ್ರಗಳಲ್ಲಿ ಅವರ ಸಹಕಾರ ದೊರೆಯುವಂತೆ ಮಾಡುವದು.

೪. ದೇಶದ ರಾಜಕೀಯ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ ಮುಂತಾದ ರಂಗಗಳಲ್ಲಿ ಅವರು ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸುಹಂತೆ ಮಹಿಳೆಯರನ್ನು ತರಬೇತಿಗೊಳಿಸುವದು.

ಈ ರೀತಿ ಭಾರತೀಯ ಮಹಿಳೆಯರ ಇಂದಿನ ಸಮಸ್ಯೆಗಳನ್ನು ಬಗೆಹರಿಸುವದಕ್ಕೆ ಸರಕಾರ, ಸಮಾಜ, ಸಂಘ-ಸಂಸ್ಥೆಗಳು ಸತತ ಪ್ರಯತ್ನವನ್ನು ನಡೆಸಿವೆ. ಆ ಪ್ರಯತ್ನಗಳಿಗೆ ಯಶಸ್ಸು ದೊರೆಯುವದರಲ್ಲಿ ಸಂದೇಹವಿಲ್ಲ. ಆದರು ಸಹ ಹೆಣ್ಣಿನ ವೈಯಕ್ತಿಕ ಸಮಸ್ಯೆಗಳು ಪೂರ್ಣವಾಗಿ ಎಂದೂ ಬಗೆಹರಿಯಲಾರವು ಎಂದೆನಿಸುತ್ತದೆ. "ಬಹು ಅಂಶ ಸಮಾನತೆಯಿದ್ದರೂ ಮಹಿಳೆಗೆ ಪುರುಷನಿಗಿಂತ ಜೀವನವು ಕಠಿಣವಾಗಿರುವದು. ಮತ್ತು ಬಹುಶಃ ಕಠಿಣವಾಗಿಯೇ ಉಳಿಯುವದು—" ಎಂದು ಶ್ರೀಮತಿ ಹೈಟನ್ ಪೋಲಕ್ ಒಂದೆಡೆ ಹೇಳಿದುದು ಸಂಪೂರ್ಣ ಸತ್ಯವಾಗಿದೆಯೆಂಬುದನ್ನು ಅನುಭವ ಸಿದ್ಧ ಮಾಡಿ ತೋರಿಸುತ್ತದೆ.

ಪರಿಪೂರ್ಣ ಕೊಲೆ

ಕತೆಗಾರ :
ಚಿದಂಬರಾನಂದ
ಧಾರವಾಡ

೧

ಪರಿಪೂರ್ಣ ಕೊಲೆ !!

ಇದೇ ಸುರೇಶನ ಸಮಸ್ಯೆಯಾಗಿತ್ತು. ಈಗ ಒಂದು ವರುಷದಿಂದಲೂ ಅವನು ಇದನ್ನೇ ವಿಚಾರಿಸುತ್ತಿದ್ದ, ಮೆಲಕುಹಾಕುತ್ತಿದ್ದ. ಯಾವ ರೀತಿಯಲ್ಲಿ ಹಂಚಿಕೆ ಹಾಕಿದರೆ ತನ್ನ ಹೆಂಡತಿಯನ್ನು ಈ ರೀತಿಯಲ್ಲಿ ಕೊಲೆಗೈಯಬಹುದು?

ಹಾಗೇ ಕೊಲೆಗೈದು ಸಿಕ್ಕಿಬೀಳುವದು ಎಲ್ಲರಿಗೂ ಗೊತ್ತಿದೆ. ಮನುಷ್ಯನ ಜೀವ ಒಂದು ದೀಪವಿದ್ದಂತೆ. ಅದನ್ನು ಬೇಕಾದವರು ಬೇಕಾದಾಗ ನಂದಿಸಬಹುದು. ಅದು ನೀರು ಕುಡಿದಷ್ಟು ಸುಲಭವಾದ ಕೆಲಸ.

ಇಂಥ ಸುಲಭವಾದ ರೀತಿಯಲ್ಲಿ ತನ್ನ ಹೆಂಡತಿಯ ಕೊಲೆಗೈವುದು ಅವನಿಗೆ ಬೇಕಾಗಿರಲಿಲ್ಲ. ಅವನಿಗೆ ಬೇಕಾದುದು ಪರಿಪೂರ್ಣವಾದ ಕೊಲೆ. ಸಾಮಾನ್ಯವಾದ ಕೊಲೆಯಲ್ಲ.

ಸಾಮಾನ್ಯವಾದ ರೀತಿಯಲ್ಲಿ ಕೊಲೆಗೈದರೆ ಕೊಲೆಯಾಗಿದೆ ಎಂಬ ಸಂಗತಿ ಎಲ್ಲರಿಗೂ ತಿಳಿಯುತ್ತದೆ. ಕೊಲೆಗೈದ ವ್ಯಕ್ತಿ ಸೆರೆಮನೆ ಕಾಣಬೇಕಾಗುತ್ತದೆ. ಗಲ್ಲಿಗೇರಿಸಲ್ಪಡಬೇಕಾಗುತ್ತದೆ. ಅದಿಲ್ಲದಿದ್ದರೆ ಜೀವಾವಧಿ ಶಿಕ್ಷೆಯನ್ನು ಅನುಭವಿಸಬೇಕು. ಇವೆರಡನ್ನೂ ತಪ್ಪಿಸಿಕೊಳ್ಳಬೇಕಾದರೆ ಅಪಾರವಾದ ಹಣವನ್ನು ಖರ್ಚುಮಾಡಬೇಕು.

ಇದಾವದೂ ಸುರೇಶನಿಗೆ ಬೇಕಾಗಿರಲಿಲ್ಲ. ಸೆರೆಮನೆಗೆ ಹೋಗಿರಬಾರದು, ಶಿಕ್ಷೆ ಅನುಭವಿಸಿರಬಾರದು, ಹಣ ವೆಚ್ಚವಾಗಿರಬಾರದು. ಕೊಲೆಯಾಗಿದೆ ಎನ್ನುವದೂ ಜನರಿಗೆ ಗೊತ್ತಾಗಿರಬಾರದು. ಆದರೂ ಕೊಲೆ ಆಗಿರಬೇಕು. ಇಂಥ ಪರಿಪೂರ್ಣ ಕೊಲೆಯನ್ನು ಮಾಡುವದು ಶಕ್ಯವಿಲ್ಲವೇ ?

ಈ ಪ್ರಶ್ನೆಗೇ ಅವನು ಉತ್ತರ ಹುಡುಕುತ್ತಲಿದ್ದ. ಅದಕ್ಕಾಗಿ ಅವನು ಇಂಗ್ಲೀಷಿನಲ್ಲಿರುವ ನೂರಾರು ಪತ್ತೇದಾರಿ ಕಾದಂಬರಿಗಳನ್ನು ಅಪರಾಧ ಕಾದಂಬರಿ (crime novels) ಗಳನ್ನು ಓದಿದ್ದ. ಸುರೇಶನ ಅಭಿಪ್ರಾಯದಂತೆ ಕನ್ನಡದಲ್ಲಿ ನಿಜವಾದ ಪತ್ತೇದಾರಿ ಕಾದಂಬರಿಗಳೇ ಇರಲಿಲ್ಲ. ಆದರೂ ಕನ್ನಡದಲ್ಲಿ ಹೊಸದಾಗಿ ಪ್ರಕಟವಾಗುವ ಪ್ರತಿಯೊಂದು ಪತ್ತೇದಾರಿಯನ್ನು ತರಿಸದೇ ಇರುತ್ತಿರಲಿಲ್ಲ. ಇಷ್ಟಾದರೂ ಅವನಿಗೆ ತನ್ನ ಹೆಂಡತಿಯನ್ನು ಕೊಲ್ಲುವ ಪರಿಪೂರ್ಣವಾದ ರೀತಿ ಹೊಳೆದಿರಲಿಲ್ಲ. ಹೀಗೆಂದು ಕೈಚೆಲ್ಲಿ ನಿರಾಶೆಗೊಳ್ಳುವಂತೆಯೂ ಇರಲಿಲ್ಲ. ಕೈಚೆಲ್ಲಿದರೆ ಐವತ್ತು ಸಾವಿರ ರೂಪಾಯಿ ದೊರೆಯುತ್ತಲೂ ಇರಲಿಲ್ಲ.

ಐವತ್ತು ಸಾವಿರ ರೂಪಾಯಿ !!

ಈ ಪದಪುಂಜವೇ ರೋಮಾಂಚಕಾರಕವಾಗಿತ್ತು. ಅದನ್ನು ಕೇಳಿದಾಗ ನುಡಿದಾಗ ನೆನೆದಾಗೆಲ್ಲ ಅವನಿಗೆ ರೋಮಾಂಚನನಾಗುತ್ತಿತ್ತು. ತನ್ನ ಸುಖಜೀವನದ ಸುರಮ್ಯಸ್ವಪ್ನವೇ ಅವನ ಕಣ್ಣಮುಂದೆ ಹರಹಿ ನಿಲ್ಲುತ್ತಿತ್ತು. ಈ ಸ್ವಪ್ನಲೋಕವನ್ನು ಪ್ರವೇಶಿಸಬೇಕಾದರೆ ದೊಡ್ಡದೊಂದು ಬಂಡೆಗಲ್ಲನ್ನು ಸರಿಸಬೇಕಾಗಿತ್ತು. ಆ ಬಂಡೆ ಸರಿಯದೆ ಒಳಗೆ ಪ್ರವೇಶವೇ ಇರಲಿಲ್ಲ. ಆ ಬಂಡೆಗಲ್ಲೇ ಅವನ ಹೆಂಡತಿ— ಸುನಂದಾ.

> ಅವನು ಪರಿಪೂರ್ಣ ಕೊಲೆಯನ್ನು ಸಾಧಿಸುವ ಹವಣಿಕೆಯಲ್ಲಿದ್ದ. ಕಾಮಿನಿ-ಕಾಂಚನಗಳು ಅವನ ಈ ಹವಣಿಕೆಗೆ ಆಮಿಷಗಳಾಗಿದ್ದವು. ಇವೆರಡನ್ನು ಸಾಧಿಸಲು ಅಡೆಯಾಗಿದ್ದ ಪತ್ನಿಯನ್ನು ಕೊಲ್ಲಬೇಕು, ಆದರೆ ಯಾರಿಗೂ ಅದು ಕೊಲೆಯೆಂದು ತಿಳಿಯಬಾರದು ಇದೇ ಅವನ ವಿಚಾರ. ಈ ಮಾರ್ಗದಲ್ಲಿ ದೈವವೂ ಅವನಿಗೆ ಸಹಾಯಕ್ಕೆ ಬಂದಂತೆನಿಸಿತು. ಇನ್ನೇನು ಕೈಕೊಂಡ ಕಾರ್ಯ ಮುಗಿದಂತಾಗಿತ್ತು. ಆದರೆ ಆದುದೇನು? ಇದೊಂದು ಕುತೂಹಲಕಾರಿಯಾದ ಕತೆಯಾಗಿರುವುದು.

ಸುನಂದಾ ಗಂಡನನ್ನು ದೇವರೆಂದು ನಂಬಿದ್ದಳು. ಗಂಡನ ತಲೆ ತಿನ್ನುತ್ತಿದ್ದ ಪರಿಪೂರ್ಣ-ಕೊಲೆಯ ವಿಷಯ ಅವಳಿಗೇನೂ ಗೊತ್ತಿರಲೇ ಇಲ್ಲ.

ಸುರೇಶ ಮಾತ್ರ ದೇವರನ್ನು ನಂಬಿದವನಲ್ಲ. ಅವನು ಚಾರ್ವಾಕ. ಸಂಪೂರ್ಣವಾಗಿ ಅಧಿಭೌತಿಕ ಸುಖವಾದಿ. ದೇವರು, ಧರ್ಮ, ಪಾಪ, ಪುಣ್ಯ ಇವೆಲ್ಲ ಅವನ ದೃಷ್ಟಿಯಿಂದ ಅವೈಜ್ಞಾನಿಕ ಸಂಗತಿಗಳಾಗಿದ್ದವು. ಈ ಜಗತ್ತೇ ಸತ್ಯ. ಕಾಮಿನೀ ಕಾಂಚನಗಳೇ ಪರಮಪುರುಷಾರ್ಥ ಎಂದು ಅವನು ನಂಬಿದ್ದ. ಅದರಲ್ಲಿಯೂ ಕಾಂಚನವೇ ಪುರುಷಾರ್ಥಗಳಲ್ಲೆಲ್ಲ ಶ್ರೇಷ್ಠವಾದದ್ದು. ಯಾಕಂದರೆ ಕಾಂಚನವಿದ್ದರೆ ಕಾಮಿನಿಯರಿಗೇನೂ ಕೊರತೆಯಾಗುವದಿಲ್ಲ. ಆದುದರಿಂದ ಕಾಂಚನವೇ ನಮ್ಮ ಸುಖದ ಮೂಲ. ಅದನ್ನು ಪಡೆಯುವದಕ್ಕಾಗಿ ಎಂಥ ಕಾರ್ಯವನ್ನು ಮಾಡಿದರೂ ಅದು ಕ್ಷಮ್ಯವೇ ಎಂದು ಅವನ ತಿಳುವಳಿಕೆಯಾಗಿತ್ತು.

ಈ ತಿಳುವಳಿಕೆ ಚಿಕ್ಕವನಿದ್ದಾಗಲೇ ಅವನಲ್ಲಿ ಉಂಟಾಗಿತ್ತು. ತಾನು ಒಪ್ಪೊತ್ತು ಕೂಳು ಕಾಣದೆ ಹರಕು ಬಟ್ಟೆಗಳನ್ನು ಹಾಕಿಕೊಂಡು ಬರಿಗಾಲಿನಿಂದ ತಿರುಗಬೇಕು. ತನ್ನ ಓರಿಗೆಯ ಕೆಲವರು ಉಣ್ಣೆಯ, ರೇಶಿಮೆ ಬಟ್ಟೆಗಳನ್ನು ಹಾಕಿಕೊಂಡು ಎಲ್ಲಿ ಬೇಕು ಅಲ್ಲಿ ಅಜೀರ್ಣವಾಗುವಂತೆ ತಿಂದು ಮೋಟಾರು ಕಾರಿನಲ್ಲಿ ಅಡ್ಡಾಡಬೇಕು. ಇದು ಹೀಗೇಕೆ ? ಎಂದು ಅವನು ಚಿಕ್ಕಂದಿನಲ್ಲಿಯೇ ವಿಚಾರಿಸುತ್ತಿದ್ದ. ಅದಕ್ಕೆ ಅವನಿಗೆ ಒಂದೇ ಉತ್ತರ ದೊರೆಯುತ್ತಿತ್ತು. "ಅವರಲ್ಲಿ ಹಣವಿದೆ. ನಿನ್ನಲ್ಲಿ ಇಲ್ಲ. ಅವರಲ್ಲಿಯೂ ನಿನ್ನಲ್ಲಿಯೂ ಇನ್ನಾವ ಭೇದವೂ ಇಲ್ಲ."

ಆದರೆ ಹಣವನ್ನು ಹೇಗೆ ದೊರಕಿಸುವದು ? ಮನೆಯಲ್ಲಂತೂ ಹಣ ಸಿಗುವದು ಸಾಧ್ಯವಿರಲಿಲ್ಲ. ಅವನ ತಂದೆಯ ಜೇಬುಗಳು ಯಾವಾಗಲೂ ಖಾಲಿಯಾಗಿರುತ್ತಿದ್ದವು. ಚಹ, ಸಿಗರೇಟು, ಸಿನೇಮಾ ಚಟಗಳನ್ನು ತೀರಿಸಿಕೊಳ್ಳುವದಕ್ಕಾಗಿ ಅವನು ವಿದ್ಯಾರ್ಥಿಯಾಗಿದ್ದಾಗಿನಿಂದಲೇ ಕಳವು ಮಾಡಲು ಪ್ರಾರಂಭಿಸಿದ. ಅವನು ದೊಡ್ಡವನಾದಂತೆ ಅವನ ಕಳುವಿನ ರೀತಿಗಳೂ ಸುಧಾರಣೆಗೊಂಡವು.

ಸುರೇಶನು ಅಷ್ಟೇನೂ ಜಾಣನಾದ ವಿದ್ಯಾರ್ಥಿಯಾಗಿರಲಿಲ್ಲ. ಆದರೂ ಅವನು ಎಂದೂ ನಾಪಾಸಾಗುತ್ತಿರಲಿಲ್ಲ. ಅದಕ್ಕೆ ಕಾರಣವೆಂದರೆ ಪರೀಕ್ಷೆಯಲ್ಲಿ ನಿರೀಕ್ಷಕರಿಗೆ ತಿಳಿಯದಂತೆ ನಕಲು ಮಾಡುವ ಜಾಣ್ಮೆ ಅವನಲ್ಲಿ ಚೆನ್ನಾಗಿತ್ತು.

ಸುರೇಶನು ದೊಡ್ಡವನಾದಂತೆ ಪ್ರತಿಷ್ಠಿತನೆನಿಸಿಕೊಳ್ಳುವ ಹಂಬಲವೂ ಅವನಲ್ಲಿ ತಲೆದೋರಿತ್ತು. ಅದಕ್ಕಾಗಿ ಅವನು ಪ್ರತಿಷ್ಠಿತ

ಆಕರ್ಷಕವಾದ ಮತ್ತು ಬೆಲೆಯುಳ್ಳ ವೇಷ ಭೂಷಣಗಳನ್ನು ಹಾಕಿಕೊಳ್ಳುತ್ತಿದ್ದ. ಸಿರಿವಂತ ವಿದ್ಯಾರ್ಥಿಗಳ ಸ್ನೇಹ ಬೆಳೆಸುತ್ತಿದ್ದ. ಅವರಿಗೆ ತಿಳಿಯದಂತೆ ಅವರನ್ನು ಸುಲಿಯುತ್ತಿದ್ದ. ಅವನ ವೇಷ ಭೂಷಣಗಳಿಗೊಪ್ಪುವಂತೆ ಅವನ ರೂಪವೂ ಆಕರ್ಷಕವಾಗಿತ್ತು. ತನ್ನ ರೂಪವು ಹುಡುಗಿಯರನ್ನು ಮರುಳುಗೊಳಿಸುತ್ತದೆಂಬುದು ತಿಳಿದ ಮೇಲಂತೂ ಅವನು ಒಂದು ಹೊಸ ಲೋಕದಲ್ಲಿಯೇ ಕಾಲಿಟ್ಟನು. ವಿದ್ಯಾರ್ಥಿಯಾಗಿದ್ದಾಗಲೇ ಸ್ತ್ರೀಲಂಪಟನಾದನು. ಅದೇ ಅವನ ವಿದ್ಯಾಭ್ಯಾಸವನ್ನು ಕೊನೆಗೊಳಿಸಿತು. ಯಾಕಂದರೆ ಅವನು ಇಂಟರ ವರ್ಗದಲ್ಲಿದ್ದಾಗ ಒಬ್ಬ ಸಿರಿವಂತ ಹುಡುಗಿಯ ಸ್ನೇಹ ಬೆಳೆಸಿದ್ದ. ನಕಲು ಮಾಡುವದರಲ್ಲಿ ಪಟುತ್ವವನ್ನು ಪಡೆದ ಇವನು ಅವಳಿಗೆ ನಕಲು ಮಾಡಲು ಪರೀಕ್ಷೆಯಲ್ಲಿ ಸಹಾಯ ಮಾಡುವಾಗ ಸಿಕ್ಕುಬಿದ್ದು ೫ ವರ್ಷ ವಿಶ್ವವಿದ್ಯಾಲಯದಿಂದ ಹೊರತಳ್ಳಲ್ಪಟ್ಟನು. ಊರಲ್ಲಿಯೂ ಸಾಕಷ್ಟು ಪ್ರತಿಕ್ರಿಯೆಯಾಯಿತು. ಅಲ್ಲಿಂದ ಕಂಬಿಕಿತ್ತಿದನು.

ಮುಂದೆ ಮುಂಬಯಿಗೆ ಬಂದು ಒಂದು ವಿಮಾಕಂಪನಿಯ ಏಜಂಟನಾದನು. ಆ ಮೇಲೆ ಊರೂರು ಅಲೆಯಹತ್ತಿದನು. ಹೀಗೆ ಅಲೆಯುತ್ತಿರುವಾಗಲೇ ಅವನಿಗೆ ಬಾಸಿಂಗ ಬಲ ಒದಗಿಬಂದಿತು. ಒಬ್ಬ ಸಿರಿವಂತರ ಮಗಳಿಗೆ ಬಹಳ ದಿನಗಳಿಂದಲೂ ವರ ಸಿಕ್ಕಿರಲಿಲ್ಲ. ವಿಮಾ ಏಜಂಟನಾಗಿ ಇವನು ಅವರ ಮನೆಗೆ ಹೋದಾಗ ಇವನ ಸ್ಫುರದ್ರೂಪ, ವಾಕ್ಚಾತುರ್ಯ, ಸಿರಿವಂತಿಕೆಯ ಠೀವಿಗಳನ್ನು ನೋಡಿ ಅವರು ತಮ್ಮ ಮಗಳ ಮದುವೆಯ ಬಗ್ಗೆ ಮಾತನ್ನೆತ್ತಿದರು. ಇವನು ಹುಡುಗಿಯನ್ನು ನೋಡಿದ ಮೇಲೆ ಹೇಳುತ್ತೇನೆಂದ. ಅವಳನ್ನು ನೋಡಿದ ಮೇಲೆ ಅವಳ ರೂಪವೇ ಅವಳ ಮದುವೆಗೆ ಅಡ್ಡಬಂದಿದೆ ಎಂದು ತಿಳಿದುಕೊಂಡ. ಮತ್ತು ಅದರ ಲಾಭವನ್ನು ಪಡೆಯದೇ ಬಿಡಬಾರದೆಂದು ಲೆಕ್ಕಹಾಕಿದ. ಐವತ್ತು ಸಾವಿರ ರೂಪಾಯಿ ಹುಡುಗಿಯ ಹೆಸರಿನಿಂದ ವಿಮಾ ಇಳಿಸಿದರೆ ತಾನು ಅವಳನ್ನು ಮದುವೆಯಾಗುತ್ತೇನೆಂದ. ಅವರೂ ಅದನ್ನೊಪ್ಪಿದರು, ಮಗಳ ಮದುವೆಯಾದರೆ ಸಾಕು ಎಂದು. ಇನ್ನೊಬ್ಬ ಏಜಂಟರ ಮುಖಾಂತರ ವಿಮಾ ಇಳಿಸಲಾಯಿತು. ಅದಾದ ಆರು ತಿಂಗಳ ಮೇಲೆ ಆ ಹುಡುಗಿಯ ವಿಮಾಹಣಕ್ಕೆ ಅವನು ವಾರಸುದಾರನಾಗಿ ಅವಳನ್ನು ಮದುವೆಯಾದ. ಆ ಹುಡುಗಿಯೇ ಸುನಂದಾ.

ಸುನಂದೆಯ ಕಾಲ್ಗುಣದಿಂದ ಅವಳ ಮದುವೆಯಾದ ಆರೇ ತಿಂಗಳಲ್ಲಿ ಸುರೇಶನಿಗೆ ಒಂದು ಶಾಖೆಯ ವ್ಯವಸ್ಥಾಪಕ ಹುದ್ದೆ ದೊರೆಯಿತು. ಏಜಂಟ ಎನಿಸಿದವನು ಬ್ರ್ಯಾಂಚ ಮ್ಯಾನೇಜರ ಆದ. "ನಿನ್ನ ಕಾಲ್ಗುಣ ಚನ್ನಾಗಿದೆ" ಎಂದು ಸುನಂದೆಯನ್ನು ಹೊಗಳಿದ. ಇಂಥ ಸುಂದರನೂ ಸುಶಿಕ್ಷಿತನೂ ಕರ್ತೃತ್ವಶಾಲಿಯೂ ಆದ ಸುರೇಶನು ತನ್ನ ಕೈಹಿಡಿದದ್ದು ಒಂದು ಭಾಗ್ಯವೇ ಎಂದು ತಿಳಿದ ಅವಳು ಈಗಂತೂ ಅವನ ಚರಣದಾಸಿಯೇ ಆದಳು. ಆದರೆ ವಿಧಿ ತನ್ನ ಬಲೆಯನ್ನು ಬೀಸುವ ಹವಣಿಕೆಯನ್ನು ಹಾಕಿತ್ತು. ಸುನಂದಾ ಚೊಚ್ಚಿಲು ಬಸುರಿಯಾದಾಗ ಅದು ತನ್ನ ಬಲೆಯನ್ನು ಬೀಸಿತು. ಅವಳು ಹಡೆಯಬೇಕಾದರೆ ಪುನರ್ಜನ್ಮವಾಯಿತು. ಕೂಸು ಗರ್ಭದಲ್ಲಿಯೇ ತೀರಿಕೊಂಡಿತ್ತು. ಎರಡನೇ ಸಲ ಅವಳು ಆರರಲ್ಲಿಯೇ ಹಲಿವುಳಿದಳು. "ಇನ್ನು ಮುಂದೆ ಬಸುರಿಯಾದರೆ ಅವಳು ಬದುಕುವದೇ ಇಲ್ಲ" ಎಂದು ಡಾಕ್ಟರರು ಹೇಳಿಬಿಟ್ಟರು.



ಕೆಲವು ದಿನ ಸುನಂದಾ ಸುರೇಶರು ದೂರಿರಬೇಕಾಯಿತು. ಇದು ಸುರೇಶನಿಗೆ ಅನುಕೂಲವೂ ಆಯಿತು. ಅವನ ಬ್ರ್ಯಾಂಚಿನಲ್ಲಿ ಒಬ್ಬ ಹೊಸ ಟೈಪಿಸ್ಟ ಬಂದಿದ್ದಳು. ಅವಳ ಹೆಸರು ಜೀನ. ಜೀನಳನ್ನು ನೋಡಿದ ದಿನವೇ ಸುರೇಶ ಹುಚ್ಚನಾಗಿದ್ದ. ಅವಳು ಚೆಲುವೆಯಾಗಿದ್ದಳು, ಯೌವ್ವನೆಯಾಗಿದ್ದಳು, ರಸಿಕಳಾಗಿದ್ದಳು, ಅಲ್ಲದೆ ಚತುರಳೂ ಆಗಿದ್ದಳು. ಅವಳ ಓರಣ, ಅವಳ ನಿಯಮಿತತನ, ಅವಳ ಪ್ರಸಂಗಾವಧಾನ, ಯಾರನ್ನೂ ಮೆಚ್ಚಿಸುವಂತಿದ್ದವು. ಅವಳ ನಗೆಯಲ್ಲಿ ಬೆಳದಿಂಗಳಿತ್ತು. ಅವಳ ನುಡಿಯಲ್ಲಿ ಸಂಗೀತವಿತ್ತು. ಅವಳ ನಡೆಯಲ್ಲಿ ಲಾಸ್ಯವಿತ್ತು. ಅವಳು ಎಲ್ಲರ ಕೂಡ ಸಲುಗೆಯಿಂದಿರುತಿದಳು. ಸುರೇಶನಂತೂ

ಹೇಳಿಕೇಳಿ ಅವಳ 'ಬಾಸ್'. ಅವನ ಮನಸ್ಸಂತೋಷವೇ ಅವಳ ಉತ್ಕರ್ಷದ ಸೋಪಾನ. ಅಂದ ಮೇಲೆ ಅವನ ಕೂಡ ಸಲುಗೆಯಿಂದಿರದಿದ್ದರೆ ನಡೆದೀತೆ. ಮೊದಲೇ ಚತುರೆಯಾದ ಆ ಚೆಲುವೆ ಸ್ತ್ರೀಲಂಪಟನಾದ ಸುರೇಶನನ್ನು ಎರಡೇ ದಿನಗಳಲ್ಲಿ ತನ್ನ ಬುಟ್ಟಿಗೆ ಹಾಕಿಕೊಂಡಳು. ಸುರೇಶ ಅವಳ ದಾಸಾನುದಾಸನಾದ. ಆದರೆ ಅವರ ಗುಪ್ತ ಪ್ರಣಯ ಎಷ್ಟು ದಿನ ಗುಪ್ತವಾಗಿ ಉಳಿದೀತು? ಅವಳು ತನ್ನನ್ನು ಮದುವೆಯಾಗಬೇಕೆಂದು ಸುರೇಶನಿಗೆ ದುಂಬಾಲ ಬಿದ್ದಳು. ತನ್ನನ್ನು ಮದುವೆಯಾಗದಿದ್ದರೆ ತಾನು ಆತ್ಮಹತ್ಯೆ ಮಾಡಿಕೊಳ್ಳುವದಾಗಿ ಹೇಳಿದಳು. ತಮ್ಮಿಬ್ಬರ ಮದುವೆಗೆ ಅಡ್ಡವಾಗಿರುವ ಸಂಗತಿಗಳನ್ನೆಲ್ಲ ಅವನು ತಿಳಿಸಿ ಕೆಲವು ದಿನ ತಾಳಿಕೊಂಡಿರಬೇಕೆಂದ.

ಜೇನಳನ್ನು ನೋಡಿದ ದಿನದಿಂದಲೇ ಸುರೇಶನ ತಲೆಯಲ್ಲಿ ಸುನಂದೆಯ ಕೊಲೆಯ ವಿಚಾರ ಸೇರಿಕೊಂಡಿತ್ತು. ಸುನಂದೆ ಇಲ್ಲದಾದರೆ ತನಗೆ ೫೦ ಸಾವಿರ ರೂಪಾಯಿಗಳು ದೊರೆಯುತ್ತವೆ ಮತ್ತು ಜೇನಳನ್ನು ಮದುವೆಯಾಗಲೂ ದಾರಿಯಾಗುತ್ತದೆ ಎಂದು ಅವನು ವಿಚಾರಿಸಿದ್ದ. ಆದರೆ ನೇರವಾಗಿ ಕೊಲೆಗೈಯುವದು ಅವನಿಗೆ ಬೇಕಾಗಿರಲಿಲ್ಲ. ಅಡ್ಡ ದಾರಿಯಿಂದ ಅದನ್ನು ಸಾಧಿಸಲು ಹವಣಿಸುತ್ತಿದ್ದ. ಅದಕ್ಕಾಗಿಯೇ ಅವನು ಪರಿಪೂರ್ಣವಾದ ಕೊಲೆಯ ರೀತಿಯನ್ನು ಶೋಧಿಸುತ್ತಲಿದ್ದ. ಜೇನಳು ಆತ್ಮಹತ್ಯೆಯ ಬೆದರಿಕೆಯನ್ನು ತೋರಿಸಿದ ಮೇಲಂತೂ ಅವನ ತಲೆ ಚುರುಕಾಗಿ ವಿಚಾರ ಮಾಡತೊಡಗಿತು. ಕೈಗಳು ಹೆಚ್ಚು ಹೆಚ್ಚು ಪತ್ತೇದಾರಿಯ ಪುಟಗಳನ್ನು ತಿರುವಿಹಾಕಲಾರಂಭಿಸಿದವು.

೨

ಚೈತ್ರಮಾಸದ ಆ ಸಂಜೆ ಬಹಳ ಆಲ್ಹಾದಕರವಾಗಿತ್ತು. ಅಡ್ಡಮಳೆ ಹೊಡಿದುಹೋದುದರಿಂದ ಬಿಸಿಲಿನ ಬೇಗೆ ಇಲ್ಲದಾಗಿತ್ತು. ತಣ್ಣನೆ ತೀಡುವ ಗಾಳಿ ಹಿತಕರವೆನಿಸುತ್ತಿತ್ತು. ಆಗಸದಲ್ಲಿ ಅಲ್ಲಲ್ಲಿ ಮೆತ್ತಿಕೊಂಡ ಬಿಳಿಯ ಮೋಡಗಳ ಮೇಲೆ ಸಂಧ್ಯಾ ಸೂರ್ಯನು ಆಡುತ್ತಲಿದ್ದ. ಬಣ್ಣಬಣ್ಣದ ಆಟ ನಯನಾನಂದಕರವಾಗಿತ್ತು.

ಮನೆಯ ಮುಮ್ಮಾಳಿಗೆಯಲ್ಲಿ ಪುಸ್ತಕವೊಂದನ್ನು ಹಿಡಿದುಕೊಂಡು ಕುಳಿತಿದ್ದ ಸುರೇಶನ ತಲೆಯಲ್ಲಿ ಏನೋ ಬೆಳಕು ಬಿತ್ತು. ಪುಸ್ತಕವನ್ನು ಮುಚ್ಚಿಟ್ಟು ಅವನು ತಟ್ಟನೆ ಕೆಳಗೆ ಬಂದ.

ಸುನಂದಾ ಹೆರಳು ಹಾಕಿಕೊಳ್ಳುತ್ತ ಪಡಸಾಲೆಯಲ್ಲಿ ಕುಳಿತಿದ್ದಳು. ಅವನು ಆವಳ ಬದಿಗೆ ಬಂದು ಕೇಳಿದ! "ಸುನೀ ಇಂದು ಸಿನೇಮಾಕ್ಕೆ ಹೋಗೋಣವೇ?"

"ಯಾವದಕ್ಕೆ?"

"ಸುಧನ್ವಾಖ್ಯಾನಕ್ಕೆ".

"ಇಂದು ನನ್ನ ದೇವರು ಒಳ್ಳೇ ಹರುಷದಲ್ಲಿದ್ದಂತೆ ತೋರುವದಲ್ಲ?"

"ಹೌದು. ಈ ಮಳೆಯಿಂದ ಮನಸ್ಸು ಹರುಷಗೊಂಡಿದೆ. ಈ ಸುಂದರ ಸಂಜೆ ಬಹಳ ರಮಣೀಯವಾಗಿದೆಯಲ್ಲವೇ?"

"ಇಂದೇನಾದರೂ ಪತ್ತೇದಾರಿಗಳನ್ನು ಬಿಟ್ಟು ಬೇರೆ ಕಥೆ ಕಾದಂಬರಿಗಳನ್ನೋದಿರುವಿರಾ?"

"ಹೌದು. ನಮ್ಮ ಕಾಲೇಜಿನಲ್ಲಿ ಪಠ್ಯವಾಗಿದ್ದ ಜೈಮಿನಿ ಭಾರತದ ಸುಧನ್ವಾಖ್ಯಾನವನ್ನು ಓದುತ್ತಲಿದ್ದೆ."

"ಸರಿ. ಸರಿ. ಆದರೆ ನಾನು ಮಾತ್ರ ಪ್ರಭಾವತಿಯಾಗಲಾರೆ. ಡಾಕ್ಟರರು ಹೇಳಿದ್ದು ಮರೆತಿಲ್ಲವಷ್ಟೇ?"

"ಈಗ ಅದೆಲ್ಲ ಚರ್ಚೆ ಏಕೆ? ನೀನೇನು ಸಿನೇಮಾಕ್ಕೆ ಬರುವವಳೋ ಇಲ್ಲವೋ ಇಷ್ಟು ಹೇಳು."

"ಬರದೆ ಏನು? ನಾನೆಂದಾದರೂ ಸಿನೇಮಾಕ್ಕೆ ಒಲ್ಲೆನೆಂದಿರುವೆನೇ? ನೀವೆ ನನ್ನಂಥ ಕುರೂಪಿಯನ್ನು ಸಂಗಡ ಕರೆದೊಯ್ಯಲು ಬೇಸರ ಪಟ್ಟುಕೊಂಡು ಒಬ್ಬರೇ ಹೋಗಿ ಬರುತ್ತೀರಿ"

"ಈ ಒಣ ಹರಟೆ ಬೇಡ. ಈಗ ಐದೂವರೆ ಆಗಿದೆ. ಆರು ಗಂಟೆಯೊಳಗೆ ನಾವು ಚಿತ್ರಮಂದಿರದಲ್ಲಿರಬೇಕು."

ಇಷ್ಟು ಹೇಳಿ ಸುರೇಶನು ತನ್ನ ಬಟ್ಟೆಗಳನ್ನು ಬದಲಿಸಲು ಮೇಲೆ ಹೋದ.

ಸುನಂದಾ ಸುರೇಶರು ಕುಳಿತ ಟ್ಯಾಕ್ಸಿ ಚಿತ್ರಮಂದಿರಕ್ಕೆ ಬಂದಾಗ 'ಹೌಸ್‌ಫುಲ್' ಎಂಬ ಹಲಗೆ ತೂಗಹಾಕಿತ್ತು. ಸುನಂದೆಗೆ ನಿರಾಶೆಯಾಯಿತು. ಸುರೇಶ ಟ್ಯಾಕ್ಸಿಗೆ ಹಾಗೇ ಮುಂದೆ ಹೊಡೆಯಲು ಹೇಳಿದ. ಅದು 'ವ್ಹೀನಸ್' ಚಿತ್ರಮಂದಿರದ ಎದುರಿಗೆ ನಿಂತಿತು. "ಇಲ್ಲಿ ಯಾವ ಚಿತ್ರವಿದೆ?" ಸುನಂದಾ ಕೇಳಿದಳು.

'ಸುಮ್ಮನೇ ಒಳಗೆ ನಡಿ' ಸುರೇಶ ಹೇಳಿದ. ಅವರು ಬಾಕ್ಸಿನಲ್ಲಿ ಕುಳಿತಾಗ ಇಂಗ್ಲೀಷ ಚಿತ್ರ ಆರಂಭವಾಯಿತು.

'ಯಾವ ಚಿತ್ರವಿದು?'

'ಇಂಗ್ಲೀಷು ಚಿತ್ರ ಎನ್ನಾ ಕೆರಿನಿನಾ'

'ಈ ಸುಡುಗಾಡು ಚಿತ್ರಕ್ಕೆ ಏಕೆ ಕರೆತಂದಿರಿ'

'ಈ ಚಿತ್ರಗಳು ಹೇಗಿರುತ್ತವೆಂಬುದನ್ನು ಒಮ್ಮೆಯಾದರೂ ನೋಡು.'

'ನನಗೇನು ಮಣ್ಣು ತಿಳಿಯಬೇಕು?'

'ಏಕೆ ನೀನು ಕಲಿತ ಇಂಗ್ಲೀಷು ಎಲ್ಲಿ ಹೊಯಿತು'

"ಮ್ಯಾಟ್ರಿಕ್ ನಪಾಸಾದಾಗಲೇ ನನ್ನ ಇಂಗ್ಲೀಷೂ ಮರೆತುಹೋಯಿತು."

'ಬರಿ ಚಿತ್ರಗಳನ್ನಾದರೂ!ನೋಡು.'

ಒಮ್ಮೆಯೂ ಇಂಗ್ಲೀಷ ಚಿತ್ರಗಳನ್ನು ನೋ-ಡದ ಸಂಪ್ರದಾಯವಂತರ ಮನೆಯಲ್ಲಿ ಬೆಳೆದ ಸುನಂದಾ ಕಣ್ಣರಳಿಸಿ ಚಿತ್ರವನ್ನು ನೋಡುವ-ದರಲ್ಲಿ ಮಗ್ನಳಾದಳು. ಸುರೇಶ ಮಾತ್ರ ಬಾಕ್ಸಿನಲ್ಲಿಯೆ ಹೇಗೆ ಶೃಂಗಾರಚೇಷ್ಟೆಗಳನ್ನು ಅವಳ ಕೂಡ ಆರಂಭಿಸಬೇಕು ಎಂದು ವಿಚಾರಿಸುತ್ತಲಿದ್ದ.

ಮನೆಗೆ ಬರುವಾಗ ಸುರೇಶ ಮತ್ತೆ ಕಾರು ಮಾಡಿದ. ಚಿತ್ರದ ಗುಂಗಿನಲ್ಲಿದ್ದ ಸುನಂದಾ ತನ್ನನ್ನು ತಬ್ಬಿಕುಳಿತ ಸುರೇಶನಿಂದ ದೂರ ಸರಿಯಲಿಲ್ಲ. ಮನೆಗೆ ಬಂದ ಕೂಡಲೇ ಸುರೇಶ ಅವಳನ್ನು ತಬ್ಬಿ ಮುದ್ದಿಟ್ಟ.

"ಇದೇನು; ಡಾಕ್ಟರರು ಹೇಳಿದ್ದನ್ನು ಮರೆತಿರೇನು ?" ಸುರೇಶನನ್ನು ದೂರ ತಳ್ಳುತ್ತ ಸುನಂದಾ ಹೇಳಿದಳು.

"ನೀನೇನೂ ಹೆದರಬೇಡ. ನಾನು ಅಪರೇ-ಶನ್ ಮಾಡಿಸಿಕೊಂಡಿದ್ದೇನೆ." ಸುರೇಶ ತಾನು ಮೊದಲೇ ಸಿದ್ಧಪಡಿಸಿಟ್ಟುಕೊಂಡಿದ್ದ ಗುಳಿಗೆಯನ್ನು ಬಿಟ್ಟ.

"ಹಾಂ! ಯಾವಾಗ? ನನಗೆ ಹೇಳೇ ಇಲ್ಲ?"

"ನಿನಗೆ ಒಂದು ಮೋಜಿನ ಆಘಾತಮಾಡಬೇಕೆಂದು ಹೇಳಿರಲಿಲ್ಲ."

ಸುರೇಶ ಮತ್ತೊಮ್ಮೆ ಮುತ್ತಿಟ್ಟಾಗ ಸುನಂದಾ ಸುಮ್ಮನೇ ಇದ್ದಳು.

೩

ಸುರೇಶನ ಹಂಚಿಕೆ ಸಫಲವಾಗಿತ್ತು. ಸುನಂದಾ ಬಸುರಿಯಾಗಿದ್ದಳು. ಪರಿಪೂರ್ಣ ಕೊಲೆಯ ರಂಗ ಸಿದ್ಧವಾಗಿತ್ತು. ಈ ಸಲದ ತಾಯಿತನದಲ್ಲಿ ಸುನಂದಾ ಉಳಿಯಲಾರಳೆಂದು ಸುರೇಶನಿಗೆ ನಿಶ್ಚಿತವಾಗಿ ತಿಳಿದಿತ್ತು. ಅದಕ್ಕಾಗಿ ಅವನು ಒಳ್ಳೇ ಉತ್ಸಾಹಿತನಾಗಿದ್ದ.

"ಇನ್ನು ಕೆಲವೇ ಕೆಲವು ತಿಂಗಳು ತಾಳು" ಎಂದು ಜೇನಳಿಗೆ ಹೇಳಿದ್ದ. ಆದರೆ ತನ್ನ ಈ ಹಂಚಿಕೆಯನ್ನು ಮಾತ್ರ ಅವಳಿಗೆ ತಿಳಿಸಿರಲಿಲ್ಲ. ಅದರ ಬದಲಾಗಿ ತನ್ನ ಹೆಂಡತಿಯ ಕೂಡ ವಿಚ್ಛೇದನವಾಗಲಿದೆ ಎಂದಿಷ್ಟೇ ಹೇಳಿದ್ದ.

ತಾನು ಬಸುರಿಯಾದದ್ದು ನೋಡಿ ಸುನಂ-ದೆಗೆ ಗಾಬರಿಯೆನಿಸಿತ್ತು. ತನ್ನ ಆಯುಷ್ಯ ತೀರಿತೆಂದು ಅವಳು ತಿಳಿದಳು. ಆದರೆ ಇದು ಹೇಗಾಯಿತು ? ಸುರೇಶನನ್ನು ಅದರ ಬಗ್ಗೆ ಕೇಳಿದಳು. "ಆಪರೇಶನ್ ಆದರೂ ವರ್ಷಾರು ತಿಂಗಳ ಗರ್ಭನಿಲ್ಲುವ ಸಂಭವವಿರುತ್ತದಂತೆ. ನನಗೆ ಇದು ಗೊತ್ತಿರಲಿಲ್ಲ.", ಎಂದು ಹೇಳಿದ. ಪಶ್ಚಾತ್ತಾಪದ ಕಣ್ಣೀರು ಸುರಿಸಿದ, ನಿಟ್ಟುಸಿರು ಬಿಟ್ಟ. ಸುನಂದಾ ಅವನನ್ನು ನಂಬಿದಳು. ಗಂಡನಿಗಾಗಿ ಬಲಿದಾನ ಮಾಡಲು ಸಿದ್ಧಳಾದಳು. ತಾನು ಸತ್ತರೆ ಸಾಯಲಿ! ಆದರೆ ತನಗೆ ಗಂಡುಸಂತಾನವಾಗಲಿ! ತನ್ನ ಗಂಡನ ಮನೆ ಬೆಳಗಲಿ! ಎಂದು ದೇವರಲ್ಲಿ ಮೊರೆಯಿಟ್ಟಳು.



ಸುರೇಶ ಈಗ ಅವಳ ಆರೈಕೆಯ ಬಗ್ಗೆ ಹೆಚ್ಚು ಗಮನ ಕೊಡತೊಡಗಿದ. ಯಾವಾಗಲೂ ಚಿಂತಾಕ್ರಾಂತನಾದಂತೆ ಕಾಣಲಾರಂಭಿಸಿದ. ಸುನಂದೆಯೇ ಅವನನ್ನು ಹಲವು ಸಲ ಸಮಾಧಾನಪಡಿಸಬೇಕಾಗುತ್ತಿತ್ತು.

ಡಾಕ್ಟರರೂ ಸುನಂದೆಯ ಹೆರಿಗೆಯ ಬಗ್ಗೆ ಚಿಂತೆಗೊಳಗಾಗಿದ್ದರು. ಅವಳನ್ನುಳಿಸಲು ತಮಗೆ ಶಕ್ಯವಿದ್ದುದನ್ನೆಲ್ಲ ಮಾಡುತ್ತೇವೆಂದು ಆಶ್ವಾಸನ ಕೊಟ್ಟಿದ್ದರು. ಸುನಂದೆಯ ತವರು ಮನೆಯಿಂದ ಅವಳ ತಾಯಿ ಆರೈಕೆಗೆ ಬಂದಿದ್ದಳು. ಸಾವಿನ ನೆನಪನ್ನು ಮರೆಮಾಡಲು ಸುನಂದೆ ಪ್ರತಿದಿನ ಪುರಾಣ-ಪುಣ್ಯಕತೆಗಳನ್ನು ಓದುತ್ತ ಕಾಲ ಕಳೆಯತೊಡಗಿದಳು.

ಹೆರಿಗೆಯ ದಿನ ಸಮೀಪಿಸಿದಂತೆ ಸುನಂದಾ ಅಧೀರಳಾದಳು. ಸುರೇಶ ಕಾತರಗೊಂಡ.

೪

ಡಾಕ್ಟರರ ಅದ್ಭುತವಾದ ಸಾಹಸದ ಪರಿಣಾಮವಾಗಿ ಸುನಂದಾ ಗಂಡುಕೂಸನ್ನು ಹೆತ್ತು ಮರಣಶಯ್ಯೆಯ ಮೇಲೆ ಮಲಗಿದ್ದಳು. ಆದರೂ ಇನ್ನೂ ಎಲ್ಲವೂ ಮುಗಿದಿರಲಿಲ್ಲ. ಡಾಕ್ಟರರಿಗೆ ಅವಳನ್ನು ಬದುಕಿಸುವ ಆಸೆ ಇನ್ನೂ ಇತ್ತು.

ಸುರೇಶ ಮಾತ್ರ ಎರಡು ದಿನಗಳಿಂದಲೂ ಹುಚ್ಚನಂತಾಗಿದ್ದ. ಅವನ ಸ್ಥಿತಿಯನ್ನು ನೋಡಿ ಸುನಂದೆಯ ತಾಯಿ ಮತ್ತು ಡಾಕ್ಟರರು ಅವನನ್ನು ಸಮಾಧಾನ ಪಡಿಸುತ್ತಲಿದ್ದರು. ಹೆಂಡತಿಯ ಬಗ್ಗೆ ಇದ್ದ ಅವನ ಪ್ರೇಮವನ್ನು ಕಂಡು ಅವನನ್ನು ಎಲ್ಲರ ಮುಂದೂ ಬಾಯಿತುಂಬ ಹೊಗಳುತ್ತಿದ್ದರು. ಸುನಂದಾ ಕೂಡ ತನ್ನ ಗಂಡ ತನ್ನನ್ನು ಈ ರೀತಿ ಪ್ರೀತಿಸುತ್ತಿದ್ದುದಕ್ಕಾಗಿ ಸಾವಿನನೆರಳಿನಲ್ಲಿಯೇ ಸಮಾಧಾನವನ್ನು ಹಚ್ಚಿಕೊಳ್ಳುತ್ತಿದ್ದಳು.

ಸುನಂದೆಯ ಕೋಣೆಯಿಂದ ಹೊರಗೆ ಬಂದ ದಾಯಿ ಹರುಷದಿಂದ ಹೇಳಿದಳು. "ಮಿ. ಸುರೇಶ ನೀವು ಭಾಗ್ಯಶಾಲಿಗಳು. ನಿಮಗೆ ಮಗ ಹುಟ್ಟಿದ್ದಾನೆ. ಮತ್ತು ನಿಮ್ಮ ಪತ್ನಿಯೂ ಬದುಕಿದ್ದಾರೆ. ಇನ್ನು ಅವರ ಜೀವಕ್ಕೆ ಅಪಾಯವಿಲ್ಲ."

"ಹಾಂ!" ಎಂದ ಸುರೇಶ ಅಲ್ಲಿಯೇ ಕುಸಿದ.

ಅವನನ್ನು ಕೂಡಲೇ ಒಳಗೆ ಒಯ್ಯಲಾಯಿತು. ಅವನನ್ನು ಪರೀಕ್ಷಿಸಿದ ಡಾಕ್ಟರರು "ಹಾರ್ಟಫೇಲ! -ಆನಂದದ ಅತಿರೇಕ! ಉಪಾಯವಿಲ್ಲ" ಎಂದರು.

ಸುನಂದೆಗೆ ಮಾತ್ರ ಈ ಸುದ್ದಿಯನ್ನು ತಿಳಿಸಲಿಲ್ಲ. ಸುನಂದೆಯ ತಂದೆಗೆ ತಾರು ಬಿಟ್ಟರು.

ಸುನಂದೆಯ ತಾಯಿಗೆ ಇದು ದೊಡ್ಡ ಆಘಾತವೆನಿಸಿತು. ಹುಟ್ಟಿದ ಹುಡುಗನ ಬಗ್ಗೆ ಅವರಲ್ಲಿ ತಿರಸ್ಕಾರ ಉಂಟಾಯಿತು.

ಎಲ್ಲ ಮುಗಿದ ಮೇಲೆ ಅವರ ಜೀವ ತಡೆಯದೆ ಹುಡುಗನು ಹುಟ್ಟಿದ ವೇಳೆಯನ್ನು ತಿಳಿಸಿ ಜೋಯಿಸರನ್ನು ಕೇಳಿದರು. ಅವರು ಲೆಕ್ಕ ಹಾಕಿ ಬಹಳ ವಿಚಾರ ಮಾಡಿ ಹೇಳಿದರು. "ಈ ಹುಡುಗ ಅಭುಕ್ತ ಮೂಲಾ ನಕ್ಷತ್ರದಲ್ಲಿ ಹುಟ್ಟಿದ್ದಾನೆ. ಇಷ್ಟೇ ಅಲ್ಲ, ಅವನ ಲಗ್ನಕುಂಡಲಿಯಲ್ಲಿಯೂ ಹುಟ್ಟಿದ ಕೂಡಲೇ ಪಿತೃವಿಯೋಗವಿದೆ." ೦

"ನವ ಮಾನವರು ದಿವ್ಯದೇಹ ಧರಿಸುವರು" ಎಂಬ ಅಂಶವು ಶ್ರೀ ಅರವಿಂದರ ದಿವ್ಯದರ್ಶನದಲ್ಲಿಯೇ ಅತ್ಯಂತ ಸ್ಫುಟವಾಗಿ ಕಾಣುವಂಥದು. ಚರಿತ್ರೆಯಲ್ಲಿ ಸಾಹಿತ್ಯದಲ್ಲಿ ದೂರದ ದಿವ್ಯಸ್ವಪ್ನದಂತೆ ಕಾಣುವ ಈ ಸಂಗತಿಯನ್ನು ಸತ್ಯ ಪ್ರಪಂಚದಲ್ಲಿ ತರುವ ಸಂಕಲ್ಪಮಾಡಿ, ಸಾಧನೆ ಮಾಡಿ, ಸಿದ್ಧಿ ಪಡೆದವರು ಶ್ರೀ ಅರವಿಂದರು. ಈ ಸಿದ್ಧಿಯ ಪರಿಣಾಮ ನನ್ನ ನಿಮ್ಮ ಮೇಲೆ, ನಾಳಿನ ಮಾನವರ ಮೇಲೆ ಏನಾಗಲಿದೆ? ಹೇಗಾಗಲಿದೆ? ಅದರ ಒಂದು ವೈಜ್ಞಾನಿಕ ವಿವೇಚನೆಯ ಪ್ರಯತ್ನ ಇಲ್ಲಿದೆ.

ಶ್ರೀ ಅರವಿಂದ ದರ್ಶನ

"ನವ ಮಾನವರು ದಿವ್ಯದೇಹಧರಿಸುವರು"

ಲೇಖಕರು:
ಶ್ರೀ ಆರ್.ಜಿ. ಕುಲಕರ್ಣಿ, ಎಂ.ಎ.
ಬೆಂಗಳೂರು

ಪಾಂಡಿಚೇರಿಯಲ್ಲೊಂದು ಸಂಜೆ ಸನಿಯದಲ್ಲಿಯ ಸಮುದ್ರದಿಂದ ತಂಗಾಳಿ ಬೀಸುತ್ತಿತ್ತು. ಒಂದು ಕಡೆಗೆ ಅಪರಂಪಾರ ನೀಲ ನೀರರಾಶಿ. ನೀರಮೇಲೆಲ್ಲ ಕತ್ತಲಿನ ಕಪ್ಪು ನೆರಳು ಹರಡಿದೆ. ಅದನ್ನು ನಾವು ಕೆಲವು ಮಿತ್ರರು ನೋಡುತ್ತಿರುವಂತೆಯೇ ಬೆಳಗ್ಗೆ ಕಂಡ "ಶ್ರೀಮಾತೆ"ಯ ಮೂರ್ತಿ ಕಣ್ಮುಂದೆ ಬರುತ್ತಿದೆ! ಆಗ ಅಂತಃಕರಣದಿಂದ ಸಹಜ ಉದ್ಗಾರ ಬಂದಿತು: "ಇದೊಂದು ಸಮುದ್ರ; ಅದೊಂದು ಸಮುದ್ರ!" ಅಲ್ಲದೆ ಏನು? ೮೫ ವರುಷದ ಆ ತಾಯಿ, ಶ್ರೀ ಅರವಿಂದರ ಸ್ವಪ್ನವು ಸತ್ಯವಾಗುತ್ತಿದೆ ಎಂದು ಹೇಳಬೇಕಾದರೆ ಅದೆಂಥ ಅನುಭಾವದ ಸ್ಥೈರ್ಯವಿರಬೇಕು? ಸುಮಾರು ಹದಿನೈದು ನೂರರಷ್ಟು ಆಶ್ರಮವಾಸಿಗಳು,—ವಿವಿಧ ದೇಶ, ವಿವಿಧ ಜನಾಂಗ, ವಿವಿಧ ಜಾತಿಯ, ವಿವಿಧ ಭಾಷೆಯ ಜನ, ಆ ತಾಯ ಮಾತನ್ನು ಭಕ್ತಿಯಿಂದ ನಂಬಿ ಬಾಳುತ್ತಿದ್ದರಲ್ಲ! ಇದೂ ಒಂದು ಪವಾಡವಲ್ಲದೆ ಇನ್ನೇನು? ಇದರ ವೈಜ್ಞಾನಿಕ ಸತ್ಯವೇನು? ಕೇಳಿದರೆ ಯಾರಾದರೂ ಉತ್ತರಿಸಬಹುದೆ?

ಹಾಗೆಯೇ ಚಿಂತಿಸುತ್ತಿದ್ದಂತೆ, ಮೊದಲೇ ಗೊತ್ತುಪಡಿಸಿದ ಒಬ್ಬ ಮಹಾತ್ಮರ ಸಂದರ್ಶನಕ್ಕಾಗಿ ಅವರ ಮನೆಯನ್ನು ಪ್ರವೇಶಿಸಿದೆವು. ವಿಶಾಲವಾದ ಆ ಮನೆಯ ಒಂದು ಒಳಭಾಗದಲ್ಲಿ ಒಬ್ಬ ಸಾದಾ ಸರಳ ವ್ಯಕ್ತಿ ಕುಳಿತಿದ್ದಿತು. ಮೈತುಂಬ ಖಾದಿ ಧರಿಸಿತ್ತು. ತೆಳುವಾದ ಮೈ, ಬಿಳಿ ವರ್ಣ, ಸೌಮ್ಯ ಸಾತ್ವಿಕ ಕಳೆ ನೋಡಿದವರಿಗೆ ವಿನಯಭಾವ ಸಹಜವಾಗಿ ಉದಯವಾಗುತ್ತಿತ್ತು. ಆ ವ್ಯಕ್ತಿಗೆ ನಾವು ಸಹಜವಾಗಿ ಕೇಳಿದೆವು.

"ತಮಗೆ ಗಾಂಧೀಜಿಯವರ ನಿಕಟಪರಿಚಯವಿತ್ತಂತೆ, ನಿಜವೆ?" ಗಾಂಧೀಜಿಯ ಹೆಸರು ಬಂದ ತಕ್ಷಣ ಅವರು ಅಂತರ್ಮುಖಿಗಳಾದರು. ಅವರು ಹೇಳಿದರು: "ರಾಷ್ಟ್ರೀಯ ಜೀವನದಲ್ಲಿ ಗಾಂಧೀಜಿ ನನ್ನ ಗುರುಗಳು. ಆಧ್ಯಾತ್ಮಿಕ ಜೀವನದಲ್ಲಿ ಶ್ರೀ ಅರವಿಂದರು ನನ್ನ ಗುರುಗಳು. ಅವರ ಮಾತಿನಲ್ಲಿ ಕಾಣುವ ನಿಷ್ಠೆ, ಸಮುಚ್ಚಯ, ಸಹಜತೆ ಯಾರಿಗಾದರೂ ಅನುಭವಕ್ಕೆ ಬರಬಹುದಾಗಿತ್ತು. ಅವರು ಹಾಗೆಯೇ ಮುಂದುವರಿಸುತ್ತ ಹೇಳಿದರು. "ಕ್ಷಮಿಸಿ.. ಇಂಗ್ಲೀಷಿಗಿಂತ ಹಿಂದಿಯಲ್ಲಿ ನಾನು ಸಲಲಿತವಾಗಿ ನನ್ನ ಅನುಭವ ಹೇಳಬಲ್ಲೆ.. ಗಾಂಧೀಜಿಯೊಡನೆ ನನಗೆ ತೀರ ನಿಕಟ ಸಂಪರ್ಕ ಬಂದಿದೆ.. ಶ್ರೀ ಅರವಿಂದರ "ಲೈಫ್ ಡಿವೈನ್" ಎಂಬ ಗ್ರಂಥವನ್ನು ಗಾಂಧೀಜಿಯವರು ಓದಬೇಕೆಂದು ನಾನು ಬಯಸಿದಾಗ, ಬಾಪೂ ತಾವು ಇನ್ನೊಮ್ಮೆ ಸೆರೆಮನೆಗೆ ಹೋದಾಗ ಅಲ್ಲಿ ಓದುವೆ ಎಂದರು. ಅಂದಿನಿಂದ ಬಾಪು ಮತ್ತೆ ಸೆರೆಮನೆಗೆ ಹೋಗುವದು ಯಾವಾಗ ಎಂದು ನನ್ನ ಚಿಂತೆಯಾಗಿತ್ತು.." ಹೀಗೆಂದು ಅವರು ನಕ್ಕರು. ನಮಗೂ ಈ "ದಿವ್ಯಜೀವನದ ಹಾಸ್ಯ"ಕ್ಕಾಗಿ ವಿಶೇಷ ನಗೆ ಬಂದಿತು. ಈ ವ್ಯಕ್ತಿ ಕೊನೆಯಲ್ಲಿ ಹೇಳಿತು. "ಗಾಂಧೀಜಿಯವರ ಬಗೆಗೆ ನನಗೆ ಪೂಜ್ಯ ಭಾವನೆ ಇದೆ. ಆದರೆ ಗಾಂಧೀಜಿ ಮತ್ತು ಶ್ರೀ ಅರವಿಂದರಲ್ಲಿ ಒಬ್ಬರನ್ನು ಆಯ್ದುಕೊಳ್ಳುವ ಪ್ರಸಂಗ ಬಂದರೆ ನಾನು ಶ್ರೀ ಅರವಿಂದರನ್ನು ಆಯ್ದುಕೊಳ್ಳುವೆ."

ಗಾಂಧೀಜಿ ಮತ್ತು ಶ್ರೀ ಅರವಿಂದರು

ಆ ಮಾತನ್ನು ಕೇಳಿ ನಾವೆಲ್ಲ ಅಚ್ಚರಿಯಿಂದ ತಲೆ ಎತ್ತಿದೆವು. ಹೀಗೆ ಹೇಳಿದ ವ್ಯಕ್ತಿ ಶ್ರೀ ಅಭಯದೇವಜಿ. ಹೃಷಿಕೇಶದ ಗುರುಕುಲದ ಪ್ರಿನ್ಸಿಪಾಲರಾಗಿ ಕೆಲಸಮಾಡಿದವರು. ಪಾಂಡಿಚೇರಿಗೆ ಅವರು ಬಂದಾಗ ಶ್ರೀಮಾತೆಯವರು ಅವರಿಗಾಗಿ ಪ್ರತ್ಯೇಕ "ನೂಲುವ ರಾಟೆ"ಯನ್ನು ಕೊಂಡುಕೊಟ್ಟರು. ಇಂಥ ನಿಷ್ಠಾವಂತರಾದ ಗಾಂಧೀಜಿಯ ಶಿಷ್ಯರು ಶ್ರೀ ಅರವಿಂದರ ವಿಷಯದಲ್ಲಿ ಆಡಿದ ಮಾತು ಬರಿ ಭಕ್ತಿಯ ಉದ್ರೇಕವಾಗಿರಲಿಲ್ಲ. ಸತ್ಯದೃಷ್ಟಿಯ ಪರಿಣಾಮವಾಗಿತ್ತು. ಅವರ ಸಂಗಡ ವಿಚಾರಮಾಡಿದ ಮೇಲೆ ಶ್ರೀ ಅಭಯದೇವಜಿ ಅವರಿಗೆ ಐವರು ಗುರುಗಳೆಂದೂ ಅವರಲ್ಲಿ ಶ್ರೀ ಅರವಿಂದರು ಕೊನೆಯವರೆಂದೂ ತಿಳಿದು ಬಂದಿತು. ಶ್ರೀ ಅರವಿಂದರ ಬಳಿಯಲ್ಲಿ ಬಂದಾಗ ಅವರಿಗೆ ಒಂದು ಸಮನ್ವಯ ದೃಷ್ಟಿ ಕಂಡುಬಂದಿತು. ಒಂದು ಹೊಸ ಆದರ್ಶ, ಅದರ ನಿಶ್ಚಿತದಾರಿ ಕಂಡುಬಂದಿತು. ಇದು ಬರಿ ವಿಚಾರದ ಚಮತ್ಕಾರವಾಗಿರಲಿಲ್ಲ. ಶ್ರೀ ಅಭಯದೇವಜಿಯವರು ಹಠಯೋಗ, ರಾಜಯೋಗಗಳ ಸಾಧನೆಮಾಡಿದವರು. ವೇದಗಳ ಆಳ ಅಭ್ಯಾಸಮಾಡಿದವರು. ಆಧುನಿಕ ವೈಜ್ಞಾನಿಕಪ್ರಗತಿಯನ್ನು, ಭಾರತದ ರಾಷ್ಟ್ರೀಯ ಹೋರಾಟವನ್ನು ಗಮನಿಸಿದವರು. ಈ ಎಲ್ಲ ಎಳೆಗಳನ್ನೂ ಹೊಂದಿಸಿಕೊಂಡು ಹೊಸದೊಂದು ಕೇಂದ್ರ ಜ್ಯೋತಿಯನ್ನು ಶ್ರೀ ಅರವಿಂದರು ತೋರಿಸಬಲ್ಲರೆಂದು ಅವರಿಗೆ ಅನ್ನಿಸಬೇಕಾದರೆ ಶ್ರೀ ಅರವಿಂದರ ದಾರಿ ಎಂಥದು? ಗುರಿ ಏನು? ನಮ್ಮಂಥ ಸಾಮಾನ್ಯರಿಗೆ ಅದರಲ್ಲಿ ಏನು ಸ್ಥಾನ? ಈ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ.

ಶ್ರೀ ಅಭಯದೇವಜಿ ಅವರನ್ನು ಕಂಡು ಬಂದ ಮೇಲೆ ಶ್ರೀ ಅರವಿಂದರ ಹಾಗೂ ಮಹಾತ್ಮಾ ಗಾಂಧೀಜಿಯವರ ವಿಷಯದಲ್ಲಿಯೇ ವಿಚಾರ ನಮ್ಮಲ್ಲಿ ಕೆಲ ಕಾಲ ನಡೆದರೆ ಆಶ್ಚರ್ಯವಲ್ಲ. ಒಂದು ಮಾತು ಪುನಃ ಪುನಃ ಸ್ಪಷ್ಟವಾಗುತ್ತಿತ್ತು: ಗಾಂಧೀಜಿ ಹಾಗೂ ಅರವಿಂದರು ಇಬ್ಬರೂ ಆಧ್ಯಾತ್ಮಿಕ ಸತ್ಯವನ್ನು ಆಧ್ಯಾತ್ಮಿಕ ಶಕ್ತಿಯನ್ನು, ಆಧ್ಯಾತ್ಮಿಕ ಬೆಳಕನ್ನು ನಂಬಿ ರಾಷ್ಟ್ರೀಯ ಉದ್ಧಾರಕಾರ್ಯದಲ್ಲಿ ಧುಮುಕಿದವರು. ಸತ್ಯ ಸಾಧನೆಗೆ ಅಸತ್ಯದ ಸಾಧನ ನಿರುಪಯೋಗಿ ಎಂದೂ ಘಾತಕವೆಂದೂ ಗಾಂಧೀಜಿ ಕಂಡುಕೊಂಡರು. ಅವರ ವಿಶ್ವಪ್ರೀತಿ ಸತ್ಯ ಪ್ರೀತಿಯಾಗಿತ್ತು. ದೇವರು, ಸತ್ಯ, ವಿಶ್ವ, ಅಹಿಂಸೆ ಇವು ಅವರಿಗೆ ಅವಿಭಾಜ್ಯವಾಗಿದ್ದವು. ಶ್ರೀ ಅರವಿಂದರೂ ರಾಷ್ಟ್ರೀಯ ಹೋರಾಟ ನಡೆಸಿ, ಬ್ರಿಟಿಶ್ ಸರಕಾರದ ಗಲ್ಲಿನ ಶಿಕ್ಷೆಯನ್ನು ಎದುರಿಸುವವರೆಗೂ ರಾಷ್ಟ್ರೀಯ

ಹೋರಾಟವನ್ನು ಆಧ್ಯಾತ್ಮಿಕ ಹೋರಾಟವನ್ನಾಗಿ ಮಾಡಿದ್ದರೆಂಬುದನ್ನು ಎಲ್ಲರೂ ಬಲ್ಲರು. ಅವರ "ಕರ್ಮಯೋಗಿನ್" "ವಂದೇ ಮಾತರಂ" ಪತ್ರಿಕೆಗಳು ಭಾರತೀಯ ತರುಣರಲ್ಲಿ ರಾಷ್ಟ್ರೀಯ ಸ್ವಾಭಿಮಾನವನ್ನೂ ಯೌಗಿಕ ನಿಷ್ಠೆಯನ್ನೂ ಉಜ್ವಲಗೊಳಿಸುತ್ತಿದ್ದವು. ಅಲಿಪುರ ಜೇಲಿನಲ್ಲಿ ಶ್ರೀ ಅರವಿಂದರು ಇರುವಾಗ ನ್ಯಾಯಾಲಯದಲ್ಲಿ ಇವರ ಪರವಾಗಿ ವಾದ ಮಾಡುತ್ತಿದ್ದ ಶ್ರೀ ಚಿತ್ತರಂಜನದಾಸರು ಜಗತ್ತಿಗೆ ಶ್ರೀ ಅರವಿಂದ ಮಾಹಾತ್ಮ್ಯ ಮುಂದೆ ತಿಳಿಯುವದೆಂದೂ ಆಗ ಅವರ ಪ್ರತಿಯೊಂದು ಮಾತಿಗೂ ಬೆಲೆಬರುವದೆಂದೂ ಘೋಷಿಸಿದರು. ಇಂದು ಚಿತ್ತರಂಜನ ದಾಸರು ಪ್ರತ್ಯಕ್ಷ ಇಲ್ಲ; ಶ್ರೀ ಅರವಿಂದರು ತಮ್ಮ ಭೌತಿಕ ಶರೀರ ತ್ಯಜಿಸಿದ್ದಾರೆ. ಆದರೆ ಶ್ರೀ ದಾಸರ ಮಾತಿನ ಸತ್ಯತೆ ಮಾತ್ರ ಈಗ ಅನೇಕರಿಗೆ ಅನುಭವಕ್ಕೆ ಬರುತ್ತಿದೆ.

ಮಾನವನ ಮೂಲ ಸಮಸ್ಯೆ

ಶ್ರೀ ಅರವಿಂದರು ಅಲಿಪುರ ಜೇಲಿನಿಂದ ೧೯೦೯ ರಲ್ಲಿ ಬಿಡುಗಡೆ ಹೊಂದಿದ ನಂತರ ೩೦ನೆಯ ಮೇ ೧೯೦೯ ರಂದು ಮಾಡಿದ ಪ್ರಖ್ಯಾತ "ಉತ್ತರಪಾರಾ ಭಾಷಣ"ದಲ್ಲಿ ಅವರ ವ್ಯಕ್ತಿತ್ವದ ಮಹತ್ವದ ಅಂತಃಪರಿವರ್ತನೆ ಕಂಡು ಬರುತ್ತದೆ. ಗಾಂಧೀಜಿ ಶುದ್ಧ ಜೀವನದ ಪ್ರತಿಪಾದನೆ ಮಾಡಿದರು, ಅಹಿಂಸೆ, ತ್ಯಾಗಗಳ ಸಂದೇಶ ನೀಡಿದರು. ಸತ್ಯದ ಬಾಳನ್ನು ಗುರಿಯಾಗಿ ತೋರಿದರು. ಆದರೆ ಇವೆಲ್ಲ ಸಹಜವಾಗಿ ಸಿದ್ಧಿಸುವದು ಯಾವಾಗ? ಮಾನವನು ಯಾವ ನೆಲೆಗೆ ನಿಂತರೆ ಪಾಪರಹಿತನಾಗಿ ಮಂಗಲ ಕರ್ಮಯೋಗಿಯಾಗಿ ಶಾಂತ, ಆನಂದಪ್ರದ, ಸಮೃದ್ಧ ಜೀವನ ಬಾಳಬಹುದು? ಇದು ಮಾನವನ ಮೂಲಸಮಸ್ಯೆ. ಶ್ರೀ ಅರವಿಂದರು ಕಂಡುಕೊಂಡ ಉತ್ತರದ ಕೆಲ ಅಂಶಗಳು ಬಹು ಸ್ಫುಟವಾಗಿ "ತೈತ್ತಿರೀಯೋಪನಿಷತ್ತಿ"ನಲ್ಲಿ ಕಂಡುಬರುತ್ತವೆ:

"ವಿಜ್ಞಾನಂ ಬ್ರಹ್ಮ ಚೇದ್ವೇದ।
ತಸ್ಮಾಚ್ಚೇನ್ನ ಪ್ರಮಾದ್ಯತಿ।
ಶರೀರೇ ಪಾಪ್ಮನೋ ಹಿತ್ವಾ।
ಸರ್ವಾನ್ಕಾಮಾನ್ಸಮಶ್ನುತ ಇತಿ॥"

—ಬ್ರಹ್ಮಾನಂದವಲ್ಲಿ ಪಂಚಮೋನುವಾಕ

"ವಿಜ್ಞಾನವೆ ಬ್ರಹ್ಮನೆಂದು ತಿಳಿ. ಇದನ್ನು ತಿಳಿದುಕೊಳ್ಳುವದರಲ್ಲಿ ಯಾವನು ತಪ್ಪು ಮಾಡುವದಿಲ್ಲವೊ ಅವನೇ ಶರೀರಸ್ಥ. ಎಲ್ಲ ಪಾಪಗಳನ್ನು ನಾಶಮಾಡಿ ಎಲ್ಲ ಕಾಮಗಳನ್ನು ಉಪಭೋಗಿಸುವನು."

—ಶ್ರೀ ದಿವಾಕರರ ಅನುವಾದದಿಂದ

ಇಲ್ಲಿ ಉಪನಿಷತ್ಕಾರರು "ವಿಜ್ಞಾನ"ವೆಂದು ಗುರುತಿಸಿರುವದೇ ಶ್ರೀ ಅರವಿಂದರ "ಅತಿಮಾನಸ" ಇಲ್ಲವೆ "ಸುಪ್ರಾಮೆಂಟಲ್ ಪ್ಲೇನ್" ಆಗಿರುತ್ತದೆ. ಇದರ ಮುಖ್ಯ ವೈಶಿಷ್ಟ್ಯವೆಂದರೆ ಪಾಪದ ಬೇರು ಸಂಪೂರ್ಣವಾಗಿ ಕಿತ್ತುಹೋಗಿ, ಕಾಮನೆಗಳೆಲ್ಲ ಸಂತೃಪ್ತಿ ಹೊಂದಿ ದಿವ್ಯಯಜ್ಞರೂಪಿ ಕರ್ಮಗಳನ್ನು ಮಾಡಲು ಸಾಧ್ಯವಾಗುವದು ಇಲ್ಲಿಯೇ! ಇಲ್ಲಿಯ ವರೆಗೆ ಮಾನವನು ಮೇಲಕ್ಕೇರುವವರೆಗೆ ಆತನ ಚಿಂತೆಗೆ, ಆತನ ಅನ್ಯಾಯಕ್ಕೆ ಆತನ ದುಃಖಕ್ಕೆ ಕೊನೆಯೆಂಬುದಿಲ್ಲ. ಏಕೆಂದರೆ ಪಾಪವಿದ್ದಲ್ಲಿ ಅನ್ಯಾಯವಿದೆ ಅತೃಪ್ತಿ ಇದ್ದಲ್ಲಿ ದುಃಖವಿದೆ. ಪಾವಿತ್ರ್ಯವೂ ಸಂತೃಪ್ತಿಯೂ ಅಖಂಡವಾಗಿದ್ದಲ್ಲಿಜೀವನವೆಂಬುದು 'ಯಜ್ಞ'ವಾದೀತು. ಅಂಥ ಸಿದ್ಧಪುರುಷನು ಮಾಡುವ ಕರ್ಮ ದಿವ್ಯಲೀಲೆಯಾಗುವದು. ಅದನ್ನೇ ತೈತ್ತಿರೀಯ ಉಪನಿಷತ್ತು ಹೀಗೆ ಬಣ್ಣಿಸುತ್ತದೆ:

"ವಿಜ್ಞಾನಂ ಯಜ್ಞಂ ತನುತೇ।
ಕರ್ಮಾಣಿ ತನುತೇಽ ಪಿ ಚ।
ವಿಜ್ಞಾನಂ ದೇವಾಃ ಸರ್ವೇ।
ಬ್ರಹ್ಮಜ್ಯೇಷ್ಠಮುಪಾಸತೆ॥

—ಬ್ರಹ್ಮಾನಂದವಲ್ಲಿ ಪಂಚಮೋನುವಾಕ

"ವಿಜ್ಞಾನವು ಯಜ್ಞಮಾಡುವದು. ಕರ್ಮಗಳನ್ನು ವಿಸ್ತರಿಸುವದು. ಎಲ್ಲ ದೇವತೆಗಳೂ ಶ್ರೇಷ್ಠನಾದ ಬ್ರಹ್ಮನೂ ವಿಜ್ಞಾನವನ್ನು ಉಪಾಸಿಸುವರು."

—ಶ್ರೀ ದಿವಾಕರರ ಉಪನಿಷತ್ಪ್ರಕಾಶದಿಂದ

ವಿಜ್ಞಾನದ ಈ ಲಕ್ಷಣಗಳನ್ನು ನಾವು ಸರಿಯಾಗಿ ಗ್ರಹಿಸಿದರೆ ಶ್ರೀ ಅರವಿಂದರ ಪೂರ್ಣಯೋಗದ ಬಗೆಗೆ ತಿಳಿವಳಿಕೆ ಮಾಡಿಕೊಳ್ಳಲು ಸಮರ್ಥರಾಗುತ್ತೇವೆ. ಮತ್ತು ಅದರ ವೈಶಿಷ್ಟ್ಯವನ್ನರಿಯುತ್ತೇವೆ.

ಉತ್ಕ್ರಾಂತಿವಾದ

ಶ್ರೀ ಅರವಿಂದರ ಪೂರ್ಣಯೋಗದ ಎರಡನೆಯ ಅಂಶವೆಂದರೆ, ಮನುಷ್ಯನು ತನ್ನ ಶರೀರದ ಬಂಧನಗಳನ್ನು ಮೀರಿ, ಪ್ರಾಣದ ರಾಗಾವೇಗಗಳನ್ನು ಗೆದ್ದು, ಮನಸ್ಸಿನಲ್ಲಿಯ ಸಂಕಲ್ಪ, ವಿಕಲ್ಪಗಳನ್ನೂ ಅಹಂಕಾರವನ್ನೂ ವಸ್ತುವಿನಿಂದ ದೂರನಿಂತು ಅದರ ಸತ್ಯ ಕಾಣಲೆಳಸುವ ಬುದ್ಧಿಯನ್ನು ಕ್ರಮಕ್ರಮವಾಗಿ ದಾಟ ವಿಜ್ಞಾನಮಯಕ್ಕೇರುವ ಉತ್ಕ್ರಾಂತಿವಾದ ಇಲ್ಲವೆ ವಿಕಾಸವಾದ ಬಹಳ ಮಹತ್ವದ್ದಾಗಿದೆ. ಇಲ್ಲಿ ಉತ್ಕ್ರಾಂತಿವಾದ ಇಲ್ಲವೆ ವಿಕಾಸವಾದವೆಂಬ ಪದಗಳು ಆಧುನಿಕ, ವೈಜ್ಞಾನಿಕ ಸತ್ಯ ತಿಳಿದವರಿಗೆ ಹೊಸವಲ್ಲ. ಡಾರ್ವಿನ್ನನ ಪ್ರಕಾರ ಕಲ್ಲುಮಣ್ಣಿನ ಪ್ರಪಂಚದಿಂದ ಸಸ್ಯಾದಿಗಳು ಉದಯಿಸಿ, ಸಸ್ಯಾದಿಗಳಿಂದ ಪ್ರಾಣಿಗಳು, ಪ್ರಾಣಿಗಳಲ್ಲಿ, ಮಂಗವು, ಮಂಗನಿಂದ ಮಾನವನು ಉದಯವಾದನೆಂದು ಓದುತ್ತೇವೆ. ಆದರೆ ಪಾಶ್ಚಿಮಾತ್ಯ ವಿಜ್ಞಾನವು ಇಲ್ಲಿಗೆ ನಿಲ್ಲುತ್ತದೆ. ಮಾನವನಲ್ಲಿ ದೈವತ್ವದ ಉದಯವಾದೀತೆಂದು ಲಕ್ಷಿಸುವದಿಲ್ಲ. ಆದರೆ ಭಾರತೀಯ ತತ್ತ್ವ

ಜ್ಞಾನಿಗಳು ಈ ಉತ್ಕ್ರಾಂತಿಯ ಸಮಗ್ರ ಸ್ವರೂಪವನ್ನು ಗಮನಿಸಿದ್ದಾರೆ. ಶ್ರೀ ಅರವಿಂದರ ಉತ್ಕ್ರಾಂತಿವಾದಕ್ಕೆ ಸಮೀಪವೆನ್ನಬಹುದಾದ ವಿಚಾರ ಶ್ರೀ ಮಧ್ವಾಚಾರ್ಯರ ಉತ್ಕ್ರಾಂತಿವಾದದಲ್ಲುಂಟೆಂದು ನಮಗೆ ಗೊತ್ತಾಗುತ್ತದೆ. ಆದರೆ ಅವರಿಬ್ಬರಲ್ಲಿರುವ ಅಂತರವನ್ನು ನಾವು ಗುರುತಿಸುವದು ಸ್ಪಷ್ಟತೆಯ ದೃಷ್ಟಿಯಿಂದ ಅವಶ್ಯವಿದೆ. ಶ್ರೀ ಮಧ್ವಾಚಾರ್ಯರ "ಉತ್ಕ್ರಾಂತಿ" ವಿಚಾರವನ್ನು ಶ್ರೀ ಬಿ. ಎನ್. ಕೆ. ಶರ್ಮಾ ಅವರು ತಮ್ಮ "Madhva's teachings in his own words" (ಮಧ್ವರ ಮಾತಿನಲ್ಲಿ ಅವರ ಉಪದೇಶ) ಎಂಬ ಗ್ರಂಥದಲ್ಲಿ ಬಹುಸಂಕ್ಷೇಪವಾಗಿ ವಿವರಿಸಿದ್ದಾರೆ. ಅದರ ಕನ್ನಡ ಅನುವಾದವಿದು :

"ಮಧ್ವಾಚಾರ್ಯರ ಪರಿಭಾಷೆಯಲ್ಲಿ 'ಕರ್ಮನಾಶವು' ಅಪರೋಕ್ಷಜ್ಞಾನದ ನಂತರ ಪ್ರಾಪ್ತವಾಗುವ ಮೋಕ್ಷದ ಮೊದಲನೆಯ ಹಂತವಾಗಿದೆ. ಅನಂತರ "ಉತ್ಕ್ರಾಂತಿ" ಅಂದರೆ ಲಿಂಗದೇಹವನ್ನು ಕಳೆದುಕೊಳ್ಳುವದಕ್ಕಾಗಿ ಸ್ಥೂಲದೇಹದಿಂದ ಮೇಲೇರುವದು. ಹಿಂದೂ ಪುರಾಣೋಪನಿಷತ್ತುಗಳಿಗೆ ಅನುಸಾರವಾಗಿ ಮಧ್ವಾಚಾರ್ಯರು ಬ್ರಹ್ಮಲೋಕದಲ್ಲಿ ಜ್ಞಾನಜೀವಿಗಳು ಹಿರಣ್ಯಗರ್ಭನೊಡನೆ ಕಾದಿದ್ದು ಅವನೊಡನೆ ಆನಂದಪದವನ್ನು ಹೊಂದುವರೆಂದು ಹೇಳುತ್ತಾರೆ."

ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರಗಳೆಂದರೆ ಎರಡು:

(೧) ಸಾಧಕನು ಮುಕ್ತಿಯನ್ನು ಕ್ರಮಕ್ರಮವಾಗಿ ಪಡೆದು "ಉತ್ಕ್ರಾಂತಿ"ಯ ಮುಖಾಂತರವಾಗಿ ಸ್ಥೂಲದೇಹದಾಚೆಗೇರುವನು.

(೨) ಸತ್ಯ, ಜ್ಞಾನ, ಆನಂದರೂಪಿಯಾದ ಪರಮಾತ್ಮನಲ್ಲಿ ಕರಗಿಹೋಗುವ ಪೂರ್ವದಲ್ಲಿ "ಬ್ರಹ್ಮಲೋಕ"ದಲ್ಲಿ ನಿಲ್ಲುವನು.

ಶ್ರೀ ಅರವಿಂದರ ವೈಶಿಷ್ಟ್ಯ

ಅಂದರೆ ಮಾನವನು ಸತ್ಯ, ಜ್ಞಾನ, ಮಾಂಗಲ್ಯ, ಶಕ್ತಿ, ಆನಂದಮಯನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಕ್ರಮಕ್ರಮವಾಗಿ ಮೇಲಕ್ಕೇರಬೇಕಾಗುತ್ತದೆ. ಈ ರೀತಿ ಮೇಲಕ್ಕೇರುತ್ತಿರುವಾಗ "ವಿಜ್ಞಾನ"ಮಯ ಲೋಕಕ್ಕೆ ಬಂದರೆ ಅಲ್ಲಿಗೆ ಭೂಮಿಯ ಪಾಪ, ದುಃಖಗಳ ಸಂಪರ್ಕ ಪೂರ್ಣ ನಿವಾರಣೆಯಾಗಿ, ಮುಂದಿನ ಮಾರ್ಗವು ಆನಂದಪ್ರದ, ಜ್ಞಾನಪ್ರದ, ಶಕ್ತಿಪೂರ್ಣ, ಸತ್ಯನಿಷ್ಠ, ಮಂಗಲಮಯವಾಗುತ್ತದೆ. ಭೂ, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಂ ಎಂದು ವೇದಗಳಲ್ಲಿ ವರ್ಣಿತವಾದ ಲೋಕಗಳಲ್ಲಿ "ಮಹಃ" ಎಂಬ ಲೋಕವೇ "ವಿಜ್ಞಾನ" ಲೋಕ. ಈ "ಮಹಃ" ಎಂಬ ಲೋಕದಲ್ಲಿರುವವರೇ "ಮಹಾತ್ಮ"ರು.

ಹಾಗಾದರೆ ಶ್ರೀ ಅರವಿಂದರ ಯೋಗದ ವೈಶಿಷ್ಟ್ಯವೇನು? ಎಂಬ ಪ್ರಶ್ನೆಗೆ ನಾವು ಎರಡು ಬಗೆಯಲ್ಲಿಉತ್ತರ ನೀಡಬಹುದು :

(೧) ಮನುಷ್ಯನು ಕೇವಲ "ಉತ್ಕ್ರಾಂತಿ"ಯನ್ನು ಸಾಧಿಸಿ ಅಂದರೆ ವಿಜ್ಞಾನಮಯಕ್ಕೇರಿ ಹೋದರೆ ಸಾಲದು. ಅತನು ಆ ವಿಜ್ಞಾನದ ಸತ್ವವನ್ನು "ಇಳಿಸಿ" ತಂದು ತನ್ನ ಮನಸ್ಸು, ಪ್ರಾಣ, ಹಾಗೂ ಶರೀರಗಳನ್ನು ವಿಜ್ಞಾನದಿಂದ ಪ್ರಕಾಶಿತಗೊಳಿಸಬೇಕಾಗುತ್ತದೆ.

(೨) ಈ ಸಿದ್ಧಿಗೆ ಅವಶ್ಯವಾದುದು "ಪೂರ್ಣಯೋಗ"ದ ಅನುಸಂಧಾನ. ಇಲ್ಲಿ ಪೂರ್ಣ-ಯೋಗವೆಂದರೆ ಜೀವನದ ಸಮಸ್ತಾಂಶಗಳನ್ನೂ ಪರಿಪೂರ್ಣನಾದ ಪರಮಾತ್ಮನಿಗೆ ಅರ್ಪಿಸಿ ಅವನ ಅನುಗ್ರಹದಿಂದ ಜೀವನದ ಸಮಸ್ತಾಂಗಗಳೂ ವಿಜ್ಞಾನದ ಪ್ರಕಾಶದಿಂದ ಬೆಳಗುವಂತೆ ಮಾಡುವದು.

ಹೀಗಂದರೇನು? ಎಂಬುದನ್ನರಿಯಲು ಗಾಂಧೀಜಿ, ರವೀಂದ್ರರು ಹಾಗು ಶ್ರೀ ಅರವಿಂದರ ಸಂಬಂಧಗಳನ್ನರಿತರೆ ಹೆಚ್ಚು ಸ್ಪಷ್ಟವಾಗುವದು. ಗಾಂಧೀಜಿ ಹಾಗು ರವೀಂದ್ರನಾಥ ಟ್ಯಾಗೋರರ ಭಿನ್ನಾಭಿಪ್ರಾಯಗಳನ್ನು ಕುರಿತು ಪಂಡಿತ ನೆಹರೂ ಅವರು ಒಂದು ಕಡೆಗೆ ಹೀಗೆಂದಿದ್ದಾರೆ: "ಈ ಇಬ್ಬರೂ ಈಗಿರುವದಕ್ಕಿಂತ ಸ್ವಲ್ಪವಾದರೂ ಕಡಿಮೆ ಮಹಾತ್ಮರಿದ್ದರೆ ಅಜನ್ಮ ವೈರಿಗಳಾಗುತ್ತಿದ್ದರು. ಅಷ್ಟೊಂದು ಭಿನ್ನಜೀವನದೃಷ್ಟಿ ಇವರದಾಗಿತ್ತು" ಎಂಬರ್ಥದ ಮಾತನಾಡಿದ್ದಾರೆ. ಇದರ ಅರ್ಥವಿಷ್ಟೆ, ರವೀಂದ್ರರು ಕವಿಗಳು, ಸೌಂದರ್ಯ, ಆನಂದೋಪಾಸಕರು; ಗಾಂಧೀಜಿ ಸತ್ಯ, ನ್ಯಾಯ, ಪ್ರೇಮೋಪಾಸಕರು. ಇವು ನಿಜದಲ್ಲಿ ಭಿನ್ನವಲ್ಲ. ಆದರೆ ಇವೆರಡು ಹೊಂದಿಕೊಂಡು ಸಮರಸವಾಗಿ ನಿಲ್ಲುವದು "ವಿಜ್ಞಾನ"ದಲ್ಲಿ ಮಾತ್ರ. ಏಕಂದರೆ ವಿಜ್ಞಾನವು ಪರಮಾತ್ಮನ ಸತ್ಯ, ಜ್ಞಾನ, ಆನಂದ, ಶಕ್ತಿ, ಮಾಂಗಲ್ಯಗಳನ್ನು ಒಂದು ಘನದಲ್ಲಿ ನಿಲ್ಲಿಸಿ ಜ್ಞಾನಪ್ರಧಾನಜೀವನ ನಡಿಸಬಲ್ಲದು. ಈ ಶಕ್ತಿ ಮನಸ್ಸಿಗಿಲ್ಲ; ಆಸುರೀ ಶಕ್ತಿಗಿಲ್ಲ. ಏಕೆಂದರೆ ಶಕ್ತಿವಂತನಾದವನು ಬಹಳವಾದರೆ "ಲಕ್ಷ್ಮೀಪತಿ"ಯಾಗಲು ಹಂಬಲಿಸಿ ಅನ್ಯಾಯ, ಕ್ರೌರ್ಯಕ್ಕೆ ಎಡೆ ಕೊಡುತ್ತಾನೆ; "ಸಾತ್ವಿಕ"ನಾದವನೆಂದರೆ, "ಕರುಣೆ" ಎಂದರೆ ನಿರ್ಬಲನೆಂಬಂತೆ ಇಂದಿನ ಮಾನವನ ಕಲ್ಪನೆ, ಅನುಭವವಾಗಿದೆ. ಇನ್ನು 'ಶಾಂತಿ' ಎಂದರೆ ಸತ್ತಂತೆ ಬೀಳುವ ಜಾಡ್ಯವಾಗಿದೆ. ಇದು ತಪ್ಪಿ ಜೀವನವು ಸಂಪದ್ಭರಿತವಾಗಿ, ಶಕ್ತಿಸಂಪನ್ನವಾಗಿ, ಶಿವಭಾವದಿಂದ ಕೂಡಿ-ಜ್ಞಾನಪ್ರಕಾಶ ಪಡೆದು ಆನಂದಮಯವಾಗಿ ಸತ್ಯಸೃಷ್ಟಿಯಲ್ಲಿಳಿಯಬೇಕು. ಇದು ಪರಮಾದರ್ಶ; ಶ್ರೀ ಅರವಿಂದರ ಪೂರ್ಣಯೋಗದ ಗುರಿ!

ಇನ್ನೊಂದು ಕಡೆಗೆ ೧) ವ್ಯಕ್ತಿ ೨) ಕುಟುಂಬ ೩) ಸಮಾಜ ೪) ರಾಷ್ಟ್ರ ೫) ಪ್ರಪಂಚದ

ಮಾನವ ೬) ವಿಶ್ವಾತ್ಮ ೭) ಪರಮಾತ್ಮ ಈ ಸಪ್ತ ತತ್ತ್ವಗಳಲ್ಲಿ ಸಮನ್ವಯ ಸಾಧಿಸಬೇಕಾಗಿದೆ.

ಮತ್ತೊಂದು ಕಡೆಗೆ ೧) ವಿಜ್ಞಾನ ೨) ಧರ್ಮ, ೩) ನೀತಿ ೪) ಆಧ್ಯಾತ್ಮಗಳಲ್ಲಿ ಹೊಂದಿಕೆಬೇಕು.

ಕೊನೆಯದಾಗಿ ೧) ಹಠಯೋಗ ೨) ರಾಜಯೋಗ ೩) ತಾಂತ್ರಿಕ ಯೋಗ ೪) ಭಕ್ತಿ, ಜ್ಞಾನ, ಕರ್ಮಯೋಗಗಳು ಮೊದಲಾದ ವಿವಿಧ ಯೋಗಗಳಲ್ಲಿಯ ವಿರೋಧವನ್ನು ನಿವಾರಿಸಿ ಸಾರಸಂಗ್ರಹಿಸಿ ಒಂದು ಸಮನ್ವಯ ಯೋಗಸಾಧನವನ್ನು ಕಂಡು ಹಿಡಿಯಬೇಕು.

ಸಮಗ್ರದರ್ಶನ

ಶ್ರೀ ಅರವಿಂದರು ಇಂಥ ವಿಶ್ವವಿಶಾಲ ಸಮನ್ವಯ ಸಾಧನೆಯನ್ನು ನಡಿಸಿದರು. ಅದಕ್ಕಾಗಿ ಒಂದೊಂದು ಸಮಸ್ಯೆಯ ವಿವರಣೆಗಾಗಿ ಒಂದೊಂದು ಗ್ರಂಥ ರಚನೆಯನ್ನು ಮಾಡಿದರು. ೧) ದಿವ್ಯಜೀವನ (ಲೈಫ್ ಡಿವೈನ್) ವೆಂಬ ಗ್ರಂಥದಲ್ಲಿ ಅವರ ತತ್ತ್ವಜ್ಞಾನವೆಲ್ಲ ಮೂಡಿದೆ ೨) ಯೋಗ ಸಮನ್ವಯ (ಸಿಂಥೆಸಿಸ್ ಆಫ್ ಯೋಗ)ದಲ್ಲಿ ವಿವಿಧ ಯೋಗಗಳ ಸಾರ, ಅವುಗಳ ಸಮನ್ವಯ ರೀತಿ ವ್ಯಕ್ತವಾಗಿದೆ. ೩) 'ಸಾವಿತ್ರಿ' ಮಹಾಕಾವ್ಯದಲ್ಲಿ ಅವರ ದರ್ಶನದ ರಸಸೃಷ್ಟಿ ಇದೆ. ೪) ಮಾನವನ ಪ್ರಗತಿ ಚಕ್ರ [ಹ್ಯೂಮನ್ ಸೈಕಲ್] ದಲ್ಲಿ ಮಾನವನ ಸಮಾಜವಿಕಾಸದ ದರ್ಶನವಿದೆ. ೫) ಮಾನವನ ಐಕ್ಯ ಆದರ್ಶ [ದಿ ಐಡಿಯಲ್ ಆಫ್ ಹ್ಯೂಮನ್ ಯುನಿಟ]ದಲ್ಲಿ ವ್ಯಕ್ತಿಯಿಂದ ರಾಷ್ಟ್ರಪ್ರಜ್ಞೆ ಉದಯವಾಗಿ ವಿಶ್ವರಾಷ್ಟ್ರ ಇಲ್ಲವೆ ಜಾಗತಿಕ ಸರಕಾರದ ಸ್ಥಾಪನೆ ಹೇಗೆ ಆಗುವದು ಎಂಬ ಭವಿಷ್ಯದ್ದರ್ಶನವಿದೆ. ೬) ಭಗವದ್ಗೀತೆಯ ಮೇಲಿನ ಪ್ರಬಂಧಗಳು [ಎಸ್ಸೇಜ್ ಆನ್ ದಿ ಗೀತಾ] ೭) ಭವಿತವ್ಯದ ಕಾವ್ಯ ಸ್ವರೂಪ ೮) ವೇದದ ಅಂತರ್ದರ್ಶನ ೯) ಭಾರತೀಯ ಸಂಸ್ಕೃತಿಯ ಮೂಲಭೂತ ತತ್ತ್ವಗಳು ಮೊದಲಾದ ಬೃಹದ್ಗ್ರಂಥಗಳಲ್ಲದೆ ಇನ್ನೂ ೯೦ ರಷ್ಟು ಚಿಕ್ಕ ದೊಡ್ಡ ಗ್ರಂಥಗಳನ್ನು ಶ್ರೀ ಅರವಿಂದರು ರಚಿಸಿದ್ದಾರೆ.

ಈ ಎಲ್ಲ ಗ್ರಂಥರಾಶಿಯಿಂದ ವ್ಯಕ್ತವಾಗುವ ಮುಖ್ಯಮಾತುಗಳೆರಡು : ೧) ವಿಶ್ವಜೀವನದ ಹಾಗೂ ಮಾನವನು ಎದುರಿಸುವ ಮಹಾ ಸಮಸ್ಯೆಗಳ ವಿಶಾಲ ನೋಟ. ೨) ಈ ಸಮಸ್ಯಾರಾಶಿಯಲ್ಲಿಯ ಐಕ್ಯಬಿಂದುವನ್ನು ಕಾಣುವ ಪ್ರಯತ್ನ.

ಶ್ರೀ ಮಧ್ವಾಚಾರ್ಯರು ಅಸಂಖ್ಯ ಭಿನ್ನ ತತ್ತ್ವಗಳನ್ನು ಹೇಳಿದರೂ ಹೇಗೆ ಇವೆಲ್ಲವುಗಳನ್ನು ಹೊಂದಿಸುವ ಒಂದು "ವಿಶೇಷತತ್ತ್ವವಿದೆ" ಎಂದು ಪ್ರತಿಪಾದಿಸಿದರೋ ಹಾಗೆ ಶ್ರೀ ಅರವಿಂದರು ಆಧುನಿಕ ಪ್ರಪಂಚದ ಬೃಹತ್ಸ್ವರೂಪವನ್ನು, ಬೃಹತ್ಸಮಸ್ಯೆಗಳನ್ನು ಸಮಗ್ರವಾಗಿ ಸ್ವೀಕರಿಸಿ ಅವುಗಳಲ್ಲಿ ಒಂದು ಐಕ್ಯ ಬಿಂದುವನ್ನು ಕಾಣುವದು ಸಾಧ್ಯವಿದೆ ಎಂದು ಕಂಡುಕೊಂಡರು.

ರಸಸಾಕ್ಷಿ

ಈ ಐಕ್ಯ ಬಿಂದುವಿನ ಪ್ರಥಮ ರೂಪವನ್ನು "ಸೈಕಿ" ಎಂದು ಶ್ರೀ ಅರವಿಂದರು ಕರೆದಿದ್ದಾರೆ. ಇದನ್ನು ಶ್ರೀ ಬೇಂದ್ರೆಯವರು ಕನ್ನಡದಲ್ಲಿ "ರಸಸಾಕ್ಷಿ" ಎಂದು ಅನುವಾದಿಸಿದ್ದಾರೆ. ಸಾಹಿತ್ಯದಲ್ಲಿ ನಾವು "ರಸ" ಶಬ್ದವನ್ನು ನೋಡಿದ್ದೇವೆ. ಸಾಮಾನ್ಯ ಜೀವನದಲ್ಲಿ ಶೋಕವು ಅಸಹ್ಯವಾದರೆ ಅದೇ ಸಾಹಿತ್ಯದಲ್ಲಿ "ಕರುಣರಸ" ವಾಗಿ ಬಂದಾಗ ಸರ್ವರಿಗೂ ಆನಂದದಾಯಕವಾಗುತ್ತದೆ. ಹೀಗೆ ಮಾನವನಲ್ಲಿಯ ಸಮಸ್ತ ವಿರೋಧಾಂಶಗಳಲ್ಲಿ ಸಾಮರಸ್ಯವನ್ನು ತರಬಲ್ಲ ಒಂದು "ರಸ" ತತ್ತ್ವವಿದೆ "ರಸೋವೈ ಸಃ" ಎಂದು ಉಪನಿಷತ್ತು ಇದನ್ನು ವರ್ಣಿಸುತ್ತ ಅದು ಆತ್ಮನೇ ಎಂದು ಹೇಳಿದೆ. ಇದು ಜ್ಞಾನಮಯವಾದಾಗ 'ರಸಸಾಕ್ಷಿ' ಯಾಗುತ್ತದೆ. ಶ್ರೀ ಮಧ್ವಾಚಾರ್ಯರು "ಸಾಕ್ಷಿ" ಎಂದರೆ ಆತ್ಮನ ಇಂದ್ರಿಯವೆಂದು ಹೇಳಿದ್ದಾರೆ. ಇದಕ್ಕೆ ಕಂಡದ್ದೇ "ಸಾಕ್ಷಾತ್ಕಾರ" ವೆಂದು ಹೇಳಿದ್ದಾರೆ. ಶ್ರೀ ಅರವಿಂದರ "ರಸಸಾಕ್ಷಿ" ಯು ವ್ಯಕ್ತಿಯ ಯೋಗವನ್ನು ಪೂರ್ಣ ಯೋಗವನ್ನಾಗಿ ಮಾಡಿ ದಿವ್ಯ ಜೀವನ ಸಾಧಿಸುವ "ಕರ್ತೃತ್ವಶಾಲಿ" ಗುಣವುಳ್ಳದ್ದು. ಈ ಗುಣವೂ ಪರಮಾತ್ಮನಿಂದಲೇ ಬಂದುದೆಂಬುದನ್ನು ಬೇರೆ ಹೇಳಬೇಕಿಲ್ಲ. ಈ ರಸಸಾಕ್ಷಿಯನ್ನು "ಚೈತ್ಯಪುರುಷ" ಎಂದೂ ಕರೆಯಲಾಗಿದೆ. ಶ್ರೀ ಅರವಿಂದರೇ "ಚೈತ್ಯಪುರುಷ" ಎಂದು ಬಳಸಿದ್ದಾರೆ. ಈ ಪುರುಷನ ನೆಲೆ ಹೃದಯ ಕಮಲ ಇದನ್ನು "ದಹರಾಕಾಶ" ಎಂತಲೂ ಉಪನಿಷತ್ಕಾರರು ಕರೆದಿದ್ದಾರೆ. ಈ ಹೃದಯಕಮಲದಲ್ಲಿರುವ ಚೈತ್ಯ ಪುರುಷನು ನಮ್ಮ ಆತ್ಮನ "ಕಿಡಿ" ಎನ್ನಬಹುದು. ಈತನಿಂದ ಪ್ರಾರಂಭವಾದ ಯೋಗವು ವಿಶ್ವಾತ್ಮನೊಡಗೂಡಿ, ವಿಶ್ವಮಾತೆಯೊಡನೆ ಹೊಂದಿಕೊಂಡು ಪರಮಾತ್ಮನ ಅನುಗ್ರಹ ಪಡೆದು ವಿಜ್ಞಾನ ಸಿದ್ಧಿಯನ್ನು ಪಡೆಯುತ್ತದೆ.

ದಿವ್ಯಶರೀರಿಗಳು

ಶ್ರೀ ಅರವಿಂದರ ವಿಜ್ಞಾನಸಿದ್ಧಿಯ ಮುಖ್ಯ ಮತ್ತು ಸರ್ವರಿಗೂ ಎದ್ದು ಕಾಣುವ ಕೊನೆಯ ಅಂಶವೆಂದರೆ "ದಿವ್ಯ ಶರೀರ ಧಾರಣ" ಅಥವಾ ಬೆಳಕಿನ ಮೈಯವರಾಗುವದು. ಅಂದರೆ ನೆರಳಿನ ಅಂಶ, ಕತ್ತಲಿನ ಅಂಶ, ಅಜ್ಞಾನದ ಅಂಶ ನಮ್ಮ ವ್ಯಕ್ತಿತ್ವದಿಂದ ಪೂರ್ತಿ ಇಲ್ಲದಂತಾಗುವದು. ಮೈಯ ಕಣ ಕಣವೂ ದಿವ್ಯ ಜ್ಯೋತಿಯಿಂದ ಬೆಳಗುವದು. ಇಲ್ಲಿ ಪುನಃ ಸ್ಮರಣೆಯಲ್ಲಿಡಬೇಕಾದ ಅಂಶವೆಂದರೆ, ಈ ದಿವ್ಯ ಜ್ಯೋತಿಯು ವಿಜ್ಞಾನಮಯ ಕೋಶದ ಪ್ರಕಾಶವಾಗಿರುತ್ತದೆ. ಈ ಮಾತನ್ನೇ ಮಥಿಸಿ ಹೇಳಬೇಕೆಂದರೆ, ಎಲ್ಲ ದೇವತೆಗಳೂ ಪ್ರಕಾಶ ಶರೀರವುಳ್ಳವರಾಗಿದ್ದರೂ ವಿಜ್ಞಾನ ಇಲ್ಲವೆ ಮಹರ್ಲೋಕದ ದೇವತೆಗಳಲ್ಲ. ಕೆಳಗಿನ ಲೋಕದ ದೇವತೆಗಳಲ್ಲಿ ಒಂದೊಂದು ಶಕ್ತಿ ಇರುತ್ತದೆ. ಆದರೆ ವಿಜ್ಞಾನಲೋಕದ ದಿವ್ಯಶರೀರಿಗಳಿಗೆ ಸಮಗ್ರ ವ್ಯಕ್ತಿತ್ವದ ಪೂರ್ಣ ಜೀವನದ ಕೇಂದ್ರ ಪ್ರಕಾಶವಿರುತ್ತದೆ. ಇವರ ಸ್ವರೂಪವನ್ನು ಬಣ್ಣಿಸಿದ ತೈತ್ತರೀಯ ಉಪನಿಷತ್ತಿನ ಮಂತ್ರದೊಡನೆ ಈ ಲೇಖನವನ್ನು ಕೊನೆಗೊಳಿಸುವೆ.

"ಅನ್ಯೋಽಂತರ ಆತ್ಮಾ ವಿಜ್ಞಾನಮಯಃ। ತಸ್ಯ ಶ್ರದ್ಧೈವ ಶಿರಃ। ಋತಂ ದಕ್ಷಿಣ ಪಕ್ಷಃ। ಸತ್ಯಮುತ್ತರ ಪಕ್ಷಃ। ಯೋಗ ಆತ್ಮಾ। ಮಹಃ ಪುಚ್ಛಂ ಪ್ರತಿಷ್ಠಾ।

(ಮನೋಮಯ ಆತ್ಮನಿಂದ) ಭಿನ್ನನಾದವನೀತ ವಿಜ್ಞಾನಮಯನು। ಅವನಿಗೆ ಶ್ರದ್ಧೆಯೇ ಶಿರಸ್ಸು। ಋತುವು ಅಂದರೆ ಸತ್ಯಕ್ರಿಯಾ ಧರ್ಮವು ಆತನ ಬಲಬದಿಯು। ಸತ್ಯವು ಎಡಬದಿಯು। ಯೋಗವೇ ಆತ್ಮವು ಮಹತ್ಪ್ರಕಾಶವೇ ಆಧಾರವು.

— ಬ್ರಹ್ಮಾನಂದವಲ್ಲಿ ಚತುರ್ಥೋಽನುವಾಕ

ಮಕ್ಕಳ ವಿಭಾಗ

ಅವತಾರಗಳು

ಅಕ್ಬರನ ದರಬಾರಿನಲ್ಲಿ ಅನೇಕ ಪಂಡಿತರುಗಳು, ಬುದ್ಧಿವಾನರು ಇರುತ್ತಿದ್ದರು. ಅವರಿಗೆ 'ನವರತ್ನ' ರೆಂದು ಹೆಸರು. ಈ ಒಂಬತ್ತು ಮಂದಿ ಸಲಹೆಗಾರರಲ್ಲಿ ಹೆಸರಾದ ಬೀರಬಲ್‌ನೂ ಒಬ್ಬನು. ಎಂಥ ಕ್ಲಿಷ್ಟವಾದ ಪ್ರಸಂಗಗಳು ಬಂದರೂ ಬಹು ಸರಳವಾಗಿಯೂ ಸುಲಭವಾಗಿಯೂ ಅವುಗಳನ್ನು ಎದುರಿಸಿ, ಅಕ್ಬರ ಚಕ್ರವರ್ತಿಯನ್ನು ಅವನು ಸಂಕಟದಿಂದ ಪಾರುಮಾಡುತ್ತಿದ್ದನು. ಆದುದರಿಂದಲೇ ಬೀರಬಲ್‌ನೆಂದರೆ ಅಕ್ಬರ ಬಾದಶಹನಿಗೆ ಅತ್ಯಂತ ಪ್ರೀತಿ.

ಒಂದು ದಿನ ಅಕ್ಬರನು ತನ್ನ ಆಪ್ತಸಲಹೆಗಾರನಾದ ಬೀರಬಲ್‌ನನ್ನು ಕುರಿತು "ಭಗವಂತನು ಯಾವ ಕೆಲಸವನ್ನಾದರೂ ಮಾಡಬಲ್ಲನಲ್ಲವೇ ? " ಎಂದು ಕೇಳಿದನು.

ಅದಕ್ಕೆ ಬೀರಬಲ್‌ನು "ಅಹುದು ಸರಕಾರ್, ಆ ಭಗವಂತನು ಯಾವ ಕೆಲಸವನ್ನಾದರೂ ಮಾಡಬಲ್ಲನು" ಎಂದನು.

ಆ ಮಾತಿಗೆ ಚಕ್ರವರ್ತಿಯು ಮಾತನ್ನು ಮುಂದುವರಿಸಿ "ಬೀರಬಲ್, ಇನ್ನೊಂದು ವಿಚಾರ. ಭಗವಂತನ ಆಜ್ಞೆಗಳನ್ನು ನೆರವೇರಿಸಲು, ಎಷ್ಟೋ ಮಂದಿ ಸೇವಕರು ಇರುವಾಗ, ಭಕ್ತರನ್ನು, ದುಃಖಿಗಳನ್ನು, ರಕ್ಷಿಸಲು ಆತನೇ ಏತಕ್ಕೆ ಪ್ರತ್ಯಕ್ಷ ಬರಬೇಕು. ಸೇವಕರು ಆ ಕೆಲಸ ಮಾಡಲಾರರೇ ? " ಎಂದು ಕೇಳಿದ.

ಚತುರನಾದ ಬೀರಬಲ್‌ನು ಕೂಡಲೇ ಆ ಪ್ರಶ್ನೆಗೆ ಉತ್ತರವನ್ನು ಹೇಳಲಾಗದೆ "ಪ್ರಭೂ ಈ ಪ್ರಶ್ನೆ ಬಹಳ ಕ್ಲಿಷ್ಟವಾಗಿದೆ. ಮಾರುತ್ತರ ಕೊಡಲು ಒಂದು ತಿಂಗಳ ಅವಧಿ ಬೇಕು" ಎಂದು ಕೇಳಿಕೊಂಡನು. ಅವನ ಕೋರಿಕೆಯಂತೆ ಒಂದು ತಿಂಗಳ ಅವಧಿಯನ್ನು ಕೊಡಲಾಯಿತು.

ಒಂದು ತಿಂಗಳು ಅವಧಿ ಮುಗಿಯುವ ಸಮಯ ಬಂದಿತು. ಚಕ್ರವರ್ತಿಯು ತಾನು ಬೀರಬಲ್‌ನಿಗೆ ಕೇಳಿದ ಪ್ರಶ್ನೆಯ ಮಾತನ್ನೂ ಮರೆತು ಹೋದನು.

ಮತ್ತೊಂದು ದಿನ ಬೀರಬಲ್‌ನು ಅಕ್ಬರ್ ಪ್ರಭುಗಳನ್ನು ಸಮೀಪಿಸಿ "ದೊರೆಗಳೇ, ನಾಳೆ ನಾವು ನೌಕಾವಿಹಾರಕ್ಕೆ ಹೊರಡುವವರಿದ್ದೇವೆ. ತುಂಬು ಹುಣ್ಣಿಮೆಯ ರಾತ್ರಿಯಲ್ಲಿ ತಮ್ಮ ಕೂಡ ನೌಕೆಯಲ್ಲಿ ಪ್ರಯಾಣ ಮಾಡಲು ನನ್ನ ಮನಸ್ಸು ಬಹಳ ಆಶೆಗೊಂಡಿದೆ. ನನ್ನ ಈ ವಿನಂತಿಯನ್ನು ನಡೆಯಿಸಿಕೊಡಿ" ಎಂದು ಕೇಳಿಕೊಂಡನು. ಈ ಸಲಹೆಗೆ ಅಕ್ಬರ ಚಕ್ರವರ್ತಿಯು ತುಂಬಾ ಸಂತೋಷದಿಂದ ಒಪ್ಪಿಕೊಂಡನು. ಪ್ರಯಾಣಕ್ಕೆ ಎಲ್ಲವೂ ಸಿದ್ಧವಾಗಿತ್ತು. ವಿಹಾರಕ್ಕೆ ಹೊರಡಲು ಸಿದ್ಧವಾಗಿರುವಾಗ ಬೀರಬಲ್‌ನು ಮಾತ್ರ ಇನ್ನೂ ಬಂದಿರಲಿಲ್ಲ. ಆದರೆ ಇನ್ನೇನು ನೌಕೆಯು ಹೊರಡುವ ಕೊನೆಯ ನಿಮಿಷಕ್ಕೆ ಸರಿಯಾಗಿ ಅವಸರ ಅವಸರದಿಂದ ಓಡಿಬರುತ್ತಿದ್ದ. ಬೀರಬಲ್‌ನು ಪ್ರಭುಗಳನ್ನು ಸಮೀಪಿಸಿ "ಚಕ್ರವರ್ತಿಗಳೇ, ಕ್ಷಮಿಸಿರಿ. ಹೊರಡುವ ವೇಳೆಗೆ ಸರಿಯಾಗಿ ಯುವರಾಜರು ತಾವೂ ಬರುವೆವೆಂದು ಹಟತೊಟ್ಟರು. ಆದುದರಿಂದ ತಡವಾಯಿತು." ಎಂದು ಹೇಳಿದ. ವಿಹಾರಕ್ಕೆಂದು ನೌಕೆಯು



ಪ್ರಯಾಣ ಬೆಳೆಸಿತು. ಬೀರಬಲ್‌ನು ಚಿಕ್ಕ ಬಾಲಕನಾದ ಯುವರಾಜನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು 'ಜೋ' ತಟ್ಟುತ್ತಿದ್ದನು.


ನೌಕೆಯ ಕೊನೆಯ ಅಂಚಿನಲ್ಲಿ ಕುಳಿತಿದ್ದ ಬೀರಬಲ್‌ನ ತೊಡೆಯ ಮೇಲೆ ಕುಳಿತು ಮಲಗಿದ್ದ ಯುವರಾಜ ಕುಮಾರನು ಝೋಲಿ ತಪ್ಪಿ ನೀರಿನಲ್ಲಿ ಬಿದ್ದುಬಿಟ್ಟನು. ತನ್ನ ಮಗನು ನೀರಿನಲ್ಲಿ ಬಿದ್ದುದನ್ನು ಕಂಡು ಚಕ್ರವರ್ತಿಯು ಯುವರಾಜನ ಪ್ರಾಣವನ್ನು ರಕ್ಷಿಸಲು ತಾನೂ ನೀರಿನಲ್ಲಿ ಧುಮುಕಿದನು. ಅಕ್ಬರನು ಸ್ವಲ್ಪ ವೇಳೆಯನಂತರ ಯುವರಾಜನಂತೆಯೇ ಇದ್ದ ಒಂದು ಕಟ್ಟಿಗೆ ಗೊಂಬೆಯನ್ನು ಹಿಡಿದುಕೊಂಡು ನೌಕೆಯನ್ನು ಸೇರಿದನು.

ಕೂಡಲೇ ಕೋಪಗೊಂಡ ಚಕ್ರವರ್ತಿಯು "ಇದೇನು ನಾಟಕ ಬೀರಬಲ್, ಈ ಗೊಂಬೆಯು ಯುವರಾಜನೆಂದು ಹೇಳಿದೆಯಲ್ಲ ? " ಎಂದು ಕೇಳಿದನು.

ಗಾಬರಿಗೊಳ್ಳದೇ ಬೀರಬಲ್‌ನು ಮಹಾಪ್ರಭುಗಳಿಗೆ ನಮಸ್ಕರಿಸುತ್ತ "ಒಂದು ತಿಂಗಳ ಹಿಂದೆ ತಾವು ಸಭೆಯಲ್ಲೊಂದು ಸಮಸ್ಯೆಯನ್ನು ಕೊಟ್ಟಿದ್ದಿರಿ. ಭಗವಂತನೇ ಏತಕ್ಕೆ ಅವತಾರಗಳನ್ನೆತ್ತುವನು, ಆತನೇ ಏಕೆ ಬರಬೇಕು ಎಂದು ಕೇಳಿದಿರಿ. ಆ ಪ್ರಶ್ನೆಗೆ ಇದೇ ಸರಿಯಾದ ಪರಿಹಾರ. ನಿಮ್ಮ ಕೈಕೆಳಗೆ ಸಾವಿರಾರು ಸೇವಕರಿರುವಾಗ ನೀರಿನಲ್ಲಿ ಬಿದ್ದ ಯುವರಾಜನನ್ನು ನೀರಿನಿಂದ ತೆಗೆಯಲು ನೀವೆ ಏಕೆ ಪ್ರಯತ್ನಿಸಿದಿರಿ? ಆ ಸಣ್ಣ ಕೆಲಸವನ್ನು ನಾವು ಮಾಡಬಹುದಾಗಿತ್ತು. ಆದರೆ ಯುವರಾಜರ ಜೀವನದ ಪ್ರಶ್ನೆ ನಿಮಗೆ ಸಂಬಂಧಪಟ್ಟುದು. ರಕ್ತಸಂಬಂಧಿಗಳಾದ ನೀವಿಬ್ಬರೂ ಪ್ರೇಮವೆಂಬ ಬಂಧನದಿಂದ ಹತ್ತಿರ ಬಂದಿರುವಿರಿ. ಇದು ಪ್ರೇಮ ಮತ್ತು ವಿಶ್ವಾಸದ ಪ್ರಶ್ನೆ. ನಿಮ್ಮ ಯುವರಾಜನನ್ನು ನೀವೇ ರಕ್ಷಿಸಿದಂತೆ ಭಗವಂತನೂ ತನ್ನ ಭಕ್ತರ ಭಕ್ತಿ, ಪ್ರೇಮ, ಆದರಗಳಿಂದ ಬಂಧಿತನಾಗಿ ತಾನೇ ಅವತಾರಗಳನ್ನೆತ್ತುವನು. ಜಗತ್ತಿನ ತನ್ನ ಭಕ್ತರಾದ ಮಕ್ಕಳನ್ನು ಕಾಪಾಡಲು ತಾನೇ ಸ್ವತಃ ಅವತಾರಗಳನ್ನೆತ್ತುವನು. ಇದೇ ನನ್ನ ಸವಿನಯ ವಿವರಣೆ" ಎಂದನು.

ಬೀರಬಲ್‌ನ ಈ ಸಮಾಧಾನಕ್ಕೆ ಅಕ್ಬರನು ಸಂತೋಷಗೊಂಡು ಅವನಿಗೆ ಬೆಲೆಬಾಳುವ ಬಹುಮಾನಗಳನ್ನು ಕೊಟ್ಟು ಕಳಿಸಿದನು.

— ಪಿ. ವೆಂಕೋಬಾಚಾರ್ಯ, ಧಾರವಾಡ



ಸಂಯಮವು ಸದ್ಭಕ್ತಿ ಚಾರಿತ್ರ್ಯ ವಿಜ್ಞಾನ |
ಸತ್ಯ ಕರುಣೆಯ ಕಾಂತಿ ಹೊಳೆಯುತಿಹುದೆಲ್ಲಿ? ||
ಎಲ್ಲಿ ಅಜ್ಞಾನ ಚಾಂಚಲ್ಯ ಬಿಕ್ಕಟ್ಟಿರದೊ |
ಸಲ್ಲಲಿತ ಸ್ಥಾನವೇ ನಮ್ಮದಾಗಿರಲಿ ||೧||

ದೇಶಭಾಷಾ ಪ್ರೇಮ ನೀಚ ಸ್ವಾರ್ಥವಿರಾಮ |
ತೋಷಜೀವನದೊರತೆ ತೋರುತಿರುವಲ್ಲಿ ||
ಗಾಂಧಿ ಶಂಕರ ಮಧ್ವ ಏಸು ಪೈಗಂಬರರ |
ನೀತಿ ನಿತ್ಯವು ನಮ್ಮ ಬಾಳಬೆಳಕಿರಲಿ ||೨||

ವಸಂತಕುಮಾರಿ ಐರೋಡಿ-ಕೋಟೇಶ್ವರ
(ಸ. ಸಂ. ೫೯೦)



ದೀಪಾವಳಿ ಬಂತು
ಮದ್ದುಬಾಣಾ ತಂತು
ಹಿಗ್ಗು ತುಂಬುತಬಂತು
ಜ್ಯೋತಿ ಬೆಳಗಲು ಬಂತು ||೧||

ಆಕಾಶಬುಟ್ಟಿ ಏರಿಸಲು ಬಂತು
ನಗೆಯ ಚಿಮ್ಮುತ ಬಂತು
ನಾಡಿನಾ ಧರ್ಮ ಬೋಧನೆ ತಂತು
ರಾಕ್ಷಸನ ಸಂಹಾರಮಾಡಿ ಬಂತು ||೨||

ಬಂತು ಬಂತು ಕುಣಿಯುತಬಂತು
ಕೋಟಿ ಕಟ್ಟಲು ಐಕ್ಯತೋರಲು ಬಂತು
ದೀಪಗಳ ಸಾಲು ನೋಡಲು ಬಂತು
ಶಾಂತ ಜ್ಯೋತಿಯ ಬೆಳಗಲು ಬಂತು||೩||
ಓಡೋಡಿ ಬಂತು ದೀಪಾವಳಿ |
ಬೆಳಕಾಡಿದೆ ಇರುಳ ಹಾವಳಿ ||

ಕುಮಾರ : ಸುರೇಶ ವಾ. ದೇಶಪಾಂಡೆ
ಮೈಸೂರು
(ಸ. ಸಂ. ೪೩೬)



ನೇಸರನಿಳಿದನು ಗಗನದಂಚಿಗೆ
ಸಂಜೆಯಾಗಿತ್ತು.
ಬಾನಿನ ತುಂಬ ಕಣ್ಸೆಳೆವ
ಸೌಂದರ್ಯವೆ ತುಂಬಿತ್ತು.
ಸೃಷ್ಟಿಯಲೆಲ್ಲ ರಮ್ಯಮನೋಹರ
ರಂಗವೆ ಹರಡಿತ್ತು.
ನಿಶೆಯೊಂದಿಗೆ ಕಾದಾಡುತ ರವಿಯು
ರುಧಿರವ ಹರವಿದ್ದ.
ಬೆಳಗಿನಿಂದ ಇಳೆಯ ಬೆಳಗಿ
ದಿನಕರ ಬಳಲಿದ್ದ.
ಆಯಾಸದಿ ಸೆಣಸುವ ನೇಸರ
ರಿಪುವಿಗೆ ಸೋತಿದ್ದ.
ವಿಜಯದಿ, ಹಿರಿ-ಹಿರಿ ಹಿಗ್ಗಿದ ನಿಶೆಯು
ಇಳೆಯನು ಮುಸುಕಿತ್ತು.
ಸಂಜೆಯ ಸೊಬಗನು ಸವಿಯುವ ರಸಿಕಗೆ
ರಸದೌತಣ ಸಿಕ್ಕಿತ್ತು.

—ಮಹಾಂತೇಶ ಮೊರಬದ,
ಬಾಗಲಕೋಟ
(ಸ. ಸಂ. ೧೦೬೦)

ನೀರು ಹರಿದಿದೆ ನಿರಾತಂಕ

ಅಗಸದ ಅಣೆಕಟ್ಟನು ಒಡೆದು ನುಗ್ಗಿದವು
ನೂರು ನಾಯ್ಗರಾ ತಡಸಲು !
ಕಣ್ಣುಕಟ್ಟಿ ಗಿಮಿಗಿಮಿ ಗಾಣವಾಡಿಸಿತು ಗಾಳಿ
ನೆನೆನೆನೆದು ನೆಲವೆ ಕುಪ್ಪರಿಸಿತ್ತು
ಮುಗಿಲು ಹೊಚ್ಚಿತು ಕಪ್ಪು ಕಂಬಳಿಯ ಕತ್ತಲು
ರಮ್ ...ರಮ್....ರಮ್....
ರಣಹಲಗೆ ಸದ್ದಿನಲಿ ಜಿದ್ದುಕಟ್ಟಿದ್ದಿರುವ ಜಡಿಮಳೆಯ
ರುದ್ರಾವತಾರ

"ಯಾ ಆಪೋ ದಿವ್ಯಾ ಉತ ವಾ ಸ್ರವನ್ತಿ ಖನಿತ್ರಿಮಾ
ಉತ ವಾ ಯಾಃ ಸ್ವಯಂಜಾಃ
ಸಮುದ್ರಾರ್ಥಾ ಯಾಃ ಶುಚಯಃ ಪಾವಕಾಸ್ತಾ
ಆಪೋ ದೇವೀರಿಹ ಮಾಮವನ್ತು."

ನೆಲದ ಆಧಾರದಲಿ ನಿಂತು ಹರಿಯುವ ನೀರು
ನೆಲದೊಡಲ ಕೊರೆದು ಮುಕ್ಕಿತು ಒಂದೆ ತೆಕ್ಕೆಯಲಿ
ಇಕ್ಕೆಲದ ಬಾಳು-ಬದುಕು
(ಇರಬೇಕು ಎಲ್ಲೋ ಯಾರಿಗೋ ಮೈಸೊಕ್ಕು-
ನೆಲದ ಮೇಲಷ್ಟೆ ಅಲ್ಲ, ಆಕಾಶದಲ್ಲೂ ಇಹುದು ನಮಗು
ನಿಮಗೂ ಹಕ್ಕು)

ಅಶ್ವಿನೀ, ಭರಣೀ, ಕೃತ್ತಿಕಾ
ರೋಹಿಣೀ, ಮೃಗಶಿರಾ, ಆರ್ದ್ರಾ
ಪುನರ್ವಸು, ಪುಷ್ಯ....
ಒಬ್ಬೊಬ್ಬರೂ ನುಡಿದು ಹೋದರಯ್ಯ ಇವರು ಪ್ರಳಯದ
ಭವಿಷ್ಯ !
ಹೋದರೋ—ಇವರು ನಾಪತ್ತೆ, ಮುಗಿಲ ಹಿಂದಿದರು
ಹನಿ ಹೊರಡದಂತೆ
ಕೆರೆ, ಬಾವಿ, ಹಳ್ಳ, ಹೊಳೆ ಬತ್ತಿ ಬೆನ್ನಿಗೆ ಹೊಟ್ಟೆ ಹತ್ತಿ
ನೆಲವೆದ್ದು ಬಡಿಯುವಂತೆ !

ಕಾರಮಳೆಯೆ, ಕಪ್ಪತ ಮಳೆಯೆ !
ಸುರಿಮಳೆಯೆ ! ಸುರಿಮಳೆಯೆ !


ಬಂದರೋ—ಈಗ ಬಂದಂತೆ ದಂಡೆತ್ತಿ-ಇದ್ದು
ಬಿದ್ದುದನೆಲ್ಲ ಕೊಚ್ಚಿಕೊಂಡೊಯ್ಯುವರು-
ತುಂಬುವರು ಕಡಲಿನೊಡಲು
ಆಕಾಶ, ಪಾತಾಳ—ಎರಡರಲ್ಲೂ ಇಲ್ಲ ತಾಳಮೇಳ
ಭೂಗೋಳಕ್ಕೆ ಬೆನ್ನುಹತ್ತಿಹುದು ಬೇತಾಳ, ಆದರೂ
ತಪ್ಪುವಂತಿಲ್ಲ ಕುರುಕ್ಷೇತ್ರದಲ್ಲಿ ಕುಂಭಮೇಳ
ಒಮ್ಮೊಮ್ಮೆ—ಮನಸು ತಿಳಿದಾಗೆಲ್ಲ

ನೂರು ಝರಿ ತೊರೆಗಳಲಿ ಬಳುಕಿ ಕಚಕುಳಿಯಿಟ್ಟು
ಹಸುರ ನಗಿಸುತ ಗದ್ದೆ ಹೊಲಗಳಲಿ ಬಂಗಾರ ಕಳಸವಿಟ್ಟು
ಅಗಸದ ಗಂಟುಮೋರೆಯಲಿ ಹೊಂಬಿಸಿಲ ತುಂಬು-
ನಗೆ ಹರಿಸಿ

ಹರಿದಿಹುದು ನೀರು ನೀರೇ ನಿರಾತಂಕ—
ಗಿರಿಶಿಖರದಿಂದ ನದಿನದಿಯ ಮುಖದಿಂದ ಮಳೆಗಾಡಿನ
ಒಡಲಿನಂತಃಕರಣದಿಂದ....
ನಿಂತದ್ದೆ ನೀರು ಹರಿದದೆ ತೀರ್ಥವಾಗಿ.

ನಿಂತಲ್ಲೆ ನಿಲ್ಲುವುದೆ ನೀರು !—ಕೈಚಾಚಿ
ಹರಿಯುವದು, ನೆಲದ ಒಳಸೇರುವದು, ಕಾದು
ಮೇಲೇರುವದು, ದಿಕ್ಕುದಿಕ್ಕಿಗೆ ಮೋಡ ಪಕ್ಕಬೀಸುವದು
ಎದುರು ಬಂದುದನಮರಿ ತೆಕ್ಕೆ ಹಾಯುವದು !
ಪೃಥ್ವಿ, ಅಪ್, ತೇಜ, ವಾಯು, ಆಕಾಶ—
ಐದರಾವರಣದಲಿ ತೋರಣವ ಕಟ್ಟಿ ತೂಗಿರಲು
ಮಾನವ ಯಂಥಾವಕಾಶ
ನೆರೆಯೇರಿ ನೆರೆಯಿಳಿದು ವರದೆ ಶಾಪವ ತೊರೆದು
ಕೂರಸಿಯ ಕಾರ್ಯ ಪೂರೈಸಿ ಹರಿದಿಹುದು ನೀರು
ನಿರ್ಮಲ ನಿರಾತಂಕ

—ಚೆನ್ನವೀರ ಕಣವಿ



ಮೂಕ ಪ್ರೇಮ

೧

ನನ್ನ ಮಾತಿಗೆ ಅವಳು ನಗುವಳು
ಅವಳ ಮಾತಿಗೆ ನಾನು ನಗುವೆನು
ಮಾತು ಮಾತಿಗು ನಕ್ಕೆ ನಗುವಳು !
ಮಾತು ಮಾತಿಗು ನಕ್ಕೆ ನಗುವೆನು !

೨

ಅವಳ ಮಾತಿನ ಮುತ್ತು ಉದುರಲು
ಎತ್ತಿ ಕೊಳ್ಳುವೆ ನಿತ್ಯ ಬದುಕಲು !
ಅವಳ ಕುಲುಕುಲು ನಗುವು ಮಿನುಗಲು
ಕಣ್ಣು ಮುಚ್ಚುವೆ ಕಣ್ಣು ಕುಕ್ಕಲು !

೩

ನನ್ನ ಎದುರಿಗೆ ಮೌನನಾದಳು !
ಅವಳ ಎದುರಿಗೆ ನಾನು ಆದೆನು !
ಕೂಡಿ ಮಾತನು ಆಡ ಹೋಗಲು
ಮಾತು ಎಂತೋ ಮೂಕವಾಗ್ಯದು !

—ಡಿ. ವ್ಹಿ. ಜೋಶಿ

ದೀಪಾವಳಿಯಧ್ವರ

೧

ಯಾವುದು ಈ ಅಂಧಕಾರ—
ನೀಹಾರಿಕೆಯಲ್ಲಿ ಜನಿಸಿ
ಗ್ರಹ-ತಾರೆಗಳನ್ನು ಮುಸುಕಿ
ಕಾರ್ಮೋಡಗಳಾಗಿ ಬೀಸಿ
ಅತಿವೃಷ್ಟಿಯ ಕಡಲ ಹರಿಸಿ
ಸಂತ್ರಸ್ತರ ಗೋಳಾಡಿಸಿ
ರವಿಶಶಿಗಳ ಬೆಳಕಡಗಿಸಿ
ಭಾರತವನು ನುಂಗುತ್ತಿದೆ
ಕಾಳರಾಹುವಾಗಿ ?

೨

ಯಾವುದು ಈ ತಮಃಸಾರ—
ಯಾರ ಕರ್ಮಫಲದ ಭಾರ ?
ಸತ್ವಪರೀಕ್ಷೆಯ ಯೋಜನೆ
ಮಾಡಿರುವನೆ ವಿಶ್ವೇಶ್ವರ ?
ಸಂತ್ರಸ್ತನು ಪಾಪಿಷ್ಠನೆ ?
ಅಸಂತ್ರಸ್ತ ಪುಣ್ಯಾತ್ಮನೆ ?
ಅರಿತು ಮಾಡುತಿರುವ ಪಾಪ
ಅರಿಯದೆ ಮಾಡಿದುದಕಿಂತ
ಕಡಿಮೆ ತರಗತಿಯದೇ ?

೩

ಜಾತೀಯತೆ, ಪಕ್ಷೀಯತೆ,
ಲಾಭ—ಲೋಭಪರಾಯಣತೆ—
ಎದೆಗಡಲಿಂದಾವಿಯಾಗಿ
ಮುಗಿಲ ಬೆಟ್ಟವಾಗಿ ಕವಿದು
ಮಾತ್ಸರ್ಯದ ಧಾರೆಯಾಗಿ
ತಿರೆಗೆ ಬಿದ್ದು ತೀವ್ರವಾಗಿ
ಹರಿಯುತ್ತಿಹುದೇನು ಮಹಾ-
ಪೂರವಾಗಿ ದೆಸೆದೆಸೆಯಲಿ
ಅಳಲುನೊರೆಯ ತೂರಿ !

೪

" ಯಾರ ಎದೆಗೆ ಯಾರು ಹೊಣೆ ?
ಯಾರ ಸಾಲ ಯಾರ ಮೇಲೆ ? "
ಎಂದು ಹಿಂದಿನಂತೆ ಈಗ
ವೈಯಕ್ತಿಕ ಮೋಕ್ಷತತ್ವ
ಎಂಬ ಸಂಕವನ್ನು ಹತ್ತಿ
ಸಂಸಾರವ ದಾಟಲೆದ್ದು
ಹಿಂದೊದೆಯದೆ ಮುಂದೆ ಹಾಯ-
ದಂಥ ಭಕ್ತಿರಸವನೀಂಟ
ತಮೋನಿದ್ರೆಗೈವುದೇ ?

೫

ನೋವಿನೆದುರು ಕಲ್ಲಾಗೆಂ—
ದೊರೆದ ಪುರಾಣೋಪದೇಶ—
ತನ್ನ ತಾನೆ ಎತ್ತಬೇಕು
ಎಂದ ಮಂತ್ರರಸಾವೇಶ
ಅಪ್ರತಿಭಟನೆಯ ಹೇಳಿತೆ ?
ಹಾಗೆಂಬುದು ತಮೋದೋಷ !
ನಿಮಿತ್ತಕರ್ತಾರ ಪಾರ್ಥ
ಕೌರವರನು ಬಿಟ್ಟನೇನು
ರಾಜ್ಯವಾಳಲೆಂದು ?

೬

ಪುರುಷಾಧಮಪಾಪರಾತ್ರಿ
ಕವಿದಿರೆ ಭಾರತವನಂದು—
ಪುರುಷಮಧ್ಯಮನ ಮೂಲಕ
ಪುರುಷೋತ್ತಮ ಬೆಳಕ ಬೀರಿ
ಉದ್ಧರಿಸಿದ ಧರ್ಮದೀಪ-
ಕೆಣ್ಣೆ ಹಾಕದಿರುವ ತಪ್ಪ
ಸಂತ್ರಸ್ತರು ಮಾಡಿರುವುದು
ತೋರ್ಪುದಿಂದು ದೊಡ್ಡದಾಗಿ
ದೀಪರಾಶಿಯಲ್ಲಿ !

೭

ಅಕ್ಷೋಹಿಣಿಯೇಳರೊಟ್ಟು
ಹೋರಾಡಿತು ಶ್ರದ್ಧೆಯಿಟ್ಟು
ಸರ್ವೋತ್ತಮ ನಾಯಕರ-
ನ್ನಾಯ್ದು ಬುದ್ಧಿಮತ್ತೆಯಿಂದ
ವಿತ್ತ ಜೀವಿತಗಳ ಧಾರೆ-
ಯೆರೆದು; ಪುರುಷಕಾರ ಮೆರೆದು ;
ಆ ಮಹಾಪ್ರತಾಪಸೂರ್ಯ
ಕಳೆಯೆ ಕತ್ತಲೆಯನು ಮಹಾ-
ಭಾರತವಾಯ್ತಿದು !

೮

ಅಸಾಮಾಜಿಕತೆಯ ಘೋರ
ತಿಮಿರ ಸಂಚಯಿಸಿಹ ಎದೆಯ
ಕುಟುಂಬೈಕಶರಣಬುದ್ಧಿ
ಮಹಾಪಾಪಕರ್ಪುರ ;
ಸಂವಿಭಾಗ ಧರ್ಮದೀಪ
ಜಾತಿ ಕುಟುಂಬಗಳ ಸುಟ್ಟು
ರಾಷ್ಟ್ರೀಯ ಸಮಾಜಶಿಖಿಯ
ಹೊತ್ತಿಸಲಿ ವಿಸ್ತೃತ್ವರ
ದೀಪಾವಳಿಯಧ್ವರ !


೯

ಪರಮಾತ್ಮನನವಲಂಬಿಸಿ
ಜೀವಕೋಟಿಯಿರುವ ಹಾಗೆ
ಸಮಸ್ತ ಹಿತಕಧೀನವೀ
ವ್ಯಸ್ತಹಿತ ಕುಟುಂಬದ !
ಪರಜಾತಿಯ ಹಿತವನ್ನೇ
ಸ್ವಜಾತಿ ಹಿತವಾಧರಿಸಿದೆ
ಕೆರೆಯ ಹಿತಾಹಿತದ ಚಿಂತೆ
ಕಮಲಕ್ಕಿರಬೇಡವೆ ?
ಕುಲದ ನೆಲೆಯದಲ್ಲವೆ ?

೧೦

ಸಹಾನುಭವದೆಣ್ಣೆಯಿಂದ
ಧರ್ಮದೀಪಶಿಖೆ ಬೆಳೆಯಲಿ,
ಅಂಧಕಾರಮೇಘಮಾಲೆ
ಸುವರ್ಣಮಯವಾಗಲಿ ;
ಭಾರತೀಯ ಹೃದಯಗಗನ
ಸ್ಫಟಿಕೋಜ್ವಲವಾಗಲಿ—
ಹಣತಿಸಾಲು ಎದೆಗೆ ಎದೆಯ
ಬೆಸೆವ ಕಾರ್ಯಮಾಡಲಿ,
ಬಲಿಧರ್ಮವ ಹಿಡಿದೆಲ್ಲರು
ಬಲಿಸಮಬಲರಾಗಲಿ ;
ಬಲಿಯಹಮಿಕೆಯನು ತಾಳದೆ
ತಿರೆಯ ಬಾನಿಗೆತ್ತಲಿ !

—ಬಿ. ಎಚ್. ಶ್ರೀಧರ



ಜ್ಯೋತಿಃಪಥ

ಕರುನಾಡನಭದಿಂದ
ಹೊಸತು ಹುಮ್ಮಸದಿಂದ
ಇಳಿಯುತಿದೆ ಸ್ವಚ್ಛಂದ-
ದಲ್ಲಿ ಬೆಳಕು
ಅದರಲ್ಲಿ ಸುಳಿಯುತಿವೆ
ರೂಪವೆನಿತು !

ಆತನಾರು ?— ಮಯೂರ
ಅಂದಿನಾ ದೊರೆ— ಶೂರ
ಅವನೊ ?— ಸಮ್ರಾಟ್ ಧೀರ
ಪುಲಿಕೇಶಿ, ಕಲಿ, ವೀರ
ಪುಲಕವೇರ !

ಅಲ್ಲಿಹನು ನೃಪತುಂಗ
ರಾಜಕವಿ, ಕಾವ್ಯಪಥ
ಗೈದ ಗಂಭೀರ
ಅಕ್ಕೊ, ಅವ ಚಾಲುಕ್ಯ
ವಿಕ್ರಮಾಂಕ
ಯುಗದ ಎದೆಯಲಿ ಹೆಸರ
ಬಿತ್ತಿದಾತ.

ಅಲ್ಲಿ ಕೋ ಶ್ರೀ ಶಿಲ್ಪ-
ದೀಪ ಮುಡಿಸಿದ ಭೂಪ
ವಿಷ್ಣುವರ್ಧನ-ಮುಕುಟ
ಕಾಂಬುದಲ್ಲ !

ಅವನ ಅಭಿರುಚಿಗೆ 'ಸ್ವ'
ಎಂದು ಕಲ್ಪನೆಯೆ ನ್ಮ
ತಳೆದೊಲಿದೆ ಹೊಯ್ಸಳರ
ಶಿಲ್ಪ-ತೇಜ.

ಮುಖಬಿಂಬ ಬಿಂಬವು
ಸರೋಜರೋಜ !

ರೂಹು ಸೆಳೆದಿವೆ ಕಣ್ಣ
ಕಾಂಬುದೆಲ್ಲಾ ಚಿನ್ನ !
ಜಕ್ಕಣನೆ ?—ಡಂಕಣನೆ ?
ರೂವಾರಿ ಯಾರೇನು ?—
ಹೊಮ್ಮಿಹುದು ನೈಪುಣ್ಯ
ಕಣ್ಣ ಪುಣ್ಯ.

ಅವನೆ ? ಅವನೇ ಪಂಪ.
ಹಡೆವರಾರಾ ಪೆಂಪ !

ಬಳಿಯೊಳಿರ್ಪನೆ ರನ್ನ
ಕೃತಿ ಕೃತಿಯು ರತ್ನ.

ಅದೊ ಅಲ್ಲಿ ಬಲ್ಲಾಳ-
ನೋಲಗದ ಕವಿಚಂದ್ರ
ನಾಗಚಂದ್ರ
ಸ್ಪರ್ಧೆಯುವನೊಳು ಹೂಡಿ
ಕಾಂತಿವಡೆದಾ ಕಂತಿ !

ಚತುರ ಕವಯಿತ್ರಿ
ನೋಡು ಹರಿಹರ ರಾಘ-
ವಾಂಕರವತಾರ
ಅವ್ಯಯತಯೋಗ !

ಅವರು ಬಳಸಿದ ಭಾಷೆ
ಚೊಕ್ಕ ಚಿನ್ನದ ರೇಷೆ
ಕೃತಿ ಅವೋಘ
ಮಧ್ಯೆ ಕವಿದಾ ಮಂಜ
ಕೊಚ್ಚಿ ಹೊತ್ತಿಸಿ ಪಂಜ
ವಿಜಯನಗರದ ವಿಜಯ
ಧ್ವ ಜ ವ ನೆ ತ್ತಿ ಹ ನ ದೋ
ಹುಕ್ಕರಾಯ
ಪಡೆದು ಪಂಪಾಪತಿಯ
ವಿಪುಲ ಕೃಪೆಯ.

ನೋಡು ನಾಡಿಗೆ ಸ್ಫೂರ್ತಿ
ನೀಡಿ ನಿರ್ಮಲ ಕೀರ್ತಿ-
ಯಲ್ಲಿ ರಂಜಿಪ ಮೂರ್ತಿ
ಕೃ ಷ್ಣ ರಾ ಯ
ವಿಜಯವಿಠಲನಲಿ ಪಡಿ
ನುಡಿವ ಹೃದಯ !

ಚಲಿಸುವರದಾರಲ್ಲಿ ?
ಸುಪ್ರಸನ್ನತೆಯಲ್ಲಿ
ಅಪ್ರತಿಮ ಪ್ರಭುವನ್ನು
ಚಿತ್ರಿಸಿದ ಚಾಮರಸ.

ಭಾರತದ ಬಿತ್ತರಕೆ
ಶ್ರೀಕೃಷ್ಣನೆತ್ತರಕೆ—
ಕನ್ನಡಿಯ ಹಿಡಿದ ಕವಿ
ಕುಮರವ್ಯಾಸ
ವಾರ್ಧಿಕದಿ ಹೊಸತು ಬೆಳೆ
ಬೆಳಸಿದ ವಿರೂಪಾಕ್ಷ

ಕಾವ್ಯದಲಿ ನಾದವನು
ನೆಯ್ದ ಲಕ್ಷ್ಮೀಶ
ಸಾಂಗತ್ಯರತ್ನಗಳ
ಸುರಿದ ರತ್ನಾಕರಂ
ಹದಿಬದೆಯ ಹದುಳವನು
ಅರುಹಿದಾ ಹೊನ್ನಮ್ಮ
ಚಂಪುವನು ಮರಳಿ ಮೆರೆ-
ಸಿದ ಷ ಡ ಕ್ಷ ರ ದೇ ವ.

ಮಾರ್ಗವನು ಅನುಸರಿಸಿ-
ದರಸುಕವಿ ಚಿಕದೇವ,
ಜನಪದಕೆ ಅನುಭವವ
ತ್ರ್ಯಪದಿಗೆ ಸಂಪದವ
ಸುರಿದ ಕವಿ ಸರ್ವಜ್ಞ
ಚಾಳಮರ್ಮಜ್ಞ
ಎಲ್ಲರೂ ತಳೆದಿಹರು
ಭಾವದೀಪ್ತಿ:
ಏನಿದೀ ಪ್ರಭೆಯ ವ್ಯಾಪ್ತಿ!
ಆ ಭಕ್ತಿ-ತೀರದಲಿ
ವಚನದಾರಾಮದಲಿ
ಹರಿದಾಸಕೂಟದಾ
ಕೀರ್ತನೆಯ ತೋಟದಲಿ
ಮನಮನಕೆ ಹನಿಯುವುದು
ಭಾವಜೇನು
ಇನ್ನು ಬೇಕದೇನು?
ಈಚೆ ತೆಂಕಣತೀರ-
ದೆಡೆಗೆ ನೋಟವ ಬೀರ
ಸದ್ದು ಮಾಡದೆ ಎದ್ದು
ಹಳಗನ್ನಡದ ಮುದ್ದು
ಸರಣಿಯಲಿ ಸರಳನಗೆ
ಚಿಮುಕಿಸಿದ ಗದ್ಯಕವಿ
ಮುದ್ದಣನು ಇವನು
ಭಾರವಾಯಿತೆ ಬಿಜ್ಜೆ—
ಒಂದು ಒಂದೇ ಹೆಜ್ಜೆ:
ಮುಂದೆ ನಿಂದವರೆ "ಶ್ರೀ"
ಮಂದಸ್ಮಿತ !
ಅರಳಿ ನಿಂದಿದೆ ಗೀತ
ಸುಸ್ವಾಗತ
ಅಲ್ಲಿಂದ ಇಲ್ಲಿಗೂ
ಜ್ಯೋತಿಃಪಥ !

—ಡಿ. ಎಸ್. ಕರ್ಕಿ



ಕೆಳಗೆ ಬಿದ್ದವರನ್ನು ಕಾಣದೆ !
ನಡೆದಿಹುದು ಕಾಲಭೈರವಲೀಲೆ !
ಪಾತ್ರ ಬೇರೆಯುಷ್ಟೆ ಬಂದುಹೋಗುವವಿಲ್ಲಿ
ನಾಟಕವು ಮುಗಿವನಕ ಕುಣಿಸೇ ಕುಣಿಸುವನು
ವಿಶ್ವನಾಟಕಸೂತ್ರಧಾರಿ.

ಕತೆಗೆ ಕೊನೆಯೇ ಇಲ್ಲ!
ಆಡುವವರೇ ಎಲ್ಲ !

—ರಾಘವೇಂದ್ರ

ಜ್ವಾಲೆ

ಇವಳ ಹೆಸರು ಜ್ವಾಲೆ
ಜಗದ ತುಟ್ಟ ತುದಿಯುವರೆಗು
ಇವಳನಂತ ಲೀಲೆ !

ಬೆಳಕು ಮೈಯು ಥಳಕಿನಿಂದ
ಬೆಳಗುತಿಹಳು ಬೆಳಕು ಚೆಲ್ಲಿ ;
ಬಳಕುತಿಹಳು ಬಳ್ಳಿಹಾಗೆ
ಹೆಣ್ಣಿಗೂನು ಬರದ ಹಾಗೆ !
ಕರೆಯುತಿಹಳು ಗೋಣನೆತ್ತಿ
ಕತ್ತಲನ್ನು ಮೂಲೆಗೊತ್ತಿ
ನಿನ್ನ ಸೊಬಗಿದೇನು ರಮಣಿ
ಮಿಂಚು ಬಳ್ಳಿ ಗೊಂಚಲೆ !
ಸ್ವರ್ಗವುರಿ ಎನ್ನಲೆ ?
ಮನೆಯು ಬೆಳಗು ಬಾರಲೆ !
— ಇವಳ ಹೆಸರು ಜ್ವಾಲೆ . . . .

ಸ . . ರಿ . . ಗ . . ಮ . . ಪ . . ದ . . ನಿ . . ಸ . . !
ಥೈ—ಥೈ—ಥಕ—ಥಕ—ಕುಣಿತ—
ಮೈ ಕೈ ಮಣಿತ !
'ಕೃಷ್ಣಾS ನೀS.. ಬೇಗSನೇ.. ಬಾSರೋ !,
ಮಣ್ಣಿಣತಿ ಮಹಲಿನಲ್ಲಿ ಜ್ವಾಲೆ ನಾಟ್ಯವಾಡುತಿಹಳು
ಕಾಡಿಗೆಯನೆ ತೂರಿ ತೂರಿ!
ಕರೆಯುತಿಹಳು ನಲ್ಲನ—
"ಅಧರ ಸೊದೆಯ ತಣಿಯೆ ಬಾ !
ಹರಹಿದೆದೆಯನೇರಿ ಬಾ !"
ವಿರಹವ್ಯಥೆಗೆ ಮೈಯು ಮರೆತು
ಅಗ್ನಿಕನ್ಯೆ ಕುಣಿಯುತಿಹಳು !
ಇವಳ ಹೆಸರು ಜ್ವಾಲೆ

ಓ, ನಲ್ಲೆ !
ಓ, ಕಾಂತೆ !
ಬಂದೆನಿಗೋ-ಬಂದೆನಿಗೋ !
ತಂದೆ ತಾಯಿ ಬಂಧು ಬಳಗ-
ತೊರೆದೆನಿಗೋ ಮರೆದೆನಿಗೊ !
-ಎನುತ ಭೃಂಗ-ಇಳಿದು ಬಂದು
ಮತ್ತನಾಗಿ ಸುತ್ತುತಿಹನು ಮೃತ್ಯುಮೈಯುಸುತ್ತಲೂ,
ಬಾಳಕೊನೆಯ ಕತ್ತಲು !
—ಇವಳ ಹೆಸರು ಜ್ವಾಲೆ . . . .

ನೋಡುನೋಡುತಿದ್ದ ಹಾಗೆ ನನ್ನ ನಾನೆ ನಂಬದಾದೆ !
ದುಂಬಿ ತನ್ನ ಬಾಳಕೊನೆಯ ಉಸಿರನೆಳೆದು ನರಳುತಿತ್ತು !
ನೆಲವನೊರಗಿ ಹೊರಳುತಿತ್ತು !
ಮನೆಯು ಮಸಣವಾದರೂನು
ಜ್ವಾಲೆ ಲೀಲೆ ನಡೆದೆಯಿತ್ತು !
—ಇವಳ ಹೆಸರು ಜ್ವಾಲೆ . . . .

ಮತ್ತೆ ಅದೇ ಹಾಳು ಕತೆ:
ಬಂದ ಮತ್ತೊಬ್ಬ ಭಸ್ಮಾಸುರ
ಮೋಹಿನಿಯ ಕಣ್ಕಿರಣ ಬಲೆಯೊಳಗೆ !

ಸುಳಿದಳಿದುರಿಗೆ ನೀರೆ

ಸುಳಿದಳಿದುರಿಗೆ ನೀರೆ
ದೂರದಲಿ ನಗೆ ಬೀರಿ ;
ಕಣ್ಣು ಕೀಲಿಸಿ ನಿಲೆ
ಹೃದಯು ಹರಿಯುಲು ಅಲೆ ,
ಮನಮನವು ಎದುರಾಗಿ
ಹೃದಯು ಹೃದಯುಕೆ ಬಾಗಿ
ಅದು ತಾನೆ ದಿವ್ಯ ಬದುಕಾಗಿ
ಹೊಳೆದು ಬಂದಿತು ಆಗ ;
ಎಂದೊ ಕಂಡಿಹ ಕನಸು ಬೇಗ ಬೇಗ
ಚಣ ಚಣಕೆ ಅದು ತಾನು ಬೆಳಗಿ ಬರುತಿದೆ ಈಗ.

* * *

ಅವಳ ಕಣ್ಣಿನ ಹೊಳಪು
ಅವಳ ಹೃದಯುದ ಬೆಳುಪು
ಗಾಳಿಗೂ ಹಗುರಾದ ಅವಳ ದೇಹದ ತೆಳ್ಪು.
ಮನದಲ್ಲಿ ಅನುಭವಿಸೆ
ಎಲ್ಲವೂ ಅತಿ ಸೊಗಸು.
ತನುವ ಸೋಂಕದು ಅದುವು— ಆ ದಿವ್ಯ ಸೊಗಸು
ಕಿವಿಯೋನೊ ಕೇಳುತಿದೆ ಅವಳ ದಿವ್ಯ ಧ್ವನಿಯು,
ಅವಳು ದೂರದಲಿಹಳು ಬಹು ದೂರ ದೂರ
ಅವಳೆಡೆಗೆ ಸಾಗುವುದು ಈ ಬಾಳ-ತೇರು.
ಅದರೇನಿದು ಚೋದ್ಯ ?
ಮನಕದುವೆ ಬಹು ಹೃದ್ಯ.

* * *

ಮುಂದು ಮುಂದಕೆ ಸಾಗಿದಂತೆಲ್ಲ ಈ ಬಾಳು,
ಮತ್ತೆ ಮುಂದಕೆ ಸಾಗಿ ದೂರ ಕಾಣುವಳವಳು.
ಕಣ್ಣು ಮಿಟುಕಿಸಿ ತಾನು ಮನವ ಸೆಳೆಯುವಳು
ಬಿಗಿವ ಬಾಹ್ಯದ ತೊಡುಕುಗಳನೆಲ್ಲ ತುಳಿಯುವಳು.
ಸ್ವರ್ಣಛಾಯೆಯು ತನ್ನ ಸೌಂದರ್ಯದಲಿ ಹೊಳೆದು
ಸುಳಿಸುಳಿದು ತೋರುವಳು ಮನದ ಕೊಳೆ ಕಳೆದು.

* * *

ಹೃದಯುವನೆ ತುಂಬಿಹುದು ಅವಳ ಆ ಧ್ವನಿಯು
ಕೇಳದಂತಾದರೂ ಈ ಬಾಹ್ಯ ಕಿವಿಗಳಿಗೆ;
"The music in my heart I bore
Long after it was heard no more."
ಅವಳ ದಿವ್ಯ ಧ್ವನಿಯು ಅದುವೆ ನನ್ನ ಧ್ವನಿಯು
ಎನ್ನ ಹೃದಯುವ ನಿರುತ ಜಾಗೃತವಗೊಳಿಸುವುದು.

—ಎಸ್. ಎಸ್. ಬಸುಪಟ್ಟದ

ದೀಪಾವಲಿಯ ಆರತಿ

ಆರು ನುಡಿಯಾರತಿಯ ಆರತಿಯ ಗೈವೆನೋ ಭಕ್ತಿಭಾವದಲಿ ಬೀಗಿ
ವಿರತಿ-ರತಿ-ಮೀರಿ ನಿನ್ನಲ್ಲಿ ಸಮರಸತೆಯಲಿ ಶರಣೆಂದು ಶಿರವ ಬಾಗಿ ॥ ಪ ॥

ಎದೆಯ ತಟ್ಟೆಯ ಮೇಲೆ ಕಣ್ಣ ನೀರಾಜನದಿ ಭಕ್ತಿತೈಲವನು ತುಂಬಿ
ಜೀವಬತ್ತಿಯ ಹೊಸೆದು ಆತ್ಮಜ್ಯೋತಿಯ ಹಚ್ಚಿ ನಿನ್ನ ಕೃಪೆಯನ್ನೆ ನಂಬಿ
ತಂದೆನಿದೊ ಮಂಗಲಾರತಿಯ ದೇವರ ದೇವ ಶ್ರೀಪಾದ ಶ್ರೀವಲ್ಲಭಾ
ನಿನ್ನ ಚರಣಕ್ಕೆನ್ನ ಹರಣವರ್ಪಣವಯ್ಯ ದೇದೀಪ್ಯಮಾನ ಪ್ರತಿಭಾ ॥ ೧ ॥

ಆರತಿಯ!ಗೈಯುತಿರೆ ಆ ರತಿಯೆ ಬಂದಳಿದೋ ತಾ ಕಾಮದೂತಿಯಾಗಿ
ಕಣ್ಸೆಳೆದು ಮನಸೆಳೆದು ಭೋಗಭಾಗ್ಯದ ವಿಭವ ತೋರಿಸುವ ರೀತಿಯಾಗಿ
ವಿರತಿ ಮುಂಬಂದು ಆ ರತಿಯನಪ್ಪಲು ಆಗ ನೋಡದೋ ಗೃಹಿಣಿ ಗರತಿ
ಮಧುರಭಕುತಿಯುಲದ್ದ ಮೂರುತಿಯೆ ಆಗಬೇಕಾಯ್ತು ಆರತಿಯ ಸರತಿ ॥ ೨ ॥


ನಲ್ಲನೇ ದೇವ, ನಲ್ಲೆಯು ಜೀವ, ಆರತಿಯ ಪ್ರೀತಿಜ್ಯೋತಿಯದಾರತಿ
ನಿತ್ಯಮಂಗಲಕರವು ಸತ್ಯಶಿವಸುಂದರವು ಮೂರ್ಧನ್ಯವೀ ಮೂರುತಿ
ಅಪರಂಪಾರವೀ ಸಂಸಾರಸಾಗರವು ಸಾರವದರಲ್ಲೆ ಭಕ್ತಿ
ಆ ಭಕುತಿಯಾರತಿಯ ದೇದೀಪ್ಯತೇಜದಲೆ ಬೆಳಕಿನಾ ಬಾಳು ಮುಕ್ತಿ ॥ ೩ ॥

ಆ ಬ್ರಹ್ಮ ಈ ವಿಷ್ಣು ಮೇಣಾ ಮಹೇಶ್ವರರ ಸೃಷ್ಟಿಸ್ಥಿತಿಲಯದ ಮಾಟ
ಸತ್ವರಜತಮಗುಣದ ಏರಾಟ ಹಾರಾಟ ಚೀರಾಟ ಮಧುರ ಬೇಟ
ಮೂರು ಗುಣಗಳ ಮೀರಿ ಸಮರಸತೆಯಲ್ಲಿ ತ್ರೈಮೂರ್ತಿಯಾದಂಥ ನೋಟ
ನಿರ್ದ್ವಂದ್ವ ನಿತ್ಯಸತ್ವಸ್ಥನೀ ಶ್ರೀದತ್ತ! ಗೈವೆನಾರತಿಯ ಆಟ ॥ ೪ ॥

ಸಂಸಾರ ಸಾರವೋ ನಿಸ್ಸಾರವೋ ಸರುವವೂ ನಿನ್ನ ದಯೆಯೆ ದೇವಾ
ಭಕ್ತಿಯೊ ವಿರಕ್ತಿಯೋ ಮುಕ್ತಿಯೋ ಏನಿರಲಿ ನೀನೆ ನನ್ನನ್ನು ಕಾವಾ
ಒಡೆತನವೊ ಬಡತನವೊ ? ನೆಳಲು ಬೆಳಕಿನ ಬಾಳು ! ನಿತ್ಯವೋ ಭಕ್ತಿಭಾವಾ
ಆ ಊರ್ಮಿ ಪೆರ್ಮೆಯಲಿ ಹಚ್ಚಿದಾರತಿಯಿದುವು ಬೆಳಗುವೆನೊ ದತ್ತದೇವಾ ॥ ೫ ॥

ನಿನ್ನ ಕರುಣೆಯ ಕಿರಣದೆನ್ನ ಅಂತಃಕರಣ ಕಮಲವರಳಿರಲು ಜೀಯಾ
ಸೂಸಿ ಬಂದಾ ಸುಗಂಧದ ಸೌಸವದ ನುಡಿಯ ಹಾಡಿದೋ ದತ್ತರಾಯಾ
ಮುಡಿಪು ಈ ತನುಮನವು ಈ ಅಹಂಕಾರ ಮೇಣೆನ್ನ ಈ ಬುದ್ಧಿಚಿತ್ತಾ
ಸ್ವೀಕರಿಸು ಮಂಗಲಾರತಿಯ ಕರುಣಾಮೂರ್ತಿ ತ್ರೈಮೂರ್ತಿ ಸತ್ಯದತ್ತಾ ॥ ೬ ॥

" ದೇವದತ್ತ "



ಓ ಗೆಳೆಯ.

ಕತ್ತಲೆಯ ದಾರಿಯೊಳು
ಓ ಗೆಳೆಯ ನೀನ್ಯಾರು
ಕೈ ಹಿಡಿದು ನಡೆಸುತಿಹೆ

ದೀಪವಿಲ್ಲದ ದಾರಿ
ಸುತ್ತು ಕತ್ತಲು ಮಾರಿ
ಪಥವ ತಿಳಿಯದೆ ಇರಲು
ಮುಂದೆ ನಡೆಯದೆ ಇರಲು ॥ ೧ ॥

ಮನವ ಕವಿದಿಹ ಮಾಯೆ
ಓಡಿಹುದು, ಓ! ನೀ ಕೈಯ ಹಿಡಿಯೆ
ಕಳೆದಿಹುದು ಭಯ
ಚೈತ್ರ ತುಂಬಿಹನು ಕಾಯ ॥ ೨ ॥

ನಿನ್ನ ಕೈಯೊಳು ನನ್ನ ಕೈಯಿಕೆ
ತವ ಮುಖವನು ಕಾಣದಿಕೆ
ಆಶಾಭಂಗ ನಾನಡಿಯಿಡಲೆ
ಅಳುತಲೆ ಕರೆಯುತಲೆ ॥ ೩ ॥

ನೀ ನಗುತಿರುವಂತಿದೆ
ಏನೂ ಹೇಳದೆ ಕೇಳದೆ
ಕಾತರಿಸಿದ ಹೃದಯವ
ಕುಣಿಸುತ ಮಣಿಸುತ ದಣಿಸುತಲೆ ॥ ೪ ॥

ನಿನ್ನನು ನೋಡದೆ ಮುನ್ನಡಿಯಿಡುತಿಹೆ
ರಾತ್ರಿಯು ಜಾವದಿ ನಿನ್ನಯ ಕೈಪಿಡಿದು
ಕಳೆದಿಹೆ ಆಶೆಯ ಬರಲಿದೆ ಬೆಳಕದು
ನೀನಾಗಾದರೂ ವ್ಯಿದೋರುವಿಯೆಂದು ॥ ೫ ॥

— ಅಹಲ್ಯಾನಂದನ



ಮರೆಯಲಾಗದ ಸವಿನೆನಪುಗಳು

ಚತುರ್ಭಾಷಾ ತಾರೆಯೆನಿಸಿದ ಶ್ರೀಮತಿ ಪಂಢರಿಬಾಯಿ ದಕ್ಷಿಣದಲ್ಲಿಯಂತೆ ಹಿಂದೀಚಿತ್ರರಂಗದಲ್ಲಿಯೂ ಖ್ಯಾತಿ ಪಡೆದಿದ್ದಾರೆ; ಜನಮೆಚ್ಚುಗೆಯನ್ನು ಪಡೆದಿದ್ದಾರೆ. ಭಕ್ತಿಪ್ರಧಾನವಾದ ಚಿತ್ರಗಳಲ್ಲಿ ಭಾವುಕ ಪಾತ್ರಗಳನ್ನು ಇವರು ತುಂಬ ಮನಮುಟ್ಟುವಂತೆ ಅಭಿನಯಿಸುತ್ತಾರೆ. ಕನ್ನಡ ಚಿತ್ರಗಳ ಬಗ್ಗೆ ಅವರಿಗೆ ಅಪಾರಪ್ರೇಮ. ಅವರ ಜೀವನವೂ ಚಿತ್ರರಂಗದ ಯಾವ ಬೆಡಗು ಬಿನ್ನಾಣಗಳಿಗೂ ಒಳಗಾಗದ ತೀರ ಸಾದಾ-ಸರಳ ಜೀವನ. ಈ ಮುಗ್ಧತಾರೆ ನಮ್ಮ ಓದುಗರಿಗಾಗಿ ತಮ್ಮ ಮರೆಯಲಾರದ ಸವಿನೆನಪುಗಳನ್ನು ಇಲ್ಲಿ ಒದಗಿಸಿದ್ದಾರೆ.

—ಶ್ರೀಮತಿ ಪಂಢರಿಬಾಯಿ

ನನ್ನ ಹೆಸರಿನದೇ ಒಂದು ಕಥೆ. ನಮ್ಮ ತಂದೆಯವರು ಪರಮ ಭಾಗವತರು. ಸದಾ ಪಾಂಡುರಂಗನ ಧ್ಯಾನಪರಾಯಣರು. ಹರಿಕಥೆಗಳನ್ನು ಮಾಡುತ್ತಾ ಪಂಢರಪುರಕ್ಕೆ ಹೊರಟದ್ದ ನನ್ನ ತಂದೆಯವರು ಅರ್ಧದಾರಿಯಲ್ಲೇ ಹಿಂತಿರುಗಿದರು. ಕಾರಣ ನಾನು ಹುಟ್ಟಿದುದು. ಅವರಿಗೆ ಪಾಂಡುರಂಗನೇ ನನ್ನನ್ನು ಕರುಣಿಸಿದನೆಂಬ ನಂಬಿಕೆ. ಆದ್ದರಿಂದ ನನ್ನನ್ನೇ ಪಂಢರಪುರಕ್ಕೆ ಕರೆದುಕೊಂಡು ಹೋಗಿ ಹೆಸರಿಡಬೇಕೆಂದು ಹಂಬಲಿಸಿದರು. ಪಂಢರಿ ಎಂಬ ಆ ಹೆಸರು ಸ್ಥಿರವಾಯಿತು ಅಂದಿನಿಂದ.

ನನಗೆ ಇನ್ನೊಂದು ಹೆಸರು ಕೂಡ ಇದೆ. ಅದು ಕೂಡ ನಮ್ಮ ತಂದೆಯವರು ಪ್ರೀತಿಯಿಂದ ಇಟ್ಟ ಹೆಸರು. ಅವರಿಗೆ ಅತ್ಯಂತ ಪೂಜ್ಯಗ್ರಂಥ ಭಗವದ್ಗೀತೆ. ಯಾವಾಗಲೂ ಗೀತಾಪುಸ್ತಕವನ್ನು ಕೈಯಲ್ಲಿ ಹಿಡಿದೇ ಇರುತ್ತಾರೆ. ಆ ಪೂಜನೀಯ ಗ್ರಂಥದ ಹೆಸರಿನಿಂದ ನನ್ನನ್ನು ಕರೆಯಬೇಕೆಂದು 'ಗೀತಾ' ಎಂದು ಪಂಢರಿನಾಥನ ಸನ್ನಿಧಿಯಲ್ಲಿ ಕರೆದರು.

ನಮ್ಮ ಮನೆಯ ವಾತಾವರಣವೇ ಒಂದು ವಿಶಿಷ್ಟ ರೀತಿಯದು. ನಮ್ಮ ತಂದೆಯವರ ಇಚ್ಛೆಯಂತೆ ಸದಾ ರಾಮಾಯಣ ಪಾರಾಯಣ, ಭಾರತ ಭಾಗವತ ವಾಚನ ನಡೆಯುತ್ತಿರಬೇಕು. ಇಂಗ್ಲೀಷಿನ ಕಥೆಗಳು ಅಥವಾ ಇತರ ಯಾವುದೇ ಕಥೆ ಕಾದಂಬರಿಗಳನ್ನು ಓದಲು ಬಿಡುತ್ತಿರಲಿಲ್ಲ. ನಮ್ಮ ಉಚ್ಚ ಸಂಸ್ಕೃತಿಯ ಉದ್ಗ್ರಂಥಗಳ ಮುಂದೆ ಮಿಕ್ಕವು ನಿಸ್ಸಾರವೆಂದು ಅವರು ತಮ್ಮ ಮಕ್ಕಳನ್ನು ಅದೇ ಅಭಿರುಚಿ ಬೆಳೆಸಿಕೊಳ್ಳುವಂತೆ ಮಾಡಿದರು.

ನನಗೆ ಅವರ ಉಪದೇಶದಲ್ಲಿ ಬಹಳ ಗೌರವ. ಶಾಂತಿಯೇ ಜೀವನದ ಬೆಳಕು ಎಂಬ ಮಹಾಮಂತ್ರವನ್ನು ಉಸಿರಿನ ಉಸಿರಾಗಿ ಉಚ್ಚರಿಸುತ್ತಿರಬೇಕೆಂಬುದು ನನ್ನ ಪರಮ ಧ್ಯೇಯ. "ಆಶಾಽಽಶಾ ಪರಮಂ ದುಃಖಂ ನಿರಾಶಾ ಪರಮಂ ಸುಖಂ" ಎಂಬ ಆರ್ಯೋಕ್ತಿಯ ಪ್ರಕಾರ ಆಶಾಪಾಶಕ್ಕೆ ಕಟ್ಟುಬಿದ್ದು ಆ ದುಃಖವನ್ನೇ ಸುಖನೆಂದು ಭ್ರಮಿಸಿ ಕಡೆಗೆ ಪಶ್ಚಾತ್ತಾಪದ ದಾವಾಗ್ನಿಯಲ್ಲಿ ಬೇಯುವುದಕ್ಕಿಂತ ನಿರಾಶೆಯಲ್ಲಿನ ನಿಜಸೌಖ್ಯವನ್ನು ಅರಸಿ ಜೀವನದ ಸಾಫಲ್ಯವನ್ನು ಹೊಂದುವುದು ಕೆಲವು ಪುಣ್ಯ ಪುರುಷರಿಗೆ ಮಾತ್ರ ಸಾಧ್ಯ. ಆ ಮಾರ್ಗವನ್ನೇ ನಾನೂ ಅವಲಂಬಿಸಿ ಹೊರಟಿದ್ದೇನೆ.

ನಮ್ಮ ಮನೆಯಲ್ಲಿ ಸದಾ ಸರ್ವದಾ ಭಗವನ್ನಾಮಸ್ಮರಣೆ ನಡೆಯುತ್ತಲೇ ಇರಬೇಕೆಂಬುದು ನಮ್ಮ ತಂದೆಯವರ ಇಚ್ಛೆ. 'ಜಯ, ಜಯ ವಿಟ್ಠಲ ಎನ್ನುತ್ತ ಭಜನೆ ಮಾಡುತ್ತಿರಬೇಕು. ಸತ್ಯದ ದೀಪಹಿಡಿದು ಧರ್ಮದ ಸನ್ಮಾರ್ಗದಲ್ಲಿ ಮಕ್ಕಳು ಹೋಗಬೇಕೆಂದು ಅವರು ಅಪೇಕ್ಷಿಸುತ್ತಾರೆ. ಕೋಟಿಗಟ್ಟಲೆ ಸಂಪಾದಿಸಿ ವ್ಯವಹಾರದಲ್ಲಿ ಯಶಸ್ವಿಗಳಾದರೂ ನಿತ್ಯ ಜೀವನದಲ್ಲಿ ನಡತೆಯ ಧವಳತೆಗೆ ಒಂದು ಕಪ್ಪು ಚುಕ್ಕೆ ,ಬರಬಾರದೆಂದು ಅವರು ಸಾರಿ ಸಾರಿ ಹೇಳುತ್ತಾರೆ.

ಪ್ರಾರಬ್ಧಕರ್ಮ ಎಂಥವರಿಗೂ ಬೆನ್ನು ಹತ್ತಿದ ಬೇತಾಳ. ಕರ್ಮವನ್ನು ಅನುಸರಿಸಿ ಬುದ್ಧಿಯೂ ಪ್ರಚೋದಿತವಾಗುತ್ತದೆ. "ಬುದ್ಧಿಃ ಕರ್ಮಾನುಸಾರಿಣೀ" ಆದ್ದರಿಂದ

ಎಂಥ ಸಂತತಿಗೇ ಸೇರಿರಲಿ, ಎಂಥ ಐಶ್ವರ್ಯ ಹೊಂದಿರಲಿ ತಾನುಮಾಡಿದ ಕರ್ಮಫಲವನ್ನು ಭುಂಜಿಸಲೇಬೇಕು. ನಮ್ಮ ತಂದೆಯವರು ಅವರ ಕರ್ಮಫಲದಂತೆ ನಾಟಕಪ್ರಿಯರು. ಐದನೆಯ ವಯಸ್ಸಿನಲ್ಲೇ ನಾಟಕದ ಕಂಪೆನಿ ಮೆಟ್ಟಲು ಹತ್ತಿದ ಹುಟ್ಟು ಕಲಾವಿದರು. ಬಾಲನ ಪಾತ್ರದಿಂದ ರಾಜಾ-ರಾಣಿ ಪಾತ್ರಗಳ ವರೆಗೂ ಅಭಿನಯಿಸುತ್ತಿದ್ದವರು. ಪದ ಗಳನ್ನು ಬರೆಯುವುದು, ಹಾರ್ಮೋನಿಯಂ ಬಾರಿಸುವುದು ಕೂಡ ಅವರಿಗೆ ಚೆನ್ನಾಗಿ ಬರುತ್ತಿತ್ತು. ಅನಂತರ ನಾಟಕದ ಕಂಪೆನಿ ಮಾಲೀಕರಾಗಿಯೂ ಅನುಭವಹೊಂದಿದರು. ಆದರೂ ಅವರಿಗೆ ಹೆಣ್ಣುಮಕ್ಕಳು ನಾಟಕ, ಸಿನೆಮಾಗಳಲ್ಲಭಿನಯಿಸುವುದೆಂದರೆ ಬೇವಿನ ಕಾಯಿತಿಂದ ಹಾಗೆ. ಆಗಿನ ಅವರ ಕಾಲದಲ್ಲಿ ನಟಿಯರು, ನರ್ತಕಿಯರೆಂದರೆ ಸಮಾಜ ದಲ್ಲಿ ಕೀಳು ತರಗತಿಯವರಾಗಿದ್ದರು. ಪಾರ-ಮಾರ್ಥಿಕ ದೃಷ್ಟಿಯಿಂದ ಅದು ಸರಿ ಎಂದೇ ತೋರುತ್ತದೆ. ಅಶಾಶ್ವತವಾದ ಆಡಂಬರದ ಬಾಳ್ವೆ ಬೇಡ, ಆಧ್ಯಾತ್ಮಿಕ ಸಂಪತ್ತಿನಿಂದ ಆಚಂದ್ರಾರ್ಕ ಕೀರ್ತಿಗಳಿಸು ಎಂದು ಅವರು ಪದೇ ಪದೇ ಹೇಳುತ್ತಿರುತ್ತಾರೆ.

ಕಾಲಗತಿ ಬದಲಾಗಿದೆ, ಜನತೆ ಎಚ್ಚತ್ತಿದೆ, ಸಮಾಜ ಸುಧಾರಿಸಿದೆ, ಸಂಸ್ಕೃತಿ ಉನ್ನತ ಗೊಳ್ಳುತ್ತಿದೆ. ಈ ಇಪ್ಪತ್ತನೆಯ ಶತಮಾನ ದಲ್ಲಿ ಕಲೆ ತನ್ನ ಪ್ರಭಾವವನ್ನು ಕೇವಲ ಪಂಡಿತರ ಮೇಲಲ್ಲದೆ ಪಾಮರರ ಮೇಲೆಯೂ ಚೆನ್ನಾಗಿ ಬೀರಿ ಎಲ್ಲರವಿಚಾರ ವಿಕಾಸವಾಗಿದೆ. ಕಲೆಯ ಬಗ್ಗೆ, ಕಲಾವಿದರ ಬಗ್ಗೆ ಸಹೃದ-ಯರು ಸಮೃದ್ಧವಾಗಿದ್ದಾರೆ. ಕಲಾವಿದ ರೆಂದರೆ ಕಾಲು ತೊಳೆದು ತೀರ್ಥ ತೆಗೆದು ಕೊಳ್ಳುವಂಥವರೂ ಆರಾಧಿಸುವಂಥ ಉತ್ಕಟ ಅಭಿಮಾನಿಗಳೂ ಹೇರಳವಾಗಿರುವ ಪ್ರತ್ಯಕ್ಷ ನಿದರ್ಶನಗಳನ್ನು ಕಂಡಿದ್ದೇನೆ.

ನಾಟ್ಯದಿಂದ ದೇವರನ್ನು ಒಲಿಸಿದ್ದಾರೆ; ಸಂಗೀತದಿಂದ ಸಾಕ್ಷಾತ್ಕಾರ ಪಡೆದಿದ್ದಾರೆ. ಅಂದಮೇಲೆ ನವರಸಭರಿತವಾದ ನಾಟಕದಿಂದ ಅಥವಾ ಬೆಳ್ಳಿತೆರೆಯ ನಾಟಕದಿಂದೇಕೆ ಅವನ ಪ್ರೀತಿಗೆ ಪಾತ್ರರಾಗಬಾರದು? ಆದರಿಂದ ಸಮಾಜವನ್ನು ಸುಧಾರಿಸುವ ಪವಿತ್ರಕಾರ್ಯ ದಲ್ಲೇಕೆ ನಿರತರಾಗಬಾರದು? ಯಾವುದೇ ಕರ್ತವ್ಯವನ್ನು ತ್ರಿಕರಣಶುದ್ಧಿಯಿಂದ ಮಾಡಿ ದರೆ ಅದರಲ್ಲಿ ಭಗವಂತನನ್ನು ಕಾಣಬಹುದು. ನನ್ನ ನಾಟಕ-ಸಿನೆಮಾ ಅನುಭವದಲ್ಲಿ ಇದು ಅತಿಶಯವೆನಿಸಿಲ್ಲ. ಭಾವೋದ್ವೇಗದಲ್ಲಿ ಅಭಿ ನಯಿಸುವಾಗ ನಮ್ಮನ್ನು ನಾವು ಮರೆತು ಒಂದು ಅಲೌಕಿಕ ಆನಂದವನ್ನು ಅನುಭವಿ ಸುತ್ತೇವೆ. ಅದೇ ಭಗವಂತನ ಸಾನ್ನಿಧ್ಯದ ಸುಖ. ಅದಕ್ಕಾಗಿಯೇ ಕಲಾವಿದ ಜನತೆಯ ದೃಷ್ಟಿಯಲ್ಲಿ ದೈವೀಶಕ್ತಿಯ ಪ್ರತಿನಿಧಿಯಾಗಿ ಕಾಣುವುದು.

ನಾನು ಅಭಿನಯಿಸಿದ ಚಿತ್ರಗಳಲ್ಲಿ ನನ್ನ ಪಾತ್ರಗಳನ್ನು ನೋಡಿ ಮೆಚ್ಚಿಕೊಂಡ ನನ್ನ ಅಭಿಮಾನೀ ಸೋದರರು ನನಗೆ ಬರೆದ ಕೆಲವು ಪತ್ರಗಳ ನೆನಪು ಈ ಸಂದರ್ಭದಲ್ಲಿ ಬರುತ್ತದೆ.

"ನಾನು ನಿಮ್ಮ ಅಭಿನಯ ನೋಡಿ ನನ್ನನ್ನು ತಿದ್ದಿಕೊಳ್ಳುತ್ತಿದ್ದೇನಕ್ಕ.

ನನ್ನ ಹೃದಯದ ಮೇಲೆ ನಿಮ್ಮ ಅಭಿನ-ಯದ ಪರಿಣಾಮ ಮಹತ್ವದ್ದಾಗಿದೆ.

ನನ್ನ ದುರ್ನಡತೆಯನ್ನು ಬಿಟ್ಟು ಪ್ರಾಯ-ಶ್ಚಿತ್ತದಿಂದ ಪರಿಮಾರ್ಜನೆಹೊಂದಿ ಮತ್ತೆ ಸದ್ಗು ಣಿಯಾಗಿ ನಡೆದುಕೊಳ್ಳುತ್ತೇನೆ." ಎಂದು ಒಬ್ಬ ಸೋದರ ಒಂದು ಪತ್ರ ಬರೆದಿದ್ದ.

ನಾನು ಮರೆಯಲಾಗದ ಒಂದು ಸನ್ನಿವೇಶ "ತಿರುಂಬಿಪ್ಪಾರ್" ಎಂಬ ತಮಿಳು ಚಿತ್ರದ್ದು. ಅದರಲ್ಲಿ ನನ್ನದು ಕಥಾನಾಯಕನ ಅಕ್ಕನ ಪಾತ್ರ.

ಕಡುಕಾಮಿಯಾದ ಕಥಾನಾಯಕ ಅಬಲೆ ಯೊಬ್ಬಳ ಮಾನಭಂಗಕ್ಕೆ ಯತ್ನಿಸಿದಾಗ ಅವನ ಇದಿರು ನಿಂತು "ನಿನಗೆ ಹೆಣ್ಣಿನ ಹಸಿವು. ಆ ಹಸಿವನ್ನು ಈ ದೇಹದಿಂದಲೇ ತೀರಿಸಿಕೋ" ಎಂದಾಗ ಆ ಕಥಾನಾಯಕ ತನ್ನ ಅಕ್ಕನ ಕಾಲಿಗೆ ಬಿದ್ದು ತನಗೆ ಜ್ಞಾನೋ ದಯ ಮಾಡಿಸಿದ ಅಕ್ಕನ ಉಪಕಾರವನ್ನು ನೆನೆಯುತ್ತ ಕ್ಷಮಾಪಣೆ ಕೋರುತ್ತಾನೆ.

ಈ ಚಿತ್ರವನ್ನು ನೋಡಿದ ಅನೇಕರು ನನಗೆ ಅನೇಕ ವಿಧವಾದ ಮೆಚ್ಚುಗೆಯ ಪತ್ರಗಳನ ಬರೆದರು.

"ನಾನು ಮನೆ ಬಿಟ್ಟು ಬಂದವನು ಮನೆ ಸೇರಿದೆನಕ್ಕಾ"

"ನಾನು ಇನ್ನು ಮೇಲೆಂದಿಗೂ ತಪ್ಪು ಹಾದಿಯಲ್ಲಿ ಹೋಗುವುದಿಲ್ಲ.

ಹಿರಿಯರು ಹೇಳಿದಂತೆ ಕೇಳಿಕೊಂಡಿರು ತ್ತೇನೆ"

ಎಂದು ನನ್ನಲ್ಲಿ ಕ್ಷಮಾಯಾಚನೆ ಕೋರಿ ಅನೇಕ ದೆಸೆಗೆಟ್ಟ ಹುಡುಗರು ಕಾಗದ ಬರೆ ದಿದ್ದರು.

ಹೀಗೆ ಸಮಾಜದ ಮೇಲೆ ಸತ್ಪರಿಣಾಮ ಉಂಟು ಮಾಡುವ ಉತ್ತಮ ಚಿತ್ರಗಳಲ್ಲಿ ಅಕ್ಕ, ಅತ್ತಿಗೆ, ತಾಯಿ ಪಾತ್ರಗಳನ್ನು ವಹಿ ಸಲು ನನಗೆ ನವಸ್ಫೂರ್ತಿ.

ಕಲಾಸಾಗರದಲ್ಲಿ ಅನಂತವಾಗಿ ಏಳುತ್ತ ಬೀಳುತ್ತಲಿರುವ ಅನುಭವದ ಸ್ಮೃತಿತರಂಗ ಗಳಿಗೆ ಆದಿ ಅಂತ್ಯವಿಲ್ಲ. ಆದ್ದರಿಂದ ನನ್ನ ಅನುಭವದ ಹಲ ಕೆಲವು ರಸನಿಮಿಷಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಿದ್ದೇನೆ.

ದೀಪಾವಳಿಯ ಈ ಶುಭ ಸಂದರ್ಭದಲ್ಲಿ ಈ ಲೇಖನದ ಕಿರುಹಣತೆಯನ್ನು ಹಚ್ಚಲು ಅವಕಾಶ ಕೊಟ್ಟ ಕರ್ಮವೀರಕ್ಕೆ ಧನ್ಯವಾದ ಗಳು ಮತ್ತು ಆದರಿಸಿ ಓದುವ ವಾಚಕ ಕೋಟಿಗೆ ಅನಂತಾನಂತ ವಂದನೆಗಳು. ●

ನಮ್ಮ ಚಿತ್ರಗಳು ಮತ್ತು ಸಾಹಿತ್ಯ

ಚಿತ್ರಸಾಹಿತ್ಯತಂತ್ರ ತೀರ ಕ್ಲಿಷ್ಟವಾದುದು. ಅದನ್ನೊದಗಿಸುವುದು ತುಂಬ ಕಷ್ಟಕರವಾದುದು. ಇದರಲ್ಲಿ ಕಥೆ, ಸಂಭಾಷಣೆ, ಗೀತಚಿತ್ರ ನಾಟಕ ಇವೆಲ್ಲ ಸೇರಿರುವವು. ಹೀಗಾಗಿ ವಿವಿಧ ಅಭಿರುಚಿಗಳಿಗೆ ತಕ್ಕಂತೆ ಇವನ್ನು ಅಳವಡಿಸುವುದು ಚಿತ್ರಸಾಹಿತ್ಯದ ಸಾಹಿತಿಗೆ ಒಂದು ಹೊಣೆಯಾಗಿ ಪರಿಣಮಿಸುವುದು. ಅವನ ಜವಾಬ್ದಾರಿಯೇನು? ಅವನದನ್ನು ಹೇಗೆ ನಿರ್ವಹಿಸಬಲ್ಲ ಎಂಬುದನ್ನೆಲ್ಲ ಚಿತ್ರಸಾಹಿತ್ಯರಂಗದಲ್ಲಿ ಪರಿಶ್ರಮಿಸಿದವರಾದ ಈ ಲೇಖಕರು ಇಲ್ಲಿ ನಿರೂಪಿಸಿದ್ದಾರೆ.

ಶ್ರೀ ವಿಜಯನಾರಸಿಂಹ, ಮದ್ರಾಸ

ಮನುಷ್ಯ ತನ್ನ ಭಾವನೆಗಳನ್ನು ಪ್ರಕಟಿಸಲು ಭಾಷೆಯನ್ನು ನಾನಾವಿಧವಾಗಿ ಬಳಸಿಕೊಂಡಿದ್ದಾನೆ. ಆ ಭಾಷೆ ಒಂದೊಂದು ಕಡೆ ಒಂದೊಂದು ರೂಪ ತಳೆಯುವುದು ಸಹಜ. ಪುಸ್ತಕಪ್ರಪಂಚದ ಭಾಷೆಯೆ ಬೇರೆ, ಪತ್ರಿಕಾಪ್ರಪಂಚದ ಭಾಷೆಯೆ ಬೇರೆ, ವಾಣಿಜ್ಯಪ್ರಪಂಚದ ಭಾಷೆಯೇ ಬೇರೆ. ಹೀಗಿರುವಾಗ ಸಿನಿಮಾ ರಂಗದ ಭಾಷೆಯೇ ಬೇರೆ ಎಂದು ಹೇಳಬೇಕಾಗಿಲ್ಲ.

ಶುದ ಸಾಹಿತ್ಯದ ವ್ರತದವರಿಗೆ ಸಿನಿಮಾ ಭಾಷೆ ಭಾಷೆಯಲ್ಲ; ಸಿನೆಮಾ ಸಾಹಿತ್ಯ ಸಾಹಿತ್ಯವಲ್ಲ. ಆದರೆ ಕಥೆ,ಕಾದಂಬರಿ ಅಥವಾ ಕಾವ್ಯದ ಕರ್ತವ್ಯವನ್ನು ಸಿನಿಮಾ ಕೂಡ ಮಾಡುತ್ತಿದೆ. ಅದರ ಪ್ರಭಾವದಿಂದ ಜನತೆಯಲ್ಲಿ ಜಾಗ್ರತೆ ಮೂಡಿದೆ. ವಿಚಾರ-ವಿನಿಮಯಕ್ಕೊಂದು ಉತ್ಕೃಷ್ಟ ಮಾಧ್ಯಮವಾಗಿದೆ. ಹಲವಾರು ಗ್ರಂಥಗಳ ಕೆಲಸವನ್ನು ಒಂದು ಚಿತ್ರ ಮಾಡಬಹುದು. ಆದ್ದರಿಂದ ಸಿನಿಮಾ ಭಾಷೆಯ ಬಗ್ಗೆ ಮೂಗು ಮುರಿಯುವ ಮಡಿವಂತರು ಲಕ್ಷ್ಯವಿಟ್ಟು ಸಿನಿಮಾಸಾಹಿತ್ಯವನ್ನು ಸಹನಶೀಲತೆಯಿಂದ ಪರಿಶೀಲಿಸಬೇಕು. (ಸಿನಿಮಾ ಭಾಷೆ ಎಂದರೆ ಕೇವಲ ಸಂಭಾಷಣೆ-ಗೀತೆಗಳ ಭಾಷೆಯಲ್ಲ — ಅಭಿನಯ, ಛಾಯಾಗ್ರಹಣ, ದಿಗ್ದರ್ಶನ, ಸಂ ಲನ, ಸಂಗೀತ, ಮೊದಲಾದವುಗಳ ವಿಶಿಷ್ಟ ತಾಂತ್ರಿಕ ಭಾಷೆ.)

ಸಿನೆಮಾ ಕವಿ

ಚಿತ್ರಗಳಿಗೆ ಸಾಹಿತ್ಯ (ಸಂಭಾಷಣೆ-ಗೀತೆಗಳನ್ನು) ರಚಿಸುವ ಲೇಖಕ ಪುಸ್ತಕ ಬರೆಯುವ ಗ್ರಂಥಕರ್ತನಿಗಿಂತ ಹೆಚ್ಚು ಕಷ್ಟಪಡುತ್ತಾನೆ. ಕಾರಣ ಅವನು ಪ್ರತಿಯೊಬ್ಬನ ಅಭಿರುಚಿಗೆ ತಕ್ಕಂತೆ ತನ್ನ ರಚನೆಯನ್ನು ಸಿದ್ಧಗೊಳಿಸಬೇಕು. ಬಗೆಬಗೆಯ ದೃಷ್ಟಿಕೋನಗಳಿಂದ ನೋಡುವ ಪ್ರೇಕ್ಷಕನ ಹೃದಯಕ್ಕೆ ಹೊಗುವ ಸಾಹಿತ್ಯವನ್ನು ರಚಿಸುವ ಹೊಣೆಹೊತ್ತಿರುವ ಸಿನಿಮಾ ಕವಿ ಬಹು ಜಾಗರೂಕನಾಗಿರಬೇಕು. ಇಲ್ಲವಾದರೆ ಚಿತ್ರದ ಉದ್ದಿಶ್ಯವೇ ಸಫಲವಾಗುವುದಿಲ್ಲ. ಈ ಅಸಿಧಾರಾವ್ರತಿಯ ಬಗ್ಗೆ ಕಡೆಗಣ್ಣು ಕೂಡದು.

ಇಂದಿನ ಉದ್ದಾಮಸಾಹಿತಿಗಳಾದ ಅ. ನ. ಕೃ., ತ. ರಾ. ಸು., ಕವಿವರ ಬೇಂದ್ರೆ ಮೊದಲಾದವರು ಸಿನಿಮಾಸಾಹಿತ್ಯ ರಚಿಸಿದ್ದಾರೆ. ಶಿವರಾಮ ಕಾರಂತರು ಸ್ವಂತ ಚಿತ್ರ ಒಂದನ್ನು ತಯಾರಿಸಿದ್ದರಂತೆ. ಹಿರಿಯ ಸಾಹಿತಿಗಳಾದ ದೇವುಡು ನರಸಿಂಹಶಾಸ್ತ್ರಿಗಳು ಚಿತ್ರದಲ್ಲಿ ಅಭಿನಯಿಸಿದ್ದರಂತೆ. ಅಂದಮೇಲೆ ಸಾಹಿತಿಗಳು ಸಿನಿಮಾರಂಗವನ್ನು ಪ್ರವೇಶಿಸುವುದು ಹೊಸದೇನಲ್ಲ. ಸಿನಿಮಾಕ್ಕೆ ಸಾಹಿತ್ಯ ರಚಿಸುವುದರಿಂದ ಮೈಲಿಗೆ ಏನೂ ಆಗುವುದಿಲ್ಲ.

ಸಾಹಿತ್ಯ ಮತ್ತು ಚಿತ್ರೀಕರಣ

ಕವಿವರ ಬೇಂದ್ರೆ ಅವರ ಸಾಹಿತ್ಯವಿದೆ ಎಂಬ ಆಕರ್ಷಣೆಗೆ ಒಳಗಾಗಿ "ವಿಚಿತ್ರ ಪ್ರಪಂಚ" ಚಿತ್ರವನ್ನು ನೋಡಲು ಹೋದ ಪ್ರೇಕ್ಷಕರಲ್ಲಿ ನಾನೂ ಒಬ್ಬ. ಆದರೆ ನನ್ನ ನಿರೀಕ್ಷೆಗೆ ತಕ್ಕ ರಸಾಸ್ವಾದನೆಗೆ ಎಡೆ ಇರಲಿಲ್ಲವೆಂದು ಅತ್ಯಂತ ವಿಷಾದದಿಂದ ಹೇಳಬೇಕಾಯಿತು.

"ನೋಡಿ ಹೇಳು ಚಂದಿರ
ಸೌಭಾಗ್ಯದ ಮಂದಿರ"
"ಕುಣಿಸಿ ಕುಣಿ ಮೋಹದ ಗಿಣಿ ನಿನಗೆ ಶಾಲೆ ಬೇಕೆ?"
"ಅಕ್ಕನ ಬದಿಗೆಗೆ ಚಿಕ್ಕವ ನನ್ನ ತಮ್ಮ"

ಮೊದಲಾದ ಅಭೂತಪೂರ್ವ ಚಿತ್ರಗೀತೆಗಳು "ವಿಚಿತ್ರ ಪ್ರಪಂಚ" ಚಿತ್ರದಲ್ಲಿ ಇವೆಯಾದರೂ ಸಂಗೀತ ಮತ್ತು ಚಿತ್ರೀಕರಣದ ಸಮನ್ವಯತೆ ಇಲ್ಲದೆ ಸಾಹಿತ್ಯದ ಕೊಲೆಯಾಗಿದೆ. ಆದ್ದರಿಂದ ಪ್ರೇಕ್ಷಕನಿಗೆ ಉತ್ತಮ ಸಾಹಿತ್ಯದ ಬೆಲೆ ತಿಳಿಯದೆ ಹೋಗಲು ಚಿತ್ರೀಕರಣ ಮತ್ತು ಸಂಗೀತ ಕಾರಣವಾಯಿತೆನ್ನಬಹುದು.

ಈ ಮಾತು ಸಂಭಾಷಣೆಗಳಿಗೂ ಅನ್ವಯಿಸುತ್ತದೆ. ಸನ್ನಿವೇಶ, ಸಂಭಾಷಣೆ ಎಲ್ಲ ಸಮರ್ಪಕವಾಗಿದ್ದರೂ ನಟ ನಟಿಯರ ಅಭಿನಯ ಹಾಗೂ ಚಿತ್ರೀಕರಣ ಸಮರ್ಪಕವಾಗಿಲ್ಲದೆ ಹೋದರೆ ಪ್ರೇಕ್ಷಕನಿಗೆ ಸವಿಯಾದ ಸಂಭಾಷಣೆಗಳೂ ನಿಸ್ಸಾರವಾಗುತ್ತವೆ.

ಅ. ನ. ಕೃ. ಅವರು ಸಂಭಾಷಣೆಗಳನ್ನು ರಚಿಸಿದ 'ಜೀವನ ನಾಟಕ', 'ಸ್ತ್ರೀರತ್ನ', ತ.ರಾ.ಸು. ಬರೆದ 'ಚಿಂತಾಮಣಿ', 'ಶಿವಲಿಂಗ ಸಾಕ್ಷಿ' ಮುಂತಾದ ಚಿತ್ರಗಳ ಉತ್ತಮ ಸಂಭಾಷಣೆಗಳು ಹಲವಾರು ತಾಂತ್ರಿಕ ದೋಷಗಳಿಂದ ಚಿತ್ರದಲ್ಲಿ ಶೋಭಿಸದಿರಬಹುದು.

ಜನತೆ ಮತ್ತು ಸಾಹಿತ್ಯ

ಜನತೆಗೆ ಬೇಕಾದ ಕಥಾವಸ್ತುವನ್ನು ಆಯ್ದು ಚಿತ್ರ ತಯಾರಿಸುವುದು ನಿರ್ಮಾಪಕನ ನೈಪುಣ್ಯ. ಪೌರಾಣಿಕ, ಜಾನಪದ ಅಥವಾ ಸಾಮಾಜಿಕ ಈ ಮೂರು ಬಗೆಯ ಚಿತ್ರಗಳೇ ನಮ್ಮಲ್ಲಿ ಕಂಡುಬರುತ್ತಿವೆ. ಮಾರುಕಟ್ಟೆಯಲ್ಲಿ ಜಾನಪದಕ್ಕೆ ಹೆಚ್ಚು ಬೇಡಿಕೆ ಇರುವುದೊ, ಪೌರಾಣಿಕಕ್ಕೆ ಹೆಚ್ಚು ಬೇಡಿಕೆ ಇರುವುದೋ, ಅಥವಾ ಸಾಮಾಜಿಕಕ್ಕೆ ಹೆಚ್ಚು ಬೇಡಿಕೆ ಇರುವುದೊ ಎಂಬುದನ್ನು ಬಿಡುಗಡೆಯಾದ ಚಿತ್ರಗಳ ಜಯಾಪಜಯಗಳಿಂದ ನಿರ್ಧರಿಸಿ ತನ್ನದೇ ಒಂದು ತೀರ್ಮಾನಕ್ಕೆ ಬಂದು ಚಿತ್ರಗಳನ್ನು ತಯಾರಿಸುವ ಎಲ್ಲ ನಿರ್ಮಾಪಕರೂ ಯಶಸ್ವಿಯಾಗಲಾರರು. ಕಾರಣವೇನಂದರೆ ಜನಕ್ಕೆ ಬೇಕಾದ ವಿಷಯವೇ ಆದರೂ ತಯಾರಿಕೆಯ ಲೋಪ-ದೋಷಗಳು ಅವರಿಗೆ ರಂಜನೆ ನೀಡಲಾರದೆ ಇರಬಹುದು.

ಉತ್ತಮ ಸಂಭಾಷಣೆಗಳಿಂದ ಅಥವಾ ಉತ್ತಮ ಗೀತೆಗಳಿಂದ ಚಿತ್ರಗಳು ಯಶಸ್ವಿಯಾಗಬಲ್ಲವು. ಸಂಭಾಷಣೆಗಳಿಂದಲೇ ಆರ್ಥಿಕ ಯಶಸ್ಸು ಪಡೆದ ಚಿತ್ರಗಳ ಉದಾಹರಣೆ ತಮಿಳಿನಲ್ಲಿದೆ. 'ಪರಾಶಕ್ತಿ', 'ರಕ್ತ ಕಣ್ಣೀರ್', 'ಮನೋಹರ', 'ಕಟ್ಟಾಬೊಮನ್' ಮೊದಲಾದವು ಉತ್ತಮ ಸಂಭಾಷಣೆಯ ಚಿತ್ರಗಳೆಂದು ತಮಿಳು ಪ್ರೇಕ್ಷಕರ ಅಭಿಪ್ರಾಯ.

ಜನತೆಯಲ್ಲಿ ಗೀತೆಗಳ ಕಡೆ ಒಲವು ಈಗೀಗ ಹೆಚ್ಚುತ್ತಿರುವುದರಿಂದ ಉತ್ತಮ ಸಂಗೀತ ಮತ್ತು ಗೀತೆಗಳಿರುವ ಚಿತ್ರಗಳೆಲ್ಲ ಯಶಸ್ವಿಯಾಗುತ್ತಿವೆ. ತಮಿಳು ಚಿತ್ರರಂಗದಲ್ಲಿ ಮು. ಕರುಣಾನಿಧಿ ಸಂಭಾಷಣೆಗಳಿಗಾಗಿ ಚಿತ್ರಗಳನ್ನು ನೋಡುತ್ತಿದ್ದ ಜನತೆ

ಇಂದು ಪಟ್ಟುಕೋಟಿ, ಕಣ್ಣದಾಸನ್ ಇವರ ಗೀತೆಗಳಿಗಾಗಿ ನೋಡುತ್ತಿದೆ. ಅದ್ದರಿಂದ ಚಿತ್ರನಿರ್ಮಾಪಕರು ಜನತೆಗೆ ಬೇಕಾದ ಸಾಹಿತ್ಯವನ್ನು ಒದಗಿಸಬಲ್ಲ ಲೇಖಕರನ್ನು ಅರಸುತ್ತಾರೆ.

ನಿರ್ಮಾಪಕ ಹಾಗೂ ಹಂಚಿಕೆದಾರನಿಂದ ಮಾರುಕಟ್ಟೆಯ ತಾರಾಮೌಲ್ಯಕ್ಕೇರಿದ ಲೇಖಕ ತಾನು ಬರೆದುದೆಲ್ಲ ಸಾಹಿತ್ಯವೆಂಬ ಧೋರಣೆಯಲ್ಲಿ ಬರೆಯುತ್ತಾನೆ. ಆಗ ನಿಜವಾಗಿಯೂ ಸಾಹಿತ್ಯಾಭಿಮಾನಿ ಪ್ರೇಕ್ಷಕರು ಅವನನ್ನು ಖಂಡಿಸದಿದ್ದರೆ ಸಾಹಿತ್ಯಕ್ಕೆ ಆಗುವ ಅಪಚಾರ ಹೇಳತೀರದು. ಆಗ ಪ್ರೇಕ್ಷಕರಿಗೆ ಸಾಹಿತ್ಯಕ್ಕೆ ಆಗುವ ಅಪಚಾರವೇ ರುಚಿ ಎನಿಸುವದೇನೊ ಎಂದು ನಿರ್ಮಾಪಕ ಅಂಥಾ ಸಾಹಿತಿಯನ್ನು ಪ್ರೋತ್ಸಾಹಿಸುತ್ತಾನೆ. ಉತ್ತಮ ಸಾಹಿತ್ಯ ಬಚ್ಚಲಿಗೆ ಬಿದ್ದು, ಕೊಚ್ಚೆ ಸಾಹಿತ್ಯ ಮೇಲೇಳುತ್ತದೆ.

ಕೆಲವರು ಚಿತ್ರೋದ್ಯಮ ಕೇವಲ ಮನೋರಂಜನೆಗಾಗಿ ಇರುವುದರಿಂದ ಸಾಹಿತ್ಯವೂ ಅದಕ್ಕನುಗುಣವಾಗಿ ರೂಪಗೊಳ್ಳಬೇಕೆನ್ನುತ್ತಾರೆ. ಅಂದರೆ ಸರಳವಾದ ಸಾಹಿತ್ಯ ಮನೋರಂಜನೆಗೆ ಪೂರಕ. ಈ 'ಸರಳ' ಶಬ್ದ ಹಗುರ (ಹಿಂದಿ ಹಲ್ಕ) ಎಂಬ ವ್ಯಾಪ್ತಿ ಪಡೆದು ನಿರ್ಮಾಪಕನ ಮಿದುಳನ್ನು ಹೊಕ್ಕು ಲೇಖಕನ ಸಾಹಿತ್ಯದ ಮೂಲಕ ಹೊರಬರುತ್ತದೆ. ಆದ್ದರಿಂದಲೇ ಶುದ್ಧ ಸಾಹಿತ್ಯಪ್ರಿಯರಿಗೆ ಸಿನಿಮಾ ಸಾಹಿತ್ಯವೆಂದರೆ ತಾತ್ಸಾರ.

ಗೀತೆಗಳ ರಚನೆ

ಭಾವುಕನಾದ ಕವಿ ಸಂಗೀತನಿರ್ದೇಶಕನ ರಾಗಸಂಯೋಜನೆಗೆ ತಕ್ಕಂತೆ ಭಾವಪೂರ್ಣವಾದ ಶಬ್ದಗಳನ್ನು ಛಂದಸ್ಸಿನ (ಸ್ವಚ್ಛಂದ) ಬಂಧದಲ್ಲಿ ದೋಷರಹಿತವಾಗಿ ಸಂದರ್ಭೋಚಿತವಾಗಿ ರಚಿಸುತ್ತಾನೆ. ಹಲವೊಮ್ಮೆ ಕವಿಯು ರಚಿಸಿದ ಕವಿತೆಗೆ ಸಂಗೀತ ನಿರ್ದೇಶಕ ರಾಗವನ್ನು ಸಂಯೋಜಿಸುತ್ತಾನೆ. ಈ ಕವಿ ಸಂಗೀತಜ್ಞಾನ ಪಡೆದಿರಲೇಬೇಕು. ಇಲ್ಲವಾದರೆ ಸಂಗೀತನಿರ್ದೇಶಕನಿಗೆ ತಾಳ ಕಂಡುಹಿಡಿಯುವುದೇ ಕಷ್ಟವಾಗಿ ಕವಿತೆ ಅಸಾರ್ಥಕವಾಗುತ್ತದೆ. ಶಬ್ದಗಳನ್ನು ಎಳೆದು ತಂದು ಕೂರಿಸುವ (ನಿಘಂಟು ಮೊದಲಾದ ಶಬ್ದಕೋಶಗಳ ಸಹಾಯದಿಂದ) ಪ್ರಯತ್ನ ಸರ್ವಥಾ ನಿಷ್ಪ್ರಯೋಜಕ. ಸ್ವಯಂಸ್ಫೂರ್ತಿಯಿಂದ ಉಕ್ಕಿಬಂದ ಭಾವ, ಅದನ್ನು ಪ್ರಕಟಿಸುವ ಸಾರ್ಥಕ ಸಮಂಜಸ ವಾಕ್ಯಗಳು ಮೃದುಮಧುರವಾಗಿ ಸನ್ನಿವೇಶ ಮತ್ತು ಪಾತ್ರಗಳ ಭಾಷೆಗೆ ಅನುಗುಣವಾಗಿ ಪಕ್ವವಾಗಿ ನೈಜವಾಗಿ ಹರಿದುಬರಬೇಕು. ಕಿಣುಕಿ ಬರೆಯುವ ಕಷ್ಟದ ಅಂದರೆ ಸಂತೆ ಹೊತ್ತಿಗೆ ಮೂರು ಮೊಳ ಎಂಬಂತೆ ತನಗೆ ಸಿಕ್ಕ ಶಬ್ದಗಳನ್ನು ರಾಗದ ಅಳತೆಗೆ ತಾಳದ ಗತಿಗೆ ಕೂಡಿಸಿ ಹಾಡು ಬರೆದೆನೆಂದು ಎದೆನೀವಿಕೊಳ್ಳುವ ಕುಕವಿ ಮೊದಲನೆಯದಾಗಿ ಸಂಗೀತ ನಿರ್ದೇಶಕನಿಗೆ, ಎರಡನೆಯದಾಗಿ ಗಾಯಕ ಗಾಯಕಿಗೆ, ಮೂರನೆಯದಾಗಿ ಧ್ವನಿಮುದ್ರಕನಿಗೆ ಎಲ್ಲಕ್ಕಿಂತ ಮಿಗಿಲಾಗಿ ನಾಲ್ಕನೆಯದಾಗಿ ದುಡ್ಡು ಕೊಟ್ಟು ಚಿಲೆ ಕಟ್ಟುವ ಪ್ರೇಕ್ಷಕನಿಗೆ ಉತ್ತರ ಹೇಳುವಾಗ ಆತ್ಮಶೋಧ ಮಾಡಿಕೊಳ್ಳಬೇಕು.

ಕುರುಡು ಹಾದಿ

"ಡಬ್ಬಲ್ ಮೀನಿಂಗ ಇರೋ ಹಾಗೆ ಬರೆದರೇನೇ ಸಾರ್ ಜನ ಲೈಕ ಮಾಡೋದು" ಎಂದು ಅನೇಕರು ಕವಿಯನ್ನು ಅಶ್ಲೀಲ ರಚನೆಗೆ ಪ್ರಚೋದಿಸುತ್ತಾರೆ. ಕವಿ ತನ್ನ ತರ್ಕವನ್ನು ಉಪಯೋಗಿಸಿ ರಂಜನೀಯವಾದ ಉತ್ತಮ ಸಾಹಿತ್ಯವನ್ನು ಕೊಡದೆ ಕೀಳುಮಟ್ಟದ ಅಶ್ಲೀಲವನ್ನು ಕೊಟ್ಟರೆ ನೀಚ ಸಂಸ್ಕೃತಿಯ ಜನರ 'ಶಹಬಾಸ್' ಗಳಿಸಬಹುದೇ ವಿನಾ ತನ್ನ ಪ್ರತಿಭೆಯ ಸದ್ವಿನಿಯೋಗ ಮಾಡಿಕೊಂಡಂತಾಗುವುದಿಲ್ಲ. ಕೆಳದರ್ಜೆಯ ಮಾತುಗಳಿಗೆ ಅಥವಾ ಹಾಡುಗಳಿಗೆ ಕೆಳದರ್ಜೆಯ ಪ್ರೋತ್ಸಾಹ ಹೇರಳವಾಗಿ ದೊರೆತಮಾತ್ರಕ್ಕೆ ಅದೇ ಜನತೆಯ ಧ್ವನಿ ಎಂದು ಅದೇ ಮಟ್ಟದ ಸಾಹಿತ್ಯರಚನೆಯಲ್ಲಿ ತೊಡಗುವ ಕವಿ ಜನತೆಗೆ ತಾರಕನಾಗುವ ಬದಲು ಮಾರಕನಾಗುತ್ತಾನೆ.

ಜನತೆಯ ಧ್ವನಿ

ಪತ್ರಿಕೆಗಳ ಮೂಲಕ ಹಾಗೂ ಸಾಹಿತ್ಯಗೋಷ್ಠಿಗಳ ಮೂಲಕ ಪ್ರೇಕ್ಷಕರು ತಮ್ಮ ಮನೋಗತವನ್ನು ಸ್ಪಷ್ಟಪಡಿಸಬೇಕು. ಕೆಳದರ್ಜೆ ಸಾಹಿತ್ಯಕ್ಕೆ ಖಂಡನೆ ಹಾಗೂ ಉತ್ತಮ ದರ್ಜೆ ಸಾಹಿತ್ಯಕ್ಕೆ ಪ್ರೋತ್ಸಾಹ ದೊರೆಯುವಂತಾಗಬೇಕು. ಇದರಲ್ಲಿ ಕುರುಡನನ್ನು ಹಿಂಬಾಲಿಸುವ ಕುರುಡರು ಪತ್ರಿಕೆಗಳ ಹಾಗು ಸಾಹಿತ್ಯಗೋಷ್ಠಿಗಳ ಪ್ರಧಾನ ಪದವಿಗಳಲ್ಲಿದ್ದರೆ ಪಕ್ಷಪಾತಗಳು ನಡೆಯಬಹುದು. ಇಂಥ ಸಂದರ್ಭಗಳಲ್ಲಿ ನಿಷ್ಪಕ್ಷಪಾತ ದೃಷ್ಟಿಯು ಪತ್ರಿಕೆಗಳು ನೆರವು ನೀಡಿ ಸತ್ಯವನ್ನು ಪ್ರಕಟಿಸಿ ಜನತೆಗೆ ಸಹಾಯಮಾಡಬೇಕು. ಹಾಗೆ ಮಾಡುವುದರಿಂದ ಜನತೆಗೆ ಬೇಕಾದ ಉತ್ತಮ ವರ್ಗದ ಸಾಹಿತ್ಯ ದೊರೆಯುತ್ತದೆ. ಇಲ್ಲವಾದರೆ ಜನತೆಯ ಅಭಿರುಚಿಯು ಸರಿಯಾದ ಮಟ್ಟ ತಿಳಿಯದೆ ಹೊಲಸು ಹುಲುಸಾಗುತ್ತದೆ.



'ವೀರವಿಕ್ರಮ'ದಲ್ಲಿ 'ರಾಜಶ್ರೀ'

(ಒಂದು ಕಿರಿನೋಟ)—

ಕನ್ನಡ ಚಿತ್ರ ಪ್ರಪಂಚದ ಒಲವು—ನಿಲುವುಗಳು

ಲೇಖಕರು; ಎಸ್. ವಿ. ಪಿ.


ಕನ್ನಡ ಚಿತ್ರೋದ್ಯಮ ೧೯೬೦-೬೧ ರಲ್ಲಿ ಅನೇಕ ಸಂಕಷ್ಟಗಳಿಂದಾಗಿ ಬೆಳೆಯುವದಿರಲಿ ಅಳಿಯದೇ ಇದ್ದುದು ಒಂದು ಸಮಾಧಾನದ ಸಂಗತಿಯೇ ಎಂದು ಹೇಳಬೇಕು. ಇನ್ನಿತರ ಭಾಷೆಗಳಲ್ಲಿಯಂತೆ ಕಚ್ಚಾಫಿಲ್ಮಿನ ಕೊರತೆ ಕನ್ನಡ ಚಿತ್ರರಂಗಕ್ಕೆ ಮಾರಕವಾಗಿ ಪರಿಣಮಿಸತೊಡಗಿತ್ತೆಂದ ಹೇಳಿದರೆ ಅತಿಶಯೋಕ್ತಿಯಾಗಲಾರದು. ಇದರ ಪರಿಣಾಮವಾಗಿಯೆ ಏನೋ ಈ ಅವಧಿಯಲ್ಲಿ ಪ್ರದರ್ಶನಕ್ಕೆ ಬಂದ ಹನ್ನೆರಡು ಚಿತ್ರಗಳಲ್ಲಿ ಐದು ಬೇರೆ ಬೇರೆ ಭಾಷೆಗಳ ಕನ್ನಡ ಅವತರಣಿಕೆಯ ಚಿತ್ರಗಳು, ಕನ್ನಡ ಚಿತ್ರಗಳ ಸಂಖ್ಯೆ ಎಳೇಏಳು. ಆದರೆ ಸಮಾಧಾನದ ಸಂಗತಿಯೆಂದರೆ ಸಂಖ್ಯೆ ಕಡಿಮೆಯಿದ್ದರೂ ಕನ್ನಡ ಚಿತ್ರೋದ್ಯಮ ಪ್ರೆಕ್ಷಕರಲ್ಲಿಆಶೆಯನ್ನುಂಟುಮಾಡಿದೆ. ಕಿತ್ತೂರ ಚೆನ್ನಮ್ಮ, ಭಕ್ತ ಕನಕದಾಸ ಮೊದಲಾದ ಉತ್ತಮ ಚಿತ್ರಗಳು ಈ ಕಾಲದಲ್ಲಿ ಮೂಡಿಬಂದುವು. ಮೊದಲನೆಯದು ಐತಿಹಾಸಿಕ ಚಿತ್ರ. ಕರ್ನಾಟಕದ ವೀರವನಿತೆಯ ಸಾಹಸದ ಚಿತ್ರಣವನ್ನು ಇದರಲ್ಲಿ ಕಾಣಬಹುದು. ಬಿ. ಸರೋಜಾದೇವಿ ಚೆನ್ನಮ್ಮನ ಪಾತ್ರದಲ್ಲಿ ಜೀವಂತ ಅಭಿನಯವನ್ನು ನೀಡಿದ್ದಾಳೆನ್ನಬೇಕು. ಇನ್ನೊಂದು ನಮ್ಮ ಹರಿದಾಸರಲ್ಲಿ ಶ್ರೇಷ್ಠರಾದ ಕನಕದಾಸರ ಜೀವನವನ್ನು ಚಿತ್ರಿಸಿದೆ. ಈ ಚಿತ್ರ ರಾಷ್ಟ್ರಪತಿ ಪ್ರಶಸ್ತಿಯನ್ನು ಗಳಿಸಿದೆ. ರಾಜಕುಮಾರ ಕನಕದಾಸನಾಗಿ ಉತ್ತಮ ಅಭಿನಯವನ್ನು ನೀಡಿದ್ದಾನೆ.

ಶ್ರೀಶೈಲಮಹಾತ್ಮೆ, ರಾಜಾ ಸತ್ಯವ್ರತ, ಜಗದೇಕವೀರನ ಕಥೆ, ವರಲಕ್ಷ್ಮಿ, ಪೂಜಾಫಲ, ಮಾಯಾಮಚ್ಛೇಂದ್ರ ಮೊದಲಾದವು ಪೌರಾಣಿಕ ಅಂಶದ ಚಿತ್ರಗಳು. 'ಕಣ್ತೆರದು ನೋಡು' ಒಂದೇ ಒಂದು ಸಾಮಾಜಿಕ ಚಿತ್ರ ಈ ಒಂದು ವರ್ಷದಲ್ಲಿ ಕನ್ನಡಗರಿಗೆ ನೋಡಲು ದೊರೆತಿದೆ. ರಾಜಕುಮಾರ, ಲೀಲಾವತಿ ಪ್ರಧಾನಪಾತ್ರಗಳಲ್ಲಿದ್ದಾರೆ. ಇದೊಂದು ಮನೋರಂಜಕವಾದ ಚಿತ್ರವಾಗಿದೆ. ದಶಾವತಾರ ಇನ್ನೊಂದು ಉಲ್ಲೇಖನೀಯವಾದ ಪೌರಾಣಿಕ ಚಿತ್ರ.

ನಾಟ್ಯರಂಗದಿಂದ ಚಿತ್ರರಂಗದ ವರೆಗೆ ಹೆಸರುಗಳಿಸಿದ ಶ್ರೀ ಎಂ. ವಿ. ಸುಬ್ಬಯ್ಯ ನಾಯಿಡುರವರು ಕೇಂದ್ರ ಸಂಗೀತ ನಾಟಕ ಆಕೆಡೆಮಿಯಿಂದ ಪ್ರಶಸ್ತಿಪಡೆದುದು ಈ ವರುಷದಲ್ಲಿಯ ಇನ್ನೊಂದು ಅಭಿಮಾನದ ಸಂಗತಿಯಾಗಿದೆ. ಕನ್ನಡದ ಹಿರಿಯ ನಟನೊಬ್ಬನಿಗೆ ರಾಷ್ಟ್ರ ಮನ್ನಣೆಯು ದೊರಕಿದಂತಾಯಿತು.

ಕಳೆದವರುಷ ಪ್ರದರ್ಶನಕ್ಕೆ ಬಂದ ಚಿತ್ರಗಳ ಸಂಖ್ಯೆ ಕಡಿಮೆಯಿದ್ದರೂ ತಯಾರಾಗುತ್ತಿರುವ ಚಿತ್ರಗಳ ಸಂಖ್ಯೆ ಮಾತ್ರ ಅತ್ಯಧಿಕವಾಗಿದೆಯನ್ನಬೇಕು. ಬರುವವರ್ಷ ಕನ್ನಡ ಚಿತ್ರರಂಗದ ಸುಗ್ಗಿ ಎಂದು ಕರೆದರೆ ಯಥಾರ್ಥವಾದೀತು. ಬರುವ ವರ್ಷದಲ್ಲಿ ಅನೇಕ ಸಾಮಾಜಿಕ ಚಿತ್ರಗಳನ್ನು ನೋಡುವ ಸುಯೋಗವೂ ಲಭಿಸಲಿದೆ. ಜಿ. ವಿ. ಅಯ್ಯರರ 'ಹುಡುಕಿಕೊಂಡು ಬಂದ ಹುಡುಗಿ', ಪದ್ಮಿನಿ ಸಂಸ್ಥೆಯ 'ಗಾಳಿಗೋಪುರ' ಅಲ್ಲದೆ 'ಭೂದಾನ' ಮತ್ತು 'ಕೈಕೊಟ್ಟು ನೋಡು' ಇವು ಮುಖ್ಯವಾದವುಗಳು. ಈಗೊಂದು ವರ್ಷದಿಂದ ಸಿದ್ಧವಾಗುತ್ತಿರುವ ಆರ್. ನಾಗೇಂದ್ರರಾವರ 'ವಿಜಯನಗರದ ವೀರಪುತ್ರ' ಬರುವವರ್ಷದಲ್ಲಿ ಬಿಡುಗಡೆ ಹೊಂದಲಿದೆ. ಚಲಚ್ಚಿತ್ರ ಹಣಕಾಸಿನ ಸಂಸ್ಥೆಯಿಂದ ಇದಕ್ಕೆ ನೆರವೂ ದೊರೆತಿದೆ. ಇಬ್ಬರು ದಾರ್ಶನಿಕರ ಜೀವನವನ್ನು (ಸರ್ವಜ್ಞಮೂರ್ತಿ—ನಿಜಗುಣ ಶಿವಯೋಗಿ) ನಾವು ತೆರೆಯ ಮೇಲೆ ನೋಡಲಿದ್ದೇವೆ. ಅಲ್ಲದೆ ಹತ್ತಾರು ಪೌರಾಣಿಕ, ಚಾರಿತ್ರಿಕ, ಜಾನಪದ ಚಿತ್ರಗಳೂ ನಿಮ್ಮನ್ನು ರಂಜಿಸಲು ಭರದಿಂದ ಅಣಿಯಾಗುತ್ತಿರುವವು. ಈ ಚಿತ್ರಗಳಲ್ಲಿ ರಾಜಕುಮಾರ ನಾಯಕನಾಗಿರುವ ಚಿತ್ರಗಳೇ ಹೆಚ್ಚಾಗಿರುವವು. ಕನಿಷ್ಠ ಆರು ಚಿತ್ರಗಳಲ್ಲಂತೂ ಅವನೇ ನಾಯಕನಾಗಿರುವನು. ಒಂದೆರಡರಲ್ಲಿ ಇತರ ಪ್ರಮುಖಪಾತ್ರಗಳಲ್ಲಿ ಕಾಣಿಸಿಕೊಂಡಿರುವನು. ಬಿ. ಸರೋಜಾದೇವಿ ಹಿಂದಿ ಚಿತ್ರರಂಗ ಸೇರಿದಂತಾಗಿದ್ದು ಅವಳ ಸ್ಥಾನವನ್ನೀಗ ಉದಯೋನ್ಮುಖ ತಾರೆ ಲೀಲಾವತಿ ತುಂಬುತ್ತಿರುವಳೆಂದು ಹೇಳಬೇಕು. ಚಿತ್ರೋದ್ಯಮದಲ್ಲಿ ಅವಳಿಗೆ ಉಜ್ವಲ ಭವಿತವ್ಯವಿದೆಯೆಂಬುದನ್ನು ಅವಳ ಅಭಿನಯವನ್ನು ಕಂಡ ಯಾರೂ ಹೇಳಬಹುದು. ದಕ್ಷಿಣ ಭಾರತದಲ್ಲಿ ಪ್ರಥಮ ಸ್ತ್ರೀ ಸಂಗೀತ ದಿಗ್ದರ್ಶಕಿಯನ್ನು ನೀಡಿದ ಶ್ರೇಯಸ್ಸು ಬಹುಶಃ ಕನ್ನಡದ್ದೇ ಎಂದು ಕಾಣುತ್ತಿದೆ. ಶ್ರೀಮತಿ ಅನಸೂಯೆ ಅವರು ಮಹಾತ್ಮಾ ಕಬೀರ್ ಚಿತ್ರದ ಸಂಗೀತ ದಿಗ್ದರ್ಶಿಕೆಯಾಗಿ ಕೆಲಸಮಾಡುತ್ತಿರುವರು.

ಕಳೆದ ವರ್ಷದ ಪ್ರಾರಂಭದಲ್ಲಿ ಹೀನದೆಸೆಯಲ್ಲಿದ್ದ ಕನ್ನಡ ಚಿತ್ರೋದ್ಯಮ ಕೊನೆಯಲ್ಲಿ ಚೇತರಿಸಿಕೊಂಡು ಈಗ ಭರದಿಂದ ಮುನ್ನಡೆಯುತ್ತಿರುವುದು ಕನ್ನಡ ಚಿತ್ರಪ್ರೇಮಿಗಳಿಗೆ ಒಂದು ಸಮಾಧಾನದ—ತೃಪ್ತಿಯ ಸಂಗತಿಯಾಗಿದೆ. ಅದು ಯಶಸ್ವಿಯಾಗಿ ಮುನ್ನಡೆಯಲೆಂದು ನಾವು ಹಾರೈಸೋಣ.



೧೯೬೦-೬೧ ರಲ್ಲಿ ಹಿಂದಿ ಚಲಚ್ಚಿತ್ರೋದ್ಯಮ

ಹಿಂದಿ ಚಿತ್ರೋದ್ಯಮವು, ಈ ಒಂದು ವರುಷದಲ್ಲಿ ಅನೇಕ ಕಷ್ಟನಿಷ್ಠುರಗಳನ್ನು ಎದುರಿಸಬೇಕಾಗಿ ಬಂದಿದ್ದರೂ ಅದು ಯಶಸ್ವಿಯಾಗಿ ಮುನ್ನಡೆಯಿತಲ್ಲದೇ ತಾಂತ್ರಿಕ ವಿಧಾನಗಳಲ್ಲಿ ಪ್ರಗತಿಸಾಧಿಸಿದೆ. ಅಪೂರ್ವ ಹೊಸ ನಿರ್ಮಾಪಕರೂ ಪ್ರವೇಶಿಸಿದ್ದಾರೆ; ಹೊಸ ಮುಖಗಳ ಪರಿಚಯ ಮಾಡಿಕೊಡಲಾಗಿದೆ. ಒಂದು ವರ್ಷದಲ್ಲಿ ಚಿತ್ರೋದ್ಯಮ ಸಾಧಿಸಿದ ಪ್ರಗತಿಯ ವಿಮರ್ಶಾತ್ಮಕ ನೋಟ ಇಲ್ಲಿದೆ.

ಹಿಂದೀ ಚಲಚ್ಚಿತ್ರ ಪ್ರಪಂಚದಲ್ಲಿ ಕಳೆದ ಒಂದು ವರ್ಷದಲ್ಲಿ ವಿಶೇಷ ಪ್ರಗತಿ ಕಂಡು ಬರದಿದ್ದರೂ ಕೆಲವೊಂದು ಹೊಸ ಬಗೆಯ ಚಿತ್ರಗಳು ಹೊರಬಿದ್ದಿವೆ. "ಗಲ್ಲಾದ ಮೇಲೆ ಕಣ್ಣಿರಿಸಿ" ನಿರ್ಮಿಸಲ್ಪಟ್ಟ ಚಿತ್ರಗಳ ಸಂಖ್ಯೆಯೆ ಹೆಚ್ಚಿದ್ದರೂ ಹಲಕೆಲವು ನಿರ್ಮಾಪಕರು ಹೊಸ ದಾರಿಯನ್ನು ತುಳಿಯುತ್ತಿರುವದು ಶುಭ ಲಕ್ಷಣ.

"ಹುಡುಗ-ಹುಡುಗಿಯರ ಪ್ರೇಮ"ದ ಇಲ್ಲವೆ ಅಡುಗೂಲಜ್ಜಿ ಕಥೆಗಳನ್ನು ಚಿತ್ರ ರಂಗದ ಮೇಲೆ ನೋಡಿ ನೋಡಿ ನಮ್ಮ ಚಲಚ್ಚಿತ್ರ ರಸಿಕರು ಬೇಸತ್ತಿರುವದನ್ನು ಗಮನಿಸಿ ಕೆಲ ಸಾಹಸಿ ಹಿಂದೀ ಚಲಚ್ಚಿತ್ರ ನಿರ್ಮಾಪಕರು ಈ ಬೇಸರವನ್ನು ಕಳೆಯಲು ಮುಂದಾಗಿರುವರು. ಅವರು ನೀತಿಬೋಧಕ ಹಾಗು ಧ್ಯೇಯನಿರೂಪಕ ಚಿತ್ರಗಳನ್ನು ನಿರ್ಮಿಸಿ ತಮ್ಮದೇ ಆದ ರೀತಿಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸಲೆತ್ನಿಸಿರುವರು. ಇದು ನಿಜವಾಗಿಯೂ ಸ್ತುತ್ಯ ಪ್ರಯತ್ನವಾಗಿದೆ. ಇಂಥ ಚಿತ್ರಗಳಲ್ಲಿ ಶ್ರೀ ಬಿ. ಆರ್. ಚೋಪ್ರಾರವರ "ಕಾನೂನ". ಶ್ರೀ ರಾಜಕಪೂರರ "ಜಿಸ ದೇಶಮೆಂ ಗಂಗಾ ಬಹತಿಹೈ", ಬಿಮಲ್ ರಾಯರ ಉಸನೆ ಕಹಾಥಾ, ಫಿಲ್ಮಯುಗದವರ "ಆಸ್ ಕಾ ಪಂಛೀ ಮತ್ತು ನವಕೇತನದವರ "ಹಮ್ ದೋನೊ" ಚಿತ್ರಗಳನ್ನು ಉಲ್ಲೇಖಿಸಬಹುದು.

ಪ್ರಚಲಿತ ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಜತ ಪರದೆಯ ಮೇಲೆ ತರುವದರಲ್ಲಿ ಶ್ರೀ ಬಿ. ಆರ್. ಛೋಪ್ರಾರು ಸಿದ್ಧಹಸ್ತರಾಗಿದ್ದಾರೆ. ತಮ್ಮ ಪರಂಪರೆಗೆ ಅನುಗುಣವಾಗಿ ಅವರು "ಕಾನೂನು" ಚಿತ್ರದಲ್ಲಿ ಕೊಲೆಗಡಕರಿಗೆ ನಮ್ಮ ದೇಶದಲ್ಲಿ ವಿಧಿಸಲ್ಪಡುವ ಅತ್ಯುಗ್ರ ಶಿಕ್ಷೆಯಾದ ಮರಣದಂಡನೆಯನ್ನು ರದ್ದುಗೊಳಿಸಬೇಕೆಂದು ಪ್ರತಿಪಾದಿಸಿದ್ದಾರೆ. ಈ ಚಿತ್ರಕ್ಕೆ ದೇಶದ ಎಲ್ಲ ಭಾಗಗಳಲ್ಲಿ ಅಭೂತಪೂರ್ವ ಸ್ವಾಗತ ದೊರೆತು ರಜತ ಮಹೋತ್ಸವವನ್ನು ಇದು ಆಚರಿಸಿರುತ್ತದೆ. ಈ ಚಿತ್ರದ ಇನ್ನೊಂದು ವೈಶಿಷ್ಟ್ಯವೆಂದರೆ ಇದರಲ್ಲಿ ಒಂದು ಹಾಡಾದರೂ ಇರುವುದಿಲ್ಲ. ಆದರೂ ಈ ಚಿತ್ರವು ಯಶಸ್ವಿಯಾಗಿದೆಂಬುದಕ್ಕೆ ಅದು ಸಾರ್ವತ್ರಿಕ ಪ್ರಶಂಸೆಗೆ ಪಾತ್ರವಾಗಿರುವದೇ ಸಾಕ್ಷಿ. ಯಾವದೇ ಚಿತ್ರವು ಯಶಸ್ವಿಯಾಗಬೇಕಾದರೆ ಅದಕ್ಕೆ ಇಂಪಾದ ಸಂಗೀತದ ಮೆರಗು ಕೊಡಬೇಕೆಂಬ ಸಾಮಾನ್ಯ ತಿಳುವಳಿಕೆಯು ತಪ್ಪೆಂದು ಕಾನೂನು ಚಿತ್ರವು ಸಿದ್ಧಮಾಡಿಕೊಟ್ಟಿದೆ.

ರಾಜಕಪೂರರ "ಜಿಸದೇಶಮೆಂ ಗಂಗಾ ಬಹತಿ ಹೈ" ಚಿತ್ರವು ಅವರ ಹಿಂದಿನ ಚಿತ್ರಗಳಾದ "ಶ್ರೀ ೪೨೦" "ಜಾಗತೆ ರಹೊ" 'ಆವಾರಾ'ಗಳಂತೆ ನಾವೀನ್ಯಪೂರ್ಣವಾಗಿದೆ. ಈ ಚಿತ್ರದಲ್ಲಿ ಆಚಾರ್ಯ ವಿನೋಬಾ ಭಾವೆಯವರಿಂದ ಅವರು ಸ್ಫೂರ್ತಿ ಪಡೆದಿದ್ದಾರೆ. ಹಳ್ಳಿಯ ಲಾವಣಿಕಾರನೊಬ್ಬನು ಕೊಲೆ-ಕಳವು ಮೊದಲಾದ ಹಿಂಸಾಚಾರಗಳಲ್ಲಿ ತೊಡಗಿದ್ದ ದರೋಡೆಗಾರರ ತಂಡದೊಡನೆ ನಿಕಟ ಸಂಪರ್ಕ ಬೆಳಸಿ ಅವರನ್ನು ಒಳ್ಳೆಮಾರ್ಗಕ್ಕೆ ಹಚ್ಚುವದೇ ಈ ಚಿತ್ರದ ಕಥಾವಸ್ತುವಾಗಿದೆ. ಪ್ರಸಿದ್ಧ ಸಿನೆಮಾ ನಟ ಸುನಿಲದತ್ತನಾದರೂ ವಿನೋಬಾಜಿಯವರ ಈ ಶಾಂತಿಯಾತ್ರೆಯನ್ನು ಅರ್ಥೈಸಿ ಒಂದು ಚಿತ್ರವನ್ನು ನಿರ್ಮಿಸಲಿರುವನು. ಅದರ ಹೆಸರು "ಮುಝೆ ಜೀನೆ ದೊ" ಅದರಲ್ಲಿ ಅವನು ಸ್ವತಃ ನಾಯಕನ ಪಾತ್ರವನ್ನು ವಹಿಸಿರುವನು. ಈ ಚಿತ್ರವು ಬೇಗನೆ ಪ್ರದರ್ಶನಕ್ಕೆ ಬರಲಿದೆ.

ಲೇಖಕರು :
ಶ್ರೀ ಎಂ. ನಾಗರಾಜರಾವ ಬಿ. ಎ.
ಹುಬ್ಬಳ್ಳಿ

ಉಸ್ನೆ ಕಹಾಥಾ, ಆಸಕಾ ಪಂಛೀ, ಮತ್ತು ಹಮ್ ದೋನೊ ಇವು ಯುದ್ಧದ ಹಿನ್ನೆಲೆಯಲ್ಲಿ ನಿರ್ಮಿಸಲ್ಪಟ್ಟ ಚಿತ್ರಗಳಿರುವವು. ನಮ್ಮಲ್ಲಿ ಇದು ವರೆಗೆ ಇಂಥ ಚಿತ್ರಗಳಿದ್ದಿಲ್ಲ. ಹೊಡೆದಾಟ, ಬಡಿದಾಟ, ಕೊಲೆ ಸುಲಿಗೆ ಮೊದಲಾದ ದೃಶ್ಯಗಳಿರುವ ಚಿತ್ರಗಳು ಈ ಮೊದಲು ನಿರ್ಮಾಣವಾಗುತ್ತಿದ್ದವೆ ಹೊರತು ಸೈನಿಕನ ಜೀವನ, ಸಂರಕ್ಷಣೆ ಪಡೆಯು ದೇಶ ರಕ್ಷಣೆಯಲ್ಲಿ ವಹಿಸುತ್ತಿರುವ ಮಹತ್ವದ ಪಾತ್ರ, ಯುದ್ಧದಿಂದ ಕೌಟುಂಬಿಕ ಜೀವನದ ಮೇಲಾಗುವ ಪರಿಣಾಮ ಇವುಗಳ ಬಗ್ಗೆ ಯೋಗ್ಯ ತಿಳುವಳಿಕೆಯನ್ನು ನಮ್ಮ ಚಿತ್ರಗಳು ಉಂಟು ಮಾಡುತ್ತಿದ್ದಿಲ್ಲ. ಸೈನಿಕ ಜೀವನವು ಎಷ್ಟು ಆಶೆ-ನಿರಾಶೆ-ತ್ಯಾಗಗಳಿಂದ ಕೂಡಿದೆಂಬುದರ ಪರಿಚಯ ಇದುವರೆಗೆ ನಮ್ಮ ಜನತೆಗೆ ಇದ್ದಿಲ್ಲ. ಇದೊಂದು ದೊಡ್ಡ ಕೊರತೆಯಾಗಿತ್ತು. ಈ ಮೂರು ಚಿತ್ರಗಳು ಈ ಕೊರತೆಯನ್ನು ದೂರ ಮಾಡಿವೆಯೆನ್ನಬಹುದಾಗಿದೆ.

ಇನ್ನು ಉಳಿದ ಚಿತ್ರಗಳು ಕೌಟುಂಬಿಕ ಚಿತ್ರಗಳು; ಸಾಮಾನ್ಯ ಚಿತ್ರಗಳೆಂದು ಇವನ್ನು ಪರಿಗಣಿಸಬಹುದು.

ಕೌಟುಂಬಿಕ ಚಿತ್ರಗಳಿಗೆ ಮಾತ್ರ ರಸಿಕರಿಂದ ಹೆಚ್ಚಿನ ಪುರಸ್ಕಾರ ಸಿಕ್ಕಿರುವದು ಕಂಡು ಬರುತ್ತದೆ. ಇಲ್ಲಿ ಒಂದು ಮಹತ್ವದ ಅಂಶವೆಂದರೆ ಹಿಂದೀ ಚಲಚ್ಚಿತ್ರ ಪ್ರಪಂಚದಲ್ಲಿ ಕಾಲಿರಿಸಿದ ದಕ್ಷಿಣ ಭಾರತದ ನಿರ್ಮಾಪಕರು ಜನಪ್ರಿಯ ಕೌಟುಂಬಿಕ ಚಲಚ್ಚಿತ್ರಗಳನ್ನು ನಿರ್ಮಿಸುವಲ್ಲಿ ಉಳಿದವರನ್ನು ಹಿಂದೆ ಹಾಕಿರುವರು. ಈ ವರ್ಷವಾದರೂ ರಜತೋತ್ಸವದ ಚಿತ್ರಗಳನ್ನು ನಿರ್ಮಿಸಿದ ಕೀರ್ತಿಯು ಅವರಿಗೇ ಸಲ್ಲುತ್ತದೆ.

ಈ ವರ್ಷದಲ್ಲಿ ಕಾನೂನ್ ಮತ್ತು ಜಿಸ್ ದೇಶಮೇ ಗಂಗಾ ಬಹತಿಹೈ ಇವುಗಳನ್ನೊಳಗೊಂಡು ನಾಲ್ಕು ಹಿಂದಿ ಚಿತ್ರಗಳು ರಜತೋತ್ಸವವನ್ನು ಕಂಡವು. ಉಳಿದ ಎರಡು ಚಿತ್ರಗಳೆಂದರೆ ಜೆಮಿನಿಯವರ "ಘೂಂಘಟ" ಮತ್ತು ಪ್ರಸಾದ ಪ್ರೊಡಕ್ಷನ್ಸದವರ "ಸಸುರಾಲ" ರಜತೋತ್ಸವವನ್ನು ಆಚರಿಸದಿದ್ದರೂ ಸಾರ್ವತ್ರಿಕವಾಗಿ ಪ್ರಶಂಸೆಗೆ ಪಾತ್ರವಾಗಿರುವ ಕೆಲ ಹಿಂದೀ ಚಿತ್ರಗಳಿದ್ದು ಅವು ಕೂಡ ದಕ್ಷಿಣ ಭಾರತದ ನಿರ್ಮಾಪಕರಿಂದ ನಿರ್ಮಿಸಲ್ಪಟ್ಟವು ಎ. ವಿ. ಎಂ. ರವರ ಬಿಂದಿಯಾ, ವೀನಸ್ ಪಿಕ್ಚರ್ಸದವರ ನಜರಾನಾ, ಎ. ವಿ. ಎಂ. ದವರ ಛಾಯಾ ಮತ್ತು ಇದೀಗ ಬಿಡುಗಡೆಯಾಗಿರುವ ಜೆಮಿನಿಯವರ ಘರಾನಾ.

ಯಾವದೇ ಚಿತ್ರವು ಯಶಸ್ವಿಯಾಗಬೇಕಾದರೆ ಅದು ಒಳ್ಳೆಯ ಕಥೆಯಿಂದ ಕೂಡಿರಬೇಕು. ಕಥೆಯೇ ನಮ್ಮ ಚಲಚ್ಚಿತ್ರಗಳ ಜೀವಾಳ. ಉಳಿದ ಅಂಶಗಳು ಹೇಗಾದರೂ

ಇರಲಿ ಒಳ್ಳೆ ಕಥೆಯು ಇದ್ದುದಾದರೆ ಚಿತ್ರಗಳು ಜನಪ್ರಿಯವಾಗಬಲ್ಲವು ಎಂಬುದು ದಕ್ಷಿಣ ಭಾರತದ ನಿರ್ಮಾಪಕರು ಹಿಂದೀ ಚಲಚ್ಚಿತ್ರ ರಂಗದಲ್ಲಿ ಪಡೆಯುತ್ತಿರುವ ಪ್ರಸಿದ್ಧಿಯಿಂದ ಸಿದ್ಧವಾಗುತ್ತದೆ. ದಕ್ಷಿಣ ಭಾರತದ ನಿರ್ಮಾಪಕರಿಗೆ ಕುಟುಂಬದ ಎಲ್ಲ ಜನರನ್ನೂ ಆಕರ್ಷಿಸಿ ಅವರಿಗೆ ಯೋಗ್ಯ ಮನೋರಂಜನೆಯನ್ನು ನೀಡುವ ಕಲೆಯು ಕರಗತವಾಗಿರುವದರಿಂದಲೆ ಹಿಂದೀ ಚಲಚ್ಚಿತ್ರ ರಂಗದಲ್ಲಿ ಅವರು ಮೆಲ್ಲಮೆಲ್ಲನೆ ಮುಂದುವರಿಯುತ್ತಿದ್ದಾರೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು.

ಸಾಮಾನ್ಯ ಚಿತ್ರಗಳಲ್ಲಿ ಕಥೆಗೆ ವಿಶೇಷ ಪ್ರಾಮುಖ್ಯವಿರದೆ ಇತರ ಅಂಶಗಳಾದ ಸಂಗೀತ, ನೃತ್ಯ ಮತ್ತು ಅಶ್ಲೀಲ ಇಲ್ಲವೆ ದ್ವಂದ್ವಾರ್ಥದ ಸಂಭಾಷಣೆ ಇವುಗಳಿಗೆ ಮಾತ್ರ ಹೆಚ್ಚು ಗಮನ ಕೊಡಲಾಗುತ್ತದೆ:— ಬರಸಾತಕೀ ರಾತ, ಕಲ್ಪನಾ ಚಿತ್ರಗಳನ್ನು ತೆಗೆದುಕೊಳ್ಳಬಹುದು. ಆರ್. ಚಂದ್ರ ಇವರು ನಿರ್ಮಿಸಿದ ಬರಸಾತಕೀ ರಾತ ಚಿತ್ರಕ್ಕೆ ರೋಷನ್ನರ ಸಂಗೀತವೇ ಜೀವನಾಡಿಯಾಗಿದ್ದರೆ ನಟ ಅಶೋಕಕುಮಾರರಿಂದ ನಿರ್ಮಿಸಲ್ಪಟ್ಟ "ಕಲ್ಪನಾ" ಚಿತ್ರಕ್ಕೆ ಪದ್ಮಿನಿ-ರಾಗಿಣಿಯರ ನೃತ್ಯವೇ ಮುಖ್ಯ ಆಕರ್ಷಣೆಯಾಗಿರುತ್ತದೆ.

ಈ ವರ್ಷದಲ್ಲಿ ಸಂಪೂರ್ಣ ಬಣ್ಣದಲ್ಲಿ ಅನೇಕ ಚಿತ್ರಗಳು ತಯಾರಿಸಲ್ಪಟ್ಟವೆ. ಅವುಗಳಲ್ಲಿ ಅನುಪಮ ಚಿತ್ರದವರ "ಪ್ಯಾರಕೀ ಪ್ಯಾಸ" (ಸಿನೆಮಾ ಸ್ಕೋಪ) ಫಿಲ್ಮಾಲಯದವರ "ಹಮ್ ಹಿಂದುಸ್ತಾನಿ" ಥಾಯಿ ಇನ್ಸ್ಪಿರೇಶನ್ ಸರ್ವಿಸದವರ "ಅಂಗೂಲಿಮಾಲಾ" ವಾಡಿಯಾರವರ "ಸಂಪೂರ್ಣ ರಾಮಾಯಣ" ಮತ್ತು "ಝುಬಕ್" ಇವು ಮುಖ್ಯವಾಗಿವೆ.

"ಪ್ಯಾರಕೀ ಪ್ಯಾಸ" ಚಿತ್ರವು ಭಾರತದಲ್ಲಿ ತಯಾರಿಸಲ್ಪಟ್ಟ ಸಿನೆಮಾಸ್ಕೋಪ ಚಿತ್ರಗಳಲ್ಲಿ ಎರಡನೆಯದಾಗಿದ್ದರೂ ಬಣ್ಣದಲ್ಲಿ (ಗೇವಾಕಲರ್) ನಿರ್ಮಿಸಲ್ಪಟ್ಟ ಚಿತ್ರಗಳಲ್ಲಿ ಮೊದಲನೆಯದಾಗಿದೆ. ಈ ಮೊದಲು ನಟ-ನಿರ್ಮಾಪಕ-ನಿರ್ದೇಶಕ ಗುರುದತ್ತರು "ಕಾಗಜಕೆ ಫೂಲ್" ಎಂಬ ಪ್ರಥಮ ಸಿನೆಮಾಸ್ಕೋಪ ಚಿತ್ರವನ್ನು ತಯಾರಿಸಿದ್ದುಂಟು. ಹುಟ್ಟಿದಾಗಲೆ ತಂದೆ-ತಾಯಿಗಳನ್ನು ಕಳೆದುಕೊಂಡ ಚಿಕ್ಕ ಬಾಲಿಕೆಯೊಬ್ಬಳು ತನ್ನನ್ನು ಮಗಳಾಗಿ ಸ್ವೀಕರಿಸಿದ ದಂಪತಿಗಳು ತಮಗೆ ಕೂಸು ಹುಟ್ಟಿದ ಕೂಡಲೆ ತನ್ನನ್ನು ಅಲಕ್ಷಿಸಿದ್ದನ್ನು ನೋಡಿ ಮನೆ ಬಿಟ್ಟು ಹೋದಾಗ ಈ ದಂಪತಿಗಳು ಪಶ್ಚಾತ್ತಾಪಪಟ್ಟು ಅವಳನ್ನು ತಿರುಗಿ ಮನೆಗೆ ಕರೆದುತರುವದೇ "ಪ್ಯಾರಕೀ ಪ್ಯಾಸ"ದ ಕಥಾವಸ್ತುವಾಗಿರುತ್ತದೆ. ಪ್ರಸಿದ್ಧ ಕಥಾಲೇಖಕರಾದ ಪಂ. ಮುಖರಾಮ ಶರ್ಮರ ಲೇಖನಿಯಿಂದ ಈ ಕಥೆಯು ಹೊರಬಿದ್ದದೆ.

ಇಷ್ಟೆಲ್ಲ ಚಿತ್ರಗಳು ಬಣ್ಣದಲ್ಲಿ ನಿರ್ಮಿಸಲ್ಪಟ್ಟಿದ್ದರೂ ಒಂದಾದರೂ ಟೆಕ್ನಿಕಲರದಲ್ಲಿ ಇರುವದಿಲ್ಲ. ಎಲ್ಲವೂ ಗೇವಾಕಲರದಲ್ಲಿ ಇರುತ್ತವೆ. ಬಹುಶಃ ದೀಪಾವಳಿಗೆ ಬಿಡುಗಡೆಯಾಗಲಿರುವ ದಿಲೀಪಕುಮಾರರ "ಗಂಗಾ ಜಮುನಾ" ಟೆಕ್ನಿಕಲರದಲ್ಲಿ ಈ ವರ್ಷದಲ್ಲಿ ತಯಾರಾದ ಪ್ರಥಮ ಹಿಂದೀ ಚಿತ್ರವೆನ್ನಬಹುದು.

ಈ ವರ್ಷದಲ್ಲಿ ಮತ್ತೆ ಕೆಲ ಚಲಚ್ಚಿತ್ರ ನಟರು ನಿರ್ಮಾಪಕಪಟ್ಟಕ್ಕೆ ಏರಿದ್ದಾರೆ. ದಿಲೀಪಕುಮಾರ (ಗಂಗಾ ಜಮುನ), ಸುನಿಲ ದತ್ತ (ಮುಝೆ ಜೀನೆ ದೋ) ಮತ್ತು ಅನ್ವರ ಹುಸೇನ (ರಾತ್ ಔರ ದಿನ್). ಈಗಾಗಲೆ ನಿರ್ಮಾಪಕ ವರ್ಗಕ್ಕೆ ಸೇರಿದ ನಟರಲ್ಲಿ ಮುಖ್ಯರೆಂದರೆ ರಾಜಕಪೂರ, ದೇವಆನಂದ, ಗುರುದತ್, ಶಾಂತಾರಾಮ, ಪ್ರದೀಪಕುಮಾರ, ಕಿಶೋರಕುಮಾರ ಮತ್ತು ಅಶೋಕಕುಮಾರ.

ಈ ವರ್ಷದಲ್ಲಿ ರಾಜಕಪೂರ ಮತ್ತು (ಜಿಸ್ ದೇಶ ಮೇ ಗಂಗಾ ಬಹತಿ ಹೈ), ದೇವಆನಂದ (ಹಮ್ ದೋನೊ) ಇವರ ಅಭಿನಯವು ಉತ್ಕೃಷ್ಟವಾಗಿದೆ. ರಾಜಕಪೂರ ಲಾವಣಿಕಾರನ ಪಾತ್ರದಲ್ಲಿ ಮತ್ತು ದೇವಆನಂದನು ದ್ವಿಪಾತ್ರದಲ್ಲಿ ಉಚ್ಚಮಟ್ಟದ ಅಭಿನಯವನ್ನು ನೀಡಿದ್ದಾರೆ. ರಾಜೇಂದ್ರಕುಮಾರನೂ ತನ್ನ ಮಟ್ಟವನ್ನು ಕಾಯ್ದುಕೊಂಡಿದ್ದು ಅವನು ಅಭಿನಯಿಸಿರುವ ಎರಡು (ಕಾನೂನು ಮತ್ತು ಸಸುರಾಲ) ರಜತಮಹೋತ್ಸವನ್ನು ಆಚರಿಸಿರುತ್ತವೆ. ಉದಯೋನ್ಮುಖ ನಟರಲ್ಲಿ ಶಶಿಕಪೂರ (ಚಾರ್ ದಿವಾರಿ) ಮತ್ತು ಜಾಯ ಮುಕರ್ಜಿ (ಹಮ್ ಹಿಂದುಸ್ತಾನಿ) ಇವರ ಹೆಸರು ಉಲ್ಲೇಖನೀಯವಾಗಿದೆ. ಶಶಿಕಪೂರರು ರಾಜಕಪೂರ, ಶಮ್ಮಿಕಪೂರರಂತೆ ಪೃಥ್ವಿರಾಜರ ಮಕ್ಕಳಾಗಿದ್ದು ರಂಗಭೂಮಿಯಲ್ಲಿ ಅನುಭವ ಪಡೆದರುವರು. ಫಿಲ್ಮಾಲಯದ ಎಸ್. ಮುಖರ್ಜಿಯವರು ಬಹುಬೇಗ ತಾರಾಪಟ್ಟಕ್ಕೆ ಏರಿದ್ದು ಅವರಿಗೆ ಅನೇಕ ಬೇಡಿಕೆಗಳು ಬರಲಾರಂಭಿಸಿವೆ.

ನಟಿಯರಲ್ಲಿ ಬೀನಾರಾಯ (ಘೂಂಘಟ), ಪದ್ಮಿನಿ (ಜಿಸ್ ದೇಶಮೇ ಗಂಗಾಬಹತೀಹೈ), ನಂದಾ (ಹಂ ದೋನೊ), ಆಶಾಪರೇಖ (ಘರಾನಾ), ಸಾಧನಾ (ಪರಖ್ ಮತ್ತು ಹಂ ದೋನೊ), ಬಿ.ಸರೋಜಾದೇವಿ (ಸಸುರಾಲ), ವೈಜಯಂತಿಮಾಲಾ (ನಜರಾನಾ) ಮತ್ತು ಮೀನಾ ಕುಮಾರಿ (ಪ್ಯಾರಕೀ ಸಾಗರ) ಇವರು ಈ ವರ್ಷ ಮುಂಭಾಗದಲ್ಲಿದ್ದಾರೆ. ಬಿ.ಸರೋಜದೇವಿಯು ಕನ್ನಡತಿಯಾಗಿದ್ದು ಸಸುರಾಲ ಚಿತ್ರದ ಮೂಲಕ ಹಿಂದೀ ಚಿತ್ರರಂಗದಲ್ಲಿ ದೊಡ್ಡ ಸ್ಥಾನ ಗಳಿಸಿದ್ದಾಳೆ.


ಡೇಸಿ ಇರಾಣಿ (ಪ್ಯಾರಕೀ ಪ್ಯಾಸ್) ಮತ್ತು ಸೋನು (ಕಾಬೂಲಿವಾಲಾ) ಇವರು ಉತ್ತಮ ಬಾಲ ನಟರೆಂದು ಪ್ರಸಿದ್ಧ ಪಡೆದಿದ್ದಾರೆ.

ವರದಿಯ ವರ್ಷದಲ್ಲಿ ಇಬ್ಬರು ನಟಿಯರು ಚಿತ್ರರಂಗದಿಂದ ನಿವೃತ್ತರಾಗಿದ್ದಾರೆ. ಅವರಾರೆಂದರೆ ಹೊಸದಾಗಿ ಮದುವೆಯಾದ ನೂತನ ಮತ್ತು ನೃತ್ಯತಾರೆ ಪದ್ಮಿನಿ. ಈ ಮೊದಲು ವೈವಾಹಿಕ ಜೀವನದಲ್ಲಿ ಕಾಲಿಟ್ಟಿದ್ದ ಬೀನಾರಾಯ್, ಉಷಾಕಿರಣ, ನರ್ಗಿಸ ಮತ್ತು ಕಲ್ಪನಾಕಾರ್ತಿಕ ಇವರಲ್ಲಿ ಕೊನೆಯವಳನ್ನು ಬಿಟ್ಟು ಉಳಿದವರೆಲ್ಲರೂ ಸಿನೇಮಾ ರಂಗಕ್ಕೆ ಹಿಂತಿರುಗಿದ್ದಾರೆ.

ಅಸ್ವಸ್ಥತೆಯ ಮೂಲಕ ನಟಿ- ಮಧುಬಾಲಾಳು ಶಾಶ್ವತವಾಗಿ ಚಿತ್ರರಂಗದಿಂದ ನಿವೃತ್ತಳಾದಂತಾಗಿದೆ.

ಕೆ. ಆಸೀಫರ "ಮೊಗಲೆ ಆಜಂ" ಎಂಬ ಭವ್ಯ ಚಿತ್ರವು ೧೯೬೦ ಆಗಸ್ಟದಿಂದ ಮುಂಬೈ

'ಹಮ್ ದೋನೋ'ದಲ್ಲಿ ಸಾಧನಾ ಮತ್ತು ದೇವ ಆನಂದರು.



ಯಲ್ಲಿ ಸತತವಾಗಿ ನಡೆಯುತ್ತ ವಿಕ್ರಮವನ್ನು ಸ್ಥಾಪಿಸಿರುತ್ತದೆ.


ಈ ವರ್ಷದಲ್ಲಿ ಬೆಳಕಿಗೆ ಬಂದಿರುವ ಹೊಸ ದಿಗ್ದರ್ಶಕರಲ್ಲಿ ರಾಘು ಕರ್ಮಾಕರ (ಜಿಸ್ ದೇಶ ಮೆ) ಮತ್ತು ಅಮರಜೀತ (ಹಮ್ ದೋನೊ) ಇವರು ಮುಖ್ಯರಾಗಿದ್ದಾರೆ.

ಸಂಗೀತ ನಿರ್ದೇಶಕರಲ್ಲಿ ಹಳೆಯ "ಹುಲಿ"ಗಳಾದ ನೌಶಾದ, ಓ.ಪಿ. ನಯ್ಯರ, ಎಸ್.ಡಿ. ಬರ್ಮನ್, ವಸಂತದೇಸಾಯಿ, ಸಿ. ರಾಮಚಂದ್ರ, ಸಲೀಲ ಚೌಧರಿ ಮತ್ತು ಮದನ ಮೋಹನ ಇವರು ಒಂದೊ, ಎರಡೊ ಚಿತ್ರಗಳಿಗೆ ಸಂಗೀತ ನೀಡುತ್ತಿದ್ದರೆ ಕೇವಲ ನಾಲ್ಕು ಸಂಗೀತ ನಿರ್ದೇಶಕರಿಗೆ ಮಾತ್ರ ಬಹಳ ಬೇಡಿಕೆಯಿದ್ದು ಅವರಿಗೆ ಕೈತುಂಬ ಕೆಲಸವಿದೆ. ಶಕೀಲಾಬಾನು ಭೋಪಾಳಿ ಈ ವರುಷ ಹೊಸ ಸಂಗೀತ ದಿಗ್ದರ್ಶಕಿಯಾಗಿ ಚಿತ್ರರಂಗ ಪ್ರವೇಶಿಸಿದ್ದಾಳೆ. ಪ್ರಾಶಸ್ತ್ಯಾನುಸಾರವಾಗಿ ಅವರಹೆಸರುಗಳು ಇಂತಿವೆ:— ಚಿತ್ರಗುಪ್ತ, ರವಿ, ಶಂಕರ-ಜಯಕಿಶನ್ ಮತ್ತು ಎನ್. ದತ್ತಾ. ಶಂಕರ-ಜಯಕಿಶನ್ನರು ಸಂಗೀತ ನೀಡಿದ ಎರಡು ಚಿತ್ರಗಳು (ಜಿಸ್ ದೇಶಮೆ ಹಾಗು ಸಸುರಾಲ) ರಜತೋತ್ಸವ ಆಚರಿಸಿವೆ.

ಈ ವರ್ಷದಲ್ಲಿ ಇಬ್ಬರು ಭಾರತೀಯರು ಅಂತಾರಾಷ್ಟ್ರೀಯ ಚಲಚ್ಚಿತ್ರ ರಂಗದಲ್ಲಿ ಭಾರತದ ಹೆಸರನ್ನು ಮೆರೆಸಿದ್ದಾರೆ. ಅವರಾರೆಂದರೆ ನಟ ಐ. ಎಸ್. ಜೋಹರ ಮತ್ತು ನಿರ್ಮಾಪಕ ಇಸ್ಮಾಯಲ್ ಮರ್ಚಂಟ. ಈ ಮೊದಲು "ಹ್ಯಾರಿ ಬ್ಲಾಕ್ ಅಂಡ ದಿ ಟೈಗರ್" ಎಂಬ ಇಂಗ್ಲೀಷಚಿತ್ರದ ಮೂಲಕ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಕಾಲಿಟ್ಟ ಜೋಹರನು ಈಗ ಡೇವಿಡ್ ಲೀನ್ ಇವರು ದಿಗ್ದರ್ಶಿಸುತ್ತಿರುವ "ಲಾರೆನ್ಸ ಅಫ್ ಅರೇಬಿಯಾ" ಎಂಬ ಇಂಗ್ಲೀಷ ಚಿತ್ರದಲ್ಲಿ ಅಭಿನಯಿಸಿದ್ದಾನೆ. ಈ ಚಿತ್ರದಲ್ಲಿ ಅಲೆಕ್ ಗೈನನೆಸ್ ಎಂಬ ಪ್ರಸಿದ್ಧ ಆಂಗ್ಲ ನಟನಿದ್ದಾನೆ.

೨೬ ವರ್ಷದ ಇಸ್ಮಾಯಿಲ ಮರ್ಚಂಟನು ಹಾಲಿವುಡ್ಡದಲ್ಲಿದ್ದುಕೊಂಡು ಈಗಾಗಲೇ "ಕ್ರಿಯೇಶನ್ ಅಫ್ ವುಮನ್" ಎಂಬ ಚಿತ್ರವನ್ನು ನಿರ್ಮಿಸಿದ್ದು ಈ ಚಿತ್ರವು ಅಮೇರಿಕೆಯ ಪರವಾಗಿ "ಆಸ್ಕಾರ" ಬಹುಮಾನಕ್ಕೆ ಸ್ಪರ್ಧಿಸಿದ ಚಿತ್ರಗಳಲ್ಲೊಂದಾಗಿತ್ತು. ಇದಲ್ಲದೆ ಕ್ಯಾನೆಸದಲ್ಲಿ ಜರುಗಿದ ಅಂತಾರಾಷ್ಟ್ರೀಯ ಚಲಚ್ಚಿತ್ರೋತ್ಸವದಲ್ಲಿ ಮನ್ನಣೆಯನ್ನು ಪಡೆದಿರುತ್ತದೆ. ತನಗೆ ದೊರೆತ ಈ ಪ್ರೋತ್ಸಾಹದಿಂದ ಇಸ್ಮಾಯಿಲನು ಉತ್ತೇಜಿತನಾಗಿ ಅಮೇರಿಕನ ನಿರ್ಮಾಪಕರ ಸಹಕಾರದಿಂದ "ದೇವಪುರ್" ಎಂಬ ಹಿಂದೀ ಚಿತ್ರವನ್ನು ಭಾರತದಲ್ಲಿ ನಿರ್ಮಿಸಲು ಸಿದ್ಧತೆ ನಡೆಸಿರುವನು. ಈ ಚಿತ್ರದಲ್ಲಿ ಸೌಂದರ್ಯರಾಣಿ ನಾಸೀಮಳ ಮಗಳು ಸಯೀರಾಬಾನು ಅಲ್ಲದೆ ಅಮೇರಿಕೆಯ ಆರ್ಟಿಸ್ಟ ಕಾಸ್ಟಲೊ





ಇವರು ಮುಖ್ಯ ಭೂಮಿಕೆಯಲ್ಲಿದ್ದಾರೆ. ಇದು ಇಂಗ್ಲೀಷ ಹಾಗು ಹಿಂದಿ ಭಾಷೆಗಳಲ್ಲಿ ತಯಾರಾಗಲಿದೆ.

ಭಾರತ ಸರಕಾರವು, ವರದಿಯ ವರ್ಷದಲ್ಲಿ ಚಲಚ್ಚಿತ್ರರಂಗದ ಸಹಾಯಕ್ಕಾಗಿ ಎರಡು ಕ್ರಮಗಳನ್ನು ಕೈಗೊಂಡಿರುತ್ತದೆ. ಪುಣೆಯಲ್ಲಿ ಫಿಲ್ಮ ಇನ್ಸಿಟಟ್ಯೂಟನ್ನು ತೆರೆದಿದ್ದು ಒಂದು, ಮತ್ತು ಚಲಚ್ಚಿತ್ರ ಹಣಕಾಸಿನ ಸಂಸ್ಥೆಯನ್ನು ಸ್ಥಾಪಿಸಿದ್ದು ಇನ್ನೊಂದು ಫಿಲ್ಮ ಇನ್ಸಿಟ್ಯೂಟಕ್ಕೆ ಗಜಾನನ ಜಹಗೀರದಾರರು ಪ್ರಿನ್ಸಿಪಾಲರಾಗಿದ್ದು ಇದು ಚಲಚ್ಚಿತ್ರ ಉದ್ದಿಮೆಗೆ ತಂತ್ರಜ್ಞರಿಗೆ ತರಬೇತಿ ನೀಡುವದು. ಕ್ರಮೇಣ ನಟ ವರ್ಗವನ್ನೂ ಸಿದ್ಧಗೊಳಿಸುವ ವಿಚಾರವಿದೆ. ಹಣಕಾಸಿನ ಸಂಸ್ಥೆಯು ಚಲಚ್ಚಿತ್ರಗಳ ನಿರ್ಮಾಣಕ್ಕೆ ಅವಶ್ಯವಿರುವ ಹಣಕಾಸನ್ನು ಒದಗಿಸುತ್ತದೆ.

೧೯೬೧ ರ ಅಕ್ಟೋಬರ ೨೭ ಭಾರತದ ಚಲಚ್ಚಿತ್ರರಂಗದ ಇತಿಹಾಸದಲ್ಲಿ ಚಿರಸ್ಮರಣೀಯ ದಿನವಾಗಿರುತ್ತದೆ. ಅಂದು ಹೊಸದಿಲ್ಲಿಯಲ್ಲಿ ಅಂತಾರಾಷ್ಟ್ರೀಯ ಚಲಚ್ಚಿತ್ರ ಮಹೋತ್ಸವವು ಉದ್ಘಾಟಿಸಲ್ಪಟ್ಟಿತು. ಭಾರತದಲ್ಲಿ ಸಂಘಟಿಸಲ್ಪಡುತ್ತಿರುವ ಅಂತಾರಾಷ್ಟ್ರೀಯ ಮಟ್ಟದ ದ್ವಿತೀಯ ಚಲಚ್ಚಿತ್ರೋತ್ಸವದಲ್ಲಿ ೩೭ ರಾಷ್ಟ್ರಗಳು ಭಾಗವಹಿಸಿವೆ. ೧೯೫೨ ರಲ್ಲಿ ನಡೆದ ಪ್ರಥಮ ಚಲಚ್ಚಿತ್ರೋತ್ಸವದಲ್ಲಿ ೨೩ ರಾಷ್ಟ್ರಗಳು ಮಾತ್ರ ಭಾಗವಹಿಸಿದ್ದವು.

ಇದೇ ಅಗಸ್ಟ ತಿಂಗಳಲ್ಲಿ ಇಂಡೋನೇಶಿಯದಲ್ಲಿ ಜರುಗಿದ ಭಾರತೀಯ ಚಿತ್ರಗಳ ಮಹೋತ್ಸವ ಹಾಗೂ ಹೊಸದಿಲ್ಲಿಯಲ್ಲಿ ನಡೆದ ಅಂತಾರಾಷ್ಟ್ರೀಯ ಮಹೋತ್ಸವ ಭಾರತೀಯ ಚಲಚ್ಚಿತ್ರಗಳಿಗೆ ವಿದೇಶಗಳಲ್ಲಿ ಬೇಡಿಕೆಗಳನ್ನು ತರುವದರಲ್ಲಿವೆ. ಚಲಚ್ಚಿತ್ರಗಳ ಮಟ್ಟವು ಹೆಚ್ಚುವದಕ್ಕೆ ಇವು ಸಹಾಯಕವಾಗುವವೆಂದೂ ಆಶಿಸಲಾಗಿದೆ. ●

'ಪ್ಯಾರ ಕಿ ಪ್ಯಾಸ' ದಲ್ಲಿ ಶ್ರೀಕಾಂತ ಗೌರಬ, ಡೇಶಿ ಇರಾಣಿ ಮತ್ತು ನಿಶಿ



ಕಾಳಿದಾಸನ ಕಾಲದಲ್ಲಿಯೂ ಪತ್ರಿಕೆಗಳಿದ್ದುವು!

ಸಂಶೋಧಕರು:
ಲಾಂಗೂಲಾಚಾರ್ಯ

ಪ್ರಪಂಚದ ಸಮಸ್ತವಿದ್ಯೆಗಳೂ ಶಾಸ್ತ್ರಗಳೂ ಜ್ಞಾನವೂ ಭಾರತದಲ್ಲೇ, ಅದರಲ್ಲೂ ಕರ್ನಾಟಕದಲ್ಲೇ ಹುಟ್ಟಿ ದೇಶದೇಶಾಂತರಗಳಿಗೆ ಹಬ್ಬಿವೆ ಎಂಬುದನ್ನು ಕರ್ನಾಟಕ ಮಾತೆಯ ಮತ್ತು ಭಾರತಮಾತಾಮಹಿಯ ಸದ್ಭಕ್ತರೆಲ್ಲ ಬಲ್ಲರು. ಈ ದೃಷಿ ಯಿಂದ ನಾನು ಅನೇಕ ಸಂಶೋಧನೆಗಳನ್ನು ನಡೆಸಿದ್ದೇನೆ. ಅದರಲ್ಲಿ ಹೊರಪಟ್ಟ ಅಗಾಧವೂ ಅದ್ಭುತವೂ ಆದ ಕೆಲ ವಿಷಯಗಳನ್ನು ವಾಚಕರ ಮುಂದೆ ಇರಿಸಲು ಸಂಪಾದಕರು ಕೇಳಿಕೊಂಡದ್ದರಿಂದ ಇಲ್ಲಿ ಅವುಗಳನ್ನು ವಿವರಿಸುತ್ತೇನೆ. ನನ್ನೀ ಸಂಶೋಧನೆಗಳ ಪರಿಣಾಮಗಳನ್ನು ಒಪ್ಪದ ಅನೇಕ ವಿದ್ವಾಂಸರು ಇರಬಹುದು. ಅವರಿಗೆ ತಮ್ಮ ಅಭಿಪ್ರಾಯಗಳಿಗೆ ಜಿಗಳೆಗಳಂತೆ ಅಂಟಿಕೊಳ್ಳುವ ಸ್ವಾತಂತ್ರ್ಯವಿದೆ. ಆದರೆ ಅವರು ಅಭಿಮಾನ್ಯಶೂನ್ಯರಾದ ದೇಶದ್ರೋಹಿಗಳೆಂದು ನಾನು ಖಡಾಖಂಡಿತ ಹೇಳಬಯಸುತ್ತೇನೆ; -ಬಯಸುವುದೇನು, ಹೇಳಿಯೇ ಬಿಡುತ್ತೇನೆ. ದೇಶಾಭಿಮಾನಿಯಾದ ಪ್ರತಿಯೊಬ್ಬನೂ ನನ್ನ ಅಭಿಪ್ರಾಯವನ್ನು ಒಪ್ಪುತ್ತಾನೆಂದು ನನಗೆ ವಿಶ್ವಾಸವಿದೆ.

ಯೇ ದ್ವೇ ಕಾಲಂ ವಿಧತ್ತಃ

ಪತ್ರಿಕೋದ್ಯೋಗವು ಪಾಶ್ಚಾತ್ಯದೇಶಗಳಲ್ಲಿ ಹುಟ್ಟಿತೆಂದೂ ಇತ್ತೀಚೆಗೆ ಅದನ್ನು ನಾವು ಅವರಿಂದ ಸ್ವೀಕರಿಸಿದ್ದೇವೆಂದೂ ಸಾಮಾನ್ಯವಾಗಿ ತಿಳುವಳಿಕೆಯಿದೆ. ಆದರೆ ಸರಸ್ವತಿಯ ಪರಮಾರಾಧಕರಾದ ನಮಗೆ ಅಂದರೆ ನಮ್ಮ ಪೂರ್ವಜರಿಗೆ ಪತ್ರಿಕೋದ್ಯೋಗದ ಕಲ್ಪನೆ ಹೊಳೆದಿರಲಿಲ್ಲವೆಂದು ನಂಬುವುದು ನನಗೆ ಅತ್ಯಂತ ಅಸಹಜವೆನಿಸಿದ್ದರಿಂದ ನಮ್ಮ ಪ್ರಾಚೀನ ಗ್ರಂಥಗಳನ್ನು ಗಾಢವಾಗಿ ಶೋಧಿಸತೊಡಗಿದೆ. ನನ್ನ ಶ್ರಮ ವ್ಯರ್ಥವಾಗಲಿಲ್ಲೆಂದು ಹೇಳಲು ಆನಂದವಾಗುತ್ತದೆ. ಕಾಳಿದಾಸ ಮಹಾಕವಿಯ ಕಾಲದಲ್ಲಿ ಪತ್ರಿಕೋದ್ಯಮವು ಅತ್ಯಂತ ಉತ್ಕರ್ಷಾವಸ್ಥೆಯಲ್ಲಿತ್ತೆಂಬುದಕ್ಕೆ ನನಗೆ ಪ್ರಮಾಣದೊರೆತಿದೆ.

ಕಾಳಿದಾಸನ ಈ ಮಂಗಳಾಚರಣ ಶ್ಲೋಕ[೧] ಯಾರಿಗೆ ಗೊತ್ತಿಲ್ಲ?—

" ಯಾ ಸೃಷ್ಟಿಃ ಸ್ರಷ್ಟುರಾದ್ಯಾ . . .
ಯೇ ದ್ವೇ ಕಾಲಂ ವಿಧತ್ತಃ
ಶ್ರುತಿವಿಷಯಗುಣಾ . . . "

ಈ ಶ್ಲೋಕದಲ್ಲಿ "ಯೇ ದ್ವೇ ಕಾಲಂ ವಿಧತ್ತಃ" ಎಂದರೇನು?

ಪತ್ರಿಕೋದ್ಯೋಗದ ಗಂಧವಿದ್ದವರಿಗೆ (ಈ ಗಂಧ ಯಾವಾಗಲೂ ,ಸುಗಂಧವಾಗಿರುತ್ತದೆಂಬ ನಿಯಮವಿಲ್ಲದಿದ್ದರೂ) ಕೂಡ "ಕಾಲಂ" ಎಂದರೇನೆಂದು ಗೊತ್ತಿರಬೇಕು. ಪತ್ರಿಕೆಗಳಲ್ಲಿ ವಿಷಯಗಳನ್ನು ಚಿಕ್ಕ ಚಿಕ್ಕ ಸಾಲುಗಳಲ್ಲಿ ಕಂಬಗಳ ಹಾಗೆ ಕೊಡುತ್ತಾರಲ್ಲ, ಅದೇ ಕಾಲಂ. ಕಾಳಿದಾಸ ಈ ಶ್ಲೋಕದಲ್ಲಿ "ಯೇ ದ್ವೇ ಕಾಲಂ ವಿಧತ್ತಃ" ಅಂದರೆ ಎರಡು ಕಾಲಂ ಮಾಡುವವರ ವಿಚಾರ ಪ್ರಸ್ತಾಪಿಸಿದ್ದಾನೆ. ಎರಡು ಕಾಲಂ ಮಾಡುವವರು ಎಂದರೆ ಪತ್ರಿಕೆಯವರೇ ಇರಬೇಕು ಎಂಬಲ್ಲಿ ಸಂಶಯವೇ ಇಲ್ಲ.

ಎರಡು ಕಾಲಂ ಮಾಡುವವರೇ ಏಕೆ? ಎಂದು ಯಾರಾದರೂ ಕೇಳಬಹುದು. ಪತ್ರಿಕೆಗಳಲ್ಲಿ ಅಗ್ರಲೇಖಗಳು ಹೆಚ್ಚಾಗಿ ಎರಡು ಕಾಲಂಗಳಷ್ಟು ಇರುತ್ತವೆಂಬುದು ಸರ್ವವಿದಿತವಾಗಿದೆ. ಕಾಳಿದಾಸ ಈ ಅಗ್ರಲೇಖಗಳನ್ನು ಬರೆಯುವ ಸಂಪಾದಕರನ್ನು ಕುರಿತು ಹೇಳುತ್ತಿರಬಹುದು. ಅದೇ ಪ್ರಕಾರ ಒಳ್ಳೇ ಉಪಸಂಪಾದಕ ಅಥವಾ ಸುದ್ದಿಗಾರ ಒಂದು ದಿನಕ್ಕೆ ಎರಡು ಕಾಲಂ ಸುದ್ದಿಗಳನ್ನು ಹೊಂದಿಸಿಕೊಟ್ಟುಬಿಟ್ಟರೆ ಪ್ರಾಮಾಣಿಕವಾಗಿ ದುಡಿದು ಬಿಟ್ಟದ್ದಾನೆಂಬ ಅಭಿಪ್ರಾಯ ಪತ್ರಿಕಾವೃತ್ತಿಯವರಲ್ಲಿದೆಯೆಂದು ,ತಿಳಿದುಬರುತ್ತಿದೆ. ನನ್ನ ಅಭಿಪ್ರಾಯದಲ್ಲಿ ಕಾಳಿದಾಸನು ಇವರನ್ನು ಕುರಿತೇ ಹೇಳುತ್ತಿರಬೇಕು.

ಏಕೆಂದರೆ ಹಾಗೇ ಮುಂದುವರಿದು ಮಹಾಕವಿ "ಶ್ರುತಿವಿಷಯಗುಣಾ" ಎನ್ನುತ್ತಾನೆ. ಶ್ರುತಿವಿಷಯ ಎಂದರೆ ಕೇಳಿದ ಸಂಗತಿಯೆಂದರ್ಥವಾಗುತ್ತದೆ. ಕೇಳಿದ ಸಂಗತಿಗಳನ್ನು ಎರಡು ಕಾಲಂ ಮಾಡಿ ಕೊಡುವವನು ಸುದ್ದಿಗಾರನೇ ಇರಬೇಕು.

ಮೇಲಿನ ವಿವೇಚನೆಯಿಂದ ಕಾಳಿದಾಸನ ಕಾಲದಲ್ಲಿ ಪತ್ರಿಕೋದ್ಯಮವಿತ್ತೆಂದು ನಿಸ್ಸಂದಿಗ್ಧವಾಗಿ ಸಿದ್ಧವಾಗುತ್ತದೆ. ಅಷ್ಟು ಮಾತ್ರವಲ್ಲ, ಈ ವೃತ್ತಿಗೆ ಅತ್ಯಂತ ಗೌರವವಿತ್ತೆಂದು ಕೂಡ ನಾವು ತರ್ಕಿಸಬಹುದು. ಕಾಳಿದಾಸನು ಮಂಗಳಾಚರಣ ಶ್ಲೋಕದಲ್ಲೇ ಪತ್ರಿಕೋದ್ಯೋಗಿಗಳ ಪ್ರಸ್ತಾಪವೆತ್ತಿದ್ದಾನೆಂಬುದೊಂದೇ ಈ ತರ್ಕಕ್ಕೆ ಸಾಕಷ್ಟು ಪುಷ್ಟಿ ಕೊಡುತ್ತದೆ.

ಆದರೆ ಕಾಳಿದಾಸ ಅದಕ್ಕಿಂತಲೂ ಮುಂದೆ ಹೋಗಿ ಪತ್ರಿಕೋದ್ಯೋಗವನ್ನು ಈಶ್ವರನ ಎಂಟು ವಿಭೂತಿ[೨]ಗಳಲ್ಲಿ ಸೇರಿಸಿದ್ದಾನೆ. ನೆಪೋಲಿಯನ್ನನು ಪತ್ರಿಕೋದ್ಯೋಗಿಗಳನ್ನು Fourth Estate ಎಂದು ಉಲ್ಲೇಖಿಸಿದ್ದನ್ನು ಇಲ್ಲಿ ನೆನೆದುಕೊಳ್ಳಬಹುದು.

ಈಗ, ಕಾಳಿದಾಸನು ಕ್ರಿ. ಪೂ. ಒಂದನೇ ಶತಮಾನದಿಂದ ಕ್ರಿ. ಶ. ಐದನೇ ಶತಮಾನದವರೆಗಿನ ಯಾವುದಾದರೊಂದು ಕಾಲದಲ್ಲಿ ಜೀವಿಸಿದ್ದನೆಂದು ಬೇರೆ ಬೇರೆ ಪಂಡಿತರು ಪ್ರತಿಪಾದಿಸಿದ್ದಾರೆ. (ನನ್ನ ಅಭಿಪ್ರಾಯದಲ್ಲಿ ಕಾಳಿದಾಸನು ಇವೆಲ್ಲ ಕಾಲಗಳಲ್ಲಿಯೂ ಬದುಕಿದ್ದನು. ಆ ಕಾಲದಲ್ಲಿ ನಮ್ಮ ಪೂರ್ವಜರು ಸಾವಿರಾರು ವರ್ಷ ಬದುಕುತ್ತಿದ್ದರು.) ಕ್ರಿ. ಶ. ಐದನೇ ಶತಮಾನದಲ್ಲೇ ಜೀವಿಸಿದ್ದನೆಂದೆಣಿಸಿದರೂ ಪತ್ರಿಕೋದ್ಯೋಗಕ್ಕೆ ನಾವು ಭಾರತೀಯರೇ ಮೂಲಪುರುಷರೆಂದಾಗುತ್ತದೆ. ಏಕೆಂದರೆ ೫ ನೇ ಶತಮಾನದಲ್ಲಿ ಯುರೋಪಿನಲ್ಲಿ ಪತ್ರಿಕೆಗಳಿದ್ದವೆಂದು ಯಾರೂ ಸಾಧಿಸುವುದಿಲ್ಲ. ಆ ಕಾಲದಲ್ಲಿ ಯುರೋಪಿನ ಬಹುಜನ ಅನಾಗರಿಕರಾಗಿದ್ದರೆಂದು ಇತಿಹಾಸ ಹೇಳುತ್ತದೆ.

ಇನ್ನು "ಕಾಲಂ" ಎಂಬುದು ಅಚ್ಚಕನ್ನಡ "ಕಾಲು" ಎಂಬುದರಿಂದ ಹುಟ್ಟಿದ ಶಬ್ದವಾದ್ದರಿಂದ ಕನ್ನಡಿಗರೇ ಭಾರತದಲ್ಲಿ ಕೂಡ ಪ್ರಥಮತಃ ಪತ್ರಿಕೋದ್ಯಮವನ್ನು ಪ್ರಾರಂಭಿಸಿದರೆಂದು ಸಿದ್ಧವಾಗುತ್ತದೆ.

ಕರ್ನಾಟಕದಲ್ಲಿ ಮೇಯರರು!

ಮಹಾಕವಿ ಪೊನ್ನನ ಏಕಮೇವ ಉಪಲಬ್ಧ ಗ್ರಂಥವಾದ ಶಾಂತಿಪುರಾಣದ ಒಂದು ಕಂದ[೩]ದಲ್ಲಿ "ಅಪ್ರಮೇಯರ ಮೇಯರ್" ಎಂಬೊಂದು ಕುತೂಹಲಜನಕ ಪದಪುಂಜ ಬರುತ್ತದೆ.

ಶಾಂತಿಪುರಾಣವನ್ನು ಅಭ್ಯಸಿಸಿದ ಪಂಡಿತರಾರೂ ಈ ಪದಗಳ ಅಸ್ತಿತ್ವದಿಂದ ಇತಿಹಾಸದ ಮೇಲೆ ಬೀಳುವ ಬೆಳಕನ್ನು ಗಮನಿಸದಿರುವುದು ಆಶ್ಚರ್ಯವಾಗಿದೆ. ತನ್ನ ಗುರುಗಳನ್ನು ಕುರಿತು ಪೊನ್ನನು ಈ ಕಂದವನ್ನು ಬರೆದಿದ್ದಾನೆ. ಆ ಗುರುಗಳು "ಅಪ್ರಮೇಯರ ಮೇಯರ್" ಎಂದೂ ಸಾರುತ್ತಾನೆ.

"ಮೇಯರ್" ಎಂದರೆ ಕಾರ್ಪೊರೇಶನ್ ಎಂದು ಕರೆಯಲ್ಪಡುವ ಮಹಾನಗರಗಳ ಮುನಸಿಪಾಲಿಟಿಗಳ ಅಧ್ಯಕ್ಷರೆಂದು ಬೇರೆ

---

೧. ಶಾಕುಂತಲ, ೧, ೧.

೨. "ತಾಭಿರಷ್ಟಾಭಿರೀಶಃ ...." ಅದೇ, ೧, ೧.

೩. ಪೊನ್ನ, ಶಾಂತಿ ಪುರಾಣ, ೧, ೪.

ಹೇಳಬೇಕಾಗಿಲ್ಲ. ಫೊನ್ನನು ತನ್ನ ಗುರುಗಳು ವಿರಕ್ತರಾಗುವ ಮೊದಲು ಮೇಯರ್ ಆಗಿದ್ದರೆಂದು ಹೇಳುವಂತೆ ಕಾಣುತ್ತದೆ. ಅವರು ಯಾವ ನಗರದ ಮೇಯರ್ ಎಂದೂ ಅವನು ಸ್ಪಷ್ಟಪಡಿಸಿದ್ದಾನೆ.

ಫೊನ್ನನ ಗುರುಗಳು ಮೇಯರರಾಗಿರಬೇಕಾದರೆ ಕನ್ನಡಿಗರಿಗೆ ಮುನಸಿಪಾಲಿಟಿ, ಕಾರ್ಪೊರೇಶನ್ ಮೊದಲಾದವುಗಳು ತೀರ ಪರಿಚಿತವಾಗಿರಬೇಕೆಂದಾಯಿತು. ಕಾರ್ಪೊರೇಶನ್ ಇಲ್ಲದೆ ಮೇಯರ್ ಹೇಗೆ ಬರಬೇಕು ?

ಈಗ "ಅಪ್ರಮೇಯರ್" ಎಂಬ ಪಟ್ಟಣ ಎಲ್ಲಿದೆ ? ನಾನು ಭಾರತದ ಪ್ರಾಚೀನ ಕಾಲದ ನಗರಗಳ ಹೆಸರುಗಳನ್ನೆಲ್ಲ ಪರಿಶೀಲಿಸಿದೆ. ಈ ಹೆಸರಿನ ನಗರ ಯಾವುದೂ ಇದ್ದಂತೆ ಕಂಡು ಬರಲಿಲ್ಲ. ಸುವ್ಯಕ್ತವಾಗಿ ಈ ನಗರವು ಭಾರತದ ಹೊರಗೆಲ್ಲೋ ಇರಬೇಕು.

ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ನಗರವು ಉತ್ತರ ಆಫ್ರಿಕದಲ್ಲೆಲ್ಲೋ ಇದ್ದಿರಬೇಕೆಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ. "ಅಪ್ರ-ಮೇಯರ್" ಎಂಬುದಾಗಿ ಮೇಲಿನ ಶಬ್ದಗಳನ್ನು ವಿಂಗಡಿಸಿದರೆ "ಅಪ್ರ-" ಎಂಬುದು "ಆಫ್ರೊ-" ಎಂಬುದರ ಸಮಾನಾರ್ಥಕಪದವಿರಬೇಕೆಂದು ಅರ್ಥವಾಗಬಲ್ಲದು.

ಮೇಲಿನ ತರ್ಕ ನಿಜವಾಗಿದ್ದರೆ ಕರ್ನಾಟಕದ ಸೀಮೆ ಉತ್ತರ ಆಫ್ರಿಕದ ವರೆಗೂ ಹಬ್ಬಿತ್ತೆಂದು ನಾವು ತಿಳಿದುಕೊಂಡರೆ ತಪ್ಪಾಗದು. ಹೀಗೆ ತಿಳಿದುಕೊಳ್ಳುವುದರಲ್ಲಿ ಅಸಂಗತವೇನೂ ಇಲ್ಲ. ಕ್ರಿ. ಶ. ಎರಡನೇ ಶತಮಾನದ ಗ್ರೀಕ ನಾಟಕವೊಂದರಲ್ಲಿ ಕನ್ನಡ ಪದಗಳು ಇವೆಯೆಂದು ಮಂ. ಗೋವಿಂದ ಪೈಗಳು ಸ್ಥಾಪಿಸಿದ್ದಾರೆ. ಉತರ ಆಫ್ರಿಕದಲ್ಲಿ ಗ್ರೀಕ ಪಂಡಿತರು ನೆಲಸಿ ವಿದ್ಯಾಭ್ಯಾಸ ಮಾಡುತ್ತಿದ್ದರೆಂಬುದು ನಮಗೆ ಗೊತ್ತಿದೆ. ಕರ್ನಾಟಕವು ಉತ್ತರ ಆಫ್ರಿಕದ ವರೆಗೆ ಹಬ್ಬಿದ್ದುದರಿಂದಲೇ ಗ್ರೀಕರು ನಮ್ಮಿಂದ ಕೆಲ ಪದಗಳನ್ನು ಹೆಕ್ಕಿಕೊಂಡಿದ್ದರೆಂದು ಗ್ರಹಿಸಬಹುದು. ಹತ್ತನೇ ಶತಮಾನದಲ್ಲಿ ಉತ್ತರ ಆಫ್ರಿಕದಲ್ಲಿ ಕರ್ನಾಟಕ ಸಾಮ್ರಾಜ್ಯವಿತ್ತೆಂದು ಕಂಡುಬರುವುದರಿಂದ ಇಜಿಪ್ತ್, ಟ್ಯುನೀಶಿಯ, ಅಲ್ಜೀರಿಯ ಮತ್ತು ಮೊರೊಕ್ಕೋಗಳ ಸದ್ಯದ ಅಧಿಕಾರಿಗಳು ಕರ್ನಾಟಕಕ್ಕೆ ಕಪ್ಪ ಕೊಡಬೇಕೆಂದು ಕೇಳುವುದು ಅಯೋಗ್ಯವಾಗಲಾರದು.

ಕತ್ತೆ ಮತ್ತು ಡಾಂಕಿ

ಕಿಟ್ಟೆಲ್ ಸಾಹೇಬರು ಸಂಸ್ಕೃತದ 'ಗರ್ದಭ' ಮತ್ತು 'ಕಾಕ' ಶಬ್ದಗಳು ಮೂಲತಃ ಸಂಸ್ಕೃತದವಲ್ಲವೆಂದೂ ಅವು ಕನ್ನಡದ "ಕತ್ತೆ" (ಹಳೆಗನ್ನಡ "ಕಟ್ತೆ") ಮತ್ತು "ಕಾಗೆ" ಶಬ್ದಗಳಿಂದ ಸಂಸ್ಕೃತಕ್ಕೆ ಹೋಗಿರಬೇಕೆಂದೂ ಪ್ರತಿಪಾದಿಸಿದ್ದಾರೆ.[೪] ಕಿಟ್ಟೆಲ್ಲರ ಅಭಿಪ್ರಾಯವನ್ನು ಸಂಸ್ಕೃತ ವಿದ್ವಾಂಸರೊಬ್ಬರ ಮುಂದೆ ನಾನು ಮಂಡಿಸಿದಾಗ ಅವರು "ಕತ್ತೆಯನ್ನೂ ಕಾಗೆಯನ್ನೂ ನೀವೇ ನಮಗೆ ಕೊಟ್ಟಿರಬೇಕೆಂದು ನನಗೂ ಅನಿಸುತ್ತದೆ. ಅದಕ್ಕೆ ಪ್ರತಿಯಾಗಿ ಕುದುರೆಯನ್ನೂ ಕೋಗಿಲೆಯನ್ನೂ ನಮ್ಮಿಂದ ನೀವು ತೆಗೆದುಕೊಂಡಿದ್ದಿರೆಂದೂ ನನ್ನ ನಂಬಿಕೆ" ಎಂದರು.

ಸದ್ಯಕ್ಕೆ ಕಾಗೆಯನ್ನು ಅದರ ಪಾಡಿಗೆ ಹಾಡಲು ಬಿಟ್ಟು ನಾನು ಕತ್ತೆಯನ್ನಷ್ಟೇ ತೆಗೆದುಕೊಳ್ಳುತ್ತೇನೆ.

ಕಿಟ್ಟೆಲ್ಲರು ಕತ್ತೆಯನ್ನು ಸಂಸ್ಕೃತಕ್ಕೆ ನೀವೇ ಕೊಟ್ಟಿದ್ದೇವೆಂದು ಹೇಳಿದ್ದರೆ ನಾನು ಅದಕ್ಕೂ ಕೆಲ ಹೆಜ್ಜೆ ಮುಂದೆ ಹೋಗಿ ಜಗತ್ತಿಗೆ ಕತ್ತೆಯನ್ನು ಕೊಟ್ಟವರು ನಾವೆಂದು ಸಿದ್ಧಪಡಿಸಲಿದ್ದೇನೆ.

ಇದಕ್ಕೆ ಕಿಟ್ಟೆಲ್ಲರಂತೆ ನಾನೂ ಭಾಷಾಶಾಸ್ತ್ರದ ಆಧಾರವನ್ನೇ ಕೊಡುತ್ತೇನೆ. ಇಂಗ್ಲೀಷಿನಲ್ಲಿ ಕತ್ತೆಗೆ Donkey(ಡಾಂಕಿ) ಮತ್ತು Ass(ಆ್ಯಸ್) ಎಂಬೆರಡು ಹೆಸರುಗಳಿವೆ. ಇವೆರಡೂ ಕನ್ನಡದ "ಕತ್ತೆ" ಯಿಂದಲೇ ಹುಟ್ಟಿದವೆಂದು ಕೇಳಿ ನೀವು ವಿಸ್ಮಯದಿಂದ ಬಾಯಿ ತೆರೆದು ನಿಲ್ಲಬಹುದು. ಆದರೆ ಇದು ನಿಜ.

"ಕಟ್ತೆ" ಎಂಬುದು ಮೊದಲು "ಕಂತೆ" ಯಾಗಿ ಮಾರ್ಪಟ್ಟಿತು. ಇದು ನೀವೆಣಿಸಿದಷ್ಟು ವಿಚಿತ್ರವಲ್ಲ. ಬುರುಡೆ ಎಂಬುದು ಬುರ್ಡೆ ಆಗಿ ಬುಂಡೆ ಆಗುವುದನ್ನು ನೀವು ಗಮನಿಸಿರಬಹುದು.[೫] ಅಥವಾ, ಪ್ರಕಾರಾಂತರದಲ್ಲಿ ಮೂಲತಃ "ಕಂತೆ" ಯೆಂದಿದ್ದುದು "ಕತ್ತೆ" ಎಂದಾಗಿರಲೂ ಬಹುದು. ನಿಮಗೆ ನೆಗಡಿಯಾದಾಗ, ಅಥವಾ ಆಗದಿದ್ದರೆ ಮೂಗನ್ನು ಗಟ್ಟಿಯಾಗಿ ಬಿಗಿಹಿಡಿದು "ಸಂತೆ" ಎಂಬುದನ್ನುಚ್ಚರಿಸಲು ಯತ್ನಿಸಿರಿ. ಅದು "ಸತ್ತೆ" ಆಗುತ್ತದೆ. ಹಾಗೆಯೆ "ಕಂತೆ" ಯು ಕನ್ನಡಿಗರಿಗೆಲ್ಲ ಏಕಕಾಲದಲ್ಲಿ ಸುದೀರ್ಘ ನೆಗಡಿಯಾಗಿ "ಕತ್ತೆ"ಯಾಗಿರುವುದು ಅಸಂಭವವಲ್ಲ.

ಹೀಗೆ, ಕಟ್ತೆ > ಕಂತೆ ಅಥವಾ ಕತ್ತೆ < ಕಂತೆ ಇದು ಒಂದನೇ ಹೆಜ್ಜೆ.

ಇನ್ನು ಅನೇಕ ಸಲ ಶಬ್ದಗಳು ಶೀರ್ಷಾಸನ ಹಾಕುತ್ತವೆಂದು ಭಾಷಾಶಾಸ್ತ್ರಿಗಳು ಹೇಳುತ್ತಾರೆ. ಉದಾ- ಅಹುದು > ಹವುದು > ಹೌದು; (ಕನ್ನಡ); ಅವರು > (ತೆಲುಗು) ವಅರು > ವಾರು >.

ಆ ಹೀಗೆ ಕತ್ತೆ >< ಕಂತೆ > ತೆಂಕ ಅಥವಾ ತಂಕೆ.

ಈಗ "ತ"ವು "ದ" ವಾಗಿಯೂ "ದ" ವು "ಡ"ವಾಗಿಯೂ ಪಲ್ಲಟಗೊಳ್ಳುವುದು ಭಾಷಾಶಾಸ್ತ್ರದ ಇನ್ನೊಂದು ನಿಯಮ.

ಹೀಗೆ ತಂಕೆ > ದಂಕೆ > ಡಂಕೆ.

ಎ ಎಂಬುದು ಇ ಯಾಗಿ ಪಲ್ಲಟಗೊಳ್ಳುತ್ತದೆ (ಉದಾ ಆಕೆ > ಆಕಿ).

ಹೀಗೆ ಡಂಕೆ > ಡಂಕಿ

ಡಂಕಿಯೇ ಸ್ವಲ್ಪ ದೀರ್ಘವಾಗಿ ಶ್ರುತಿ ಹಿಡಿದರೆ ಡಾಂಕಿಯಾಗುತ್ತದೆ.

ಅದೇ ಪ್ರಕಾರ ಕತ್ತೆಯೇ ass (ಆ್ಯಸ್) ಎಂದು ಭಾಷಾಶಾಸ್ತ್ರದ ನಿಯಮಾನುಸಾರ ತೋರಿಸಬಹುದು.


ಭಾಷಾಶಾಸ್ತ್ರ ಪ್ರಕಾರ ವ್ಯಂಜನಗಳಿಗೆ ಮಹತ್ವವಿಲ್ಲ, ಅವು ಲೋಪ ಹೊಂದಬಹುದು. ಆದ್ದರಿಂದ ಕತ್ತೆ > ಅತ್ತೆ. ಅದೇ ಶಾಸ್ತ್ರದ ಪ್ರಕಾರ ಮುಂದಿನ ಅಕ್ಷರದ ಒತ್ತು ಹೋಗಿ ಹಿಂದಿನ ಅಕ್ಷರ ದೀರ್ಘವಾಗುತ್ತದೆ. ಆದ್ದರಿಂದ ಅತ್ತೆ > ಆತೆ. ಭಾಷಾಶಾಸ್ತ್ರದಂತೆ ಸ್ವರಕ್ಕೂ ಮಹತ್ವವಿಲ್ಲ, ಅದೂ ಪಲ್ಲಟವಾಗುತ್ತದೆ. ಆದ್ದರಿಂದ ಆತೆ > ಆತ. ಹಾಗೆಯೆ ತ, ಚ, ಸ ಇವು ಒಂದಕ್ಕೊಂದು ರೂಪಾಂತರ ಹೊಂದಬಲ್ಲವು. ಆದ್ದರಿಂದ ಆತ > ಆಚ > ಆಸ. ಅನೇಕ ಆರ್ಯಭಾಷೆಗಳಲ್ಲಿ ಕೊನೆಯ ವ್ಯಂಜನ ಲೋಪ ಹೊಂದುತ್ತದೆ. ಆದ್ದರಿಂದ ಆಸ > ಆಸ್ > ಆ್ಯಸ್.

ಕತ್ತೆಯೇ ಡಾಂಕಿಯೂ ಆ್ಯಸೂ ಆಗಿದೆಯೆಂದೀಗ ಸ್ಪಷ್ಟವಾಯಿತು. ಈಗ ಇಂಗ್ಲೀಷಿನವರ ಹತ್ತಿರ ತಮ್ಮ ಸ್ವಂತ ಕತ್ತೆ ಇದ್ದಿದ್ದರೆ ಅದಕ್ಕೆ ಅವರ ಸ್ವಂತ ಹೆಸರೂ ಇರುತ್ತಿತ್ತು. ಸ್ವಂತ ಹೆಸರಿಲ್ಲದ್ದರಿಂದ ಕತ್ತೆಯೂ ಸ್ವಂತ ಅವರದಾಗಿರಲಾರದು. ಅಂದ ಮೇಲೆ ಹೆಸರಿನೊಡನೆ ಕತ್ತೆಯನ್ನೂ ಅವರು ಕರ್ನಾಟಕದಿಂದಲೇ ಒಯ್ದಿರಬೇಕಲ್ಲವೆ ? ಯುರೋಪಿನ ಪಶ್ಚಿಮ ತುದಿಯಲ್ಲಿರುವವರಿಗೇ ನಾವು ಕತ್ತೆಯನ್ನೂ ಕೊಟ್ಟಿರುವಾಗ ಅದಕ್ಕಿಂತಲೂ ಹತ್ತಿರವಿರುವವರಿಗೆ ಮತ್ತಾರು ಕೊಟ್ಟಿರಲಾಪರು?

---

೪. ಕಿಟ್ಟೆಲ್ ನಿಘಂಟು, ಮುನ್ನುಡಿ.

೫ ಉದಾ- "ಬುಂಡೇನೆತಿ ಕುಡುಬ್ಟ್ಯಾಂದ್ರೆ", ರತ್ನನ ಪದಗಳು.



ನಮ್ಮ ಪ್ರಖ್ಯಾತ ಕೈಮಗ್ಗದ ಕಾರಖಾನೆಯಲ್ಲಿ ತಯಾರಾಗಿರುವ

೪೦ × ೬೦ ಬಾಂಬರ, ರಾಸ್ತಾ ಮತ್ತು ಚೌಕಡಾ ೯, ೭, ೫ ವಾರಗಳಲ್ಲಿ—

ಬಣ್ಣ ಇತ್ಯಾದಿ ಗ್ಯಾರಂಟಿ.

ಪಾಟೀಲ ವೀವ್ಹಿಂಗ ಫ್ಯಾಕ್ಟರಿ

ಇಚಲಕರಂಜಿ (ಕೊಲ್ಹಾಪೂರ)

ದೀಪಾವಳಿಯು ಸುಖವಾಗಲಿ !




Agents fov Mysore State:

Ms/. K. S. GOWDER

Subedarchatram' Road,

BANGALORE–9

ಜೀವನ ಹ್ಯಾಂಡಲೂಮ ಇಂಡಸ್ಟ್ರೀಜ, ಇಚಲಕರಂಜಿ



೪೦ × ೪೦ ಪ್ಲೇನ— ರಾಸ್ತಾ, ಚೌಕಡಿ ಮತ್ತು ಚಮುಕ ಚೌಕಡಿ ತಮುಲ ನೂಲಿನಿಂದ ಸಿದ್ಧವಾದ ಪತ್ತಲಗಳು ೯ × ೫೦, ೬ × ೫೦ ಮತ್ತು ೫ × ೫೦ ನಮ್ಮ ಕಡೆಗೆ ಯೋಗ್ಯದರದಲ್ಲಿ ಸಿಗುತ್ತವೆ.

ಸ್ಟಾಕಿಸ್ಟರು— ಎಂ. ವ್ಹಿ. ಭೋಜಯ್ಯ, ಬಿ. ಎ. ಆ್ಯಂಡ್ ಬ್ರದರ್ಸ

ಶಿಲ್ಕ ಕ್ಲಾಥ ವ್ಯಾಪಾರಿಗಳು

ಇಂಡಿಯನ್ ಬ್ಯಾಂಕದೆದರು ಮೈಸೂರ

ಮಹಾವೀರ ಪ್ರಸನ್ನ

ಹೊಸ ವರ್ಷವು ನಮ್ಮ ಗ್ರಾಹಕರಿಗೆ ಮತ್ತು ಹಿತಚಿಂತಕರಿಗೆ ಸುಖಪ್ರದವು ಮತ್ತು ಸಮೃದ್ಧಿ ಉಳ್ಳದ್ದು ಆಗಲೆಂದು ಹಾರೈಸುತ್ತೇವೆ !

ನಮ್ಮ ಕಡೆಗೆ ಖಾತ್ರಿಯಿಂದ ಮತ್ತು ಗ್ಯಾರಂಟೀಡ ಮೆಟಲದ ಆಯಿಲ ಎಂಜನ ಸ್ಪೇರ ಪಾರ್ಟ್ಸ, ನಕ್ಷೆಯ ಪ್ರಕಾರ, ನಮೂನೆಯ ಪ್ರಕಾರ, ನಮ್ಮ ಹಾಜರ ಸ್ಟಾಕದಿಂದ ಸಿಗುತ್ತವೆ

ನಮ್ಮ ವೈಶಿಷ್ಟ್ಯ :— ೫/೬, ೮/೯, ೧೦/೧೧ ಅಶ್ವಶಕ್ತಿಯ ಆಯಿಲ ಎಂಜಿನ ಕ್ರಾಂಕ್ಸ, ಗನ್‌ಮೆಟಲ ಮತ್ತು ಫಾಸಫರಸ ಬ್ರಾಂಝ ಸಾಯಿಜಗಳು ಬೇರಿಂಗ್ಜ. ಗಜನಪೀನ ಬುಶಿಂಗ್ಸ, ಕನೆಕ್ಟಿಂಗ್ಸ ಬೋರಿಂಗ, ತಯಾರಿ ಸಂಗ್ರಹದಿಂದ ಸಿಗುತ್ತವೆ.

ವಿಶೇಷ ಸೂಚನೆ :— ಯಾವದೇ ವಿದೇಶದ ಅಥವಾ ಇತರ ದೇಶಗಳ ಆಯಿಲ ಇಂಜಿನ ಕ್ರಾಂಕ್ಸ, ಸಾಯಿಡ ಬೇರಿಂಗ್ಸ, ಗಜನಪೀನ ಬುಶಿಂಗ್ಜ, ಕನೆಕ್ಟಿಂಗ ಬೇರಿಂಗ್ಜ, ಅಂತೆಯೇ ಪಾವರ ಲೂಮ್ಸ ಮಶಿನರಿ ಪ್ರೆಸಿಜನ ಪಾರ್ಟಸ ನಿಮ್ಮ ನಮೂನೆಯ ಪ್ರಕಾರ ಅಥವಾ ಡ್ರಾಯಿಂಗ ಪ್ರಕಾರ ಮಾಡಿಕೊಡುತ್ತೇವೆ

ಮಾಹಿತಿಗಾಗಿ ಭೆಟ್ಟಿಯಾಗಿರಿ ಅಥವಾ ಬರೆಯಿರಿ :

ಮೆ. ಡಿ. ಬಿ. ಆ್ಯಂಡ ಸನ್ಸ

೧೨೧., ಶಿವಾಜಿ ಉದ್ಯಮನಗರ, ಕೊಲ್ಹಾಪೂರ.



Chitra Publicity

ದೀಪಾವಳಿಯು ನಮ್ಮ ಗ್ರಾಹಕ
ವೃಂದಕ್ಕೆಲ್ಲ ಸುಖಪ್ರದವಾಗಲಿ !

ನಿಮ್ಮ ಸರಕುಗಳ ತ್ವರಿತ ಸಾಗಿಗೆ

ಘಾಟಗೆ ಮತ್ತು ಪಾಟೀಲ
ಟ್ರಾನ್ಸಪೋರ್ಟ ಪ್ರಾಯ್ವೇಟ್ ಲಿ.

ರಾಜಾರಾಮ ರೋಡ, **ಕೊಲ್ಹಾಪೂರ.**

ಹುಬ್ಬಳ್ಳಿ ಶಾಖೆ : ಸಂಯುಕ್ತ ಕರ್ನಾಟಕ ಕಂಪೌಂಡ,
ಕೊಪ್ಪೀಕರ ರೋಡ ಹುಬ್ಬಳ್ಳಿ.

ಬೆಂಗಳೂರು, ಮದ್ರಾಸ, ಕೋಚೀನ, ಮುಂಬಯಿ
ಮುಂತಾದ ಪ್ರಮುಖ ಪಟ್ಟಣಗಳಿಗೂ ಹಾಗೂ
ಮಾರ್ಗದ ಮೇಲಿನ ಇತರ ಸ್ಥಳಗಳಿಗೆ.
.... ದೈನಿಕ ಪಾರ್ಸಲ ಗಾಡಿಗಳು ಓಡಾಡುತ್ತಿವೆ ! ....

ಈ ದೀಪಾವಳಿಯು ನಮ್ಮ ಎಲ್ಲ
ಹಿತಚಿಂತಕರಿಗೂ ಮತ್ತು ಆಶ್ರಯ
ದಾತರಿಗೂ ಸುಖದಾಯಕವಾಗಲಿ !

ಸಂಗ್ರಹದಿಂದಾಗುವ ಹೊಟ್ಟೆ ಶೂಲಿಗೆ ಉಪಯುಕ್ತ ಗ್ಯಾಸ

ವಾ ತ ನಾ ಶ ಕ

ಮಧುಮೇಹದಿಂದ ಚ್ಯವನಪ್ರಾಶವನ್ನು ಸೇವಿಸಲು
ಅಸಮರ್ಥರಾದವರಿಗೆ ಎಲ್ಲ ತರಹದ ಶಾರೀರಿಕ,
ಬೌದ್ಧಿಕ ಅಶಕ್ತತೆಯ ಮೇಲೆ ಗುಣಕಾರಿ ಔಷಧ

ಜಸೋಕರ (ಗುಳಿಗೆಗಳು)
ದಿ ಆಯುರ್ವೇದ ರಸಶಾಳಾ

ಪುಣೆ—೪

ನಮಲ್ಲಿ ವೈದಕೀಯ ಸಲಹೆಯನ್ನು
ಉಚಿತ ಕೊಡಲಾಗುವದು.

ಹುಬ್ಬಳ್ಳಿ ಶಾಖೆ—
ಮರಾಠಾಗಲ್ಲಿ, ಶಿವಾಜಿ ಬಿಲ್ಡಿಂಗ, ಹುಬ್ಬಳ್ಳಿ.
ಬೆಳಗಾವಿ ಶಾಖೆ—
೧೭೨೨ ರಾಮದೇವಗಲ್ಲಿ, ಬೆಳಗಾವಿ.

रजिष्टर नंबर १४११६२

ಪಟೇಲ ಸ್ಪೇಶಲ್




ಅಖಂಡ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ
ಪ್ರಸಿದ್ಧಿಯುಳ್ಳ ಪುಣೆಯ ಸುಪ್ರಸಿದ್ಧ

ಪಟೇಲ ಸ್ಪೆಶಲ್ ಬೀಡಿ

ನಮ್ಮ ಗ್ರಾಹಕರಿಗೆಲ್ಲ
ದೀಪಾವಳಿಯ
ಶುಭೇಚ್ಛೆಗಳು

॥ ಸೇದಿರಿ

ಹೊಸ ವರ್ಷದ
ಅಭಿನಂದನೆಗಳು



ನೂತನ ಡಿಜೆಲ್ ಎಂಜಿನು

ಹಾರಿಝಾಂಟಲ್, ಕೋಲ್ಡ ಸ್ಟಾರ್ಟ
ಡಬಲ್ ಫ್ಲಾಯ ವ್ಹೀಲ, ಸ್ಲೋಸ್ಪೀಡ

ನೂತನ ಮಹಾರಾಷ್ಟ್ರ
ಎಂಜಿನಿಯರಿಂಗ ಕಂ.

೧೪೩೫, ಲಕ್ಷ್ಮೀಪುರಿ . . . . **ಕೊಲ್ಹಾಪುರ**



ದೀಪಾವಳಿ
ನಲ್ಮೆ ತರಲಿ!
ತಮ್ಮ ಕಾರ್ಯಗಳು ಉತ್ತರೋತ್ತರವಾಗಿ ಜರುಗಿ
ತಮ್ಮವನಾದ
ಚ. ಉತ್ತಂಗಿ
ಬಿಟ್ಟಲ್ಲಿ ಭೇದವನು! ಸುಟ್ಟಲ್ಲಿ ಸುಡುಜಗಳ
ಕಟ್ಟಿರುವ ಜನರನೆಬ್ಬಿಸಲು ನೀಮತ್ತೆ
ಹುಟ್ಟಿಬಾ ಇಂದು ಸರ್ವಜ್ಞ
ದ.ರಾ.ಬೇಂದ್ರೆ
ನಿರಂಜನ ಚಿತ್ರರವರ
ಸರ್ವಜ್ಞ ಮೂರ್ತಿ
..ಕನ್ನಡ..
ತಾರಾಗಣ...
ರಾಜಕುಮಾರ್
ರಾಜಸುಲೋಚನ
ಹರಿಣಿ
ಬಿ.ಕಮಲಾದೇವಿ
ನಿರಂಜನ್
ಬಾಲಕೃಷ್ಣ
ಅಶ್ವದ್
ನಿರ್ದೇಶನ...
ಆರೂರು ಪಟ್ಟಾಭಿ
ತಯಾರಿಕೆ
ನರೇಂದ್ರ ಬಾಬು
ಸ್ಟುಡಿಯೋ..ಮೆಜಸ್ಟಿಕ್
CHITRA
Arts & Eoy
Chitra Publicity


ಪದ್ಮಿನಿ ಪಿಕ್ಚರ್ಸ್ ಮದರಾಸು-4
ಕನ್ನಡ ಜನತೆಗೆ ದೀಪಾವಳಿಯ ಶುಭಾಶಯಗಳು
ಸಂಕ್ರಾಂತಿ ಬಿಡುಗಡೆ.
ಗಾಳಿ ಗೋಪುರ
ಕಲಾವಿದರು: ಎಂ.ವಿ.ರಾಜಮ್ಮ · ರಾಜ್ ಕುಮಾರ್
ಲೀಲಾವತಿ · · · · · · · ಕಲ್ಯಾಣ್ ಕುಮಾರ್
ಚಿಂದೋಡಿಲೀಲಾ · · · · · ನರಸಿಂಹರಾಜು
ಎಂ.ಎನ್.ಲಕ್ಷ್ಮೀದೇವಿ · · · · · · ಬಾಲಕೃಷ್ಣ
ರಮಾದೇವಿ · ಅಶ್ವತ್ಥ್ · ದಿಕ್ಕಿ ಮಾಧವರಾವ್
ಆರ್.ನಾಗೇಂದ್ರರಾವ್
ನಿರ್ಮಾಪಕ - ನಿರ್ದೇಶಕ
ಬಿ.ಆರ್. ಪಂತುಲು
ಮಾತು-ಹಾಡು ಜಿ.ವಿ.ಅಯ್ಯರ್
ಸಂಗೀತ ಟಿ.ಜಿ.ಲಿಂಗಪ್ಪ
ಈಗ ಪ್ರದರ್ಶಿತವಾಗುತ್ತಿದೆ!
ಕಪ್ಪಲೋಟ್ಟಿಯ ತಮಿಳನ್
ನಿರ್ಮಾಪಕ-ನಿರ್ದೇಶಕ: ಬಿ.ಆರ್. ಪಂತುಲು
ತಾರಾಗಣ · ಶಿವಾಜಿ ಗಣೇಶನ್ · ಜೆಮಿನಿ ಗಣೇಶನ್ · ಸಾವಿತ್ರಿ
S.V.ಸುಬ್ಬಯ್ಯ · V.ನಾಗಯ್ಯ · ದೊರೈ ರಾಜ್ · S.V.ರಂಗರಾವ್ · ಬಾಲಾಜಿ · ರುಕ್ಮಿಣಿ
ಸಂಗೀತ ಜಿ.ರಾಮನಾಥನ್
ಸ್ಟೂಡಿಯೋ ಭರಣಿ · ಅರುಣಾಚಲಂ
Chitra Publicity


ಉತ್ತಮ
ಬೆಳಕಿಗಾಗಿ
ಕಾರ್ಯಕ್ಕಾಗಿ
Bengal
LAMP
ಬೆಂಗಾಲ ಎಲೆಕ್ಟ್ರಿಕಲ್ ಕಂ.
ದೀಪಾವಳಿಯ ಶುಭಾಶಯಗಳು
ಮದರಾಸು-17
ಬೆಂಗಳೂರು-3



Chitra Publicity

ದಿಪಾವಳಿಯ ಶುಭಾಶಯಗಳು

ಕರ್ನಾಟಕದ ಜನಪ್ರಿಯ

ಕಸ್ತೂರಿ ಬಾರ್ ಸೋಪ್

ತಯಾರಕರಿಂದ



ಮತ್ತೊಂದು

ಕಾ
ಣಿ
ಕೆ!




ತಯಾರಕರು:


ಶ್ರೀರಾಮಕೃಷ್ಣ ಆಯಿಲ್ ಮಿಲ್ಸ್, ಮಂಗಳೂರು

(ಬ್ರ್ಯಾಂಚ : ತುಮಕೂರು)

ಪ್ರೊಪ್ರೈಟರ್ಸ್: ಕಸ್ತೂರಿ ಶೇಷಗಿರಿ ಪೈ ಅಂಡ್ ಕಂಪನಿ, ಬಂದರು, ಮಂಗಳೂರು-೧









ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ ...

ರವಿ ಆಕಾಶಕೆ ಭೂಷಣಂ
ಖಾದಿ ದೀಪಾವಳಿಗೆ ಭೂಷಣಂ



ಲಕ್ಷ್ಮಿ ಚಂಚಲೆ : ಸರಸ್ವತಿ ಅಚಲೆ

ಕೈಯಲ್ಲಿ ಎಷ್ಟು ದುಡ್ಡಿದ್ದರೂ **ಉಳಿಯುವದಿಲ್ಲ**

ಅಂತಲೆ ಖಾದಿ ಹುಂಡಿಕೊಂಡು ಖಾದಿಗೆ ನಿಮ್ಮ **ಹಣ** ಮೀಸಲಿಡಿ

ಸರಕಾರದ ಉದ್ಯೋಗಿಗಳಿಗೆ ಸುಸಂಧಿ!

ನಿಮಗೆ ಖಾದಿ ಕೊಳ್ಳಲು ಇಷ್ಟ....

ಆದರೆ ಒಟ್ಟಿಗೆ ಹಣ ಕೊಡಲು ಕಷ್ಟ....

ಅಂತಲೆ ರಾಜ್ಯದ ಖಾದಿ ಮಂಡಲದ ಅನುಪಮ ಯೋಜನೆ :

ಮೊದಲು ಒಟ್ಟಾಗಿ ಖಾದಿ ಕೊಳ್ಳಿರಿ ಆಮೇಲೆ

ಸುಲಭ ಕಂತುಗಳಲ್ಲಿ ಹಣ ಕೊಡಿರಿ.

ವಿವರಗಳಿಗೆ ವಿಚಾರಿಸಿರಿ :

ಮೈಸೂರು ರಾಜ್ಯ ಖಾದಿ-ಗ್ರಾಮೋದ್ಯೋಗ ಮಂಡಲ

ಶ್ರೀಕೃಷ್ಣರಾಜೇಂದ್ರ ರಸ್ತೆ . . . . ಬೆಂಗಳೂರು - ೪

MYSORE STATE KHADI & V.I. BOARD
BANGALORE
WORK IS WORSHIP

(ನಮ್ಮ ಗ್ರಾಹಕವೃಂದಕ್ಕೆಲ್ಲ ದೀಪಾವಳಿಯು ಸುಖಪ್ರದವಾಗಲಿ!)

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ
ದೀಪಾವಳಿಯ ಶುಭಾಶಯಗಳು

ಕನ್ನಡನಾಡಿನ ಕನ್ನಡಿಯಂತೆ ಕಂಗೊಳಿಸುವ

ಮಂಗಳೂರು ಉದ್ಯಾನ ನಗರದಲ್ಲಿ

ಸಾರ್ವಜನಿಕರಿಗೆ ಸರ್ವೋತ್ಕೃಷ್ಟ ಸೇವೆ ಸಲ್ಲಿಸುವ ಸಲುವಾಗಿ ಅತ್ಯಂತ ಆಧುನಿಕ
ಅನುಕೂಲತೆಗಳನ್ನೊಳಗೊಂಡ ಪ್ರಶಾಂತ ವಠಾರದಲ್ಲಿ ಹೊಸದಾಗಿ ತೆರೆದ

ಕೀರ್ತಿ ಮಹಲ್

ಫಳ್ನೀರು ಮಂಗಳೂರು—೧

ಈ ವಸತಿಗೃಹವು ನಗರದ ಅಪ್ರತಿಮ ಸಂಸ್ಥೆಯಾಗಿದೆ

ಫೋನ: *965 with 4 lines* *Gram :* **KIRTIMAHAL**

★ ತಾಜಮಹಲ್ ★

ನೂತನ ಗೃಹದ ವೈಶಿಷ್ಟ್ಯಗಳು

- ಹವಾಮಾಪಕ ಯಂತ್ರಗಳನ್ನಿರಿಸಿದ ಕೊಠಡಿಗಳು
- ಜೋಡಣೆಯ ವಸತಿ ವ ಸ್ನಾನದ ಕೊಠಡಿಗಳು
- ವಿಹಾರಕ್ಕಾಗಿ ವಿಶಾಲ ಮುಖ ಮಂಟಪಗಳು
- "ಡನ್ನಪಿಲ್ಲೊ" ರಬ್ಬರ ಹಾಸಿಗೆಗಳು ಇತ್ಯಾದಿ ಇತ್ಯಾದಿ

ಮಂಗಳೂರಿನ ಪ್ರಖ್ಯಾತ ಉಪಹಾರ ಮಂದಿರ

॥

ಇವರ ಹೊಸ ಶಾಖೆ

ನ್ಯೂ ತಾಜಮಹಲ್ ಕೆಫೆ (ಪ್ರಾವ್ಹೇಟ) ಲಿಮಿಟೆಡ್

Phone : **195, 20, 305** *Grams :* **NEWTAJ**

ರಥಬೀದಿ, ಮಂಗಳೂರು-1

ದಲ್ಲಿ ಹೊಸದಾಗಿ ತೆರೆದ

ಹಲ್



ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಪ್ರೆಸ್ಸಿನಲ್ಲಿ "ಲೋಕಶಿಕ್ಷಣ ಟ್ರಸ್ಟಿ"ನ ಪರವಾಗಿ ಹ. ರಾ. ಪುರೋಹಿತರು ಮುದ್ರಿಸಿ ಪ್ರಕ